ಶ್ರೀರಸ್ತು.

ಜಯಕೃಷ್ಣಭ-ವರ್.

ಕಲಿಕಲ್ಮಷಹರವಾಗಿಯೂ, ಶನಿಮಹಿಮಾತಿಶಯಬೋಧಕವಾಗಿಯೂ,
ಸ್ತ್ರೀಧರ್ಮೋನ್ನತಿಪ್ರಕಾಶವಾಗಿಯೂ, ಕಷ್ಟಸಹಿಷ್ಣುತೆ
ಮೊದಲಾದ ಸದ್ಗುಣರಂಜಿತವಾಗಿಯೂ, ಸಕಲ ನೀತಿ
ಪ್ರದವಾಗಿಯೂ, ಇರುವ

ಪ್ರತಿಪದ ಟೀಕಾತಾತ್ಪರ್ಯ ಸಹಿತವಾದ

ನಳರಾಜೇಂದ್ರ ಚರಿತ್ರೆಯು.

ಕನ್ನಡ ಪಂಡಿತ॥ ಕೆ. ನಂಜುಂಡಶಾಸ್ತ್ರಿಗಳಿಂದ.

ರಚಿಸಲ್ಪಟ್ಟು

ಇದರ ವಿಶಿಷ್ಟಹಕ್ಕನ್ನು ಹೊಂದಿರುವ

ಎಂ. ಆರ್. ಕೃಷ್ಣಸ್ವಾಮಿ ಶೆಟ್ಟರಿಂದ

ಮುದ್ರಿಸಿ ಪ್ರಕಟಿಸಲ್ಪಟ್ಟಿತು.

ಪ್ರಥಮ ಮುದ್ರಣ. ೧,೫೦೦

1914

ಬೆಂಗಳೂರು ಸಿಟಿ, ಶ್ರೀ ಲಕ್ಷ್ಮೀ ವಿಲಾಸ ಮುದ್ರಾಕ್ಷರ ಶಾಲೆಯಲ್ಲಿ
ಮುದ್ರಿಸಲ್ಪಟ್ಟಿತು.

ವಿಷಯ ಸೂಚನೆ.

ಶ್ರೀರಸ್ತು.

ಪ್ರತಿಪದ ಟೀಕಾತಾತ್ಪರ್ಯ ಸಹಿತ

ನಳಚರಿತ್ರೆ.

೧ನೆಯ ಸಂಧಿ.

———o———

ಮೂ॥ ಶ್ರೀರಮಣಸರಸಿಜದಳಾಕ್ಷಮುರಾರಿಸಚರಾಚರಭರಿತದುರಿ।
ತಾರಿನಿತ್ಯಾನಂದನಿರ್ಜರನಿಕರದಾತಾರಾ ॥ ವಾರಿಜಾಂಬಕವರಗು
ಣತ್ರಯ। ಮಾರಪಿತವೇದಾಂತನುತವರ। ಪೌರಚೆನ್ನಿಗರಾಯ
ಪಾಲಿಸುನನಗೆಸತ್ಕೃಪೆಯ ॥೧॥

ಟೀಕೆ:—[೧] ಶ್ರೀರಮಣ, ಶ್ರೀ-ಲಕ್ಷ್ಮೀದೇವಿಯ, ರಮಣ ಗಂಡನಾದ, ಸರಸಿಜದಳಾಕ್ಷ, [೨] ಸರಸಿಜ-ಕಮಲದ, ದಳ-ಎಸಳಿನಂತೆ, [೩] ಅಕ್ಷ-ಕಣ್ಣುಳ್ಳ, ಮುರ-ಮುರನೆಂಬರಾಕ್ಷಸನಿಗೆ, ಅರಿ-ಶತ್ರುವಾದ, [೪] ಸಚರಾಚರಭರಿತ, ಸಚರ-ಸಂಚರಿಸುವ, ಅಚರ-ಚಲಿಸದಿರುವ [ವಸ್ತುಗಳಲ್ಲಿ], ಭರಿತ-ತುಂಬಿಕೊಂಡಿರುವ, ದುರಿತ-ಪಾಪಗಳಿಗೆ, ಅರಿ-ಶತ್ರುವಾದ, ನಿತ್ಯಾನಂದ, ನಿತ್ಯ-ಶಾಶ್ವತವಾದ, ಆನಂದ-ಸಂತೋಷವುಳ್ಳ [೫] ನಿರ್ಜರನಿಕರದಾತಾರ, ನಿರ್ಜರ-ದೇವತೆಗಳ, ನಿಕರ-ಸಮೂಹಕ್ಕೆ, ದಾತಾರ-ದಾನಮಾಡತಕ್ಕ, ವಾರಿಜಾಂಬಕ, ವಾರಿಜ-ಕಮಲದಂತೆ, ಅಂಬಕ-ಕಣ್ಣುಗಳುಳ್ಳ, [೬] ವರಗು

ಣತ್ರಯ, ವರ-ಶ್ರೇಷ್ಠವಾದ ಗುಣತ್ರಯ-ಮೂರುಗುಣಗಳುಳ್ಳ, ಮಾರಪಿತ, ಮಾರ-ಮನ್ಮಥನಿಗೆ, ಪಿತ-ತಂದೆಯಾದ, ವೇದಾಂತನುತ, ವೇದಾಂತ-ಉಪನಿಷತ್ತುಗಳಿಂದ, ನುತ-ಸ್ತೋತ್ರಮಾಡಿಸಿಕೊಂಡವನಾದ, ವರ-ಶ್ರೇಷ್ಠವಾದ, ಪುರ-ಪುರದಲ್ಲಿ [ಬೇಲೂರಲ್ಲಿ] ರುವ ಚೆನ್ನಿಗರಾಯ-ಕೇಶವಸ್ವಾಮಿಯೇ [ನೀನು] ನನಗೆ-ನನ್ನಲ್ಲಿ, ಸತ್ಕೃಪೆಯ-ಒಳ್ಳೆಯಕರುಣೆಯನ್ನು, ಪಾಲಿಸು-ಮಾಡು ||೧||

ತಾತ್ಪರ್ಯ:—ಲಕ್ಷ್ಮೀಪತಿಯಾಗಿಯೂ, ಕಮಲನೇತ್ರನಾಗಿಯೂ ಮುರನನ್ನು ಕೊಂದವನಾಗಿಯೂ, ಸ್ಥಾವರ ಜಂಗಮ ರೂಪವಾದ ಈ ಪ್ರಪಂಚದಲ್ಲೆಲ್ಲ ವ್ಯಾಪಿಸಿರುವವನಾಗಿಯೂ, ಪಾಪನಾಶಕನಾಗಿಯೂ, ಶಾಶ್ವತವಾದ ಆನಂದ ವುಳ್ಳವನಾಗಿಯೂ, ದೇವತೆಗಳಿಗೆ ಬೇಕಾದ ಇಷ್ಟಾರ್ಥಗಳನ್ನು ಕೊಡುವವನಾಗಿಯೂ, ಸತ್ತ್ವರಜಸ್ತಮೋಗುಣಗಳೆಂಬ ಮೂರುಗುಣಗಳುಳ್ಳವನಾಗಿಯೂ, ಮನ್ಮಥನತಂದೆಯಾಗಿಯೂ, ವೇದಾಂತಶಾಸ್ತ್ರಗಳಿಂದ ಪ್ರಸಿದ್ಧವಾದ ಕೀರ್ತಿಯುಳ್ಳವನಾಗಿಯೂ, ಇರುವ ಬೇಲೂರು ಗ್ರಾಮಾಧಿ ದೇವತೆಯಾದ ಚೆನ್ನಿಗರಾಯಸ್ವಾಮಿಯೇ ! ನೀನು ನನ್ನಲ್ಲಿ ಕೃಪಾಕಟಾಕ್ಷವನ್ನಿಟ್ಟು ಸಂರಕ್ಷಿಸುವವನಾಗು. ||೧||

ಟಿಪ್ಪಣಿ:—(೧) ಶ್ರೀ. (ದ್ವ) ಸಿರಿ, ಶ್ರೀ-ಲಕ್ಷ್ಮಿ, ಕಾಂತಿ, ವಿಷ (ನಾನಾ) (೨) ಸರಸಿ-ಸರೋವರದಲ್ಲಿ, ಜ-ಹುಟ್ಟಿದುದು (ಅವ) ಅಲುಕ್ಸಮಾಸ (೩) ಇಂದ್ರಿಯ, ಕಣ್ಣು, ಪಗಡೆಯಾಟ, ಬಂಡಿಯಅಚ್ಚು, (ನಾನಾ)ದಳದಂತೆ ಅಕ್ಷಿಯುಳ್ಳವನು, (ಬ, ವ್ರೀ, ಸ,) (೪) ಸಚರ (ಸ, ಪೂ, ಬ, ವ್ರೀ,) ಅಚರ (ನಞ್, ಬ, ವ್ರೀ,) (೫) ನಿರ್ಜರ-ಮುಪ್ಪಿಲ್ಲದವರು, ದಾತಾರ-ದಾತೃ, ಎಂಬ ಸಂಸ್ಕೃತದ ಋಕಾರಾಂತಶಬ್ದದ ಕೊನೆಯ ಋಕಾರಕ್ಕೆ ಆರವೆಂಬಾದೇಶವು ಬಂದು ಕನ್ನಡಕ್ಕೆ ಲಿಂಗವಾಗಿದೆ (೬) ಗುಣ-ತಂತಿ, ದಾರ, ಗುಣಗಳು, (ನಾನಾ) ಗುಣಗಳತ್ರಯ ಗುಣತ್ರಯ, (ಷ. ತ.) ವರವಾದಗುಣತ್ರಯ-ವರಗುಣತ್ರಯ (ವಿ, ಪೂರ್ವ, ಕ,) ಕವಿಯು ಈ ಪದ್ಯದಲ್ಲಿ ತನ್ನ ಇಷ್ಟದೇವತಾಪ್ರಾರ್ಥನೆಯನ್ನುಮಾಡಿ ಆಶೀರೂಪಮಂಗಳವನ್ನು ಮಾಡಿದ್ದಾನೆ. ||೧||

ಮೂ|| ಶರಧಿಶಯನಮುಕುಂದಕಂಸಾ| ಸುರಮಥನಸುರಮೌಳಿವಂ
ದಿತ|ಗಿರಿಧರಾಚ್ಯುತವೇಣುನಾದವಿನೋದಭವದೂರ ||ಸರಸಿಜೋ

ದ್ಭವನವಿುತಗುಣಸಾ । ಗರಮುರಾಂತಕದೇವವರಪುರ । ದರಸಚೆ
ನ್ನಿಗರಾಯಪಾಲಿಸುಸಕಲಸಜ್ಜನರ ॥ ॥೨॥

ಟೀಕೆ:-(೧) ಶರಧಿಶಯನ-ಶರಧಿ-ಸಮುದ್ರವೇ, ಶಯನ-ಹಾಸಿಗೆಯಾಗಿರುವ, ಮುಕುಂದ-ಮೋಕ್ಷದಾಯಕನಾದ, ಕಂಸಾಸುರಮಥನ, ಕಂಸ-ಕಂಸನೆಂಬ (೨) ಅಸುರ-ರಾಕ್ಷಸನನ್ನು, ಮಥನ-ಸಂಹರಿಸಿದ, ಸುರಮೌಳಿವಂದಿತ, ಸುರ-ದೇವತೆಗಳ, ಮೌಳಿ-ತಲೆಗಳಿಂದ, ವಂದಿತ-ನಮಸ್ಕಾರ ಮಾಡಲ್ಪಟ್ಟ, ಗಿರಿಧರ-ಗಿರಿ-ಬೆಟ್ಟವನ್ನು ಧರ-ಹೊತ್ತಿದ್ದ, ಅಚ್ಯುತ-ನಾಶ ರಹಿತನಾದ, ವೇಣುನಾದ ವಿನೋದ, ವೇಣು-ಪಿಳ್ಳಂಗೋವಿಯು, ನಾದ-ಶಬ್ದದಲ್ಲಿ, ವಿನೋದ-ಆನಂದಪಡುತ್ತಿರುವ, (೩) ಭವ-ಸಂಸಾರಕ್ಕೆ, ದೂರ-ಸಿಕ್ಕದಿರುವ, (೪) ಸರಸಿಜೋದ್ಭವನವಿುತ, ಸರಸಿಜ-ಕಮಲದಲ್ಲಿ, ಉದ್ಭವ-ಹುಟ್ಟಿದವನಾದ (ಬ್ರಹ್ಮನಿಂದ)ನವಿುತ-ನಮಸ್ಕರಿಸಲ್ಪಟ್ಟ,ಗುಣ-ಸದ್ಗುಣಗಳ, ಸಾಗರ-ಸಮುದ್ರನಾದ, ಮುರಾಂತಕ, ಮುರ-ಮುರಾಸುರನಿಗೆ, ಅಂತಕ-ಯಮನಾದ, ದೇವ-ಪ್ರಕಾಶಮಾನನಾದ, ವರಪುರದ-ಶ್ರೇಷ್ಠವಾದಪಟ್ಟಣದ, ಅರಸ-ಒಡೆಯನಾದ, ಚೆನ್ನಿಗರಾಯ-ಚೆನ್ನಿಗರಾಯಸ್ವಾಮಿಯೇ ಸಕಲ-ಸಮಸ್ತರಾದ (೫) ಸಜ್ಜನರ-ಸತ್ಪುರುಷರನ್ನೂ, ಪಾಲಿಸು-ರಕ್ಷಿಸು. ॥೨॥

ತಾತ್ಪರ್ಯ:-ಕ್ಷೀರಸಮುದ್ರದಲ್ಲಿ ಮಲಗಿರುವವನಾಗಿಯೂ, ಭಕ್ತಗೆ ಮುಕ್ತಿಪ್ರದಾಯಕನಾಗಿಯೂ, ಕಂಸನೆಂಬರಾಕ್ಷಸನನ್ನು ಸಂಹರಿಸಿದವನಾಗಿಯೂ, ಇಂದ್ರಾದಿ ದೇವತೆಗಳಿಂದ ನಮಸ್ಕರಿಸಲ್ಪಡುವವನಾಗಿಯೂ, ಶಾಶ್ವತ ನಾಗಿಯೂ, ವೇಣುಗಾನದಿಂದ ಸರ್ವದಾಸಂತೋಷಿಸುತ್ತಿರುವವನಾಗಿಯೂ, ಸಂಸಾರಬಂಧಕ್ಕೊಳಗಾಗದವನಾಗಿಯೂ, ಬ್ರಹ್ಮನಿಂದ ನಮಸ್ಕರಿಸಲ್ಪಟ್ಟವನಾಗಿಯೂ, ದಿವ್ಯತೇಜೋವಿರಾಜಮಾನನಾಗಿಯೂ, ಇರುವ ಚೆನ್ನಿಗರಾಯನೇ ! ಸಜ್ಜನರಿಗೆ ಇಷ್ಟಾರ್ಥವನ್ನು ಕೊಟ್ಟು ಕಾಪಾಡು. ॥೨॥

ಟಿಪ್ಪಣಿ:-(೧)ಶರ-ನೀರು, ಧಿ-ನಿಲ್ಲುವಸ್ಥಳ, (ಸಮುದ್ರ)ಶರ-ಬಾಣಗಳು-ಧಿ-ನಿಲ್ಲುವಸ್ಥಳ, (ಬತ್ತಳಿಕೆ) ಶರ-ನೀರು, ಬಾಣ, ದರ್ಭೆ, ಶರದೃತು, (ನಾನಾ) (೨) ಸುರ-ದೇವತೆಗಳು, ಅ-ಅಲ್ಲದವರು, (ನಞ್, ತ) ಸುರಾ-ಅಮೃತವು, ಅ-ಇಲ್ಲದವರು, (ನಞ್, ಬ, ವ್ರೀ,) ಅಸು-

ಪ್ರಾಣಗಳನ್ನು, ರ-ಅಪಹರಿಸುವರು, (ಉಪ, ಪ) ; (೩) ಈಶ್ವರ, ಸಂಸಾರ, ಹುಟ್ಟಿದುದು, (ನಾನಾ) (೪) ಸರಸಿಜದಲ್ಲಿ ಉದ್ಭವವುಳ್ಳವನು ಯಾವನೊ ಅವನು, (ಬ, ವ್ರೀ, ಸ) ಸರಸಿಜ+ಉದ್ಭವ- (ಗುಣಸ) (೫) ಸತ್+ಜನ-ಶ್ಚುತ್ವಸಂಧಿ.॥೧॥

ಮೂ॥ ಉರಗರಿಪುಕೇತನವಿಭೀಷಣ । ವರದಹರಿಸದ್ಭಕ್ತಪೋಷಣ
ದುರಿತಕುಲಗಿರಿವಜ್ರನರಕಾಂತಕಮಹಾಮಹಿಮ॥ ಪರಮಪುರುಷ
ಯಶೋದೆಯಾತ್ಮಜ।ದುರಿತದುಃಖವಿನಾಶವರಪುರ । ದರಸಚೆನ್ನಿಗ
ರಾಯರಕ್ಷಿಸುನಮ್ಮನನವರತ ॥ ॥೨॥

ಟೀಕೆ— (೧) ಉರಗರಿಪುಕೇತನ, ಉರಗ-ಸರ್ಪಗಳಿಗೆ, ರಿಪು-ಶತ್ರುವಾದ (ಗರುಡನನ್ನು) ಕೇತನ-ಧ್ವಜದಲ್ಲಿಉಳ್ಳವನಾದ, ವಿಭೀಷಣ ವರದ, ವಿಭೀಷಣ-ವಿಭೀಷಣನೆಂಬ ರಾಕ್ಷಸನಿಗೆ, ವರ-ಇಷ್ಟಾರ್ಥವನ್ನು, ದ-ಕೊಟ್ಟ, ಹರಿ-ಪಾಪವನ್ನು ಪರಿಹರಿಸುವನಾದ, (೨) ಸದ್ಭಕ್ತಪೋಷಣ, ಸತ್-ಒಳ್ಳೆ, ಭಕ್ತ-ಭಕ್ತರನ್ನು, ಪೋಷಣ-ರಕ್ಷಿಸತಕ್ಕ (೩) ದುರಿತಕುಲಗಿರಿವಜ್ರ, ದುರಿತ-ಪಾಪವೆಂಬ, ಕುಲಗಿರಿ-ಕುಲಪರ್ವತಕ್ಕೆ, ವಜ್ರ-ವಜ್ರಾಯುಧದಂತಿರುವ, ನರಕಾಂತಕ, ನರಕ-ನರಕಾಸುರನಿಗೆ, ಅಂತಕ-ಯಮಸ್ವರೂಪನಾದ, ಮಹಾಮಹಿಮ-ಹೆಚ್ಚಾದ ಮಾಹಾತ್ಮ್ಯಯುಳ್ಳ, ಪರಮಪುರುಷ-ಪುರುಷೋತ್ತಮನಾದ,ಯಶೋದೆಯ-ಯಶೋದಾದೇವಿಯ ಆತ್ಮಜ-ಮಗನಾದ (೪)ದುರಿತದುಃಖವಿನಾಶ, ದುರಿತ-ಪಾಪವೆಂಬ, ದುಃಖ-ಶೋಕವನ್ನು, ವಿನಾಶ-ಪರಿಹರಿಸುವ, ವರಪುರದ-ಬೇಲೂರಿನ, ಅರಸ-ದೊರೆಯಾದ, ಚೆನ್ನಿಗರಾಯ-ಕೇಶವಸ್ವಾಮಿಯೇ ! ನಮ್ಮ-ನಮ್ಮನ್ನು, ಅನವರತ-ಯಾವಾಗಲೂ, ರಕ್ಷಿಸು-ಕಾಪಾಡು. ॥೨॥

ತಾತ್ಪರ್ಯ- ಗರುಡ ಧ್ವಜನಾಗಿಯೂ, ರಾವಣನತಮ್ಮನಾದ ವಿಭೀಷಣನ ಇಷ್ಟಾರ್ಥವನ್ನು ನೆರವೇರಿಸಿ ರಕ್ಷಿಸಿದವನಾಗಿಯೂ, ಪಾಪಪರಿಹಾರಕನಾಗಿಯೂ, ಪ್ರಿಯಭಕ್ತರನ್ನು ಸಲಹುವವನಾಗಿಯೂ, ಪಾಪವೆಂಬ ಬೆಟ್ಟಗಳಿಗೆ ವಜ್ರಾಯುಧ ಸ್ವರೂಪನಾಗಿಯೂ, ನರಕಾಸುರನನ್ನು ಕೊಂದವನಾಗಿಯೂ, ಮಹನೀಯನಾಗಿಯೂ, ಪುರುಷಶ್ರೇಷ್ಠನಾಗಿಯೂ, ಯಶೋದಾದೇವಿಯ ಪ್ರೇಮಪುತ್ರನಾಗಿಯೂ, ಪಾಪವೆಂಬ ಶೋಕವನ್ನು ನಿವಾರಿಸುವನಾಗಿಯೂ, ಇರುವ ಬೇಲೂರಿನಲ್ಲಿ ಪ್ರಸಿದ್ಧ

ನಾದ ಚೆನ್ನಿಗರಾಯಸ್ವಾಮಿಯೇ! ನೀನು ಯಾವಾಗಲೂ ನಮ್ಮನ್ನು ಸಂರಕ್ಷಿಸುವನಾಗು ||೩||

ಟಿಪ್ಪಣಿ-(೧) ಉರಃ-ಎದೆಯಿಂದ, ಗ-ಸಂಚರಿಸುವುದು, (ಉಪ.ಸ) ಉರಗನರಿಪು-ಉರಗರಿಪು (ಷ. ತ) ಉರಗರಿಪುವುಕೇತನದಲ್ಲಿ ಆರಿಗೋ ಅವನು-ಉರಗರಿಪುಕೇತನನು (ಬ. ವ್ರೀ) (೨) ಸತ್ ಭಕ್ತ-ಸದ್ಭಕ್ತ (ಜಶ್ತ್ವ) (೩)ದುರಿತವೇ ಕುಲಗಿರಿಗಳು (ಅವ. ಪೂರ್ವ. ಕ) ಕುಲಗಿರಿಯವಜ್ರ-ಕುಲಗಿರಿವಜ್ರ (ಷ. ತ) ಮಹೇಂದ್ರ, ಮಲಯ, ಸಹ್ಯ, ಶುಕ್ತಿಮಂತ, ಋಕ್ಷ, ವಿಂಧ್ಯ, ಪಾರಿಯಾತ್ರ, ಇವು ಏಳುಕುಲಪರ್ವತಗಳು. ವಜ್ರ-ಬಜ್ಜರ (ದ್ಬ) (೪) ದುರಿತವೇ ದುಃಖ (ಅವ. ಪೂರ್ವ. ಕ) ದುಃಖವು ಯಾವನಿಂದ ವಿನಾಶವಾಗುತ್ತದೆಯೋ ಅವನು, ದುರಿತ ದುಃಖ ವಿನಾಶನು (ಬ. ವ್ರೀ) ||೩||

ಮೂ|| ಕರಿವದನಹೇರಂಬಲಂಬೋ | ದರಚತುರ್ಭುಜಮೋದಕಪ್ರಿ
ಯಪರಶುಪಾಶಾಂಕುಶಕರಾಂಕಿತದಿಂದರಂಜಿಸುವ || ಸುರನರೋ
ರಗನಮಿತಗೌರೀ | ವರಕುಮಾರಜ್ಞಾನವಾರಿಧಿ |ವರದಗಣಪತಿಪಾ
ಲಿಸೆನ್ನಯಮತಿಗೆಮಂಗಳವ ||　　||೪||

ಟೀಕೆ- (೧) ಕರಿ-ಆನೆಯಂತೆ, ವದನ-ಮುಖವುಳ್ಳ, ಹೇರಂಬ-ಹೇರಂಬನಾದ, ಲಂಬೋದರ-ದೊಡ್ಡದಾದ ಹೊಟ್ಟೆಯುಳ್ಳ (೨) ಚತುರ್ಭುಜ-ನಾಲ್ಕುತೋಳುಗಳುಳ್ಳ, ಮೋದಕಪ್ರಿಯ-ಕಡುಬಿನಲ್ಲಿ ಪ್ರೀತಿಯುಳ್ಳ, (೩) ಪರಶು-ಕೊಡಲಿ, ಪಾಶ-ಹಗ್ಗ, ಅಂಕುಶ-ಅಂಕುಶ (ಇವುಗಳುಳ್ಳ) ಕರ-ಕೈಯು, ಅಂಕಿತದಿಂದ-ಗುರುತಿನಿಂದ, ರಂಜಿಸುವ-ಪ್ರಕಾಶಿಸುವ, ಸುರನರೋರಗ ನಮಿತ-ಸುರ-ದೇವತೆಗಳಿಂದಲೂ, ನರ-ಮನುಷ್ಯರಿಂದಲೂ, ಉರಗ-ಸರ್ಪಗಳಿಂದಲೂ, ನಮಿತ-ವಂದಿಸಲ್ಪಟ್ಟ ಗೌರೀ-ಪಾರ್ವತಿಯ, ವರ-ಶ್ರೇಷ್ಠನಾದ, ಕುಮಾರ-ಮಗನಾದ, ಜ್ಞಾನ-ವಿದ್ಯೆಗೆ, ವಾರಿಧಿ-ಸಮುದ್ರದಂತಿರುವ (೪) ವರದ-ಇಷ್ಟಾರ್ಥಗಳನ್ನು ಕೊಡುವ, ಗಣಪತಿ-ವಿಘ್ನೇಶ್ವರನೇ! ಎನ್ನಯ-ನನ್ನ, ಮತಿಗೆ-ಬುದ್ಧಿಗೆ, ಮಂಗಳವ-ಶುಭವನ್ನು, ಪಾಲಿಸು-ಕೊಡು ||೪||

ತಾತ್ಪರ್ಯ- ಆನೆಯಂತೆ ಮುಖವುಳ್ಳವನಾಗಿಯೂ, ನಾಲ್ಕು ಕೈಗಳುಳ್ಳವನಾಗಿಯೂ, ಪಾಶಾಂಕುಶ ಮೊದಲಾದಆಯುಧಗಳನ್ನು ಹಿಡಿದು ಅಭಯಹಸ್ತವುಳ್ಳವನಾಗಿಯೂ, ಮೂರುಲೋಕದವರಿಂದಲೂ ಪೂಜೆಯು

ನ್ನು ಹೊಂದತಕ್ಕವನಾಗಿಯೂ, ಗೌರಿಯವಃಪುತ್ರನಾಗಿಯೂ, ವಿದ್ಯಾ ನಿಧಿಯಾಗಿಯೂ, ಇರುವ ಗಣಪತಿಯೇ! ನನಗೆ ಬುದ್ಧಿ ಚಾತುರ್ಯವನ್ನು ಕೊಡು, ||೪||

ಟಿಪ್ಪಣಿ:-(೧)ಕರವುಳ್ಳದ್ದು (ಸೊಂಡಲವುಳ್ಳದ್ದು), ಕರಿ, ಕರಿಯಂತೆವದನವುಳ್ಳವನು. (ಬ. ವ್ರೀ)(೨) ನಾಲ್ಕು ಭುಜಗಳುಳ್ಳವನು ಯಾವನೋಅವನು. ಚತುರ್ಭುಜ (ಬ. ವ್ರೀ) (೩) ಪರ್ಶು, ಎಂತಲೂ ರೂಪವುಂಟು, ಪಾಶ- (ದ್ವ) ಹಾಸು, ಅಂಕುಶ-(ದ್ವ) ಅಂಕುಸ, (೪) ವರ ಇಷ್ಟಾರ್ಥನ್ನು ದ-ಕೊಡತಕ್ಕವನು. ||೪||

ಮೂ|| ನಾರಿನಳಿನದಳಾಕ್ಷಿವರಜಂ । ಭಾರಿನುತೆಚತುರಾನನಪ್ರಿಯೆ
ಭೂರಿಗುಣಗಣಭರಿತೆಭಕ್ತಾಶ್ರಿತಜನೋದ್ಧಾರೆ || ನೀರೆನಿಗಮವಿ
ಚಾರೆಘನಶೃಂ । ಗಾರೆಭಜಕರವರವನೀವವು । ದಾರೆಶಾರದೆನಲಿದೊ
ಲಿದುನೆಲಸೆನ್ನ ಜಿಹ್ವೆಯಲಿ || ||೫||

ಟೀಕೆ:— ನಾರಿ- ದೇವ ಸುಂದರಿಯಾದ, ನಳಿನದಳಾಕ್ಷಿ, ನಳಿನ- ಕಮಲದ, ದಳ- ಎಸಳಿನಂತೆ ಅಕ್ಷಿ- ಕಣ್ಣುಳ್ಳವಳಾದ, ವರಜಂಭಾರಿನುತೆ, ವರ - ಶ್ರೇಷ್ಠನಾದ (೧) ಜಂಭಾರಿ- ಇಂದ್ರನಿಂದ, ನುತೆ - ಹೊಗಳಿಸಿ ಕೊಳ್ಳಲ್ಪಟ್ಟ, ಚತುರಾನನಪ್ರಿಯೆ, ಚತುರ್ - ನಾಲ್ಕಾದ, ಆನನ - ಮುಖವುಳ್ಳವನ (ಬ್ರಹ್ಮನ) ಪ್ರಿಯೆ-ಪತ್ನಿಯಾದ, ಭೂರಿ-ಹೆಚ್ಚಾದ, ಗುಣಗಣ-ಗುಣಸಮೂಹದಿಂದ, ಭರಿತೆ-ಕೂಡಿದ (೨) ಭಕ್ತಾಶ್ರಿತ ಜನೋದ್ಧಾರೆ, ಭಕ್ತ-ಭಕ್ತರಾಗಿ, ಆಶ್ರಿತ-ಮರೆಹೊಕ್ಕ, ಜನ-ಜನರನ್ನು, ಉದ್ಧಾರೆ-ರಕ್ಷಿಸುವ, ನೀರೆ-ಪ್ರಿಯೆಯಾದ, ನಿಗಮಾಗಮವಿಚಾರೆ, ನಿಗಮ-ವೇದಗಳ, ಆಗಮ-ಶಾಸ್ತ್ರಗಳ, ವಿಚಾರೆ-ವಿಚಾರವುಳ್ಳವಳಾದ,ಘನ,-ಹೆಚ್ಚಾದ, ಶೃಂಗಾರೆ-ಲಾವಣ್ಯರಸವುಳ್ಳ, ಭಜಕರ-ಭಕ್ತರಿಗೆ, ವರವಂ-ಇಷ್ಟಾರ್ಥವನ್ನು, ಈವ-ಕೊಡತಕ್ಕ, ಉದಾರೆ-ದಾನಗುಣವುಳ್ಳ ಶಾರದೆ-ಸರಸ್ವತಿಯೆ, ನಲಿದು-ಸಂತೋಷದಿಂದ, ಒಲಿದು-ಪ್ರೀತಿಯಿಂದ, ಎನ್ನ-ನನ್ನ, ಜಿಹ್ವೆಯಲಿ-ನಾಲಗೆಯಲ್ಲಿ, ನೆಲಸು-ನಿಲ್ಲು ||೫||

ತಾತ್ಪರ್ಯ:- ಕಮಲನೇತ್ರೆಯಾಗಿಯೂ, ಇಂದ್ರಾದಿದೇವತೆಗಳಿಂದ ಹೊಗಳಿಸಿಕೊಳ್ಳುವವಳಾಗಿಯೂ, ಬ್ರಹ್ಮನರಾಣಿಯಾಗಿಯೂ ಸಕಲಗುಣಸಂಪನ್ನೆಯಾಗಿಯೂ, ಭಕ್ತವತ್ಸಲೆಯಾಗಿಯೂ, ವೇದಶಾಸ್ತ್ರಪಾ

ರಂಗತಳಾಗಿಯೂ, ಶೃಂಗಾರರಸ ಸಂಪೂರ್ಣೆಯಾಗಿಯೂ ಇರುವ ಸರಸ್ವತಿಯೇ: ನೀನು ಪ್ರೀತಿಯಿಂದ ನನ್ನ ನಾಲಗೆಯಲ್ಲಿ ನೆಲಸಿರು ॥೫॥

ಟಿಪ್ಪಣಿ:-(೧)ಜಂಭ-ಜಂಭಾಸುರನಿಗೆ, ಅರಿ-ಶತ್ರು, (೨) ಭಕ್ತರಾದ ಆಶ್ರಿತರಾದ-ಭಕ್ತಾಶ್ರಿತರು (ವಿ. ಉ. ಕ.ಧಾ) ಭಕ್ತಾಶ್ರಿತರಾದ ಜನರು-ಭಕ್ತಾಶ್ರಿತಜನರು (ಕರ್ಮ. ಧಾ.) ॥೫॥

ಮೂ॥ ರಾಯರೊಳಗಗ್ಗಳಿಯನಹಕೌಂ । ತೇಯನಿಗೆರೋಮಶಮ
ಹಾಮುನಿ । ರಾಯವಿಸ್ತರಿಸಿದನುನಳಭೂವರನಚರಿತೆಯನು ॥
ಪ್ರೀಯದಿಂದಾಲಿಪುದುಸುಜನರು । ಶ್ರೀಯರಸವರಪುರದಚೆನ್ನಿಗ ।
ರಾಯನಂಕಿತವಾಗಿಪೇಳುವೆನೀಮಹಾಕಥೆಯಂ ॥ ॥೬॥

ಟೀಕೆ:- ರಾಯರೊಳಗೆ-ದೊರೆಗಳಲ್ಲಿ, ಅಗ್ಗಳಿಯನಹ-ಶ್ರೇಷ್ಠನಾದ,(೧)ಕೌಂತೇಯನಿಗೆ-ಧರ್ಮರಾಜನಿಗೆ, ರೋಮಶ ಮಹಾಮುನಿರಾಯ-ರೋಮಶನೆಂಬ ಮಹಾಮುನಿಯು, (೨) ನಳಭೂವರನ ಚರಿತೆಯನು-ನಳ-ನಳನೆಂಬ, ಭೂವರನ-ದೊರೆಯ, ಚರಿತೆಯನು-ಚರಿತ್ರೆಯನ್ನು, ವಿಸ್ತರಿಸಿದನು-ವಿಸ್ತಾರವಾಗಿಹೇಳಿದನು, (ನಾನು) (೩) ಈ ಮಹಾ ಕಥೆಯಂ-ಈ ದೊಡ್ಡ ಕಥೆಯನ್ನು, ಶ್ರೀಯರಸ-ಲಕ್ಷ್ಮೀಪತಿಯಾದ, ವರಪುರದ-ಬೇಲೂರಿನ, ಚೆನ್ನಿಗರಾಯನ-ಕೇಶವಸ್ವಾಮಿಯ ಅಂಕಿತವಾಗಿ-ಅಂಕಿತದಿಂದ, ಪೇಳುವೆಂ-ಹೇಳುವೆನು. ಸುಜನರು-ಸಜ್ಜನರು, ಪ್ರೀಯದಿಂದ-ಪ್ರೀತಿಯಿಂದ, ಆಲಿಪುದು-ಕೇಳಿ,॥೬॥

ತಾತ್ಪರ್ಯ:- ಕವಿಯು ಈ ರೀತಿಯಾಗಿ ಇಷ್ಟದೇವತಾ ಪ್ರಾರ್ಥನೆಯಂ ಮಾಡಿ ಕಥೆಯನ್ನು ಪೇಳಲುಪಕ್ರಮಿಸಿದನದೆಂತೆನೆ-ರಾಜಾಧಿರಾಜನಾದ ಧರ್ಮರಾಜನಿಗೆ, ರೋಮಶ ಮಹಾಮುನಿಯು ನಳಮಹಾರಾಜನ ಚರಿತ್ರೆಯನ್ನು ವಿಸ್ತಾರವಾಗಿ ವಿವರಿಸಿದನು,ಅದನ್ನು ಬೇಲೂರು ಚೆನ್ನಿಗರಾಯಸ್ವಾಮಿಯ ಅಂಕಿತವನ್ನಿಟ್ಟು ನಾನುಹೇಳುವೆನು. ಭಕ್ತರು ಆದರಪೂರ್ವಕವಾಗಿಕೇಳಬೇಕಾಗಿಪ್ರಾರ್ಥಿಸುತ್ತೇನೆ, ॥೬॥

ಟಿಪ್ಪಣಿ:-(೧) ಕುಂತಿಯಪುತ್ರ-ಕೌಂತೇಯ, (೨) ನಳನೆಂಬ ಭೂವರ-ನಳಭೂವರ (ಸಂ. ಪೂರ್ವ. ಕ) ಭೂ-ಭೂಮಿಗೆ, ವರ-ಪತಿ (ಅವ) (೩) ಮಹತ್ತಾದ ಕಥೆ-ಮಹಾಕಥೆ; (ವಿ. ಪೂರ್ವ. ಕ) ಇದು-ಮಹಾಕಥೆ-ಈ ಮಹಾಕಥೆ, (ಗಮಕ) ॥೬॥

ಮೂ॥ ಪರಮಪುಣ್ಯಚರಿತ್ರೆಯಿದನಾ। ದರಿಸಿಕೇಳುವನರರಜನ್ಮಾಂ
ತರದಘನದುಷ್ಕರ್ಮದುಃಖವಿನಾಶದುರಿತಹರ ॥ ಕರಿತುರಗರಥನಿ
ಚಯರಾಜ್ಯದ । ಸಿರಿಯಸಂಪದವಾಯುವನುಮುರ। ಹರನುಮ
ನ್ನಿಸಿಕೊಡುವಸುಜನರಿಗಿಷ್ಟಸಂಪದವ ॥ ॥೭॥

ಟೀಕೆ:— (ಇದು) ಪರಮ - ಶ್ರೇಷ್ಠವಾದ, ಪುಣ್ಯ - ಸು
ಕೃತವುಳ್ಳ, ಚರಿತ್ರೆ-ಕಥೆಯು, ಇದಂ-ಈ ಕಥೆಯನ್ನು, ಆ
ದರದಿ - ಭಕ್ತಿಯಿಂದ, ಕೇಳುವ - ಕೇಳತಕ್ಕ, ನರರ - ಮನು
ಷ್ಯರ, ಜನ್ಮಾಂತರದ - ಹಿಂದಿನ ಜನ್ಮಗಳ, ಘನದುಷ್ಕರ್ಮ
ದುಃಖವಿನಾಶ,ಘನ-ಹೆಚ್ಚಾದ, ದುಷ್ಕರ್ಮ-ಕರ್ಮದಿಂದುಂಟಾದ, ದುಃಖ-
ಸಂಕಟದ, ವಿನಾಶ-ಪರಿಹಾರವು. (ಆಗುವುದು) ದುರಿತಹರ-ಪಾಪಪರಿ
ಹಾರವಾಗುವುದು (೧) ಮುರಹರನು-ಕೃಷ್ಣನು (೨) ಸುಜನರಿಗೆ-ಭ
ಕ್ತರಿಗೆ, ಕರಿತುರಗರಥನಿಚಯರಾಜ್ಯದ, ಕರಿ-ಆನೆ (೩) ತುರಗ-ಕು
ದುರೆ, ರಥ-ತೇರು, ಇವುಗಳ, ನಿಚಯ-ಸಮೂಹವುಳ್ಳ, ರಾಜ್ಯದ-
ದೊರೆತನದ, ಸಿರಿಯ-ಸಂಪತ್ತನ್ನೂ (೪) ಸಂಪದವ-ಐಶ್ವರ್ಯವನ್ನೂ,
ಆಯುವನು-ದೀರ್ಘಾಯುಸ್ಸನ್ನೂ, ಇಷ್ಟ-ಕೋರಿದ (೨) ಸಂಪದವ
ಪದವಿಯನ್ನೂ, ಮನ್ನಿಸಿ- ಪ್ರೀತಿಯಿಂದ, ಕೊಡುವ-ಕೊಡುತ್ತಾನೆ॥೭॥

ತಾತ್ಪರ್ಯ:— ಈ ಕಥೆಯು ಅದ್ಭುತವಾಗಿಯೂ, ಪುಣ್ಯಪ್ರದ
ವಾಗಿಯೂ, ಇರುವುದು. ಇದನ್ನು ಭಕ್ತಿಶ್ರದ್ಧೆಯಿಂದ ಯಾರು ಶ್ರವ
ಣ ಪಠನಮಾಡುತ್ತಾರೋ ಅವರಿಗೆಪ್ರೀತಿಯಿಂದ ಶ್ರೀಕೃಷ್ಣನು, ಚತು
ರಂಗ ಸೇನಾಸಮೇತವಾದ ರಾಜ್ಯಪದವಿಯನ್ನೂ, ದೀರ್ಘಾಯುರಾ
ರೋಗ್ಯಗಳನ್ನೂ, ಕೋರಿದ ಇಷ್ಟಾರ್ಥಗಳನ್ನೂ ಕೊಟ್ಟು
ಕಾಪಾಡುವನು ॥೭॥

ಟಿಪ್ಪಣಿ— (೧) ಮುರ-ಮುರನೆಂಬ ರಾಕ್ಷಸನನ್ನು, ಹರ-
ಕೊಂದವನು, (ಅವ) (೨) ಸುಜನರು-(ಪ್ರಾ. ಸ) (೩) ತುರ-ಬೇಗನೆ,
ಗ-ನಡೆಯುವುದು (ಅವ) (೪) ಸಂಪತ್, ಎಂಬ ಸಂಸ್ಕೃತದ ವ್ಯಂಜ
ನಾಂತ ಶಬ್ದವು ಪ್ರಥಮಾ ಬಹುವಚನವಾದ ಸಂಪದಃ ಎಂಬರೂಪದಲ್ಲಿ ವಿ
ಸರ್ಗವನ್ನುಳಿದು ಅಕಾರಾಂತವಾಗಿ ಕನ್ನಡಕ್ಕೆಲಿಂಗವಾಗಿದೆ ॥೭॥

ಮೂ॥ ಜನಪಕುರುಭೂಪಾಲನೊಳುಜೂ। ಜಿನಲಿರಾಜ್ಯವಸೋತು
ಯಮನಂ। ದನುತನ್ನನುಜಾತರೊಗ್ಗಿಲಿಸತ್ಯವನುಬಿಡದೆ॥ ವನಿತೆ

ಧೌಮ್ಯಮುನೀಂದ್ರಮಂತ್ರೀ। ಜನಸಹಿತನಡೆತಂದು ಕಾಮ್ಯಕ।
ವನದೊಳಗೆಸಂಚರಿಸುತಿರ್ದನುತೀರ್ಥಯಾತ್ರೆಯಲಿ ॥೮॥

ಟೀಕೆ:— ಜನಪ-ನೊರೆಯಾದ, ಯಮನಂದನನು-ಧರ್ಮರಾಜನು ಕುರುಭೂಪಾಲನೊಳು-ಕೌರವರಾಜನಲ್ಲಿ, (೧) ಜೂಜಿನಲಿ-ಜೂಜಾಡಿ, ರಾಜ್ಯವ-ರಾಜ್ಯವನ್ನು, ಸೋತು-ಸೋತವನಾಗಿ, ಸತ್ಯವನು-ಸತ್ಯವ್ರತವನ್ನು, ಬಿಡದೆ-ಅತಿಕ್ರಮಿಸದೆ, ತನ್ನ, (೨) ಅನುಜಾತರ-ತಮ್ಮಂದಿರ, ಒಗ್ಗಿಲಿ-ಒಡನೆಯು, ವನಿತೆ-ಹೆಂಡತಿಯು, ಧೌಮ್ಯ-ಧೌಮ್ಯನೆಂಬ, ಮುನೀಂದ್ರ-ಋಷಿಶ್ರೇಷ್ಠನು,ಮಂತ್ರೀಜನ-ಮಂತ್ರಿಗಳು, ಸಹಿತ-ಇವರೊಡನೆಯೂ, ನಡೆತಂದು-ಬಂದು, ತೀರ್ಥಯಾತ್ರೆಯಲಿ-ತೀರ್ಥಯಾತ್ರೆಗಾಗಿ, ಕಾಮ್ಯಕವನದೊಳಗೆ-ಕಾಮ್ಯಕವೆಂಬಅರಣ್ಯದಲ್ಲಿ, ಸಂಚರಿಸುತಿರ್ದನು ಸಂಚಾರಮಾಡುತ್ತಿದ್ದನು. ॥೮॥

ತಾತ್ಪರ್ಯ:— ದ್ಯೂತಪ್ರಿಯನಾದ ಧರ್ಮರಾಜನು ಕಾಲವಶದಿಂದ ಕೌರವೇಶ್ವರನಸಂಗಡ ಜೂಜಾಡಿ ರಾಜ್ಯವನ್ನು ಸೋತು, ಗೊತ್ತುಮಾಡಿಕೊಂಡಿದ್ದಮಾತಿಗೆ ತಪ್ಪದೆ, ಸತ್ಯಕ್ಕೆ ಕಟ್ಟುಬಿದ್ದು, ತನ್ನ ತಮ್ಮಂದಿರೊಡನೆಯೂ, ಪುರೋಹಿತನಾದ ಧೌಮ್ಯನೊಡನೆಯೂ, ಮಂತ್ರಿಗಳೊಡನೆಯೂ ಹೊರಟು ತೀರ್ಥಯಾತ್ರೆಯ ಉದ್ದೇಶದಿಂದ ಸಂಚರಿಸುತ್ತಾ ಕಾಮ್ಯಕವನಕ್ಕೆ ಬಂದು ಸೇರಿದನು. ॥೮॥

ಟಿಪ್ಪಣಿ:—(೧) ಜೂಜು-ದ್ಯೂತ (ತ್ಸ)(೨) ಅನು-ತನ್ನನ್ನನುಸರಿಸಿ (ತರುವಾಯ) ಜಾತ-ಹುಟ್ಟಿದವನು. (ಪ್ರ.ಸ) ॥೮॥

ಮೂ॥ಧರಣಿಪತಿಚಿಂತಿಸುತಹಲುಬಿದ। ನರನಹದನೇನೆಂದುತಪದಲಿ।
ಮರೆದುಕಳೆದನುನಂಮನಿನಿಬರನೆನುತಲಿರಲಂದು ॥ ಸುರಪಕಳುಹಿದರೋಮಶನುಮುನಿ। ವರರಗಡಣದೊಳೈದಿದನುಭಾ। ಸುರಸುತೇಜದೊಳಂದುಕಾಮ್ಯಕವನಕೆನಡೆತಂದ ॥ ॥೯॥

ಟೀಕೆ:— ಧರಣಿಪತಿ-ದೊರೆಯು, ನರನ-ಅರ್ಜುನನ, ಹದನು-ಸಮಾಚಾರವು, ಏನೆಂದು-ಏನಾಗಿರಬಹುದೆಂದು, ಚಿಂತಿಸುತ-ಆಲೋಚಿಸುತ್ತಾ, ಹಲುಬಿದನು-ತೊಳಲಿದನು, ತಪದಲಿ-ತಪಸ್ಸಿನಲ್ಲಿ, ಮರೆದು-ಮರೆತುಬಿಟ್ಟು, ನಮ್ಮನು-ನಮ್ಮನ್ನು, (೧) ಇನಿಬರನು-ಇಷ್ಟುಮಂದಿಯನ್ನೂ, ಕಳೆದನು-ಕಳುಹಿಸಿದನು, ಎನುತಲಿ-ಎನ್ನುತ್ತಾ, ಇರಲು-ಇರಲು, ಅಂದು-ಆಗ (೨) ಸುರಪ-ಇಂದ್ರನು, ರೋಮಶನ-ರೋಮಶನ

ನ್ನು, ಕಳುಹಿದ-ಕಳುಹಿಸಿದನು, ಮುನಿವರರ-ಋಷಿಶ್ರೇಷ್ಠರ (೩) ಗಡಣದೊಳು-ಗುಂಪಿನೊಡನೆ, ಭಾಸುರ-ಪ್ರಕಾಶಮಾನವಾದ, ಸುತೇಜದೊಳು-ಒಳ್ಳೆಯಕಾಂತಿಯಲ್ಲಿ, ಅಂದು-ಆಗ, ಕಾಮ್ಯಕವನಕೆ-ಕಾಮ್ಯಕವನಕ್ಕೆ, ನಡೆತಂದ-ಬಂದನು. ॥೯॥

ತಾತ್ಪರ್ಯ:— ತನ್ನ ತಮ್ಮನಾದ ಅರ್ಜುನನು ಪಾಶುಪತಾಸ್ತ್ರವನ್ನು ಪಡೆಯುವುದಕ್ಕಾಗಿ ಪರಮೇಶ್ವರನನ್ನು ಕುರಿತು ಘೋರವಾದ ತಪಸ್ಸುಮಾಡುತ್ತಾ ಲೋಕವ್ಯಾಪಾರಗಳೆಲ್ಲವನ್ನೂ ಮರೆತು, ಅಣ್ಣತಮ್ಮಂದಿರನ್ನೆಲ್ಲಾ ಬಿಟ್ಟು ಇರುತ್ತಿರಲು, ಆಪಾರ್ಥನಗತಿ ಯೇನಾಯ್ತೋಎಂದು ಬಹುವಾಗಿ ಚಿಂತಿಸುತ್ತಿರಲು ದೇವೇಂದ್ರನು ಸಮಾಧಾನ ಮಾಡುವುದಕ್ಕಾಗಿ ರೋಮಶಮಹಾಮುನಿಯನ್ನು ಕಳುಹಿಸಿಕೊಟ್ಟನು. ಸೂರ್ಯಾಗ್ನಿಗಳಂತೆ ಪ್ರಕಾಶಿಸುತ್ತಿರುವಾ ಮುನಿಯು ಬಹುಮಂದಿ ಮಹರ್ಷಿಗಳೊಡನೆ ಕಾಮ್ಯಕವನದಲ್ಲಿರುವ ಧರ್ಮರಾಜನ ಬಳಿಗೆ ಬಂದನು. ॥೯॥

ಟಿಪ್ಪಣಿ:—(೧) ಇನಿತುಎಂಬ ಗುಣವಾಚಕದಮೇಲೆ ಪುಲ್ಲಿಂಗ ಬಹುವಚನದಲ್ಲಿ (ವರ್) ಎಂಬಪ್ರತ್ಯಯವುಸೇರಿ, ತು ಕಾರಲೋಪವೂ ಪ್ರತ್ಯಯದ ವ, ಕಾರಕ್ಕೆ ಬಕಾರಾದೇಶವೂ ಬಂದಿದೆ,(೨) ಸುರ-ದೇವತೆಗಳನ್ನು, ಪ - ಪಾಲಿಸತಕ್ಕವನು (೩) ಘಟನ (ತ್ಸ) ॥೯॥

ಮೂ॥ಚ್ಯವನಗೌತಮಕಪಿಲಭೃಗುಭಾರ್ಗವಭರದ್ವಾಜಾತ್ರಿಕೌಶಿಕ
ಪವನಭಕ್ಷಣವಾಮದೇವಮರೀಚಿಮೈತ್ರೇಯ ॥ ಶ್ರವತಿಕಣ್ವಾಂ
ಗಿರಸಶುಕಗಾ । ಲವಪರಾಶರದಾಲ್ಭ್ಯಮುನಿವರನಿವಹದೊಡನೈ
ತಂದನಾರೋಮಶಮಹಾಮುನಿಪ ॥ ॥೧೦॥

ಟೀಕೆ:-- ಆರೋಮಶಮಹಾಮುನಿಪ - ರೋಮಶನೆಂಬ ಋಷಿಶ್ರೇಷ್ಠನು, ಚ್ಯವನ-ಚ್ಯವನನು, ಗೌತಮ-ಗೌತಮನು, ಕಪಿಲ-ಕಪಿಲನು, ಭೃಗು-ಭೃಗುವು, ಭಾರ್ಗವ-ಭಾರ್ಗವನು, ಭರದ್ವಾಜನು, ಅತ್ರಿ- ಅತ್ರಿಯು, ಕೌಶಿಕ-ವಿಶ್ವಾಮಿತ್ರನು,ಪವನಭಕ್ಷಣ,ಪವನ-ವಾಯುವನ್ನು, ಭಕ್ಷಣ-ತಿಂದುಜೀವಿಸುವ, ವಾಮದೇವ-ವಾಮದೇವನು, ಮರೀಚಿ-ಮರೀಚಿಯೂ, ಮೈತ್ರೇಯ-ಮೈತ್ರೇಯನು, ಶ್ರವತಿ-ಶ್ರವತಿಯು, ಕಣ್ವ-ಕಣ್ವನು, ಆಂಗಿರಸ-ಆಂಗಿರಸನು, ಶುಕ-ಶುಕನು, ಗಾಲವ-ಗಾಲವನು, ಪರಾಶರ-ಪರಾಶರನು, ದಾಲ್ಭ್ಯಮುನಿವರ-ದಾಲ್ಭ್ಯಋ

ಷೀಶ್ವರನು, ಇವರೇ ಮೊದಲಾದ, ಮುನಿವರ-ಋಷಿಶ್ರೇಷ್ಠರ, ನಿವಹದೊಡನೆ-ಗುಂಪಿನಸಂಗಡ, ಐತಂದನು-ಬಂದನು. ||೧೦||

ತಾತ್ಪರ್ಯ:—ಇಂದ್ರಾಜ್ಞೆಯನ್ನು ಪಡೆದು ರೋಮಶನು ತನ್ನೊಡನೆ ಚ್ಯವನನೇ ಮೊದಲಾದ ಅನೇಕ ಋಷಿಗಳನ್ನು ಕರೆದುಕೊಂಡು ಧರ್ಮರಾಜನಬಳಿಗೆ ಬಂದನು. ||೧೦||

ಮೂ|| ಅರಸನನುಜರಸಹಿತಮುನಿಮುಖ್ಯರನುಕಂಡಿದಿರೆದ್ದು ಚರಣ
ದೊಳೆರಗಿಬಿಜಯಂಗೈಸಿತಂದರುತಳಿರಮಂಟಪಕೆ| ವರಮುನೀಂ
ದ್ರರಿಗರ್ಘ್ಯಪಾದ್ಯೋ| ತ್ಕರದೊಳುಪಚರಿಸುತ್ತದರ್ಭಾಸ್ತರಣದ
ಲಿಕುಳ್ಳಿರಿಸಿದರುಭಯಭರಿತಭಕ್ತಿಯಲಿ ||೧೧||

ಟೀಕೆ:—ಅರಸಂ-ದೊರೆಯು (೧) ಮುನಿಮುಖ್ಯರನು-ರೋಮಶಮುನಿಮೊದಲಾದವರನ್ನು, ಕಂಡು-ನೋಡಿ, ಅನುಜರಸಹಿತ-ತಮ್ಮಂದಿರೊಡನೆ (೨) ಇದಿರೆದ್ದು-ಪ್ರತ್ಯುತ್ಥಾನಮಾಡಿ, ಚರಣದೊಳ್- ಪಾದಗಳಿಗೆ, ಎರಗಿ-ಅಡ್ಡಬಿದ್ದು, ಬಿಜಯಂಗೈಸಿ-ಕರೆದುಕೊಂಡು, ತಳಿರ-ಚಿಗುರಿನಿಂದಮಾಡಿದ, (೩) ಮಂಟಪಕ್ಕೆ-ಮನೆಗೆ, ತಂದರು-ಪ್ರವೇಶಿಸಿದರು, (೪) ಭಯಭರಿತಭಕ್ತಿಯಲಿ, ಭಯ-ಭಯದಿಂದ, ಭರಿತ-ಪೂರ್ಣವಾದ, ಭಕ್ತಿಯಲಿ-ಭಕ್ತಿಯಿಂದ, ವರಮುನೀಂದ್ರರಿಗೆ, ವರ-ಶ್ರೇಷ್ಠರಾದ, ಮುನೀಂದ್ರರಿಗೆ-ಋಷಿಶ್ರೇಷ್ಠರಿಗೆ, ಅರ್ಘ್ಯ ಪಾದ್ಯೋತ್ಕರದೊಳ್, ಅರ್ಘ್ಯ-ಹಸ್ತೋದಕವೂ, ಪಾದ್ಯ-ಪಾದೋದಕವೂ ಇವುಗಳ, ಉತ್ಕರದೊಳ್ - ಸಮೂಹದಿಂದ, ಉಪಚರಿಸುತ - ಉಪಚಾರಮಾಡುತ್ತಾ, ದರ್ಭಾಸ್ತರಣದಲಿ-ದರ್ಭಾಸನದಲ್ಲಿ, ಕುಳ್ಳಿರಿಸಿದರು - ಕುಳ್ಳಿರಿಸಿದರು. ||೧೧||

ತಾತ್ಪರ್ಯ:— ಧರ್ಮರಾಜನು ಮುನಿಗಳ ಆಗಮನವನ್ನು ಕಂಡು ತನ್ನ ತಮ್ಮಂದಿರೊಡನೆ ಪ್ರತ್ಯುತ್ಥಾನಮಾಡಿ ಎದುರುಗೊಂಡು ಅವರೆಲ್ಲರನ್ನೂ ಕರೆದುಕೊಂಡುಬಂದು ತಮ್ಮ ಪರ್ಣಶಾಲೆಯಲ್ಲಿ ದರ್ಭಾಸನಗಳನ್ನು ಹಾಕಿ ಅವುಗಳಮೇಲೆ ಕುಳ್ಳಿರಿಸಿ,ಭಯಭಕ್ತಿಗಳಿಂದ ಅವರನ್ನು ಅರ್ಘ್ಯ, ಪಾದ್ಯಾಚಮನೀಯ ಮಧುಫಲಾದಿಗಳಿಂದ ಪೂಜಿಸಿದರು ||೧೧||

ಟಿಪ್ಪಣಿ:—(೧) ಮುನಿ-ಮೌನವ್ರತವುಳ್ಳವನು, (ಅವ) ಮುನಿಗಳಲ್ಲಿ ಮುಖ್ಯರು-ಮುನಿಮುಖ್ಯರು (ಸ.ತ) (೨) ವೃದ್ಧರಾದವರು ಮನೆಗೆಬಂದರೆ ಯಜಮಾನನ ಪ್ರಾಣಗಳು ಮೇಲಕ್ಕೆದ್ದು ಹೋಗುವುದ

ಕ್ಕೆ ಉತ್ಸಿಸುವವೆಂತಲೂ, ಆಗ ತನ್ನ ಪ್ರಾಣವನ್ನುಳಿಸಿಕೊಳ್ಳುವುದ ಕ್ಕಾಗಿ ಆ ವೃದ್ಧನಿಗೆ ಪ್ರತ್ಯುತ್ಥಾನ ನಮಸ್ಕಾರ ಮೊದಲಾದವುಗಳನ್ನು ಮಾಡಿ ಆ ಪ್ರಾಣಗಳನ್ನು ಪುನಃ ಹೊಂದಬೇಕೆಂತಲೂ, ಶಾಸ್ತ್ರವಿರು ವುದು, ಅದರಿಂದಲೇ ದೊಡ್ಡವರು ಮನೆಗೆ ಬಂದರೆ ಮನೆಯ ಯಜಮಾ ನನು ಕುಳಿತಿರದೆ ಎದ್ದು ನಿಲ್ಲುವ ಪದ್ಧತಿ ಈಗಲೂ ಇದೆ, (೩) (ದ್ವ) ಮಂ ಡವಿ, (೪) ಭಯದಿಂದ ಭರಿತ-ಭಯಭರಿತ (ತೃ.ತ) ಭಯಭರಿತವಾದ ಭಕ್ತಿ-ಭರಿತಭಕ್ತಿ (ವಿ.ಪೂರ್ವ.ಕ) ||೧೧||

ಮೂ|| ನೀವಘಾತದದೇವಋಷಿಗಳು | ಪಾವನರುಮೂಲೋಕಕತಿ
ಸಂ | ಭಾವನೀಯರುಸತ್ಯಸಂಧರುನಿರ್ಮಲಾತ್ಮಕರು || ಆವನರಿವ
ನುನಿಮ್ಮಮಹಿಮೆಯ | ಭಾವಿಸುವೊಡೆಮಗಳವೆನಿಮ್ಮಪ | ದಾವ
ಲಂಬನಸೇವೆದೊರಕಿತುಧನ್ಯರಾವೆಂದ ||೧೨||

ಟೀಕೆ:—ನೀವು-ನೀವು, ಅಘಾತದ-ಪುಣ್ಯಶಾಲಿಗಳಾದ, ದೇವಋ ಷಿಗಳು-ದೇವರ್ಷಿಗಳು, ಪಾವನರು-ಪರಿಶುದ್ಧರು, (೧) ಮೂಲೋಕಕೆ ಮೂರುಲೋಕಗಳಿಗೂ, ಅತಿಸಂಭಾವನೀಯರು-ಬಹಳಮರ್ಯಾದೆಯು ಳ್ಳವರು, ಸತ್ಯಸಂಧರು-ಸತ್ಯವ್ರತವುಳ್ಳವರು, (೨) ನಿರ್ಮಲಾತ್ಮಕರು- ಪರಿಶುದ್ಧವಾದಮನಸ್ಸುಳ್ಳವರು, ನಿಮ್ಮ-ನಿಮ್ಮ, ಮಹಿಮೆಯ-ಮಾ ಹಾತ್ಮ್ಯೆಯನ್ನು, ಆರು-ಯಾರು, ಬಲ್ಲರು-ತಿಳಿದಿರುವರು, ಭಾವಿಸುವೊ ಡೆ-ಆಲೋಚಿಸಿದರೆ, ಎಮಗೆ-ನಮಗೆ, ಅಳವೆ-ಸಾಧ್ಯವೆ, ನಿಮ್ಮ-ನಿಮ್ಮ ಪದ-ಪಾದವನ್ನು, ಅವಲಂಬನ-ಆಶ್ರಯಿಸುವ, ಸೇವೆ-ಉಪಚಾರಮಾ ಡುವಿಕೆಯು, ದೊರಕಿತು-ಸಿಕ್ಕಿತು, ಆವ್-ನಾವು, ಧನ್ಯರ್-ಕೃತಾರ್ಥ ರು, ಎಂದ-ಎಂಬದಾಗಿ ಹೇಳಿದನು. ||೧೨||

ತಾತ್ಪರ್ಯ:— ಧರ್ಮನಂದನನು-ರೋಮಹರ್ಷನಂಕುರಿತು ಸ್ವಾಮಿ ! ನೀವು ಮಹಾಪಾವನೀಯರು, ಸ್ವರ್ಗ ಮರ್ತ್ಯಪಾತಾಳಲೋಕಗಳಲ್ಲಿ ಯೂ, ಪೂಜ್ಯರು, ಪರಿಶುದ್ಧವಾದ ಅಂತರಾತ್ಮವುಳ್ಳವರು, ನಿಮ್ಮಮಹಿ ಮೆಯೆಲ್ಲವನ್ನೂ, ಹೊಗಳಲು ಅಲ್ಪನಾದ ನನಗೆ ಶಕ್ತಿಯುಂಟೇ ! ಆದ ರೆ ತಮ್ಮಪಾದಸೇವೆ ದೊರಕಿದುದರಿಂದ ಇಂದಿಗೆ ನಾವುಧನ್ಯರಾದೆವು, ನ ಮ್ಮ ಜನ್ಮವು ಸಫಲವಾಯಿತು, ನಾವು ಕೃತಾರ್ಥರಾದೆವು, ಎಂದು ಹೇಳಲು, ||೧೨||

ಟಿಪ್ಪಣಿ: (೧) ಮೂರುಲೋಕಗಳ ಸಮಾಹಾರ - ಮೂ

ಶೋಕ (ಸ.ದ್ವಿಗು,) (೨) ನಿರ್ಮಲ-ಯಾವುದು ಕೊಳೆಯಿಲ್ಲದುದೋ ಅದು (ಷ್ಠಾ. ಬ. ವ್ರೀ.) ನಿರ್ಮಲವಾದ ಆತ್ಮವುಳ್ಳವರು, ನಿರ್ಮಲಾತ್ಮಕರು (ಬ್ರ. ವ್ರೀ.) ||೧೨||

ಮೂ|| ಧರಣಿಪತಿಸುಕ್ಷೇಮವೇನಿಜ | ತರುಣಿನಿನ್ನನುಜಾತತನಯರು
ನರಸಚಿವಸಾಮಂತಧೌಮ್ಯಮುನೀಂದ್ರಮಂತ್ರಿಗಳು|| ಪರಿಣತರು
ಪೇಳೆನಲುನಿಂಮಯ | ಪರಮಕರುಣಾಮೃತವೆನಂಮನು | ಪೊರೆ
ವುತಿರೆಸುಕ್ಷೇಮಬೇರಿಲ್ಲೆಂದನಾನೃಪತಿ ||೧೩||

ಟೀಕೆ:— ಧರಣಿಪತಿ-ದೊರೆಯು, ನಿಜ-ನಿನ್ನ, ತರುಣಿ-ಹೆಂಡತಿಯು, ನಿನ್ನ-ನಿನ್ನ, ಅನುಜಾತ-ತಮ್ಮಂದಿರು, ತನಯರು-ಮಕ್ಕಳು, ವರ-ಶ್ರೇಷ್ಠರಾದ, ಸಚಿವ-ಸಚಿವರು, ಸಾಮಂತ-ಅಧಿರಾಜರು, ಧೌಮ್ಯಮುನೀಂದ್ರ-ಧೌಮ್ಯಋಷಿಶ್ರೇಷ್ಠನು, ಮಂತ್ರಿಗಳು-ಮಂತ್ರಿಗಳು ಪರಿಣತರು-ಪಂಡಿತರು, ಸುಕ್ಷೇಮವೇ-ಕ್ಷೇಮವಾಗಿದ್ದಾರೆಯೋ! ಪೇಳು-ಹೇಳು, ಎನಲು-ಎಂಬದಾಗಿಹೇಳಲು, ನಿಮ್ಮಯ-ನಿಮ್ಮ, ಪರಮ-ಶ್ರೇಷ್ಠವಾದ, ಕರುಣಾ-ಕೃಪೆಯೆಂಬ (೧) ಅಮೃತವೆ-ಅಮೃತವೆ, ನಮ್ಮನು-ನಮ್ಮನ್ನು (೨) ಪೊರೆವುತಿರೆ-ರಕ್ಷಿಸುತ್ತಿರಲು,(ಅದಕ್ಕಿಂತಲೂ) ಬೇರೊಂದು-ಹೆಚ್ಚಾದ, ಸುಕ್ಷೇಮ-ಪೂರ್ಣವಾದಕುಶಲವು, ಇಲ್ಲ-ಇಲ್ಲ ಎಂದು (೩) ಆನೃಪಂ-ದೊರೆಯು, ಎಂದನು-ಹೇಳಿದನು. ||೧೩||

ತಾತ್ಪರ್ಯ:—ರೋಮಶಮಹಾಮುನಿಯುಕೇಳಿ ಹರ್ಷಿತನಾಗಿ ಎಲೈ ರಾಜೇಂದ್ರನೇ ! ನಿನ್ನಹೆಂದತಿ ನಿನ್ನ ತಮ್ಮಂದಿರು ಮಂತ್ರಿಗಳು, ಸಾಮಂತರಾಜರು, ಪುರೋಹಿತರು, ಸಚಿವರು, ವಿದ್ವಾಂಸರು, ಪೌರರು, ಎಲ್ಲರೂ ಕ್ಷೇಮದಿಂದಿರುವರೇ ! ನಿನಗೆ ಅನಾಮಯವೇ ? ಎಂದುಕೇಳಿದನು, ದೊರೆಯು ತಮ್ಮಕಟಾಕ್ಷವೆಂಬ ಅಮೃತರಸಸೇಚನೆಯು ನಮ್ಮನ್ನು ರಕ್ಷಿಸುತ್ತಿರುವಲ್ಲಿ ಕುಶಲವಲ್ಲದೆ ಅದಕ್ಕೆ ಹಾನಿಯುಂಟೇ ? ತಮ್ಮ ಅನುಗ್ರಹದಿಂದ ದೇಶವೆಲ್ಲವೂ ಕ್ಷೇಮದಿಂದಿರುವುದು ಎಂದನು ||೧೩||

ಟಿಪ್ಪಣಿ:— (೧) (ದ್ವ) ಅಮರ್ದು, (೨) ವುತೆ, ಎಂಬಪ್ರತ್ಯಯವು ಹಳಗನ್ನಡದಲ್ಲಿ ಉತ್ತಾ, ಎಂಬುದಕ್ಕೆ ಬಂದಿರುವುದು, (೩) ಅವನು ನೃಪತಿ-ಆನೃಪತಿ (ಗಮಕ.) ||೧೩||

ಮೂ|| ಧಾರುಣಿಯುಸೋಲುತ್ತಲನುಜರು | ವಾರಿಜಾನನೆಸಹಿತಬಂ
ದೀ | ಘೋರಕಾನನದೊಳಗೆಗಿರಿಗಹ್ವರದಮಧ್ಯದಲ್ಲಿ || ಸೇರಿತಟ

ತಟರಾಗಿಬಳಲಿದ | ರಾರುಧರೆಯೊಳಗೆನ್ನವ್ರೋಲ್ಬವ| ದೂರಮುನಿ
ಕುಲತಿಲಕಹೇಳೆಂದರಸಬಿಸುಸುಯ್ದ|| ||೧೪||

ಟೀಕೆ:-(೧) ಭವ- ಸಂಸಾರಬಂಧಕ್ಕೆ, ದೂರ - ಸಿಕ್ಕದಿರುವ,ಮುನಿಕುಲತಿಲಕ, ಮುನಿ-ಋಷಿಗಳ, ಕುಲ-ಸಮೂಹಕ್ಕೆ,ತಿಲಕ-ಅಲಂಕಾರ ಪ್ರಾಯನಾದ ರೋಮಶನೇ ! ಧಾರಿಣಿಯು-ಭೂಮಿಯನ್ನೂ ಸೋಲುತ್ತಲಿ-ಸೋತುಬಿಟ್ಟು, ಅನುಜರು-ತಮ್ಮಂದಿರು, ವಾರಿಜಾನನೆ ಕಮಲಮುಖಿಯಾದ ದ್ರೌಪದಿಯು, ಸಹಿತ-ಇವರೊಡನೆ, ಬಂದು-ಹೊರಟು, ಈ ಘೋರಕಾನನದೊಳಗೆ-ಈ ಭಯಂಕರವಾದ ಕಾಡಿನಲ್ಲಿ, ಗಿರಿ-ಬೆಟ್ಟ, ಗಹ್ವರ-ಗವಿ ಇವುಗಳ, ಮಧ್ಯದಲ್ಲಿ-ಮಧ್ಯಭಾಗದಲ್ಲಿ, ಸೇರಿ-ನಿಂತು, ತಟತಟರಾಗಿ-ಆತಂಕವುಳ್ಳವರಾಗಿ, ಬಳಲಿದರ್-ಆಯಾಸಪಟ್ಟವರು, ಧರೆಯೊಳಗೆ-ಭೂಮಿಯಲ್ಲಿ, ಎನ್ನವ್ರೋಲ್-ನನ್ನಹಾಗೆ, ಆರು-ಯಾರಿರುವರು, ಹೇಳು-ಹೇಳು, ಎಂದು-ಎಂಬದಾಗಿ, ಅರಸ-ದೊರೆಯು, (೨) ಬಿಸುಸುಯ್ದು-ನಿಟ್ಟುಸಿರನ್ನು ಬಿಟ್ಟನು || ||೧೪||

ತಾತ್ಪರ್ಯ:— ಎಲೈ ಮಹಾತ್ಮನಾದ ಋಷಿಯೇ ರಾಜ್ಯವನ್ನು ಶತ್ರುಗಳ ಕೈವಶಮಾಡಿ ಇಂದ್ರಪದವಿಗೆ ಸಮಾನವಾದ ಸಾಮ್ರಾಜ್ಯವನ್ನು ಕಳೆದುಕೊಂಡು, ಊರಲ್ಲಿ ವಾಸಮಾಡುವುದಕ್ಕೂ ಯತ್ನವಿಲ್ಲದೆ, ಪತ್ನೀಪುತ್ರರನ್ನೂ, ಸಹೋದರರನ್ನೂ ಕರೆದುಕೊಂಡು ಬೆಟ್ಟಗುಟ್ಟಗಳಿಂದಲೂ, ಗವಿಗಳಿಂದಲೂ ಘೋರವಾದ ಅರಣ್ಯ ಮಧ್ಯದಲ್ಲಿ ಮೃಗಗಳಂತೆ ಬಂದು ಸೇರಿಕೊಂಡು ಕಳವಳಿಸುತ್ತಾ ದುಃಖಪಡುತ್ತಿರುವ ನನ್ನಂತಿರುವ ದುರದೃಷ್ಟ ಶಾಲಿಗಳು ಲೋಕದಲ್ಲಿ ಯಾರಾದರೂ ಉಂಟೇ! ಎಂದು ದೀರ್ಘನಿಶ್ವಾಸಗಳಂ ಬಿಟ್ಟನು||೧೪||

ಟಿಪ್ಪಣಿ:- ಭವದದೆಸೆಯಿಂದ ದೂರ-ಭವದೂರ- (ಪಂ. ತ)
(೨) ಬೆಚ್ಚನೆ ಎಂಬಗುಣವಾಚಕಕ್ಕೆ ಸಮಾಸದಲ್ಲಿ ಬಿಸು, ಎಂದಾದೇಶವಾಗಿದೆ ||೧೪||

ಮೂ|| ಎಲೆಮಹೀಪತಿನೀನಿನಿತುವುಂ | ಮಳಿಸಲೇಕರಸುಗಳುಪೂರ್ವ
ದ | ನಲಹರಿಶ್ಚಂದ್ರಾದಿರಾಘವನೃಪರುಹಳುಪದಲಿ || ಲಲನೆಯ
ನುತಾವಗಲಿಕಷ್ಟವ | ಬಳಸಿದಂತವರಂತೆನಿನಗುಪ | ಟಳಗಳುಂ
ಟೇಬರಿದೆಮನನೋಯದಿರುನೀನೆಂದ ||೧೫||

ಟಿಪ್ಪಣಿ:- ಎಲೈ ಮಹೀಪತಿ-ಎಲೈದೊರೆಯೇ !ನೀಂ-ನೀನು, ಇ

ನಿತು-ಇಷ್ಟು, ಉಮ್ಮಳಿಸಲು-ವ್ಯಥೆ ಪಡುವುದು, ಏಕೆ-ಏತಕ್ಕೆ ? ಪೂರ್ವದ-ಪೂರ್ವದಲ್ಲಿದ್ದ, ನಲ-ನಲನು (೧) ಹರಿಶ್ಚಂದ್ರ-ಹರಿಶ್ಚಂದ್ರನು, ಆದಿ! ಮೊದಲಾದವರೂ, ರಾಘವನೃಪರು-ರಘುವಂಶದ ರಾಜರು, ಹಳುವದಲಿ-ಕಾಡಿನಲ್ಲಿ, ಲಲನೆಯನು-ಹೆಂಡತಿಯರನ್ನು, ತಾವ್-ತಾವು, ಅಗಲಿ-ಬಿಟ್ಟು, ಕಷ್ಟವ-ದುಃಖವನ್ನು, ಬಳಸಿದಂತೆ-ಹೊಂದಿದಹಾಗೆ ಅವರಂತೆ-ಅವರಹಾಗೆ, ನಿನಗೆ-ನಿನಗೆ, ಉಪಟಳೆಗಳು-ತೊಂದರೆಗಳು, ಉಂಟೇ-ಇರುವುವೇ, ನೀನು-ನೀನು, ಬರಿದೆ-ವ್ಯರ್ಥವಾಗಿ (೨) ಮನ ನೋಯದೆ - ವ್ಯಥೆಪಡದೆ, ಇರು - ಇರು, ಎಂದ - ಎಂಬದಾಗಿ ಹೇಳಿದನು ||೧೫||

ತಾತ್ಪರ್ಯ:- ಅದಕ್ಕೆ ರೋಮಶನು ರಾಜನಂ ಕುರಿತು, ಅಯ್ಯಾ ಪೂರ್ವದಲ್ಲಿ ನಳ, ಹರಿಶ್ಚಂದ್ರ, ಶ್ರೀರಾಮ, ಮೊದಲಾದ ಚಕ್ರವರ್ತಿ ಗಳೆಲ್ಲರೂ ದೈವವಶದಿಂದ ತಮ್ಮ ಹೆಂಡತಿಯರನ್ನಗಲಿ ಕಾಡಿನಲ್ಲಿಅಲೆಯುತ್ತಾ ಅನೇಕ ಕಷ್ಟಗಳಿಗೆ ಗುರಿಯಾಗಿದ್ದ ಸಂಗತಿಯನ್ನು ನೀನು ಕೇಳಿಲ್ಲವೆ ? ಅವರಷ್ಟು ಕಷ್ಟವು ನಿನಗೆಲ್ಲಿರುವುದು ? ಏಕೆವ್ಯಥೆಪಡುವಿ ! ಪ್ರಾರಬ್ಧವನ್ನು ಅನುಭವಿಸಲೇ ಬೇಕಲ್ಲವೆ ! ನಿಮ್ಮಂತಹ ಧೈರ್ಯಶಾಲಿಗಳು ಹೆದರಬಹುದೇ ! ಎಂದನು ||೧೫||

ಟಿಪ್ಪಣಿ:- (೧) ಹರಿಶಬ್ದಕ್ಕೆ ಚಂದ್ರಶಬ್ದವು ಪರವಾಗಿ "ಸ್" ಎಂಬಾಗಮವು ಬಂದು ಅದಕ್ಕೂ ಸಕಾರಕ್ಕೂ ಶ್ಚುತ್ವ ಸಂಧಿಯಾಗಿದೆ.
(೨)ಮನದಿಂನೋಯದೆ-ಮನನೋಯದೆ (ಕ್ರಿ. ಸ) ||೧೫||

ಮೂ|| ಪರಮಋಷಿಗಳನೆರವಿಯೇಸಭೆ | ಹರಿಯಕಾರುಣ್ಯಾಂಬುಧಿ
ಯೆಸಿರಿ | ನರವೃಕೋದರಮಾದ್ರಿತನಯರುನಿನಗೆಬಾಹುಬಲ|| ತ
ರುಣಿಯೇಭೋಗೈಕಸಂಪ | ತ್ತುತ್ತರದವನರಾಜ್ಯನಿನಗಿಂತಿರ
ಲುಸರಿಯಾರರಸಚಿಂತಿಸಲೇಕೆನೀನೆಂದ ||೧೬||

ಟೀಕೆ:-ಪರಮ- ಶ್ರೇಷ್ಠರಾದ, ಋಷಿಗಳ-ಮುನಿಗಳ, ನೆರವಿಯು-ಸಮೂಹವೇ, ಸಭೆ-ಓಲಗವು, ಹರಿಯ-ಕೃಷ್ಣನ, (೧) ಕಾರುಣ್ಯಾಂಬುಧಿಯೆ-ಕೃಪೆಯೆಂಬ ಸಮುದ್ರವೇ, ಸಿರಿ-ಐಶ್ವರ್ಯವು, ನಿನಗೆ-ನಿನಗೆ, ನರ-ಅರ್ಜುನನು, ವೃಕೋದರ- ಭೀಮನು, ಮಾದ್ರಿತನಯರು-ಮಾದ್ರಿಯ ಪುತ್ರರು, ಬಾಹುಬಲ-ಭುಜಶಕ್ತಿಯು, ತರುಣಿಯೇ-ದ್ರೌಪದಿಯೇ, ಭೋಗ-ಅನುಭವಿಸು ವುದಕ್ಕೆ, ಏಕ-ಮುಖ್ಯವಾದ,

ಸಂಪತ್ತು-ಸಿರಿಯು, ಇಂತು-ಹೀಗೆ, ನಿನಗೆ, ಉರುತರದ-ಶ್ರೇಷ್ಠವಾದ, (೨) ವನರಾಜ್ಯ-ಅರಣ್ಯರಾಜ್ಯವು, ಇರಲು-ಇರುತ್ತಿರಲು, ಅರಸ-ದೊರೆಯೇ, ನೀನು, ಚಿಂತಿಸಲೇಕೆ-ಆಲೋಚಿಸುವುದೇತಕ್ಕೆ ! ಎಂದ-ಎಂಬದಾಗಿ ಹೇಳಿದರು ||೧೬||

ತಾತ್ಪರ್ಯ:- ಎಲೈ ಧರ್ಮರಾಜನೇ ನಿನ್ನ ಸಮೀಪದಲ್ಲಿ ಋಷಿಗಳ ಗುಂಪೇ ಸಭಾಜನರು, ಕೃಷ್ಣನ ಕೃಪೆಯೇ ನಿನಗೆ ಸಾಮ್ರಾಜ್ಯವು, ನಿನ್ನ ತಮ್ಮಂದಿರೋ ಚತುರಂಗ ಸೈನ್ಯವೂ, ಬಾಹುಬಲವೂ ಆಗಿದೆ ಸಕಲಸುಖಭೋಗಗಳೂ ದ್ರೌಪದಿಯಿಂದ ದೊರೆಯುತ್ತಿದೆ. ಹೀಗೆ ಅರಣ್ಯದಲ್ಲಿಯೂ ರಾಜ್ಯಾಧಿಪತ್ಯವೇ ನಿನಗುಂಟಾಗಿದೆ. ನೀನು ಏತಕ್ಕೆ ಚಿಂತಿಸುತ್ತಿರುವೆ? ಎಂದು ನುಡಿಯುತ್ತಿರಲು ||೧೬||

ಟಿಪ್ಪಣಿ:- (೧) ಕಾರುಣ್ಯವೆ ಅಂಬುಧಿ-ಕಾರುಣ್ಯಾಂಬುಧಿ(ಅವ. ಪೂರ್ವ. ಕ) ಅಂಬು-ನೀರಿಗೆ, ಧಿ-ಆಶ್ರಯವಾದುದು (ಅವ) (೨) ವನವೇ ! ರಾಜ್ಯ-ವನರಾಜ್ಯ (ಅವ. ಪೂರ್ವ. ಕ) ||೧೬||

ಮೂ|| ಆದಡೆಲೆಮುನಿನಾಥನಳನೃಪ | ಮೇದಿನಿಯನುಳಿದವನುತನ್ನ
ತ | ಳೋದರಿಯನೆಂತಗಲಿದನುತಾನಾರವೆಸೆಯಿಂದ || ಸಾಧಿಸಿದ
ನವನಿಯನುಧರೆಯಿಂ | ತಾದುದಾನಳನೃಪಗೆನೀನಿದ | ನಾದರಿಸಿ
ಪೇಳೆನಲುನಗುತಿಂತೆಂದನಾಮುನಿಪ ||೧೭||

ಟೀಕೆ:- ಎಲೆ-ಎಲೈ, ಮುನಿನಾಥ-ಋಷಿಶ್ರೇಷ್ಠನೆ, ಆದೊಡೆ ಹಾಗಾದರೆ, (೧) ನಳನೃಪ-ನಳರಾಜನು, ಅವನು ಮೇದಿನಿಯನು-ಭೂಮಿಯನ್ನು, ಉಳಿದು-ಬಿಟ್ಟು, ತನ್ನ-ತನ್ನ, (೨) ತಳೋದರಿಯನು-ಹೆಂಡತಿಯನ್ನು, ತಾಂ-ತಾನು,ಎಂತು-ಹೇಗೆ, ಆರವೆಸೆಯಿಂದ-ಯಾರಿಂದ, ಅವನಿಯನು- ಭೂಮಿಯನ್ನು, ಸಾಧಿಸಿದನು-ಸಂಪಾದಿಸಿದನು? ಆನಳನೃಪಗೆ-ಆನಳರಾಜನಿಗೆ, ಧರೆ-ರಾಜ್ಯವು ಎಂತು-ಹೇಗೆ, ಆದುದು-ಸಿಕ್ಕಿತುಇದಂ-ಈ ಸಮಾಚಾರವನ್ನು, ನೀಂ-ನೀನು, ಆದರಿಸಿ-ವಿಸ್ವಾಸದಿಂದಪೇಳು-ಹೇಳು, ಎನಲು-ಎಂದು ಹೇಳಲು, ಆಮುನಿಪ-ಋಷಿಶ್ರೇಷ್ಠನುಇಂತೆಂದಂ-ಹೀಗೆ ಹೇಳಿದನು ||೧೭||

ತಾತ್ಪರ್ಯ:-ಧರ್ಮರಾಜನು, ಎಲೈ ಮುನಿವರ್ಯನೇ ಪೂರ್ವದಲ್ಲಿ ಆ ನಳರಾಜನು, ರಾಜ್ಯವಂ ಕಳೆದುಕೊಳ್ಳಲು ಕಾರಣವೇನು ? ಹೆಂಡತಿಯನ್ನಗಲಿದುದುಹೇಗೆ? ಪುನಃ ಯಾರಿಂದ ಯಾವಾಗ ಹೇಗೆರಾಜ್ಯವನ್ನು ಸಂ

ಪಾದಿಸಿದನು ? ಈ ಕಥೆಯನ್ನು ವಿಸ್ತಾರವಾಗಿ ಕೇಳಬೇಕೆಂಬಕುತೂ ಹಲವಿರುವುದರಿಂದ ದಯವಿಟ್ಟು ತಿಳಿಸುವವನಾಗೆಂದು ಪ್ರಾರ್ಥಿಸಿದನು ॥

ಟಿಪ್ಪಣಿ:- (೧) ನಳನೆಂಬ ನೃಪ-ನಳನೃಪ (ಸಂ. ಪೂರ್ವ. ಕ) (೨) ಮೇದಿನಿ-ಮೇದಸ್ಸಿನಿಂದ ಆದುದು (ಅವ)ಪೂರ್ವದಲ್ಲಿ ಮಧುಕೈಟಭ ರೆಂಬ ರಾಕ್ಷಸರನ್ನು ಕೊಂದು ಅವರಮೇದಸ್ಸಿನಿಂದ ವಿಷ್ಣುವು ಈ ಭೂಮಿಯನ್ನು ಮಾಡಿದನೆಂದು ಪುರಾಣ ಪ್ರಸಿದ್ಧವಾಗಿದೆ, (೩) ತಳ ಅಂಗೈಯಂತೆ, ಉದರಿ ಹೊಟ್ಟೆಯುಳ್ಳವಳು, (ಅವ) ತಳದಂತೆ ಉದ ರವುಳ್ಳವಳು-ತಳೋದರಿ (ಬ. ವ್ರೀ. ಸ) ॥೧೭॥

ಮೂ॥ ಭೂತಳೇಂದ್ರರೊಳಧಿಕಬಲವಿ।ಖ್ಯಾತನಹನಳಚಕ್ರವರ್ತಿಧ।
ರಾತಳವಪಾಲಿಸಿದನಾತನವಿಮಲಚರಿತೆಯನು । ಸೂತಮುನಿಹೇಳಿ
ದನುಮೌನಿ।ವ್ರಾತದಲ್ಲಿಯಗಸ್ತ್ಯಮುನಿಸಂ ।ಪ್ರೀತಿಯಿಂದರುಹಿದ
ನುರಘುನಂದನನೊಳೀಕಥೆಯ ॥ ॥೧೮॥

ಟೀಕೆ:- ಭೂತಳ-ಭೂಮಿಗೆ, ಇಂದ್ರರೊಳು-ಒಡೆಯರಲ್ಲಿ, (೧) ಅಧಿಕಬಲ ವಿಖ್ಯಾತನಹ, ಅಧಿಕ-ಹೆಚ್ಚಾದ, ಬಲ-ಶಕ್ತಿಯಿಂದ, ವಿ ಖ್ಯಾತನಹ-ಪ್ರಸಿದ್ಧನಾದ, ನಳಚಕ್ರವರ್ತಿ-ನಳನೆಂಬ ಸಾರ್ವಭೌಮನು (೨) ಧರಾತಲವ-ಭೂಮಂಡಲವನ್ನು ಪಾಲಿಸಿದಂ-ಆಳಿದನು, ಆತನ-ಅ ವನ, ವಿಮಲಚರಿತೆಯನು-ಪರಿಶುದ್ಧವಾದ ಕಥೆಯನ್ನು, ಸೂತಮುನಿ- ಸೂತಋಷಿಯು, ಮೌನಿವ್ರಾತದಲ್ಲಿ-ಋಷಿಗಳ ಗುಂಪಿನಲ್ಲಿ, ಹೇಳಿದ ನು-ತಿಳಿಸಿದನು. ಈಕಥೆಯ-ಇದೇ ಚರಿತ್ರೆಯನ್ನು, (೩) ಅಗ ಸ್ತ್ಯ-ಅಗಸ್ತ್ಯನೆಂಬ, ಮುನಿ-ಋಷಿಯು, ಸಂಪ್ರೀತಿ ಯಿಂದ-ಪ್ರೇಮ ದಿಂದ, ರಘುನಂದನ ನೊಳ್ - ರಾಮನೊಡನೆ, ಅರುಹಿದನು - ಹೇ ಳಿದನು ॥ ೧೮ ॥

ತಾತ್ಪರ್ಯ:- (೧) ಪೂರ್ವದಲ್ಲಿ ರಾಜಾಧಿ ರಾಜನಾದ ನಳನೆಂಬ ಚ ಕ್ರವರ್ತಿಯು ಭೂಮಂಡಲವನ್ನು ಪರಿಪಾಲಿಸುತ್ತಿದ್ದನು. ಮಹಾ ಬ ಲಪರಾಕ್ರಮಶಾಲಿಯಾದ ಆ ರಾಜನ ಪುಣ್ಯ ಕಥೆಯನ್ನು ಸೂತ ಪೌರಾ ಣಿಕನು ಶೌನಕಾದಿ ಮಹರ್ಷಿಗಳಿಗೆ ಹೇಳಿದನು. ಅದೇಕಥೆಯನ್ನೇ ಆಗಸ್ತ್ಯ ಮಹಾ ಮುನಿಯು ಶ್ರೀ ರಾಮನಿಗೆ ತಿಳಿಸಿದನು ॥೧೮॥

ಟಿಪ್ಪಣಿ:- (೧) ಅಧಿಕವಾದ ಬಲ-ಅಧಿಕಬಲ (ವಿ. ಪೂರ್ವ. ಕ) ಬಲದಿಂದ ವಿಖ್ಯಾತ-ಬಲವಿಖ್ಯಾತ (ತೃ. ತ) (೨) ಧರೆಯತಲ-ಧರಾತ

ಬ (ಷ. ತ) (೩) ಅಗ-ಬೆಟ್ಟವನ್ನು, ಸ್ತ್ಯ-ಮಲಗಿಸಿರುವವನು.(ಅವ) ಆಕಾಶದವರೆಗೂ ಬೆಳೆದು ಸೂರ್ಯ ಚಂದ್ರರ ಗತಿಯನ್ನು ತಡೆದು ಲೋಕ ಕಂಟಕನಾಗಿದ್ದ ವಿಂಧ್ಯನನ್ನು ಅಡಗಿಸಿದನೆಂದು ಪೂರ್ವ ಕಥೆಯುಂಟು ॥೧೪॥

ಮೂ॥ ವಸುಧೆಪತಿಕೇಳೀಚರಿತ್ರೆಯ। ನಿಷಧವೆಂದೆಂಬಾಮಹಾಪುರ।
ವೆಸೆದುದಗಣಿತಗೋಪುರಪ್ರಾಕಾರಶಿಖರದಲಿ ॥ ಮಿಸುನಿರತ್ನಪ್ರಭೆ
ಗಳಲಿರಂ। ಜಿಸುವದೇವಾಲಯಗಳಿದ್ದವು । ವಸುಧೆಗಚ್ಚರಿಯೆನಿಸಿ
ತಾಪುರವರಸಕೇಳೆಂದ ॥ ॥೧೫॥

ಟೀಕೆ:- ವಸುಧೆಪತಿ-ಧರ್ಮರಾಜನೇ, ಈ ಚರಿತ್ರೆಯ-ಈ ನಳಚರಿತ್ರೆಯನ್ನು, ಕೇಳು-ಕೇಳು, ನಿಷಧವೆಂದೆಂಬ-ನಿಷಧವೆಂಬ ಹೆಸರುಳ್ಳ, (೧) ಆಪುರವು-ಒಂದುಪಟ್ಟಣವು, ಅಗಣಿತ ಗೋಪುರ ಪ್ರಾಕಾರ ಶಿಖರದಲಿ, ಅಗಣಿತ-ಲೆಕ್ಕವಿಲ್ಲದ, ಗೋಪುರ-ಗೋಪುರ ಗಳಿಂದಲೂ, ಪ್ರಾಕಾರ-ಪೌಳಿಗಳಿಂದಲೂ, ಶಿಖರದಲಿ-ಶಿಖರಗಳಿಂದಲೂ, ಎಸೆದುದು-ಪ್ರಕಾಶಿಸಿತು, ಮಿಸುನಿ-ಚಿನ್ನದ, (೨) ರತ್ನ-ನವರತ್ನಗಳ, (೩) ಪ್ರಭೆಗಳಲಿ-ಕಾಂತಿಯಿಂದ, ರಂಜಿಸುವ-ಹೊಳೆಯುತ್ತಿರುವ, ದೇವಾಲಯಗಳು-ದೇವಸ್ಥಾನಗಳು, ಇದ್ದವು-ಇದ್ದವು, ಅರಸ-ದೊರೆಯೇ, ಆಪುರವು-ಆಪಟ್ಟಣವು, ವಸುಧೆಗೆ-ಭೂಮಿಗೆ, ಅಚ್ಚರಿಯೆನಿಸಿತು-ಆಶ್ಚರ್ಯವೆನ್ನಿಸಿತು, ಕೇಳು-ಕೇಳು, ಎಂದ-ಎಂಬದಾಗಿ ಹೇಳಿದನು ॥೧೫॥

ತಾತ್ಪರ್ಯ:-(೧) ಆ ಕಥೆಯನ್ನು ನಾನು ನಿನಗೆ ವಿಸ್ತಾರವಾಗಿ ವಿವರಿಸುವೆನು ಕೇಳು. ಅಂಗ ವಂಗ ಮೊದಲಾದ ೫೬ ದೇಶಗಳಲ್ಲಿ ಪ್ರಸಿದ್ಧವಾದ ನಿಷಧವೆಂಬ ಹೆಸರುಳ್ಳ ಒಂದಾನೊಂದು ದೇಶವಿತ್ತು. ಆದೇಶದಲ್ಲಿ ನಳನೆಂಬ ಮಹಾರಾಜನು ಆಳುತ್ತಿದ್ದನು. ಆತನ ರಾಜಧಾನಿಯು ಅನೇಕ ಪುರದ್ವಾರಗಳಿಂದಲೂ,ನವರತ್ನ ಖಚಿತವಾಗಿ ಸುವರ್ಣದಿಂದ ನಿರ್ಮಿಸಿರುವ ಕೋಟೆಯ ಪ್ರಾಕಾರ ಗಳಿಂದಲೂ, ದೇವಾಲಯ ಗೋಪುರಗಳಿಂದಲೂ, ಹೊಳೆಯುತ್ತಾ, ಲೋಕಕ್ಕೆ ಆಶ್ಚರ್ಯವನ್ನುಂಟುಮಾಡುತಿತ್ತು ॥೧೫॥

ಟಿಪ್ಪಣಿ:- (೧) ಅದು ಪುರ-ಆಪುರ (ಗಮಕ. ಸ) ಪುರ- (ದ್ಭ) ಹುರ, (೨)(ದ್ಭ) ರತುನ, ರನ್ನ, (೩) (ದ್ಭ) ಹಬೆ, ॥೧೫॥

ಮೂ॥ಮುರಿಮುರಿದುಕೊತ್ತಳದಸಾಲಿನ। ಪರುಠವದಹುಲಿಮುಖದಬಾ

ಗಿಲ | ಮಿರುಪಮಣಿವಜ್ರದಕವಾಟದಗಂಧವಟ್ಟಿಗೆಯು ಉರುತರದ
ವೇದಿಕೆಯುಹೇಮದಿ | ಮೆರೆವಸೋಪಾನಗಳನೆಲೆಯು | ಪ್ಪರಿಗೆ
ಗಳನೋಲೆಸೆವಕಲಶದಕಾಂತಿರಂಜಿಸಿತು ||　　||೨೦||

ಟೀಕೆ:- ಮುರಿ ಮುರಿವ-ಸುತ್ತಿಕೊಂಡಿರುವ,ಕೊತ್ತಳ-ಕೊತ್ತಳ ಗಳ, ಸಾಲಿನ ಪಜ್ತಿಯು, ಪರುಠವದ-ವಿಜೃಂಭಣೆಯು,ಹುಲಿಮುಖದ-ಹು ಲಿಯ ಮುಖದಂತಿರುವ,ಬಾಗಿಲ-ಬಾಗಿಲುಗಳ, (೧) ಮಿರುಮಿರುಪ-ಹೊಳೆ ಯುತ್ತಿರುವ: ಮಣಿವಜ್ರದ-ರತ್ನ ಮತ್ತು ವಜ್ರಗಳಿಂದ ಮಾಡಿದ, ಕವಾ ಟದ-ಕದಗಳ, ಗಂಧವಟ್ಟಿಗೆಯು-ಗಂಧವಟ್ಟಿಗೆಗಳ, ಉರುತರದ-ದೊ ಡ್ಡದಾದ, ವೇದಿಕೆಯು-ಜಗುಲಿಗಳ, ಹೇಮದಿ-ಚಿನ್ನದಿಂದ, ಮೆರೆವ-ಪ್ರ ಕಾಶಿಸುತ್ತಿರುವ, ಸೋಪಾನಗಳ-ಮೆಟ್ಟಲುಗಳ, ನೆಲೆಯುಪ್ಪರಿಗೆಗಳ ಸಾಲು ಮಹಡಿಗಳ, ಮೇಲೆ-ಮೇಲ್ಭಾಗದಲ್ಲಿ, ಎಸೆವ-ಶೋಭಿಸುತ್ತಿರುವ, ಕಲಶದ - ಕಲಶಗಳ, ಕಾಂತಿ- ಪ್ರಭೆಯು, ರಂಜಿಸಿತು - ಹೊಳೆ ಯುತ್ತಿತ್ತು ||೨೦||

ತಾತ್ಪರ್ಯ:- ಮೂಲೆಗಳನ್ನು ಮುರಿದು ಸುತ್ತಿ ಕೊಂಡಿರುವಂತೆ ಮಾಡಿರುವ ಕೊತ್ತಳಗಳ ಸಾಲಿನಿಂದಲೂ, ಹುಲಿಯ ಮುಖದಂತೆ ಮಾ ಡಿರುವ ಬಾಗಿಲುಗಳಿಂದಲೂ, ನವರತ್ನಗಳನ್ನು ಕೆತ್ತಿರುವ, ವಜ್ರದಿಂದ ಮಾಡಿರುವ: ಕದಗಳಿಂದಲೂ ಗಂಧವಟ್ಟಿಗೆ ಗಳಿಂದಲೂ, ಚಿನ್ನದಿಂದ ಮೆಟ್ಟಲುಗಳನ್ನು ಕಟ್ಟಿ ನಿರ್ಮಿಸಿರುವ ದೊಡ್ಡದೊಡ್ಡ ಜಗುಲಿಗಳಿಂದ ಲೂ, ಸಾಲುಸಾಲಾಗಿ ಕಂಗೊಳಿಸುತ್ತಿರುವ ಉಪ್ಪರಿಗೆಗಳ ಮೇಲಣ ಭಂಗಾರದ ಕಲಶಗಳ ಪಜ್ತಿಯಿಂದಲೂ, ಆಪುರವು ಬೆಳಗುತ್ತಿತ್ತು ||೨೦||

ಟಿಪ್ಪಣಿ:-(೧) ಮಿರುಗು, ಧಾತುವಿಗೆ ಭವಿಷ್ಯದರ್ಥಕವಾದ,ಪ, ಎಂಬ ಕೃತ್ಪ್ರತ್ಯಯವು ಸೇರಿಧಾತುವಿನ ಕೊನೆಯ ಅಕ್ಷರಕ್ಕೆ ಲೋಪ ವೂ, ವಕಾರಕ್ಕೆ ಪಕಾರಾದೇಶವೂ ಬಂದಿದೆ ||೨೦||

ಮೂ|| ಮುಗಿಲತುಡುಕುವತೆನೆಯನಾಳ್ವೇ | ರಿಗಳಪಾತಾಳಗಳಘಾ
ತದ | ಲಗಳಬಳಸಿದಕೋಟೆಸುತ್ತಾವರಿಸಿದುನ್ನತದ || ಗಗನವೀ
ಧಿಯತಾರಕೆಯುವೋ | ಲ್ಸೊಗಯಿಸುನಕನ್ನಡಿಯಸಾಲ್ಬೊಂ |
ಬೆಗಳರತ್ನಪ್ರಭೆಗಳಲಿರಂಜಿಸಿದುದಾನಗರ ||೨೧||

ಟೀಕೆ:- ಮುಗಿಲ-ಮೇಘವನ್ನು, ತುಡುಕುವ- ಮುಟ್ಟುತ್ತಿರುವ ತೆನೆಯನು-ಕೋಟೆಯ ತೆನೆಯನ್ನು, ಆಳ್ವೇರಿಗಳ-ಆಳುವೇರಿಗಳನ್ನು

ಪಾತಾಳಗಳ-ಪಾತಾಳಲೋಕದವರಿಗೆ, ಘಾತದಲಿ – ಆಳವಾಗಿ, ಮಾಡಿರುವ ಅಗಳ-ಅಗಳ್ತೆಯನ್ನು, ಬಳಸಿದ-ಸುತ್ತಿಕೊಂಡಿರುವ, ಕೋಟೆಯ ಪ್ರಾಕಾರವನ್ನು, ಆವರಿಸಿದ-ಸುತ್ತಿಕೊಂಡಿರುವ (೧) ಉನ್ನತದ-ಎತ್ತರವಾಗಿರುವ, ಗಗನವಿಧೀಯ-ಆಕಾಶಮಾರ್ಗದ, (೧) ತಾರಕೆಯ ವೋಲ್-ನಕ್ಷತ್ರಗಳಂತೆ, ಸೊಗಯಿಸುವ-ಪ್ರಕಾಶಿಸುವ, ಕನ್ನಡಿಯ ಕನ್ನಡಿಗಳ, ಸಾಲ್-ಪಜ್ತಿಯು, ಬೊಂಬೆಗಳ-ಬೊಂಬೆಗಳ, ರತ್ನಪ್ರಭೆಗಳಲಿ-ರತ್ನ ಕಾಂತಿಯಿಂದ, ಆನಗರ-ಆಪುರವು, ರಂಜಿಸಿದುದು-ಹೊಳೆಯುತ್ತಿತ್ತು ॥೨೧॥

ತಾತ್ಪರ್ಯ:- ಮತ್ತು ಮೇಘ ಮಂಡಲವನ್ನು ಮುಟ್ಟುತ್ತಿರುವುದೋ ಎಂಬಂತಿರುವ ಕೋಟೆಯ ತೆನೆಯನ್ನೂ ಆಳುವೇರಿಗಳನ್ನೂ, ಪಾತಾಳದವರೆಗೆ ವ್ಯಾಪಿಸಿರುವ ಅಗಳ್ತೆಗಳನ್ನೂ ಬಳಸಿಕೊಂಡಿರುವ ಕೋಟೆಯ ಗೋಡೆಗಳಿಂದಲೂ, ಆಕಾಶಮಾರ್ಗದಲ್ಲಿ ನಕ್ಷತ್ರಗಳೆಂಬ ಭ್ರಾಂತಿಯನ್ನುಂಟುಮಾಡುವಂತೆ ಮೇಲ್ಭಾಗದಲ್ಲಿ ಕಟ್ಟಿರುವ ಕನ್ನಡಿಗಳ ಸಾಲಿನಲ್ಲಿ ಪ್ರತಿಫಲಿಸಿ ಹೊಳೆಯುತ್ತಿರುವ ರತ್ನದ ಬೊಂಬೆಗಳ ಪ್ರಕಾಶದಿಂದಲೂ ಮೆರೆಯುತ್ತಿತ್ತು ॥೨೧॥

ಟಿಪ್ಪಣಿ:- (೧) ಉತ್+ನತ-ಉನ್ನತ (ಸಂ ಅನು. ಸಂ) (೨) (ತ್ಸ) ತಾರಕಾ ಈ ಪದ್ಯದಲ್ಲಿ ಮೇಘವನ್ನು ಮುಟ್ಟುತ್ತಿರುವಕೋಟೆಯ ತೆನೆ ಎಂಬಲ್ಲಿ ಅಸಂಬಂಧೇ ಸಂಬಂಧಾತಿಶಯೋಕ್ತಿಯು. ಆಕಾಶಮಂಡಲದ ನಕ್ಷತ್ರಗಳೋ ಎಂಬಂತೆ ಮೇಲೆ ಕಟ್ಟಿದ ಕನ್ನಡಿಗಳು ಹೊಳೆಯುತ್ತಿತ್ತು. ಎಂಬಲ್ಲಿ ಉತ್ಪ್ರೇಕ್ಷಾ ಲಂಕಾರವು ॥ ೨೧॥

ಮೂ ॥ ರವಿಶಶಿಯವೀಧಿಗಳಹೇಮದ । ವಿವಿಧಮಣಿಭಿತ್ತಿಗಳಕಾಂತಿ
ಯು । ದಿವವನಣೆದುದುರತ್ನನಿಚಯದಭದ್ರಭವನಿಕೆಯ॥ ಯು
ವತಿಯರಸಂಗೀತವೀಣಾ । ರವದರಹಿಯಲಿಮನಕೆಸವಿದೋ । ರು
ವಮುಹಾರಚನೆಯಲಿಮೆರೆದುದುನಿಷಧವರನಗರ ॥೨೨॥

ಟೀಕೆ: — (೧) ರವಿಶಶಿಯ-ಸೂರ್ಯಕಾಂತ ಚಂದ್ರಕಾಂತಶಿಲೆಗಳಿಂದ ಕಟ್ಟಿದ, ವೀಧಿಗಳ-ಬೀದಿಗಳ, ಹೇಮದ-ಚಿನ್ನದ, ವಿವಿಧಮಣಿಭಿತ್ತಿಗಳ, ವಿವಿಧ-ನಾನಾವಿಧಗಳಾದ, ಮಣಿ-ರತ್ನಗಳಿಂದಕಟ್ಟಿರುವ, ಭಿತ್ತಿಗಳ-ಗೋಡೆಗಳ, ಕಾಂತಿಯು-ಪ್ರಕಾಶವು, ದಿವವಂ-ಆಕಾಶವನ್ನು, ಅಣೆದುದು-ವ್ಯಾಪಿಸಿತು, ರತ್ನನಿಚಯದ-ರತ್ನಸಮೂಹದಿಂದ ನಿರ್ಮಿ

ಣಮಾಡಿದ, ಭದ್ರಭವನಿಕೆಯ-ಮಂಗಳಕರವಾದಮಂದಿರಗಳ, ಯುವತಿಯರ-ಪ್ರೌಢಸ್ತ್ರೀಯರ, ಸಂಗೀತವೀಣಾರವದ-ಗಾನ ಮತ್ತು ವೀಣೆಯಶಬ್ದದ, ರಹಿಯಲಿ-ವ್ಯಾಪನೆಯಿಂದ (ಸೊಗಸಿನಿಂದ) ಮನಕೆ-ಮನಸ್ಸಿಗೆ, (೨) ಸವಿದೋರುವ - ಇಂಪನ್ನುಂಟುಮಾಡುತ್ತಿರುವ, ಮಹಾರಚನೆಯಲಿ-ಹೆಚ್ಚಾದಸರ್ವಾಟಿನಿಂದ, ನಿಷಧವರನಗರ-ನಿಷಧಪಟ್ಟಣವು, ಮೆರೆದುದು-ಪ್ರಕಾಶಿಸಿತು. ॥೨೧॥

ತಾತ್ಪರ್ಯ:—ಸೂರ್ಯವೀಧಿ ಚಂದ್ರವೀಧಿಗಳಕಾಂತಿಯೂ, ನವರತ್ನಗಳಿಂದಲೂ, ಸುವರ್ಣಗಳಿಂದಲೂ ನಿರ್ಮಿಸಿರುವ ಗೋಡೆಗಳಕಾಂತಿಯೂ, ಆಕಾಶಮಾರ್ಗವನ್ನೆಲ್ಲಾ ವ್ಯಾಪಿಸಿತು, ದಿವ್ಯಾಲಂಕಾರದಿಂದಶೋಭಿಸುತ್ತಿರುವ ಆ ನಿಷಧನಗರದ ದಿವ್ಯಭವನಗಳಲ್ಲಿ ಸುಂದರಿಯರು ಸಂಗೀತವನ್ನು ಹಾಡುತ್ತಲೂ, ವೀಣೆಯನ್ನು ಬಾರಿಸುತ್ತಲೂ ಇರುವುದರಿಂದ ಇಂಪಾದಶಬ್ದವುಎಲ್ಲರ ಮನಸ್ಸಿಗೂ ಆಹ್ಲಾದಕರವಾಗಿತ್ತು. ॥೨೧॥

ಟಿಪ್ಪಣಿ:— (೧) ಶಶಿ- (ದ್ಭ) ಸಸಿ, ವೀಧಿ (ದ್ಭ) ಬೀದಿ, ರಾಜರು ಬೇಸಗೆಯ ಕಾಲದಲ್ಲಿ ಸಂಚಾರಕ್ಕೆ ತಣ್ಣಗಿರುವಂತೆ ಚಂದ್ರಕಾಂತಶಿಲೆಯಿಂದಲೂ, ಚಳಿಗಾಲದಲ್ಲಿ ಶಾಕವಾಗಿರುವಂತೆ ಸೂರ್ಯಕಾಂತಶಿಲೆಯಿಂದಲೂ, ಬೀದಿಗಳನ್ನು ಕಟ್ಟುವ ಪದ್ಧತಿಪೂರ್ವದಲ್ಲಿತ್ತೆಂದು ತೋರುವುದು, (೨) ಸವಿಯಂತೋರು – ಸವಿದೋರು (ಕ್ರಿ. ಸ.) ದಕಾರಾದೇಶ, ಸಂ. ॥೨೧॥

ಮೂ ॥ ವಸುಧೆಯಮರರುಕ್ಷತ್ರಿಯರುರಂ । ಜಿಸುವವೈಶ್ಯಚತುರ್ಥ
ರುನ್ನತ । ಕುಶಲವಿದ್ಯಾಧರರುಕವಿಗಳುಮಲ್ಲಗಾಯಕರು ॥ ಅಸ
ಮರಥಿಕರಸಮರದಲಿಸಾ । ಹಸರುಕರಿರಥತುರಗಪಾಯ್ದಳ। ಮೆಸೆ
ದುದಗಣಿತಚಾತುರಂಗದಿನಿಷಧವರನಗರ ॥೨೨॥

ಟೀಕೆ:— ನಿಷಧವರನಗರ – ನಿಷಧನಪಟ್ಟಣವು, ವಸುಧೆಯ-ಭೂಮಿಯ (೧) ಅಮರರು ದೇವತೆಗಳು, (ಬ್ರಾಹ್ಮಣರು) ಕ್ಷತ್ರಿಯರು-ಕ್ಷತ್ರಿಯರು, ರಂಜಿಸುವ-ಪ್ರಕಾಶಿಸುವ, ವೈಶ್ಯ-ಚತುರ್ಥರುವೈಶ್ಯರು ಮತ್ತು ಶೂದ್ರರು, ಉನ್ನತ-ಹೆಚ್ಚಾದ, ಕುಶಲವಿದ್ಯಾಧರರ-ಕುಶಲವಿದ್ಯೆಯನ್ನುಕಲ್ತವರು, ಕವಿಗಳು-ಕವಿತ್ವಮಾಡತಕ್ಕವರು, ಮಲ್ಲಗಾಯಕರು-ಜಟ್ಟಿಗಳು ಸಂಗೀತಗಾರರು, (೨) ಅಸಮರಥಿಕರ, ಅಸಮ-ಅಸಮಾನರಾದ, ರಥಿಕರ-ರಥಿಕರ, ಸಮರದಲಿ-ಯುದ್ಧದಲ್ಲಿ, ಸಾಹ

ಸಮಾಡತಕ್ಕವರು, ಕರಿ-ಆನೆಯೂ, ರಥ-ರಥವೂ,ತುರಗ-ಕುದುರೆಯೂ (೩) ಪಾಯ್ದಳವು-ಪದಾತಿಯೂ, ಇವುಗಳಿಂದ,ಚಾತುರಂಗದಿ-ಚತುರಂಗ ಸೈನ್ಯದಿಂದ, ಎಸೆದುದು-ಪ್ರಕಾಶಿಸಿತು ||೨೩||

ತಾತ್ಪರ್ಯ:—ಆ ಪಟ್ಟಣದಲ್ಲಿ ಬ್ರಹ್ಮ, ಕ್ಷತ್ರಿಯ, ವೈಶ್ಯ, ಶೂದ್ರರೆಂಬ ನಾಲ್ಕುವರ್ಣದವರೂ ವಾಸಿಸುತ್ತಿದ್ದರು. ಅನೇಕ ಚಿತ್ರಕುಶಲ ವಿದ್ಯೆಗಳಲ್ಲಿ ಸಮರ್ಥರೂ, ಮಹಾಕವಿಗಳೂ, ಶೂರರಾದಜಟ್ಟಿಗಳೂ, ಸಂಗೀತಗಾರರೂ, ಮಹಾರಥಿಕರೊಡನೆ ಯುದ್ಧಮಾಡುವ ಸಾಮರ್ಥ್ಯವುಳ್ಳಯೋಧರೂ, ಹಸ್ತ್ಯಶ್ವರಥ ಪದಾತಿಗಳೆಂಬ ಚತುರಂಗಸೈನ್ಯವೂ, ಶೋಭಿಸುತ್ತಿತ್ತು. ||೨೩||

ಟಿಪ್ಪಣಿ:— (೧) ಮರ-ಮರಣವು, ಅ-ಇಲ್ಲದವರು, (ಅವ) (ನಞ್-ಬ. ವ್ರೀ) (೨) ಅಸಮ (ನಞ್-ತ.) ಅಸಮರಾದರಥಿಕರು-ಅಸಮರಥಿಕರು (ವಿ. ಪೂರ್ವ. ಕ) (೩) ಪಾದ-(ದ್ಭ) ಪಾಯ. ||೨೩||

ಮೂ || ಸಾಲಬಿಲ್ವಕಪಿತ್ಥಜಂಬೂ |ಮಾಲದಾಡಿಮವಕುಳವಟಹಿಂ|
ತಾಲಕ್ರಮುಕಕದಂಬಕುರವಕಕದಳಿಖರ್ಜೂರ || ಜಾಲಚಂದನ
ಮಾದಳಿತತ | ಕ್ಕೋಲಕೇತಕಿಕುಟಜಸರಳರ| ಸಾಲವನಗಳನಿಚ
ಯದಿಂದುದ್ಯಾನರಂಜಿಸಿತು ||೨೪||

ಟೀಕೆ:- ಸಾಲ-ಸರ್ಜಕ,ಬಿಲ್ವ-ಬಿಲ್ವ, ಕಪಿತ್ಥ-ಬೇಲ, ಜಂಬೂ ನೇರಿಳೆ, ಮಾಲ-ಬೇವು, (೧) ದಾಡಿಮ-ದಾಳಿಂಬೆ, ವಕುಳ-ಪಗಡೆ, ವಟ-ಆಲ, ಹಿಂತಾಲ-ಕರಿತಾಳೆ (೨) ಕ್ರಮುಕ-ಅಡಕೆ (೩) ಕದಂಬ ಕಡಹ, ಕುರವಕ-ಕೆಂಪುಗೋರಂಟಿ, ಕದಳಿ-ಬಾಳೆ, ಖರ್ಜೂರ-ಖರ್ಜೂರ, ಜಾಲ-ಜಾಲಿ, ಚಂದನ-ಶ್ರೀಗಂಧ, ಮಾದಳಿತ-ಮಾದಳ, ತಕ್ಕೋಲ-ತಕ್ಕೋಲ (೪) ಕೇತಕಿ- ಕೇದಗೆ (೫) ಕುಟಜ-ಕೊಡಸಿಗೆ, ಸರಳ-ದೇವದಾರು, ರಸಾಲ-ಮಾವಿನಗಿಡ, ವನಗಳ-ಇವುಗಳುಳ್ಳವನದ, ನಿಚಯದಿಂದೆ-ಗುಂಪಿನಿಂದ (೬) ಉದ್ಯಾನ-ಉಪವನವು, ರಂಜಿಸಿತು-ಪ್ರಕಾಶಿಸಿತು ||೨೪||

ತಾತ್ಪರ್ಯ:- ಆ ನಿಷಧಪಟ್ಟಣದ ಸುತ್ತಲೂ, ಅನೇಕ ವಿಧವಾಗಿ ಫಲಪುಷ್ಪಭರಿತಳಾದ ವೃಕ್ಷಗಳ ಪಙ್ಕ್ತಿಯಿಂದ ಶೋಭಿಸುತ್ತಿರುವ ಉದ್ಯಾನವನಗಳು ರಮಣೀಯವಾಗಿ ಕಂಗೊಳಿಸುತ್ತಿರುವವು ||೨೪||

ಟಿಪ್ಪಣಿ:- (೧) (ದ್ಭ) ದಾಳಿಂಬೆ (೨) (ದ್ಭ) ಕವುಂಗು

(೩) (ದ್ವ) ಕಡಹ, (೪) (ದ್ವ) ಕೇದಗೆ (೫) (ದ್ವ) ಕೊಡಸಿಗೆ (೬) (ದ್ವ) ಉಜ್ಜಣೆ ॥೨೫॥

ಮೂ ॥ ಭೂರಮಣಕೇಳಾಪುರಾಧಿಪ । ವೀರಸೇನನೃಪಾಲರಿಪುಸಂ ।
ಹಾರನಾತನತನಯುನಿಹನಳನೆಂಬುದಭಿಧಾನ ॥ ಭೂರಿವಿಕ್ರಮಪ
ರಮಧರ್ಮವಿ । ಚಾರಶಶಿಕುಲಮೌಳಿಘನಗಂ। ಭೀರಪಾಲಿಸುತಿ
ರ್ದಸಪ್ತದ್ವೀಪದವನಿಪರ ॥೨೫॥

ಟೀಕೆ:- ಭೂರಮಣ-ದೊರೆಯೇ, ಕೇಳ್-ಕೇಳು, ಆಪುರಾಧಿಪ ಆಪಟ್ಟಣಕ್ಕೆ ದೊರೆಯು, ರಿಪು-ಶತ್ರುಗಳನ್ನು, ಸಂಹಾರಂ-ಕೊಂದ, ವೀರಸೇನನೃಪಾಲ-ವೀರಸೇನರಾಜನು, ಆತನ-ಅವನ, ತನಯುಂ-ಮಗನು, ಇಹ-ಇರುವನು, ಅಭಿಧಾನ-ಅವನ ಹೆಸರು, ನಳನೆಂಬುದು-ನಳನೆನ್ನುವದು, ಭೂರಿವಿಕ್ರಮ-ಮಹಾ ಪರಾಕ್ರಮ ಶಾಲಿಯಾದ, ಪರಮ-ಉತ್ಕೃಷ್ಟವಾದ, ಧರ್ಮ (೧)—ಧರ್ಮಗಳನ್ನು, ವಿಚಾರ-ವಿಮರ್ಶೆ ಮಾಡಿರುವ, (೨) ಶಶಿ-ಚಂದ್ರನ (೩) ಕುಲ-ವಂಶಕ್ಕೆ, ಮೌಳಿ- ಕಿರೀಟಪ್ರಾಯನಾದ, ಘನ-ಹೆಚ್ಚಾದ, ಗಂಭೀರ-ಗಾಂಭೀರ್ಯವುಳ್ಳ (ಆನಳನು) (೪) ಸಪ್ತದ್ವೀಪದ-ಏಳುದ್ವೀಪಗಳ, ಅವನಿಪರ-ರಾಜರನ್ನು, ಪಾಲಿಸುತಿರ್ದನು-ರಕ್ಷಿಸುತ್ತಿದ್ದನು ॥೨೫॥

ತಾತ್ಪರ್ಯ:- ಎಲೈ ಧರ್ಮನಂದನನೇ ಕೇಳು ! ಆ ಪಟ್ಟಣವನ್ನು, ಶತ್ರು ಸಂಹಾರಕನಾಗಿಯೂ, ಮಹಾ ಪರಾಕ್ರಮ ಶಾಲಿಯಾಗಿಯೂ, ಇರುವ, ವೀರಸೇನನೆಂಬ ದೊರೆಯು ಪರಿಪಾಲಿಸುತ್ತಿದ್ದನು. ಅವನಿಗೆ ನಳನೆಂಬ ಮಗನೊರ್ವನಿದ್ದನು. ಈತನು ಮಹಾ ಪರಾಕ್ರಮಶಾಲಿಯಾಗಿಯೂ, ಧರ್ಮ ವಿಚಾರ ಪರನಾಗಿಯೂ, ಚಂದ್ರವಂಶಕ್ಕೆ ಅಲಂಕಾರ ಪ್ರಾಯನಾಗಿಯೂ. ಶೌರ್ಯೌದಾರ್ಯ, ಸತ್ಯಶೌಚಾದಿ ಗುಣಸಂಪನ್ನನಾಗಿಯೂ, ಇರುತ್ತಾ ಸಪ್ತ ದ್ವೀಪದಿಂದ ಪರಿವೃತವಾದೀ ಭೂಮಂಡಲದಲ್ಲಿರುವ ರಾಜರಿಗೆಲ್ಲಾ ಅಧಿಪತಿಯಾಗಿ ಚಕ್ರವರ್ತಿ ಯಾದನು ॥೨೫॥

ಟಿಪ್ಪಣಿ:- ಯಮ, ಧರ್ಮರಾಜ, ಆಚಾರ, ಧನುಸ್ಸು (ನಾನಾ) (೪) ಸಪ್ತದ್ವೀಪಗಳ ಸಮಾಹಾರ-ಸಪ್ತದ್ವೀಪ (ಸಮಾ. ದ್ವಿಗು) ಜಂಬೂ, ಪ್ಲಕ್ಷ, ಕುಶ, ಕ್ರೌಂಚ, ಶಾಕ, ಶಾಲ್ಮಲ, ಪುಷ್ಕಲ, ಇವು (೭) ಸಪ್ತದ್ವೀಪಗಳು ॥೨೫॥

ಮೂ ॥ ಶರಧಿವೇರೆದಿಗಂತದವನೀ । ಶ್ವರರುಕಪ್ಪವತೆರುವರಗಣಿತ।

ಘುರವಿಜಯದುರ್ಧರರುಮಣಿಮಯುಮಕುಟವರ್ಧನರು ॥ ಚರಣ
ಕಾನತರಾಗಿನಳಭೂ । ವರನಭಜಿಸುತಲಿರ್ದರಮರೇ। ಶ್ವರನವೋ
ಲಗದಂತೆಮೆರೆದುದುನೃಪತಿಯಾಸ್ಥಾನ ॥೨೬॥

ಟೀಕೆ:— (೧) ಶರಧಿಮೇರೆ - ಭೂಮಿಯು, (೨) ದಿಗಂತದ-ದಿಕ್ಕುಗಳ ಕೊನೆಗಳವರಿಗೂ ಇರುವ, ಅವನೀಶ್ವರರು - ದೊರೆಗಳು, ಕಪ್ಪವ-ಕಾಣಿಕೆಯುನ್ನು, ತೆರುವರು-ಕೊಡುತ್ತಿರುವರು, ಅಗಣಿತಘುರವಿಜಯದುರ್ಧರರು, ಅಗಣಿತ-ಅನೇಕವಾದ, ಘುರ - ಯುದ್ಧದಲ್ಲಿ, ವಿಜಯ-ಜಯುವನ್ನುಹೊಂದಿ, ದುರ್ಧರರು-ಅಸಾಧ್ಯರಾಗಿ,ಮಣಿಮಯು-ರತ್ನಖಚಿತವಾದ, ಮಕುಟ-ಕಿರೀಟದಿಂದ, ವರ್ಧನರು - ಮೆರೆಯುತ್ತಿರುವ, (ದೊರೆಗಳು) ಚರಣಕೆ-ಪಾದಕ್ಕೆ, ಆನತರಾಗಿ-ನಮಸ್ಕರಿಸಿ, ನಳಭೂವರನ-ನಳರಾಜನನ್ನು, ಭಜಿಸುತಲಿರ್ದರು-ಸೇವಿಸುತ್ತಿದ್ದರು, ನೃಪತಿಯು - ದೊರೆಯು, ಆಸ್ಥಾನ - ಸಭೆಯು, ಅಮರೇಶ್ವರನ - ಇಂದ್ರನು ಓಲಗದಂತೆ-ಸಭೆಯುಹಾಗೆ, ಮೆರೆದುದು-ಪ್ರಕಾಶಿಸಿತು ॥೨೬॥

ತಾತ್ಪರ್ಯ:— ಭೂಮಂಡಲದ ನಾನಾದಿಕ್ಕುಗಳಲ್ಲಿಯೂ, ಮಹಾಪರಾಕ್ರಮಶಾಲಿಗಳಾಗಿಯೂ, ಅಜಯ್ಯರಾಗಿಯೂ, ಇರುವ ಅಸಂಖ್ಯಾತರಾದ ರಾಜರು ನಳರಾಜನಿಗೆ ಪಾದಾಕ್ರಾಂತರಾಗಿ ಕಪ್ಪಕಾಣಿಕೆಗಳನ್ನೊಪ್ಪಿಸಿ ತಮ್ಮರತ್ನಕಿರೀಟಗಳಿಂದ ಅವನ ಪಾದವನ್ನಲಂಕರಿಸುತ್ತಿರಲು, ದೇವೇಂದ್ರನ ಸಭೆಯುಂತೆ ನಳನ ಓಲಗಶಾಲೆಯು ರಂಜಿಸ, ತ್ತಿತ್ತು. ॥೨೬॥

ಟಿಪ್ಪಣಿ:— (೧) ಶರ-ನೀರು, ಧಿ-ನಿಲ್ಲುವಸ್ಥಳ, (ಸಮುದ್ರ,) ಶರ-ಬಾಣವು, ಧಿ-ನಿಲ್ಲುವಸ್ಥಳ, (ಬತ್ತಳಿಕೆ) (ಅವ) ಶರ-ಬಾಣ, ನೀರು, ದರ್ಭೆ, ಋತುಭೇದ, (ನಾನಾ) ಶರಧಿಯೇಮೇರೆಯಾಗಿ ಉಳ್ಳದ್ದು ಶರಧಿಮೇರೆ (ಬ. ವ್ರೀ. ಸ) (೨) ದಿಕ್ + ಅಂತ (ಜಶ್ವ) ॥೨೬॥

ಮೂ ॥ ಭೂಮಿಪತಿಕೇಳಿತ್ತಲುತ್ತರ । ಭೂಮಿಯಲಿಪ್ರಜ್ವಲಿಸುತಿಹ
ಸು । ತ್ರಾಮಪುರದಂತೆಸೆದುದಲ್ಲಿವಿದರ್ಭನಗರವದು॥ ರಾಮಣೀಯ
ಕರಚನೆಯಲಿನವ । ಹೇಮರಜತಸುರತ್ನಸೌಧ । ಸ್ತೋಮಗಳ
ಸಾಲಿನಲಿರಂಜಿಸುತಿರ್ದುದಾನಗರ ॥೨೭॥

ಟೀಕೆ:—ಭೂಮಿಪತಿ-ಧರ್ಮರಾಜನೇ, ಕೇಳ್-ಕೇಳು, ಉತ್ತರಭೂಮಿಯಲ್ಲಿ-ಉತ್ತರದೇಶದಲ್ಲಿ, ಅಲ್ಲಿ-ಅಲ್ಲಿ, ಸುತ್ರಾಮ-ಇಂದ್ರನ, ಪು

ಭೂಮಿಯಲಿ – ಉತ್ತರದೇಶದಲ್ಲಿ: ಅಲ್ಲಿ: ಸುತ್ರಾಮನ-ಇಂದ್ರನ, ಪುರದಂತೆ-ಪಟ್ಟಣದಹಾಗೆ, ಪ್ರಜ್ವಲಿಸುತಿರ್ಪ-ಹೊಳೆಯುತ್ತಿರುವ, ವಿದರ್ಭನಗರವು-ವಿದರ್ಭಪುರವು, ಅದು-ಅದು, ಎಸೆದುದು-ಮೆರೆಯುತ್ತಿತ್ತು, ಆನಗರ-ಆಪಟ್ಟಣವು, ರಾಮಣೀಯಕ- ಮನೋಹರವಾದ, ರಚನೆಯಲಿ-ನಿರ್ಮಾಣದಿಂದಲೂ, (೧) ನವ-ಹೊಸದಾದ, ಹೇಮ-ಚಿನ್ನ, ರಜತ-ಬೆಳ್ಳಿ, ಸು-ಒಳ್ಳೆಯದಾದ, ರತ್ನ-ನವರತ್ನಗಳ, (೨) ಸೌಧ-ಉಪ್ಪರಿಗೆಗಳ, ಸ್ತೋಮಗಳ – ಸಮೂಹದ, ಸಾಲಿನಲಿ, ರಂಜಿಸುತಿರ್ದುದು – ಪ್ರಕಾಶಿಸಿತು. ॥೨೭॥

ತಾತ್ಪರ್ಯ:—ಉತ್ತರದೇಶದಲ್ಲಿ ಅಮರಾವತಿಯನ್ನು ತನ್ನ ವೈಭವದಿಂದ ತಿರಸ್ಕರಿಸುತ್ತಲಿದ್ದ, ವಿದರ್ಭಪುರವೆಂಬುದೊಂದು ಪಟ್ಟಣವು ಶೋಭಿಸುತ್ತಿತ್ತು, ಅಲ್ಲಿ ನವರತ್ನಗಳಿಂದಲೂ ಚಿನ್ನ, ಬೆಳ್ಳಿಗಳಿಂದಲೂ ಅತ್ಯಂತ ವಿಚಿತ್ರವಾಗಿ ನಿರ್ಮಿಸಿರುವ ಉಪ್ಪರಿಗೆಗಳ ಸಾಲುಗಳು ಸರ್ವದಾ ಚಂದ್ರಸೂರ್ಯರಂತೆ ಹೊಳೆಯುತ್ತಿದ್ದುವು ॥೨೭॥

ಟಿಪ್ಪಣಿ:— (೧)ನವ-ಹೊಸದು, ಒಂಭತ್ತು, (೨) ಸುಧಾ-ಸುಣ್ಣ, ಸುಣ್ಣದಿಂದ ಬೆಳ್ಳಗೆಕಾಣಿಸುತ್ತಿರುವುದು, ಸೌಧ-ಸೌಧಗಳಸ್ತೋಮ, ಸೌಧಸ್ತೋಮ, (ಷ. ತ) ॥೨೭॥

ಮೂ ॥ ಅಲ್ಲಿಗಧಿಪತಿಭೀಮನೃಪಗುಣ । ದಲ್ಲಿನಯದಲಿವೀರವಿತರಣ
ದಲ್ಲಿಚಾತುರ್ಯದಲಿಸೌಭಾಗ್ಯಧೈರ್ಯದಲಿ ॥ ಬಲ್ಲಿದನುತನಗಿನ್ನುನಿಜ
ಸುತ । ರಿಲ್ಲವೆಂದುಮ್ಮಳಿಸುತಿರೆಮನ । ದಲ್ಲಿಗಾಕ್ಷಣಬಂದನಾದ
ಮನಾಖ್ಯಮುನಿವರನು ॥೨೮॥

ಟೀಕೆ:—ಅಲ್ಲಿಗೆ-ಆಪಟ್ಟಣಕ್ಕೆ,ಅಧಿಪತಿ-ದೊರೆಯು,ಭೀಮನೃಪ, ಭೀಮರಾಜನು, (೧) ಗುಣದಲ್ಲಿ – ಗುಣಗಳಲ್ಲಿಯೂ, ನಯದಲಿ – ನ್ಯಾಯದಲ್ಲಿಯೂ, ವೀರ-ಶೂರನು, ವಿತರಣದಲ್ಲಿ-ಔದಾರ್ಯದಲ್ಲಿಯೂ, (೨) ಚಾತುರ್ಯದಲಿ-ಚಮತ್ಕಾರದಲ್ಲಿಯೂ, (೩) ಸೌಭಾಗ್ಯಧೈರ್ಯದಲಿ-ಐಶ್ವರ್ಯ, ಮತ್ತು ಧೈರ್ಯದಲ್ಲಿಯೂ, ಬಲ್ಲಿದನು-ಹೆಚ್ಚಾದವನು,ಇನ್ನು-ಮತ್ತು, ತನಗೆ-ತನಗೆ, ನಿಜಸುತರು-ಔರಸಪುತ್ರರು, ಇಲ್ಲವೆಂದು-ಹುಟ್ಟಲಿಲ್ಲವೆಂದು, (೪) ಮನದೆ-ಮನಸ್ಸಿನಲ್ಲಿ, ಉಮ್ಮಳಿಸುತಿರೆ-ವ್ಯಥೆಪಡುತ್ತಿರಲು,ಅಲ್ಲಿಗೆ-ಆಪುರಕ್ಕೆ,(೫) ಆಕ್ಷಣ-ಆಕಾಲದಲ್ಲಿ, ದಮನಾಖ್ಯ-ದಮನನೆಂಬಹೆಸರುಳ್ಳ, ಮುನಿವರನು-ಋಷಿಶ್ರೇಷ್ಠನು,ಬಂದಂ-ಬಂದನು. ॥೨೮॥

ತಾತ್ಪರ್ಯ:- ಆ ಪಟ್ಟಣವನ್ನು ಭೀಮನೃಪಾಲನು,ಆಳುತ್ತಿದ್ದನು.ಅವನು ಸದ್ಗುಣ ಸಂಪನ್ನ,ಧೈರ್ಯ, ಚಾತುರ್ಯ, ಶೌರ್ಯೌದಾರ್ಯ,ಗಾಂಭೀರ್ಯ,ಐಶ್ವರ್ಯಾದಿಗಳಲ್ಲಿ ಅದ್ವಿತೀಯನಾಗಿ ಬಹುಕಾಲ ಪ್ರಸಿದ್ಧನಾಗಿ ಸಕಲ ಸಾಮ್ರಾಜ್ಯದೊಡನೆ ಸುಖವನ್ನನುಭವಿಸುತ್ತಿದ್ದನು, ಆದರೆ ತನಗೆ ಮಕ್ಕಳಿಲ್ಲವೆಂಬ ಕೊರತೆಯು ಅವನನ್ನು ಬಹಳವಾಗಿ ಬಾಧಿಸುತ್ತಿತ್ತು, ಒಂದಾನೊಂದುದಿನ ಮನೋವ್ಯಥೆಯನ್ನು ಹೊಂದಿ ಹಂಬಲಿಸುತ್ತಿರಲು, ಆಕಾಲಕ್ಕೆ ಸರಿಯಾಗಿ ಅಲ್ಲಿಗೆ ದಮನನೆಂಬಋಷೀಶ್ವರನು ಮಾರ್ಗವಶಾತ್ ಬಂದನು. ||೨೮||

ಟಿಪ್ಪಣಿ:— (೧) ಷಡ್ಗುಣ, ತ್ರಿಗುಣ, ಸ್ವಭಾವ, ದಾರ, ಮೌರ್ವಿ,(ನಾನಾ) ಮೌರ್ವಿಎಂಬರ್ಥಗಳಲ್ಲಿ (ಸ್ಥ) ಗೊಣೆ, (೨) (ದ್ಭ) ಚೆದುರು (೩) (ದ್ಭ) ಸೊಬಗು, (೪) ಸಪ್ತಮೀವಿಭಕ್ತಿಗೆ ,ಎ, ಎಂಬಾದೇಶ ಬಂದಿದೆ. (೫) ಆದುಕ್ಷಣ-ಆಕ್ಷಣ (ಗಮಕ) ಕ್ಷಣಕ್ಕೆ (ದ್ಭ) ಚಣ, ||೨೮||

ಮೂ || ಬಂದಮುನಿಗವನೀಶವಂದಿಸಿ | ನಿಂದುಕರಗಳಮುಗಿದುವಿನ
ಯದೊ | ಳೆಂದುಸುತಸಂತಾನ ವಿಲ್ಲದಸಿರಿಯದೇಕೆನುತ || ನೊಂ
ದುನುಡಿಯಲು ಸುತರಪಡೆಯದ | ತಂದೆಗಿದುಸಂತಾಪವಲ್ಲವೆ |
ಯೆಂದುಮುನಿಕರುಣದಲಿಸಂತೈಸಿದನುಭೂಪತಿಯ ||೨೯||

ಟೀಕೆ:—ಬಂದ-ಬಂದಿರುವ, ಮುನಿಗೆ-ಋಷಿಗೆ,-ಅವನೀಶ-ದೊರೆಯು, ವಂದಿಸಿ-ನಮಸ್ಕರಿಸಿ, ನಿಂದು-ನಿಂತುಕೊಂಡು, ಕರಗಳ-ಕೈಗಳನ್ನು, ಮುಗಿದು- ಜೋಡಿಸಿಕೊಂಡು, ಅಂದು - ಆಗ, ವಿನಯದೊಳು-ನಮ್ರತೆಯಿಂದ, ಸಂತಾನವಿಲ್ಲದ-ಸಂತತಿಯಿಲ್ಲದ, ಸಿರಿ - ಐಶ್ವರ್ಯವು, ಅದೇಕೆ-ಏತಕ್ಕೆ ? ಎನುತ-ಎಂಬದಾಗಿ, ನೊಂದು-ಸಂಕಟಪಟ್ಟುಕೊಂಡು, ನುಡಿಯಲು-ಹೇಳಲು, ಮುನಿ-ಋಷಿಯು, ಸುತರ- ಮಕ್ಕಳನ್ನು, ಪಡೆಯದ-ಹೊಂದದ (೧) ತಂದೆಗೆ-ತಂದೆಗೆ, ಇದು - ಈರೀಯು, ಸಂತಾಪವಲ್ಲವೆ-ದುಃಖಕ್ಕೆಕಾರಣವಾದದ್ದಲ್ಲವೆ ! ಎಂದು-ಎಂಬದಾಗಿ, ಕರುಣದಲಿ-ದಯೆಯಿಂದ, (೨) ಭೂಪತಿಯ-ರಾಜನನ್ನು, ಸಂತೈಸಿದನು- ಸಮಾಧಾನಪಡಿಸಿದನು ||೨೯||

ತಾತ್ಪರ್ಯ:— ಮಹಾತ್ಮನ ಆಗಮನವನ್ನರಿದು ರಾಜನು ಪದ್ಧತಿಯ ಪ್ರಕಾರವಾಗಿ ಅರ್ಘ್ಯಪಾದ್ಯಾಚಮನ ಮಧುಪರ್ಕಾದಿಗಳಿಂದ ಪೂ

ಜಿಸಿ, ನಮಸ್ಕರಿಸಿ ವಿನಯದಿಂದ ತಲೆವಾಗಿ ಕೈಮುಗಿದು ನಿಂತು, ಸಂತಾನವಿಲ್ಲದವನ ಐಶ್ವರ್ಯದಿಂದ ಪ್ರಯೋಜನವೇನು ? ಎಂದು ದುಃಖಿಸುತ್ತಿರಲು, ಪರಮ ಕೃಪಾಶಾಲಿಯಾದ ಮುನಿಯು, ಅಯ್ಯಾ ಮಕ್ಕಳಿಲ್ಲದ ತಂದೆಗೆ ದುಃಖವೇಸರಿ, ಆದರೂ ನೀನು ವ್ಯಥೆಪಡಬೇಡ, ನೋಡೋಣ, ಎಂದು ಸಮಾಧಾನ ಮಾಡಿದನು. ॥೨೯॥

ಟಿಪ್ಪಣಿ:— (೧) (ತ್ಸ) ತಾತ, (೨) ಭೂಮಿಯಪತಿ-ಭೂಪತಿ, (ಷ-ತ) ಭೂಮಿಯಗಂಡನು (ಅವ) ॥೨೯॥

ಮೂ॥ ಯೋಗದೃಷ್ಟಿಯೊಳರಿದುಮುನಿವರ । ನಾಗನೃಪನೊಡನೆಂದ
ಚಿತ್ರದ । ಯಾಗವನುಮಾಡರಸತಪ್ಪದುಪುತ್ರಲಾಭವೆನೆ ॥ ಆಗರು
ವಮುನಿಮಂತ್ರದಿಂದೆಸ । ರಾಗದಲಿಶುಭದಿವಸವರಸುತ । ಯಾ
ಗವನುಪೂರೈಸಿದನುಸುರನರರುತಣಿವಂತೆ ॥೩೦॥

ಟೀಕೆ:- (೧) ಮುನಿವರಂ-ಋಷಿಶ್ರೇಷ್ಠನು, ಯೋಗದೃಷ್ಟಿಯೊಳು-ಜ್ಞಾನದೃಷ್ಟಿಯಿಂದ, ಅರಿದು-ತಿಳಿದು, ಆಗ-ಆಕಾಲದಲ್ಲಿ, ನೃಪನೊಡನೆ-ದೊರೆಯಸಂಗಡ, ಎಂದನು-ಹೇಳಿದನು, ಏನಂದರೆ - ಅರಸ-ದೊರೆಯೇ, ಚಿತ್ರದ-ಮನೋಹರವಾದ, ಯಾಗವನು-ಯಜ್ಞವೊಂದನ್ನು, ಮಾಡು, ಪುತ್ರಲಾಭವು-ಪುತ್ರಪ್ರಾಪ್ತಿಯು, ತಪ್ಪದು-ತಪ್ಪುವುದಿಲ್ಲ, ಎನೆ-ಎಂದುಹೇಳಲು, ಆಗರುವಮುನಿ-ಆಋಷಿಶ್ರೇಷ್ಠನ, ಮಂತ್ರದಿಂದೆ-ಆಲೋಚನೆಯಂತೆ, (೨) ಶುಭದಿವಸವ-ಒಳ್ಳೆಯದಿನವನ್ನು, ಅರಸುತೆ-ಹುಡುಕಿ, ಸುರನರರು-ದೇವತೆಗಳೂ, ಮನುಷ್ಯರೂ, ತಣಿವಂತೆ-ತೃಪ್ತಿಪಡುವಹಾಗೆ, ಯಾಗವನು - ಯಜ್ಞವನ್ನು, ಪೂರೈಸಿದನು-ಮಾಡಿದನು ॥೩೦॥

ತಾತ್ಪರ್ಯ:— ದಮನನು ಹಾಗೆಯೇ ಜ್ಞಾನದೃಷ್ಟಿಯಿಂದ, ದೊರೆಯ ಪೂರ್ವಜನ್ಮ ಕರ್ಮ ವೃತ್ತಾಂತವನ್ನರಿದು ದೊರೆಯಂ ಕುರಿತು, ಅಯ್ಯಾ ನೀನು ಪುತ್ರಕಾಮೇಷ್ಟಿಯನ್ನು ಮಾಡಿದರೆ ಪುತ್ರಸಂಪತ್ತುಂಟಾಗುವುದು, ವ್ಯಥೆಪಡಬೇಡ, ಆಕಾರ್ಯವನ್ನು ಮಾಡು ಎಂದು ಹೇಳಲು ದೊರೆಯು ಸಂತೋಷಚಿತ್ತನಾಗಿ ಮುನಿಯ ಆಜ್ಞಾನುಸಾರವಾಗಿ, ಯಜ್ಞಕ್ಕೆ ಶುಭಲಗ್ನದಲ್ಲಿ ಆರಂಭಮಾಡಿ, ಅನ್ನವಸ್ತ್ರ, ದಾನ, ದಕ್ಷಿಣೆಗಳಿಂದ ಬ್ರಾಹ್ಮಣರೂ ಹವಿಃ ಪುರೋಡಾಶಾದಿಗಳಿಂದ ದೇವತೆಗಳೂ ತೃಪ್ತರಾಗುವಂತೆ ಮಾಡಿ ಯಜ್ಞವನ್ನು ಮುಗಿಸಿದನು. ॥೩೦॥

ಟಿಪ್ಪಣಿ:— (೧) ದೃಷ್ಟಿ (ದ್ಭ) ದಿಟ್ಟಿ, (೨) ದಿವಸ (ದ್ಭ) ದೆವಸ, ಶುಭವಾದ ದಿವಸ-ಶುಭದಿವಸ (ವಿ. ಪೂರ್ವ. ಕ.) ||೩೦||

ಮೂ|| ಅರಸಕೇಳಾಯಾಗಸವುನಂ | ತರದೊಳಾಮುನಿಮುಖ್ಯರನು
ಸ | ತ್ಕರಿಸಿಕಳುಹಿದನವರವರನುಚಿತೋಪಚಾರದಲಿ || ತರುಣಿಗಾ
ದುದುಗರ್ಭಮಂಗಳ | ಕರಸುತಾರೆಯಲಗ್ನದಲಿನೃಪ | ನರಸಿಪ
ಡೆದಳುತನುಜೆಯೊರ್ವಳೆಲೋಕಸುಂದರಿಯು || ||೩೧||

ಟೀಕೆ:— ಅರಸ-ದೊರೆಯೇ, ಕೇಳ್-ಕೇಳು, ಆಯಾಗಸವುನಂತರದೊಳ್-ಆ ಯಜ್ಞವು ಮುಗಿದತರುವಾಯು, ಆ ಮುನಿಮುಖ್ಯರನು-ದಮನಋಷಿಯೇ ಮೊದಲಾದವರನ್ನು (೧) ಅವರವರನ್ನು-ಪ್ರತಿಬ್ಬರನ್ನೂ, ಉಚಿತ-ಯೋಗ್ಯವಾದ, ಉಪಚಾರದಲಿ-ಮರ್ಯಾದೆಯಿಂದ, ಸತ್ಕರಿಸಿ- ಪೂಜಿಸಿ, ಕಳುಹಿದನು-ಕಳುಹಿಸಿಕೊಟ್ಟನು, ತರುಣಿಗೆ- ಅವನಹೆಂಡತಿಗೆ, ಗರ್ಭ-ಗರ್ಭವು, ಆದುದು-ಉಂಟಾಯಿತು, ನೃಪನ-ದೊರೆಯ,ಅರಸಿ-ಹೆಂಡತಿಯು,ಮಂಗಳಕರ-ಶುಭಪ್ರದವಾದ,(೨)ಸುತಾರೆಯು-ಶುಭನಕ್ಷತ್ರವುಳ್ಳ, ಲಗ್ನದಲಿ-ಕಾಲದಲ್ಲಿ, ಲೋಕಸುಂದರಿಯು -ಬಹುಸುಂದರಿಯಾದ, ಒರ್ವಳ್-ಒಬ್ಬಳಾದ (೩) ತನುಜೆಯ-ಮಗಳನ್ನು ಪಡೆದಳು-ಹಡದಳು. ||೩೧||

ತಾತ್ಪರ್ಯ:— ಅನಂತರದಲ್ಲಿ ಯಜ್ಞದಲ್ಲಿ ಸೇರಿದ್ದ ಋಷಿಗಳೇ ಮೊದಲಾದವರಿಗೆ ಅವರವರ ಯೋಗ್ಯತಾನುಸಾರವಾಗಿ ಮರ್ಯಾದೆಯನ್ನು ಮಾಡಿ ಕಳುಹಿಸಿದನು. ತರುವಾಯು ಅರಸಿಯು ಗರ್ಭವತಿಯಾಗಿ ಸುಲಗ್ನದಲ್ಲಿ ಲೋಕೋತ್ತರ ಸೌಂದರ್ಯವತಿಯಾದ ಪುತ್ರಿಯನು ಪಡೆದಳು. ||೩೧||

ಟಿಪ್ಪಣಿ:— (೧) ವೀಪ್ಸೆಯಲ್ಲಿ ದ್ವಿರುಕ್ತಿಬಂದಿದೆ: (೨) ಪ್ರಾ. ಸ, ತಾರೆ-ಕಣ್ಣುಗುಡ್ಡೆ: ನಕ್ಷತ್ರ: ವಾಲಿಯಹೆಂಡತಿ: ಗುರುಪತ್ನಿ: ವೃಕ್ಷಭೇದ (ನಾನಾ) (೩) ತನು-ದೇಹದಿಂದ, ಜೆ-ಹುಟ್ಟಿದವಳು (ಅವ) (ಉಪ. ಸ.) ||೩೧||

ಮೂ|| ಅಮರದುಂದುಭಿಮೊಳಗಲಿಳೆಸಂ | ಭ್ರಮಿಸೆಪುರಜನನಲಿಯೆ
ನೃಪನಾ | ಸಮಯದಲಿ ದಮನಾಖ್ಯಮುನಿಗಭಿನಮಿಸಿ ನಿಜಸುತೆ
ಗೆ||ವಿಮಲನಾಮವನಪಾಲಿಸೆನೆಮುನಿ | ಕಮಲಮುಖಿದಮಯಂತಿ
ಯೆಂದು|ತ್ತಮಸಪೆಸರೊಂದೊರೆದುತಾಪೊರಮಟ್ಟನಾಶ್ರಮಕೆ ||೩

ಟೀಕೆ:- ಅಮರ-ದೇವತೆಗಳ, ದುಂದುಭಿ-ಭೇರಿಯು, ಮೊಳಗಲು-ಧ್ವನಿಮಾಡಲು, ಇಳೆ-ಭೂಮಿಯು, ಸಂಭ್ರಮಿಸೆ-ಸಂಭ್ರಮ ಪಡುತ್ತಿರಲು, ಪುರಜನ-ಪಟ್ಟಣದ ಪ್ರಜೆಗಳು, ನಲಿಯೆ-ಸಂತೋಷಪಡುತ್ತಿರಲು, ನೃಪಂ-ದೊರೆಯು, ಆ ಸಮಯದಲಿ-ಆಕಾಲದಲ್ಲಿ, ದಮನಾಖ್ಯ ಮುನಿಗೆ-ದಮನನೆಂಬಋಷಿಗೆ, ಅಭಿನಮಿಸಿ-ನಮಸ್ಕರಿಸಿ, ನಿಜಸುತೆಗೆ-ತನ್ನ ಮಗಳಿಗೆ, ವಿಮಲನಾಮವ-ಉತ್ತಮವಾದ ಹೆಸರನ್ನು, ಪಾಲಿಸು-ತಿಳಿಸು, ಎನೆ-ಎಂದು ಕೇಳಿಕೊಳ್ಳಲು, ಮುನಿ-ಋಷಿಯು, (೧) ಕಮಲಮುಖಿ-ಕಮಲದಂತೆ ಮುಖವುಳ್ಳ, ದಮಯಂತಿ, ಎಂದು-ದಮಯಂತಿ ಎಂಬುದು, ಉತ್ತಮದ-ಶ್ರೇಷ್ಠವಾದ, ಪೆಸರೆಂದು-ಹೆಸರೆಂದು, (೨) ಒರೆದು-ಹೇಳಿ, ತಾಂ-ತಾನು, ಆಶ್ರಮಕೆ-ಪರ್ಣಶಾಲೆಗೆ, ಪೊರಮಟ್ಟಂ-ಹೊರಟನು ‖೨೦‖

ತಾತ್ಪರ್ಯ:- ದಮಯಂತಿಯು ಹುಟ್ಟಿದಾಗಿ ಆಕೆಯು ಮಹನೀಯಳೆಂಬುದನ್ನು ಸೂಚಿಸುವುದಕ್ಕಾಗಿ ದೇವ ದುಂದುಭಿಗಳು ಮೊರೆದವು, ಪ್ರಜೆಗಳೆಲ್ಲರೂ ಆನಂದ ಭರಿತರಾದರು. ಆಗ ಭೀಮನೃಪಾಲನು ದಮನನಿಗೆ ನಮಸ್ಕರಿಸಿ ತನ್ನ ಮಗಳಿಗೆ ಏನೆಂದು ನಾಮಕರಣ ಮಾಡಬೇಕೆಂದು ಕೇಳಿಕೊಳ್ಳಲು, ದಮಯಂತಿ ಎಂಬಹೆಸರು ಶ್ರೇಷ್ಠವಾದುದೆಂದು ಆತನು ಹೇಳಿ ರಾಜನಿಂದ ಸತ್ಕಾರವನ್ನು ಹೊಂದಿ ತನ್ನಾಶ್ರಮಕ್ಕೆ ತೆರಳಿದನು ‖೨೦‖

ಟಿಪ್ಪಣಿ:- (೧) ಕಮಲದಂತೆ ಮುಖವುಳ್ಳವಳು (ಬ. ವ್ರೀ.) (೨) ಒರೆ-ತಿಕ್ಕು, ಹೇಳು, ಪ್ರವಹಿಸು, ಕತ್ತಿಯಚೀಲ (ನಾನಾ) ‖೨೦‖

ಮೂ ‖ ನಿರಿಗುರುಳತಿರಿಮುಡಿಯವಿಮಲಾಧರದತೋಳ್ಗಳಕಂಬುಕಂ
ಠದ । ತರಳನಯನದಸಂಪಗೆಯನಾಸಿಕದಪೆರೆನೊಸಲ॥ ಹರಿಯ
ಮಧ್ಯದಹಂಸಗಮನದ । ಗುರುಕುಚದಕರಪಲ್ಲವದಸರ । ಸಿರುಹ
ಮುಖಿನಲಿದಾಡುತಿರ್ದಳುರಾಜಭವನದಲಿ ‖೨೨‖

ಟೀಕೆ:- ನಿರಿಗುರುಳ-ಉದ್ದವಾದ ಕೂದಲುಳ್ಳ, ತಿರಿಮುಡಿಯ-ಹಣಿದತುರುಬುಳ್ಳ, ವಿಮಲ-ಪರಿಶುದ್ಧವಾದ,ಅಧರದ-ಓಷ್ಠವುಳ್ಳ, ತೋಳ್ಗಳ ಬಾಹುಗಳುಳ್ಳ, ಕಂಬುಕಂಠದ-ಶಂಖದಂತಿರುವ ಕೊರಳುಳ್ಳ, ತರಳನಯನದ-ಚಂಚಲವಾದ ನೇತ್ರಗಳುಳ್ಳ, (೧) ಸಂಪಗೆಯ-ಸಂಪಗೆಯ ಹೂವಿನಂತಿರುವ, ನಾಸಿಕದ-ಮೂಗುಳ್ಳ, ಪೆರೆನೊಸಲ-ಚಂದ್ರನಂತೆ

ಇರುವ ಹಣೆಯುಲ, ಹರಿಯು-ಸಿಂಹದಂತೆ, ಮಧ್ಯದ-ನಡುವುಳ್ಳ, (೨) ಹಂಸಗಮನದ-ಹಂಸಪಕ್ಷಿಯಂತೆ ನಡಿಗೆಯುಳ್ಳ, ಗುರುಕುಚದ-ದೊಡ್ಡದಾದಸ್ತನಗಳುಳ್ಳ (೩) ಕರಪಲ್ಲವದ-ಚಿಗುರಂತಿರುವ ಕೈಗಳುಳ್ಳ, ಸರಸಿರುಹಮುಖಿ-ಕಮಲಮುಖಿಯಾದ ದಮಯಂತಿಯು, ರಾಜಭವನದಲಿ-ಅರಮನೆಯಲ್ಲಿ. ನಲಿದಾಡುತಿರ್ದಳು-ಹರ್ಷಗೊಳುತ್ತಿದ್ದಳು ||೩೩

ತಾತ್ಪರ್ಯ:- ದೊರೆಯು ಆದೇಹೆಸರನ್ನಿಟ್ಟು ಬಹು ಸಂತೋಷದಿಂದಿರುತ್ತಿದ್ದನು. ಆ ದಮಯಂತಿಯು ಉದ್ದವಾದ ಕುರುಳು, ನಿರ್ಮಲವಾದ ಓಷ್ಠ ಪುಟನಳಿತೋಳ್ಗಳು, ಚಂಚಲನೇತ್ರ ಸಂಪಗೆಯಂತಿರುವ ಮೂಗು ಅರ್ಧಚಂದ್ರನಂತೆ ಹೊಳೆವಹಣೆ, ಸಿಂಹದಂತೆ ಸೂಕ್ಷ್ಮವಾದಮಧ್ಯ, ಹಂಸದಂತಿರುವ ಮಂದಗಮನ ಚಿಗುರನ್ನು ಹೀಯಾಳಿಸುವಂತಿರುವ ಹಸ್ತಗಳು, ವಿಸ್ತಾರವಾದ ಸ್ತನ ಮಂಡಲ, ಕಮಲದಂತಿರುವ ಮುಖ, ಇವುಗಳಿಂದ ಬಹು ಸುಂದರಿ ಯಾಗಿರುತ್ತಿದ್ದಳು ||೩೩||

ಟಿಪ್ಪಣಿ:- (ತ್ಸ) ಚಂಪಕಾ (೨) ಹಂಸಕ್ಕೆ(ದ್ಭ) ಅಂಚೆ, ಹಂಸ-ಸೂರ್ಯ, ಸಂನ್ಯಾಸಿಭೇದ, ಹಂಸಪಕ್ಷಿ (ನಾನಾ) (೩) ಪಲ್ಲವದಂತಿರ್ಪಕರ-ಕರಪಲ್ಲವ-(ಉ. ಉ. ಕರ್ಮ. ಸ.) ಪಲ್ಲವ-ಚಿಗುರು. ವಿಟ. ||೩೩||

ಮೂ|| ಗುಣದೊಳತಿಶೀಲದಲಿಮಾತಿನ | ಬಣತೆಯಲಿಗಾಂಭೀರ್ಯದಲಿ
ವಿತ | ರಣದವೀಣಾರಚನೆಯಲಿಗುರುದೇವಭಕ್ತಿಯಲಿ | ಪ್ರಣುತಿ
ಸಲುಶರ್ವಾಣಿರತಿಯರಿ | ಗೆಣೆಯೆನಿಪಚಲುವಿಕೆಯುಮಿಕ್ಕಿನ | ಬ
ಣಗುಸತಿಯರುಸರಿಯೆಲೋಕದೊಳೆಂದನಾಮುನಿಪ ||೩೪||

ಟೀಕೆ:- ಗುಣದೊಳ್ - ಗುಣಗಳಲ್ಲಿಯೂ, ಅತಿಶೀಲದಲಿ ಸದಾಚಾರದಲ್ಲಿಯೂ, ಮಾತಿನ ಮಾತಾಡುವ, ಬಣತೆಯಲ್ಲಿ-ಚಾತುರ್ಯದಲ್ಲಿಯೂ, ಗಾಂಭೀರ್ಯದಲ್ಲಿಯೂ, ವಿತರಣದ-ವಿತರಣೆಯುಳ್ಳ, ವೀಣಾರಚನೆಯಲಿ-ವೀಣೆಯನ್ನು ನುಡಿಸುವುದರಲ್ಲಿಯೂ, ಗುರುದೇವ ಭಕ್ತಿಯಲಿ-ಹಿರಿಯರಲ್ಲಿಯೂ ದೇವರಲ್ಲಿಯೂ ಭಕ್ತಿಯನ್ನು ತೋರಿಸುವುದರಲ್ಲಿಯೂ, ಪ್ರಣುತಿಸಲು-ಸ್ತುತಿಸಲು, (೧) ಶರ್ವಾಣಿರತಿಯರಿಗೆ-ಪಾರ್ವತಿ, ರತೀದೇವಿ ಯರಿಗೆ, ಎಣೆಯೆನಿಪ-ಸಮಾನವಾದ, ಚಲುವಿಕೆಯು-ಸೌಂದರ್ಯವು, ಮಿಕ್ಕಿನ-ಉಳಿದ, ಬಣಗುಸತಿಯರು-ಅಲ್ಪರಾದ ಸ್ತ್ರೀಯರು, ಲೊಕದೊಳ್ ಪ್ರಪಂಚದಲ್ಲಿ, ಸರಿಯೆ - ಸಮಾ

ನರೇ, (ಎಂಬದಾಗಿ) (೨) ಆಮುನಿಪ-ಋಷಿಶ್ರೇಷ್ಠನು, ಎಂದಂ-ಹೇಳಿದನು ||೩೪||

ತಾತ್ಪರ್ಯ:- ಆ ದಮಯಂತಿಯು ಸುಗುಣ ರೂಪ, ಸೌಶೀಲ್ಯ, ಸೌಭಾಗ್ಯ,ಚಾತುರ್ಯಗಳಲ್ಲಿಯೂ, ಗುರುದೈವಭಕ್ತಿಗಳಲ್ಲಿಯೂ, ಅದ್ವಿತೀಯಳಾಗಿದ್ದಳು. ಪಾರ್ವತಿ, ರತಿಯರನ್ನು ವರ್ಣಿಸಿದರೆ ಈಕೆಯ ಹೋಲಿಕೆಗೆ ಸರಿಯಾಗಿತ್ತಲ್ಲದೆ ಉಳಿದ ಸಾಮಾನ್ಯ ಸ್ತ್ರೀಯರು ಲೋಕದಲ್ಲಿ ಆಕೆಯನ್ನು ಯಾರೂ ಹೋಲುತ್ತಿರಲಿಲ್ಲ ||೩೪||

ಟಿಪ್ಪಣಿ:- (೧) (ದ್ಭ) ಸಬ್ಬಾಣಿ, (೨) ಮುನಿ. ಋಷಿಗಳನ್ನು ಪ-ಪಾಲಿಸತಕ್ಕವನು, (ಅವ) ಅವನು ಮುನಿಪ-ಆಮುನಿಪ(ಗಮಕ) ||೩೪

ಮೂ|| ಕೇಳುಪಾಂಡವತನಯಭೀಮನೃ| ಪಾಲನೋಲಗದಲ್ಲಿಧರಣೀ|
ಪಾಲಕರಚರಿತಪ್ರಸಂಗದೊಳಿರಲುನಳನೃಪನ || ಶೀಲವನುಸೌಂದ
ರ್ಯವಿಭವವಿ | ಶಾಲವನುಲಾವಣ್ಯನಿಪುಣಗು | ಣಾಳಿಗಳವಿಸ್ತರಿಸಿ
ಕೊಂಡಾಡಿದರುಕವಿಜನರು ||೩೫||

ಟೀಕೆ:- (೧) ಪಾಂಡವತನಯ-ಧರ್ಮರಾಜನೆ, ಕೇಳು-ಕೇಳು, ಭೀಮನೃಪಾಲನ-ಭೀಮರಾಜನ, ಒಲಗದಲ್ಲಿ-ಸಭೆಯಲ್ಲಿ, ಧರಣೀಪಾಲಕರ-ದೊರೆಗಳ, ಚರಿತ ಪ್ರಸಂಗದೊಳ್-ಕಥೆಯನ್ನು ವಿವರಿಸುವುದರಲ್ಲಿ,ಇರಲು-ಇರಲು, ನಳನೃಪನ-ನಳರಾಜನ, ಸೌಂದರ್ಯ-ಲಾವಣ್ಯವನ್ನು ವಿಭವ-ವೈಭವದ, ವಿಶಾಲವನು-ವಿಸ್ತಾರವನ್ನೂ ಶೀಲವನು-ಆಚಾರವನ್ನೂ: ಲಾವಣ್ಯ-ರೂಪವನ್ನೂ, ನಿಪುಣ-ಉತ್ತಮವಾದ, ಗುಣಾಳಿಗಳ-ಗುಣಸಮೂಹವನ್ನೂ, (೨) ಕವಿಜನರು-ಕವಿಗಳು (೩)ವಿಸ್ತರಿಸಿ-ವಿವರಿಸಿ, ಕೊಂಡಾಡಿದರು- ಹೊಗಳಿದರು ||೩೫||

ತಾತ್ಪರ್ಯ:- ಹಾಗೆಯೇ ಭೀಮನೃಪಾಲನ ಆಸ್ಥಾನದಲ್ಲಿ ರಾಜರ ಚರಿತ್ರೆಯನ್ನೂ ಕೀರ್ತಿಯನ್ನೂ ವರ್ಣಿಸುವುದರಲ್ಲಿ ನಳನ ಶೌರ್ಯ, ಸ್ಥೈರ್ಯ ಗಾಂಭೀರ್ಯೌದಾರ್ಯೈಶ್ವರ್ಯಾದಿ ಗುಣಗಳನ್ನು ಕವಿಗಳು ತಮ್ಮ ಕಾವ್ಯಗಳಲ್ಲಿ ವರ್ಣಿಸುತ್ತಿದ್ದರಲ್ಲದೆ ಆಕಾಲದಲ್ಲಿ ಉಳಿದ ರಾಜರ ಕಥೆಯನ್ನು ಅಷ್ಟು ಆದರದಿಂದ ಸ್ತುತಿಸುತ್ತಿರಲಿಲ್ಲ ||೩೫||

ಟಿಪ್ಪಣಿ:- (೧) ಪಾಂಡವನಾದ ತನಯ (ವಿ. ಪೂರ್ವ. ಕ) (೨) ಕವಿಗಳಾದ ಜನರು-ಕವಿಜನರು (ವಿ.ಪೂರ್ವ. ಕ) ಕವಿ-ಆವರಿಸು,ಶುಕ ನೀರಪಕ್ಕಿ, (ನಾನಾ) (೩) ವಿಸ್ತರ-(ದ್ಭ) ಬಿತ್ತರ ||೩೫||

ಮೂ॥ ವನಜಮುಖಿಯೀವಾರ್ತೆಯೆಲ್ಲವ । ಮನವೊಲಿದುಕೇಳಿದಳು ಹಿಗ್ಗುತ । ನೆನೆದುದಂತಃಕರಣಹೆಚ್ಚಿದಚಿತ್ತವೃತ್ತಿಯಲಿ ॥ ನೆನೆದುಬರೆದಳುನಳನರೂಪವ ।ನನುನಯದಿಚಿತ್ರವನುಮೋಹಂ । ಜನಿಸಿತವನಲಿಮೋಹವೆಲೆಧರಣೀಶಕೇಳೆಂದ ॥೩೬॥

ಟೀಕೆ:- (೧) ವನಜ-ಕಮಲದಂತೆ, ಮುಖಿ-ಮುಖವುಳ್ಳ ದಮಯಂತಿಯು, (೨) ಈ ವಾರ್ತೆಯು-ಈ ಸಮಾಚಾರವನ್ನು, ಎಲ್ಲವ-ಎಲ್ಲವನ್ನೂ, ಮನವೊಲಿದು-ಮನಸ್ಸಿನಿಂದ ಪ್ರೀತಿಸಿ, ಕೇಳಿದಳು-ಕೇಳಿದಳು, ಹಿಗ್ಗುತ-ಸಂತೋಷಪಡುತ್ತಾ, ಹೆಚ್ಚಿದ-ಹೆಚ್ಚಾದ, ಚಿತ್ತವೃತ್ತಿಯಲಿ-ಬುದ್ಧಿಯು ಪ್ರವರ್ತಿಸುವುದರಿಂದ, ಅಂತಃಕರಣ-ಅಂತರಂಗವು, ನೆನೆದುದು-ಕರಗಿತು, ಅನುನಯದಿ-ವಿನಯದಿಂದ, ನಳನ-ನಳರಾಜನ (೩) ರೂಪವಂ-ಆಕಾರವನ್ನು, ಚಿತ್ರವನು-ಚಿತ್ರರೂಪವಾಗಿ, ಬರೆದಳು-ಬರೆದಳು, ಅವನಲಿ, ಮೋಹಂ-ಪ್ರೀತಿಯು, ಸಂಜನಿಸಿತು-ಉಂಟಾಯ್ತು, ಎಲೆ ಧರಣೀಶ-ದೊರೆಯೇ, ಕೇಳ್-ಕೇಳು, ಎಂದ-ಎಂಬದಾಗಿಹೇಳಿದನು ॥೩೬॥

ತಾತ್ಪರ್ಯ:- ದಮಯಂತಿಯು ಆನಳನ ವಿಚಾರವನ್ನು ಕೇಳಿ, ಅವನಲ್ಲಿ ಅನುರಕ್ತಳಾಗಿ ಸರ್ವದಾ ಆತನಲ್ಲಿಯೇ ತನ್ನ ಮನಸ್ಸು ನೆಲೆಗೊಂಡಿರಲು, ಸರ್ವದಾ ಅವನ ಧ್ಯಾನದಲ್ಲಿಯೇ ಇರುತ್ತಾ, ಅವನ ಆಕಾರವನ್ನು ಚಿತ್ರದಲ್ಲಿ ಬರೆದು ನೋಡುತ್ತಾ, ಅವನ ಗುಣಗಳನ್ನೇ ಕೇಳುತ್ತಾ ಇತರ ವ್ಯಾಪಾರಗಳೆಲ್ಲವನ್ನೂ ಮರೆತಳು ॥೩೬॥

ಟಿಪ್ಪಣಿ:- (೧) ವನ-ನೀರಿನಲ್ಲಿ ಜ-ಹುಟ್ಟಿದುದು (ಅವ) (೨) ಇದುವಾರ್ತೆ-ಈವಾರ್ತೆ (ಗಮಕ) ವಾರ್ತೆ-(ದ್ಭ) ಬಾರ್ತೆ ॥೩೬॥

ಮೂ॥ ಆಗಮದನನುತನ್ನಬಲವನು । ಬೇಗದಲಿಜೋಡಿಸಲುಭೋಯೆಂ । ದಾಗಲರಸಂಚೆಗಳುಮಳಿವಿಂಡುಗಳುನಲಿದಾಡೆ ॥ ಕೋಗಿಲೆಗಳಾರ್ಭಟಿಸೆಗಿಳಿಗಳು । ಕೂಗೆನವಿಲುಗಳಾಡೆಮನ್ಮಥ।ನಾಗ ಪೂಗಣೆಗಳನು ಸಂಧಿಸುತೆಚ್ಚನಂಗನೆಯ ॥೩೭॥

ಟೀಕೆ:- ಆಗ-ಆಕಾಲದಲ್ಲಿ, (೧) ಮದನನು-ಮನ್ಮಥನು, ತನ್ನ-ತನ್ನ, ಬಲವನು-ಸೈನ್ಯವನ್ನು ಬೇಗದಲಿ-ಜಾಗ್ರತೆಯಾಗಿ ಜೋಡಿಸಲು-ಸಿದ್ಧಪಡಿಸಲು, ಆಗಲಿ-ಆಗ, ಅರಸಂಚೆಗಳು - ರಾಜಹಂಸಗಳೂ, (೨) ಅಳಿವಿಂಡುಗಳು-ಭ್ರಮರ ಸಮೂಹವು, ಭೋಯೆಂದು-ಭೋರೆಂ

ಬುದಾಗಿ, ನಲಿದಾಡೆ-ಕೂಗಿಕೊಂಡು ಹಾರಾಡಲು, ಕೋಗಿಲೆಗಳ್-ಕೋಗಿಲಗಳು, ಆರ್ಭಟಿಸೆ-ಧ್ವನಿಮಾಡಲು, ಗಿಳಿಗಳು-ಗಿಣಿಗಳು, ಕೂಗೆ-ಕೂಗುತ್ತಿರಲು, ನವಿಲುಗಳ್-ನವಿಲುಗಳು, ಆಡೆ-ನಾಟ್ಯವಾಡಲು, ಆಗ-ಆಗ, ಮನ್ಮಥಂ-ಮನ್ಮಥನು, (೩) ಪೂಗಣೆಗಳಂ-ಹೂಬಾಣಗಳನ್ನು, ಸಂಧಿಸುತ-ಬಿಲ್ಲಿನಲ್ಲಿಹೂಡಿ, ಅಂಗನೆಯು-ದಮಯಂತಿಯನ್ನು ಕುರಿತು, ಎಚ್ಚಂ-ಹೊಡೆದನು ||೩೭||

ತಾತ್ಪರ್ಯ:- ಮನ್ಮಥನು ಇದೇ ಸಮಯವೆಂದರಿತು ತನ್ನ ಸೈನ್ಯವನ್ನೆಲ್ಲಾ ಸಿದ್ಧಪಡಿಸಿಕೊಂಡು ತನ್ನ ಪುಷ್ಪ ಬಾಣಗಳನ್ನು ಕಬ್ಬಿನ ಬಿಲ್ಲಿನಲ್ಲಿ ಹೂಡಿ ಆಕರ್ಣಾಂತವಾಗಿ ಸೆಳೆದು ದಮಯಂತಿಯ ಮೇಲೆ ಪ್ರಯೋಗಿಸಿದನು. ಮತ್ತು ವ್ಯಥೆಯನ್ನುಂಟುಮಾಡು ವುದಕ್ಕಾಗಿ ಆಕಾಲದಲ್ಲಿ, ರಾಜಹಂಸೆಗಳೂ ಭ್ರಮರಗಳೂ, ಅವ್ಯಕ್ತ ಮಧುರಧ್ವನಿಯಿಂದ ಸಂಚರಿಸುತ್ತಿದ್ದುವು. ಕೋಗಿಲೆಗಳು ಧ್ವನಿಮಾಡುತ್ತಿದ್ದುವು. ಗಿಳಿಗಳು ಆಲಾಪಿಸುತ್ತಿದ್ದುವು. ನವಿಲುಗಳು ನರ್ತನೆ ಮಾಡಿದುವು. ಇದರಿಂದ ಮನ್ಮಥಬಾಣ ಪೀಡಿತಳಾಗಿ ದಮಯಂತಿಯು ಶೋಕಿಸುತ್ತಿದ್ದಳು ||೩೭||

ಟಿಪ್ಪಣಿ:- (೧) ಮನ್ಮಥ, ಮಗ್ಗಾರೆಗಿಡ (ನಾನಾ) (೨) ಅಳಿ+ಪಿಂಡು ಅಳಿವಿಂಡು (ವಕಾರಾದೇಶ) (ಷ. ತ. ಸ.) (೩) ಪೂವಿನಕಣೆ-ಪೂಗಣೆ (ಷ. ತ. ಸ.) (ಗಕಾರಾದೇಶ) ||೩೭||

ಮೂ|| ಉಣ್ಣಳನ್ನವನಖಿಳವಸ್ತುವ | ಕಣ್ಣಿನಿಂದೀಕ್ಷಿಸಳುಸತಿಯರ
ಮನ್ನಣೆಗೆಮೈಗೊಡಲುಬಲುಬೇಸರದಿಬಳಲುವಳು || ಬಣ್ಣಿಸಲು
ಮಾತಾಡಲೊಲ್ಲಳು | ಬಣ್ಣಗುಂದಿದದೇಹದೊಳಗೆಳ | ವೆಂಣು
ಗಳಸೌಖ್ಯವನುಮರೆದಳು ಮದನನಿಸುಗೆಯಲಿ ||೩೮||

ಟೀಕೆ:- ಅನ್ನವಂ-ಅನ್ನವನ್ನು, ಉಣ್ಣಳ್-ತಿನ್ನಳು, ಅಖಿಳವಸ್ತುವ-ಯಾವಪದಾರ್ಥವನ್ನೂ, ಕಣ್ಣಿನಿಂದ-ಕಣ್ಣಿನಲ್ಲಿ, ಈಕ್ಷಿಸಳು-ನೋಡಳು, ಸತಿಯರ-ಹೆಂಗಸರ, (೧) ಮನ್ನಣೆಗೆ-ಉಪಚಾರಕ್ಕೆ, ಮೈಗೊಡಲು- ಒಪ್ಪಿಕೊಳ್ಳಲು, ಬಲುಬೇಸರದಿ-ಬಹಳಜಿಹಾಸೆಯಿಂದ, ಬಳಲುವಳು-ಆಯಾಸಗೊಳ್ಳುವಳು,೨)ಬಣ್ಣಿಸಲು-ಪ್ರಾರ್ಥಿಸಿದರೂ,ಮಾತಾಡಲೊಲ್ಲಳು-ಮಾತನಾಡಳು, (೩) ಬಣ್ಣಗುಂದಿದ-ಮಾಸಿಹೋಗಿರುವ ದೇಹದೊಳಗೆ-ಮೈಯಿಂದಕೂಡಿದವಳಾಗಿ, (೪) ಎಳವೆಣ್ಣುಗಳ-ಬಾಲ

ಕಿಯರು ಹೊಂದುವ, ಸೌಖ್ಯವನು-ಸುಖವನ್ನು, ಮದನನ-ಮನ್ಮಥನ, (೫) ಇಸುಗೆಯಲಿ - ಬಾಣಪ್ರಯೋಗದಿಂದ, ಮರೆದಳು - ಮರೆತು ಬಿಟ್ಟಳು॥೩೮॥

ತಾತ್ಪರ್ಯ:- ಆದಮಯಂತಿಯು ಮನ್ಮಥ ಬಾಣ ಪೀಡಿತಳಾದುದರಿಂದ, ಆಹಾರವನ್ನು ತೊರೆದಳು, ಎಷ್ಟು ರಮ್ಯವಸ್ತುವನ್ನಾದರೂ ಕಣ್ಣೆತ್ತಿನೋಡಳು, ದಾಸಿಯರು ಮಾಡುವ ಉಪಚಾರದಲ್ಲಿ ಅಸಹ್ಯವನ್ನು ತೋರಿಸುವಳು, ಎಷ್ಟು ಕೇಳಿಕೊಂಡರೂಪ್ರತ್ಯುತ್ತರವನ್ನೀಯಳು, ಮಲಿನವಾದದೇಹವುಳ್ಳವಳಾಗಿರುವಳು, ಸಾಮಾನ್ಯವಾಗಿಬಾಲಕಿಯರು ಅಪೇಕ್ಷಿಸಬಹುದಾದಯಾವಕೋರಿಕೆಗಳನ್ನೂ ಬಯಸದೆ,ಮದನಬಾಧೆಗೆ ಗುರಿಯಾಗಿ ಸಂಕಟ ಪಡುತ್ತಿದ್ದಳು ॥೩೮॥

ಟಿಪ್ಪಣಿ:-(೧) (ತ್ಪ) ಮಾನ್ಯತಾ, (೨) ವರ್ಣನ, ಎಂಬ ಶಬ್ದದ ಮೇಲೆ (ಇಸು) ಪ್ರತ್ಯಯವು ಸೇರಿ ಕೊನೆಯ ಅಕ್ಷರವು ಲೋಪವಾಗಿ ತದ್ಭವದಲ್ಲಿ (ಬಣ್ಣಿಸು) ಎಂದಾಯಿತು (೩) ಬಣ್ಣದಿಂಕುಂದು-ಬಣ್ಣಗುಂದು (ಕ್ರಿ. ಸ.) (೪) ಎಳೆದುಪೆಣ್-ಎಳವೆಣ್ (ವಿ. ಪೂರ್ವ. ಕ) ವಕಾರಾದೇಶ, (೫) (ಇಸು) ಧಾತುವಿಗೆ ಭಾವಾರ್ಥದಲ್ಲಿ ಗೆ, ಪ್ರತ್ಯಯವು ಬಂದಿದೆ॥೩೮॥

ಮೂ॥ ಕೆಳದಿಯರುಕಂಡಂತರಂಗದಿ। ಬಲಿದವಿರಹದರಾಜವದನೆಯ।
ಹೊಳಲೊಳುದ್ಯಾನವನಸುರುಚಿರಪುಷ್ಪತರುಗಳಲಿ ॥ ಎಳದಳಿರ
ನೆಳಲಿನಲಿಪರಿಮಳ । ದಲರಪನ್ನೀರಿನಲಿಸಖಿಯರು । ನಲವುಹಿಂ
ಗಿದಸತಿಯನುಪಚರಿಸಿದರುಬನದೊಳಗೆ ॥೩೯॥

ಟೀಕೆ:- ಕೆಳದಿಯರು-ಸಖಿಯರು, ಅಂತರಂಗದಿ-ಮನಸ್ಸಿನಲ್ಲಿ, ಬಲಿದ-ಹೆಚ್ಚಿದ, ವಿರಹದ-ಅಗಲಿಕೆಯದುಃಖವುಳ್ಳ, (೧) ರಾಜವದನೆಯ ಚಂದ್ರಮುಖಿಯಾದ ದಮಯಂತಿಯನ್ನು, ಹೊಳಲೊಳ್-ಪಟ್ಟಣದಲ್ಲಿಯೂ, ಉದ್ಯಾನವನ- ಉಪವನದ, ಸುರುಚಿರ- ಮನೋಹರವಾದ, ಪುಷ್ಪ-ಹೂಗಳುಳ್ಳ, ತರುಗಳಲಿ-ಗಿಡಗಳಕೆಳಗೆ, (೨) ಎಳದಳಿರ-ಎಳಚಿಗುರಿನ, ನೆಳಲಿನಲಿ-ನೆಳಲಿನಲ್ಲಿಯೂ, ಪರಿಮಳದ-ಸುವಾಸನೆಯುಳ್ಳ, ಪನ್ನೀರಿನಲಿ-ಪನ್ನೀರಿನಿಂದಲೂ, ನಲವು-ಸಂತೋಷವು, ಹಿಂಗಿದ-ತೊಲಗಿರುವ, ಸತಿಯನು-ದಮಯಂತಿಯನ್ನು, ಸಖಿಯರು-ಗೆಳತಿಯರು,ಬನದೊಳಗೆ-ಉದ್ಯಾನದಲ್ಲಿ, ಉಪಚರಿಸಿದರು-ಶೀತೋಪಚಾರಮಾಡಿದರು॥

ತಾತ್ಪರ್ಯ:- ಸಖಿಯರು ಈಕೆಯು ವಿರಹತಾಪವು ಹೆಚ್ಚುತ್ತಿರುವುದನ್ನು ನೋಡಿ ಪ್ರತೀಕಾರವು ತೋರದೆ ಪಟ್ಟಣದಲ್ಲಿ ಬಗೆ ಬಗೆಯಾದ ಶೈತ್ಯೋಪಚಾರವನ್ನ ಮಾಡುತ್ತಿದ್ದರಲ್ಲದೆ. ಉಪವನದಲ್ಲಿ ಪರಿಮಳಿಸುತ್ತಿರುವ ಪುಷ್ಪಗಳಿಂದಲೂ, ನಳ ನಳಿಸುತ್ತಿರುವ ಚಿಗುರುಗಳಿಂದಲೂ ರಮ್ಯವಾಗಿರುವ ವೃಕ್ಷಗಳ ನೆಳಲಿನಲ್ಲಿ ಪನ್ನೀರನ್ನು ಚಿಮುಕಿಸುವುದು, ತಾವರೆ ಎಲೆಗಳಿಂದ ಬೀಸುವುದು, ತಾವರೆಎಲೆಗಳನ್ನು ಹೊದಿಸುವುದು, ಮೊದಲಾದ ಉಪಚಾರಗಳನ್ನು ಮಾಡುತ್ತಿದ್ದರು ॥೩೯॥

ಟಿಪ್ಪಣಿ:- (೧) ರಾಜನಂತೆ ವದನವುಳ್ಳವಳು (ಬ. ವ್ರೀ.) ರಾಜಚಂದ್ರ (೨) ಎಳದುತಳಿರ್-ಎಳದಳಿರ್ (ವಿ. ಪೂರ್ವ. ಕ.) ॥೩೯॥

ಮೂ॥ ಕೆಲರುಹದನೇನೆಂದುಚಿಂತಿಸೆ । ಕೆಲರುಪನ್ನೀರುಗಳತಳಿದ
ರು । ಕೆಲರುಕರ್ಪೂರಗಂಧವನುಲೇಪಿಸಿದರಂಗದಲಿ ॥ ಕೆಲರುಬೀ
ಸಿದರಾಲವಟ್ಟದಿ । ಕೆಲರುಹುವ್ವಿನಹಾಸಿಕೆಯಕೋ । ಮಲೆಗೆನು
ತಲುಪಚರಿಸಿರಚಿಸಿದರಾಗಳೆಡೆವಿಡದೆ ॥೪೦॥

ಟೀಕೆ:—ಕೆಲರು-ಕೆಲವರುಸಖಿಯರು, ಹದನ-ಕಾರಣವು, ಏನು- ಏನಾಗಿರಬಹುದು, ಎಂದು-ಎಂಬದಾಗಿ, ಚಿಂತಿಸೆ-ಆಲೋಚಿಸಲು, ಕೆಲರು ಕೆಲವರು, ಪನ್ನೀರುಗಳ-ಪನ್ನೀರನ್ನು, ತಳಿದರು-ಎರಚಿದರು, ಕೆಲರು-ಮತ್ತೆಕೆಲವರು, ಅಂಗದಲಿ-ದೇಹಕ್ಕೆ, ಕರ್ಪೂರ-ಪಚ್ಚಕರ್ಪೂರದ, ಗಂಧವನು-ಗಂಧವನ್ನು ಲೇಪಿಸಿದರು-ಬಳಿದರು, ಕೆಲರು, ಆಲವಟ್ಟದಿ-ಬೀಸಣಿಗೆಯಿಂದ, ಬೀಸಿದರು, ಆಗಳ್-ಆಗ, (೧) ಎಡೆವಿಡದೆ-ಸಾವಕಾಶಮಾಡದೆ, ಕೆಲರು, ಹೂವಿನಹಾಸಿಕೆಯನು-ಪುಷ್ಪಶಯನವನ್ನು, ಕೊಮಲೆಗೆ-ಮೃದುವಾದದೇಹವುಳ್ಳ, ದಮಯಂತಿಗೆ, ಎನುತ-ಎಂಬದಾಗಿ (೨) ರಚಿಸಿದರು-ಸಿದ್ಧಪಡಿಸಿದರು. ॥೪೦॥

ತಾತ್ಪರ್ಯ:--ದಮಯಂತಿಯ ಪರಿತಾಪವನ್ನು ನೋಡಿ ಉಪಶಮನಾರ್ಥವಾಗಿ ಕೆಲವರು ಪನ್ನೀರನ್ನು ತಳಿದರು, ಮತ್ತೆಕೆಲವರು ಪಚ್ಚಕರ್ಪೂರದ ಮಿಶ್ರವಾದ ಶ್ರೀಗಂಧವನ್ನು ದೇಹಕ್ಕೆ ಲೇಪಿಸಿದರು, ಕೆಲವರು ಬೀಸಣಿಗೆಗಳಿಂದ ತಂಪಾದ ಗಾಳಿಯನ್ನು ಬೀಸಿದರು, ದೇಹವು ಸುಕುಮಾರವಾದುದೆಂದುಕೆಲವರುಪುಷ್ಪಶಯನವನ್ನು ಕಲ್ಪಿಸಿದರು॥೪೦॥

ಟಿಪ್ಪಣಿ:— (೧) ಎಡೆಯಂಬಿಡದೆ-ಎಡೆವಿಡದೆ (ಕ್ರಿ.ಸ) ಬಕಾರಕ್ಕೆ ವಕಾರಾದೇಶ. (೨) ರಚನ, ಎಂಬ ಶಬ್ದದಮೇಲೆ,ಇಸು, ಪ್ರತ್ಯಯ

ವು ಸೇರಿ ಕೊನೆಯ ಅಕ್ಷರ ಲೋಪವಾಗಿದೆ. ॥೪೮॥

ಮೂ ॥ ಈಪರಿಯೊಳಾಕಾಮಿನಿಗೆಶೈ । ತ್ಯೋಪಚಾರವಮಾಡಿದರು ಪರಿ । ತಾಪವೆಗ್ಗಳಿಸುತ್ತಿರಲಿನ್ನೇನುಹದನೆನುತ।ಚಾಪಳೆಯರಾಲೋಚಿಸುತಕಡು । ಪಾಪಿಯಂಗಜನೆಂದುಬೈಯುತಲೋಪಿನಡೆದಾಕ್ಷಣದಿತಂದರು ಸಖಿಯಸಂತೈಸಿ ॥೪೧॥

ಟೀಕೆ:—ಈ ಪರಿಯೊಳ್-ಈರೀತಿಯಾಗಿ, ಆ ಕಾಮಿನಿಗೆ-ಆ ಸುಂದರಿಗೆ, (೧) ಶೈತ್ಯೋಪಚಾರವ-ಶೀತಳವಾಗುವ ಉಪಚಾರವನ್ನು, ಮಾಡಿದರು, ಪರಿತಾಪಂ-ಸಂಕಟವು, ವೆಗ್ಗಳಿಸುತ್ತಿರಲು-ಹೆಚ್ಚಾಗುತ್ತಿರಲು, ಇನ್ನೇನುಹದನ-ಇನ್ನೇನುಸಮಾಚಾರವಿರಬಹುದು, ಎನುತ-ಎಂಬದಾಗಿ, ಚಪಳೆಯರ್-ಸಖಿಯರು, ಆಲೋಚಿಸುತ- ಚಿಂತಿಸುತ್ತಾ, (೨) ಅಂಗಜಂ-ಮನ್ಮಥನು, ಕಡುಪಾಪಿ-ಬಹುಪಾಪಿಯು, ಎಂದು-ಎಂಬದಾಗಿ, ಬೈಯುತಲಿ-ದೂಷಿಸುತ್ತಾ, (೩) ಓಪಿ-ರಕ್ಷಿಸುತ್ತಾ, ನಡೆದು-ಹೊರಟು, ಸಖಿಯ- ದಮಯಂತಿಯನ್ನು, ಸಂತೈಸಿ - ಸಮಾಧಾನಮಾಡಿ, ಆಕ್ಷಣದಿ - ತತ್‌ಕ್ಷಣದಲ್ಲಿಯೇ, ತಂದರು- ಕರೆದುಕೊಂಡು ಬಂದರು. ॥೪೧॥

ತಾತ್ಪರ್ಯ:—ಈರೀತಿಯಾಗಿ ಶೈತ್ಯೋಪಚಾರವನ್ನು ಮಾಡುತ್ತಲೂ, ಮತ್ತಷ್ಟುತಾಪವು ಹೆಚ್ಚಾಗಲು, ಎಲ್ಲರೂ ಆಶ್ಚರ್ಯಗೊಂಡು ಇದು ದೇಹಜನ್ಯವಾದ ಜ್ವರಾದಿತಾಪವಲ್ಲ, ಮನ್ಮಥವಿಕಾರವಾಗಿ ತೋರುವುದೆಂದು ತಿಳಿದುಕೊಂಡು, ಇಂತಹ ಸುಕುಮಾರಿಯಾದ ರಾಜಪುತ್ರಿಯಲ್ಲಿ ನಿಷ್ಕರುಣಿಯಾಗಿಇಂತಹಬಾಧೆಯನ್ನುಂಟುಮಾಡುತ್ತಿರುವ ಆಮದನನ್ನು ಪರಿಪರಿಯಾಗಿ ದೂಷಿಸುತ್ತಾ, ಆಕೆಯ ಅಂಗರಕ್ಷಣೆಯಲ್ಲಿ ಜಾಗರೂಕರಾಗಿ ಸಮಾಧಾನಪಡಿಸಿ ಜಲಕ್ರೀಡೆ, ವನವಿಹಾರ ಮೊದಲಾದವುಗಳಿಂದ ಆಕೆಯ ಮನಸ್ಸನ್ನು ವಿನೋದಪಡಿಸಿ ಸಂತಾಪವನ್ನು ಹೋಗಲಾಡಿಸಬೇಕೆಂದು ವನಬೆಡೆಗೆ ಕೂಡಲೇ ಕರೆತಂದರು. ॥೪೧॥

ಟಿಪ್ಪಣಿ:— (೧)ಶೈತ್ಯಾರ್ಥವಾದ ಉಪಚಾರ-ಶೈತ್ಯೋಪಚಾರ (ಉ. ಮ. ಕ. ಸ.) (೨) ಅಂಗ-ದೇಹದಲ್ಲಿ, ಜ-ಹುಟ್ಟಿದವನು, (ಅವ) ಉಪಪದ. ಸ. (೩) ಸ್ನೇಹಾರ್ಥಕನಾದ ಓ, ಎಂಬಧಾತುವಿಗೆ ,ಪಿ,ಎಂಬ ಕೃತ್ಪ್ರತ್ಯಯವು ಸೇರಿದೆ. (ಭೂ. ಕೃ.) ॥೪೧॥

ಮೂ ॥ ಬಕುಳಬದರಿಯನಿಂಬವಟಕೇ । ತಕಿಸರಳಮಾದರಿಕುಟಜ

ಚಂ। ಪಕಲವಾಗಕಪಿತ್ಥದಾಡಿಮಕ್ರಮುಕತರುಗಳಲಿ॥ ಶುಕನವಿ
ಲುಜಿಲಿಬಿಲಿಗಗೀಜುಗ। ಬಕಹಸುಬಗೊರವಂಕಟಿಟ್ಟಿಭ॥ ಪಿಕಚ
ಕೋರಕವಿಾನ್ಬುಲಿಗಪಕ್ಷಿಗಳರಂಜಿಸಿತು ॥೪೦॥

ಟೀಕೆ:—ಬಕುಳ-ಪಗಡೆ, ಬದರಿ-ಎಲಚಿ, ನಿಂಬ-ಬೇವು, ವಟ-ಆಲ, ಕೇತಕಿ-ಕೇದಗೆ, ಸರಳ-ದೇವದಾರು, (೧) ಪಾದರಿ-ಪಾದರಿ, ಕುಟಜ-ಕೊಡಸಿಗೆ, ಚಂಪಕ, ಸಂಪಗೆ, ಲವಂಗ-ಲವಂಗ, ಕಪಿತ್ಥ-ಬೇಲ, ದಾಡಿಮ-ದಾಳಿಂಬೆ, ಕ್ರಮುಕ-ಅಡಕೆಮೊದಲಾದ, ತರುಗಳಲಿ-ಗಿಡಗಳ ಮೇಲೆ, ಶುಕ-ಗಿಳಿ, ನವಿಲು, ಜಿಲಬಿಲಿಗ-ಹಾಲುಹಕ್ಕಿ, ಗೀಜುಗ-ಬಕ, ಹಸುಬ-ಹಸುಂಬನಹಕ್ಕಿ, ಗೊರವಂಕ, ಟಿಟ್ಟಿಭ, ಪಿಕ-ಕೋಗಿಲೆ, ಚಕೋರಕ, ಮಿಾನ್ಬುಲಿಗ-ಮಿಾನಿನಾಕಾರದ, ಪಕ್ಷಿಗಳು-ಹಕ್ಕಿಗಳು, ರಂಜಿಸಿತು-ಪ್ರಕಾಶಿಸಿತು, ॥೪೦॥

ತಾತ್ಪರ್ಯ—ಆ ವನವು ಫಲಪುಷ್ಪ ಭರಿತವಾಗಿ ರಮಣೀಯವಾಗಿರುವ ಅನೇಕ ವೃಕ್ಷಗಳಲ್ಲಿ ಕುಳಿತು ಕರ್ಣಾನಂದವನ್ನುಂಟು ಮಾಡುವಂತೆ ಗಾನಮಾಡುತ್ತಿರುವ ಶುಕಶಾರಿಕಾದಿ ಪಕ್ಷಿಗಳಿಂದಲೂ, ಶೀತ ಮಾರುತದಿಂದಲೂ, ತಂಪಾದ ನೆಳಲಿಂಧಲೂ,ಮನೋಹರವಾಗಿತ್ತು॥೪೦॥

ಟಿಪ್ಪಣಿ:—(ತ್ಸ) ಪಾಟಲ, ॥೪೦॥

ಮೂ ॥ ಬಿಗಿದರತ್ನದಸಾಲುಸೋಪಾ । ನಗಳಕೆಂದಾವರೆಯಮೊಗ್ಗೆ
ಯ । ಮುಗುಳೆತುಂಬಿಯಹಂಸೆಗಳಬಕಚಕ್ರವಾಕಗಳ ॥ ಸೊ
ಗಸುಮೋರುವಸರಸಿಯಲಿವರ। ಸುಗುಣೆಯರುದಮಯಂತಿಯ
ಳೆಮನ। ಸೊಗಸಿನಿಂದವಸಂತವಾಡಿದರಾವಿದಗ್ಧೆಯರು ॥೪೧॥

ಟೀಕೆ:—ಬಿಗಿದ-ಕಟ್ಟಿದ, ರತ್ನದ-ರತ್ನಗಳ, ಸಾಲು - ಪಜ್ತಿಯಾಗಿರುವ, ಸೋಪಾನಗಳ-ಮೆಟ್ಟಲುಗಳುಳ್ಳ, ಮುಗುಳೆ-ಮುತ್ತು, ತುಂಬಿಯ-ಭ್ರಮರದ, ಹಂಸೆಗಳ-ಹಂಸಪಕ್ಷಿಗಳ, ಬಕ, (೧) ಚಕ್ರವಾಕ ಪಕ್ಷಿಗಳ, ಸೊಗಸುಮೋರುವ-ರಮ್ಯವಾದ, ಸರಸಿಯಲಿ-ಸರೋವರದಲ್ಲಿ, ವರಸುಣೆಯರು-ಸದ್ಗುಣವುಳ್ಳ, ಆ ವಿದಗ್ಧೆಯರು- ಪ್ರೌಢೆಯರಾದ ಸಖಿಯರು, ದಮಯಂತಿಯಳ-ದಮಯಂತಿಯ, ಮನಸೊಗಸಿನಿಂದ-ಮನಸ್ಸಿಗೆಹರ್ಷವಾಗುವಂತೆ, ವಸಂತವ-ವಸಂತೋತ್ಸವವನ್ನು, ಆಡಿದರು-ಮಾಡಿದರು. ॥೪೧॥

ತಾತ್ಪರ್ಯ:—ಅಲ್ಲಿ ರತ್ನಶಿಲಾ ನಿರ್ಮಿತವಾದ ಸೋಪಾನ ಪಜ್ತಿಯಿಂ

ದಲೂ, ಕಮಲಕಲ್ಹಾರಾದಿಪುಷ್ಪಗಳಿಂದಲೂ, ಅಚ್ಛೋದಕದಿಂದಲೂ, ಶೋಭಿಸುವ ತಣ್ಗೊಳವು ಕಂಗೊಳಿಸಿತು, ಆ ಸರೋವರದಲ್ಲಿ ದಮಯಂತಿಯೊಡನೆ ಸಖಿಯರು ಜಲಕ್ರೀಡೆಯಾಡಿದರು. ॥೪೩॥

ಟಿಪ್ಪಣಿ,—(೧) (ದ್ಭ) ಜಕ್ಕವಕ್ಕಿ, ॥೪೩॥

ಮೂ॥ ಬಂದುಸತಿಯರುಕೊಳನತೀರದಿ। ನಿಂದುವಸ್ತ್ರಾಭರಣಭೂ
ಷಣ। ದಿಂದಶತಕಾಂತೋತ್ಪಲದಿಕುಳ್ಳಿರಿಸಿಶಶಿಮುಖಿಯ॥ಅಂದು
ವಿರಹದಬೆಗೆಯನಾನಾ। ಛಂದದಲಿಶೈತ್ಯೋಪಚಾರಗ। ಳಿಂದಸಂ
ತೈಸಿದರುವರಪುರದರಸನಾಜ್ಞೆಯಲಿ ॥೪೪॥

ಅಂತು ಸಂಧಿ ೧ಕ್ಕೆ ಪದ ೪೪ಕಂ ಮಂಗಳಮಸ್ತು.

ಟೀಕೆ:—ಸತಿಯರು-ಹೆಂಗಸರು, ಬಂದು-ಬಂದವರಾಗಿ, ಕೊಳನ-ಕೊಳದ, ತೀರದಿ-ದಡದಲ್ಲಿ, ವಸ್ತ್ರಾಭರಣಭೂಷಣದಿಂದ-ಒಡವೆ ಬಟ್ಟೆ, ಅಲಂಕಾರಗಳೊಡನೆ, ನಿಂದು-ನಿಂತುಕೊಂಡು, ಶಶಿಮುಖಿಯ-ದಮಯಂತಿಯನ್ನು, ಶತ-ನೂರು, ಕಾಂತ-ಮನೋಹರವಾದ, ಉತ್ಪಲದಿ-ಕಮಲದಹಾಸಿನಲ್ಲಿ, ಕುಳ್ಳಿರಿಸಿ-ಕೂಡಿಸಿ, ಅಂದು-ಆಗ, ವರಪುರದರಸನ-ಚೆನ್ನಕೇಶವನ, (೧) ಆಜ್ಞೆಯಲಿ-ಅಪ್ಪಣೆಯಿಂದ ವಿರಹದ-ಅಗಲಿಕೆಯ, (೨) ಬೆಗೆಯ-ತಾಪವನ್ನು, ನಾನಾಛಂದದಲಿ- ಬಗೆಬಗೆಯಾದ ಸೊಗಸಿನಿಂದ (೩) ಶೈತ್ಯೋಪಚಾರಗಳಿಂದ- ಶೀತೋಪಚಾರಗಳಿಂದ, ಸಂತೈಸಿದರು-ಸಮಾಧಾನಪಡಿಸಿದರು. ॥೪೪॥

ತಾತ್ಪರ್ಯ:—ಅನಂತರದಲ್ಲಿ ಕೊಳದತಡಿಯಲ್ಲಿ ನಿಂತು ವಸ್ತ್ರ ಗಂಧ ಮಾಲ್ಯಾಂಬರಾಭರಣಗಳಿಂದಲಂಕೃತರಾಗಲು, ಸಖಿಯರೆಲ್ಲರೂ ದಮಯಂತಿಯನ್ನು ಕಮಲಪುಷ್ಪದಿಂದ ರಚಿಸಿದ ಹಾಸಿಗೆಯಲ್ಲಿ ಕುಳ್ಳಿರಿಸಿ ಶೈತ್ಯೋಪಚಾರ ಮಾಡುತ್ತಾ ತಾಪವನ್ನು ಕಡಿಮೆಮಾಡಿ ಪ್ರಿಯಾಲಾಪಗಳಿಂದ ವಿನೋದಪಡಿಸುತ್ತಿದ್ದರು. ॥೪೪॥

ಎಂಬಲ್ಲಿಗೆ ನಳಚರಿತ್ರೆಯ ಮೊದಲನೆಯ ಸಂಧಿ

ಮು ಗಿ ದು ದು.

ಟಿಪ್ಪಣಿ:— (೧) (ಪ್ಥ) ಆಣೆ, (೨) (ತ್ಸ) ವ್ಯಥಾ (೩) ಕೈತ್ಯ + ಉಪಚಾರ-ಕೈತ್ಯೋಪಚಾರ (ಗುಣ. ಸಂ) ॥೪೪॥

ಪ್ರಥಮ ಸಂಧಿ ಟೀಕಾ ತಾತ್ಪರ್ಯ ವಿವರಣೆ ಮುಗಿಯಿತು.

ಎರಡನೆಯ ಸಂಧಿ.

ಸೂ॥ ಹಲವುನಯನೀತಿಯುಲಿಹಂಸೆಯು । ಕಳುಹಲಂದಾರಾಯಭಾ
ರಪಿ । ನಳನೃಪಗೆಸತಿಯಾದಳಾದಮಯಂತಿಮನವೊಲಿದು ॥

ಮೂ॥ ಕೇಳುಕುಂತೀತನಯಭೀಮನೃ । ಪಾಲತನುಜೆಗೆವಿರಹಬಲಿ
ದುವಿ । ಶಾಲವಾಗಿರಲತ್ತಕೇಳೈನಿಷಧನಗರಿಯನು ॥ ಪಾಲಿಸು
ವನಳಚಕ್ರವರ್ತಿಯ । ವೋಲಗದರಚನೆಯನುರತ್ನದ । ಸಾಲು
ಹೊಳಹಿನಸಿಂಹಪೀಠವನೊಳೆಸೆದುಕುಳ್ಳಿರ್ದ ॥೧॥

ಟೀಕೆ:- ಹಲವು- ಅನೇಕವಾದ, ನಯನೀತಿಯುಲಿ-ವಿನಯನೀತಿಗಳಿಂದ, ಹಂಸೆಯು-ಒಂದಾನೊಂದು ಹಂಸಪಕ್ಷಿಯನ್ನು, ಕಳುಹಲು-ಕಳುಹಿಸಲು, ಅಂದು-ಆಗ, ಆರಾಯಭಾರಪಿ-ಅವರಮಧ್ಯಸ್ಥದಿಂದ, ಆದಮಯಂತಿ- ದಮಯಂತಿಯು ಮನವೊಲಿದು-ಮೆಚ್ಚಿ, ನಳನೃಪಗೆ-ನಳರಾಜನಿಗೆ, ಸತಿಯಾದಳು-ಹೆಂಡತಿಯಾದಳು॥ ಕುಂತೀತನಯ-ಧರ್ಮರಾಜನೇ, ಕೇಳು, ಭೀಮನೃಪಾಲತನುಜೆಗೆ-ಭೀಮರಾಜನ ಮಗಳಿಗೆ,ವಿರಹ-ವಿಯೋಗದುಃಖವು, ಬಲಿದು-ಹೆಚ್ಚಾಗಿ, ವಿಶಾಲವಾಗಿರಲು-ವಿಸ್ತಾರವಾಗಿರಲು, ಅತ್ತ-ಆಕಡೆ,(೧)ನಿಷಧ ನಗರಿಯನು-ನಿಷಧಪಟ್ಟಣವನ್ನು ಪಾಲಿಸುವ-ಆಳುತ್ತಿರುವ, ನಳಚಕ್ರವರ್ತಿಯ-ನಳರಾಜನ, ಓಲಗದ-ಸಭೆಯ, ರಚನೆಯನು-ವೈಭವವನ್ನು,ಕೇಳೈ ಕೇಳಯ್ಯಾ, ರತ್ನದ-ನವರತ್ನದ- ಸಾಲುಹೊಳಹಿನ - ಸಾಲುಸಾಲಾಗಿರುವ ಕಾಂತಿಯುಳ್ಳ (೨) ಸಿಂಹಪೀಠದೊಳ್-ಸಿಂಹಾಸನದಲ್ಲಿ, ಎಸೆದು-ಪ್ರಕಾಶಿಸಿ, ಕುಳ್ಳಿರ್ದ-ಕುಳಿತಿರ್ದನು ॥೧॥

ತಾತ್ಪರ್ಯ:- ಒಂದು ಹಂಸವು ನಳ ದಮಯಂತಿಯರ ಸಂಘಟನೆ

ಗಾಗಿ ಮಾಧ್ಯಸ್ಥವನ್ನು ವಹಿಸಿ ಇಬ್ಬರ ಬಳಿಗೂ ಬಂದು ಅನೇಕ ನಯ ನೀತಿಗಳನ್ನು ಬೋಧಿಸಿ ಇಬ್ಬರೂ ಪರಸ್ಪರವಾಗಿ ಮೋಹಿಸುವಂತೆ ಮಾಡಲು, ಇವರಿಬ್ಬರಿಗೂ ಸ್ವಯಂವರವು ನಿಷ್ಕರ್ಷೆಯಾಯ್ತು ಹೇಗೆಂದರೆ-ಈರೀತಿಯಾಗಿ ದಮಯಂತಿಯು ವಿರಹ ವ್ಯಥೆಯು ಆಕೆಯನ್ನು ಬಹಳವಾಗಿ ಬಾಧಿಸುತ್ತಿರಲು, ಇತ್ತ ನಿಷಧ ದೇಶಾಧೀಶ್ವರನಾದ ನಳನ ವೃತ್ತಾಂತವಂ ಪೇಳುವೆನು ||೧||

ಟಿಪ್ಪಣಿ:- (೧) ನಿಷಧನರರಿ-ನಿಷಧನಗರ (ಷ. ತ) (೨) ಸಿಂಹಾಕಾರವಾದ ಪೀಠ (ಲುಪ್ತ, ಮ. ಕರ್ಮ. ಸ.) ||೧||

ಮೂ|| ಗೌಳವಂಗಕಳಿಂಗಕುಂತಳ | ಚೋಳಬರ್ಬರಸಿಂಧುಕೇರಳ
ಲಾಳಮಗಧಮರಾಳ ಸೌರಾಷ್ಟ್ರಾದಿಭೂಮಿಪರು || ಬಾಲೆಯು
ರುಮಂತ್ರಿಗಳುವೀರಭಟ | ಟಾಳಿನಟಗಾಯಕರುಕವಿತಾ|ಜಾಲಸಂ
ದೋಹದಲಿಮೆರೆದುದುನೃಪತಿಯಾಸ್ಥಾನ ||೨||

ಟೀಕೆ:- (೧) ನೃಪತಿಯ-ನಳರಾಜನ, ಆಸ್ಥಾನ-ರಾಜಸಭೆಯು (೨) ಗೌಳ, ವಂಗ ಕಳಿಂಗ, ಕುಂತಳ, ಚೋಳ, ಬರ್ಬರ, ಸಿಂಧು, ಕೇರಳ (೩) ಲಾಳ, ಮಗಧ, ಮರಾಳ, ಸೌರಾಷ್ಟ್ರ-ಈ ದೇಶಗಳೀ, ಆದಿ-ಮೊದಲಾದವುಗಳ ಭೂಮಿಪರು-ದೊರೆಗಳು, ಬಾಲೆಯರು-ಹೆಂಗಸರು, ಮಂತ್ರಿಗಳು-ಸಚಿವರು, ವೀರ-ಶೂರರಾದ, ಭಟ-ಯೋಧರ, ಆಳಿ-ಸಾಲು, ನಟ-ನಾಟ್ಯವಾಡುವರು, ಗಾಯಕರು-ಸಂಗೀತಗಾರರು (೪) ಕವಿತಾಜಾಲ-ಕವಿಗಳಗುಂಪು, ಇವುಗಳ, ಸಂದೋಹದಲಿ-ಸಂಘದಿಂದ, ಮೆರೆದುದು-ಪ್ರಕಾಶಿಸಿತು ||೨||

ತಾತ್ಪರ್ಯ:-ಎಲೈಧರ್ಮನಂದನನೇ ಕೇಳು ನಳನುನವರತ್ನ ಖಚಿತವಾದ ದಿವ್ಯ!ಸಿಂಹ ಪೀಠದಮೇಲೆ ಕುಳಿತು ಓಲಗವನ್ನು ಮಾಡುತ್ತಿರಲು ಆತನ ಸಭೆಯುನ್ನು, ಗೌಡ, ವಂಗ, ಕಳಿಂಗ, ಕುಂತಳ, ಚೋಳ, ಬರ್ಬರ ಸಿಂಧು, ಕೇರಳ, ಲಾಟ, ಮಗಧ, ಮರಾಳ, ಸೌರಾಷ್ಟ್ರ ಮೊದಲಾದ ದೇಶಗಳ ಸಾಮಂತನರಪತಿಗಳೂ ದಿವ್ಯ ಸುವಾಸಿನಿಯರೂ, ಸಚಿವರೂ, ವೀರರಾದ ಭಟರೂ, ನಟ ವಿಟ ಗಾಯಕರೂ ಕವೀಶ್ವರರೂ, ಅವರವರ ಸ್ಥಾನಗಳಲ್ಲಿದ್ದು ಸಭೆಯನ್ನಲಂಕರಿಸುತ್ತಿದ್ದರು ||೨||

ಟಿಪ್ಪಣಿ:- (೧) ನೃ-ಮನುಷ್ಯರಿಗೆ, ಪತಿ-ಒಡೆಯ (ಷ. ತ) (೨) (ತ್ರ) ಗೌಡ (೩) ಲಾಟ,(೪) ಜಾಲ-ಗುಂಪು, ಗವಾಕ್ಷ, ಬಲೆ (ನಾನಾ)||

ಮೂ॥ ಆಸಮಯದಲಿಬಂದರಲ್ಲಿಗೆ। ದೇಶಯಾಚಕಭೂಸುರರುಧರ।
ಣೀಶಕೇಳಿದನಿಳೆಯೊಳೇನುಂಟತಿವಿಚಿತ್ರವೆನೆ ॥ ಭೂಸುರೋತ್ತ
ಮರೆಂದರೆಲೆಧರ। ಣೀಶಕೇಳುವಿದರ್ಭನಗರದೊಳೇಸುಪ್ರಣ್ಯೋ
ದಯದಿಪಡೆದನೊಭೀಮನೃಪಸುತೆಯ ॥೩॥

ಟೀಕೆ:- ಆ ಸಮಯದಲಿ-ಆಕಾಲದಲ್ಲಿ, ದೇಶಯಾಚಕ ಭೂಸುರರು, ದೇಶ-ದೇಶದೇಶಗಳಲ್ಲಿ, ಯಚಕ-ಬೇಡಿಜೀವಿಸುವ, ಭೂಸುರರು ಬ್ರಾಹ್ಮಣರು, ಅಲ್ಲಿಗೆ-ಆಸ್ಥಳಕ್ಕೆ ಬಂದರು, ಇಳೆಯೊಳ್-ಲೋಕದಲ್ಲಿ ಅತಿ ವಿಚಿತ್ರವು-ಬಹಳ ಆಶ್ಚರ್ಯ ವಸ್ತುವು, ಏನುಂಟು-ಯಾವುದಿದೆ ? ಎನೆ-ಎಂಬದಾಗಿ, ಕೇಳಿದಂ-ಕೇಳಿದನು (೧) ಭೂಸುರೋತ್ತಮರು-ಬ್ರಾಹ್ಮಣೋತ್ತಮರು, ಎಂದರ್ - ಹೇಳಿದರು, ಎಲೆ ಧರಣೀಶ-ದೊರೆಯೇ ಕೇಳು, ಭೀಮನೃಪ-ಭೀಮರಾಜನು, ಏನು-ಎಷ್ಟು, (೨) ಪ್ರಣ್ಯೋದಯದಿ - ಸುಕೃತ ವಿಶೇಷದಿಂದ, ಸುತೆಯ - ಮಗಳನ್ನು, ಪಡೆದನೊ-ಹೊಂದಿದನೊ ! ॥೩॥

ತಾತ್ಪರ್ಯ:- ಯಾಚನೆಗಾಗಿ ದೇಶ ಸಂಚಾರಮಾಡುತ್ತಿರುವ ಕೆಲವು ಮಂದಿ ಬ್ರಾಹ್ಮಣರು ಆಗ ಸಭೆಗೆ ಬಂದರು, ಅನೇಕದೇಶಗಳಲ್ಲಿ ಸಂಚಾರ ಮಾಡುತ್ತಿರುವರಾದುದರಿಂದ ಇವರಿಗೆ ಎಲ್ಲ ಅತಿಶಯಗಳೂ ತಿಳಿದಿರುವುವೆಂದು ಭಾವಿಸಿ ನಳನು ಇವರನ್ನು ಕುರಿತು-ಅಯ್ಯಾ ನೀವು ಎಲ್ಲಕಡೆಗಳಲ್ಲಿಯೂ ನೋಡಿರುವಿರೋ ? ಎಲ್ಲೆಲ್ಲಿಯಾವ ಶ್ರೇಷ್ಠವಸ್ತುಗಳೂ, ವಿಚಿತ್ರಗಳೂ, ವಿಶೇಷ ಸಮಾಚಾರಗಳೂ ಇರುವುವು ? ದಯೆಮಾಡಿ ತಿಳಿಸಿ ಎಂದು ಬೆಸಗೊಳ್ಳಲು, ಅವರು ಅಯ್ಯಾ ಅಂತಹ ವಿಶೇಷಾವುದನ್ನೂ ಕಾಣೆವು. ಆದರೆ ಒಂದು ಅತ್ಯಾಶ್ಚರ್ಯವನ್ನು ನೋಡಿದೆವು, ಏನೆಂದರೆ- ವೈದ್ಯ ದೇಶದ ದೊರೆಯಾದ ಭೀಮರಾಜನಿಗೆಲೋಕೋತ್ತರಸೌಂದರ್ಯವತಿಯಾದ ದಮಯಂತಿ ಎಂಬ ಮಗಳೊಬ್ಬಳಿರುವಳು, ಎಂತಹ ಸುಕೃತ ವಿಶೇಷದಿಂದ ಅಂತಹ ಪುತ್ರಿಯನ್ನು ಪಡೆದನೋ ನಾವು ಹೇಳಲಾರೆವು ॥೩॥

ಟಿಪ್ಪಣಿ:- (೧) ಭೂಸುರರಲ್ಲಿ ಉತ್ತಮರು-ಭೂಸುರೋತ್ತಮರು (ಸ. ತ.) (೨) ಪುಣ್ಯಕ್ಕೆ (ದ್ಭ) ಪೂನ್ಯ ॥೩॥

ಮೂ॥ ಅವಳರೂಪಗುಣಾತಿಶಯಗಳ। ನೆಮಗೆಬಣ್ಣಿಸಲಳವೆಕೇಳಾ।
ಯುವತಿಲೋಕದಸತಿಯ ಬಗೆಯಂತಲ್ಲಭಾವಿಸಲು ॥ ಪ್ರವಿನು

ಲಾಕಾರದಲಿನೋಡಲು । ಸವಿನುಡಿಯುಸಂಭಾಷಣೆಗಳಲಿ । ಭು
ವನದಲಿನಾಂಕಾಣೆದಮಯಂತಿಯುಸಮಾನರನು ॥೪॥

ಟೀಕೆ:- ಅವಳ-ಆರಾಜಪುತ್ರಿಯು, (೧) ರೂಪಗುಣಾತಿಶಯಗಳಂ ಸೌಂದರ್ಯವನ್ನೂ, ಸದ್ಗುಣಗಳನ್ನೂ, ಎಮಗೆ-ನಮಗೆ, ಬಣ್ಣಿಸಲ್-ವಿವರಣೆ ಮಾಡಲು, ಅಳವೆ-ಸಾಧ್ಯವೇ ! ಕೇಳ್- ಕೇಳು, ಭಾವಿಸಲು ಆಲೋಚಿಸಿದರೆ, ಆ ಯುವತಿ-ಆಸ್ತ್ರೀಯು, ಲೋಕದ-ಲೋಕದಲ್ಲಿರುವ, ಸತಿಯಂತೆ-ಹೆಂಗಸಿನಹಾಗೆ, ಅಲ್ಲ-ಅಲ್ಲವು, ನೋಡಲು-ನೋಡಿದರೆ, ಪ್ರವಿಮಲಾಕಾರದಲಿ- ಪರಿಶುದ್ಧವಾದ ಆಕಾರದಲ್ಲಿಯೂ (೨) ಸವಿನುಡಿಯು-ಮೃದುವಾದ ಉಚ್ಚಾರಣೆಯುಳ್ಳ, ಸಂಭಾಷಣೆಗಳಲಿ-ಮಾತುಗಳಲ್ಲಿಯೂ,ಭುವನದಲಿ-ಈ ಲೋಕದಲ್ಲಿ,ದಮಯಂತಿಯ ಸಮಾನರನು ನಾಂ-ನಾನು, ಕಾಣೆ-ಕಾಣೆನು ॥೪॥

ತಾತ್ಪರ್ಯ:—ಆಕೆಯ ಗುಣ, ರೂಪ, ಸೌಂದರ್ಯ, ಸೌಶೀಲ್ಯ, ಮತ್ತು ನಡೆನುಡಿಗಳನ್ನು ನೋಡಿದರೆ ಈ ಲೋಕದಲ್ಲಿರುವ ಸ್ತ್ರೀಯರಾರೂ ಆಕೆಯನ್ನು ಹೋಲಲಾರರು ಸಂಪೂರ್ಣವಾಗಿ ವರ್ಣಿಸಿ ಹೇಳ ಹೇಳಲು ನಮಗೆ ಸಾಮರ್ಥ್ಯವಿಲ್ಲ. ತಿಳಿದಮಟ್ಟಿಗೆ ಹೇಳುವೆವು ॥೪॥

ಟಿಪ್ಪಣಿ:- (೧) ರೂಪ. (ತ್ಸ) ರೂಪವ್ರೂ ಗುಣವ್ರೂ-ರೂಪಗುಣಗಳು (ದ್ವಂದ್ವ) ರೂಪಗುಣಗಳ ಅತಿಶಯಗಳು- ರೂಪಗುಣಾತಿಶಯಗಳು (ಷ. ತ.) (೨) ಸವಿಯಾದನುಡಿ ಸವಿನುಡಿ (ವಿ. ಪೂರ್ವ. ಕ) ॥೪॥

ಮೂ॥ ಮುರಹರನನಿಜಸೊಸೆಯುರೂಪಂ । ತಿರಲಿಚಂದ್ರನಮಗಳಚ
ಲುವಂ ! ತಿರಲಿಮೈನಾಕನಸಹೋದರಿಯಂದವಂತಿರಲಿ ॥ ಶರಧಿತ
ನುಜೆಯುಸೌಂದರಿಯುವನು । ಮರಸಿತೆಂಬುದುಲೋಕದೊಳಗಾ ।
ಸರಸಿಜಾಕ್ಷಿಯುಬಗೆಯಬೇಸರವಿಲ್ಲಕೇಳೆಂದ ॥೫॥

ಟೀಕೆ:—ಮುರಹರನ-ಕೃಷ್ಣನ, ನಿಜಸೊಸೆಯು- ತನ್ನಸೊಸೆಯು, ರೂಪು-ಆಕಾರವು, ಅಂತಿರಲಿ-ಹಾಗಿರಲಿ, (೧) ಚಂದ್ರನ-ಚಂದ್ರನ, ಮಗಳ-ಪುತ್ರಿಯು,ಚಲುವು-ಸೌಂದರ್ಯವು, ಅಂತಿರಲಿ-ಹಾಗಿರಲಿ,ಮೈನಾಕನ-ಮೈನಾಕಪರ್ವತನ, ಸಹೋದರಿಯು-ತಂಗಿಯು, ಅಂದವು-ಸೊಗಸು, ಅಂತಿರಲಿ-ಹಾಗಿರಲಿ, ಶರಧಿತನುಜೆಯು-ಸಮುದ್ರನ ಮಗಳಾದಲಕ್ಷ್ಮಿಯ (೨) ಸೌಂದರಿಯುವನು-ಚೆಲುವನ್ನೂ, ಆ ಸರಸಿಜಾಕ್ಷಿಯು-ಆ ಕಮಲನೇತ್ರಿಯು, ಬಗೆಯ-ರೀತಿಯು, ಲೋಕದೊಳು-ಪ್ರಪಂಚದಲ್ಲಿ,

ಮರಸಿತು-ಮರೆವಹಾಗೆ ಮಾಡಿತು, ಎಂಬುದು-ಹೀಗೆಹೇಳುವುದು,ಬೇಸರವಿಲ್ಲ-ಜುಗುಪ್ಸೆಯಿಲ್ಲ, ಕೇಳ್-ಕೇಳು, ಎಂದ-ಎಂಬದಾಗಿಹೇಳಿದನು ॥

ತಾತ್ಪರ್ಯ:—ರತಿಯಸೌಂದರ್ಯವೂ, ಚಂದ್ರನಮಗಳ ಚೆಲುವಿಕೆಯೂ, ಮೇನಾದೇವಿಯ ಸೌಭಾಗ್ಯವೂ ಹಾಗಿರಲಿ, ಲಕ್ಷ್ಮೀದೇವಿಯ ಸೌಂದರ್ಯವನ್ನು ಕೂಡ ಆ ದಮಯಂತಿಯ ರೂಪವು ಮರೆವಹಾಗೆ ಮಾಡುತ್ತದೆ, ಎಂದು ಹೇಳುವ ಜನರಿಗೆ ಲೋಕದಲ್ಲಿ ಬೇಸರವೆಂಬುದೆಂದಿಗೂ ಉಂಟಾಗಲಾರದು. ॥೫॥

ಟಿಪ್ಪಣಿ:—(೧)(ದ್ಭ) ಚಂದಿರ, ಚಂದರ, ಚಂದುರ, (೨) ಸೌಂದರಿಯ-(ತ್ಸ) ಸೌಂದರ್ಯ. ॥೫॥

ಮೂ॥ ವಿಸುನಿಯೋಲೆ ಯಡಾಳಕದಪಿನೊ । ಳೆಸೆಯೆಮೇಲುದು
ಜಾರೆಕುಚಭರ । ವೆಸೆಯೆನಡುವಲ್ಲಾಡೆಮುಸಗಿದಮಂದಹಾಸದಲಿ॥
ಎಸೆವಸೋರ್ಮುಡಿಭಾರದಲಿಬಾ । ಗಿಸಿದಕೊರಳಿನಕೈಯ್ಯವೀಣೆ
ಯ।ಬಿಸರುಹಾಕ್ಷಿಯಸೊಬಗಬಣ್ಣಿಸಲಳವೆತನಗೆಂದ ॥೬॥

ಟೀಕೆ:—ವಿಸುನಿಯ-ಚಿನ್ನದ, ಓಲೆಯಡಾಳ-ಓಲೆಯಕಾಂತಿಯು, ಕದಪಿನೊಳ್-ಕೆನ್ನೆಯಲ್ಲಿ, ಎಸೆಯೆ-ಪ್ರಕಾಶಿಸಲು, ಮೇಲುದು-ಮೇಲ್ಸೆರಗು, ಜಾರೆ-ಒರೆಯಾಗಿ ಹೋಗಲು, ಕುಚಭರವು - ಸ್ತನಮಂಡಲವು, ಎಸೆಯೆ-ಪ್ರಕಾಶಿಸಲು, ನಡು-ಮಧ್ಯವು, ಅಲ್ಲಾಡೆ- ಚಲಿಸಲು, ಮುಸಗಿದ-ಹುಟ್ಟಿದ, ಮಂದಹಾಸದಲಿ-ಕಿರುನಗೆಯಿಂದ, ಎಸೆವ-ಹೊಳೆವ, (೧) ಸೋರ್ಮುಡಿ-ಉದ್ದವಾದ ಕೂದಲ ಗಂಟಿನ, ಭಾರದಲಿ-ಭಾರದಿಂದ, ಬಾಗಿಸಿದ-ಬಗ್ಗಿಹೋಗಿರುವ, ಕೊರಲಿನ-ಕೊರಲುಳ್ಳ, ಕೈಯ-ಕೈಯಲ್ಲಿರುವ, ವೀಣೆಯ-ವೀಣೆಯುಳ್ಳ, (೨) ಬಿಸರುಹಾಕ್ಷಿಯ-ಕಮಲನೇತ್ರೆಯ, ಸೊಬಗ-ಸೊಗಸನ್ನು, ತನಗೆ-ನನಗೆ, ಬಣ್ಣಿಸಲು-ವರ್ಣಿಸಲು, ಅಳವೆ-ಸಾಧ್ಯವಾದೀತೆ. ॥೬॥

ತಾತ್ಪರ್ಯ:—ಚಿನ್ನದೋಲೆಯ ಕಾಂತಿಯು ಕಪೋಲಮಂಡಲದಲ್ಲಿ ಪ್ರತಿಫಲಿಸಲು, ಸೆರಗು ಜಾರಿರಲು, ವಿಸ್ತಾರವಾದ ಕುಚಮಂಡಲದೊಡನೆ ಬಡನಡುವುಬಳುಕುತ್ತಿರಲು, ಕೇಶಪಾಶದ ಭಾರದಿಂದಲೋ ಎಂಬಂತೆ ಬಾಗಿದ ಕೊರಳಿನೊಡನೆ ಮಂದಹಾಸದಿಂದ ಶೋಭಿಸುತ್ತಿರುವ ಮುಖವುಳ್ಳವಳಾಗಿ ವೀಣೆಯನ್ನು ಬಾರಿಸುತ್ತಿರುವಾಗ ಆಕೆಯ ಸೌಂದರ್ಯವನ್ನು ವರ್ಣಿಸಲು ಯಾರಿಗೆ ಸಾಧ್ಯವು ? ॥೬॥

ಟಿಪ್ಪಣಿ:— (೧) ಸೋರುವ ಮುಡಿ–ಸೋರ್ಮುಡಿ (ಗಮಕ. ಸ) (೨) ಬಿಸ–ತಾವರೆಗಡ್ಡೆಯಲ್ಲಿ, ರುಹ–ಹುಟ್ಟಿದುದು (ಅವ) ಬಿಸರುಹದಂತೆ– (ಅಕ್ಷ) ಕಣ್ಣುಳ್ಳವಳು–ಬಿಸರುಹಾಕ್ಷಿ (ಬ. ವ್ರೀ) ಈ ಪದ್ಯದದಲ್ಲಿ ವೀಣೆಯನ್ನು ಬಾರಿಸುವಾಗ ಸ್ತ್ರೀಯ ಸ್ವಭಾವವನ್ನು ವರ್ಣಿಸಿರುವುದರಿಂದ ಕ್ರಿಯಾಸ್ವಭಾವಾಖ್ಯಾನ ಜಾತ್ಯಲಂಕಾರವು ||೬||

ಮೂ|| ಹೇಳುತಿರಲಾನುಡಿಗೆಮೆಚ್ಚುತ | ಕೇಳಿತಲೆದೂಗಿದನುನಿಷಧ
ವಿ|ಶಾಲನಯನಕೆಕಮಲಮುಖಿಗೋಚರಿಸಿದಂತಾಗೆ || ಬಾಲಕಿಗೆ
ಮೋಹಿಸುತಪುಷ್ಪಶ | ರಾಳಿಯುಲಿಮನನೊಂದುಶಿವಶಿವ | ಲೋಲ
ಲೋಚನೆಯೆಂತುತನಗಹಳೆನುತಚಿಂತಿಸುತ ||೭||

ಟೀಕೆ:— ಹೇಳುತಿರಲು–ಹೀಗೆಹೇಳಲು, ಆನುಡಿಗೆ–ಆಮಾತಿಗೆ, ಮೆಚ್ಚುತ –ಒಪ್ಪಿಕೊಳ್ಳುತ್ತ, ನಿಷಧ ವಿಶಾಲನಯನಕೆ, ನಿಷಧ–ನಳನ ವಿಶಾಲ–ವಿಸ್ತಾರವಾದ, ನಯನಕೆ–ಕಣ್ಣಿಗೆ, ಕಮಲಮುಖಿ–ದಮಯಂತಿಯು, ಗೋಚರಿಸಿದಂತೆ – ಕಾಣಬಂದಹಾಗೆ, ಆಗೆ–ಆಗಲು, ಬಾಲಕಿಗೆ–ಆಕನ್ಯೆಗೆ, ಮೋಹಿಸುತ–ಮೋಹಿಸಿ, ಪುಷ್ಪಶರಾಳಿಯುಲಿ–ಪುಷ್ಪ–ಹೂವಿನ, ಶರ–ಬಾಣಗಳ, (೧) ಆಳಿಯುಲಿ–ಸಾಲಿನಿಂದ, (೨) ಮನನೊಂದು – ವ್ಯಥೆಪಟ್ಟು, ಲೋಲಲೋಚನೆ–ಚಂಚಲನೇತ್ರಿಯು, ತನಗೆ–ನನಗೆ, ಎಂತು–ಹೇಗೆ, ಅಹಳು–ಆಗುವಳು, ಎನುತ–ಎಂಬದಾಗಿ, ಚಿಂತಿಸುತ–ಆಲೋಚಿಸುತ್ತಾ, (೩) ತಲೆದೂಗಿದನು – ತಲೆಯನಲ್ಲಾಡಿಸಿದನು. ||೭||

ತಾತ್ಪರ್ಯ:—ಈ ಪ್ರಕಾರವಾಗಿ ವರ್ಣಿಸುತ್ತಿರುವ ಬ್ರಾಹ್ಮಣರ ವಚನವನ್ನು ಕೇಳಿದಮಾತ್ರದಿಂದಲೇ ಆಕೆಯು ತನ್ನ ಕಣ್ಣೆದುರಿಗೆ ಬಂದು ನಿಂತಂತಾಗಲು, ಮೋಹಾವೇಶವುಳ್ಳವನಾಗಿ ಮದನಬಾಣಕ್ಕೆ ಗುರಿಯಾಗಿ ಆಹಾ ! ನನಗೆ ಆಕೆಯು ಹೇಗೆ ಪತ್ನಿಯಾದಾಳು ? ಎಂದು ಆಲೋಚಿಸಿ ಶಿರಃ ಕಂಪನಮಾಡುತ್ತಾ. ||೭||

ಟಿಪ್ಪಣಿ:— (೧) ಸಖಿ, ಸಾಲು, ಪ್ರತ್ಯಯ. (ನಾನಾ) (೨) ಮನದಿಂನೊಂದು–ಮನನೊಂದು (ಕ್ರಿ. ಸ) (೩) ತಲೆಯಂತೂಗು–ತಲೆದೂಗು (ಕ್ರಿ. ಸ) ದಕಾರಾದೇಶ. ||೭||

ಮೂ|| ವನಿತೆಗುಣಗಳನೊಂದನೊಂದನು | ಮನದೊಳೆಸವಿಮಾ
ಡಿತರುಚಿಯ | ನೆನೆದುಹೊಂಪುಳಿಯಾಗಿವಿರಹದಿಮದನಗೀಡಾಗಿ||

ಘನದಬೆಸನದೆಕಾಯಕುಂದಿದ । ಜನಪನಳನಿರೆಬೇಂಟೆಗಾರರ ।
ಜನನಿವಹದಿಂಬಂದರಾಸಮಯದಲಿವನಚರರು ॥೮॥

ಟೀಕೆ:—ವನಿತೆಗುಣಗಳಂ-ದಮಯಂತಿಯಗುಣಗಳನ್ನು, ಒಂದನೊಂದನು-ಪ್ರತಿಒಂದನ್ನೂ, ಮನದೊಳಗೆ – ಮನಸ್ಸಿನಲ್ಲಿ, ಸವಿಮಾಡಿ-ರುಚಿನೋಡಿ, ತರುಣಿಯ-ಕನ್ನೆಯನ್ನು, ನೆನೆದು-ಸ್ಮರಿಸಿಕೊಂಡು, ಪ್ರೊಂಪುಳಿಯಾಗಿ-ರೋಮಾಂಚನೆಯನ್ನು ಹೊಂದಿ, ವಿರಹದಿ- ವಿಯೋಗದಿಂದ, ಮದನಗೆ-ಮನ್ಮಥನಿಗೆ, ಈಡಾಗಿ-ಸ್ವಾಧೀನನಾಗಿ, ಘನದ-ಹೆಚ್ಚಾದ, ಬೆಸನದೆ-ವ್ಯಥೆಯಿಂದ, (೧) ಕಾಯಕುಂದಿದ-ದೇಹವುಕೃಶವಾದ, ಜನಪ, ನಳಂ-ನಳರಾಜನು, ಇರೆ-ಇರಲು, ಬೇಂಟೆಗಾರರ-ಬೇಟೆಯಾಡುವ, ಜನನಿವಹದಿಂ-ಜನರಗುಂಪಿನೊಡನೆ, ಆ ಸಮಯದಲಿ-ಆಕಾಲದಲ್ಲಿ, (೨) ವನಚರರು-ಬೇಡರು, ಬಂದರ್-ಬಂದರು. ॥೮॥

ತಾತ್ಪರ್ಯ:—ಆ ದಮಯಂತಿಯ ಗುಣಗಳ ನ್ನೊಂದೊಂದನ್ನಾಗಿ ನೆನೆದು, ರೋಮಾಂಚನವನ್ನು ಹೊಂದಿ ಮನ್ಮಥಬಾಧೆಯಿಂದ ಕರಗಿ ಕೃಶವಾದ ದೇಹವುಳ್ಳವನಾಗಿ ಉಪಾಯಾಂತರವನ್ನು ಹುಡುಕುತ್ತಾ ವ್ಯಥೆಪಡುತ್ತಿರಲು ಆಕಾಲಕ್ಕೆ ಸರಿಯಾಗಿ ಅಲ್ಲಿಗೆಬೇಟೆಗಾರರೊಡನೆ ಬಹುಮಂದಿ ಬೇಡರು ಬಂದುದನ್ನು ಕಂಡನು ॥೮॥

ಟಿಪ್ಪಣಿ: — (೧) ಕಾಯದಿಂಕುಂದಿದ-ಕಾಯಕುಂದಿದ (ಕ್ರಿ. ಸ) (೨) ವನದಲ್ಲಿ ಚರರು- ವನಚರರು (ಸ. ತ) ॥೮॥

ಮೂ॥ ತಂದುಫಲವಸ್ತುಗಳಕಾಣಿಕೆ । ಯಿಂದಕೈಮುಗಿದರಸಮೃ
ಗಘನ । ವಿಂದುಬೇಂಟೆಗೆಗಮಿಸಬೇಕೆನೆನೃಪತಿನಸುನಗುತ ॥
ಇಂದುವಿರಹವಕಳೆವ್ರೊಡಿದುಲೇ । ಸೆಂದುಶಬರರಕಳುಹಿವ್ರೋ
ಲಗ । ದಿಂದಲರಮನೆಗೈಯ್ದಲಸ್ತ್ರಾಂಬುಧಿಯೊಳಿನನಿಳಿದ ॥೯॥

ಟೀಕೆ:—ಫಲವಸ್ತುಗಳ-ಹಣ್ಣುಗಳನ್ನು, ತಂದು-ತೆಗೆದುಕೊಂಡು ಬಂದು, ಕಾಣಿಕೆಯಿಂದ-ಕಾಣಿಕೆಯಾಗಿಕೊಟ್ಟು, ಕೈಮುಗಿದು-ಕೈಜೋಡಿಸಿಕೊಂಲು, ಅರಸ-ದೊರೆಯೆ, ಇಂದು – ಈದಿನ, ಮೃಗಘನವು-ಬಹಳಮೃಗಗಳು ಹೆಚ್ಚಿವೆ, ಬೇಂಟೆಗೆ-ಬೇಟೆಗೆ, ಗಮಿಸಬೇಕು-ಬರಬೇಕು, ಎನೆ-ಎಂದುಹೇಳಲು, ನೃಪತಿ-ದೊರೆಯು, ನಸುನಗುತ-ಸ್ವಲ್ಪನಗುತ್ತಾ, ಇಂದು-ಈಗ, ವಿರಹವ-ವಿರಹವ್ಯಥೆಯನ್ನು, ಕಳೆವ್ರೊಡೆ-ಹೋಗಲಾಡಿಸಿಕೊಳ್ಳುವುದಕ್ಕೆ, ಇದು – ಬೇಟೆಗೆ ಹೋಗೋಣವು,

ಲೇಸು-ಒಳ್ಳೆಯದು, ಎಂದು, ಶಬರರ-ಬೇಡರನ್ನು, ಕಳುಹಿ-ಕಳುಹಿಸಿ ಓಲಗದಿಂದಲಿ-ಸಭೆಯಿಂದ, ಅರಮನೆಗೆ - ರಾಜಮಂದಿರಕ್ಕೆ, ಐದಲು-ಹೋಗಲು, (೧) ಇನಂ-ಸೂರ್ಯನು, (೨) ಅಸ್ತಾಂಬುಧಿಯೊಳ್-ಪಶ್ಚಿಮಸಮುದ್ರದಲ್ಲಿ, ಇಳಿದ-ಮುಳುಗಿದನು. ॥೯॥

ತಾತ್ಪರ್ಯ:—ಬೇಡರು ಕಾಡಿನಿಂದ ತಂದ ನಾನಾವಿಧ ಫಲಗಳನ್ನು ಕಾಣಿಕೆಯಾಗಿ ಒಪ್ಪಿಸಿ, ಜೀಯ್ಯಾ! ಈಗ ಕಾಡಿನಲ್ಲಿ ಬಹಳ ಮೃಗಗಳು ಕಾಡಿನಲ್ಲಿ ಬಹಳ ಮೃಗಗಳು ಸೇರಿ ತೊಂದರೆ ಪಡಿಸುತ್ತಿವೆ, ತಾವು ಬೇಟೆಗಾಗಿ ದಯಮಾಡಿಸಬೇಕೆಂದು ಬೇಡಿಕೊಳ್ಳಲು, ದೊರೆಯು ನಸುನಕ್ಕು, ದಮಯಂತಿಯ ವಿರಹವ್ಯಥೆಯಿಂದ ಸಂತಾಪವನ್ನು ಹೊಂದಿರುವ ಮನಸ್ಸಿನ ಬೇಸರವಂ ಕಳೆಯಲು ಇದು ಈಗ ಯುಕ್ತವಾದ ಕಾರ್ಯವೇಸರಿ ಎಂದು ಬಗೆದು ಬೇಡರನ್ನು ಕಳುಹಿಸಿ ತಾನು ಅರಮನೆಗೆ ಬರಲು ಅಷ್ಟರಲ್ಲಿ ಸೂರ್ಯನು ಅಸ್ತಂಗತನಾದನು. ॥೯॥

ಟಿಪ್ಪಣಿ:— (೧)ಇನ-ಸೂರ್ಯ, ಗಂಡ, (ನಾನಾ) (೨) ಅಸ್ತವೆಂಬ ಅಂಬುಧಿ-ಅಸ್ತಾಂಬುಧಿ (ಸಂ. ಪೂರ್ವ. ಕ) ॥೯॥

ಮೂ॥ ನಳಿನಸಖನುದಯದಲಿನಳನೃಪ । ತಿಲಕಕರಸಿದಸಕಲದಳವ
ನು । ಹೊಳೆವ ಖಡ್ಗಕಠಾರಿಮೊದಲಾದಖಿಳಕೈದುಗಳ ॥ ಬಲು
ಭಟರುಬೇಂಟೆಯಲಿನಾನಾ । ಬಲೆಗಳೆಂಟೆಳೆಕೋಲುಕಣ್ಣಿಯ । ಬ
ಲಭುಜರುಬಲವೆರಿಸಿಮೆರೆದುದುಪುರದಬಾಹ್ಯದಲಿ ॥೧೦॥

ಟೀಕೆ:—ನಳನೃಪತಿಲಕ-ರಾಜಶ್ರೇಷ್ಠನಾದ ನಳನು, (೧) ನಳಿನಸಖನ-ಸೂರ್ಯನ, ಉದಯದಲಿ-ಉದಯದಲ್ಲಿ, ಸಕಲದಳವನು-ಎಲ್ಲ ಸೈನ್ಯವನ್ನೂ, ಕರಸಿದನು-ಬರಮಾಡಿದನು, ಹೊಳೆವ - ಪ್ರಕಾಶಿಸುವ, ಖಡ್ಗ-ಕತ್ತಿ, ಕಠಾರಿ-ಬಾಕು, ಮೊದಲಾದ-ಮುಂತಾದ, ಅಖಿಳ-ಸಮಸ್ತವಾದ, ಕೈದುಗಳ-ಆಯುಧಗಳನ್ನೂ, ನಾನಾಬಲೆಗಳ-ಅನೇಕವಿಧದ ಬಲೆಗಳನ್ನೂ, ಎಂಟೆಳೆಕೋಲುಕಣ್ಣಿಯ-ಎಂಟುಎಳೆಗಳುಳ್ಳ ಕೋಲು ಕಲ್ಲಿ ಮತ್ತು ಕಣ್ಣಿಗಳನ್ನೂ, (ತೆಗೆದುಕೊಂಡು) ಬಲಭುಜರು-ಬಾಹುಪರಾಕ್ರಮವುಳ್ಳ, ಬೇಂಟೆಯಲಿ,-ಬೇಟೆಯಲ್ಲಿ, ಬಲುಭಟರು-ಬಹಳಶೂರರು, (೨) ಬಲವೆರಸಿ-ಸೇನೆಯೊಡನೆಸೇರಿ (೩) ಪುರದ-ಪಟ್ಟಣದ, ಬಾಹ್ಯದಲಿ-ಹೊರಗೆ, ಮೆರೆದುದು-ಪ್ರಕಾಶಿಸಿತು ॥೧೦॥

ತಾತ್ಪರ್ಯ:—ಆರಾತ್ರಿಕಳೆದು ಹೋದಕೂಡಲೆ ದೊರೆಯು ಮೃಗ

ದಬೇಟೆಗೆ ಹೊರಡಲು ಸೈನ್ಯವೆಲ್ಲವೂ ಆಯುಧ ಸಮೇತವಾಗಿ ಸಿದ್ಧವಾಗತಕ್ಕದ್ದೆಂದು ಆಜ್ಞೆ ಮಾಡಲು, ಎಲ್ಲರೂ ೩೦ ಬಗೆಯಾಯುಧಂಗಳಂ ಧರಿಸಿ, ಇಡುವಲೆ, ಅಂಟುವಲೆ, ಒಡ್ಡುವಲೆ, ಬೀಸುವಲೆ, ಮೊದಲಾದ ಬಲೆಗಳನ್ನು, ಹಗ್ಗಗಳನ್ನು, ಕಲ್ಲಿಗಳನ್ನು, ಇನ್ನೂ ಅನೇಕ ಸಾಮಗ್ರಿಗಳನ್ನೂ ಸಿದ್ಧಪಡಿಸಿ ಪುರ ಬಹಿರ್ಭಾಗದಲ್ಲಿ ಸೇರಿದರು. ॥೧೦॥

ಟಿಪ್ಪಣಿ:— (೧) ನಳಿನ-ಕಮಲಕ್ಕೆ, ಸಖ-ಮಿತ್ರನು (ಅವ) ನಳಿನಗಳಿಗೆ-ಸಖನು-ನಳಿನಸಖನು (ಷ. ತ) (೨) ಬಲದಿಂ ಬೆರಸಿ - ಬಲವೆರಸಿ (ಕಿಯಾ. ಸ) ಬಕಾರಕ್ಕೆ ವಕಾರಾದೇಶ, (೩) (ದ್ಭ) ಹುರ. ॥೧೦॥

ಮೂ॥ ಅರಸಕೇಳ್ಳಶಿಕುಲಶಿರೋಮಣಿ । ಧರಿಸಿದನುನವರತ್ನಮಯು
ದಾ । ಭರಣಗಳದಿವ್ಯಾಂಬರಾದಿಸುಗಂಧಲೇಪದಲಿ ॥ ತರಿಸುತೇರಿ
ದವಾಯುವೇಗದ। ತುರಗವನುಸಂದಣಿಸಿಮೋಹರ ತೆರಳಿತಗಣಿ
ತವಾದ್ಯದಲಿನೆಲಬಿರಿಯಲೈತಂದ　　　　॥೧೧॥

ಟೀಕೆ:—ಅರಸ-ಧರ್ಮರಾಜನೆ, ಕೇಳ್-ಕೇಳು, ಶಶಿಕುಲಶಿರೋಮಣಿ-ಚಂದ್ರವಂಶಕ್ಕೆ ಅಲಂಕಾರಪ್ರಾಯನಾದ ನಳನು, (೧) ನವರತ್ನಮಯುದ - ನವರತ್ನ ಖಚಿತವಾದ, ಆಭರಣಗಳ-ಒಡವೆಗಳನ್ನು, ದಿವ್ಯಾಂಬರ-ದಿವ್ಯವಸ್ತ್ರಗಳು, ಆದಿಮೊದಲಾದವುಗಳನ್ನೂ ಧರಿಸಿ, ಸುಗಂಧವನ್ನು ಹಚ್ಚಿಕೊಂಡು (೨) ವಾಯುವೇಗದ-ವಾಯುವೇಗವುಳ್ಳ, ತುರಗವನು-ಕುದುರೆಯನ್ನು, ತರಿಸುತ-ತರಿಸಿಕೊಂಡು, ಏರಿದ-ಹತ್ತಿದನು, ಮೋಹರ-ಸೈನ್ಯವು, ಸಂದಣಿಸಿ-ಗುಂಪಾಗಿ, ತೆರಳಿತು - ಹೊರಟಿತು, ವಾದ್ಯದಲಿ-ವಾದ್ಯಘೋಷದಿಂದ, ನೆಲ-ಭೂಮಿಯು, ಬಿರಿಯಲ್-ಒಡೆಯಲು, ಐತಂದ-ಬಂದನು ॥೧೧॥

ತಾತ್ಪರ್ಯ:—ಆಗ ನಳನು ಗಂಧಮಾಲ್ಯಾಂಬರಾ ಭರಣಾದಿಂದ ದೇಹವನ್ನಲಂಕರಿಸಿಕೊಂಡು, ವಾಯುವೇಗವುಳ್ಳ ಉತ್ತಮಾಶ್ವವನ್ನು ತರಿಸಿ ಅದನ್ನೇರಿ, ಗುಂಪುಗುಂಪಾಗಿ ಸೈನ್ಯವು ತೆರಳುತ್ತಿರಲು, ವಾದ್ಯಗಳರಭಸಕ್ಕೆ ನೆಲವು ಒಡೆಯುತ್ತಿರಲು, ಬಹಳ ಸಂಭ್ರಮದೊಡನೆ ಹೊರಟನು. ॥೧೧॥

ಟಿಪ್ಪಣಿ: — (೧) ನವರತ್ನ, (ಸ. ದ್ವಿ. ಗು) ವಜ್ರ, ವೈಡೂರ್ಯ, ಗೋಮೇಧಕ, ಇಂದ್ರನೀಲ, ಮರಕತ, ಪುಷ್ಯರಾಗ, ಮಾಣಿಕ್ಯ,

ಪ್ರವಾಳ, ಮೌಕ್ತಿಕ, ಇವು, ೯ ರತ್ನಗಳು.(೨) ವಾಯುವಿನಂತೆ ವೇಗವುಳ್ಳದ್ದು ಯಾವುದೋ ಅದು-ವಾಯುವೇಗ (ಬ, ವ್ರೀ)॥೧೧॥

ಮೂ॥ ಏನಹೇಳುವೆನರಸಹೊಕ್ಕರು। ಕಾನನವಬಳಸಿದರುಮೃಗತತಿ
ಯಾನಲಾಪುದೆತೆಗೆದುಹಾಯ್ದುದುಭಟರಘಲ್ಲಣೆಗೆ ॥ಆನೆಗಳಕೆಡಹಿ
ದರುಬಲುಸಂ। ಧಾನದಲಿಹುಲಿಕರಡಿಮುಸುವೊಲ। ವಾನರಾದಿಸ
ಮಸ್ತಮೃಗಗಳತರುಬಿಕೆಡಹಿದರು ॥೧೨॥

ಟೀಕೆ:—ಅರಸ-ದೊರೆಯೇ, ಏನ-ಏನನ್ನು, ಹೇಳುವೆಂ-ಹೇಳಲಿ, ಕಾನನವ-ಅರಣ್ಯವನ್ನು, ಹೊಕ್ಕರು-ಪ್ರವೇಶಿಸಿದರು (೧) ಮೃಗತತಿಯು-ಮೃಗಗಳಗುಂಪನ್ನೂ, ಬಳಸಿದರು-ಮುತ್ತಿದರು, ಆನಲ್- ತಡೆಯಲು, ಆಪುದೆ-ಆದೀತೇ, ಭಟರ-ಸೈನಿಕರ, ಘಲ್ಲಣೆಗೆ-ಆರ್ಭಟಕ್ಕೆ, ತೆಗೆದುಹಾಯ್ದುದು-ಚದರಿ ಓಡಿತು, ಬಲುಸಂಧಾನದಲಿ-ಬಹಳಸಾಹಸದಿಂದ, ಆನೆಗಳ-ಆನೆಗಳನ್ನು, ಕೆಡಹಿದರು, ಹಳ್ಳದಲ್ಲಿಕೆಡವಿದರು, ಹುಲಿ, ಕರಡಿ, ಮುಸು, ವೊಲ, ವಾನರ, ಇವೇ, ಆದಿ-ಮೊದಲಾದ, ಸಮಸ್ತಮೃಗಗಳ-ಎಲ್ಲಮೃಗಗಳನ್ನೂ, ತರುಬಿ-ಬೆನ್ನಟ್ಟಿಹೋಗಿ, ಕೆಡಹಿದರು-ಕೆಡವಿದರು. ॥೧೨॥

ತಾತ್ಪರ್ಯ:—ಅರಣ್ಯವನ್ನು ಹೊಕ್ಕು ಅಲ್ಲಿದ್ದ ದುಷ್ಟಮೃಗಗಳನ್ನು ಸೈನ್ಯದವರು ಬಳಸಿ ಆರ್ಭಟಿಸುತ್ತಿರಲು ಮೃಗಗಳೆಲ್ಲವೂ ಬೆದರಿ ಪ್ರಾಣಭಯದಿಂದ ದಿಕ್ಕು ದಿಕ್ಕಿಗೆ ಚೆಲ್ಲಾಪಿಲ್ಲಿಯಾಗಿ ಓಡಲಾರಂಭಿಸಿದವು. ಕಾಡಾನೆಗಳನ್ನು ಬಹುಸಂಧಾನದಿಂ ಕಪ್ಪಕ್ಕೆ ಕೆಡಹಿದರು, ಹುಲಿ, ಕರಡಿ, ವೊಲ, ಮೊದಲಾದವುಗಳ ಹಿಂದಟ್ಟಿಹೋಗಿ ಹೊಡೆದು ನೆಲಕ್ಕೆ ಕೆಡವಿದರು. ॥೧೨॥

ಟಿಪ್ಪಣಿ:— (೧) ಮೃಗಕ್ಕೆ (ದ್ಭ) ಮಿಗ, ಮೃಗಗಳತತಿ, ಮೃಗತತಿ (ಷ-ತ) ॥೧೨॥

ಮೂ॥ ಹತ್ತಿತಲ್ಲಿಹಗಿರಿಶಿಖರತರು। ಮೊತ್ತದಲಿಬಲೆಗಳನುಹಾಯ್ಕಿ
ದ। ರೊತ್ತಿಸೂಸಿದರೊಂದುಘನಮೃಗಸಿಂಹವಬ್ಬರಿಸೆ ॥ ಹೊತ್ತ
ಕೋಪದಿಸೈನ್ಯವನುಮುರಿ। ದೊತ್ತಿಬರುತಿರೆಕಂಡುನೃಪಬೆಂ।
ಬತ್ತಿಕಡಿದನು ಮೃಗಪತಿಯುಬನವೆಲ್ಲನುಗ್ಗಾಗೆ ॥೧೩॥

ಟೀಕೆ:- ಗಿರಿಶಿಖರ ತರುಮೊತ್ತದಲಿ-ಬೆಟ್ಟದ ಕೋಡಗಳಲ್ಲಿಯೂ, ಗಿಡಗಳ ಗುಂಪಿನಲ್ಲಿಯೂ, ಬಲೆಗಳನು-ಬಲೆಗಳನ್ನು, ಹಾಯ್ಕಿದರು

ಬೀಸಿದರು, ಅಲ್ಲಿ-ಆಸ್ಥಳದಲ್ಲಿ, ಹತ್ತಿತು, ಒತ್ತಿ-ತರುಬಿ, ಸೂಸಿದರು ಓಡಿಸಿದರು, (೧) ಒಂದು ಘನಮೃಗ ಸಿಂಹವು-ಒಂದು ದೊಡ್ಡದಾದ ಸಿಂಹವು, ಅಬ್ಬರಿಸೆ-ಆರ್ಭಟಿಸಲು, ಹೊತ್ತ-ಹೆಚ್ಚಾದ, ಕೋಪದಿ-ಕೋಪದಿಂದ, ಸೈನ್ಯವನು-ಸೇನೆಯನ್ನು, ಮುರಿದು-ತಿರುಗಿಕೊಂಡು ಒತ್ತಿ-ಮೇಲೆಬಿದ್ದು, ಬರುತಿರೆ-ಬಲುತ್ತಿರಲು, ನೃಪ-ದೊರೆಯು, ಕಂಡು-ನೋಡಿ, (೨) ಬೆಂಬತ್ತಿ-ಹಿಂದಟ್ಟಿಹೋಗಿ, ಬನವೆಲ್ಲ-ವನವೆಲ್ಲವೂ ನುಗ್ಗಾಗೆ-ನೆಗ್ಗಿಹೋಗಲು, ಮೃಗಪತಿಯು-ಸಿಂಹವನ್ನು, ಕಡಿದನು-ಕೊಂದನು ॥೧೩॥

ತಾತ್ಪರ್ಯ:- ಪರ್ವತ ಶಿಖರಗಳಿಗೂ ದೊಡ್ಡದೊಡ್ಡ ಮರಗಳಿಗೂ ಬಲೆಯನ್ನೊಡ್ಡಿ, ಮೃಗಗಳನ್ನೆಲ್ಲಾ ಚೆದರಿಸಿ ಓಡಿಸಲು, ಅವುಗಳಲ್ಲೊಂದು ಸಿಂಹವು ರೇಗಿ ಎದುರುಬಿದ್ದು ಸೈನ್ಯದಮೇಲೆ ಬೀಳುವುದಕ್ಕೆ ಬರಲು ಅದನ್ನು ಕಂಡು ದೊರೆಯು ಬೆನ್ನಟ್ಟಿ, ಅದನ್ನು ಹೊಡೆದುಕೊಂದನು ॥೧೩॥

ಟಿಪ್ಪಣಿ:- (೧) ಘನವಾದ ಮೃಗ-ಘನಮೃಗ (ವಿ. ಪೂರ್ವ. ಕ) ಘನಮೃಗವಾದ ಸಿಂಹ (ವಿ. ಪೂರ್ವ. ಕ) ಒಂದು ಘನಮೃಗ ಸಿಂಹ (ದ್ವಿಗು) ಸಿಂಹಕ್ಕೆ (ದ್ಭ) ಸಿಂಗ (೨) ಬೆನ್ನಂಪತ್ತಿ ಬೆಂಬತ್ತಿ (ಕ್ರಿ.) ಪಕಾರಕ್ಕೆ ಬಕಾರಾದೇಶ ಸಂಧಿ ॥೧೩॥

ಮೂ॥ ನಿಲಿಸಿಬೇಂಟೆಯನಲ್ಲಿಬಳಲಿದ। ಬಲಸಮೇತದಿಬಂದುತತ್ಪುರ।
ವಳಯದುದ್ಯಾನವನುಹೊಕ್ಕನುಬಲಿದವಿರಹದಲಿ ॥ ನಲವುಹಿಂಗಿ
ದಮನದದುಗುಡದೊ । ಳಿಳಿದುಕೊಳದಲಿಜಾನುಜಂಘೆಯ।ತೊಳೆ
ದುಪರಿವೃತನಾಗಿತಿರುಗಿದನಂದುವನದೊಳಗೆ ॥೧೪॥

ಟೀಕೆ:- ಬೇಂಟೆಯ-ಬೇಟೆಯನ್ನು, ನಿಲಿಸಿ-ಅಲ್ಲಿ-ಆಸ್ಥಳದಲ್ಲಿ, ಬಳಲಿದ-ಆಯಾಸಹೊಂದಿದ, ಬಲಸಮೇತದಿ-ಸೇನೆಯೊಡನೆ, ಬಂದು-ಹೊರಟು, ತತ್ಪುರ ವಳಯದ-ಆಪಟ್ಟದ ಸುತ್ತಲೂಇರುವ, ಉದ್ಯಾನವನು-ಉಪವನವನ್ನು, ಬಲಿದ-ಹೆಚ್ಚಾದ, ವಿರಹದಲ್ಲಿ-ವಿರಹವೇದನೆಯಿಂದ, ಹೊಕ್ಕನು-ಪ್ರವೇಶಿಸಿದನು. ನಲವು-ಸಂತೋಷವು, ಹಿಂಗಿದ-ಕಡಿಮೆಯಾದ, ಮನದ-ಮನಸ್ಸಿನ, ದುಗುಡದೊಳ್-ದುಃಖದಿಂದ, ಕೊಳದಲಿ-ಕೊಳಕ್ಕೆ, ಇಳಿದು-ಇಳಿದು, (೧) ಜಾನುಜಂಘೆಯ-ಮೊಳಕಾಲು ಕಣಕಾಲುಗಳನ್ನು, ತೊಳೆದು-ತೊಳೆದುಕೊಂಡು, ಅಂದು-

ಆಗ (೨) ವನದೊಳಗೆ-ಕಾಡಿನಲ್ಲಿ, ಪರಿವೃತನಾಗಿ-ಸುತ್ತಲೂ ಸುತ್ತುತ್ತಾ, ತಿರುಗಿದನು-ಸಂಚರಿಸಿದನು ||೧೪||

ತಾತ್ಪರ್ಯ:- ಬೇಟೆಯಲ್ಲಿ ಸೇನೆಯೆಲ್ಲವೂ ಬಹಳ ಆಯಾಸಪಟ್ಟಿರುವುದನ್ನು ನೋಡಿ, ಬೇಟೆಯನ್ನು ನಿಲ್ಲಿಸಿ ಆ ಪಟ್ಟಣದ ಹೊರಭಾಗದಲ್ಲಿರುವ ಉದ್ಯಾನವನ್ನು ಹೊಕ್ಕು ವಿರಹವ್ಯಥೆಯನ್ನು ತಾಳಲಾರದೆ, ಉತ್ಸಾಹ ಹೀನನಾಗಿಅಲ್ಲಿ ಒಂದು ದಿವ್ಯವಾದ ಸರೋವರವನ್ನು ಕಂಡು ಅವರಲ್ಲಿಳಿದು ಪಾದಪ್ರಕ್ಷಾಳನೆಮಾಡಿಕೊಂಡು ಆವನದಲ್ಲೆಲ್ಲಾ ಸುತ್ತಾಡುತ್ತಿದ್ದನು ||೧೪||

ಟಿಪ್ಪಣಿ:- (೧) ಜಾನುವೂಜಂಘೆಯೂ-ಜಾನುಜಂಘೆ (ಸ. ದ್ವಂದ್ವ) ಪ್ರಾಣಿಯ ಅಂಗವಾದುದರಿಂದ ಏಕವಚನಾಂತವಾಗಿದೆ. (೨) ವನಕ್ಕೆ (ದ್ಭ) ಬನ ||೧೪||

ವೃ|| ಆಕೊಳನತೀರದಲಿತರುಗಳ | ನೇಕವದರೊಳಗೊಂದುಠಾವಿ
ನೊ | ಳೇಕವೃಕ್ಷದನೆರಳಿನಲಿನವಕುಸುಮದಿಕ್ಕೆಯಲಿ || ಆಕಮ
ಲಜನತುರಗನಿದ್ರಾವ್ಯಾ | ಕುಲದಿಮಲಗಿರಲುಕಂಡದಿ | ವಾಕ
ರೋನ್ನತಶುಭ್ರತೇಜದರಾಜಹಂಸೆಯನು ||೧೫||

ಟೀಕೆ:— ಆಕೊಳನ-ಆ ಕೊಳದ, ತೀರದಲಿ-ದಡದಲ್ಲಿ, ತರುಗಳ್-ಮರಗಳು, ಅನೇಕವು - ಬಹಳವಾಗಿದ್ದುವು, ಅದರೊಳಗೆ- ಅವುಗಳಲ್ಲಿ, ಒಂದು ಠಾವಿನೊಳ್ -ಒಂದು ಸ್ಥಳದಲ್ಲಿರುವ, (೧) ಏಕವೃಕ್ಷದ-ಒಂದುಮರದ, ನೆರಳಿನಲಿ-ನೆಳಲಿನಲ್ಲಿ, ನವ-ಹೊಸದಾಗಿ ಅರಲಿದ್ದ, ಕುಸುಮದ-ಹೂವಿನ, ಇಕ್ಕೆಯಲಿ-ಪ್ರದೇಶದಲ್ಲಿ, (೨) ಆಕಮಲಜ - ಬ್ರಹ್ಮನ, ತುರಗ-ವಾಹನವಾದಹಂಸೆಯು, ನಿದ್ರಾ-ನಿದ್ದೆಯ, ವ್ಯಾಕುಲದಿ-ಆತುರದಿಂದ, ಮಲಗಿರಲು-ಮಲಗಿರಲು, (೩) ದಿವಾಕರ-ಸೂರ್ಯನ, ಉನ್ನತ-ಹೆಚ್ಚಾದ, ಶುಭ್ರ - ಬೆಳ್ಳಗಿರುವ, ತೇಜದಲಿ- ಕಾಂತಿಯಿಂದ (ಹೊಳೆವ) (೪)ರಾಜಹಂಸೆಯನ್ನು-ಶ್ರೇಷ್ಠವಾದಹಂಸವನ್ನು, ಕಂಡಂ-ನೋಡಿದನು. ||೧೫||

ತಾತ್ಪರ್ಯ:—ಆ ಸರೋವರದ ದಡದಲ್ಲಿ ಅನೇಕವೃಕ್ಷಗಳು ಇದವು, ಅವುಗಳಲ್ಲಿ ಒಂದು ಸ್ಥಳದಲ್ಲಿ, ಹೂಗಳಿಂದ ಕೂಡಿ ಶೋಭಿಸುತ್ತಿರುವ ಒಂದಾನೊಂದು ವೃಕ್ಷದಕೆಳಗೆ ಸೂರ್ಯನಂತೆ ಹೊಳೆಯುತ್ತಿದ್ದ ಬ್ರಹ್ಮನ ವಾಹನವಾದ ಹಂಸಪಕ್ಷಿಯು ಮಲಗಿ ನಿದ್ರಿಸುತ್ತಿತ್ತು.||೧೫||

ಟಿಪ್ಪಣಿ:— (೧) ಏಕವಾದವೃಕ್ಷ-ಏಕವೃಕ್ಷ, (ದ್ವಿಗು) (೨) ಅವನು-ಕಮಲಜ-ಆಕಮಲಜ (ಗಮಕ) ಕಮಲ-ತಾವರೆಯಲ್ಲಿ, ಜ-ಹುಟ್ಟಿದವನು, (ಅವ) (೪) ಹಂಸಗಳಿಗೆ ರಾಜ-ರಾಜಹಂಸ(ಷ. ತ) ಸಂಸ್ಕೃತವ್ಯಾಕರಣದಲ್ಲಿ, ರಾಜದಂತ, ಮೊದಲಾದ ಪದಗಳಿಗೆ ಪೂರ್ವಶಬ್ದಕ್ಕೆ ಪರ, ನಿಪಾತಕವು ಬರುವುದೆಂದುಗೊತ್ತುಮಾಡಿ ಸಮಾಸಪ್ರಕರಣದಲ್ಲಿ ಒಂದುಗಣವನ್ನು ಮಾಡಿದ್ದಾರೆ, ಆಗಣದಲ್ಲಿ ಸೇರಿರುವುದರಿಂದ ಇಲ್ಲಿಯೂ, ಪೂರ್ವಶಬ್ದವಾದ ಹಂಸ, ಶಬ್ದಕ್ಕೆ ಪರನಿಪಾತವು ಬಂದಿದೆ. ॥೧೫॥

ಮೂ॥ ಅರುಣಮಯದಾನನದಪದಯುಗ । ಗರಿಗಳುನ್ನತಪವಳದೇ
ಹದ । ಪರಮತೇಜದೊಳೆಸೆವಪಕ್ಷಿಯಕಂಡುಬೆರಗಾಗಿ ॥ ಹರನು
ತಾನೇಬಲ್ಲನೆನುತ । ಕ್ಕರದಿಮೆಲ್ಲನೆ ಕರವನೀಡುತಪಿಡಿದಹಂಸೆ
ಯನು॥೧೬॥　037396

ಟೀಕೆ:—ಅರುಣಮಯದ-ಕೆಂಪಗಿರುವ, ಆನನದ-ಮುಖವುಳ್ಳ, ಪದಯುಗ-ಎರಡುಕಾಲುಗಳು, ಗರಿಗಳುಳ್ಳ, ಪವಳದೇಹದ-ಹವಳದ ಬಣ್ಣವುಳ್ಳ ಮೈಯುಳ್ಳ, ಪರಮತೇಜದೊಳ್ - ಹೆಚ್ಚಾದಕಾಂತಿಯಿಂದ, ಎಸೆವ-ಪ್ರಕಾಶಿಸುವ, (೧) ಪಕ್ಷಿಯ-ಹಕ್ಕಿಯನ್ನು, ಕಂಡು-ನೋಡಿ, ಬೆರಗಾಗಿ-ಆಶ್ಚರ್ಯಪಟ್ಟು, ಹರಹರಾ-ಶಿವಶಿವಾ, ಇದರ - ಈ ಪಕ್ಷಿಯ, ಆಮಿತವ-ವಿಚಾರವನ್ನೂ, ಮುರಹರನು-ವಿಷ್ಣುವು, ತಾನೇ-ಅವನೇ, ಬಲ್ಲಂ-ತಿಳಿದವನು, ಎನುತ-ಎಂಬದಾಗಿ, ಅಕ್ಕರದಿ-ಪ್ರೀತಿಯಿಂದ, ಮೆಲ್ಲನೆ-ಮೆತ್ತಗೆ, ಕರವ-ಕೈಯನ್ನು,ನೀಡುತ-ಚಾಚುತ್ತ, (೨) ಹಂಸೆಯ-ಹಂಸವನ್ನು, ಪಿಡಿದ-ಹಿಡಿದು ಕೊಂಡನು. ॥೧೬॥

ತಾತ್ಪರ್ಯ:—ಕೆಂಪಾಗಿರುವ ಮುಖವೂ, ಹವಳದಂತೆ ಹೊಳೆಯುತ್ತಿರುವ ದೇಹವೂ, ಬೆಳ್ಳಗೆಕಾಣಬರುವಪಕ್ಕೆಯೂ ಉಳ್ಳ ಸುಂದರವಾಗಿರುವ ಆ ಹಂಸವನ್ನು ನೋಡಿ ಬಹಳ ಆಶ್ಚರ್ಯಪಟ್ಟು ಆಹಾ! ಇದರ ಮಹಿಮೆಯನ್ನು ದೇವರೇ ಬಲ್ಲನೆಂದು ಬಹಳ ಪ್ರೀತಿಯುಕ್ತನಾಗಿ ಮೆಲ್ಲಗೆ ತನ್ನ ಕೈಯನ್ನು ನೀಡಿ ಅದನ್ನು ಹಿಡಿದು ಕೊಂಡನು. ॥೧೬॥

ಟಿಪ್ಪಣಿ:— (೧) ಪಕ್ಷವುಳ್ಳದ್ದು (ರಕ್ಕೆಯುಳ್ಳದ್ದು) ಪಕ್ಷಿ (ಅ. ವ) (ದ್ಭ)-ಪಕ್ಕಿ, (೨) ಸಂಸ್ಕೃತದ ಅಕಾರಾಂತಶಬ್ದವಾದ ,ಹಂಸ,ಎಂಬುದು ಕನ್ನಡದಲ್ಲಿ ಎಕಾರಾಂತವಾಗಿದೆ. (ದ್ಭ) ಅಂಚೆ ॥೬೧॥

ಮೂ॥ ಒದರಿಕುಣಿಯುಲುಹಸ್ತದೊಳಗದ । ಕದಲದಂದದಿಪಿಡಿಯಲ
ರಸನ । ವದನಕಮಲವನೋಡಿಹೆದರಿತುಬಹಳಭೀತಿಯಲಿ ॥ ಹೃ
ದಯುಕರಗುವಮಾತನೆಂದುದು । ಮದಕರಿಗೆ ನೊರಜಂತರವೆಕೈ
ಸದರದವರನುಕೊಲುವುದುಚಿತವೆಯೆಂದುದ ಪಕ್ಷಿ ॥೧೭॥

ಟೀಕೆ:—ಒದರಿ-ಕೊಡವಿಕೊಂಡು, ಕುಣಿಯುಲು-ನರ್ತಿಸುತ್ತಿರ ಲು, ಅದ-ಆಹಂಸವನ್ನು, (೧) ಹಸ್ತದೊಳಗೆ- ಕೈಯಿಂದ, ಕದಲ ದಂದದಿ-ಅಲ್ಲಾಡದಹಾಗೆ, ಪಿಡಿಯುಲ್-ಹಿಡಿದುಕೊಳ್ಳಲು, ಅರಸನ-ದೊ ರೆಯು, (೨) ವದನಕಮಲವ-ಮುಖಕಮಲವನ್ನು, ನೋಡಿ – ಕಂಡು, ಬಹಳಭೀತಿಯುಲಿ – ಬಹುಭಯುದಿಂದ, ಹೆದರಿತು – ಅಂಜಿಕೊಂಡಿತು, (೩) ಹೃದಯು-ಮನಸ್ಸು, ಕರಗುವ-ಮರುಗುವ, ಮಾತಂ-ಮಾತನ್ನು, ಎಂದುದು-ಹೇಳಿತು. ಆಪಕ್ಷಿ-ಹಂಸನು, ಮದಕರಿಗೆ-ಮದಿಸಿದಆನೆಗೆ, ನೊರಜು-ಪುಡಿಕಲ್ಲು, ಅಂತರವೆ-ತಡೆಯುಬಲ್ಲದೆ, ಕೈಸದರದವರನು-ಕೈಗೆ ಸಿಕ್ಕಿದವರನ್ನು, ಕೊಲುವುದು-ಸಂಹರಿಸುವುದು, ಉಚಿತವೇ - ಯೋಗ್ಯವಾದುದೇ, ಎಂದುದು-ಎಂದುಕೇಳಿತು. ॥೧೭॥

ತಾತ್ಪರ್ಯ:— ಹಂಸವು ನಿದ್ರಿಸುತ್ತಿದ್ದುದರಿಂದ ಈ ವಿಷಯುವ ನ್ನು ತಿಳಿಯುದೆ ತನಗೇನೋ ತೊಂದರೆ ಯುಂಟಾಯಿತ್ತೆಂದು ತಿಳಿದು ತಪ್ಪಿಸಿಕೊಳ್ಳಬೇಕೆಂದು ಒದರಿಕೊಂಡು ಕುಣಿಯುತ್ತಿತ್ತು-ಆಗಲೂ ಅ ದನ್ನು ಬಿಡದೆ ಪ್ರೇಮದಿಂದ ಕೈಯಲ್ಲಿ ಗಟ್ಟಿಯಾಗಿ ಹಿಡಿದುಕೊಳ್ಳಲು, ನಳನ ಮುಖವನ್ನು ನೋಡಿ ಹೆದರಿಕೊಂಡು ತನ್ನನ್ನೇನು ಮಾಡುವ ನೊ ಎಂದು ಅವನಮನಸ್ಸನ್ನು ಕರಗಿಸಬೇಕೆಂದು ಅಯ್ಯೋ ಮದವನ್ನು ಹೊಂದಿದ ಆನೆಗೆ ನೊರಜುಕಲ್ಲು ಲಕ್ಷ್ಯವೇ ! ಕೈಗೆ ಸಿಕ್ಕಿದ ಅಲ್ಪ ಜಂತುವನ್ನು ಕೊಲ್ಲುವುದು ನ್ಯಾಯುವೇ ಎಂದಿತು. ॥೧೭॥

ಟಿಪ್ಪಣಿ:—(೧)(ದ್ಯ) ಹತ್ತ, (೨) ಕಮಲದಂತಿರುವವದನ- ವ ದನಕಮಲ (ಉ. ಉ. ಕರ್ಮ. ಸ) (೩)(ದ್ಯ) ಎರ್ದೆ. ಎದೆ. ॥೧೭॥

ಮೂ॥ ಕರಿಗಳನುಮುರಿದಿಡುವಸಿಂಹಕೆ । ನರಿಗಳಿದಿರೇತಾನುನಿಮ
ಗಂ । ತರವೆಸಾಕಂತಿರಲಿಕಂಡವರೆಲ್ಲನಗದಿಹರೆ ॥ ಅರಿಭಯಂಕರ
ಶತ್ರುಗಳಸಂಹರಿಸುವದುನೃಪನೀತಿನಿಮಗಿದು। ತರವೆಬಿಡುವರಹಿಂ
ಸೆದೋಷವಿದೆಂದುದಾಪಕ್ಷಿ॥೧೮॥

ಟೀಕೆ:—ಆಪಕ್ಷಿ-ಹಂಸೆಯು, ಕರಿಗಳನು-ಆನೆಗಳನ್ನು, ಮುರಿ

ದಿಡುವ-ಮುರಿದುಹಾಕುವ, ಸಿಂಹಕೆ-ಸಿಂಹಕ್ಕೆ, ನರಿಗಳ್-ನರಿಗಳು, ಇದಿರೇ-ತಡೆಯುವುದೇ, ತಾನು-ನಾನು, ನಿಮಗೆ, ಅಂತರವೆ-ಆಡವೆ, ಅದು-ಆವಿಷಯವು, ಸಾಕು-ಸಾಕು, ಅಂತಿರಲಿ-ಹಾಗಿರಲಿ, ಕಂಡವರೆಲ್ಲ-ನೋಡಿದವರೆಲ್ಲರೂ, ನಗದಿಹರೆ-ಹಾಸ್ಯಮಾಡದಿರುವರೇ ! ಅರಿಭಯಂಕರ-ಶತ್ರುಗಳಿಗೆಭಯವನ್ನುಂಟುಮಾಡತಕ್ಕವನೇ ! ಶತ್ರುಗಳ-ವೈರಿಗಳನ್ನು, ಸಂಹರಿಸುವುದು-ಕೊಲ್ಲುವುದು, (೧) ನೃಪನೀತಿ - ರಾಜನೀತಿಯು, ನಿನಗೆ - ನಿನಗೆ, ಇದು, ತರವೆ- ಯೋಗ್ಯವಾದದ್ದೇ, ಬಿಡು-ಬಿಟ್ಟುಬಿಡು (೨) ಪರಹಿಂಸೆ-ಇತರರನ್ನು ನೋಯಿಸುವ, ಇದು-ಈ ಕಾರ್ಯವು, ದೋಷವು-ತಪ್ಪು (ಎಂಬದಾಗಿ) ಆಪಕ್ಷಿ-ಹಂಸವು, ಎಂದುದು-ಹೇಳಿತು ||೧೪||

ತಾತ್ಪರ್ಯ:—ಮತ್ತು ಆನೆಗಳನ್ನು ಲಕ್ಷ್ಯವಿಲ್ಲದೆ ಮುರಿದುಹಾಕುವ ಸಿಂಹಕ್ಕೆ ನರಿಯು ಈಡೇ ! ಹಾಗೆಯೇ ನಿನ್ನ ಕೈಗೆ ನಾನು ಇದಿರೇ ಅದು ಹೇಗಾದರೂ ಇರಲಿ, ಇದನ್ನು ನೋಡಿದವರು, ಹಾಸ್ಯಮಾಡಿ ನಗದಿರುವರೇ ! ಶತ್ರುಗಳನ್ನು ಕೊಲ್ಲುವುದು ರಾಜಧರ್ಮವಲ್ಲದೆ ಕೈಗೆ ಸಿಕಿದವನನ್ನು ಕೊಲ್ಲುವುದು ಯುಕ್ತವೇ! ಇದರಿಂದ ಪಾಪಸಂಘಟನೆಯಾಗುವುದಲ್ಲದೆ ಫಲವಿಲ್ಲ, ಎಂದು ಹೇಳಿತು. ||೧೪||

ಟಿಪ್ಪಣಿ:— (೧) ನೃಪರನೀತಿ-ನೃಪನೀತಿ (ಷ. ತ.) (೨) ಪರರ ಹಿಂಸೆ-ಪರಹಿಂಸೆ (ಷ. ತ.) ||೧೪||

ಮೂ|| ಬಡಬಗೌತಣವಿಕ್ಕುವಂದೊರ್ಕುಡಿತೆಹಾಲೇ | ಮಂಜುಸುರಿ
ಯಲ್ಕೊಡನೆಕೆರೆತುಂಬುದೆನೃಪನೀನೆನ್ನ ಭುಂಜಿಸಲು|| ಒಡಲಿಗಾ
ಪ್ಯಾಯನವೆಕೇಳೆಲೆ | ಪ್ರೊಡವಿಪತಿಬಿಡುನನ್ನ ಮನೆಯಲಿ | ಮಡದಿ
ಮಕ್ಕಳಗೋಳನೋಡೆಂದೊರಲಿತಾಪಕ್ಷಿ||೧೫||

ಟೀಕೆ:—ಬಡಬಗೆ-ಅಗ್ನಿಗೆ, ಔತಣವ-ಭೋಜನವನ್ನು, ಇಕ್ಕುವಂದು-ಮಾಡಿಸಬೇಕಾದರೆ, (೧) ಒರ್ಕುಡಿತೆ ಹಾಲೇ - ಒಂದುಸೇರೆ ಹಾಲು ಸಾಕಾಗುವುದೇ ! ಮಂಜು-ಹಿಮವು, ಸುರಿಯಲ್ಕೊಡನೆ-ಸುರಿದ ಮಾತ್ರಕ್ಕೆ. ಕೆರೆ-ಕೆರೆಯು, ತುಂಬುವುದೆ-ತುಂಬಿಕೊಳ್ಳುವುದೆ, ನೃಪ-ದೊರೆಯೆ, ಕೇಳ್-ಕೇಳು, ನೀಂ-ನೀನು, ಎನ್ನ-ನನ್ನನ್ನು, ಭುಂಜಿಸಲು-ತಿಂದರೆ, ಒಡಲಿಗೆ-ಹೊಟ್ಟೆಗೆ, ಅಪ್ಯಾಯನವೆ-ತೃಪ್ತಿಯಾಗುತ್ತಯೇ, ಎಲೆ-ಎಲೈ, (೨) ಪ್ರೊಡವಿಪತಿ-ದೊರೆಯೆ, ಬಿಡು-ಬಿಟ್ಟುಬಿ

ಡು, ನನ್ನ ಮನೆಯು-ನಮ್ಮಮನೆಯಲ್ಲಿ, ಮಡದಿಮಕ್ಕಳ-ಹೆಂಡತಿಮಕ್ಕಳ, ಗೋಳ-ದುಃಖವನ್ನು, ನೋಡು-ಆಲೋಚಿಸು, ಎಂದು-ಎಂಬದಾಗಿ, ಆಪಕ್ಷಿ-ಆಪಕ್ಷಿಯು, ಒರಲಿತು-ಕೂಗಿತು ||೧೯||

ತಾತ್ಪರ್ಯ:—ಅಗ್ನಿಯನ್ನು ತೃಪ್ತಿ ಪಡಿಸುವುದಕ್ಕಾಗಿ ಒಂದುಸೇರೆ ಹಾಲನ್ನು ಆಹುತಿಯಾಗಿ ಕೊಟ್ಟರೆ ಸಾಕೆ ? ಮಂಜು ಸುರಿದರೆ ಕೆರೆಯು ತುಂಬ ನೀರು ಬರುವುದೇ ! ಹಾಗೆಯೇ ಇಷ್ಟು ದೊಡ್ಡದಾ ದೇಹವುಳ್ಳ ನಿನ್ನ ಹೊಟ್ಟೆಯು ಅಲ್ಪಜಂತುವಾದ ನನ್ನನ್ನು ತಿನ್ನುವುದರಿಂದ ತುಂಬೀತೆ ! ಅನ್ಯಾಯವಾಗಿ ನನ್ನನ್ನು ಏಕೆ ತಿನ್ನುತ್ತೀಯೋ ! ನಿನಗೆ ತೃಪ್ತಿಯೂ ಆಗಲಾರದು. ನನ್ನ ಪ್ರಾಣವೂ ಹೋಗುವುದು ! ಇದರಿಂದ ಅನಾಥರಾಗಿ ದುಃಖಿಸುವ ನನ್ನ ಹೆಂಡತಿ ಮಕ್ಕಳಗೋಳನ್ನು ನೀನು ತಿಳಿದಾದರೂ ನನ್ನನ್ನು ಬಿಡು ಎಂದು ಕೂಗಿ ಕೊಂಡಿತು,||೧೯||

ಟಿಪ್ಪಣಿ:--(೧) ಒಂದು ಕುಡಿತೆ-ಬರ್ಕುಡಿತೆ (ದ್ವಿಗು.) ಸಮಾಸದಲ್ಲಿ ಪ್ರಾಪ್ತವಾದ ಒಂದು, ಎಂಬುದಕ್ಕೆ ಒರ್, ಎಂದಾದೇಶಬಂತು. (೨) ಪೊಡವಿಗೆ (ತ್ಸ) ಪೃಥಿವಿ, ||೧೯||

ಮೂ|| ಮರನಹುತ್ತವನೇರಿದರಸಂ / ಗರದಿದೈನ್ಯಂಬಡುವರಾಯುಧ
ಮುರಿದಬರಿಗೈಯವರನೀರೊಳುಪೊಕ್ಕುನಿಂದವರ || ತರುಣಿಯುರ
ಮರೆಗೊಂಡವರನಿ | ಬ್ಬರದಿಮುರಿದೋಡುವರನಿದ್ರಾಭರದೊಳಿ
ರ್ದರರಕೊಲುವುದುಚಿತವೆಯೆಂದುದಾಹಂಸೆ ||೨೦||

ಟೀಕೆ:—ಸಂಗರದಿ - ಯುದ್ಧದಲ್ಲಿ, ಮರನ-ಮರವನ್ನೂ, ಹುತ್ತವಂ-ಹುತ್ತವನ್ನೂ, ಏರಿದರ-ಹತ್ತಿನಿಂತವರನ್ನೂ (೧) ದೈನ್ಯಂಬಡುವರ-ದೀನರಾದವರನ್ನೂ, ಆಯುಧಮುರಿದ - ಆಯುಧವು ಮುರಿದು ಹೋಗಿ, ಬರಿಗೈಯವರ-ಬರಿಯಕೈಯಲ್ಲಿನಿಂತವರನ್ನೂ, ತರುಣಿಯುರ-ಹೆಂಗಸರನ್ನು, ಮರೆಗೊಂಡವರ-ಮರೆಬಿದ್ದವರನ್ನೂ, (೨) ನಿಬ್ಬರದಿ-ಬೇಗನೆ, ಮುರಿದೋಡುವರ - ಹಿಂದಿರುಗಿ ಓಡಿ ಹೋಗುವರನ್ನೂ, ನಿದ್ರಾಭರದೊಳ್-ನಿದ್ದೆಯವೇಗದಿಂದ, ಇರ್ದರ- ಇರುವರನ್ನೂ, ಕೊಲುವುದು-ಕೊಲ್ಲುವುದು, ಉಚಿತವೆ-ತಕ್ಕದ್ದೆ! (ಎಂಬದಾಗಿ) ಆಹಂಸೆ-ಹಂಸವು, ಎಂದುದು-ಹೇಳಿತು. ||೨೦||

ತಾತ್ಪರ್ಯ:—ಮತ್ತು ಯುದ್ಧ ಧರ್ಮವೆಂತೆಂದರೆ ಮರವನ್ನು ಹತ್ತಿದವನು, ಹುತ್ತವನೇರಿದವನು, ನಿರಾಯುಧನಾಗಿ ನಿಂತವನು, ಹೆಂಗ

ಸರಹಿಂದೆ ಆವಿತುಕೊಂಡವನು, ವಿಮುಖನಾಗಿ ಹಿಂದಿರುಗಿ ಯುದ್ಧದಿಂದೋಡುವನು. ನಿದ್ರೆಮಾಡುತ್ತಿರುವನು, ಇವರನ್ನೆಲ್ಲಾ ಹೊಡೆಯುವುದು ಧರ್ಮವಿರುದ್ಧವು, ಎಂದು ಹೇಳಿತು. ||೨೦||

ಟಿಪ್ಪಣಿ:—(೧)ದೈನ್ಯಮಂಪಡುವರು–ದೈನ್ಯಂಬಡುವರು(ದ್ವಿ,ತ) (೨) (ತ್ಸ) ಸಿರ್ಭರ ||೨೦||

ಮೂ|| ನುಡಿಗೆನಾಚಿದನರಸಹಂಸೆಯ | ನಡೆವಳಿಗೆಮೆಚ್ಚಿದನುನಿನ್ನನು | ಬಡಿನುಕೊಲುವವರಲ್ಲನಿನ್ನಾಲಯಕೆಪೋಗೆನುತ || ಬಿಡಲುರಕ್ಕೆಯಕೊಡಹಿಹಾರಿತು | ಒಡನೆಮರಳಿತುಧರೆಗೆರಾಯನತೊ | ಡೆಗೆಮಂಡಿಸಿಮುದದಿನುಡಿದುದುನೃಪಗೆವಿನಯದಲಿ ||೨೧||

ಟೀಕೆ:– ಅರಸ–ದೊರೆಯು, ಹಂಸೆಯ–ಹಂಸಪಕ್ಷಿಯ, ನುಡಿಗೆ–ಮಾತಿಗೆ, ನಾಚಿದಂ–ನಾಚಿಕೆಪಟ್ಟನು, ನಡೆವಳಿಗೆ–ಆಚರಣೆಗೆ, ಮೆಚ್ಚಿದನು–ಒಪ್ಪಿದೆನು, ನಿನ್ನನ್ನು, ಬಡಿದು–ಹೊಡೆದು, ಕೊಲುವವರಲ್ಲ–ಕೊಲ್ಲತಕ್ಕವರಲ್ಲ, ನಿನ್ನ–ನಿನ್ನ, ಆಲಯಕೆ–ಮನೆಗೆ, ಪೋಗು–ಹೋಗು, ಎನುತ–ಎಂಬದಾಗಿ, ಬಿಡಲು–ಬಿಟ್ಟುಬಿಡಲು, ರಕ್ಕೆಯ–ಗರಿಗಳನ್ನು, ಕೊಡಹಿ–ಒದರಿಕೊಂಡು, ಹಾರಿತು–ಮೇಲಕ್ಕೆ ಹಾರಿತು ಒಡನೆ–ಕೂಡಲೆ, ಧರೆಗೆ–ಭೂಮಿಗೆ, ಮರಳಿತು–ತಿರುಗಿತು, (೧) ರಾಯನ–ದೊರೆಯ, ತೊಡೆಗೆ– ತೊಡೆಯಮೇಲೆ, ಮಂಡಿಸಿ–ಕುಳಿತು, ನೃಪಗೆ–ದೊರೆಗೆ, ವಿನಯದಲಿ–ನಮ್ರತೆಯಿಂದ, (೨) ಮುದದಿ–ಸಂತೋಷದಿಂದ, ನುಡಿದುದು–ಹೇಳಿತು ||೨೧||

ತಾತ್ಪರ್ಯ:– ಹಂಸಪಕ್ಷಿಯು ಆಡಿದಮಾತಿಗೆ ಮೆಚ್ಚಿ ಆಶ್ಚರ್ಯಪಟ್ಟು ನಾಚಿಕೆಯಿಂದ ಪಕ್ಷಿಯನ್ನು ಕುರಿತು–ಎಲೈ ಹಂಸವೇ ! ನಿನ್ನನ್ನು ನಾವು ಕೊಲ್ಲತಕ್ಕವರಲ್ಲ, ಇಗೋಬಿಟ್ಟೆನು, ನಿನ್ನಿಷ್ಟಬಂದಕಡೆಗೆ ಹೋಗು ಎಂದು ಕೈಬಿಡಲು, ಪಕ್ಕಿಯುಕೂಡಲೇ ರೆಕ್ಕೆಯನ್ನೊದರಿಕೊಂಡು ಆಕಾಶಕ್ಕೆ ಹಾರಿ ಕೂಡಲೆ ಭೂಮಿಯಕಡೆಗೆ ಹಾರಿಬಂದು ದೊರೆಯ ತೊಡೆಯಮೇಲೆಕುಳಿತು, ದೊರೆಯ ಉದಾರಮನಸ್ಸಿಗೆ ಸಂತೋಷಪಟ್ಟು ವಿನಯದೊಡನೆ ದೊರೆಯಂಕುರಿತು ||೨೧||

ಟಿಪ್ಪಣಿ:–(೧)(ತ್ಸ)(೨)ರಾಜನ್‌ಮುತ್‌ಎಂಬಪದಪ್ರಥಮಾಬಹುವಚನವಾದಮುದಃ, ಎಂಬುದು ವಿಸರ್ಗವನ್ನುಳಿದು ಕನ್ನಡಕ್ಕೆ ಲಿಂಗವಾಗಿದೆ

ಮೂ|| ಭೂರಮಣಕೇಳಸುವಕಾಯ್ದುಪ | ಕಾರಮಾಡಿದೆನೀನುನಿನ

ಗುವ । ಕಾರಮಾಡುವೆನೆನಲದೇನೆಂದರಸಬೆಸಗೊಂಡ ॥ ಸಾ
ರಹೃದಯುನೆಚಿತ್ತವಿಸುವಿ । ಸ್ತಾರದಿಂದರುಹುವೆನುಭುವನ
ದೊ। ಳಾರಿಗುಂಟೀಪರಮಸುಕೃತಗಳೆಂದುದಾಪಕ್ಷಿ ॥೨೨॥

ಟೀಕೆ:-ಭೂರಮಣ-ದೊರೆಯೆ, ಕೇಳ್-ಕೇಳು, ನೀನು, ಅಸುವ-ಪ್ರಾಣವನ್ನು, ಕಾಯ್ದು-ರಕ್ಷಿಸಿ, ಉಪಕಾರಮಾಡಿದೆ-ಮೇಲ್ಮೆಯುಯನ್ನು ಮಾಡುತ್ತಿದ್ದೀಯೆ, ನಿನಗೆ, ಉಪಕಾರಮಾಡುವೆಂ-ಪ್ರತ್ಯುಪಕಾರವನ್ನು ಮಾಡುತ್ತೇನೆ, ಎನೆ-ಎನ್ನಲು, ಅರಸ-ದೊರೆಯು, ಅದು, ಪನು, ಎಂದು, ಬೆಸಗೊಂಡ-ಕೇಳಿದನು, (೧) ಸಾರಹೃದಯನೆ-ಧಾರಾಳಮನಸ್ಸುಳ್ಳವನೇ (೨) ವಿಸ್ತಾರದಿಂದ- ವಿಸ್ತಾರವಾಗಿ, ಅರುಹುವೆನು-ತಿಳಿಸುತ್ತೇನೆ, ಚಿತ್ತವಿಸು - ಕೇಳಬೇಕು, ಈ ಪರಮಸುಕೃತಗಳು-ಮಹಾಪುಣ್ಯವು, ಆರಿಗೆ-ಯಾರಿಗೆ, ಭುವನದೊಳ್-ಲೋಕದಲ್ಲಿ, ಉಂಟು-ಇರುವುದು ? (ಎಂಬದಾಗಿ) ಆ ಪಕ್ಷಿ-ಆ ಹಕ್ಕಿಯು, ಎಂದುದು-ಹೇಳಿತು ॥೨೨॥

ತಾತ್ಪರ್ಯ:- ಅಯ್ಯಾದೊರೆಯೇ ಎಲ್ಲಕ್ಕಿಂತಲೂ ದೊಡ್ಡದಾದ ಪ್ರಾಣದಾನವನ್ನು ಮಾಡಿ ನನ್ನನ್ನು ರಕ್ಷಿಸಿದ್ದೀಯಾದುದರಿಂದ ಇದಕ್ಕೆ ನಾನು ಪ್ರತ್ಯುಪಕಾರವಂ ಮಾಡಲೇಬೇಕು, ನಿನ್ನ ಔದಾರ್ಯಕ್ಕೆನಾನು ಮೆಚ್ಚಿದೆನು, ಇಂತಹಸುಕೃತ ವಿಶೇಷವು ನನಗಲ್ಲದೆ ಲೋಕದಲ್ಲಿ ಇತರರಿಗೆ ದುರ್ಲಭವು, ನನ್ನ ಉಪಕಾರವನ್ನು ನೀನು ಕೈಕೊಳ್ಳಬೇಕೆನಲು ದೊರೆಯು ಅದೇನೆಂದು ಕೇಳಿದನು ॥೨೨॥

ಟಿಪ್ಪಣಿ:-(೧) ಸಾರ-ಸ್ವಾರಸ್ಯ, ಬಲ, ಗಟ್ಟಿ, (ನಾನಾ) ಸಾರವಾದ ಹೃದಯವು ಆವಂಗುಟೋ ಅವನು ಸಾರಹೃದಯ (ಬ. ವ್ರೀ.) (೨) (ದ್ಭ) ಬಿತ್ತರ, ॥೨೨॥

ಮೂ॥ ಅರಸಕೇಳತಿದೂರದಲಿಸುರ ।ಪುರವಪೋಲ್ವವಿದರ್ಭಪಟ್ಟಣ।
ದರಸುಭೀಮನೃಪಾಲನಾತನಸತನುಜೆದಮಯಂತಿ॥ಪರಮಪುಣ್ಯಾಂ
ಗನೆಮಹಾಸೌಂ। ದರಿನಿಪುಣೆಗಜಗಮನೆನಯಗುಣ ।ಭರಿತೆಸೊ
ಬಗಿನಸೋನೆತಾನಿಹಳಲ್ಲಿವನಜಾಕ್ಷಿ ॥೨೩॥

ಟೀಕೆ:- ಅರಸ-ದೊರೆಯೆ, ಕೇಳ್-ಕೇಳು, ಅತಿದೂರದಲಿ-ಬಹಳದೂರದಲ್ಲಿ, (೧) ಸುರಪುರವ-ದೇವತೆಗಳ ಪಟ್ಟಣವನ್ನು, ಪೋಲ್ವ ಹೋಲುವ, ವಿದರ್ಭಪಟ್ಟಣದ-ವಿದರ್ಭಪುರದ, ಅರಸು-ದೊರೆಯು,

ಭೀಮನೃಪಾಲಂ-ಭೀಮರಾಜನು, ಆತನ-ಅವನ, ತನುಜೆ-ಮಗಳಾದ, ಪರಮಪುಣ್ಯಾಂಗನೆ-ಮಹಾಶ್ರೇಷ್ಠಳಾದ, ಮಹಾಸೌಂದರಿ-ಬಹುಲಾವಣ್ಯವತಿಯಾದ, ನಿಪುಣೆ-ಚತುರಳಾದ, (೨) ಗಜಗಮನೆ-ಮಂದಗಮನವುಳ್ಳ, ವಿನಯಗುಣಭರಿತೆ-ವಿನಯಗುಣದಿಂದಕೂಡಿದ, ಸೊಬಗಿನ-ಸೌಭಾಗ್ಯದ, ಸೋನೆ-ಮಳೆಯಂತಿರುವ (೨) ವನಜಾಕ್ಷಿ - ಕಮಲನೇತ್ರೆಯಾದ, ದಮಯಂತಿ-ದಮಯಂತಿಯು, ತಾಂ-ತಾನು, ಅಲ್ಲಿ, ಇಹಳು-ಇರುವಳು ॥೨೩॥

ತಾತ್ಪರ್ಯ:—ಎಲೈ ದೊರೆಯೇ ಕೇಳು - ಇಲ್ಲಿಗೆ ಬಹುದೂರದಲ್ಲಿ ಇಂದ್ರನ ಅಮರಾವತಿಯಂತಿರುವ ವಿದರ್ಭಪುರವೆಂಬುದೊಂದು ಪಟ್ಟಣವಿರುವುದು. ಅದನ್ನು ಭೀಮರಾಜನೆಂಬದೊರೆಯು ಆಳುತ್ತಿರುವನು ಆತನಿಗೆ ಒಬ್ಬ ಮಗಳಿರುವಳು. ಆಕೆಯು ರೂಪಲಾವಣ್ಯವಯೋವಿನಯವಿಲಾಸಗಳಲ್ಲಿ ಅಸದೃಶಳು, ಸೌಭಾಗ್ಯಸಂಪನ್ನೆ, ಆಕೆಯ ಹೆಸರು ದಮಯಂತಿ ॥೨೩॥

ಟಿಪ್ಪಣಿ:— (೧) ಸುರರಪುರ-ಸುರಪುರ (ಷ. ತ) (೨) ಗಜದಂತೆ ಗಮನವು ಯಾರಿಗೋ ಅವಳು-ಗಜಗಮನೇ (ಬ. ವ್ರೀ) (೩) ವನ ನೀರಿನಲ್ಲ, ಜ-ಹುಟ್ಟಿದ್ದು-ಕಮಲ-ಕಮಲದಂತೆ ಅಕ್ಷಿಯುಳ್ಳವಳು-ಕಮಲಾಕ್ಷಿ (ಬ. ವ್ರೀ) ॥೨೩॥

ಮೂ॥ ಪೊಗಳಲಳವೇಸತಿಯಚಲುವಿನ । ಬಗೆಯಭಾವಿಸಿನೋಡಲ
ತಿಸೋ । ಜಿಗವಲೇ‌ದಮಯಂತಿಯವ್ವನರೂಪರೇಖೆಯಲಿ ॥
ನಗೆಮೊಗದಕಣ್ಬೊಗರಮಿಂಚಿನ । ಬುಗುರಿಮೊಲೆಗಳಸೆಳೆನಡು
ವಸೆಳ್ಳುಗುರಬೆಡಗಿನಕಾಂತೆರಂಜಿಸುತಿರ್ಪಳಾಪುರದಿ ॥೨೪॥

ಟೀಕೆ:—ಸತಿಯ-ಆಸ್ತ್ರೀಯ, ಚೆಲುವಿನ - ಲಾವಣ್ಯದ, ಬಗೆಯ-ರೀತಿಯನ್ನು, ಪೊಗಳಲ್-ಹೊಗಳಲು, ಅಳವೇ-ಶಕ್ಯವೇ ? ಭಾವಿಸಿ-ಆಲೋಚಿಸಿ, ನೋಡಲ್-ನೋಡಿದರೆ, ಅತಿಸೋಜಿಗವಲೆ- ಬಹಳ ಆಶ್ಚರ್ಯವಲ್ಲವೆ ! ನಗೆಮೊಗದ-ನಗುಮುಖವುಳ್ಳ, ಕಣ್ಬೊಗರ - ನೇತ್ರಕಾಂತಿಯೆಂಬ, ಮಿಂಚಿನ-ಮಿಂಚುಳ್ಳ, ಬುಗುರಿಮೊಲೆಗಳ-ಕಠಿನವಾದ ಕುಚಗಳುಳ್ಳ, (೧) ಸೆಳೆನಡುವ-ಸೂಕ್ಷ್ಮವಾದನಡುವುಳ್ಳ, (೨) ಸೆಳ್ಳುಗುರ-ತೆಳ್ಳಗಿರುವ ಉಗುರುಳ್ಳ, ಬೆಡಗಿನ-ಶೃಂಗಾರವುಳ್ಳ, ಕಾಂತೆ-ಮನೋಹರಳಾದ, ದಮಯಂತಿ-ದಮಯಂತಿಯು, ಆ ಪುರದಿ-ಆ ಪ

ಟ್ಟಣದಲ್ಲಿ, ಅಲ್ಲಿ, ತಾಂ - ತಾನು, ರಂಜಿಸುತಿರ್ಪಳ್ - ಪ್ರಕಾಶಿಸು ತ್ತಿರುವಳು. ||೨೪||

ತಾತ್ಪರ್ಯ:—ಆಕೆಯು ಲಾವಣ್ಯವನ್ನು ನಾನು ಎಷ್ಟೆಂದುವರ್ಣಿಸಲಿ! ನಗೆಮೊಗವು ಬೆಳದಿಂಗಳನ್ನು ಪಸರಿಸುವುದು, ಕಡೆಗಣ್ಣು ಮಿಂಚನ್ನು ಕರೆವುದು. ಸ್ತನಮಂಡಲವು ಕಡೆದ ಬಗುರಿಯಂತಿಹುದು, ನಡುವು ಬಳ್ಕುತ್ತಿರುವುದು, ಉಗುರು ಬಹು ಸೂಕ್ಷ್ಮವಾಗಿರುವುದು. ಶೃಂಗಾರ ದ ಗಣಿಯಂತೆ ಪ್ರಕಾಶಿಸುವಳು ||೨೪||

ಟಿಪ್ಪಣಿ:—(೧) ಸೆಳೆವನಡು-ಸೆಳೆನಡು (ಗಮಕ) (೨) ಸೆಳ್ಳಿತು ಉಗುರು-ಸೆಳ್ಳುಗುರು (ವಿ. ಪೂರ್ವ. ಕ) ||೨೪||

ಮೂ|| ಕ್ಷಿತಿಯೊಳಿಹಸತಿಯರೊಳಗಮರಾ | ವತಿಯೊಳಿಹ
ಸ್ತ್ರೀಯರಲಿಮೇಣಾ |ವಿತಳದೊಳಗಿಹನಾರಿಯರನೀಕ್ಷಿಸಿದೆನವ
ಳಿಂಗೆ || ಪ್ರತಿಯಕಾಣೆನುರೂಪಿನಲಿನೀ | ನತಿಚಲುವನಿನಗವಳು
ಪಾಸಟಿ | ಸತಿಗೆನೀನೇರಮಣನಲ್ಲದೆಯಿತರನಾಂಕಾಣೆಂ ||೨೫||

ಟೀಕೆ;— ಕ್ಷಿತಿಯೊಳಗೆ-ಭೂಲೋಕದಲ್ಲಿ, ಇಹ-ಇರುವ (೧)ಸ ತಿಯರೊಳಗೆ-ಹೆಂಗಸರಲ್ಲಿ (೨) ಅಮರಾವತಿಯೊಳಿಹ-ಸ್ವರ್ಗದಲ್ಲಿರುವ, ಸ್ತ್ರೀಯರಲಿ-ಸ್ತ್ರೀಯರಲ್ಲಿಯೂ, ಮೇಣ್-ಮತ್ತು, ಆವಿತಳದೊಳ ಗಿಹ-ವಿತಳ ಲೋಕದಲ್ಲಿರುವ, ನಾರಿಯರಂ-ಹೆಂಗಸರನ್ನೂ, ಈಕ್ಷಿಸಿ ದೆಂ-ನೋಡಿದೆನು, ಅವಳಿಂಗೆ-ಆಕೆಗೆ, ಪ್ರತಿಯ-ಸಮಾನರನ್ನು, ಕಾಣೆ ನು-ನೋಡಲಿಲ್ಲ, ನೀಂ-ನೀನು, ಅತಿಚೆಲುವ-ಬಹಳಸುಂದರನು, ನಿನ ಗೆ, ಅವಳು, ಪಾಸಟಿ-ಸರಿ, ಸತಿಗೆ-ಆಹೆಂಗಸಿಗೆ, ನೀನೇ, ರಮಣಂ ಗಂಡನು, ಅಲ್ಲದೆ-ಹಾಗಲ್ಲದೆ, ಇತರನ-ಬೇರೊಬ್ಬನು, ಆಂ-ನಾನು, ಕಾಣೆಂ-ನೋಡಲಿಲ್ಲ ||೨೫||

ತಾತ್ಪರ್ಯ:— ಎಲೈ ರಾಜೇಂದ್ರನೇ ! ನಾನು ಸ್ವರ್ಗಮರ್ತ್ಯಪಾ ತಾಳಗಳಲ್ಲಿರುವ ಸ್ತ್ರೀಯರನ್ನೆಲ್ಲ ನೋಡಿದ್ದೇನೆ. ಈ ಮೂರುಲೋ ಕಗಳಲ್ಲಿಯೂ, ಆಕೆಗೆಸಮಾನವಾದ ಸುಂದರಿಯರನ್ನು ನಾನುಕಾಣೆ ನು. ನೀನು ಮಹಾಸ್ಫುರದ್ರೂಪನು, ನಿನಗೆ ಅನುರೂಪವಾದ ರೂಪ ವು ಆಕೆಯಲ್ಲಿರುವುದು. ನೀನೇ ಆಕೆಗೆ ತಕ್ಕ ಪತಿಯಲ್ಲದೆ ಬೇರೊಬ್ಬ ನು ತಕ್ಕವನಾಗಲಾರನು ||೨೫||

ಟಿಪ್ಪಣಿ:— (೧) ಸತಿ-ಹೆಂಗಸು, ಹೆಂಡತಿ, ಪತಿವ್ರತೆ (ನಾನಾ)

(೨) ಅಮರರ ಪಟ್ಟಣ-ಅಮರಾವತಿ (ಅವ) ॥೨೫॥

ಮೂ॥ ಅವಳುನಿನಗೊಲಿವಂತೆಮಾಡುವೆ।ಶಿವನಕೃಪೆನಿನಗುಂಟುನಮ್ಮ
ಲಿ। ಸವಡಿನುಡಿಯಿಲ್ಲರಸನಂಬುವುದೆನ್ನನೀನೆನಲು॥ ಅವನಿಪತಿನಸು
ನಗುತಹಂಸೆಯ। ಸವಿನುಡಿಗೆಮನಸೋತುವಿರಹದ। ತವಕದಲಿ
ಕೇಳೆಂದುನುಡಿದನುನೃಪತಿಖಗಪತಿಗೆ ॥೨೬॥

ಟೀಕೆ:— ಅವಳು-ಆಕೆಯು, ನಿನಗೆ, ಒಲಿವಂತೆ-ಪ್ರೀತಿಸುವ ಹಾಗೆ, ಮಾಡುವೆ-ಮಾಡುತ್ತೇನೆ, ಶಿವನ-ಈಶ್ವರನ, ಕೃಪೆ-ದಯೆಯು ನಿನಗೆ, ಉಂಟು-ಇದೆ, ನಮ್ಮಲಿ-ನಮ್ಮಲ್ಲಿ, ಸವಡಿನುಡಿ-ಸುಳ್ಳಮಾತು, ಇಲ್ಲ, ಅರಸ-ದೊರೆಯೆ, ನೀಂ-ನೀನು, ಎನ್ನ-ನನ್ನನ್ನು; ನಂಬುವು ದು-ನಂಬತಕ್ಕದ್ದು, ಎನಲು-ಎಂಬದಾಗಿ ಹೇಳಲು, ಅವನಿಪತಿ-ದೊರೆ ಯು, ನಸುನಗುತ-ಸ್ವಲ್ಪನಗುತ್ತಾ, ಹಂಸೆಯ-ಹಂಸಪಕ್ಷಿಯ (೧) ಸವಿನುಡಿಗೆ-ಮಧುರವಚನಕ್ಕೆ, (೨) ಮನಸೋತು-ತೃಪ್ತನಾಗಿ, ವಿರ ಹದ-ವಿಯೋಗದ, ತವಕದಲಿ-ಆತುರದಿಂದ, ನೃಪತಿ-ದೊರೆಯು, (೩) ಖಗಪತಿಗೆ – ಪಕ್ಷಿರಾಜನಿಗೆ, ಕೇಳು-ಕೇಳು, ಎಂದು, ನುಡಿದನು- ಹೇಳಿದನು ॥೨೬॥

ತಾತ್ಪರ್ಯ:— ನಿನ್ನಲ್ಲಿ ಈಶ್ವರಾನುಗ್ರಹವಿದೆ. ಆಕೆಯು ನಿನ್ನ ನ್ನು ಮೋಹಿಸುವಂತೆ ಮಾಡುವೆನು. ನಮ್ಮಲ್ಲಿ ಮನುಷ್ಯರಂತೆ ಮೋಸ ವಿಲ್ಲ, ನನ್ನಮಾತನ್ನು ನಂಬು, ಎಂದು ಹೇಳಲು, ರಾಜನು ಕೇಳಿ ಮು ಗುಳ್ನಗೆನಕ್ಕು ಆ ಪಕ್ಷಿಯ ಮೃದುಮಧುರ ಸರಸೋಕ್ತಿಗಳಿಂಗೆ ಮೆ ಚ್ಚಿ ಕುತೂಹಲ ಚಿತ್ತನಾಗಿ ಪಕ್ಷಿಯಂ ಕುರಿತು ಇಂತೆಂದನು ॥೨೬॥

ಟಿಪ್ಪಣಿ (೧) ಸವಿಯಾದನುಡಿ-ಸವಿನುಡಿ (ವಿ. ಪೂರ್ವ. ಕ.) (೨) ಮನದಿಂಸೋತು-ಮನಸೋತು (ಕ್ರಿ. ಸ) (೩) ಖ-ಅಂತರಿಕ್ಷದಲ್ಲಿ, ಗ-ಸಂಚರಿಸತಕ್ಕದ್ದು (ಪಕ್ಷಿ) (ಅವ) ಖಗಕ್ಕೆಪತಿ ಖಗಪತಿ (ಷ. ತ) ಖಗ-ಪಕ್ಷಿ, ಸೂರ್ಯ, ವಾಯು, ಪುಷ್ಪ, (ನಾನಾ) ॥೨೬॥

ಮೂ॥ ಮನಸಿಜನಶರಹತಿಗೆನೊಂದೆನು। ತನುವನೈರಿಸಲಾರೆಯೆನಗಾ
ವನಿತೆಯನ್ನೊಲಿಸುತ್ತಸಲಹೆನ್ನನುವಕರುಣದಲಿ॥ ನನಗೆನೀನೆ
ಪರಮಬಾಂಧವ। ಮನಕೆಹರುಷವಮಾಡುನೀನೀ। ಬನಕೆಬಹಪ
ರಿಯಂತತಾನಿಲ್ಲಿಹೆನುಹೋಗೆಂದ ।೨೭.॥

ಟೀಕೆ:— ಮನಸಿಜನ-ಮನ್ಮಥನ, ಶರಹತಿಗೆ-ಬಾಣದಪೆಟ

ನೊಂದೆನು-ಬಾಧೆಪಟ್ಟೆನು, ತನುವ-ದೇಹವನ್ನು, ಸೈರಿಸಲಾರೆ-ತಾಳಲಾರೆನು, ಎನಗೆ-ನನಗೆ, ಅಸುವ-ಪ್ರಾಣವನ್ನು, ಕರುಣದಲಿ-ದಯೆಯಿಂದ, ಸಲಹು-ರಕ್ಷಿಸು, ನನಗೆ, ನೀನೇ, ಪರಮಬಾಂಧವ-ಮುಖ್ಯಬಂಧುವು, ಮನಕೆ-ಮನಕ್ಕೆ (೨) ಹರುಷವ-ಸಂತೋಷವನ್ನು, ಮಾಡು, ನೀಂ-ನೀನು, ಈ ವನಕೆ-ಈ ಕಾಡಿಗೆ, ಬಹ-ಬರುವ, ಪರಯಂತ-ವರೆಗೆ, ತಾಂ-ನಾನು, ಇಲ್ಲಿ, ಇಹೆನು-ಇರುವೆನು, ಹೋಗು, ಎಂದು-ಎಂಬದಾಗಿ ಹೇಳಿದನು ‖೨೭‖

ತಾತ್ಪರ್ಯ:— ಎಲೈ ಹಂಸವೇ ಮದನನಬಾಣದಿಂದ ಬಹಳ ನೊಂದೆನು. ಇನ್ನು ಈ ದೇಹವು ನಿಲ್ಲಲಾರದು, ಆಕೆಯುನನ್ನಲ್ಲಿ ಪ್ರೀತಿಸುವಂತೆ ಮಾಡಿ ಈ ವಿರಹ ವ್ಯಥೆಯನ್ನು ಹೋಗಲಾಡಿಸಿ ನನ್ನನ್ನು ರಕ್ಷಿಸು ನನಗೆ ನೀನೆ ಇಷ್ಟ ಬಂಧುವು, ನಿನ್ನನುಳಿದು ನನಗೆ ಆಪ್ತರುಯಾರೂಇಲ್ಲ, ನನ್ನ ಇಷ್ಟವನ್ನು ನೆರವೇರಿಸಿ ಸಂತೋಷವನ್ನುಂಟುಮಾಡು. ನೀನು ಹೋಗಿ ಬರುವವರಿವಿಗೂ ನಿನ್ನನ್ನೇ ಧ್ಯಾನಿಸುತ್ತಾ ಈ ಕಾಡಿನಲ್ಲಿರುವೆನು, ಹೊರಡು, ಎಂದು ಹೇಳಿ ಕಳುಹಿಸಿದನು ‖೨೭‖

ಟಿಪ್ಪಣಿ:— (೧) ಅವಳು-ವನಿತೆ, ಆವನಿತೆ, (ಗಮಕ) (೨) (ತ್ಸ) ಹರ್ಷ ‖೨೭‖

ಮೂ‖ ಕೇಳುಧರ್ಮಜನಳನೃಪಾಲನ। ಬೀಡುಗೊಂಡಲ್ಲಿಂದಬಂದುವ।
ನಾಲಯುವಹೊರಹೊಂಟುತೆರಳಿತುವಾಯುವೇಗದಲಿ ‖ ಆಲತಾಂಗಿ
ಯುಪತಿಯಕೀರ್ತಿವಿಶಾಲವಾದಂದದಲಿರಾಜಮ। ರಾಳಗಗನಕೆಹಾ
ಯ್ದುಕಂಡಿಳಿತಂದುದಾಪುರಕೆ ‖೨೮‖

ಟೀಕೆ:— ಧರ್ಮಜ-ಧರ್ಮರಾಜನೆ, ಕೇಳು, ನಳನೃಪಾಲನ-ನಳನನ್ನು, ಬೀಡುಗೊಂಡು-ಬಿಡಿಸಿಕೊಂಡು, ಅಲ್ಲಿಂದ, (೧) ವನಾಲಯವ-ಕಾಡಿನ ಪ್ರದೇಶವನ್ನು, ಹೊರಹೊಂಟು-ಬಿಟ್ಟು ಹೊರಟು (೨) ವಾಯುವೇಗದಲಿ-ಗಾಳಿಯಷ್ಟುವೇಗ, (೩)ಆ ಲತಾಂಗಿಯ-ಆಸ್ತ್ರೀಯ, ಪತಿಯ-ಗಂಡನ, ಕೀರ್ತಿ-ಯಶಸ್ಸು, ವಿಶಾಲವಾದಂದದಲಿ-ವಿಸ್ತಾರವಾದಂತೆ, ರಾಜಮರಾಳ-ರಾಜಹಂಸವು, ಗಗನಕ್ಕೆ-ಆಕಾಶಕ್ಕೆ, ಹಾಯ್ದು-ಹಾರಿ, ಕಂಡು ನೋಡಿ, ಪುರಕೆ-ಚೈದ್ಯನಗರಕ್ಕೆ ಇಳಿತಂದುದು-ಇಳಿದುಬಂತು ‖೨೮‖

ತಾತ್ಪರ್ಯ:— ದೊರೆಯು ಮಾತನ್ನು ಕೇಳಿ ಹೊರಟು ಆ ಕಾಡನ್ನು ದಾಟಿ ಬಂದು, ನಳನ ಕೀರ್ತಿಯು ವಿಸ್ತಾರಗೊಂಡಿರುವುದೋ ಎಂಬಂತೆ ವಾಯುವೇಗದಿಂದ ಅಂತರಿಕ್ಷಕ್ಕೆ ಹಾರಿ ಸಂಚರಿಸುತ್ತಾ ಸುತ್ತಲೂ ನೋಡಿ ಚೈದ್ಯನಗರವಿರುವ ಪ್ರದೇಶವನ್ನು ಕಂಡು ಹಿಡಿದು ಆಸ್ಥಳದಲ್ಲಿನೆಲಕ್ಕಿಳಿದು ಆ ಪುರವನ್ನು ಸೇರಿತು ‖೨೮‖

ಟಿಪ್ಪಣಿ:— (೧) ವನದ ಆಲಯು ವನಾಲಯು (ಷ.ತ) (೨) ವಾಯುವೇಗ (ಷ, ತ) ವೇಗಕೆ; (ದ್ವ) ಬೇಗ, (೩) ಲತೆಯಂತೆ ಅಂಗವು ಯಾರಿಗೋ ಅವಳು ಲತಾಂಗಿ (ಬ. ವ್ರೀ) ಬಳ್ಳಿಯಂತೆ ಮೃದುವಾದ ದೇಹವುಳ್ಳವಳು, (ಅವ) ಅವಳು ಲತಾಂಗಿ ಆಲತಾಂಗಿ (ಗಮಕ)‖

ಮೂ‖ ಕನಕಮಣಿನಿರ್ಮಿತದಸೌಧದ । ಜನನಿಕರಸಂದೋಹದಲ್ಲು
ಪ । ವನದವೀಥಿಗಳೆಸೆಯೆಮೆರೆವವಿದರ್ಭಪಟ್ಟಣದೆ ‖ ಮನವೊಲಿ
ದುನಿಜಬಳಗಸಹಿತಂ। ಗನೆಯರೋಲಗದಲ್ಲಿಮದನನ।ಮೊನೆಯಲ
ಗಿನಲಿಬಳಲ್ವಸತಿಯಳಕಂಡುದಾಹಂಸೆ ‖೨೯‖

ಟೀಕೆ:—ಕನಕಮಣಿನಿರ್ಮಿತ–ಚಿನ್ನದ ಮತ್ತು ರತ್ನಗಳಿಂದ ನಿರ್ಮಿಸಿರುವ, ಸೌಧದ–ಉಪ್ಪರಿಗೆಗಳಮೇಲೆ, ಜನನಿಕರ ಸಂದೋಹದಲ್ಲಿ – ಜನಗಳಗುಂಪಿನಿಂದ, ಅಲ್ಲಿ, ಉಪವನದ–ಉದ್ಯಾನದ, ವೀಥಿಗಳು–ಬೀದಿಗಳು, ಎಸೆಯೆ–ಪ್ರಕಾಶಿಸಲು, ಮೆರೆವ–ಶೋಭಿಸುವ (೧) ವಿದರ್ಭಪಟ್ಟಣದೆ– ವಿದರ್ಭರಾಜನಪಟ್ಟಣದಲ್ಲಿ, ಮನವೊಲಿದು– ಪ್ರೀತಿಪೂರ್ವಕವಾಗಿ, ನಿಜಬಳಗಸಹಿತ–ತನ್ನಪರಿವಾರದೊಡನೆ, ಅಂಗನೆಯರ– ಹೆಂಗಸರ, ಓಲಗದಲ್ಲಿ–ಸಭೆಯಲ್ಲಿ, ಮದನನ–ಮನ್ಮಥನ, ಮೊನೆಯ–ಹರಿತವಾದ, ಅಲಗಿನಲ್ಲಿ–ಬಾಣದಲ್ಲಿ, (೨) ಬಳಲ್ವ–ವ್ಯಥೆಪಡುತ್ತಿರುವ, ಸತಿಯಳ – ದಮಯಂತಿಯನ್ನು, ಆ ಹಂಸೆ – ಹಂಸವು, ಕಂಡುದು– ನೋಡಿತು. ‖೨೯‖

ತಾತ್ಪರ್ಯ:—ನವರತ್ನ ಖಚಿತನಾಗಿ ಸುವರ್ಣನಿರ್ಮಿತವಾದ ಉಪ್ಪರಿಗೆಗಳಮೇಲೆ ವಿಹರಿಸುತ್ತಿರುವ ಜನಗಳಿಂದಲೂ, ರಮ್ಯವಾದ ಉದ್ಯಾನವನವೀಥಿಗಳಿಂದಲೂ, ಮನೋಹರವಾದ ಆ ವಿದರ್ಭಪುರದಲ್ಲಿ, ತನ್ನ ಸಖಿಯರೇ ಮೊದಲಾದ ಪರಿವಾರದೊಡನೆ ಪ್ರೀತಿಪೂರ್ವಕವಾಗಿ ಓಲಗವನ್ನು ಮಾಡುತ್ತಾ, ಮದನನ ಕ್ರೂರವಾದ ಬಾಣಕ್ಕೆ. ಗುರಿಯಾಗಿ ವ್ಯಥೆಪಡುತ್ತಿರುವ ಆ ದಮಯಂತಿಯನ್ನು ಹಂಸವು ಕಂಡಿತು. ‖೨೯‖

ಟಿಪ್ಪಣಿ:— (೧) ವಿದರ್ಭನಪಟ್ಟಣ– ವಿದರ್ಭಪಟ್ಟಣ (ಷ.ತ) (೨) ಬಳಲ್ ಎಂಬಧಾತುವಿಗೆ ಭವಿಷ್ಯದರ್ಥದಲ್ಲಿ ,ವ, ಎಂಬಕೃತ್ಪ್ರತ್ಯಯವು ಸೇರಿದೆ.,ಲು, ಎಂಬಲ್ಲಿ ಶಿಥಿಲದ್ವಿತ್ವವು.॥೨೯॥

ಮೂ॥ ನೀಲಮಣಿಭಿತ್ತಿಗಳಕಂಭದ। ಸಾಲುವಜ್ರದಹಲಗೆಪಚ್ಚೆಯ।
ಮೇಲುಮುತ್ತಿನಲೋವೆಹಳದಿಯಕಡೆದಬೋದಿಗೆಯ॥ ಸಾಲು
ಮಣಿನಿರ್ಮಿತದಮಂಚದ। ಮೇಲೆಮಂಡಿಸಿನಳನಚಿಂತೆಯ।ತಾಳಿ
ದಂಗನೆಸತಿಯರೊತನಿರೆಕಂಡುದಾಪಕ್ಷಿ ॥೩೦॥

ಟೀಕೆ:—ನೀಲಮಣಿ ಭಿತ್ತಿಗಳ–ಇಂದ್ರನೀಲಮಣಿಯ ಗೋಡೆಗಳುಳ್ಳ (೧) ಕಂಭದ–ಕಂಭಗಳ, ಸಾಲುವಜ್ರದ–ಸಾಲಾಗಿರುವ ವಜ್ರವುಳ್ಳ, (೨) ಹಲಗೆ ಪಚ್ಚೆಯ – ಪಚ್ಚೆಯಹಲಗೆಗಳುಳ್ಳ, ಮೇಲುಮುತ್ತಿನ–ಒಳ್ಳೆಮುತ್ತಿನ, ಲೋವೆ–ಲೋವೆಯುಳ್ಳ, ಹಳದಿಯ–ಗೋಮೇಧಿಕವನ್ನು, ಕಡೆದ–ಕಡೆದುಮಾಡಿದ (೩) ಬೋದಿಗೆಯ–ಬೋದಿಗೆಯುಳ್ಳ, ಸಾಲುಮಣಿ–ಸಾಲಾಗಿರುವರತ್ನಗಳಿಂದ, ನಿರ್ಮಿತದ – ನಿರ್ಮಿಸಿರುವ, ಮಂಚದಮೇಲೆ, ಮಂಡಿಸಿ–ಕುಳಿತು, ನಳನ, ಚಿಂತೆಯ– ಆಲೋಚನೆಯನ್ನು, ತಾಳಿದ–ಹೊಂದಿದ, ಅಂಗನೆ–ದಮಯಂತಿಯು, ಸತಿಯರೊಡನೆ – ಹೆಂಗಸರೊಡನೆ, ಇರೆ–ಇರಲು, ಆಪಕ್ಷಿ–ಆಹಂಸೆ, ಕಂಡುದು–ನೋಡಿತು. ॥೩೦॥

ತಾತ್ಪರ್ಯ:—ಮತ್ತು ಇಂದ್ರನೀಲರತ್ನದ ಗೋಡೆಗಳು, ವಜ್ರದಕಂಭಗಳು, ಪಚ್ಚೆಯ ಹಲಗೆಗಳು, ಆಣಿಮುತ್ತಿನಲೋವೆ, ಗೋಮೇಧಕವನ್ನು ಕಡೆದು ಮಾಡಿದ ಬೋದಿಗೆಗಳು, ಇವುಗಳಿಂದ ರತ್ನಖಚಿತವಾಗಿ ಮಾಡಿರುವ ಮಂಚದಮೇಲೆ ಕುಳಿತು ನಳನನ್ನೇ ಸ್ಮರಿಸುತ್ತಾ ಪರಿತಾಪಪಡುತ್ತಿರುವ ಆ ರಾಜಪುತ್ರಿಯನ್ನು ನೋಡಿತು. ॥೩೦॥

ಟಿಪ್ಪಣಿ:— (೧) ಕಂಭಕ್ಕೆ (ತ್ಸ) ಸ್ತಂಭ, (೨) ಹಲಗೆಗೆ (ತ್ಸ) ಫಲಕ (೩) ಬೋದಿಗೆ,ಗೆ (ತ್ಸ) ಬೋಧಿಕಾ ॥೩೦॥

ಮೂ॥ ಪೆರೆನೊಸಲಕತ್ತುರಿಯತಿಲಕದ। ಕೊರಳಮುತ್ತಿನಹಾರರತ್ನ
ದ।ಬೆರಳಮುದ್ರಿಕೆಗಳಸುವರ್ಣದ ಕರದಕಂಕಣದ॥ಪರಿಪರಿಯನೆ
ರಿಯುಡಿಗೆಗಳನೂ। ಪುರದತೊಡವಿನವೇಷಿವರಿವಿಗೆ। ಬಳಸಿರಲು
ತರುಣಿಯರುಸತಿಯಳಕಂಡುದಾಹಂಸೆ ॥೩೧॥

ಟೀಕೆ:—(೧) ಪೆರೆನೊಸಲ–ಚಂದ್ರನಂತಿರುವ ಹಣೆಯ, ಕತ್ತು

ರಿಯ-ಕಸ್ತೂರಿಯಿಂದ ಮಾಡಿದ, ತಿಲಕದ-ತಿಲಕವುಳ್ಳ, ಕೊರಲ-ಕಂಠದಲ್ಲಿರುವ (೨) ಮುತ್ತಿನ-ಮುತ್ತುಗಳ, ಹಾರ-ಸರವೂ, ರತ್ನದಿಂದ ಮಾಡಿದ(೩) ಬೆರಳಮುದ್ರಿಕೆಗಳ-ಉಂಗುರಗಳುಳ್ಳ, ಸುವರ್ಣದ-ಚಿನ್ನದ, ಕರದಕಂಕಣದ-ಕೈಬಳೆಗಳುಳ್ಳ, ಪರಿಪರಿಯ-ನಾನಾ ವಿಧವಾದ, ನಿರಿಯುಡಿಗೆಗಳ-ನೆರಿಗಳುಳ್ಳ ಉಡಿಗೆಗಳುಳ್ಳ, ನೂಪುರದ-ಕಾಲ್ಗಡಗದ, ತೊಡರಿನ-ಸರಪಣಿಯುಳ್ಳ, ದೇಸಿ-ದೇಶೀಯರೀತಿಯು, ಪರಿಮಿಗೆ-ತೋರಲು, ತರುಣಿಯರು-ಬಾಲೆಯರು, ಬಳಸಿರಲು-ಸುತ್ತಲೂ ಕುಳಿತಿರಲು, ಸತಿಯಳ-ದಮಯಂತಿಯನ್ನು, ಆಹಂಸೆ-ಹಂಸವು, ಕಂಡುದು - ನೋಡಿತು ‖೩೧‖

ತಾತ್ಪರ್ಯ:— ಚಂದ್ರನಂತಿರುವ ಪಣೆಯಲ್ಲಿ ಕಸ್ತೂರಿಯ ತಿಲಕವನ್ನೂ, ಕೊರಲಲಿಮುತ್ತಿನ ಹಾರವನ್ನೂ, ಬೆರಲಲ್ಲಿ ಚಿನ್ನದ ಮುದ್ರಿಕೆಗಳನ್ನೂ, ಕೈಗೆ ಸ್ವರ್ಣ ಕಟಕಗಳನ್ನೂ, ಪಾದಗಳಿಗೆ ಕಡಗಸರಪಣಿಗಳನ್ನೂ ಧರಿಸಿ, ಬಗೆ ಬಗೆ ಯಾದ ನಿರಿಗಳುಳ್ಳ ದಿವ್ಯ ದುಕೂಲಗಳನ್ನುಟ್ಟಿರುವ ಯುವತಿಯರು ಸುತ್ತುಮುತ್ತಲೂ ಕುಳಿತಿರಲು, ಸಂತಾಪಪಡುತ್ತಿದ್ದ ದಮಯಂತಿಯು ಕುಳಿತಿರುವಾ ಸಭೆಯನ್ನು ಹಂಸವು ಕಂಡಿತು ‖೩೧‖

ಟಿಪ್ಪಣಿ:— (೧) ಪೆರೆಯಂತಿರ್ಪನೊಸಲ್-ಪೆರೆನೊಸಲ್ (ಉ. ಪೂರ್ವ. ಕ) (೨) ಮುತ್ತು-(ತ್ಸ) ಮುಕ್ತಾ (೩) ಮುದ್ರಿಕಾ (ದ್ಭ) ಮುದ್ದಿಗೆ (೪) ನೂಪುರ (ದ್ಭ) ನೇವುರ ‖೩೧‖

ಮೂ‖ತಳಿತಮೇಘದೆಹೊಳೆವಮಿಂಚಿನ|ಬಳಗವೆನೆಹಂಸೆನಭದಿಂಧರೆ|
ಗಿಳಿದುಸತಿಯರವರಸಭಾಮಂಡಲದಿಕುಳ್ಳಿರಲು‖ ನಳಿನಲೋಚನೆ
ಕಂಡುಪಕ್ಷಿಯ| ಲಲನೆಯರವೊಗನೋಡಿಹಂಸೆಯ | ಚೆಲುವನೀ
ಕ್ಷಿಸಿಹಿಡಿಯಬೇಕೆಂದೆನುತಗಮಿಸಿದಳು ‖೩೨‖

ಟೀಕೆ:— ತಳಿತಮೇಘದೆ-ಹರಡಿಕೊಂಡಿರುದ ಮೇಘದಲ್ಲಿ, ಹೊಳೆವ-ಹೊಳೆಯುತ್ತಿರುವ, ಮಿಂಚಿನ ಬಳಗವೆನೆ-ಮಿಂಚಿನಗುಂಪೋ ಎನ್ನುವಹಾಗೆ, ಹಂಸೆ-ಹಂಸವು, ನಭದಿಂ-ಆಕಾಶದಿಂದ, ಧರೆಗೆ-ಭೂಮಿಗೆ, ಇಳಿದು-ಬಂದು, ಸತಿಯರ-ಹೆಂಗಸರ,ವರಸಭಾಮಂಡಲದಿ-ಗುಂಪಿನಲ್ಲಿ, ಕುಳ್ಳಿರಲು-ಕುಳಿತುಕೊಳ್ಳಲು, ಆನಳಿನಲೋಚನೆ-ದಮಯಂತಿಯು, ಪಕ್ಷಿಯ-ಹಂಸೆಯನ್ನು, ಕಂಡು-ನೋಡಿ, ಲಲನೆಯರ-ಹೆಂಗ

ಸರ, (೧) ಮೊಗನೋಡಿ-ಮುಖವನ್ನು ನೋಡಿ, ಹಂಸೆಯು-ಹಂಸನ, ಚೆಲುವಂ-ಸೌಂದರ್ಯವನ್ನು, ಈಕ್ಷಿಸಿ-ನೋಡಿ, ಹಿಡಿಯಬೇಕೆಂದೆನುತ-ಹಿಡಿಯ ಬೇಕೆಂದು, (೨) ಗಮಿಸಿದಳು-ಹೋದಳು ॥೩೨॥

ತಾತ್ಪರ್ಯ:— ದಟ್ಟವಾಗಿರುವ ಮೇಘದ ಮಧ್ಯದಲ್ಲಿ ಹೊಳೆವ, ಮಿಂಚಿನಂತೆ ಆಕಾಶದಿಂದ ಭೂಮಿಗಿಳಿದು ಸ್ತ್ರೀ ಸಭಾಮಧ್ಯದಲ್ಲಿ ಬಂದು ಕುಳಿತುಕೊಂಡ ಹಂಸನ ಮುಖವನ್ನು ನೋಡಿ ದಮಯಂತಿಯು ಅದರ ಸೌಂದರ್ಯಕ್ಕೆ ಮೆಚ್ಚಿ ಸಖಿಯರ ಮುಖವಂನೋಡುತ್ತಾ ಆಪಕ್ಷಿಯನ್ನು ಹಿಡಿಯ ಬೇಕೆಂದು ಹೊರಟಳು ॥೩೨॥

ಟಿಪ್ಪಣಿ:— (೧) ಮೊಗವಂನೋಡಿ- ಮೊಗನೋಡಿ (ಕ್ರಿ. ಸ) (೨) ಗಮನ, ಎಂಬ ಸಂಸ್ಕೃತ ಭಾವನಾಮದಮೇಲೆ ಇಸು ಪ್ರತ್ಯಯವುಸೇರಿ ಕೊನೆಯ ಅಕ್ಷರ ಲೋಪವಾಗಿ, ಗಮಿಸು, ಎಂಬ ಹೊಸ ಧಾತುವಾಗಿದೆ ॥೩೨॥

ಮೂ॥ ಮೆಲ್ಲಮೆಲ್ಲನೆಯಡಿಯಿಡುತಕರ| ಪಲ್ಲವವಚಾಚಿದಳುನೂಪುರ |
ಘಲ್ಲುಘಲಿರೆನೆಹಿಂದೆಹಿಂದಕೆಸರಿದುದಾಹಂಸೆ ॥ ನಿಲ್ಲದಂಘೈಸುತ್ತೆ
ಬರಲ| ಲ್ಲಲ್ಲಿಗಡರಿತುಕುಸುಮಮಯತರು| ಮಲ್ಲಿಗೆಯಬನದೊಳ
ಗೆಹೊಕ್ಕುದುಹೊದರಹೊಸಮೆದೆಯ ॥೩೩॥

ಟೀಕೆ:— (೧) ಮೆಲ್ಲಮೆಲ್ಲನೆ-ನಿಧಾನವಾಗಿ, ಅಡಿಯಿಡುತ-ಹೆಜ್ಜೆಯನ್ನಿಡುತ್ತಾ, (೨)ಕರಪಲ್ಲವವ-ಚಿಗುರಂತಿರುವ ಕೈಯನ್ನು, ಚಾಚಿದಳು-ನೀಡಿದಳು, ನೂಪುರ - ಪಾದಕಟಕಟವು, ಘಲ್ಲುಘಲಿರೆನೆ- ಝಣರೆಂದುಶಬ್ದಮಾಡಲು, ಆಹಂಸೆ-ಹಂಸವು, ಹಿಂದೆ ಹಿಂದಕೆ, ಸರಿದುದು-ಹೋಯಿತು, ನಿಲ್ಲದೆ-ಬಿಡದೆ ಅಲ್ಲಲಿಗೆ ಅದು ಹೋದಕಡೆಗೆ, ಅಂಘೈಸುತ್ತೆ-ಆಸೆಯಿಂದ, ಬರಲು-ಬರುತ್ತಿರಲು, ಕುಸುಮಮಯ-ಹೂಗಳಿಂದತುಂಬಿದ, ಮಲ್ಲಿಗೆಯ ಬನದೊಳಗೆ-ಮಲ್ಲಿಗೆಯ ಗಿಡಗಳ ಗುಂಪಿಗೆ ಅಡರಿತು-ಹತ್ತಿತು, ಹೊದರ-ಪೊದೆಯಾಗಿರುವ, ಹೊಸಮೆಳೆ ಯ-ದೊಡ್ಡಮೆಳೆಯನ್ನು, ಹೊಕ್ಕುದು-ಪ್ರವೇಶಿಸಿತು ॥೩೩॥

ತಾತ್ಸರ್ಯ:— ಮೆಲ್ಲ ಮೆಲ್ಲಗೆ ಹೆಜ್ಜೆಗಳನ್ನಿಡುತ್ತಾ ಕೋಮಲವಾದ ತನ್ನ ಕೈಯ್ಯನ್ನು ನೀಡಿ ಹಿಡಿಯ ಬೇಕೆಂಬಾಸೆಯಿಂದ ಹೋಗುತ್ತಿರಲು, ಕಾಲ್ಗಡಗವು ಘಳ್ಘಲ್ಲೆಂದು ಧ್ವನಿಮಾಡುತ್ತಿರುವಂತೆ ಹಂಸವು ಹಿಂದು ಹಿಂದಕ್ಕೆ ಹೋಗುತ್ತಾ ಬಂತು, ಅದು ಹೋದಕಡೆಗೆ

ಲ್ಲಾ ಮತ್ತಷ್ಟುಕುತೂಹಲದಿಂದ ಹಿಡಿವುದಕ್ಕೆ ಬರಲು, ಹೂಬಿಟ್ಟಿರುವ ಮಲ್ಲಿಗೆ ಗಿಡಗಳ ಗುಂಪಿಗೆ ಹಾರಿ, ಅದರಪ್ರೊದೆಯಲ್ಲಿ ಸೇರಿಕೊಂಡಿತು ॥೩೩॥

ಟಿಪ್ಪಣಿ:— (೧) ಆಧಿಕ್ಯಾರ್ಥದಲ್ಲಿ ದ್ವಿರುಕ್ತಿ (೨) ಪಲ್ಲವದಂತಿರ್ಪ್ಪಕರ-ಕರಪಲ್ಲವ (ಉ. ಉ. ಕ. ಸ) ॥೩೩॥

ಮೂ॥ ಕೆಳದಿಯರಕೆಲಕೊತ್ತಿತಾನೇ । ಮೆಳೆಯಹೊಕ್ಕಳುಬಾಗಿಸೆ
ಳೆನಡು । ಬಳುಕೆಕುಚಭಾರದಲಿಮೇಲುದುಜಾರೆಮುಡಿಚದರೆ ॥ಜ
ಲಜಮುಖಿಬೆಮರಿದಳುಕೊರಲಿನ । ಲಲಿತದೇಕಾವಳಿಗಳಲ್ಲಾ । ಡ
ಲುಸೆರಗನಳವಡಿಸಿನಿಂದಳುಬಳಲಿಬಿಸುಸುಯ್ದು ॥೩೪॥

ಟೀಕೆ:— ಕೆಳದಿಯರ-ಸಖಿಯರನ್ನು, ಕೆಲಕೆ-ಪಕ್ಕಕ್ಕೆ, ಒತ್ತಿ-ನಿಲ್ಲಿಸಿ, ತಾನೆ-ದಮಯಂತಿಯೆ, ಮೆಳೆಯ-ಹೊದರನ್ನು, ಬಾಗಿ-ಬಗ್ಗಿಕೊಂಡು, ಹೊಕ್ಕಳು-ಪ್ರವೇಶಿಸಿದಳು, ಸೆಳೆನಡು-ಸೂಕ್ಷ್ಮವಾದ ಮಧ್ಯವು, ಬಳುಕೆ-ನಡುಗಲು, ಕುಚಭಾರದಲಿ-ಸ್ತನಭಾರದಿಂದ, ಮೇಲುದು-ಸೆರಗು, ಜಾರೆ-ಬಿದ್ದುಹೋಗಲು, ಮುಡಿ-ತುರುಬು, ಚದರೆ-ಬಿಚ್ಚಿಹೋಗಲು, ನಳಿನಮುಖಿ-ದಮಯಂತಿಯು, ಬೆಮರಿಳು-ಬೆವರನ್ನೂ ಹೊಂದಿದಳು, ಲಲಿತದ-ಮನೋಹರವಾದ, ಏಕಾವಳಿಗಳು-ಏಕಸರಗಳು, ಅಲ್ಲಾಡಲು-ಚಲಿಸಲು, ಬಳಲಿ-ಆಯಾಸಪಟ್ಟು, (೧) ಬಿಸುಸುಯ್ದು-ನಿಟ್ಟುಸಿರುಬಿಟ್ಟು ಸೆರಗಂ-ಸೆರಗನ್ನು, ಅಳವಡಿಸಿ-ಸರಿಮಾಡಿಕೊಂಡು, ನಿಂದಳು-ನಿಂತುಕೊಂಡಳು ॥೩೪॥

ತಾತ್ಪರ್ಯ:—ಸಖಿಯರು ಹಿಡಿದು ತರುವುದಕ್ಕೆ ಉದ್ಯುಕ್ತರಾಗಲು ದಮಯಂತಿಯು ಅವರೆಲ್ಲರನ್ನೂ, ತಡೆದು ಅಲ್ಲಿನಿಲ್ಲಿಸಿ ತಾನೇಬಗ್ಗಿಕೊಂಡು ಹೂವಿನ ಗಿಡದ ಪ್ರೊದರೊಳಕ್ಕೆ ಹೋಗಿ ಪುನಃ ಪಕ್ಷಿಯನ್ನು ಹಿಡಿಯಲು ಯತ್ನಿಸಿದಳು, ಆಗ ಆಕೆಯ ನಡುವು ಬಳುಕಿತು, ಸ್ತನಗಳ ಭಾರದಿಂದ ಸೆರಗುಜಾರಿತು, ಕಳೆಯು ಕೆದರಿತು, ಮೈಬೆವತಿತು, ಮುತ್ತಿನೇ ಕಾವಳಿಯು ತೂನೆದಾಡುತ್ತಿತ್ತು. ಬಹಳ ಆಯಾಸವಾಯ್ತು. ಎಷ್ಟು ಯತ್ನಿಸಿದರೂ ಕೈಗೆ ಸಿಕ್ಕದೇ ಹೋದುದರಿಂದ ಭಗ್ನಾಶಳಾಗಿ ನಿಟ್ಟುಸಿರನ್ನು ಬಿಡುತ್ತಾ ಸೆರಗನ್ನು ಸರಿಮಾಡಿಕೊಳ್ಳುತ್ತಾ ನಿಂತಳು. ॥೩೪॥

ಟಿಪ್ಪಣಿ: — (೧) ಬೆಚ್ಚನೆಸುಯ್-ಬಿಸುಸುಯ್, ಬೆಚ್ಚನೆ,

ಎಂಬುದಕ್ಕೆ ಸಮಾಸದಲ್ಲಿ ,ಬಿಸು, ಎಂದಾದೇಶವಾಗಿದೆ. ಈ ಪದ್ಯದ ದಲ್ಲಿ ,ಪಕ್ಷಿಯನ್ನು ಹಿಡಿವಿಕೆ, ಎಂಬಕ್ರಿಯೆಯು ಸಂಪೂರ್ಣವಾವ ವರ್ಣಿತ ವಾಗಿರುವುದರಿದದ ಕ್ರಿಯಾಸ್ವಭಾವಾಖ್ಯಾನಜಾತ್ಯಲಂ ಕಾರವು ||೩೪||

ಮೂ|| ಎಲೆಸರೋರುಹಗಂಧಿನೀನೆ। ನ್ನೊಲಿದುಮನದಲಿಹಿಡಿವೆನೆಂ
ಬೀ । ಛಲವಿದೇತಕೆಮಾಣುನಾವಂಬರದಪಕ್ಷಿಗಳು ॥ ಸಿಲುಕುವ
ವರಾವಲ್ಲಬರಿದೇ । ಬಳಲದಿರುತಾಂಬಂದಪರಿಯನು । ತಿಳುಹುವೆ
ನುನಿನಗೆಲ್ಲವನುಕೇಳೆಂದುದಾಪಕ್ಷಿ ||೩೫||

ಟೀಕು:— ಎಲೆ-ಎಲೌ, (೧) ಸರೋರುಹಗಂಧಿ-ಕಮಲಗಂಧಿ ನಿಯಾದ ದಮಯಂತಿಯೇ! ನೀಂ-ನೀನು, ಎನ್ನ-ನನ್ನನ್ನು, ಒಲಿದು-ಪ್ರೀತಿಸಿ, ಮನದಲಿ-ಮನಸ್ಸಿನಲ್ಲಿ, ಹಿಡಿವೆನೆಂಬ-ಹಿಡಿದುಕೊಳ್ಳುವೆನೆಂಬ (೨) ಈಛಲಂ-ಹಠವು, ಇದೇತಕೆ-ಏತಕ್ಕೆ? ಮಾಣು-ಬಿಡು, ನಾವ್-ನಾವು, ಅಂಬರದ-ಆಕಾಶದಲ್ಲಿ ಹಾರುವ, ಪಕ್ಷಿಗಳು-ಹಕ್ಕಿಗಳು, ಬರಿದೆ-ವ್ಯರ್ಥವಾಗಿ, ಬಳಲದಿರು-ಆಯಾಸಪಟ್ಟುಕೊಳ್ಳಬೇಡ, ತಾಂ-ನಾನು ಬಂದ-ಬಂದಿರುವ, ಪರಿಯನು-ರೀತಿಯನ್ನು, ಎಲ್ಲವನು-ಎಲ್ಲವನ್ನೂ, ತಿಳುಹುವೆನು-ತಿಳಿಸುತ್ತೇನೆ, ಕೇಳ್-ಕೇಳೆಂಬದಾಗಿ, ಆಪಕ್ಷಿ-ಹಂಸೆಯು, ಎಂದುದು-ಹೇಳಿತು, ||೩೫||

ತಾತ್ಪರ್ಯ:— ಎಲೌ ದಮಯಂತಿಯೇ ! ನನ್ನಲ್ಲಿ ಪ್ರೀತಿಯುಳ್ಳವಳಾಗಿ ನನ್ನನ್ನು ಹಿಡಿಯಬೇಕೆಂಬ ಹಠವನ್ನೇಕೆ ಮಾಡುವಿ! ನಾವು ಆಕಾಶ ಗಮನವುಳ್ಳ ಪಕ್ಷಿಗಳಲ್ಲವೆ, ನೀನು ಹಾರಬಲ್ಲೆಯಾ! ಅದಕ್ಕಾಗಿ ಏಕೆ ಆಯಾಸಗೊಳ್ಳುವಿ, ಬಿಡು, ಸುಮ್ಮನಿರು ನಾನು ಬಂದಿರುವ ಸಮಾಚಾರವನ್ನು ತಿಳಿಸುತ್ತೇನೆ ಕೇಳು ||೩೫||

ಟಿಪ್ಪಣಿ:-(೧) ಸರಃ-ಸರೋವರದಲ್ಲಿ, ರುಹ-ಹುಟ್ಟಿದ್ದು, ಸರೋರುಹ (ಉಪ. ಸ) ಸರೋರುಹದ ಗಂಧದಂತೆ ಗಂಧವುಳ್ಳವಳು, (ಬ. ವ್ರೀ) (೨) ಇದು ಛಲಂ-ಈಛಲಂ (ಗಮಕ) ಛಲಕ್ಕೆ (ದ್ಭ) ಚಲ ||೩೫||

ಮೂ|| ನಳಿನಮುಖಿನಳಚಕ್ರವರ್ತಿಯ| ಬಳಿಯವಾಹನವಾಗಿತಾನಿಹೆ
ನೊಲಿದುಸಲಹುವನೆನ್ನಪರಮಪ್ರೀತಿವಚನದಲಿ ॥ ಇಳೆಗೆನಳಕೂ
ಬರಜಯಂತರ । ಚೆಲುವನುದನನರೂಪರೇಖೆಯ । ಹಳಿವುದಾನ
ಳನೃಪನನಿಜಸೌಂದರಿಯಲೋಕದಲಿ ||೩೬||

ಟೀ- ನಳಿನಮುಖಿ-ಕಮಲದಂತೆ ಮುಖವುಳ್ಳ ದಮಯಂತಿಯೇ, ನಳ

ಚಕ್ರವರ್ತಿಯ-ನಳರಾಜನ, ಬಳಿಯ-ಸಮೀಪದ, ವಾಹನವಾಗಿ-ವಾಹನವಾಗಿ, ತಾಂ-ನಾನು, ಇಹೆಂ-ಇರುವೆನು, ಎನ್ನ-ನನ್ನನ್ನು, ಪರಮಪ್ರೀತಿವಚನದಲಿ - ಹೆಚ್ಚಾದಪ್ರೇಮವುಳ್ಳಮಾತಿನಿಂದ, ಸಲಹುವಂ-ರಕ್ಷಿಸುವನು, ಆನಳನೃಪನ-ಆನಳರಾಜನ, ನಿಜಸೌಂದರಿಯ- ತನ್ನಲಾವಣ್ಯವು (೨) ಇಳೆಗೆ-ಭೂಮಿಗೆ, ನಳಕೂಬರ, ಜಯಂತರ; ಚೆಲುವ-ಸೌಂದರ್ಯವನ್ನೂ, ಮದನನ-ಮನ್ಮಥನ, ರೂಪರೇಖೆಯ-ಸೌಂದರ್ಯವಿಲಾಸವನ್ನು, ಲೋಕದಲಿ-ಲೋಕದಲ್ಲಿ, ಪಳಿವುದು-ತಿರಸ್ಕರಿಸುವುದು ||೩೬||

ತಾತ್ಪರ್ಯ:— ನಾನು ನಳಚಕ್ರವರ್ತಿಗೆ ವಾಹನವಾಗಿರುವ ಹಂಸೆಯು. ನನ್ನನ್ನು ಆದರಣೆಯ ಮಾತುಗಳಿಂದ ಪ್ರೀತಿಸಿ ರಕ್ಷಿಸುತ್ತಿರುವನು. ಅವನ ರೂಪವು ಅನ್ಯಾದೃಶವಾದುದು, ಕುಬೇರನ ಮಗನಾದ ನಳಕೂಬರನನ್ನೂ, ಇಂದ್ರಪುತ್ರನಾದ ಜಯಂತನನ್ನೂ, ಆತನ ರೂಪರೇಖಾ ವಿಲಾಸವು ಈ ಲೋಕದಲ್ಲಿ ನಿಂದಿಸುವಂತಿದೆ ||೩೬||

ಟಿಪ್ಪಣಿ:— ನಳಿನದಂತೆ ಮುಖವುಳ್ಳವಳು, ನಳಿನಮುಖಿ (ಬ. ವ್ರೀ) (೨) ಇಳಾ ಎಂಬುದಕ್ಕೆ (ದ್ಭ) ಎಳೆ ||೩೬||

ಮೂ|| ನಿನ್ನರೂಪಿನಚಲುವುನಳನೃಪ | ನುನ್ನತದಸೌಂದರಿಯಜಗ
ದೊಳ| ಗಿನ್ನುನಾಂಸರಿಕಾಣೆನಿಮುಗಿರ್ವರಿಗೆಸಮನಹುದು || ಎನ್ನ
ಲಾನುಡಿಗೇಳಿಹಂಸೆಗೆ | ತನ್ನಶಿರವನುಬಾಗಿಗುಣಸಂ | ಪನ್ನೆನು
ಡಿದಳುನಾಚಿನಸುನಗೆಯಿಂದ ವಿನಯದಲಿ ||೩೭||

ಟೀಕೆ:— ನಿನ್ನ ರೂಪಿನ-ನಿನ್ನಾಕಾರದ, ಚೆಲುವು-ಸೌಂದರ್ಯವೂ, ನಳನೃಪನ-ನಳರಾಜನ, ಸೌಂದರಿಯ-ಲಾವಣ್ಯವೂ, (೧) ನಿಮುಗಿರ್ವರಿಗೆ-ನಿಮ್ಮಿಬ್ಬರಿಗೆ, ಸಮನಹುದು-ಒಪ್ಪುವುದು, (೨) ಜಗದೊಳಗೆ-ಲೋಕದಲ್ಲಿ, ನಾನು-ನಾನು, ಇನ್ನು-ಇದಕ್ಕಿಂತಲೂ, ಸರಿಗಾಣೆ-ಸಾಮ್ಯವನ್ನು ನೋಡಲಿಲ್ಲ, ಎನ್ನಲ್-ಎಂದು ಹೇಳಲು, (೩) ಆ ನುಡಿಗೇಳಿ-ಆಮಾತನ್ನು ಕೇಳಿ, ಹಂಸೆಗೆ-ಹಂಸಪಕ್ಷಿಗೆ, ತನ್ನ, ಶಿರವನ್ನು ತಲೆಯನ್ನು, ಬಾಗಿ-ಬಗ್ಗಿಸಿ, ನಾಚಿ-ನಾಚಿಕೊಂಡು (೪) ಗುಣಸಂಪನ್ನೆ-ಸದ್ಗುಣೆಯಾದ ದಮಯಂತಿಯು, ನಸುನಗೆಯಿಂದ-ಮಂದಹಾಸದೊಡನೆ, ವಿನಯದಲಿ-ಮಮತೆಯಿಂದ, ನುಡಿದಳು-ಹೇಳಿದಳು ||೩೭||

ತಾತ್ಪರ್ಯ:— ಆದಕಾರಣಎಲೈ ಸುಂದರಿ! ನಿನ್ನ ಸೌಂದರ್ಯಕ್ಕೂ ಅವನ ಚೆಲ್ವಿಕೆಗೂ ಅನುರೂಪ್ಯ ವಿರುವವಲ್ಲದೆ ನಿಮಗನುರೂಪರಾದವ

ರು ಲೋಕದಲ್ಲಿ ಮರ್‍ತ್ಯರೂ ಇಲ್ಲ, ಎಂದು ನುಡಿಯಲು, ಆ ಪಕ್ಷಿ ಹೇಳಿದಮಾತನ್ನು ಕೇಳಿ ವಿಸ್ಮಿತಳಾಗಿ ನಾಚಿಕೆಯಿಂದ ತಲೆಯನ್ನು ಬಗ್ಗಿಸಿ ಕೊಂಡು, ಮಂದಹಾಸದೊಡನೆ ಆ ಸುಗುಣೆಯು ಹೇಳಿದ್ದೇನಂದರೆ ॥೩೭॥

ಟಿಪ್ಪಣಿ:— (೧) ಎರಡು+ವರ್-ಇರ್ವರ್; ಪುಲ್ಲಿಂಗದಲ್ಲಿ ವರ್ ಪ್ರತ್ಯಯವು ಸೇರಿದುದರಿಂದ ಎರಡು ಎಂಬುದಕ್ಕೆ ,ಇರ್, ಎಂಬಾದೇಶವು ಬಂತು. (೨) ಜಗಕ್ಕೆ (ತ್ಸ) ಜಗತ್ (೩) ಅದು ನುಡಿ-ಆನುಡಿ (ಗಮಕ) ಆ ನುಡಿಯಂ ಕೇಳಿ-ಆ ನುಡಿಗೇಳಿ (ಕ್ರಿ. ಸ) (೪) ಗುಣದಿಂ ಸಂಪನ್ನೆ-ಗುಣಸಂಪನ್ನೆ (ತೃ. ತ) ॥೩೭॥

ಮೂ॥ ಪರಮಗುಣನಿಧಿಪಕ್ಷಿಕೇಳ್ಬಾ। ಹಿರನುಪಾತಕಿಮದನನಲೆನಿ।
ಷ್ಠುರದೊಳೆಸೆಯಲುಪುಷ್ಪಬಾಣದಿನೊಂದುದೆನ್ನೊಡಲು ॥ ಕರು
ಣರಸಧಾರೆಯಲಿತಾಪವ। ಪರಿಹರಿಸಬೇಕೆಂದುನೀನಾ । ಧರಣಿಪ
ತಿನಳನೃಪಗೆಬಿನ್ನೈಸೆಂದಳಿಂದುಮುಖಿ ॥೩೮॥

ಟೀಕೆ:— (೧) ಪರಮಗುಣನಿಧಿ-ಅತ್ಯಂತ ಗುಣಶಾಲಿಯಾದ, ಪಕ್ಷಿ-ಪಕ್ಷಿಯೇ, ಕೇಳ್-ಕೇಳು, ಮದನನು-ಮನ್ಮಥನು, ಬಾಹಿರನು ನೀಚನು, ಪಾತಕಿ-ಪಾಪಿಯು, ಅಲೆ-ಅಲ್ಲವೆ, (೨) ನಿಷ್ಠುರ ದೊಳ್-ಕಠಿನನಾಗಿ, ಪುಷ್ಪಬಾಣದಿ-ಹೂವಿನ ಬಾಣದಿದಿಂದ, ಎಸೆಯಲು-ಹೊಡೆಯಲು, ಎನ್ನೊಡಲು-ನನ್ನ ದೇಹವು, ನೊಂದುದು-ಬಾಧೆಪಟ್ಟಿತು, (೩) ಕರುಣ-ಕೃಪೆಯೆಂಬ, ರಸ-ನೀರಿನ, ಧಾರೆಯಲಿ-ಧಾರೆಯಿಂದ, ತಾಪವ-ಬೇಗೆಯನ್ನು, ಪರಿಹರಿಸಬೇಕು-ಹೋಗಲಾಡಿಸಬೇಕು, ಎಂದು-ಎಂಬದಾಗಿ ನೀಂ-ನೀನು, ಆಧರಣಿಪತಿ ನಳನೃಪಗೆ-ದೊರೆಯಾದ ನನಿಗೆ, ಬಿನ್ನೈಸು-ವಿಜ್ಞಾಪಿಸು. (ಎಂಬದಾಗಿ) ಇಂದುಮುಖಿ-ದಮಯಂತಿಯು, ಎಂದಳು-ಹೇಳಿದಳು ॥೩೮॥

ತಾತ್ಪರ್ಯ:— ಎಲೈ ಗುಣಶಾಲಿಯಾದ ಪಕ್ಷಿಯೇ ಕೇಳು. "ಆ ಮದನನು ಎಷ್ಟು ಕಠಿನನೋ! ಎಂತಹ ಪಾಪಿಷ್ಠನೋ! ಆನೀಚನು ನಿರ್ದಯನಾಗಿ ಕ್ರೂರವಾದ ತನ್ನ ಪುಷ್ಪ ಬಾಣಗಳನ್ನು ನನ್ನ ಮೇಲೆ ಪ್ರಯೋಗಿಸಿ ಬಾಧೆಪಡಿಸುತ್ತಿರುವನು, ಪರಿತಾಪವನ್ನು ತಾಳಲಾರೆನು, ನಿನ್ನ ಕರುಣಾರಸವೆಂಬ ಅಮೃತಧಾರೆಯಿಂದ ಈ ನನ್ನ ತಾಪವನ್ನು ಪರಿಹರಿಸುವವನಾಗು" ಎಂದು ಆ ನಳನಿಗೆ ನಾನು ವಿಜ್ಞಾಪಿಸಿದಳೆಂದು ತಿ

ಳಿಸುವವನಾಗು ॥೩೪॥

ಟಿಪ್ಪಣಿ:— (೧) ಗುಣಗಳ ನಿಧಿ–ಗುಣನಿಧಿ (ಷ. ತ) ಪರಮನಾದ ಗುಣನಿಧಿ–ಪರಮಗುಣ ನಿಧಿ–ಪರಮ ಗುಣನಿಧಿ (ವಿ. ಪೂರ್ವ. ಕ (೨) (ದ್ಭ) ನಿಟ್ಟುರ (೩) ಕರುಣವೇರಸ (ಅವ, ಪೂರ್ವ. ಕ) ಕರುಣರಸದಧಾರೆ (ಷ. ತ) ॥೩೪॥

ಮೂ॥ ಪರಮದುಃಖವಪರಿಹರಿಸಿಮಿಗೆ ¦ ಪರರಿಗುಪಕಾರರ್ಥವೆಸಗ
ಲು । ಪರಮಪುಣ್ಯವಿದೆಂದು ಪೇಳ್ವರುಹಿರಿಯರಾದವರು ॥ ಪರಮ
ಬಾಂಧವನೀನೆನಗೆಸ ।ತ್ಕರಿಸುವಿರಹದಿನೊಂದವಳಕರ । ಕರೆಗೆಗು
ರಿಮಾಡದಿರುಸಲಹೆಂದಳುಸರೋಜಮುಖಿ ॥೩೯॥

ಟೀಕೆ:—ಪರಮದುಃಖವ–ಹೆಚ್ಚಾದ ಸಂಕಟವನ್ನು. ಪರಿಹರಿಸಿ ಬಿಡಿಸಿ, (೧) ಮಿಗೆ–ಹೆಚ್ಚಾಗಿ, ಪರರಿಗೆ–ಇತರರಿಗೆ, ಉಪಕಾರಾರ್ಥವ ಉಪಕಾರ ಪ್ರಯೋಜನವನ್ನು, ಎಸಗಲು–ಮಾಡಲು, ಇದು ಪರಮಪುಣ್ಯಂ–ಬಹು ಪುಣ್ಯಕರವು, ಎಂದು, ಹಿರಿಯರಾದವರು–ದೊಡ್ಡವರು, ಪೇಳ್ವರು–ಹೇಳುವರು, ನೀಂ–ನೀನು, ಎನಗೆ–ನನಗೆ, ಪರಮ ಬಾಂಧವ–ಉತ್ತಮನಾದ ಬಂಧುವು, ಸತ್ಕರಿಸು–ಉಪಕಾರಮಾಡು, ವಿರಹದಿ–ವಿಯೋಗದಿಂದ, ನೊಂದವಳ–ವ್ಯಥೆಪಟ್ಟವಳನ್ನು, ಕರಕರೆಗೆ–ದುಃಖಕ್ಕೆ, (೨) ಗುರಿಮಾಡದಿರು–ಗುರಿಮಾಡಬೇಡ, ಸಲಹು–ರಕ್ಷಿಸು, (ಎಂದು) ಸರೋಜಮುಖಿ–ದಮಯಂತಿಯು, ಎಂದಳು–ಹೇಳಿದಳು ॥೩೯॥

ತಾತ್ಪರ್ಯ:— ಎಲೈ ರಾಜಹಂಸವೇ ! ಪರರಿಗುಂಟಾಗಿರುವ ದುಃಖವನ್ನು ಪರಿಹರಿಸಿ ಅವರಿಗೆ ಉಪಕಾರ ಮಾಡಿದರೆ ಪುಣ್ಯ ವುಂಟೆಂದು ದೊಡ್ಡವರು ಹೇಳುವರು. ಈಗ ನನ್ನ ದುಃಖನಿವಾರಣೆ ಮಾಡುವ ಬಂಧುವು ನೀನಲ್ಲದೆ ಮತ್ತೊಬ್ಬರಿಲ್ಲ. ವಿರಹ ವ್ಯಥೆಯಿಂದ ಸಂತಾಪ ಪಡುತ್ತಿರುವ ನನ್ನಲ್ಲಿ ಕೃಪೆಮಾಡು, ಬಾಧೆಪಡುತ್ತಿರುವ ನನ್ನ ಸಂಕಟವನ್ನು ತಪ್ಪಿಸಿ ರಕ್ಷಿಸುವುದಕ್ಕೆ ನೀನೇ ಸಮರ್ಥನು ॥೩೯॥

ಟಿಪ್ಪಣಿ— (೧) ರೀತಿವಾಚಕಾವ್ಯಯ (೨) ಗುರಿಯಂಮಾಡದಿರು–ಗುರಿಮಾಡದಿರು (ಕ್ರಿ. ಸ) ॥೩೯॥

ಮೂ॥ ಬಲಿದವಿರಹಾಗ್ನಿಯುಲಿನೊಂದೆನು । ಬಳಲಿದೆನುಹಿರಿದಾಗಿತಾ
ಪದಿ । ನಲವುಹಿಂಗಿತುಭ್ರಮಣೆಹೆಚ್ಚಿತುತ್ರಾಣವೆಳದಾಯ್ತು ॥
ಹಲವುಮಾತೇಕಿನ್ನುನಳನೃಪ । ತಿಲಕತಾಂಪತಿಯೆನದಲೆಭೊ ।

ತಳದಪುರುಷರುಪಿತನಸಮಕೇಳೆಂದಳಿಂದುಮುಖಿ ||೪೦||

ಟೀಕೆ:— ಬಲಿದ-ಹೆಚ್ಚಿದ, (೧) ವಿರಹಾಗ್ನಿಯಲ್ಲಿ-ವಿರಹವೆಂಬ ಬೆಂಕಿಯಲ್ಲಿ-ನೊಂದೆನು-ಬಾಧೆಪಟ್ಟೆನು, ತಾಪದಿ-ಪರಿತಾಪದಿಂದ, ಹಿರಿದಾಗಿ-ಹೆಚ್ಚಾಗಿ, ಬಳಲಿದೆನು - ಆಯಾಸಹೊಂದಿದೆನು, ನಲವು- ಸಂತೋಷವು, ಹಿಂಗಿತು-ತಗ್ಗಿತು, (೨) ಭ್ರಮಣೆ-ಭ್ರಾಂತಿಯು, ಹೆಚ್ಚಿತು-ಹೆಚ್ಚಾಯ್ತು, ತ್ರಾಣವು-ಬಲವು, ಎಳದಾಯ್ತು-ಕುಗ್ಗಿತು, ಹಲವು ಮಾತು-ಬಹಳಮಾತುಗಳು, ಇನ್ನೇಕೆ-ಇನ್ನೇತಕ್ಕೆ, ನಳನೃಪ ತಿಲಕ-ನಳರಾಜೇಂದ್ರನು, ತಾಂ-ಅವನು, ಪತಿ-ನನಗೆ ಗಂಡನು. ಅಲ್ಲದಲೆ ಹೊರತು, ಭೂತಳದ-ಭೂಮಿಯಲ್ಲಿರತಕ್ಕ, ಪುರುಷರು-ಉಳಿದ ಗಂಡಸರು (೩) ಪಿತನ-ತಂದೆಯು, ಸಮ-ಸಮಾನರು, ಕೇಳ್-ಕೇಳು (ಎಂದು) ಇಂದುಮುಖಿ-ದಮಯಂತಿಯು, ಎಂದಳ್-ಎಂದಳು ||೪೦||

ತಾತ್ಪರ್ಯ:—ವಿರಹಾಗ್ನಿಯು ನನ್ನನ್ನು ದಹಿಸುತ್ತಿರುವುದು. ಪರಿತಾಪದಿಂದ ಖಿನ್ನಳಾದೆನು. ಉಲ್ಲಾಸವು ತಪ್ಪಿತು. ಭ್ರಾಂತಿಯು ಮಿತಿಮೀರುತ್ತಿದೆ. ಬಲವು ಕುಂದಿತು, ಹೆಚ್ಚಾಗಿ ಹೇಳಿಕೊಳ್ಳಲು ಶಕ್ತಿಯಿಲ್ಲ, ನಳರಾಜನು ನನಗೆ ಪ್ರಿಯ ಪತಿಯಲ್ಲದೆ ಉಳಿದ ಗಂಡಸರೆಲ್ಲರೂ ತಂದೆಗಳೇ ಸರಿ, ಅನ್ಯಥಾಇಲ್ಲ. ನೀನು ಇದನ್ನು ತಿಳಿದು ನನ್ನ ಕಾರ್ಯವನ್ನು ಸಾಧಿಸಿ ನೋಡಬೇಕು, ಎಂದು ಕೇಳಿಕೊಂಡಳು||೪೦||

ಟಿಪ್ಪಣಿ— (೧) ವಿರಹವೇ ಅಗ್ನಿ ವಿರಹಾಗ್ನಿ(ಅವ. ಪ್ರಾಸ್ವ. ಕ) (೨) (ಙ್ಭ)ಬವಣಿ, (೩) ಸಂಸ್ಕೃತದಲ್ಲಿ ಋಕಾರಾಂತವಾಗಿರುವ ಪಿತೃ ಶಬ್ದವು ಅಕಾರಾಂತವಾಗಿ ಕನ್ನಡಕ್ಕೆ ಲಿಂಗವಾಗಿದೆ ||೪೦||

ಮೂ|| ಅರಸಕೇಳಾಹಂಸೆತರುಣಿಯ | ಕರುಣದಳತೆಯಕಂಡುತಾ|
ಬಂದಿರುವಕಾರ್ಯದಹದನಲೇಸಾಯ್ತೆಂದುಮನದೊಳಗೆ || ಹರುಷ
ಮಿಗೆಕೊಂಡಾಡಿಸತಿಯಳ| ಕರೆದುನುಡಿದುದುನಿನಗೆನಳಭೂ |ವರ
ನಪತಿಯನುಮಾಳ್ಪೆ ನಂಜದಿರೆಂದುದಾಹಂಸೆ ||೪೧||

ಟೀಕೆ:— ಅರಸ-ಧರ್ಮರಾಜನೇ, ಕೇಳ್-ಕೇಳು, ಆಹಂಸೆ-ಹಂಸವು, ತರುಣಿಯ-ದಮಯಂತಿಯ (೧) ಕರುಣದ-ಕೃಪೆಯ, ಅಳತೆಯ - ಪ್ರಮಾಣವನ್ನು, ಕಂಡು - ನೋಡಿ, ಮನದೊಳಗೆ - ತನ್ನಲ್ಲಿ, ತಾಂ-ತಾನು, ಬಂದಿರುವ, ಕಾರ್ಯದ-ಕೆಲಸದ, ಹದನ ರೀತಿಯು, ಲೇಸಾಯ್ತು-ಅನುಕೂಲವಾಯ್ತು, ಎಂದು-ಎಂದುಕೊಂಡು, ಆಹಂ

ಸೆ-ಹಂಸವು, ಸತಿಯಳ-ದಮಯಂತಿಯನ್ನು ಹರುಷ ಮಿಗೆ-ಸಂತೋಷದಿಂದ, ಕೊಂಡಾಡಿ-ಹೊಗಳಿ, ಕರೆದು-ಆಕೆಯನ್ನು ಕರೆದು, ನಿನಗೆ, (೨) ನಳಭೂವರನ-ನಳರಾಜನನ್ನು, ಪತಿಯನು- ಗಂಡನನ್ನಾಗಿ, ಮಾಳ್ಪಂ- ಮಾಡುವೆನು, ಅಂಜದಿರು-ಹೆದರಬೇಡ, ಎಂದುದು - ಎಂದು ಹೇಳಿತು ॥೪೧॥

ತಾತ್ಪರ್ಯ:— ಎಲೈ ಧರ್ಮನಂದನನೇ ಕೇಳು. ಆಹಂಸವು ದಮಯಂತಿಯದಾರ್ಢ್ಯವನ್ನೂ, ಸುಗುಣವನ್ನೂ, ಹೊಗಳುತ್ತಾ ಆಕೆಯಂ ಕರೆದು ಅಮ್ಮಾ ಅಂಜಬೇಡ ನಳನನ್ನೇ ನಿನಗೆ ಪತಿಯಾಗುವಂತೆ ಮಾಡಿ ನಿನ್ನಿಷ್ಟವನ್ನು ನೆರವೇರಿಸಿ ಕೊಡುವೆನು. ಎಂದುಹೇಳಿ ॥೪೧॥

ಟಿಪ್ಪಣಿ:—(೧) ಕರುಣಾ ಎಂಬ ಸಂಸ್ಕೃತದ ಆಕಾರಾಂತ ಶಬ್ದವು ಅಕಾರಾಂತವಾಗಿ ಕನ್ನಡಕ್ಕೆ ಲಿಂಗವಾಗಿದೆ (೨) ಭೂಮಿಗೆವರ--ಭೂವರ (ಷ. ತ) ನಳನೆಂಬಭೂವರ-ನಳಭೂವರ (ಸಂ.ಪೂರ್ವ.ಕ) ॥೪೧॥

ಮೂ॥ ಅಂತರಂಗದಬುದ್ಧಿಯನುದಮ | ಯಂತಿಗೆಲ್ಲವನರುಹಿತರುಣಿ
ಯ । ಸಂತವಿಟ್ಟಲ್ಲಿಂದಕಳುಹಿಸಿಕೊಂಡುಬೇಗದಲಿ ॥ ಮಂತಣದೆ
ಮಿಗೆತನ್ನ ಬಾಂಧವ ॥ ಸಂತತಿಯನೊಡಗೊಂಡು ನಿಷಧನ | ಚಿಂ
ತೆಯನುಪರಿಹರಿಸಬೇಕೆಂದೈದಿತಾಹಂಸೆ ॥೪೨॥

ಟೀಕೆ — ಅಂತರಂಗದ-ತನ್ನ ಮನೋಗತವಾದ, ಬುದ್ಧಿಯನ್ನೆಲ್ಲವನು-ಅಭಿಪ್ರಾಯವೆಲ್ಲವನ್ನೂ, ದಮಯಂತಿಗೆ, ಅರುಹಿ-ತಿಳಿಸಿ, ಅಲ್ಲಿಂದ, ಕಳುಹಿಸಿಕೊಂಡು-ಹೊರಟು, (೧) ಬೇಗದಲಿ-ಬೇಗನೆ, ಮಿಗೆ-ಹೆಚ್ಚಾದ (೨) ಮಂತಣದೆ-ಆಲೋಚನೆಯಿಂದ, ತನ್ನ, ಬಾಂಧವ ಸಂತತಿಯಂ-ಬಂಧುಸಮೂಹವನ್ನು, ಒಡಗೊಂಡು-ಕರೆದು ಕೊಂಡು, ನಿಷಧನ-ನಳನ, ಚಿಂತೆಯನು-ಆಲೋಚನೆಯನ್ನು, ಪರಿಹರಿಸಬೇಕೆಂದು-ತೀರಿಸ ಬೇಕೆಂದು, ಆಹಂಸೆ, ಐದಿತು-ಹೋಯಿತು ॥೪೨॥

ತಾತ್ಪರ್ಯ:— ತನ್ನ ಅಂತರಂಗವನ್ನು ವಿಸ್ತಾರವಾಗಿ ತಿಳಿಸಿಆಕೆಯಂ ಸಮಾಧಾನಗೊಳಿಸಲು ಆಕೆಯು-ಮೆಚ್ಚಿ ಬೇಗನೆ ಕಾರ್ಯವನ್ನು ಸಾಧನೆಮಾಡು ಹೊರಡು ಎಂದು ಹೇಳಲು ಕೂಡಲೇ ಹೊರಟುಬಂದು ತನ್ನ ಬಂಧುಗಳೊಡನೆ ಆಲೋಚಿಸಿ ಅವರನ್ನೂ ಸಂಗಡ ಕರೆದುಕೊಂಡು ಈ ಶುಭ ವೃತ್ತಾಂತವನ್ನು ನಳನಿಗೆ ತಿಳಿಸಿ ಆತನನ್ನು ಸಂತೋಷಪಡಿಸಬೇಕೆಂದು ನಿಷಧ ಪಟ್ಟಣದ ಸಮೀಪಕ್ಕೆ ತೆರಳಿತು. ॥೪೨॥

ಟಿಪ್ಪಣಿ:— (೧) (ತ್ಸ) ವೇಗ, ಸುಬಂತಪ್ರತಿರೂಪಕ ಕಾಲವಾಚಕಾವ್ಯಯ. (೨) (ತ್ಸ) ಮಂತ್ರಣ, ತೃತೀಯೆಗೆ ಎ ಎಂಬಾದೇಶವು ಬಂದಿದೆ ||೩೨||

ಮೂ|| ಆಗನಳನೃಪನಂಗದಕ್ಷಿಣ| ಭಾಗಭುಜನಯನಂಗಳದುರಿದ|
ವಾಗಕೇಳಿದನಿದರಫಲವೇನೆಂದುಭೂಸುರರ || ಭೋಗಸುಖದರುಶ
ನದಫಲದಿಂ | ದೀಗಲಹುದೆನಲಾಸಮಯದಿಸ | ರಾಗದಲಿನಡೆತಂ
ದುದಾನೃಪನೆಡೆಗೆಕಳಹಂಸೆ ||೪೩||

ಟೀಕೆ:— ಆಗ-ಆಕಾಲದಲ್ಲಿ, ಅಂಗ-ದೇಹದ, ದಕ್ಷಿಣಭಾಗ-ಬಲಗಡೆಯ, (೧) ಭುಜನಯನಂಗಳ್-ತೋಳು ಮತ್ತು ಕಣ್ಣುಗಳು, ಅದುರಿದುವು-ಹಾರಿದವು, ಆಗ, ಭೂಸುರರ-ಬ್ರಾಹ್ಮಣರನ್ನು, ಇದರ-ಈ ಶಕುನದ (೨) ಫಲವು-ಉಪಯೋಗವು, ಏನೆಂದು-ಏನೆಂಬದಾಗಿ, ಕೇಳಿದಂ-ಕೇಳಿದನು, ದರುಶನದ-ಈ ಶಕುನವನ್ನು ಕಂಡ, ಫಲದಿಂ-ಫಲದಿಂದ, ಈಗಲಿ-ಕೂಡಲೆ, ಭೋಗಸುಖ-ಸಂಪೂರ್ಣಸುಖವು, ಅಹುದು-ಆಗುವುದು, ಎನಲ್-ಎಂದು ಕೇಳಲು, ಆಸಮಯಲ್ಲಿ-ಆಕಾಲದಲ್ಲಿ (೩) ಕಳಹಂಸೆ-ಹಂಸರಾಜನು, ಸರಾಗದಲಿ-ಬೇಗನೆ, ಆನೃಪನೆಡೆಗೆ-ದೊರೆಯ ಸಮೀಪಕ್ಕೆ, ನಡೆತಂದುದು-ಬಂತು ||೪೩||

ತಾತ್ಪರ್ಯ:— ಇತ್ತ ನಳನ ಬಲಗಡೆಯ ತೋಳು, ಕಣ್ಣು,ಹಾರಿತು, ಕೂಡಲೆ ಬ್ರಾಹ್ಮಣರನ್ನು ಕರೆಯಿಸಿ ಈ ನಿಮಿತ್ತದ ಫಲವೇನೆಂದು ಕೇಳಲು, ಅವರು ಎಲೈ ರಾಜೇಂದ್ರನೇ ಈ ನಿಮಿತ್ತವನ್ನು ನೀನು ಕಂಡುದರಿಂದ ಶೀಘ್ರದಲ್ಲಿಯೇ ನಿನ್ನ ಇಷ್ಟಾರ್ಥವು ಯಾವುದೋ ಒಂದು ಸಿದ್ಧಿಸಿ ಸುಖಭೋಗಗಳುಂಟಾಗುವುವೆಂದು ಹೇಳಲಾ ಸಂತೋಷದಿಂದ ಅವರಿಗೆ ತಕ್ಕ ಬಹುಮಾನಮಾಡಿ ಕಳುಹಿಸಿಕೊಟ್ಟನು, ಅಷ್ಟರಲ್ಲಿಯೇ ಅಲ್ಲಿಗೆ ನಿಲ್ಲದೆ ಬೇಗನೆ ಹಂಸವು ಬಂತು ||೪೩||

ಟಿಪ್ಪಣಿ:— (೧) ಭುಜಕ್ಕೆ (ದ್ಭ) ಬೊಜ, (೨) ಫಲಕ್ಕೆ (ದ್ಭ) ಪಲ, (೩) ಕಳ-ಅವ್ಯಕ್ತ ಮಧುರಧ್ವನಿ, ಕಳವುಳ್ಳಹಂಸೆ ಕಳಹಂಸೆ (ವಿ. ಪೂರ್ವ. ಕ) ||೪೩||

ಮೂ|| ಬಂದಹಂಸೆಯಕಂಡುಮುಖಕಳೆ | ಯಿಂದಲರಿದನುನೃಪತಿ
ಮನದಲಿ | ಯಿಂದುಮುಖಿತನಗೊಲಿದಹದನಹುದೆಂದುಹರುಷದ
ಲಿ || ಮಂದಗಮನೆಯಕಂಡಿರೇಯೆ | ನೆಂದುನುಡಿದಳುಸತಿಯು

ಬಗೆಯೇ | ಸೆಂದುಕೇಳಲುನೃಪಗೆಬಳಿಕಿಂತೆಂದುದಾಪಕ್ಷಿ ||೪೪||

ಟೀಕೆ:— ಬಂದ, ಹಂಸೆಯು, ಕಂಡು, ನೃಪತಿ-ದೊರೆಯು,ಇಂದುಮುಖಿ-ಚಂದ್ರಮುಖಿಯು, ತನಗೆ-ನನ್ನನ್ನು, ಒಲಿದ-ಮೋಹಿಸಿದ,ಸದನ-ರೀತಿಯನ್ನು, ಅಹುದೆಂದು-ನಿಶ್ಚಯವೆಂದು, (೧)ಮುಖಕಳೆಯಿಂದಲಿ-ಮುಖಭಾವದಿಂದ, ಅರಿದನು-ತಿಳಿದನು,(೨)ಹರುಷದಲಿ ಸಂತೋಷದಿಂದ. ಮಂದಗಮನೆಯು-ಮೆಲ್ಲಡೆಯುಳ್ಳ ದಮಯಂತಿಯನ್ನು, ಕಂಡಿರೇ-ನೋಡಿದಿರಾ, ಏನೆಂದು-ಏನೆಂಬದಾಗಿ, ನುಡಿದಳು-ಹೇಳಿದಳು. ಸತಿಯು- ಆಸ್ತ್ರೀಯು, ಬಗೆ-ಮನಸ್ಸು, ಏನು-ಹೇಗಿದೆ, ಎಂದು-ಎಂಬದಾಗಿ, ಕೇಳಲು, ಬಳಿಕ-ಆಮೇಲೆ, ಆಪಕ್ಷಿ, ನೃಪಗೆ-ದೊರೆಯಂಕುರಿತು, ಇಂತೆಂದಿತು-ಹೀಗೆ ಹೇಳಿತು ||೪೪||

ತಾತ್ಪರ್ಯ: — ಅದರ ಮುಖವನ್ನು ನೋಡಿ, ಇಂಗಿತಜ್ಞನಾದ, ದೊರೆಯು, ಆ ಪಕ್ಷಿಯ ಮುಖಚಿಹ್ನೆಯಿಂದಲೇ ದಮಯಂತಿಯಂ ನೋಡಿದ್ದೆಯೊ ? ಏನು ಹೇಳಿದಳು ? ಆಕೆಯುಮನಸ್ಸು, ಹೇಗಿರುವುದು ? ಎಂದು ಪ್ರಶ್ನೆಮಾಡಲು ಹಂಸವು ರಾಜನಂ ಕುರಿತು ಇಂತೆಂದಿತು. ||೪೪||

ಟಿಪ್ಪಣಿ:— (೧) ಮುಖಕ್ಕೆ (ದ್ಭ) ಮೊಗ, (೨) (ತ್ಸ) ಹರ್ಷ, ||೪೪||

ಮೂ|| ಮಾನವಾಧಿಪಕೇಳುಮನದನು | ಮಾನಮಂಬಿಡುಗುಡಿಯಕ
ಟ್ಟೆಸು | ನೀನೆನಸಿದಿಷ್ಟಾರ್ಥಫಲಸಿದ್ಧಿಸಿದುದಿನ್ನೇನು || ಮಾನ
ನಿಧಿನೀಮುನ್ನಮಾಡಿದ | ನೂನಸುಕೃತದಫಲವುನಿನ್ನನೆ | ಧ್ಯಾ
ನಿಸುವಳನವರತಮನಚೇರಿಲ್ಲವಾಸತಿಗೆ||೪೫||

ಟೀಕೆ:— (೧) ಮಾನವಾಧಿಪ - ನರಪಾಲನೆ, ಕೇಳು, ಮನದ ಮನಸ್ಸಿನ, ಅನುಮಾನಮಂ-ಸಂದೇಹವನ್ನು, ಬಿಡು, (೨) ಗುಡಿಗಟ್ಟೆಸು-ಧ್ವಜವನ್ನೇರಿಸು, ನೀನೆನಸಿದ-ನೀನುಕೋರಿದ, ಇಷ್ಟಾರ್ಥ-ಕೋರಿಕೆಯು, ಫಲ-ಫಲವು, ಸಿದ್ಧಿಸಿದುದು-ಕೈಸೇರಿತು, ಮಾನನಿಧಿ-ಮಾನಶಾಲಿಯಾದ, ನೀಂ-ನೀನು, ಮುನ್ನ-ಪೂರ್ವದಲ್ಲಿ, ಮಾಡಿದ, ಅನೂನ-ಕೊರತೆಯಿಲ್ಲದ, ಸುಕೃತದ-ಪುಣ್ಯದ, ಫಲವು - ಪರಿಪಾಕವು, ಇನ್ನೇನು-ಇನ್ನೆಂಥಾದ್ದೋ! ಅವಳ್-ಆಕೆಯು, ನಿನ್ನನೆ - ನಿನ್ನನ್ನೆ, ಅನವರತ-ಯಾವಾಗಲೂ, ಧ್ಯಾನಿಸುವಳು- ನೆನೆಯುತ್ತಿರುವಳ , ಆಸು

ತಿಗೆ – ಆಕೆಗೆ, ಮನ-ಮನಸ್ಸು-, ಬೇರಿಲ್ಲವು-ಬೇರೆಕಡೆಯಿಲ್ಲವು ॥೪೫॥

ತಾತ್ಪರ್ಯ:-- ಎಲೈ ದೊರೆಯೇ ಇನ್ನು ಸಂಶಯವಂ ಬಿಡು, ಜಯಧ್ವಜವನ್ನೆತ್ತಿ ಕಟ್ಟು, ನಿನ್ನಿಷ್ಟಾರ್ಥವು ಸಿದ್ಧಿಸಿತು, ನಿನ್ನ ಪೂರ್ವಜನ್ಮದ ಸುಕೃತದ ಪರಿಪಾಕವು ಎಷ್ಟರದೊ ತಿಳಿಯದು, ಆ ದಮಯಂತಿಯನ್ನು ನೀನು ಹೇಗೆ ನೆನೆಯುತ್ತಿರುವೆಯೋ ಹಾಗೆಯೇ ಆಕೆಯೂ ನಿನ್ನನ್ನು ಸರ್ವದಾ ಧ್ಯಾನಿಸುತ್ತಿರುವಳು. ಅನ್ಯರ ಕಡೆಗೆ ಮನವನ್ನು ತಿರುಗಿಸಳು. ॥೪೫॥

ಟಿಪ್ಪಣಿ:— (೧) ಮನುವಿನಿಂದ ಹುಟ್ಟಿದವರು ಮಾನವರು, ಮಾನವರ ಅಧಿಪ, ಮಾನವಾಧಿಪ (ಷ. ತ) (೨) ಗುಡಿಯಂ ಕಟ್ಟಿಸು-ಗುಡಿಗಟ್ಟಿಸು (ಕ್ರಿ.ಸ) ॥೪೫॥

ಮೂ॥ ಆತಳೋದರಿನಿನ್ನ ಮೇಲತಿ । ಪ್ರೀತಿಯಿಂದೊಲಿದಂತರಂಗದಿ।
ಕಾತರಿಸುತಿಹಳಂಗನೆಯುಮುಪಟಳದಿಕಡುನೊಂದು॥ಧಾತುಗುಂ
ದಿದಳಾತರುಣಿಮನ। ಸೋತುಹಂಬಲಿಸುವಳುನಳನೃಪ।ನಾತನೇ
ಪತಿಯೆಂದುನಂಬಿಹೆನೆಂದಳಿಂದುಮುಖಿ ॥೪೬॥

ಟೀಕೆ—: (೧) ಆ ತಳೋದರಿ–ದಮಯಂತಿಯು, ನಿನ್ನ ಮೇಲೆ-ನಿನ್ನಲ್ಲಿ. ಅತಿಪ್ರೀತಿಯಿಂದೆ-ಬಹುಪ್ರೇಮದಿಂದ, ಒಲಿದು-ಮೆಚ್ಚಿ, ಅಂತರಂಗದಿ-ಮನಸ್ಸಿನಲ್ಲಿ, ಕಾತರಿಸುತಿಹಳ್ – ಚಾಂಚಲ್ಯವನ್ನು ಹೊಂದಿರುವಳು, ಅಂಗನೆಯು-ಆಕೆಯು, ಉಪಟಳದಿ-ವ್ಯಥೆಯಿಂದ, ಕಡುನೊಂದು-ಬಹುಸಂಕಟಪಟ್ಟು, (೨) ಧಾತುಗುಂದಿದಳ್-ಬಲಗುಂದಿರುವಳು, ಆ ತರುಣಿ-ಅವಳು, ಮನಸೋತು-ಮನಸ್ಸುಕೊರಗಿ। ನಳನೃಪನಾ – ನಳರಾಜನನ್ನೇ, ಹಂಬಲಿಸುವಳು-ಚಿಂತಿಸುವಳು, ಇಂದುಮುಖಿ – ದಮಯಂತಿಯು, ಆತನೆ-ನಳನೆ, ಪತಿಯೆಂದು-ಗಂಡನೆಂದು, ನಂಬಿಹೆಂ-ನಂಬಿರುವೆನು, ಎಂದಳ್-ಎಂಬದಾಗಿ ಹೇಳಿದಳು. ॥೪೬॥

ತಾತ್ಪರ್ಯ:-- ನಿನ್ನಲ್ಲಿಯೇ ತನ್ನ ಪ್ರೇಮವನ್ನೂ ಪ್ರಾಣವನ್ನೂ ಇಷ್ಟುಕೊಂಡು ನೀನು ಒಲಿವನೋ ಇಲ್ಲವೋ ಎಂಬ ಸಂಶಯದಿಂದ ಕಳವಳಿಸುತ್ತಿರುವಳು. ಮದನ ಬಾಧೆಯಿಂದ ಬಳಲಿ ನಿನ್ನನ್ನೇ ಹಂಬಲಿಸುತ್ತಾ ನೀನೇ ತನಗೆ ಪತಿಯಾಗುವವನೆಂದು ನಿರ್ಧರಿಸಿಕೊಂಡಿರುವಳು ॥೪೬॥

ಟಿಪ್ಪಣಿ:-- (೧) ತಳದಂತೆ ಉದರವುಳ್ಳವಳು-ತಳೋದರಿ (ಬ.

ವ್ರೀ)ಅವಳು ತಳೋದರಿ-ಅತಳೋದರಿ, (ಗಮಕ.) (೨) ಧಾತುವಿಂ ಕುಂದಿದಳ್-ಧಾತುಗುಂದಿದಳ್ (ಕ್ರಿಯಾ. ಸ) ॥೪೬॥

ಮೂ॥ ಎಲೆನೃಪತಿದಮಯಂತಿಯುನುನಿನ| ಗೊಲಿಸಿಬಂದೆಂಭಾಷೆಸಂ
ದುದು | ಲಲನೆಯುನುನೀಮದುವೆಯಾಗಿಂದೆನ್ನ ಕಳುಹೆನಲು ॥ ಬ
ಳಲುತೀಗೆಮಗೋಸುಗವೆಬಲು | ಹಳುವದಲಿಹಿರಿದಾಗಿಮನದಲಿ |
ತೊಳಲದಿರುಸಾಕಿನ್ನು ಗಮನಿಸುಯೆಂದುಬೀಳ್ಕೊಟ್ಟ ॥೪೭॥

ಟೀಕೆ:— ಎಲೆನೃಪತಿ-ದೊರೆಯೆ, ದಮಯಂತಿಯುನು, ನಿನಗೆ, ಒಲಿಸಿ-ಮೆಚ್ಚುವಂತೆಮಾಡಿ, ಬಂದೆಂ-ಬಂದಿರುವೆನು, ಭಾಷೆ - ಮಾತು, ಸಂದುದು - ಕೊಟ್ಟುಹೋಗಿದೆ, ನೀಂ-ನೀನು, ಲಲನೆಯುನು-ಆಸ್ತ್ರೀಯುನ್ನು, ಮದುವೆಯಾಗು- ವಿವಾಹಮಾಡಿಕೊಳ್ಳುವವನಾಗು, ಇಂದು-ಈಗ, ಎನ್ನ-ನನ್ನನ್ನು, ಕಳುಹು-ಕಳುಹಿಸಿಕೊಡು, ಎನಲು-ಎಂದು ಕೇಳಲು, ಈಗ-ಎಮಗೋಸುಗವೆ-ನಮಗಾಗಿ, (೧) ಬಲುಹಳುವದಲಿ-ದೊಡ್ಡಕಾಡಿನಲ್ಲಿ, ಬಳಲುತೆ-ಆಯಾಸಪಟ್ಟು, ಮನದಲಿ-ಮನಸ್ಸಿನಲ್ಲಿ, ಹಿರಿದಾಗಿ-ಹೆಚ್ಚಾಗಿ, ತೊಳಲದಿರು-ಹಂಬಲಿಸಬೇಡ, ಇನ್ನು, ಸಾಕು-ಸುಮ್ಮನಿರು, (೨) ಗಮನಿಸು-ಹೊರಡು, ಎಂದು, ಬೀಳ್ಕೊಟ್ಟ-ಕಳುಹಿಸಿದನು ॥೪೭॥

ತಾತ್ಪರ್ಯ:-- ಎಲೈ ದೊರೆಯೇ ನಾನು ತಕ್ಕಮಾತುಗಳನ್ನಾಡಿ ಆಕೆಯು ನಿನ್ನನ್ನು ಮೋಹಿಸುವಂತೆ ಮಾಡಿ ಮಾತನ್ನು ತೆಗೆದುಕೊಂಡು ಬಂದಿರುವೆನು. ನಿನ್ನನ್ನು ಲಗ್ನಮಾಡಿಕೊಳ್ಳುವುದರಲ್ಲಿ ಯಾವ ಸಂದೇಹವೂ ಇಲ್ಲ, ನೀನು ವಿವಾಹಮಾಡಿಕೋ, ಈಗ ನನ್ನನ್ನು ಕಳುಹಿಸಿಕೊಡು ಎನ್ನಲು, ಅಯ್ಯಾ ನನಗೋಸ್ಕರ ನೀನು ಬಹಳವಾಗಿ ಕಾಡಿನಲ್ಲಿ ತೊಳಲಿ ಬಳಲಿರುವಿ, ಇನ್ನು ಶ್ರಮೆಪಡಬೇಡ, ಸುಖವಾಗಿ ಹೋಗಿಬಾ ಎಂದು ಹೇಳಿಕಳುಹಿಸಿದನು. ॥೪೭॥

ಟಿಪ್ಪಣಿ:-- (೧) ಬಲಿತ್ತು ಹಳುವ-ಬಲುಹಳುವ (ವಿ. ಪೂರ್ವ. ಕ) (೨) ಗಮನ, ಎಂಬ ಸಂಸ್ಕೃತಭಾವನಾಮಕ್ಕೆ ಇಸು, ಪ್ರತ್ಯಯವು ಸೇರಿ ಕನ್ನಡದಲ್ಲಿ ಹೊಸಧಾತುವಾಗಿದೆ, ಕೊನೆಯ ನಕಾರವು ಲೋಪವಾಗಿ ,ಗಮಿಸು, ಎಂದಾಗಬೇಕಾಗಿತ್ತು ॥೪೭॥

ಮೂ॥ ಕೇಳುಪಾಂಡವತನಯರಾಜಮ| ರಾಳತೆರಳಿದಬಳಿಕನಳಭೂ|
ಪಾಲನಿತ್ತಲುಬಂದುಪೊಕ್ಕನುತನ್ನ ನಗರಿಯನು ॥ ಆಳುಮಂವಿ

ಯುಕಳುಹಿಮನದವಿ | ಶಾಲವಿರಹದತಾಪದಲಿವಿಗೆ | ಕೇಳಿಮೇಳ
ವಿನೋದವಿಭವವನುಳಿದನಾನೃಪತಿ ||೪೮||

ಟೀಕೆ:-- ಪಾಂಡವತನಯ-ಧರ್ಮಜನೇ, ಕೇಳು, ರಾಜಮರಾಳ-ರಾಜಹಂಸವು, ತೆರಳಿದ-ಹೋದ, ಬಳಿಕ, ನಳಭೂಪಾಲಕಂ- ನಳ ರಾಜನು, ಇತ್ತಲು- ಈ ಕಡೆ, ತನ್ನ, ನಗರಿಯನು - ಪಟ್ಟಣವನ್ನು, ಬಂದು ಪೊಕ್ಕನು-ಬಂದುಸೇರಿದನು, ಆ ನೃಪತಿ - ದೊರೆಯು, ಆಳು ಮಂದಿಯ-ಪರಿಜನರನ್ನು, ಕಳುಹಿ-ಕಳುಹಿಸಿ, ಮನದ - ಮನಸ್ಸಿನ (೧) ವಿಶಾಲವಿರಹದ-ವಿಸ್ತಾರವಾದ ವಿಯೋಗದ, ತಾಪದಲಿ-ದುಃಖದಿಂ ದ, ವಿಗೆ-ಹೆಚ್ಚಾಗಿ, ಕೇಳಿ-ಆಟವೂ, ಮೇಳ-ಗೋಷ್ಠಿಯೂ,ವಿನೋದ-ವಿನೋದವೂ, ವಿಭವವಂ-ವೈಭವವೂ ಇವುಗಳನ್ನು, ಉಳಿದಂ - ಬಿಟ್ಟನು. ||೪೮||

ತಾತ್ಪರ್ಯ:--ಆದೇಪ್ರಕಾರ ದೊರೆಯು ಅನುಮತಿಯನ್ನು ಪಡೆದು ಹಂಸವು ಹೊರಟು ಹೋಯಿತು, ದೊರೆಯು ತನ್ನೂರಿಗೆಬಂದು-ಪರಿಜನರನ್ನೂ, ಸೇನೆಯುವರನ್ನೂ, ಅವರವರ ಮನೆಗೆ ಕಳುಹಿಸಿ ಹೆಚ್ಚಾದ ವಿರಹವ್ಯಥೆಯಿಂದ, ಕ್ರೀಡಾಸಲ್ಲಾಪವಿನೋದವೊದವುಗಳನ್ನು ಬಿಟ್ಟು ಏಕಾಕಿಯಾಗಿ ಅಂತಃಪುರದಲ್ಲಿರುತ್ತಿದ್ದನು. ||೪೮||

ಟಿಪ್ಪಣಿ:— (೧) ವಿಶಾಲವಾದ ವಿರಹ-ವಿಶಾಲ ವಿರಹ (ವಿ. ಪೂರ್ವ. ಕ) ||೪೮ ||

ಮೂ|| ಅತ್ತಲಾದಮಯಂತಿನಳನಲಿ | ಚಿತ್ತವಿಟ್ಟಳುನೃಪಗೆವಿರಹವು
ಹತ್ತಿತಾಕೆಯಮೇಲೆಯಿರ್ವರಿಗಾಯ್ತುಸಂತಾಪ || ಚಿತ್ತಜನುಪಾ
ತಕನುವಿರಹವ| ಹತ್ತಿಸಿದನಿಬ್ಬರಿಗೆಮದನನ| ಹೆತ್ತವನುವರಪುರ
ದಚನ್ನಿಗರಾಯಕರುಣಿಸಿದ ||೪೯||

ಅಂತು ಸಂಧಿ ೨ಕ್ಕೆ ಪದ ೪೯ಕ್ಕಂ ಮಂಗಳಮಸ್ತು.

ಟೀಕೆ:—ಅತ್ತಲ್-ಆ ಕಡೆ, ದಮಯಂತಿ, ನಳನಲಿ-ನಳರಾಜನಲ್ಲಿ, ಚಿತ್ತವ-ಮನಸ್ಸನ್ನು, ಇಟ್ಟಳು-ಮಾಡಿದಳು, ನೃಪಗೆ - ದೊರೆಗೆ, ಆಕೆಯಮೇಲೆ-ದಮಯಂತಿಯ ವಿಷಯದಲ್ಲಿ, ವಿರಹವು-ವಿಯೋಗವು, ಹತ್ತಿತು-ಹೆಚ್ಚಿತು, ಪಾತಕನು-ಪಾಪಿಷ್ಠನಾದ, (೧) ಚಿತ್ತಜನು-ಮ

ನ್ಮಥನು, ಇಬ್ಬರಿಗೆ, ವಿರಹವ-ಅಗಲಿಕೆಯದುಃಖವನ್ನು, ಹತ್ತಿಸಿದಂ-ಉಂಟುಮಾಡಿದನು, ಮದನನ-ಮನ್ಮಥನ, ಹೆತ್ತವನು-ತಂದೆಯು,ವರಪುರದ-ವರಪುರಕ್ಕೆ ಅಧಿಪತಿಯಾದ, ಚೆನ್ನಿಗರಾಯ-ಕೇಶವಸ್ವಾಮಿಯು, ಕರುಣಿಸಿದಂ-ದಯೆಮಾಡಿದನು. ॥೪೯॥

ತಾತ್ಪರ್ಯ:—ಹೀಗೆ ನಳನಲ್ಲಿ ದಮಯಂತಿಗೂ ದಮಯಂತಿಯಲ್ಲಿ ನಳನಿಗೂ ಪರಸ್ಪರ ವ್ಯಾಮೋಹವು ಹೆಚ್ಚಿ ವಿರಹವ್ಯಥೆಯು ಬಲವಾಯ್ತು. ನಿಷ್ಕರುಣಿಯಾದ ಮದನನು ಇವರಿಬ್ಬರಿಗೂ ವಿರಹದುಃಖವನ್ನುಂಟುಮಾಡಿದನು. ಮನನ ಜನಕನಾದ ಬೇಲೂರ ಕೇಶವರಾಯನು ಅವರನ್ನು ರಕ್ಷಿಸಿದನು. ॥೪೯॥

ಟಿಪ್ಪಣಿ:—(೧) ಚಿತ್ತ-ಮನಸ್ಸಿನಲ್ಲಿ, ಜ-ಹುಟ್ಟಿದವನು (ಅವ) ಪ್ರಾದಿಸಮಾಸ ॥೪೯॥

ಎರಡನೆ ಸಂಧಿಯ ಟೀಕಾ ತಾತ್ಪರ್ಯವು ಮುಗಿದುದು.

ಮೂರನೆಯ ಸಂಧಿ.

ಸೂಚನೆ ರಾಜಿಸುವವರಭೀಮಪುರದಲಿ। ರಾಜನಳನೃಪಮದುವೆಯಾ
ಗಿಸು । ರಾಜತೇಜದಿಬಂದುಹೊಕ್ಕನುಪುರವಸತಿಸಹಿತ ॥

ಸೂಚನೆ, ಟೀಕೆ:—(೧) ರಾಜದೊರೆಯಾದ, ನಳನೃಪ- ನಳರಾಜನು, ರಾಜಿಸುವ-ಪ್ರಕಾಶಿಸುವ, ವರಭೀಮಪುರದಲಿ-ಶ್ರೇಷ್ಠವಾದ ಭೀಮರಾಜನ ಪಟ್ಟಣದಲ್ಲಿ, ಮದುವೆಯಾಗಿ- ಮದುವೆಮಾಡಿಕೊಂಡು (೨) ಸುರಾಜತೇಜದಿ-ಒಳ್ಳೆಯರಾಜಕಳೆಯಿಂದ, ಸತಿಸಹಿತ-ಹೆಂಡತಿಯೊಡನೆ, ಬಂದು, ಪುರವ-ರಾಜಧಾನಿಯನ್ನು, ಹೊಕ್ಕನು-ಪ್ರವೇಶಿಸಿದನು.

ಸೂಚನೆ ತಾತ್ಪರ್ಯ:—ನಳರಾಜನು ಭೀಮರಾಜನ ಪಟ್ಟಣದಲ್ಲಿ ದಮಯಂತಿಯನ್ನು ಮದುವೆ ಮಾಡಿಕೊಂಡು, ರಾಜ ತೇಜದಿಂದ ಪ್ರಕಾಶಿಸುತ್ತಾ ಹಂಡತಿಯೊಡನೆ ತನ್ನ ರಾಜಧಾನಿಗೆ ಬಂದನು.

ಟಿಪ್ಪಣಿ:—(೧) (ದ್ಭ) ರಾಯ, (೨) ರಾಜನತೇಜ-ರಾಜತೇಜ (ಷ. ತ) ಸುಷ್ಠುವಾದ ರಾಜತೇಜ-ಸುರಾಜತೇಜ (ಪ್ರಾ. ಸ)

ಪೂ॥ ಕೇಳುಧರ್ಮಜನಳನರೂಪನು । ಕೇಳಲೀಹದನಾಯ್ತುಸತಿ

ಗೆನೃ | ಪಾಲನಂಗವುಗೋಚರಿಸಲೆಂತಹುದೊವಿರಹಾಗ್ನಿ || ನಾ
ಲಗೆಗೆದ್ರವವಿಲ್ಲಮಂಚದ | ಮೇಲೆಮಲಗಳುಬಲಿದವಸ್ಥೆಯ |
ಹೇಳಲಿನ್ನೇನರಸದಮಯಂತಿಯಮನೋವ್ಯಥೆಯ ||೧||

ಟೀಕೆ:—ಧರ್ಮಜ-ಧರ್ಮರಾಜನೇ, ಕೇಳು, ನಳನರೂಪನು-ನಳರಾಜನ ರೂಪನ್ನು, ಕೇಳಲು-ಕೇಳಿದುದರಿಂದ, ಸತಿಗೆ-ದಮಯಂತಿಗೆ, ಈಹದನ-ಈ ರೀತಿಯು, ಆಯ್ತು-ಆಯ್ತು, ನೃಪಾಲನ-ದೊರೆಯು, ಅಂಗವು-ದೇಹವು, ಗೋಚರಿಸಲು-ಕಾಣಬರಲು, (೧) ವಿರಹಾಗ್ನಿ-ವಿರಹದಿಂದುಂಟಾದ ಅಗ್ನಿಯು, ಎಂತಹುದೋ-ಇನ್ನೆಷ್ಟು ಹೆಚ್ಚುವುದೋ, ನಾಲಗೆಗೆ-ನಾಲಗೆಯಲ್ಲಿ, ದ್ರವವು-ತೇವವು, ಇಲ್ಲ, ಮಂಚದ ಮೇಲೆ, ಮಲಗಳು-ನಿದ್ರಿಸಳು, ಬಲಿದ-ಹೆಚ್ಚಾದ, ಅವಸ್ಥೆಯ-ದುರವಸ್ಥೆಯನ್ನು, ದಮಯಂತಿಯ, (೨) ಮನೋವ್ಯಥೆಯ- ದುಃಖವನ್ನು, ಹೇಳಲಿನ್ನೇಂ-ಹೇಳಿ ಪ್ರಯೋಜನವೇನು ||೧||

ತಾತ್ಪರ್ಯ:— ಎಲೈ ಧರ್ಮರಾಜನೇ ಕೇಳು ಆ ದಮಯಂತಿಯು ನಳನ ರೂಪ ಗುಣಾದಿಗಳ ವೃತ್ತಾಂತವನ್ನು ಕೇಳಿದಮಾತ್ರದಿಂದಲೆ ಹೀಗೆ ವಿರಹವ್ಯಥೆಗೆ ಗುರಿಯಾಗಿರಲು, ಆತನನ್ನು ನೋಡಿದ್ದರೆ ಆಕೆಯ ವಿರಹಾಗ್ನಿಯು ಎಷ್ಟು ಹೊಚ್ಚುತ್ತಿದ್ದಿತೋ ಹೇಳಲಳವಲ್ಲ. ಅವಳ ನಾಲಗೆ ಒಣಗಿತು, ಮಂಚದಮೇಲೆ ಮಲಗಿದ್ದರೂ ರಾತ್ರಿ ನಿದ್ರಿಸದೆ ಎಚ್ಚತ್ತೇ ಇರುವಳು. ಆಕೆಯ ದುರವಸ್ಥೆಯನ್ನು ಇಷ್ಟೆಂದು ವರ್ಣಿಸಲು ಸಾಧ್ಯವೇ ? ||೧||

ಟಿಪ್ಪಣಿ:— (೧) ವಿರಹವೇ ಅಗ್ನಿ-ವಿರಹಾಗ್ನಿ (ಅವ, ಪೂರ್ವ. ಕ) ಅಗ್ನಿಗೆ (ದ್ಬ) ಅಗ್ಗಿ (೨) ಮನಃವ್ಯಥೆ-ಮನೋವ್ಯಥೆ, ವಿಸರ್ಗಕ್ಕೆ ಉಕಾರಾದೇಶವು ಬಂದು ಹಿಂದಣ ಅಕಾರದೊಡನೆ ಗುಣವಾಗಿದೆ ||೧||

ಮೂ|| ಲಲನೆನಿದ್ರಾಂಗನೆಯನುಳಿದಳು | ಹೊಲಬುತಪ್ಪಿದಮನದೆಸತಿ
ಯರು | ಸುಳಿಯೆನಳನೃಪಬಂದನಿದೆಯೆಂದೆನುತಕಳವಳಿಸಿ || ನಿ
ಲುಕಿನೋಡುವಳೊಮ್ಮೆಕಾಣದೆ | ಹಲುಬುವಳುಮತ್ತೊಮ್ಮೆಕಂಡ
ರೆಕೆಳದಿಯರುತಮ್ಮೊಳಗೆತಾವಾಲೋಚಿಸಿದರಲ್ಲಿ ||೨||

ಟೀಕೆ:— ಲಲನೆ-ದಮಯಂತಿಯು, (೧) ನಿದ್ರಾಂಗನೆಯ-ನಿದ್ರೆಯನ್ನು, ಉಳಿದಳು-ಬಿಟ್ಟಳು, ಹೊಲಬು-ರೀತಿಯು, ತಪ್ಪಿದ,

ಮನದೆ-ಮನಸ್ಸಿನಿಂದ, ಸತಿಯರು-ಹೆಂಗಸರು, ಸುಳಿಯೆ-ಕಾಣಿಸಲು, ನಳನೃಪ-ನಳರಾಜನು, ಇದೆ-ಇಗೋ, ಬಂದಂ-ಬಂದನು, ಎನುತ-ಎಂಬದಾಗಿ, ಕಳವಳಿಸಿ-ಹಂಬಲಿಸಿ, (೨) ಒಮ್ಮೆ-ಒಂದುಸಾರಿ, ನಿಲುಕಿ-ಇಣಿಕಿ, ನೋಡುವಳು, ಮತ್ತೊಮ್ಮೆ-ಇನ್ನೊಂದುಸಾರಿ, ಕಾಣದೆ ನೋಡದೆ, ಹಲುಬುವಳು-ತೊಳಲುವಳು, ಕೆಳದಿಯರು-ಸಖಿಯರು, ಕಂಡಿರೆ-ನೋಡಿರಲು, ಅಲ್ಲಿ, ತಮ್ಮೊಳಗೆತಾವು, ಆಲೋಚಿಸಿದರು-ಚಿಂತಿಸಿದರು ॥೩॥

ತಾತ್ಪರ್ಯ:— ನಿದ್ರೆಯನ್ನು ಬಿಟ್ಟು ಮನೋವೃತ್ತಿಯು ವ್ಯತ್ಯಾಸವಾಗಿ, ಎದುರಿಗೆ ಬಂದ ಹೆಂಗಸರನ್ನು ನಳನೆಂದು ಭ್ರಮಿಸುತ್ತಾ ಆತನನ್ನೇ ಧ್ಯಾನಿಸುತ್ತಾ, ಆಗಾಗ ಇಣಿಕಿ ನೋಡುತ್ತಾ, ಕಾಣದೆ ನಾನಾವಿಧವಾಗಿ ಹಂಬಲಿಸಿ ಕೂಗುತ್ತಾ ಉನ್ಮಾದಾವಸ್ಥೆಯನ್ನು ಹೊಂದುತ್ತಿರುವ ಆದಮಯಂತಿಯನ್ನು ನೋಡುತ್ತಿದ್ದ ಸಖಿಯರುತಮ್ಮೊಳಾಲೋಚಿಸಿದರದೆಂತೆನೆ ॥೨॥

ಟಿಪ್ಪಣಿ:— (೧) ನಿದ್ರೆಯೇ ಅಂಗನೆ-ನಿದ್ರಾಂಗನೆ (ಅವ. ಪ್ರೊರ್‍ವ. ಕ) (೨) ಒಂದು, ಎಂಬುದಕ್ಕೆ ವಾರಾರ್ಥ (ಸಾರಿ) ದಲ್ಲಿ ‹ಮೆ› ಪ್ರತ್ಯಯುವು ಸೇರಿದೆ ॥೨॥

ಮೂ॥ ವಿರಹಬಲಿದುದುದುಸತಿಗೆನಾವಿದ । ನರಸಗರುಹುವೆವೆಂದು
ಕೆಳದಿಯ।ರಿರದೆಬಂದರುಭೀಮನೃಪನೋಲಗಕೆತವಕದಲಿ॥ವರಕ
ವಿಗಳಂದದಲಿಧರಣೀ । ಶ್ವರರುಕೈವಾರಿಸಲುಕೇಳಿದ ।ತರುಣಿವಿರ
ಹಕೆತನುವತೆತ್ತಿಹಳೆಂದರಬಲೆಯರು ॥೩॥

ಟೀಕೆ:— ಸತಿಗೆ - ದಮಯಂತಿಗೆ, ವಿರಹ- ವಿರಹವ್ಯಥೆಯು, ಬಲಿದುದು-ಹೆಚ್ಚಾಗಿದೆ, ನಾವ್-ನಾವು, ಇದಂ-ಈ ಸಂಗತಿಯನ್ನು, ಅರಸಗೆ-ದೊರೆಗೆ, ಅರುಹುವೆವು-ತಿಳಿಸುವೆವು, ಎಂದು-ಎಂಬದಾಗಿ, ಕೆಳದಿಯರು-ಸಖಿಯರು, ಇರದೆ-ತಪ್ಪದೆ, ತವಕದಲಿ-ಬೇಗನೆ, ಭೀಮನೃಪನ-ಭೀಮರಾಜನ, ಓಲಗಕೆ-ಸಭೆಗೆ, ಬಂದರು-ಬಂದರು, ಅಂದಿನಲಿ-ಆಗ, (೧) ಧರಣೀಶ್ವರರು-ದೊರೆಗಳು, ವರಕವಿಗಳು-ಶ್ರೇಷ್ಠರಾದ ಕವಿಗಳು, ಕೈವಾರಿಸಲು-ತಿಳಿಯಪಡಿಸಲು, ಕೇಳಿದ-ಸಖಿಯರನ್ನು ಕೇಳಿದನು, ತರುಣಿ-ದಮಯಂತಿಯು, ವಿರಹಕ್ಕೆ ವಿರಹವ್ಯಥೆಗೆ, ತನುವ-ದೇಹವನ್ನು, ತೆತ್ತಿಹಳು-ಕೊಟ್ಟಿದ್ದಾಳೆ (ಎಂಬದಾಗಿ)(೨) ಅ

ಬಲೆಯರು-ಆಸ್ತ್ರೀಯರು, ಎಂದರು-ಹೇಳಿದರು ||೩||

ತಾತ್ಪರ್ಯ:— ದಮಯಂತಿಯ ವಿರಹಾವಸ್ಥೆಯು ವಿೂರಿ ಬಂದಿರುತ್ತಿದೆ, ನಾವು ಈ ವಿಷಯವನ್ನು ದೊರೆಗೆ ತಿಳಿಸುತ್ತೇವೆ, ಎಂದು ಸಖಿಯರು, ಬೇಗನೆ ಭೀಮರಾಜನಾಸ್ಥಾನಕ್ಕೆ ಬರಲು, ಅಲ್ಲಿದ್ದ ಸಾಮಂತ ರಾಜರೂ, ಕವಿಶ್ರೇಷ್ಠರೂ ಈ ಸಂಗತಿಯನ್ನು ಭೀಮ ನೃಪಾಲನಿಗೆ ಅರಿಕೆಮಾಡಿದರು, ಅವನು ಈ ಸ್ತ್ರೀಯರು ಬಂದ ಸಮಾಚಾರವನ್ನು ಕೇಳಲು, ಅವರು ಅಯ್ಯಾ ದಮಯಂತಿಯು ಬಹಳ ವಿರಹಾಕ್ರಾಂತಳಾಗಿದ್ದಾಳೆ. ವ್ಯಥೆಯು ಮಿತಿವಿೂರುತ್ತಿರುವುದು ಎಂದು ತಿಳಿಸಿದರು ||೩||

ಟಿಪ್ಪಣಿ:— (೧) ಧರಣಿ-ಭೂಮಿಯ, ಈಶ್ವರರು-ಪ್ರಭುಗಳು (ಅವ) (೨) ಅಬಲೆ-ಬಲವಿಲ್ಲದವಳು (ಅವ) (ನಞ್. ಬ. ವ್ರೀ) ||೩||

ಮೂ|| ಕೇಳುಧರ್ಮಜನಗುತಭೀಮನೃ | ಪಾಲತನ್ನಾತ್ಮಜೆಯಯ
ವ್ವನ | ದೇಳಿಗೆಯನಾಲಿಸುತವರನಾರೆಂದಚಿಂತೆಯಲಿ || ಓಲಗ
ಕೆನಡೆತಂದುಬರಿಸಿದ | ನೋಲೆಗಳಕಳುಹಿದನುಧರಣೀ | ಪಾಲಕ
ರಹೇಳೆನುತಹೊಯಿಸಿದನುಡಂಗುರವ ||೪||

ಟೀಕೆ:— ಧರ್ಮಜ-ಧರ್ಮರಾಜನೆ, ಕೇಳು, ಭೀಮನೃಪಾಲ-ಭೀಮರಾಜನು, ತನ್ನ-ತನ್ನ. ಆತ್ಮಜೆಯ-ಮಗಳ, (೧) ಯೌವನದ, ಏಳಿಗೆಯಂ-ಹೆಚ್ಚಿಕೆಯನ್ನು, ಆಲಿಸುತ-ಕೇಳುತ್ತಾ, ನಗುತ- ನಗುತ್ತಾ (೨) ವರಂ-ಗಂಡನು, ಆರು-ಯಾರು, ಎಂದು-ಎಂಬದಾಗಿ, ಚಿಂತೆಯಲಿ-ಆಲೋಚನೆಯಿಂದ, ಓಲಗಕ್ಕೆ-ಸಭೆಗೆ, ನಡೆತಂದು-ಬಂದು, ಓಲೆಗಳ-ಕಾಗದವನ್ನು, ಬರಿಸಿದನು-ಬರೆಯಿಸಿದನು, ಕಳುಹಿದನು-ಕಳುಹಿಸಿದನು, ಧರಣೀಪಾಲಕರ-ದೊರೆಗಳನ್ನು, ಬರಹೇಳು-ಬರಮಾಡು, ಎನುತ-ಎಂಬದಾಗಿ, ಡಂಗುರವ-ದಂಡೋರೆಯನ್ನು, ಹೊಯ್ಸಿದನು-ಹೊಡೆಯಿಸಿದನು ||೪||

ತಾತ್ಪರ್ಯ:- ಭೀಮರಾಜನು ತನ್ನ ಮಗಳು ಪೂರ್ಣ ಯೌವನವತಿಯಾದುದನ್ನು ಕೇಳಿ ನಸುನಕ್ಕು, ಇನ್ನು ಈಕೆಗೆ ವಿವಾಹವನ್ನು ಮಾಡಬೇಕು, ಅನುರೂಪವರನು ಹೇಗೆ ದೊರಕುವನೋ ಎಂದು ಚಿಂತಿಸುತ್ತಾ ಸಭಾಸ್ಥಾನಕ್ಕೆ ಬಂದು ಎಲ್ಲದೇಶಗಳಿಗೂ ಕಾಗದಗಳನ್ನು ಬರೆಯಿಸಿ ದೊರೆಗಳೆಲ್ಲರೂ ಸ್ವಯಂವರಕ್ಕಾಗಿ ಬರಬೇಕೆಂದು ಡಂಗುರ

ವಂ ಹೊಡೆಯಿಸಿದನು ॥೪॥

ಟಿಪ್ಪಣಿ: — (೧) (ದ್ಭ) ಜೌವನ, (೨) ಶ್ರೇಷ್ಠ, ಗಂಡ, ॥೪॥

ಮೂ॥ ಹರಿದರರಸಾಳುಗಳುದಿಕ್ಕುಗ। ಳರಸುಗಳನಗರಿಗಳಿಗತ್ತಲು
ಪುರವಶೃಂಗರಿಸಿದರು ಭೀಮನೃಪಾಲನಾಜ್ಞೆಯಲಿ ॥ ತರಿಸಿದನು
ಭಂಡಾರದಲಿನವ। ಭರಿತವಾದಸುವಸ್ತುಗಳವಿ। ಸ್ತರಿಸಿಕಟ್ಟಿದ
ರುಕೆಲದಲಿವೈವಾಹಮಂಟಪವ ॥೫॥

ಟೀಕೆ: — (೧) ಅರಸಾಳುಗಳು–ರಾಜಸೇವಕರು, ದಿಕ್ಕುಗಳ–ಎಲ್ಲದಿಕ್ಕಿನಲ್ಲಿಯೂ ಇರುವ, ಅರಸುಗಳ–ದೊರೆಗಳ, ನಗರಿಗಳಿಗೆ–ಪಟ್ಟಣಕ್ಕೆ, ಹರಿದರು–ಹೋದರು, ಭೀಮನೃಪಾಲನ–ಭೀಮರಾಜನ (೨) ಆಜ್ಞೆಯಲಿ–ಅಪ್ಪಣೆಯಪ್ರಕಾರವಾಗಿ, ಪುರವ–ಪಟ್ಟಣವನ್ನು, ಶೃಂಗರಿಸಿದರು–ಅಲಂಕರಿಸಿದರು, (೩)ಭಂಡಾರದಲಿ–ಭಂಡಾರದಿಂದ, ನವಭರಿತವಾದ–ಹೊಸದಾಗಿತುಂಬಿರುವ, ಸುವಸ್ತುಗಳ– ಶ್ರೇಷ್ಠಪದಾರ್ಥಗಳನ್ನು, ತರಿಸಿದನು, ಕೆಲದಲಿ – ಸಮೀಪದಲ್ಲಿ, ವೈವಾಹಮಂಟಪವ – ಕಲ್ಯಾಣಮಂಡಪವನ್ನು, ವಿಸ್ತರಿಸಿ – ವಿಶಾಲವಾಗಿ, ಕಟ್ಟಿದರು – ಕಟ್ಟಿಸಿದರು. ॥೫॥

ತಾತ್ಪರ್ಯ: —ರಾಜದೂತರು ನಾನಾದಿಕ್ಕುಗಳಲ್ಲಿಯೂಇರುವ ದೊರೆಗಳ ಸಮೀಪಕ್ಕೆ ಹೋಗಿ ಈ ವರ್ತಮಾನವಂ ತಿಳಿಸಿದರು. ದೊರೆಯು ಅಪ್ಪಣೆಯಂತೆ ಪುರವನ್ನು ಅಲಂಕಾರಮಾಡಿದರು. ಭಂಡಾರದಿಂದ ಅಮೂಲ್ಯವಾದ ಅನೇಕ ಪದಾರ್ಥಗಳನ್ನು ತೆಗೆಯಿಸಿ, ವಿಸ್ತಾರವಾಗಿ ಕಲ್ಯಾಣ ಮಂಟಪವನ್ನು ವಿಚಿತ್ರವಾಗಿರುವಂತೆ ಕಟ್ಟಿಸಿದನು. ॥೫॥

ಟಿಪ್ಪಣಿ: — (೧) ಅರಸಿನ ಆಳು–ಅರಸಾಳು (ಷ.ತ) (೨) (ದ್ಭ) ಆಣೆ, (೩) (ತ್ಸ) ಭಾಂಡಾಗಾರ ॥೫॥

ಮೂ ॥ ಹೊಳೆವದಂತದಕಂಭಗಳಪು। ತ್ಥಳಿಯಸಾಲಿನಮೇಲುಕಟ್ಟಿ
ನ। ತಳಿತತೋರಣದೋರಣದಲೋವೆಗಳಅರಳೆಲೆಯ ॥ ಬಳಿಯ
ಮುತ್ತಿನಸರದಪವಳದ। ಬಳಿಯಚೌರಿಯಮೇಲುಕಟ್ಟಿನ।ಪ್ರೊಳ
ಲಮಿಗೆರಚಿಸಿದರುಸತಿಯವಿವಾಹಮಂಟಪವ ॥೬॥

ಟೀಕೆ: —ಹೊಳೆವ–ಪ್ರಕಾಶಿಸುವ, (೧) ದಂತದಕಂಭಗಳ– ದಂ

ತದಕಂಬವುಳ್ಳ (೨) ಪುತ್ಥಳಿಯು-ಚಿನ್ನದಬೊಂಬೆಗಳ, ಸಾಲಿನ - ಪಜ್ತಿಯುಳ್ಳ, ಮೇಲುಕಟ್ಟಿನ-ಮೇಲ್ಕಟ್ಟುಗಳುಳ್ಳ, ತಳಿತ-ಚಿಗುರಾಗಿರುವ, ತೋರಣದ- ತೋರಣವುಳ್ಳ, ಓರಣದ - ಸಾಲಾಗಿರುವ, ಲೋವೆಗಳ-ಲೋವೆಗಳುಳ್ಳ, ಅರಳೆಲೆಯ, ಬಳಿಯ-ಸಮೀಪದಲ್ಲಿರುವ, ಮುತ್ತಿನಸರದ-ಮುತ್ತಿನಹಾರವುಳ್ಳ, (೩) ಪವಳದ-ಹವಳದ, ಬಳಿಯ- ಸಮೀಪದ, ಚೌರಿಯ-ಚಾಮರದ, ಮೇಲುಕಟ್ಟಿನ-ಮೇಲ್ಕಟ್ಟುಳ್ಳ, ಸತಿಯ-ದಮಯಂತಿಯ, ವಿವಾಹಮಂಟಪವ - ವಿವಾಹಮಂಟಪವನ್ನು, ಪ್ರೊಳಲಮಿಗೆ - ಪಟ್ಟಣದಷ್ಟು ವಿಸ್ತಾರವಾಗಿ, ರಚಿಸಿದರು - ಅಲಂಕರಿಸಿದರು. ||೬||

ತಾತ್ಪರ್ಯ:—ದಂತದಕಂಭಗಳೂ, ಅವುಗಳ ಸಮೀಪದಲ್ಲಿ ಸಾಲಾಗಿ ಚಿನ್ನದ ಬೊಂಬೆಗಳೂ, ದುಕೂಲದ ಮೇಲ್ಕಟ್ಟುಗಳೂ, ಹಸುರಾಗಿರುವ ಸೊಪ್ಪಿನ ತೋರಣಗಳೂ, ಸಾಲು ಸಾಲಾಗಿ ಲೋವೆಗಳೂ, ಮುತ್ತು ಹವಳದ ಸರಗಳೂ, ಚಾಮರಗಳೂ ಮೊದಲಾದ ಅಲಂಕಾರದಿಂದ, ಪಟ್ಟಣದಷ್ಟು ವಿಶಾಲವಾಗಿರುವಂತೆಮಂಟಪವನ್ನು ಸಿದ್ಧಪಡಿಸಿದನು||೬||

ಟಿಪ್ಪಣಿ:— (೧) (ದ್ಭ) ಜಂತ, (೨) (ತ್ಸ) ಪುತ್ರಿಕಾ, (೩) ಪವಳಕ್ಕೆ (ತ್ಸ) ಪ್ರವಾಳ ||೬||

ಮೂ|| ವಾರಣದವೀಧಿಗಳಸಾಲಿನ | ಸಾರಣೆಯುಕತ್ತುರಿಯುಮಿಗೆಪ|
ನ್ನೀರಚೆಳೆಯುದಪರಿಮಳದಕುಂಕುಮದಸಾರಣೆಯ|| ತೋರಣದ
ತೊಡಿಗೆಗಳಘನಶೃಂ|ಗಾರನೆರೆದಿರೆಕೇರಿಕೇರಿಯ | ನಾರಿಯುರಸಂ
ದಣಿವಿರಾಜಿಸಿದುದುವಿದರ್ಭಪುರ ||೭||

ಟೀಕೆ:—ವಾರಣದವೀಧಿಗಳ-ಆನೆಯಬೀದಿಗಳ, ಸಾಲಿನ-ಪಜ್ತಿಗಳ, ಸಾರಣೆಯ-ಸಾರಿಸಿರುವ, ಕತ್ತುರಿಯ-ಕಸ್ತೂರಿಯುಳ್ಳ, ಮಿಗೆ-ಹೆಚ್ಚಾಗಿ, ಪನ್ನೀರ-ಪನ್ನೀರಿನ, ಚಳೆಯುದ-ಚೆಲ್ಲುವಿಕೆಯುಳ್ಳ, ಪರಿಮಳದ-ಸುವಾಸನೆಯುಳ್ಳ, (೧) ಕುಂಕುಮದ-ಕುಂಕುಮಕೇಸರದ, ಸಾರಣೆಯ-ಸಾರಿಸುವಿಕೆಯುಳ್ಳ, ತೋರಣದ-ತೋರಣಗಳುಳ್ಳ, ತೊಡಿಗೆಗಳ-ಅಲಂಕಾರವುಳ್ಳ, ಘನಶೃಂಗಾರ-ಹೆಚ್ಚಾದ ಅಲಂಕಾರವು, ನೆರೆದಿರೆ-ಸೇರಿರಲು, (೨) ಕೇರಿಕೇರಿಯ-ಬೀದಿಬೀದಿಯ, ನಾರಿಯರ-ಹೆಂಗಸರ, ಸಂದಣಿ-ಗುಂಪುಳ್ಳ, ವಿದರ್ಭಪುರ-ವಿದರ್ಭನಗರವು, ರಾಜಿಸಿದುದು - ಪ್ರಕಾಶಿಸಿತು. ||೭||

ತಾತ್ಪರ್ಯ:—ರಾಜಬೀದಿಗಳನ್ನು ಕಸ್ತೂರಿಯ ನೀರನಲ್ಲಿ ಸಾರಿಸಿ ಪನ್ನೀರನ್ನು ಸುರಿದು, ಕುಂಕುಮ ಕೇಸರಗಂಧವನ್ನು ತೊಡೆದು ತೋರಣಗಳನ್ನು ಕಟ್ಟಿ ಶೃಂಗರಿಸಿರಲು, ಎಲ್ಲ ಬೀದಿಗಳಲ್ಲಿಯೂ ವಸ್ತ್ರಾಲಂಕಾರ ಭೂಷಣಗಳಿಂದ ಶೋಭಿತರಾದ ಸ್ತ್ರೀಯರುಸೇರಿರಲು ವಿದರ್ಭನಗರವು ದಿವ್ಯ ತೇಜೋವಿರಾಜಮಾನವಾಗಿದ್ದಿತು||೭||

ಟಿಪ್ಪಣಿ:—(೧) (ಧ್ವ) ಕುಂಕುಮ (೨) ವೀಪ್ಸೆಯಲ್ಲಿ ದ್ವಿರುಕ್ತಿ ಬಂತು ||೭||

ಮೂ|| ಮಾಳವಾಂಧ್ರಕಳಿಂಗಕೋಸಲ| ಚೋಳಮತ್ಸ್ಯವರಾಳಕೊಂಕಣ| ಗೌಳಕುಂತಳಮಗಧಬರ್ಬರಪಾಂಡ್ಯಕರ್ನಾಟ|| ಲಾಳವಂಗಸುರಾಷ್ಟ್ರಕುರುನೇ| ಪಾಳಘೂರ್ಜರಸಿಂಧುಮರುಪಾಂ| ಚಾಳಮೊದಲಾದಖಿಳಧರಣೀಪಾಲರೈದಿದರು ||೮||

ಟೀಕೆ: — ಮಾಳವ, ಆಂಧ್ರ, ಕಳಿಂಗ, ಕೋಸಲ, ಚೋಳ, ಮತ್ಸ್ಯ, ವರಾಳ, ಕೊಂಕಣ, ಗೌಳ, ಕುಂತಳ, ಮಗಧ, ಬರ್ಬರ, ಪಾಂಡ್ಯ, ಕರ್ಣಾಟ, ಲಾಳ, ವಂಗ, ಸುರಾಷ್ಟ್ರ, ಕುರು, ನೇಪಾಳ, ಘೂರ್ಜರ, ಸಿಂಧು, ಮತ್ತು, ಪಾಂಚಾಳ. ಮೊದಲಾದ-ಮುಂತಾದ, ಅಖಿಳ ಧರಣೀಪಾಲರು-ಎಲ್ಲದೊರೆಗಳೂ, ಐದಿದರು-ಹೋದರು ||೮||

ತಾತ್ಪರ್ಯ:—ಇಂತು ರಾರಾಜಿಸುತ್ತಿರುವ ಆ ಪಟ್ಟಣಕ್ಕೆ ಮಾಳವ ಮೊದಲಾದ ಸಮಸ್ತ ದೇಶಗಳ ರಾಜಾಧಿ ರಾಜರೂ ಬಂದು ಸೇರಿದರು. ||೮||

ಮೂ|| ಧರಣಿವಳಯದಿಗಂತದವನೀ| ಶ್ವರರುಭೂಸುರಸಿದ್ಧವಿದ್ಯಾಧರವಸುಕಿಂಪುರುಷಸುಜನರುಮಲ್ಲಗಾಯಕರು || ಪರಮಋಷಿಗಳುಪಂಡಿತರುಕವಿ|ವರರುನಟವಾದಕರುದೈವ| ಜ್ಞರುಗಣಿಕಸಂದೋಹಮೆರದುದುರಾಯಕೇಳಿಂದ ||೯||

ಟೀಕೆ:—ಧರಣಿವಲಯ-ಭೂಮಂಡಲದ, ದಿಗಂತದ - ಎಲ್ಲಾದಿಕ್ಕುಗಳಕಡೆಯವರೆಗೂ ಇರತಕ್ಕ, ಅವನೀಶ್ವರರು - ದೊರೆಗಳು, ಭೂಸುರಸಿದ್ಧವಿದ್ಯಾಧರರು-ಬ್ರಾಹ್ಮಣರು, ಸಿದ್ಧರು, ವಿದ್ಯಾಧರರು, ವಸು-ವಸುಗಳು, ಕಿಂಪುರುಷಸುಜನರು-ಕಿಂಪುರುಷರೆಂಬವರು, ಮಲ್ಲ-ಜಟ್ಟಿಗಳು, ಗಾಯಕರು-ಸಂಗೀತಗಾರರು, (೧) ಪರಮಋಷಿಗಳು-ಋಷಿಶ್ರೇಷ್ಠರು - ಪಂಡಿತರು-ವಿದ್ವಾಂಸರು,ಕವಿವರರು-ಕವೀಶ್ವರರು,

ನಟನಾದಕರು;ನಾಟ್ಯವಾದ್ಯಗಾರರು, ದೈವಜ್ಞರು-ಜ್ಯೋತಿಷ್ಕರು, ಗಣಿಕ ಸಂದೋಹ-ವೇಶ್ಯೆಯರಗುಂಪು, ಮೆರೆದುದು-ಪ್ರಕಾಶಿಸಿತು, ರಾಯ-ದೊರೆಯೇ, ಕೇಳು, ಎಂದ ||೯||

ತಾತ್ಪರ್ಯ:—ಮತ್ತು ಬ್ರಾಹ್ಮಣರು, ಸಿದ್ಧ, ವಿದ್ಯಾಧರ, ಕಿನ್ನರ, ಕಿಂಪುರುಷರೆಂಬ ದೇವತೆಗಳೂ, ಅಷ್ಟವಸುಗಳೂ, ಕವಿಗಳು, ಗಾಯಕರು, ನಾಟ್ಯಗಾರರು, ವಾದ್ಯಕಾರರು, ಜಟ್ಟಿಗಳು, ಋಷಿಗಳು, ಜ್ಯೋತಿಷ್ಕರು, ವೇಶ್ಯೆಯರು, ಮೊದಲಾದ ಸಭಾಲಂಕಾರದವರೆಲ್ಲರೂ ಬಂದು ಸೇರಿದರು ||೯||

ಟಿಪ್ಪಣಿ:....(೧) ಪರಮರಾದ ಋಷಿಗಳು-ಪರಮಋಷಿಗಳು (ವಿ. ಪೂರ್ವ. ಕ) ಋಷಿಗೆ (ದ್ಭ) ರಿಸಿ ||೯||

ಮೂ|| ಆಸಮಯದಲ್ಲಿನಾರದನುಹರಿ | ವಾಸುದೇವಾಯೆಂಬಪಠನವಿ|
ಲಾಸಗಳವೀಣೆಯಲಿನುಡಿಸುತಮುನಿಗಳೊಗ್ಗಿನಲಿ || ವಾಸವನ
ಸಭೆಗೈತರಲುಸಂ | ತೋಷದಿಂದಿದಿರೆದ್ದುಘನಸಿಂ |ಹಾಸನದಿಕು
ಳ್ಳಿರಿಸಿಕೈಮುಗಿದೆಂದನಮರೇಂದ್ರ ||೧೦||

ಟೀಕೆ:— ಆ ಸಮಯದಲಿ-ಆ ಕಾಲದಲ್ಲಿ, (೧) ನಾರದನು, ಹರಿ, ವಾಸುದೇವಾ, ಎಂಬ, ಪಠನವಿಲಾಸಗಳ-ಪಾಡುವ ಸೊಗಸನ್ನು, ವೀಣೆಯಲಿ-ಮಹತೀ ಎಂಬವೀಣೆಯಲ್ಲಿ, ನುಡಿಸುತ--ಬಾರಿಸುತ್ತಾ, ಮುನಿಗಳ-ಋಷಿಗಳ, ಒಗ್ಗಿನಲ್ಲಿ-ಸಮೂಹದೊಡನೆ, ವಾಸವನ-ಇಂದ್ರನ, ಸಭೆಗೆ-ಓಲಗಕ್ಕೆ, ಐತರಲು-ಬರಲು, ಅಮರೇಂದ್ರ-ದೇವೇಂದ್ರನು, ಸಂತೋಷದಿಂದ-ಹರ್ಷದಿಂದ, ಇದಿರೆದ್ದು - ಪ್ರತ್ಯುತ್ಥಾನವನ್ನು ಮಾಡಿ ಘನಸಿಂಹಾಸನದಿ-ದೊಡ್ಡ ಸಿಂಹಾಸನದಲ್ಲಿ, ಕುಳ್ಳಿರಿಸಿ-ಕೂರಿಸಿ, ಕೈಮುಗಿದು ಕೊಂಡು, ಎಂದನು-ಹೇಳಿದನು ||೧೦||

ತಾತ್ಪರ:— ಹೀಗಿರುತ್ತಿರಲು, ಇತ್ತಾಲಾ ನಾರದನು, ಹರಿ ವಾಸುದೇವ, ಕೃಷ್ಣ ಮುರಹರ ಜನಾರ್ದನ, ವೈಕುಂಠ ಮೊದಲಾದದಿವ್ಯನಾಮಗಳಿಂದ ಮಹಾವಿಷ್ಣುವನ್ನು ಸ್ತುತಿಸುತ್ತಾ ದಿವ್ಯವಾದ ವೀಣೆಯನ್ನು ನುಡಿಸುತ್ತಾ, ಸಮಸ್ತ ದೇವತೆಗಳೊಡನೆ ಸಭೆಯನ್ನು ಮಾಡಿಕೊಂಡುಸಿಂಹಾಸನದಮೇಲೆ ಸಂಭ್ರಮದೊಡನೆ ಕುಳಿತಿರುವ ದೇವೇಂದ್ರನ ಬಳಿಗೆ, ಬಹುಮಂದಿ ಮಹರ್ಷಿಗಳೊಡನೆ ದರ್ಶನಾರ್ಥವಾಗಿ ಬರಲು, ಅದನ್ನು ಕಂಡು ಇಂದ್ರನು ಇದಿರುಗೊಂಡು ಅರ್ಘ್ಯಪಾದ್ಯಾದ್ಯುಪ

ಚಾರಗಳಿಂದ ದಿವ್ಯ ಸಿಂಹಾಸನದಲ್ಲಿ ಕುಳ್ಳಿರಿಸಿ, ವಿನಯ ದೊಡನೆ ಸಮೀಪದಲ್ಲಿ ಕೈ ಮುಗಿದು ನಿಂತು ॥೧೦॥

ಟಿಪ್ಪಣಿ:—(೧) ನಾರ-ಮನುಷ್ಯರು ಮಾಡಿದ ಪಾಪಗಳನ್ನು, ದ - ಹೋಗಲಾಡಿಸುವನು (ಅವ) (೨) ಕೈಯ್ಯಂಮುಗಿದು (ಕ್ರಿ. ಸ) ॥ ೧೦ ॥

ಮೂ॥ ಎತ್ತಲಿಂದೈತಂದಿರುರ್ವಿಯೊ । ಳುತ್ತಮರುಧರಣೀಶರಲಿನೆ ರೆ। ಸತ್ಯಧರ್ಮಸುಶೀಲರಾರುಂಟಲ್ಲಿಗುಣವೇನು ॥ ಚಿತ್ತವಿಸು ಮುನಿನಾಥನೆನಗದ । ಬಿತ್ತರಿಸಿಪೇಳೆನಲುಸುರಮುನಿ । ಚಿತ್ತದಲಿ ನಸುನಗುತನುಡಿದನುಪಾಕಶಾಸನಗೆ ॥೧೧॥

ಟೀಕೆ:— ಎತ್ತಲಿಂದ-ಎಲ್ಲಿಂದ, ಐತಂದಿರಿ-ಬಂದಿರಿ, ಉತ್ತಮ ಯೋಗ್ಯರಾದ, ಧರಣೀಶರಲಿ-ದೊರೆಗಳಲ್ಲಿ, ನೆರೆ-ಹೆಚ್ಚಾಗಿ, ಸತ್ಯಧರ್ಮ ಸುಶೀಲರು-ಸತ್ಯವೂ, ಧರ್ಮವೂ, ಸದಾಚಾರವೂ ಉಳ್ಳವರು, ಆರುಂಟು ಯಾರಿರುವರು ? ಮುನಿನಾಥ-ಋಷಿಶ್ರೇಷ್ಠನೆ ! ಎನಗೆ-ನನಗೆ, ಅದ-ಆ ವಿಷಯವನ್ನು, ಬಿತ್ತರಿಸಿ-ವಿಸ್ತಾರವಾಗಿ, ಪೇಳು-ಹೇಳು, ಎನಲು-ಎಂದುಕೇಳಲು, (೧) ಸುರಮುನಿ-ದೇವರ್ಷಿಯು, ಚಿತ್ತದಲಿ-ಮನಸ್ಸಿನಲ್ಲಿ (೨) ನಸುನಗುತ-ಮುಗುಳ್ನಗೆಯನ್ನು ತೋರಿಸುತ್ತಾ, (೩) ಪಾಕಶಾಸನಗೆ-ಇಂದ್ರನಿಗೆ, ನುಡಿದನು-ಹೇಳಿದನು ॥೧೧॥

ತಾತ್ಪರ್ಯ:— ಎಲೈ ಮುನಿಯೇ ನೀನುಸರ್ವದಾ ಲೋಕತ್ರಯವನ್ನೂ ಸಂಚರಿಸುತ್ತಿರುವಿಯಲ್ಲವೆ ! ಲೋಕದಲ್ಲಿ ಅತ್ಯುತ್ತಮರೆಂದು ಹೆಸರುಪಡೆದಿರುವ ರಾಜರಲ್ಲಿ ಸತ್ಯ ಧರ್ಮ ದಯಾ ಶೌಚ ಮೊದಲಾದ ಸುಗುಣಗಳಲ್ಲಿ ಯಾರು ಪ್ರಸಿದ್ಧರಾಗಿರುವರು ? ಅವರ ಕಥೆಯನ್ನು ವಿಸ್ತಾರವಾಗಿ ತಿಳಿಸುವನಾಗು, ಎಂದು ಕೇಳಿ ಕೊಳ್ಳಲು ನಾರದನು ಇಂದ್ರನಂ ಕುರಿತು ಇಂತೆಂದನು ॥೧೧॥

ಟಿಪ್ಪಣಿ:—(೧) ಸುರ-ದೇವತೆಗಳಿಗೆ, ಋಷಿ-ಮುನಿ, (ಅವ) ಋಷಿಗಳಲ್ಲಿ, ದೇವರ್ಷಿ. ಬ್ರಹ್ಮರ್ಷಿ, ರಾಜರ್ಷಿ, ಮೊದಲಾದ ಭೇದಗಳುಂಟು, (೨) ನಸುವಾಗಿನಗು-ನಸುನಗು (ಕ್ರಿ. ಸ) (೩) ಪಾಕ ಪಾಕಾಸುರನನ್ನು, ಶಾಸನ-ಶಿಕ್ಷಿಸಿದವನು, (ಅವ) ॥೧೧॥

ಮೂ॥ ಅಮರಪತಿಕೇಳವನಿಯಲಿಭೂ । ರಮಣರುಂಟಾನೇಕರದರೊಳು । ನಿಮಗೆಪೇಳ್ವೆವಿದರ್ಭಪುರಪತಿಭೀಮನೃಪತನುಜೆ ॥ ಕಮಲ

ಮುಖಿದಮಯಂತಿಯೌವನ । ಸಮತಳಿಸೆರಚಿತಸ್ವಯಂವರ। ಕ
ಮಿತಬಲನೃಪರೈದಿಬರುತಿರೆಧರಣಿಯಗಲದಲಿ ॥೧೦॥

ಟೀಕೆ:— ಅಮರಪತಿ- ದೇವೇಂದ್ರನೆ, ಕೇಳು, ಅವನಿಯಲಿ ಭೂಮಿಯಲ್ಲಿ, ಭೂರಮಣರು-ದೊರೆಗಳು, ಅನೇಕರು- ಬಹುಮಂದಿ ಉಂಟು-ಇರುವರು, ನಿಮಗೆ-ನಿನಗೆ, ಪೇಳ್ವೆ-ಹೇಳುವೆನು, ಅದರೊಳು ಅವರಲ್ಲಿ, (ಒಬ್ಬನಾದ) ವಿದರ್ಭಪುರಪತಿ-ವಿದರ್ಭಪುರದರಸನಾದ, ಭೀಮನೃಪ-ಭೀಮರಾಜನ, ತನುಜೆ-ಮಗಳಾದ, ಕಮಲಮುಖಿ-ಕಮಲದಂತೆ ಮುಖವುಳ್ಳ, ದಮಯಂತಿ-ದಮಯಂತಿ, (ಎಂಬುವಳಿರುವಳು) ಆಕೆಗೆ-ಯೌವನ-ಯೌವನವು, ಸಮತಳಿಸೆ-ಪ್ರಾಪ್ತವಾಗಲು, ರಚಿತ-ಗೊತ್ತುಮಾಡಲ್ಪಟ್ಟಿರುವ, (೧) ಸ್ವಯಂವರಕೆ-ವಿವಾಹಕೆ, ಧರಣಿಯ-ಭೂಮಿಯ, ಅಗಲದಲಿ-ವಿಸ್ತಾರದಿಂದ, ಅಮಿತ-ಅಪಾರವಾದ, ಬಲ-ಶಕ್ತಿಯುಳ್ಳ, ನೃಪರ್-ದೊರೆಗಳು, ಬರುತಿರೆ-ಬರುತ್ತಿರಲಾಗಿ ॥೧೦॥

ತಾತ್ಪರ್ಯ:— ಎಲೈ ಮಹೇಂದ್ರನೇ ಕೇಳು ? ನೀನು ಕೇಳಿದ ದೊರೆಗಳು ಭೂಲೋಕದಲ್ಲಿ ಅನೇಕ ಜನರಿರುವರು. ಅವರಲ್ಲೊಬ್ಬನಾದ ಭೀಮರಾಜನೆಂಬುವನು, ವಿದರ್ಭಪುರದಲ್ಲಿ ಆಳುತ್ತಿರುವನು. ಆತನಿಗೆ ದಮಯಂತಿ ಎಂಬ ತ್ರಿಲೋಕ ಸುಂದರಿಯಾದ ಮಗಳೊಬ್ಬಳಿರುವಳು, ಆಕೆಗೆ ಯೌವನವು ಪ್ರಾಪ್ತವಾದುದರಿಂದ, ದೊರೆಯು ಸ್ವಯಂವರ ಮಾಡಬೇಕೆಂದು, ದಿವ್ಯವಾದ ಮಂಟಪವನ್ನು ಕಟ್ಟಿಸಿ, ಪಟ್ಟಣವನ್ನು ಶೃಂಗರಿಸಿ, ಈ ವೃತ್ತಾಂತವನ್ನು ಚಾರರ ಮುಖದಿಂದಲೂ, ಕಾಗದದಿಂದಲೂ ಸಮಸ್ತ ದೇಶದ ರಾಜಪುತ್ರರಿಗೂ ತಿಳಿಸಿ ಡಂಗುರವನ್ನು ಹಾಕಿಸಿರುವನು ॥೧೦॥

ಟಿಪ್ಪಣಿ:— (೧) ಸ್ವಯಂ-ತಾನಾಗಿ, ವರ-ಒಪ್ಪಿಕೊಳ್ಳುವದು. (ಅವ) ಕ್ಷತ್ರಿಯರಲ್ಲಿ ವಿವಾಹವಾಗುವ ಕನ್ಯೆಯೇ ತನಗೆ ಬೇಕಾದ ರಾಜಪುತ್ರನನ್ನು ವರಿಸಿದರೆ ಅನಂತರದಲ್ಲಿ ತಂದೆತಾಯಿಗಳು ಆತನಿಗೆ ವಿವಾಹಮಾಡಿಕೊಡುವ ಪದ್ಧತಿ. ಇದಕ್ಕೆ ಸ್ವಯಂವರ ಪದ್ಧತಿಎಂದುಹೆಸರು॥

ಮೂ॥ ಅಲ್ಲಿನೆರೆವಸಮಸ್ತಧರಣೀ । ವಲ್ಲಭರನೇನೆಂಬೆಪಟ್ಟಣ । ವೆಲ್ಲ
ತುಂಬಿದೆದೇಶದೇಶಾಂತರದಯಾಚಕರು । ನಿಲ್ಲದೈತರುತಿದೆವಿವಾಹ
ವ। ನಲ್ಲಿನೋಡುವೆವೆನುತಮುನಿಕರ । ಪಲ್ಲವದವೀಣೆಯಲಿಹಂಸೆ
ಯನೇರಿಹೊರವಂಟ ॥೧೩॥

ಟೀಕೆ:— ಅಲ್ಲಿ, ನೆರೆವ-ಸೇರುವ, ಸಮಸ್ತ ಧರಣೀ ವಲ್ಲಭರಂ-ಎಲ್ಲ ದೊರೆಗಳನ್ನೂ, ಏನೆಂಬೆ-ಎಷ್ಟೆಂದುಹೇಳಲಿ (೧) ಪಟ್ಟಣವೆಲ್ಲ-ಪುರವೆಲ್ಲವು, ತುಂಬಿದೆ-ತುಂಬಿಹೋಗಿದೆ, ದೇಶದೇಶಾಂತರದ-ನಾನಾದೇಶಗಳಿಂದಲೂ, ಯಾಚಕರು-ಭಿಕ್ಷುಕರು, ನಿಲ್ಲದೆ-ಬಿಡದೆ (೨) ಐತರುತಿದೆ-ಬರುತ್ತಿರುವರು. ಅಲ್ಲಿ, ವಿವಾಹವನು -ಮದುವೆಯನ್ನು, ನೊಡುವೆವು, ಎನುತ-ಎಂಬದಾಗಿಹೇಳಿ, ಮುನಿ-ಋಷಿಯು (೩) ಕರಪಲ್ಲವದ-ಚಿಗುರಿನಂತಿರುವ ಕೈಯು, ವೀಣೆಯುಲಿ ಹಂಸೆಯು-ಹಂಸಪಕ್ಷಿಯುನ್ನು, ಏರಿ-ಹತ್ತಿ, ಹೊರವಂಟ-ಹೊರಟನು ॥೧೩॥

ತಾತ್ಪರ್ಯ:— ಇದನ್ನು ತಿಳಿದು ಬಾಹುಬಲ ಪರಾಕ್ರಮ ಶಾಲಿಗಳಾದ ಬಹುಮಂದಿ ರಾಜರು ಬಂದು ಬಂದು ಸೇರುತ್ತಿರುವರು. ಉತ್ಸವಂ ನೋಡುವದಕ್ಕಾಗಿಯೂ, ಭೋಜನ ದಾನ ದಕ್ಷಿಣೆಗಳಿಂದ ತೃಪ್ತಿಪಡುವುದಕ್ಕಾಗಿಯೂ ಯಾಚಕರನೇಕರು ಹೋಗುತ್ತಿರುವರು. ಪಟ್ಟಣವೆಲ್ಲವೂ ಜನರಿಂದ ತುಂಬಿಹೋಗಿದೆ, ಮಹಾ ವೈಭವದಿಂದ ನಡೆವ ಆ ಸ್ವಯಂವರವನ್ನು ನೋಡಬೇಕೆಂಬ ಕುತೂಹಲದಿಂದ ನಾನೂ ಹೊರಟಿರುವೆನು. ಇದೇಸಮಾಚಾರವು, ಎಂದು ಹೇಳಿ ವೀಣೆಯನ್ನು ಬಾರಿಸುತ್ತಾ ಹಂಸವಾಹನದಲ್ಲಿ ಕುಳಿತು ನಾರದನು ತೆರಳಿದನು ॥೧೩॥

ಟಿಪ್ಪಣಿ:— (೧) (ತ್ಸ) ಪತ್ತನ (೨) ಕ್ರಿಯಾಪದವು ಬಹುವಚನದಲ್ಲಿರಬೇಕಾಗಿತ್ತು (೩) ಪಲ್ಲವದಂ ತಿರ್ಪಕರ-ಕರೆಪಲ್ಲವ (ಉ. ಉ. ಕಸ)॥ ೧೩ ॥

ಮೂ॥ ಅರಸಕೇಳಮರೇಂದ್ರನಾಮುನಿ । ವರನವಚನವಕೇಳಿಹೆಚ್ಚಿದ।ವಿರಹದಲಿಕರಸಿದನುಸತಿಯರಿಗೆಂದನೀಹದನ ॥ ಪರಮಸತಿದಮಯಂತಿಯುಳನುಪ । ಚರಿಯದಲಿನನಗೊಲುವಮಾಡೆಂ। ದುರುತರದವಸ್ತುಗಳಸಿತ್ತಬಲೆಯರಬೀಳ್ಕೊಟ್ಟ ॥೧೪

ಟೀಕೆ:—ಅರಸ-ಧರ್ಮರಾಜನೇ ! ಕೇಳ್-ಕೇಳು, ಅಮರೇಂದ್ರಂ-ದೇವೇಂದ್ರನು, ಆ ಮುನಿವರ-ಋಷಿಶ್ರೇಷ್ಠನ, ವಚನವ- ಮಾತನ್ನು, ಕೇಳಿ, ಹೆಚ್ಚಿದ-ಹೆಚ್ಚಾದ, ವಿರಹದಲಿ - ವಿರಹವ್ಯಥೆಯಿಂದ, ಕರಸಿದನು- (ಕೆಲವುಮಂದಿ ಸ್ತ್ರೀಯರನ್ನು) ಬರಮಾಡಿದನು, ರವ್ಮಸತಿ - ಉತ್ತಮ ಸ್ತ್ರೀಯಾದ, ದಮಯಂತಿಯುಳಂ- ದಮಯಂತಿಯನ್ನು, ಉಪಚಾರ್ಯದಲ್ಲಿ-ಉಪಚಾರಮಾಡಿ, ನನಗೆ-ನನ್ನಲ್ಲಿ, ಒಲವ-ಪ್ರೀ

ತಿಯನ್ನು, ಮಾಡಿ, ಎಂದು-ಎಂಬದಾಗಿ ಹೇಳಿ (೨) ಉರುತರದ - ಅ ಮೋಘವಾದ, ವಸ್ತುಗಳನ್ನು-ಪದಾರ್ಥಗಳನ್ನು. ಇತ್ತು - ಕೊಟ್ಟು, ಅಬಲೆಯರ-ಆಸ್ತ್ರೀಯರನ್ನು, ಬೀಳ್ಕೊಟ್ಟ-ಕಳುಹಿಸಿದನು ||೧೪||

ತಾತ್ಪರ್ಯ:—ಎಲೈ ಧರ್ಮನಂದನನೇ ಕೇಳು - ಇಂತಾ ನಾರದನು ಹೇಳಿದ ವಚನವಂ ಕೇಳಿ ದೇವೇಂದ್ರನು ವಿರಹಾಕ್ರಾಂತನಾಗಿ ಆ ದಮಯಂತಿಯನ್ನು ತಾನು ವರಿಸಬೇಕೆಂದು ಬಯಸಿ ಕೆಲವುಮಂದಿ ಅಪ್ಸರಸ್ತ್ರೀಯರನ್ನು ಕರೆದು ಅವರಿಗೆ ಅಮೂಲ್ಯವಾದ ವಸ್ತ್ರಾಭರಣಾದಿಗಳಿಂದ ಬಹುಮಾನಮಾಡಿ ಎಲೌ ಸ್ತ್ರೀಯರೇ ನೀವು ಭೂಲೋಕಕ್ಕೆ ಹೋಗಿ ವಿದರ್ಭ ರಾಜಪುತ್ರಿಯಾದ ದಮಯಂತಿಗೆ ನನ್ನ ವಿಷಯವನ್ನು ತಿಳಿಸಿ ಸಾಮ ದಾನಾದ್ಯುಪಾಯಗಳಿಂದ ನನ್ನಲ್ಲಿ ಅನುರಾಗವುಂಟಾಗುವಂತೆ ಮಾಡಿ ನಿಮ್ಮ ಚಾತುರ್ಯದಿಂದ ಆಕೆಯು ನನ್ನನ್ನು ವರಿಸುವಹಾಗೆ ಮಾಡಬೇಕು," ಎಂದು ಹೇಳಿ ಕಳುಹಿಸಿಕೊಟ್ಟನು. ||೧೪||

ಟಿಪ್ಪಣಿ:— (೧) ಇದು ಹದನ-ಈ ಹದನ (ಗಮಕ) (೨) ಸಂಸ್ಕೃತ ಶಬ್ದಗಳಲ್ಲಿ ಗುಣವಾಚಕವು ನೈಜ, ತರ, ತಮ, ಎಂದು ಮೂರುಬಗೆ, ತರ, ಎಂಬ ಪ್ರತ್ಯಯದಿಂದ ಗುಣವು ಅತಿಯಾಗಿದೆ ಎಂತಲೂ ತಮ, ಪ್ರತ್ಯಯದಿಂದ ಅತ್ಯಂತವಾದುದೆಂತಲೂ ಗುಣವಾಚಕದ ಅರ್ಥವು ಹೆಚ್ಚುವುದು. ||೧೪||

ಸೂ|| ತರಿಸಿಯೇರಿದದಿವ್ಯರಥನು | ಕರಸಿದನುಯಮವರುಣವಾಯು|
ವ್ಯರುಸಹಿತಹೊರವಂಟನಮರಾವತಿಯನಮರೇಂದ್ರ|| ಧರೆಗಿಳಿದು
ಬರೆಮುಂಪೆಮಾರ್ಗದಿ | ಸ್ಮರನರೂಪಿನನೈಷಧನಕಂ | ಡರುಮ
ನೋರಾಗದಲಿಕಾಣಿಸಿಕೊಂಡರುಚಿತದಲಿ ||೧೫||

ಟೀಕೆ:—ಅಮರೇಂದ್ರ-ಇಂದ್ರನು, ತರಿಸಿ-ಸಿದ್ಧಮಾಡಿಸಿ, ದಿವ್ಯರಥವನು - ಶ್ರೇಷ್ಠವಾದರಥವನ್ನು, ಏರಿದ-ಹತ್ತಿದನು, ಕರಸಿದನು-ಬರಮಾಡಿದನು, ಯಮವರುಣವಾಯುವ್ಯರುಸಹಿತ-ಯಮ, ವರುಣ,ವಾಯುವ್ಯ, ಈಮೂವರೊಡನೆ, ಅಮರಾವತಿಯಂ-ಅಮರಾವತೀಪಟ್ಟಣವನ್ನು, ಹೊರವಂಟ-ಬಿಟ್ಟು ಹೊರಟನು, ಧರೆಗೆ-ಭೂಲೋಕಕ್ಕೆ, ಇಳಿದುಬರೆ-ಇಳಿಯಲು, ಸ್ಮರನ-ಮನ್ಮಥನ, ರೂಪಿನ-ರೂಪವುಳ್ಳ, (೧)ನೈಷಧನ-ನಳನನ್ನು, ಮನೋರಾಗದಲಿ-ಅಪೇಕ್ಷೆಯಿಂದ, ಕಂಡರು-ನೋಡಿದರು, ಉಚಿತದಲಿ-ಮರ್ಯಾದೆಯೊಡನೆ, ಕಾಣಿಸಿಕೊಂಡರು-ದರ್ಶನವ

ನ್ನು ಕೊಟ್ಟರು ||೧೫||

ತಾತ್ಪರ್ಯ:—ತಾನೂ ಸಹ ದಿವ್ಯ ವಿಮಾನದಲ್ಲಿ ಕುಳಿತು ಯಮ, ವರುಣ, ವಾಯು, ಈ ಮೂವರು ದಿಕ್ಪಾಲಕರನ್ನು ಬರಮಾಡಿ ಸಂಗಡ ಕರೆದು ಕೊಂಡು ಹೊರಟು ಭೂಲೋಕಕ್ಕೆ ಇಳಿದು ಬಂದು ನಿಷಧ ದೇಶದ ದೊರೆಯಾದ ನಳನನ್ನು ಕಂಡು, ಮನ್ಮಥನನ್ನು ತಿರಸ್ಕರಿಸುವಂತಿರುವ ಅವನ ಸೌಂದರ್ಯಕ್ಕೆ ಆಶ್ಚರ್ಯಪಟ್ಟು ಅವನನ್ನು ಮರ್ಯಾದೆಯಿಂದ ನಾಲ್ಕು ಮಂದಿಯೂ ಕಾಣಿಸಿಕೊಂಡರು. ||೧೫||

ಟಿಪ್ಪಣಿ:— (೧) ನಿಷಧದೇಶದ ದೊರೆ-ನೈಷಧ ||೧೫||

ಮೂ|| ನಳಿನಮಿತ್ರನತೇಜದಿಂಧರೆ | ಗಿಳಿವಮಹಿಮರಕಂಡುಭರದಿಂ|
ದಿಳೆಗಿಳಿದುಭಕ್ತಿಯಲಿನಳಕೈಮುಗಿದುನಿಂದಿರಲು | ತಳಿತಹರು
ಷಾನಂದದಲಿಬರೆ | ಸೆಳೆದುಬಿಗಿಯಪ್ಪಿದರುರಾಯನ | ಚೆಲುವನೀ
ಕ್ಷಿಸಿನಲಿದುಕೊಂಡಾಡಿದರುಮನವೊಲಿದು ||೧೬||

ಟೀಕೆ:— (೧) ನಳಿನ ಮಿತ್ರನ-ಸೂರ್ಯನ, ತೇಜದಿಂ-ಕಾಂತಿಯಿಂದ, ಧರೆಗೆ-ಭೂಮಿಗೆ, ಇಳಿವ-ಇಳಿದ, ಮಹಿಮರ-ಮಹನೀಯರನ್ನು, ಕಂಡು-ನೋಡಿ, ನಳ-ನಳನು, ಭರದಿಂದೆ-ಬೇಗನೆ, ಇಳೆಗೆ-ಭೂಮಿಗೆ, ಇಳಿದು-ಇಳಿದುಬಂದು (೧) ಭಕ್ತಿಯಲಿ-ಭಕ್ತಿಯಲ್ಲಿ, ಕೈ ಮುಗಿದು-ಕೈಜೋಡಿಸಿ, ನಿಂದಿರಲು- ನಿಂತುಕೊಂಡಿರಲು, ತಳಿತ-ಹೆಚ್ಚಾದ, ಹರ್ಷಾನಂದದಲಿ-ಸಂತೋಷದಿಂದ, ಬರೆಸೆಳೆದು- ಬಾಚಿ, ಬಿಗಿಯಪ್ಪಿದರು-ಧೃಢವಾಗಿ ಆಲಿಂಗಿಸಿದರು, (೨) ರಾಯನ ಚೆಲುವಂ-ದೊರೆಯ ಸೌಂದರ್ಯವನ್ನು, ಈಕ್ಷಿಸಿ-ನೋಡಿ, ನಲಿದು-ಸಂತೋಷದಿಂದ, (೩) ಮನವೊಲಿದು- ಮನಃಪೂರ್ವಕವಾಗಿ, ಕೊಂಡಾಡಿದರು-ಹೊಗಳಿದರು ||೧೬||

ತಾತ್ಪರ್ಯ:— ಸೂರ್ಯನ ಕಾಂತಿ ಸಮೂಹದಂತೆ ಭೂಮಿಗೆ ಇಳಿದು ಬಂದ ಈ ಮಹನೀಯರನ್ನು ಕಂಡ ಕೂಡಲೆನಳನು ಸಿಂಹಾಸನದಿಂದಿಳಿದು ಕೈ ಜೋಡಿಸಿಕೊಂಡು ನಿಂತನು. ಅವನನ್ನು ನೋಡಿ ಆನಂದದಿಂದ ಬಾಚಿ ತಬ್ಬಿಕೊಂಡು ಆತನ ಸೌಂದರ್ಯಕ್ಕೆಮೆಚ್ಚಿ ನಾಲ್ಕು ಮಂದಿಯೂ ಬಹಳವಾಗಿ ಕೊಂಡಾಡಿದರು ||೧೬||

ಟಿಪ್ಪಣಿ:— (೧) ನಳಿನ-ಕಮಲಕ್ಕೆ, ಮಿತ್ರ-ಸ್ನೇಹಿತ (ಅವ) (೨) ರಾಯ (ತ್ಸ) ರಾಜ್ಞ, (೩) ಮನದೊಳ್ ಒಲಿದು-ಮನವೊಲಿದು

(ಕ್ರಿ. ಸ) ||೧೬||

ಮೂ|| ಕುಶಲವೇನಳನೃಪತಿಬಾರ್ಯೆ |ಶಶಿಕುಲೋದ್ಭವನಿನ್ನ ಪಿತನೀ| ವಸುಧೆಗಧಿಪತಿವೀರಸೇನನುಪರಮಸಖನೆಮಗೆ || ವ್ರೊಸೆದುಬೇಡುವಕಾರ್ಯವಿದೆಭರ | ವಸದಿಬಂದೆವುನಮಗೆಫಲಸಿ | ದ್ಧಿಸಿದುದು ಪಕಾರಾರ್ಥನಿನ್ನಿಂದಾಗಬೇಕೆಂದ ||೧೭||

ಟೀಕೆ:— ನಳನೃಪತಿ -ನಳರಾಜನೇ ! ಕುಶಲವೇ-ಕ್ಷೇಮವೇ ಬಾರ್ಯೆ-ಬಾರಯ್ಯ, ಶಶಿಕುಲೋದ್ಭವ-ಚಂದ್ರ ವಂಶದವನೇ ! ನಿನ್ನ, ಪಿತಂ-ತಂದೆಯಾದ, ಈ ವಸುಧೆಗೆ-ಭೂಮಿಗೆ, ಅಧಿಪತಿ-ದೊರೆಯಾದ ವೀರಸೇನನು-ವೀರಸೇನರಾಜನು, ಎಮಗೆ-ನಮಗೆ, ಪರಮಸಖನು-ಪ್ರಿಯ ಮಿತ್ರನು, ಒಸೆದು-ಪ್ರೀತಿಯಿಂದ, ಬೇಡುವ-ನಿನ್ನನ್ನು ಕೇಳಿ ಕೊಳ್ಳುವ, (೧) ಕಾರ್ಯಂ-ಕೆಲಸವು, ಇರೆ-ಇರಲು, ಭರವಸದಿಂದ-ನಂಬಿಕೆಯಿಂದ, ಬಂದೆವು-ನಿನ್ನ ಬಳಿಗೆ ಬಂದಿದ್ದೇವೆ, ನಮಗೆ (೨) ಫಲ-ಕೋರಿಕೆಯು, ಸಿದ್ಧಿಸಿದುದು-ನೆರವೇರಿತು, ನಿನ್ನಿಂದ, ಉಪಕಾರಾರ್ಥ-ಸಹಾಯವು, ಆಗಬೇಕು, ಎಂದ-ಎಂಬದಾಗಿ ಹೇಳಿದನು||೧೭||

ತಾತ್ಪರ್ಯ:— ತರುವಾಯ ನಳನನ್ನು ಕುರಿತು ಅಯ್ಯಾ ರಾಜನೇ ನೀನು ಪರಿವಾರದೊಡನೆ ಕುಶಲದಿಂದಿರುವೆಯಾ ? ಇತ್ತ ಬಾ, ಎಂದು ಕರೆದು ಚಂದ್ರ ವಂಶಕ್ಕೆ ಅಲಂಕಾರವಾಗಿದ್ದ ನಿಮ್ಮ ತಂದೆಯಾದ ವೀರಸೇನನು, ನಮಗೆ ಇಷ್ಟಮಿತ್ರನೂ ಪರಾತ್ಮನೂ ಆಗಿದ್ದನು. ಈಗ ನಿನ್ನಂಕೇಳಿ ಕೊಳ್ಳಬೇಕಾದ ಕಾರ್ಯ ವೊಂದಗಿರುವುದರಿಂದ ನಿನ್ನ ಸಮೀಪಕ್ಕೆ ಬಂದೆವು. ಇನ್ನು ನಮ್ಮ ಕೋರಿಕೆಯು ಸಫಲವಾಯ್ತು. ನಿನ್ನಿಂದ ದೊಡ್ಡ ಉಪಕಾರ ವೊಂದು ಆಗಬೇಕಾಗಿದೆ, ಎಂದು ಇಂದ್ರನು ಹೇಳಿದನು ||೧೭||

ಟಿಪ್ಪಣಿ:— (೧) (ಬ್ಬ) ಕಜ್ಜ, (೨) (ಬ್ಭ) ಪಲ, ಫಲ-ಹಣ್ಣು, ಪ್ರಯೋಜನ, ಬಾಣದಮೊನೆ, (ನಾನಾ) ||೧೭||

ಮೂ|| ಕರಿಗಮನಚಿತ್ತವಿಸುನಾವೇ| ನರರುನಿಮಗಂತರವೆಸಾಕಂ|ತಿರಲಿನಿಮ್ಮಪದಾಬ್ಜದರ್ಶನವಾಯಿತಿಂದಿನಲಿ || ಹರುಷದಿಂವೆನಗೇನುಬುದ್ಧಿಯು | ಕರುಣಿಸುವಿರದಮಾಪ್ಪೆನೆನೆಶಚಿ | ಯರಸನಾನುಡಿಕೇಳಿನಗುತಿಂತೆಂದನಾನೃಪಗೆ ||೧೮||

ಟೀಕೆ: — (೧) ಕರಿಗಮನ-ಇಂದ್ರನೇ ! ಚಿತ್ತವಿಸು-ಲಾಲಿಸು,

ನಾವೇ, ನರರು–ಮನುಷ್ಯರು, ನಿಮಗೆ. ಅಂತರವೆ–ಸಮಾನವೇ, ಅಂತಿರಲಿ–ಅದುಹಾಗಿರಲಿ, ಇಂದಿನಲಿ–ಈ ದಿನದಲ್ಲಿ, ನಿಮ್ಮ (೨) ಪದಾಬ್ಜದರ್ಶನವು–ಪಾದಕಮಲದ ದರ್ಶನವು, ಆಯ್ತು, ಹರುಷದಿಂದೆ–ಸಂತೋಷದಿಂದ, ಎನಗೆ,–ನನಗೆ, ಏನು–ಯಾವ, ಬುದ್ಧಿಯು–ಅಪ್ಪಣೆಯನ್ನು, ಕರುಣಿಸುವಿರಿ–ಕೊಡುವಿರೋ ! ಅದ–ಅದನ್ನು, ಮಾಳ್ಪೆಂ–ಮಾಡುವೆನು, ಎನೆ–ಎಂಬದಾಗಿಹೇಳಲು, ಶಚಿಯರಸನ– ಶಚಿಯಗಂಡನ (೩) ಆನುಡಿಗೇಳಿ–ಮಾತನ್ನುಕೇಳಿ, ನಗುತೆ–ನಗುತ್ತಾ, ಆ ನೃಪಗೆ–ನಳನನ್ನು ಕುರಿತು, ಇಂತೆಂದಂ–ಹೀಗೆ ಹೇಳಿದನು ||೧೮||

ತಾತ್ಪರ್ಯ:— ಇಂದ್ರನೇ ! ಕೇಳು, ನಾವು ಅಲ್ಪರಾದ ಮನುಷ್ಯರು, ನಿಮಗೆ ಸಮಾನರಾದೇವೆ ? ನನಗೆ ನೀನು ಇಷ್ಟು ಮರ್ಯಾದೆಯನ್ನು ಮಾಡಬಹುದೇ ? ಅದು ತಕ್ಕದ್ದಲ್ಲ. ಅದೇನೋ ಇರಲಿ, ನಿಮ್ಮ ಪಾದ ದರ್ಶನವಾದುದರಿಂದ ನಾನು ಧನ್ಯನಾದೆನು, ನನ್ನ ಬಳಿಗೆ ನೀವು ಬರುವಂತಹಕಾರ್ಯವೇನಿರುವುದು, ನನ್ನಿಂದ ನಿಮಗೆ ಏನು ಉಪಕಾರವಾದೀತು. ನನಗೆ ಅಷ್ಟು ಯೋಗ್ಯತೆಯುಂಟೇ ! ಆದರೂ ತಮ್ಮ ಅಪ್ಪಣೆಯಾದಂತೆ ನನ್ನ ಶಕ್ತ್ಯನುಸಾರವಾಗಿ ನಡೆದುಕೊಳ್ಳುವೆನು, ಎಂದು ಹೇಳಲು, ಈ ಮಾತನ್ನು ಕೇಳಿ ನಕ್ಕು ಇಂದ್ರನಿಂತೆಂದನು ||೧೮||

ಟಿಪ್ಪಣಿ:— (೧) ಕರಿ–ಆನೆಯಮೇಲೆ (ಐರಾವತ) ಕುಳಿತು. ಗಮನ–ಸಂಚರಿಸತಕ್ಕವನು (ಅವ) (೨) ಅಪ್–ನೀರಿನಲ್ಲಿ, ಜ–ಹುಟ್ಟಿದುದು (ಕಮಲ) (ಉಪ. ಸ) ಅಬ್ಜದಂತಿರು ಪದ–ಪದಾಬ್ಜ (ಉ. ಉ. ಕ. ಸ) ಪದಾಬ್ಜದ ದರ್ಶನ–ಪದಾಬ್ಜದರ್ಶನ (ಷ. ತ.) ||೧೮||

ಮೂ|| ಭೂತಳದೊಳಿಹಸತಿಯುರಲಿರೂ|ಪಾತಿಶಯೆದಮಯಂತಿಯೆನ
ಲಾ|ಮಾತಿನಲಿಮನವ್ರೊಲಿದುಡವಳಲ್ಲೆನಗೆನೀಪ್ರೋಗಿ|| ಆತಳೋದ
ರಿಗುಚಿತವಚನ |ಪ್ರೀತಿಪೂರ್ವಕದಿಂದಸತಿಯುಳ |ನೀತಿಳುಹಿಯ
ನುಕೂಲವನುಮಾಡೆಂದನಮರೇಂದ್ರ ||೧೯||

ಟೀಕೆ:— ಭೂತಳದೊಳ್–ಭೂಲೋಕದಲ್ಲಿ, ಇಹ– ಇರುವ, ಸತಿಯರಲಿ–ಹೆಂಗಸರಲ್ಲಿ– (೧) ರೂಪಾತಿಶಯೆ–ಹೆಚ್ಚಾದ ಸೌಂದರ್ಯವುಳ್ಳವಳು, ದಮಯಂತಿ, ಎನಲ್–ಎಂದು (ಎಲ್ಲರೂ) ಹೇಳಲು, ಆಮಾತಿನಲಿ–ಆಮಾತಿನಿಂದ, ಅವಳಲಿ–ಆಕೆಯಲ್ಲಿ, ಎನಗೆ–ನನಗೆ, ಮನವ್ರೊಲಿದು

ದು-ಪ್ರೀತಿಯುಂಟಾಯ್ತು, ನೀಂ-ನೀನು, ಪೋಗಿ-ಹೋಗಿ, ಆ ತಳೋದರಿಗೆ-ಕೃಶಾಂಗಿಯಾದ ದಮಯಂತಿಗೆ, ಉಚಿತವಚನ-ತಕ್ಕಮಾತಿನಿಂದಲೂ, ಪ್ರೀತಿಪೂರ್ವಕದಿಂದ-ಪ್ರೀತಿಹುಟ್ಟಿಸುವಹಾಗೂ, (ಹೇಳಿ) ಸತಿಯಳ-ಅವಳನ್ನು, ನೀಂ-ನೀನು, ತಿಳುಹಿ-ಒಪ್ಪಿಸಿ, ಅನುಕೂಲವನು-ಸಹಾಯುವನ್ನು ಮಾಡು, (ಎಂಬದಾಗಿ) (೨) ಅಮರೇಂದ್ರ-ದೇವೇಂದ್ರನು, ಎಂದ-ಹೇಳಿದನು ||೧೯||

ತಾತ್ಪರ್ಯ:— ಎಲೈ ನಳರಾಜನೇ! ಈ ಭೂಲೋಕದಲ್ಲೆಲ್ಲಾ ದಮಯಂತಿಯೇ ಮಹಾ ಸುಂದರಿ ಎಂಬ ಸಮಾಚಾರವನ್ನು ನಾನು ಕೇಳಿದಂದಿನಿಂದ ನನ್ನ ಮನಸ್ಸು ಆಕೆಯಲ್ಲಿ ನಟ್ಟಿರುವುದು. ಆ ಕೆಯು ನನ್ನನ್ನು ವರಿಸುವಂತೆ ಮಾಡಲು ನೀನು ಸಮರ್ಥನಲ್ಲದೆ ಮತ್ತೊಬ್ಬರಲ್ಲವೆಂದು ನಿನ್ನ ಬಳಿಗೆಬಂದೆನು. ನೀನುಆಕೆಗೆತಕ್ಕ ಸಮಾಧಾನೋಕ್ತಿಗಳನ್ನು ಹೇಳಿ ನನ್ನಲ್ಲಿ ಪ್ರೀತಿಯುಂಟಾಗುವಂತೆ ಮಾಡಿ ನನಗೆ ಸಹಾಯಕನಾಗಬೇಕು, ಇಷ್ಟುಮಾತ್ರ ಉಪಕಾರವನ್ನು ಮಾಡು ಎಂದನು ||೧೯||

ಟಿಪ್ಪಣಿ:— (೧) ರೂಪದಲ್ಲಿ ಅತಿಶಯೆ-ರೂಪಾತಿಶಯೆ (ಸ. ತ.) ಅಮರ-ಮರಣವಿಲ್ಲದವರು. (ಅವ) ಅಮರರ ಇಂದ್ರ (ಒಡೆಯ) ಅಮರೇಂದ್ರ (ಷ. ತ) ||೧೯||

ಮೂ|| ಈತಪಿತೃಪತಿಯಮರಪತಿತಾ | ನೀತವರುಣನುವಾಯುವೀ
ತನು | ಮಾತಮನ್ನಿಸುಮಾಡು ತನಗುಪಕಾರವನುನೀನು || ಭೂ
ತಮಾತ್ರಕದೃಶ್ಯವರವನು | ಪ್ರೀತಿಯಿಂದೊಲಿದಿತ್ತೆವಿಂದಿನೊ |
ಳಾತಳೋದರಿಯೊಲಿವಹದನನುಮಾಡುಹೋಗೆಂದ ||೨೦||

ಟೀಕೆ:— ಈತ-ಇವನು, (೧) ಪಿತೃಪತಿ-ಯಮನು, ಅಮರಪತಿ-ದೇವಶ್ರೇಷ್ಠನಾದ (೨) ಈತಂ-ಇವನು, ತಾಂ-ತಾನು, ವರುಣಂ-ವರುಣನು, ಈತನು, ವಾಯು-ವಾಯುವು, ತನ್ನ-ನನ್ನ, ಮಾತ-ಮಾತನ್ನು, ಮನ್ನಿಸು-ಕೇಳು, ನೀನು, ತನಗೆ-ನನಗೆ, ಉಪಕಾರವನು-ಸಹಾಯುವನ್ನು ಮಾಡು, ಇಂದಿನೊಳು-ಈಗ, ಭೂತಮಾತ್ರಕೆ-ಪ್ರಾಣಿಮಾತ್ರಕ್ಕೆ, ಅದೃಶ್ಯ-ಕಣ್ಣಿಗೆ ಕಾಣದಂತಿರುವ ವರವನು, ಪ್ರೀತಿಯಿಂದೆ-ಪ್ರೇಮದಿಂದ, ಒಲಿದಿತ್ತೆವು-ಮೆಚ್ಚಿಕೊಟ್ಟೆವು, ಆತಳೋದರಿ-ದಮ

ಯಂತಿಯು, ಒಲಿವ-ನನ್ನನ್ನು ಪ್ರೀತಿಸುವ, ಸುದನನು-ರೀತಿಯನ್ನು ಮಾಡು ಹೋಗು, ಎಂದ ||೨೦||

ತಾತ್ಪರ್ಯ:— ಇಂದ್ರನು ತನ್ನ ಸಂಡ ಬಂದಿರುವ ಮೂವರನ್ನೂ ಕ್ರಮವಾಗ ತೋರಿಸಿ, ಎಲೈ ನಳನೇ ಈತನು ಯಮನೆಂಬ ಲೋಕ ಪಾಲಕನು, ಇವನು ದೇವಶ್ರೇಷ್ಠನಾದ ವರುಣನೆಂಬ ದಿಕ್ಪಾಲಕನು, ಇವನು ವಾಯುವೆಂಬ ದಿಕ್ಪತಿಯು, ನಾವು ಸಾಮಾನ್ಯರಲ್ಲ, ನಮ್ಮಮಾತನ್ನು ತಿರಸ್ಕರಿಸದೆ ನಮ್ಮ ಕೋರಿಕೆಯನ್ನು ನಡೆಯಿಸಿಕೊಡು, ನಾವೆಲ್ಲರೂ ಮೆಚ್ಚಿ, ಈಗ ನಿನ್ನ ಕಾರ್ಯಕ್ಕೆ ಸಹಾಯವಾಗುವಂತೆ ನಿನ್ನ ರೂಪವು ಆಕೆಗಲ್ಲದೆ ಯಾವಪ್ರಾಣಿಯ ಕಣ್ಣಿಗೂ ಕಾಣಿಸದಂತೆ ವರವನ್ನು ಕೊಟ್ಟಿದ್ದೇವೆ, ಆಕೆಯು ನನ್ನನ್ನು ಮೋಹಿಸಿ ವರಿಸುವಹಾಗೆ ಮಾಡು ಹೋಗು ಎಂದು ಹೇಳಿದನು ||೨೦||

ಟಿಪ್ಪಣಿ:— ಪಿತೃಗಳಪತಿ-ಪಿತೃಪತಿ, (ಷ. ತ) (೨) ಇವನು ಎಂಬುದಕ್ಕೆ ಗೌರವಾರ್ಥದಲ್ಲಿ ಈತಂ, ಎಂಬಾದೇಶವಾಗಿದೆ ||೨೦||

ಮೂ|| ಕೇಳಿದಾವಾತಿನಲಿಚಿಂತೆಯ | ತಾಳಿದನುಚಿತ್ತದಲಿನಳನೃಪ|
ಲೋಲಲೋಚನೆತನ್ನನೇಪತಿಯೆಂದುಬಯಸಿಹಳು || ಆಲತಾಂ
ಗಿಯಮೇಲೆಪರಮವಿ | ಶಾಲಮನವಿಹುದಿನ್ನು ಶಿವಶಿವ | ಬಾಲಕಿ
ಯಬೆಸಗೊಳಲುನಾಲಗೆಯೆಂತುತನಗೆಂದ ||೨೧||

ಟೀಕೆ:— ನಳನೃಪ-ನಳರಾಜನು ಕೇಳಿದ, ಆವಾತಿನಲಿ-ಆವಾತಿನಲ್ಲಿ, ಚಿತ್ತದಲಿ-ಮನಸ್ಸಿನಲ್ಲಿ, ಸಂಶಯತಾಳಿದನು-ಸಂದೇಹಪಟ್ಟನು, (೧) ಲೋಲಲೋಚನೆ-ದಮಯಂತಿಯು, ತನ್ನನೇ-ನನ್ನನ್ನೇ, ಪತಿಯೆಂದು-ಗಂಡನೆಂದು, ಬಯಸಿಹಳು-ಅಪೇಕ್ಷಿಸಿರುವಳು, (೨) ಆಲತಾಂಗಿಯ-ಆಸುಂದರಿಯ, ಮೇಲೆ-ವಿಷಯದಲ್ಲಿ, ಪರಮವಿಶಾಲಮನವಿಹುದು-ನನಗೆ ಸಂಪೂರ್ಣವಾಗಿ ಮನಸ್ಸಿರುವುದು, ಶಿವಶಿವ-ಹರಹರಾ ! ಇನ್ನು-ಇದರಮೇಲೆ, ತನಗೆ-ನನಗೆ, ಬಾಲಕಿಯ-ಆಕನ್ನೆಯನ್ನು, ಬೆಸಗೊಳಲು-ಹೀಗೆಕೇಳಲು, ನಾಲಗೆ-ಮಾತು, ಎಂತು-ಹೇಗೆ (ಹೊರಡುವುದು) ಎಂದ-ಎಂದನು, ||೨೧||

ತಾತ್ಪರ್ಯ:— ಆವಾತನ್ನು ಕೇಳಿದಕೂಡಲೆ ನಳನು ತನ್ನ ಮನಸ್ಸಿನಲ್ಲಿ, ಆಹಾ ಏನಮಾಡಲಿ! ಆ ಯುವತಿಯು ನನ್ನನ್ನೇ ಪತಿಯೆಂದು ನಿಷ್ಕರ್ಷಿಸಿಕೊಂಡಿರುವುದಲ್ಲದೆ ಉಳಿದವರನ್ನು ತಂದೆಯೆಂದೇ ಭಾವಿಸಿ

ರುವಳು, ನನಗೂ ಆಕೆಯಲ್ಲಿಯೇ ಮನಸ್ಸು ನೆಲಗೊಂಡಿದೆ, ಹೀಗಿರುವಾಗ ನಾನೇ ಆಕೆಯನ್ನು ಕುರಿತು ಬೇರೊಬ್ಬನನ್ನು ನೀನು ಒರಿಸಬೇಕೆಂದು ಕೇಳಲು ನಾಲಗೆ ಬರುವುದು ಹೇಗೆ? ಎಂದಾಲೋಚಿಸಿ ಇಂದ್ರನಂ ಕುರಿತು ಇಂತೆಂದನು ||೨೧||

ಟಿಪ್ಪಣಿ:— (೧) ಲೋಲ-ಚಂಚಲವಾದ ಲೋಚನೆ-ಕಣ್ಣುಗಳುಳ್ಳವಳು (ಅವ) (ಬ. ವ್ರೀ. ಸ) (೨) ಲತೆಯಂತೆ (ಬಳ್ಳಿ) ಅಂಗವುಳ್ಳವಳು, ಲತಾಂಗಿ (ಬ. ವ್ರೀ. ಸ) ಅವಳು ಲತಾಂಗಿ-ಆ ಲತಾಂಗಿ (ಗಮಕ) ||೨೧||

ಮೂ|| ಎಂದುಮನದೊಳುಮರುಗಿವಿನಯದೊ | ಳೆಂದನೆಲೆಯಮ
ರೇಂದ್ರನಿಮಗಾ | ಮಂದಗಮನೆಯನೊಳಗುಮಾಡೆಂದೆನಗೆಪೇ
ಳ್ವಿರಲೆ || ಹಿಂದುಗಳೆದರೆಮನಕೆಖತಿನಿಮ | ಗಂದುಬಾರದೆಬಿಡದು
ಲೋಕದೆ|ಯಿಂದುಮುಖಿಯರಗುಣವತಿಳಿಯಲಸಾಧ್ಯಕೇಳೆಂದ ||೨೨||

ಟೀಕೆ:— ಎಂದು-ಎಂಬದಾಗಿ, ಮನದೊಳು-ಮನಸ್ಸಿನಲ್ಲಿ, ಮರುಗಿ-ವ್ಯಥೆಪಟ್ಟು, ವಿನಯದೊಳ್-ನಮ್ರತೆಯಿಂದ, ಎಂದಂ-ಹೇಳಿದನು, ಎಲೆ-ಎಲೈ, ಅಮರೇಂದ್ರ-ದೇವೇಂದ್ರನೆ, (೧) ಆ ಮಂದಗಮನೆಯಂ-ಆ ತರುಣಿಯನ್ನು, ನಿಮಗೆ-ನಿಮಗೆ, (೨) ಒಳಗುಮಾಡೆಂದು_ಸ್ವಾಧೀನಮಾಡೆಂದು, ಎನಗೆ-ನನಗೆ, ಪೇಳ್ವಿರಲೆ-ಹೇಳುವಿರಲ್ಲವೆ, ಹಿಂದುಗಳೆದರೆ-ಆಕೆಯೊಪ್ಪದಿದ್ದರೆ ನಿಮಗೆ, ಅಂದು-ಆಗ, ಮನಕೆ-ಮನಸ್ಸಿಗೆ ಖತಿ-ಕೋಪವು, ಬಾರದೆಬಿಡದು-ಬರದೆಹೋಗದು, ಲೋಕದೆ-ಪ್ರಪಂಚದಲ್ಲಿ, ಇಂದುಮುಖಿಯರ-ಹೆಂಗಸರ, ಮನವ-ಮನಸ್ಸನ್ನು, ತಿಳಿಯಲು-ಕಂಡುಹಿಡಿವುದು, ಅಸಾಧ್ಯ-ದುರ್ಲಭವು, ಕೇಳು, ಎಂದ ||೨೨||

ತಾತ್ಪರ್ಯ:— ಎಲೈ ದೇವೇಂದ್ರನೇ ಆ ದಮಯಂತಿಯನ್ನು ನಿನ್ನ ಸ್ವಾಧೀನಪಡಿಸಬೇಕೆಂದು ಅಪ್ಪಣೆಮಾಡಿದೆಯಲ್ಲವೆ! ಒಂದುವೇಳೆ ಆಕೆಯೊಪ್ಪದೆ ನನ್ನ ಮಾತನ್ನು ತಿರಸ್ಕರಿಸಿದರೆ ನಿನ್ನ ಮನಸ್ಸಿಗೆ ಕೋಪಬಾರದೆ ಇರದು. 'ನನಾರೀಹೃದಯಂ ಗ್ರಥಿತಂ' ಎಂದು ನ್ಯಾಯವಿರುವುದರಿಂದ ಎಂತಹ ಅಸಾಧ್ಯವಾದ ಕಾರ್ಯವನ್ನಾದರೂ ಸಾಧಿಸಬಹುದು. ಸ್ತ್ರೀಯರ ಮನೋಗತವನ್ನು ತಿಳಿಯುವುದಕ್ಕಾಗದು, ಎಂಬ ಲೋಕಪ್ರವಾದವು ಪ್ರಸಿದ್ಧವಾಗಿದೆಯಷ್ಟೆ! ಆದಕಾರಣ ಆಕೆಯ ಅಭಿಮತವನ್ನು ತಿಳಿಯಲು ಹೇಗೆ ಸಾಧ್ಯವಾದೀತು? ||೨೨||

ಟಿಪ್ಪಣಿ:— (೧) ಮಂದವಾದ ಗಮನವುಳ್ಳವಳು, ಮಂದಗಮನೆ (ಬ. ವ್ರೀ) ಅವಳು ಮಂದಗಮನೆ ಆ ಮಂದಗಮನೆ (ಗಮಕ) (೨) ಒಳಗಂಮಾಡು-ಒಳಗುಮಾಡು (ಕ್ರಿ. ಸ) ॥೨೨॥

ಮೂ॥ ಆಯುವತಿಯರುಕಾರ್ಯಗತಿಗಳ ।ಬೀಯಮಾಳ್ಪರುಕುಟಿಲವಿ
ದ್ಯದಿ । ಮಾಯಗಳಹಂಣುವರುಸತ್ಯದಿಹುಸಿಯನಾಡುವರು ॥ಕಾ
ಯವಳಿದರುಅಂತರಂಗದ । ಬಾಯಬಿಡರನ್ಯಾಯವಾಡುವ । ರಾ
ಯತಾಕ್ಷಿಯರಂಗವಿದೆಯಮರೆಂದ್ರಕೇಳೆಂದ ॥೨೩॥

ಟೀಕೆ:— ಆಯುವತಿಯರು - ಆಸ್ತ್ರೀಯರು, ಕಾರ್ಯಗತಿಗಳ-ಕಾರ್ಯದರೀತಿಯನ್ನು, (೨) ಬೀಯಮಾಳ್ಪರು-ಕೆಡಿಸುವರು, ಕುಟಿಲವಿದ್ಯದಿ-ವಂಚಕಭಾವದಿಂದ, ಮಾಯೆಗಳ-ಮೋಸಗಳನ್ನು, ಹಂಣುವರು-ಮಾಡುವರು, ಸತ್ಯದಿ-ನಿಶ್ಚಯ ವಿಷಯದಲ್ಲಿ, ಹುಸಿಯಂ-ಸುಳ್ಳನ್ನು, ಆಡುವರು, ಕಾಯವು-ದೇಹವು, ಅಳಿದರೂ-ನಾಶವಾದರೂ, ಅಂತರಂಗವ-ಗುಟ್ಟನ್ನು, ಬಾಯಬಿಡರು-ಹೇಳುವುದಿಲ್ಲ, (೪) ಆಯತಾಕ್ಷಿಯರ್-ಹೆಂಗಸರು, ಅನ್ಯಾಯವ-ಇಲ್ಲದ್ದನ್ನು, ಆಡುವರು-ಹೇಳುವರು, ಇದೆ-ಈಮಾತೆ, ಅಂಗವು-ಸತ್ಯವು, ಅಮರೇಂದ್ರ-ಮಹೇಂದ್ರನೆ ಕೇಳು, ಎಂದ ॥ ೨೩ ॥

ತಾತ್ಪರ್ಯ:— ಸ್ತ್ರೀಯರು ಯಾವ ಪ್ರಯತ್ನವನ್ನಾದರೂ ಸ್ವಶಕ್ತಿಯಿಂದ ಹಾಳುಮಾಡುವರು, ಕೃತ್ರಿಮದಿಂದ ಮೋಸಗೊಳಿಸುವರು, ನಿಶ್ಚಯವನ್ನು ಸುಳ್ಳುಮಾಡುವರು, ಪ್ರಾಣಹೋದರೂ ತಮ್ಮಂತರಂಗವನ್ನು ಅನ್ಯರಿಗೆ ತಿಳಿಸರು, ಇಲ್ಲದುದನ್ನು ಆರೋಪಿಸಿ ಹೇಳುವರು ಸತ್ಯಾರ್ಥವನ್ನು ಮುಚ್ಚುವರು ॥೨೩॥

ಟಿಪ್ಪಣಿ:— (೧) ಯುವತಿ-ಯೌವನವುಳ್ಳವಳು, ಅವಳುಯುವತಿ ಆಯುವತಿ (ಗಮಕ) (೨) ಬೀಯ (ದ್ಭ) ವ್ಯಯ (ತ್ಸ) ಬೀಯವಂ ಮಾಳ್ಪರು-ಬೀಯಮಾಳ್ಪರು (ಕ್ರಿ. ಸ) (೩) ಆಯತ- ನಿಸ್ತಾರವಾದ, ಅಕ್ಷಿ-ಕಣ್ಣುಳ್ಳವಳು (ಆವ) ಆಯತವಾದಅಕ್ಷಿ ಯಾರಿಗುಂಟೋ ಅವಳು ಆಯತಾಕ್ಷಿ (ಬ. ವ್ರೀ) ॥೨೩॥

ಮೂ॥ ಕಪಟವನುಬಿಡರಾತ್ಮಬುದ್ಧಿಯೊ । ಳುಪಮೆಗಾಣದೆನುಡಿದು
ಹೊಳೆವರು । ಚಪಲಚಿತ್ತದಿಮನವವಂಚಿಸಿಮಾತನಾಡುವರು॥ ಗು
ಪಿತವಳವಡರಾಪ್ತರೊಡವೆಯ । ನಪಹರಿಸಿಸಾಹಸನಿಮರೆವರುನಿ

ಪುಣೆಯರಿಗಿದುಸಹಜಗುಣವಮರೇಂದ್ರಕೇಳೆಂದ ॥೨೪॥

ಟೀಕೆ:— ಅಮರೇಂದ್ರ-ದೇವೇಂದ್ರನೆ ಕೇಳು, ಆತ್ಮಬುದ್ಧಿಯೊಳ್-ತಮ್ಮಮನಸ್ಸಿನಲ್ಲಿ, (೧) ಕಪಟವನು-ಮೋಸವನ್ನು ಬಿಡರು, ಉಪಮೆಗಾಣದೆ-ಸಾಮ್ಯವನ್ನು ಕಾಣದೆ, ನುಡಿದು-ಮಾತಾಡಿ, ಹೊಳೆವರು-ಕಾಣಿಸಿಕೊಳ್ಳುವರು (೨) ಚಪಲಚಿತ್ತದಿ-ಚಂಚಲನಾದ ಮನಸ್ಸಿನಿಂದ, ಮನವ-ಮನಸ್ಸನ್ನು, ವಂಚಿಸಿ-ಮೋಸಪಡಿಸಿ, ಮಾತನಾಡುವರು, ಗುಪಿತವ-ಗುಟ್ಟನ್ನು, ಅಳಿವಡರು-ಮುಚ್ಚಿಡುವುದಿಲ್ಲ, ಆಪ್ತರ-ಇಷ್ಟರ, ಒಡವೆಯಂ-ಪದಾರ್ಥವನ್ನು, ಅಪಹರಿಸಿ-ಬಾಚಿಕೊಂಡು (೩)ಸಾಹಸದಿ ಸಾಮರ್ಥ್ಯದಿಂದ, ಮರೆವರು-ಮರೆಯಿಸುವರು, ನಿಪುಣೆಯರಿಗೆ-ಸ್ತ್ರೀಯರಿಗೆ ಇದು, ಸಹಜ-ಸ್ವಾಭಾವಿಕವಾದುದು, ಕೇಳು ಎಂದ ॥೨೪॥

ತಾತ್ಪರ್ಯ:— ತಮ್ಮಲ್ಲಿ ವಂಚನೆಯನ್ನು ಬಿಡರು, ಇಲ್ಲದ ಸಾಮ್ಯವನ್ನು ಕಟ್ಟಿಹೇಳುವರು, ಚಪಲ ಬುದ್ಧಿಯಿಂದ ವಂಚಿಸಿಮಾತಾಡುವರು ಪರರ ಅಂತರಂಗವನ್ನು ಬಯಲು ಮಾಡುವರು, ಪರರೊಡವೆಯನ್ನು ಅಪಹರಿಸಿ ಸಾಹಸದಿಂದ ಮರಸುವರು, ಇದು ಸ್ತ್ರೀಯರಿಗೆ ಸ್ವಾಭಾವಿಕವಾದ ಗುಣಗಳು ॥೨೪॥

ಟಿಪ್ಪಣಿ:— (೧) (ದ್ಭ) ಕವಡು (೨) ಚಪಲವಾದಚಿತ್ತ-ಚಪಲಚಿತ್ತ (ವಿ. ಪೂರ್ವ. ಕ) ॥೨೪॥

ಮೂ॥ ಸಾವಿಗೆಣಿಸರುಮನದಿಸತ್ಯವ । ಭಾವಿಸರುಹುಸಿಯೊಲುಮೆ
ದೋರುವ । ರಾವಪರಿಯಲಿಹೃದಯಗೊಡರನೃತಗಳನಾಡುವರು ॥
ಮಾವೆವರ್ತನವಿಲ್ಲಸತ್ಯಕೆ । ಪಾವಕನಮುಟ್ಟುವರುಸತಿಯರ। ನಾ
ವಪರಿಯಲಿನಂಬಬಹುದೈಯೆನುತಹೊರವಂಟ ॥೨೫॥

ಟೀಕೆ:— ಸಾವಿಗೆ-ಮರಣಕ್ಕೆ, ಎಣಿಸರು-ಹಿಂದೆಗೆಯರು, ಮನದಿ-ಮನಸ್ಸಿನಲ್ಲಿ, ಸತ್ಯವ-ನಿಶ್ಚಯವನ್ನು, ಭಾವಿಸರು-ಊಹಿಸುವದಿಲ್ಲ, ಹುಸಿಯ-ಸುಳ್ಳಾದ, (೧) ಒಲುಮೆದೋರುವರು-ಪ್ರೀತಿಯನ್ನು ತೋರ್ಪಡಿಸುವರು, ಆವಪರಿಯಲಿ-ಹೇಗೂ, ಹೃದಯಗೊಡರು-ಅಂತರಂಗವನ್ನು ತೋರಿಸರು, (೨) ಅನೃತಗಳಂ-ಸುಳ್ಳನ್ನು, ಆಡುವರು-ಹೇಳುವರು, ಮಾವೆ-ಬಂಧುತ್ವವನ್ನನುಸರಿಸಿದ, ವರ್ತನಂ - ನಡತೆಯು, ಇಲ್ಲ, ಸತ್ಯಕೆ-ಪ್ರಮಾಣಮಾಡುವುದಕ್ಕೆ ಪಾವಕನ-ಅಗ್ನಿಯನ್ನು, ಮುಟ್ಟುವರು-ಕೈಯಲ್ಲಿ ಹಿಡಿದುಕೊಳ್ಳುವರು, ಸತಿಯರಂ-ಹೆಂಗಸರನ್ನು,

ಆವ-ಯಾವ, ಪರಿಯಲಿ- ರೀತಿಯಲ್ಲಿ, ನಂಬಬಹುದೈ - ನಂಬಲಹುದೈ ಯ್ಯಾ. ಎನುತ-ಎಂಬದಾಗಿ, ಹೊರವಂಟ-ಹೊರಟನು ||೨೫||

ತಾತ್ಪರ್ಯ:—ಪ್ರಾಣವನ್ನು ಕಳೆದುಕೊಳ್ಳುವುದಕ್ಕೂ ಹೇಸರು, ನಿಶ್ಚಯವನ್ನು ತಿಳಿಯಲಾರರು, ಕಪಟ ಪ್ರೇಮವನ್ನು ತೋರಿಸುವರು, ತಮ್ಮ ಮನೋಗತವನ್ನೆಂದಿಗೂ ಹೊರಪಡಿಸರು; ಸುಳ್ಳನ್ನೇ ಆಡುವರು, ಭಾವ, ಮಾವ, ಅಣ್ಣ, ಮೊದಲಾದ ಬಂಧುತ್ವದರೀತಿಯನ್ನು ಅನುಸರಿಸಿ ನಡೆಯಬೇಕಾದ ನಡತೆಯನ್ನು ಮೀರುವರು, ತಮ್ಮ ಹಠವನ್ನು ಸಾಧಿಸಲು ಬೆಂಕಿಯನ್ನಾದರೂ ಮುಟ್ಟಿ ಪ್ರಮಾಣ ಮಾಡುವರು. ಇಂತಹನಾರಿಯರನ್ನು ನಂಬುವುದು ಹೇಗೆ! ನಿನ್ನ ಮಾತನ್ನು ಮೀರಲಾರದೆ ನಾನುಹೋಗಿ ಪ್ರಯತ್ನಮಾಡುವೆನು, ಕಾರ್ಯವು ಹೇಗಾಗುವುದೋ ತಿಳಿಯದು, ಎಂದುಹೇಳಿ ಹೊರಟು ಹೋದನು ||೨೫||

ಟಿಪ್ಪಣಿ:— (೧) ಒಲುಮೆಯಂ ತೋರುವರು-ಬಲುಮೆ ಪೋರುವರು- (ಕ್ರಿ. ಸ) (೨) ಋತುವಲ್ಲದುದು-ಅನೃತ (ನಞ್.ತ)||೨೫||

ಮೂ || ನಲವುಹಿಂಗಿದಮನದಿನೃಪಮಾ | ರ್ಬಲವನಲ್ಲಿಯೆಯಿರಿಸಿಬರು
ತಿರೆ|ತಳಿತರತ್ನಪ್ರಭೆಯಸಾಲಿನಸೌಧಪಂಜ್ತಿಗಳ|| ಹೊಳೆವಕಲಶದ
ಗೋಪುರದಕೊ| ತ್ತಳದಸಾಲಿನಕೋಟೆಯದಕಂ|ಡಲಘುಭುಜಬ
ಲನೃಪತಿಪ್ರೊಕ್ಕವಿದರ್ಭಪಟ್ಟಣವ ||೨೬||

ಟೀಕೆ:—ನೃಪ-ದೊರೆಯು, ನಲವುಹಿಂಗಿದ- ಸಂತೋಷರಹಿತವಾದ, ಮನದಿ-ಮನಸ್ಸಿನಿಂದ (೧) ಮಾರ್ಬಲವಂ - ಚತುರಂಗಸೈನ್ಯವನ್ನು, ಅಲ್ಲಿಯೆ-ಪುರದ ಹೊರಭಾದಲ್ಲಿ, ಇರಿಸಿ, ಇಟ್ಟು, ಬರುತಿರೆ-ಬರುತ್ತಿರಲು, ತಳಿತ-ಹೊಳೆಯುತ್ತಿರು, ರತ್ನಪ್ರಭೆಯ- ನವರತ್ನಗಳಕಾಂತಿಯುಳ್ಳ, ಸಾಲಿನ-ಪಜ್ತಿಯಾಗಿರುವ, ಸೌಧಪಂಜ್ತಿಗಳ-ಪುಪ್ಪರಿಗೆಗಳಗುಂಪನ್ನು, ಹೊಳೆವ-ಪ್ರಕಾಶಿಸುವ, ಕಲಶದ-ಕಲಶಗಳುಳ್ಳ, (೨) ಗೋಪುರದ-ಗೋಪುರಗಳುಳ್ಳ, ಕೊತ್ತಳ-ಸಾಲಿನ, ಕೋಟೆಯ-ಕೋಟೆಯನ್ನು, ಅದ-ಅದನ್ನು: ಕಂಡು-ನೋಡಿ, ಅಲಘುಭುಜಬಲನೃಪತಿ- ಮಹಾಪರಾಕ್ರಮಿಯಾದ, ದೊರೆಯು, ವಿದರ್ಭಪಟ್ಟಣವ-ವಿದರ್ಭಪುರವನ್ನು, ಪೊಕ್ಕ-ಪ್ರವೇಶಿಸಿದನು ||೨೬||

ತಾತ್ಪರ್ಯ,—ದೊರೆಯು ಉತ್ಸಾಹ ಹೀನನಾಗಿ ಹೋಗಿ ವಿದರ್ಭಪುರಕ್ಕೆ ಸ್ವಲ್ಪ ದೂರದಲ್ಲಿ ಚತುರಂಗ ಸೈನ್ಯವನ್ನು ಬಿಟ್ಟು ಮುಂದೆ

ಹೊರಟು, ನವರತ್ನ ಖಚಿತವಾದ ಉಪ್ಪರಿಗೆಗಳ ಸಾಲಿನಿಂದಲೂ, ಭಂಗಾರದ ಕಲಶಗಳುಳ್ಳ ಗೋಪುರಗಳಿಂದಲೂ, ಕೊತ್ತಲಗಳಿಂದ ರಮ್ಯವಾಗಿರುವ ಕೋಟೆಯಿಂದಲೂ,ಮೆರೆವ ವಿದರ್ಭಪುರವನ್ನು ಪ್ರವೇಶಿಸಿದನು ॥

ಟಿಪ್ಪಣಿ:—(೧) ಮಾರಾದಬಲ-ಮಾರ್ಬಲ (ವಿ. ಪ್ರೂರ್ವ.ಕ) (೨) (ದ್ಭ) ಗೋಹುರ ॥೨೬॥

ಮೂ॥ ಅರಮನೆಯಬಾಗಿಲಿಗೆಬರಲಿ| ತ್ತರದವೇದಿಕೆಗಳಲಿಪಟುಭಟ |
ರುರುತರದಕೈದುಗಳಕಾಹುದ್ವಾರವಟ್ಟದಲಿ॥ ಯಿರಲುಕಂಡನುತ
ರುಣಿಯರುಸಂಚರಿಸುತಿಹಸಡಗರವನಳಭೂ | ವರನದೃಶ್ಯದರೂ
ಪಿನಲಿವ್ರೊಳಹೊಕ್ಕನರಮನೆಯ ॥೨೭॥

ಟೀಕೆ:—ಅರಮನೆಯ, ಬಾಗಿಲಿಗೆ, ಬರಲ್-ಬರಲು, (೧) ಇತ್ತರದ-ಎರಡುಕಡೆಯ, ವೇದಿಕೆಗಳಲಿ-ಜಗುಲಿಗಳಲ್ಲಿಯೂ, ಪಟುಭಟರ-ಸಮರ್ಥರಾದಭಟರ, ಉರುತರದ-ಬಹಳವಾದ, ಕೈದುಗಳ-ಆಯುಧಗಳ. (೨) ಕಾಹು-ಕಾವಲು (೩) ದ್ವಾರವಟ್ಟದಲಿ- ಬಾಗಿಲಲ್ಲಿ, ಇರಲು, ತರುಣಿಯರು-ಹೆಂಗಸರು, ಸಂಚರಿಸುತಿಹ-ತಿರುಗಾಡುವ, ಸಡಗರವ-ಸಂಭ್ರಮವನ್ನು, ಕಂಡನು-ನೋಡಿದನು, ನಳಭೂವರಂ - ನಳರಾಜನು, ಅದೃಶ್ಯದ-ಕಣ್ಣಿಗೆಕಾಣಬರದ, ರೂಪಿನಲಿ-ಆಕಾರದಿಂದ, ಅರಮನೆಯ-ರಾಜಭವನವನ್ನು, ಒಳಹೊಕ್ಕನು-ಪ್ರವೇಶಿಸಿದನು. ॥೨೭॥

ತಾತ್ಪರ್ಯ:—ಅಲ್ಲಲ್ಲಿನ ವಿಚಿತ್ರಗಳನ್ನು ನೋಡುತ್ತಾ ನೆಟ್ಟಗೆ ಅರಮನೆಯ ಬಾಗಿಲಿಗೆ ಬಂದು, ಅಲ್ಲಿ ಉಭಯಪಾರ್ಶ್ವಗಳಲ್ಲಿರುವ ದೊಡ್ಡ ದೊಡ್ಡ ಜಗುಲಿಗಳ ಮೇಲೆ ನಾನಾವಿಧಗಳಾದ ಆಯುಧಗಳನ್ನು ಹಿಡಿದು ಮಹಾ ಶೂರರಾದ ಭಟರು ದ್ವಾರರಕ್ಷಣೆಯನ್ನು ಮಾಡುತ್ತಿರಲು, ಆ ಬಾಗಿಲಿನಲ್ಲಿ ಸಂಚರಿಸುತ್ತಿರುವ ಪೌರನಾರಿಯರ ಸಂಭ್ರಮವನ್ನು ನೋಡಿ ವಿಸ್ಮಿತನಾಗಿ, ವರಬಲದಿಂದ ಲಭ್ಯವಾಗಿರುವ ಅದೃಶ್ಯರೂಪವನ್ನು ತಳೆದು ಯಾರಿಗೂ ಕಾಣದಂತೆ ಅರಮನೆಯನ್ನು ಹೊಕ್ಕನು ॥೨೭॥

ಟಿಪ್ಪಣಿ—ಎರಡುತರ-ಇತ್ತರ ಎಂದು ಹಳಗನ್ನಡದ ರೂಪವಾಗಿ ಹೊಸ ಕನ್ನಡದಲ್ಲಿ, ‹ ಇತ್ತರ,ಎಂದಾಗಿದೆ (ದ್ವಿಗು) ಎರಡು ಎಂಬುದಕ್ಕೆ ಸಮಾಸದಲ್ಲಿ ‹ ಇರ್, ಎಂಬಾದೇಶವು ಬರುವುದು, (೨) ಕಾ, ಎಂಬ ಧಾತುವಿಗೆ ‹ಭಾವಾರ್ಥದಲ್ಲಿ ‹ಪು, ಎಂಬ ಕೃತ್ಪ್ರತ್ಯಯವು ಸೇರಿ ಕಾಪು ಎಂಬ ಭಾವನಾಮವಾಗಿ, ಹೊಸಕನ್ನಡದಲ್ಲಿ ‹ ಕಾಹು , ಎಂದಾಯಿತ್ತು

(೨) ದ್ವಾರಕ್ಕೆ (ದ್ಭ) ಬಾರ, ದ್ವಾರದವಟ್ಟ-ದ್ವಾರವಟ್ಟ (ಷ.ತ.)॥೧೭॥

ಮೂ॥ ಆಗಳಾದಮಯಂತಿಚಿತ್ರದ । ಬಾಗಿಲುಪ್ಪರಿಗೆಯಲಿರತ್ನದಂತೂ
ಗುಮಂಚದಹಾಸಿನಲಿಕುಳ್ಳಿರಲುಕೆಳದಿಯರು ॥ ಆಗರುವೆಯೋಲ
ಗದೊಳಿರುತಿರೆ । ಪೂಗಣೆಯುನೆಸುಗೆಯಲಿನಳನರಿ। ದಾಗಮದಕಥ
ನಗಳತಾನಾಲಿಸುತಚಿತ್ತದಲಿ ॥೧೮॥

ಟೀಕೆ:—ಆಗಳ್-ಆಗ, ಆ ದಮಯಂತಿ-ದಮಯಂತಿಯು, ಚಿತ್ರದ-ಚಿತ್ರವನ್ನು ಕೆತ್ತಿರುವ, ಬಾಗಿಲ-ಬಾಗಿಲುಳ್ಳ, ಉಪ್ಪರಿಗೆಯಲಿ-ಮಹಡಿಯಲ್ಲಿ, ರತ್ನದ-ರತ್ನಗಳಿಂದಮಾಡಿದ ತೂಗುಮಂಚದ-ತೂಗುವಮಂಚದ, ಹಾಸಿನಲಿ-ಹಾಸಿಗೆಯಮೇಲೆ, ಕುಳ್ಳಿರಲು - ಕುಳಿತಿರಲು, ಕೆಳದಿಯರು-ಸಖಿಯರು, ಆಗರುವೆಯು- ಆಗೌರವಸ್ಥಳಾದದಮಯಂತಿಯು, ಓಲಗದೊಳು-ಸೇವೆಯಲ್ಲಿ, (೧) ಪೂಗಣೆಯುನ-ಮನ್ಮಥನ (೨) ಎಸುಗೆಯಲಿ-ಬಾಣಪ್ರಯೋಗದಿಂದ, ನಳನ-ನಳನನ್ನು, ಅರಿದು-ತಿಳಿದುಕೊಂಡು,ಆಗಮದ-ಆತನುಬರುವ, ಕಥನಗಳ-ಕಥೆಯ(ಸಮಾಚಾರವನ್ನು) ತಾಂ-ತಾನು, ಚಿತ್ತದಲಿ-ಮನಃಪೂರ್ವಕವಾಗಿ, ಆಲಿಸುತ-ಕೇಳುತ್ತಾ, ಇರುತಿರೆ-ಇರುತ್ತಿರಲು ॥೧೮॥

ತಾತ್ಪರ್ಯ:—ವಿಚಿತ್ರವಾದ ಚಿತ್ರಗಳಿಂದ ನಿರ್ಮಿಸಿರುವ ಬಾಗಿಲುವಾಡಗಳಿಂದ ಶೋಭಿಸುತ್ತಿರುವ ಉಪ್ಪರಿಗೆಯಮೇಲೆ, ನವರತ್ನಖಚಿತವಾದ ಮಂಚದಮೇಲೆ, ಕುಳಿತಿರಲು ಆಕೆಯ ಸಮೀಪದಲ್ಲಿ ಅನೇಕ ಸಖಿಯರು ನಿಂತು ಸೇವೆಯನ್ನು ಮಾಡುತ್ತಿದ್ದರು,ಮನ್ಮಥನು ಪುಷ್ಪ ಬಾಣಗಳಿಂದ ಬಹಳವಾಗಿ ನೋಯಿಸಲು ಆ ನಳನನ್ನೇ ಮನಸ್ಸಿನಲ್ಲಿ ನೆನೆಯುತ್ತಾ, ಸ್ವಯಂವರಕ್ಕಾಗಿ ಅತನು ಬರುವ ಸಂಗತಿಯನ್ನು ವಿಚಾರಿಸಿ ಕೇಳುತ್ತಿರಲು ॥೧೮॥

ಟಿಪ್ಪಣಿ:— (೧) ಪೂವಿನಕಣೆಯಾರಿಗೋ ಅವನು-ಪೂಗಣೆಯು. (ಬ.ವ್ರೀ) ಪೂ-ಹೂವಿನ, ಕಣೆಯು-ಬಾಣವುಳ್ಳವನು (ಅವ) (೨) ಇಸು ಎಂದರೆ ಬಾಣಪ್ರಯೋಗ ಮಾಡುವುದು, ಎಂಬಧಾತುವಿಗೆ ಭಾವಾರ್ಥದಲ್ಲಿ ‹ ಗೆ › ಪ್ರತ್ಯಯವುಸೇರಿ, ಭಾವನಾಮವಾಗಿದೆ ॥೧೮॥

ಮೂ॥ ಬಂದರಲ್ಲಿಗೆಸುರವಕಳುಹಿದ। ಮಂದಗಮನೆಯರಖಿಳವಸ್ತುವ।
ತಂದುಕಾಣಿಕೆಗೊಟ್ಟುಕೈಮುಗಿದೆರಗಿನಿಂದಿರಲು॥ ಬಂದಸತಿಯರ
ನೋಡಿನೀವೆ । ಲ್ಲಿಂದಬಂದಿರಿನಿಮ್ಮಕಳುಹಿದನೇ। ನೆಂದುಬೆಸಗೊಳೆನಿನ

ಯದಿಂದರುಹಿದರುಮಾನಿನಿಗೆ ॥೨೯॥

ಟೀಕೆ:—ಅಲ್ಲಿಗೆ-ಆಸ್ಥಳಕ್ಕೆ, (೧) ಸುರಪ-ಇಂದ್ರನು, ಕಳುಹಿ ಡ-ಕಳುಹಿಸಿದ, (೨) ಮಂದಗಮನೆಯರು-ಅಪ್ಸರಸ್ತ್ರೀಯರು, ಬಂದ ರು, ಅಖಿಳವಸ್ತುವ-ಉತ್ತಮವಾದ ಪದಾರ್ಥಗಳನ್ನು, ತಂದು, ಕಾಣಿಕೆ ಗೊಟ್ಟು-ಬಹುಮಾನಮಾಡಿ, ಕೈಮುಗಿದು-ಕೈಜೋಡಿಸಿ, ಎರಗಿ-ನಮ ಸ್ಕರಿಸಿ, ನಿಂದಿರಲು-ನಿಂತುಕೊಂಡಿರಲು, ಬಂದ-ಬಂದಿರುವ, ಸತಿಯ ರ-ಹೆಂಗಸರನ್ನು, ನೋಡಿ-ಕಂಡು, ನೀವು, ಎಲ್ಲಿಂದ ಬಂದಿರಿ, ನಿಮ್ಮ ಹದನ-ಸಮಾಚಾರವು ಏನು ? ಎಂದು, ಬೆಸಗೊಳೆ - ಕೇಳಲು, ವಿನ ಯದಿಂದ-ನಮ್ರತೆಯಿಂದ, ಮಾನಿನಿಗೆ - ದಮಯಂತಿಗೆ, ಅರುಹಿದರು- ತಿಳಿಸಿದರು, ॥೨೯॥

ತಾತ್ಪರ್ಯ:—ಇಂದ್ರನು ಈಕೆಯ ಬಳಿಗೆ ಕಳುಹಿಸಿದ್ದ ಅಪ್ಸರ ಸ್ತ್ರೀಯರು ಅಲ್ಲಿಗೆ ಬಂದು ದೇವಲೋಕದಲ್ಲಿರುವ ಉತ್ತಮವಸ್ತುಗಳ ನ್ನು ದಮಯಂತಿಗೆ ಕಾಣಿಕೆಯಾಗಿ ಅರ್ಪಿಸಿ, ನಮಸ್ಕರಿಸಿ ಕೈಮುಗಿ ದುಕೊಂಡು ನಿಂತರು ಅವರೆಲ್ಲರನ್ನೂ ನೋಡಿ ಎಲೌ ಸ್ತ್ರೀಯರೇ, ನೀವಾರು ! ಎಲ್ಲಿಂದ ಬಂದಿರಿ ? ನಿಮ್ಮ ವೃತ್ತಾಂತವೇನು ? ಎಂದು ಕೇ ಳಲು, ಅವರು ವಿನಯದೊಡ ನಿಂತೆಂದರು ॥೨೯॥

ಟಿಪ್ಪಣಿ:—(೧) ಸುರ-ದೇವತೆಗಳನ್ನು, ಪ-ಪಾಲಿಸುವನು (ಉ ಪ, ಸ) (೨) ಮಂದವಾದಗಮನವುಳ್ಳವಳು (ಬ. ವ್ರೀ) (೩) ಅಖಿಳವಾದ ವಸ್ತು-ಅಧಿಕವಸ್ತು (ವಿ. ಪೂರ್ವ. ಕ) ॥೨೯॥

ಮೂ॥ ತಾಯಿಕೇಳಮರೇಂದ್ರನಿಮ್ಮನಿ। ಜಾಯತದಚೆಲುವಿಕೆಯಕೇ
ಳುತಕಾಯಜನಶರಹತಿಗೆನೊಂದುರೆಕಳುಹಿದನುನಮ್ಮಂ ॥ ಆಯ
ತದಭೂಷಣವತೊಡುಸುರ । ರಾಯನಿಗೆಸತಿಯಾಗುಮರ್ತ್ಯದ ।
ರಾಯರಸ್ಪರನರರನೆಚ್ಚದಿರೆಂದರಾಸತಿಗೆ ॥೩೦॥

ಟೀಕೆ:—ತಾಯಿ-ಅಮ್ಮಾ, ಕೇಳು, ಅಮರೇಂದ್ರ-ಇಂದ್ರನು, ನಿಮು , ನಿಜಾಯತದ,ವಿಸ್ತಾರವಾದ, ಚೆಲುವಿಕೆಯ-ಸೌಂದರ್ಯವನ್ನು, ಕೇಳುತ, (೧) ಕಾಯಜನ-ಮನ್ಮಥನ, ಶರಹತಿಗೆ-ಬಾಣದಪೆಟ್ಟಿಗೆ, ನೊಂದು-ಬಾಧೆಪಟ್ಟು, ನಮ್ಮಂ-ನಮ್ಮನ್ನು, ಕಳುಹಿದನು-ಕಳುಹಿಸಿದ ನು, ಆಯತದ-ಬೇಕಾದ, ಭೂಷಣವ-ಒಡವೆಗಳನ್ನು ತೊಡು - ಧರಿ ಸು, ಸುರರಾಯನಿಗೆ-ದೇವರಾಜನಿಗೆ, ಸತಿಯಾಗು-ಪತ್ನಿಯಾಗು (೨

ಮರ್ತ್ಯರ-ಮನುಷ್ಯರ, ರಾಯರ-ದೊರೆಗಳನ್ನು, ಅಸ್ಥಿರನರರ-ಶಾಶ್ವತರಲ್ಲದಮನುಷ್ಯರನ್ನು, ನೆಚ್ಚದಿರು-ನಂಬಬೇಡ, ಎಂಬದಾಗಿ, ಆಸತಿಗೆ-ದಮಯಂತಿಗೆ, ಎಂದರು-ಹೇಳಿದರು. ||೨೦||

ತಾತ್ಪರ್ಯ:— ಎಲೈ ದಮಯಂತಿಯೇ ಕೇಳು ! ದೇವೇಂದ್ರನು ಲೋಕೋತ್ತರವಾದ ನಿನ್ನ ಸೌಂದರ್ಯವನ್ನು ಕೇಳಿ, ಮೋಹಿತನಾಗಿ ಮನ್ಮಥನ ಬಾಣದ ಹೊಡೆತಕ್ಕೆ ಸಿಕ್ಕಿ ತಾಳಲಾರದೆ, ನಮ್ಮನ್ನು ನಿನ್ನ ಬಳಿಗೆ ಕಳುಹಿಸಿದನು, ಇದೋ ಈ ಅಮೂಲ್ಯವಾಗಿ ದೇವಯೋಗ್ಯವಾದ ಆಭರಣಗಳನ್ನು ಧರಿಸಿಕೊಂಡು ಇಂದ್ರನನ್ನು ಪತಿಯಾಗಿ ವರಿಸು ಅಸ್ಥಿರರಾದ ಮನುಷ್ಯರನ್ನೂ ನಂಬಬೇಡ ಎಂದು ಬೋಧಿಸಿದರು. ||೨೦||

ಟಿಪ್ಪಣಿ:—(೧) ಕಾಮ-ದೇಹದಲ್ಲಿ, ಜ-ಹುಟ್ಟಿದವನು (ಅವ) (ಉಪ. ಸ) (೨) ಮರಣವುಳ್ಳವರು-ಮರ್ತ್ಯರು (ಅವ)||೨೦||

ಮೂ|| ಪದವಿಯಾವುದುಲೋಕದಲಿಸುರ| ಪದವಿಯಲ್ಲದೆಬೇರೆಮಿಕ್ಕಿ
ನ| ಪದವಿಯುಂಟೇತಾಯೆಭಾವಿಸಿನೋಡುಚಿತ್ತದಲಿ|ಸದರವೇನ
ರಜನ್ಮದವರಿಗೆ| ಪ್ರೊದಗಲರಿಯದುಪುಣ್ಯನಿನಗಿದು | ಸುದತಿಕರು
ಣಿಸುಮಾತನೆಂದರುನಗುತರಂಭೆಯರು ||೨೧||

ಟೀಕೆ:—ತಾಯೆ-ಅಮ್ಮಾ, ಲೋಕದಲಿ-ಪ್ರಪಂಚದಲ್ಲಿ, ಪದವಿ-ಉತ್ಕೃಷ್ಟವಾದಗತಿಯು, ಆವುದು ?-ಯಾವುದು, ಸುರಪದವಿಯಲ್ಲದೆ ದೇವತೆಗಳಪದವಿಯಲ್ಲದೆ, ಬೇರೆ-ಮತ್ತೊಂದು, ಮಿಕ್ಕಿನ-ಶ್ರೇಷ್ಠವಾದ, ಪದವಿ-ವೈಭವವು, ಉಂಟೇ-ಇರುವುದೆ ? ಚಿತ್ತದಲಿ-ಮನಸ್ಸಿನಲ್ಲಿ, ಭಾವಿಸಿನೋಡು-ಆಲೋಚಿಸು, ನರಜನ್ಮದವರಿಗೆ-ಮನುಷ್ಯರಾಗಿ ಹುಟ್ಟಿದವರಿಗೆ, ಸದರವೇ-ದೈವಪದವಿಯು ಸುಲಭವಾಗಿ ಸಿಕ್ಕುವುದೇ ! ನಿನಗೆ, ಇದು, ಪುಣ್ಯ-ಸುಕೃತವೇಸರಿ, ಪ್ರೊದಗಲು-ಸೇರಲು, ಅರಿಯದು-ಅಸಾಧ್ಯವು, (೧) ಸುದತಿ-ದಮಯಂತಿಯೇ, ಮಾತೆ-ಈ ಮಾತನ್ನು, ಕರುಣಿಸು-ಕೇಳು (ಎಂಬದಾಗಿ) ರಂಭೆಯರು- ರಂಭೆಮೊದಲಾದವರು, ಎಂದರು- ಹೇಳಿದರು ||೨೧||

ತಾತ್ಪರ್ಯ:—ಮತ್ತು ಲೋಕದಲ್ಲಿ ದಿವ್ಯಗತಿಗಿಂತಲೂ ಶ್ರೇಷ್ಠವಾದ ಮತ್ತೊಂದು ಗತಿಯಿಲ್ಲ, ಎಂಬುದನ್ನು ಚೆನ್ನಾಗಿ ಆಲೋಚಿಸು. ಮನುಷ್ಯರಿಗೆ ದೇವವೈಭವವು ಅಸಾಧ್ಯವಲ್ಲವೇ ! ನಮ್ಮ ಮಾತನ್ನು

ಕೇಳು ಎಂದು ಬಗೆಬಗೆಯಾಗಿ ತಿಳಿಸಿದರು ||೩೧||

ಟಿಪ್ಪಣಿ: — (೧) ಸು-ಶ್ರೇಷ್ಠವಾದ, ದತಿ - ಹಲ್ಲುಳ್ಳವಳು, (ಅವ.) ||೩೧||

ಮೂ|| ಅಲರಪರಿಮಳದೆಡೆಗೆತುಂಬಿಗ| ಳೊಲಿದುಪ್ಪೋಪಂದದಲಿಲೋ
ಕದೊ | ಳಲರುತಾಂಹಾರೈಸಿಪ್ಪೋಪುದೆಅಳಿಗಳಿದ್ದೆಡೆಗೆ || ಸಲೆತವ
ಕದಿಂದಮರಪತಿಯೆಡೆ| ಗೊಲಿದುನೀಪ್ಪೋಪಂತೆಸುರಪತಿ| ನಲ
ವಿನಿಂದಲೆನಿನ್ನ ಬಳಿಗೈದಿದರೆಪುಣ್ಯವಲ ||೩೨||

ಟೀಕೆ:— ಅಲರ-ಹೂವಿನ, ಪರಿಮಳದ-ಸುವಾಸನೆಯುಳ್ಳ, ಎಡೆಗೆ-ಸ್ಥಳಕ್ಕೆ, ತುಂಬಿಗಳ್-ಭ್ರಮರಗಳು, ಒಲಿದು- ಪ್ರೀತಿಯಿಂದ, ಪ್ಪೋಪಂದದಲಿ-ಹೋಗುವಹಾಗೆ, ಲೋಕದೊಳ್ -ಪ್ರಪಂಚದಲ್ಲಿ. ಅಲರು-ಪುಷ್ಪವು, ತಾಂ-ತಾನು, ಹಾರೈಸಿ-ಬಯಸಿ, ಅಳಿಗಳಿದ್ದೆಡೆಗೆ-ತುಂಬಿಗಳಿರುವಕಡೆಗೆ, ಪ್ಪೋಪುದೆ-ಹೋಗುತ್ತದೆಯೋ ? ನೀಂ-ನೀನು (೧) ಸಲೆ-ಚೆನ್ನಾಗಿ, ತವಕದಿಂದೆ-ಕುತೂಹಲದಿಂದ, ಅಮರಪತಿಯ- ದೇವೇಂದ್ರನ, ಎಡೆಗೆ-ಸಮೀಪಕ್ಕೆ, ಒಲಿದು-ಪ್ರೀತಿಯಿಂದ, ಪ್ಪೋಪಂತೆ-ಹೋಗುವಹಾಗೆ, (೨) ಸುರಪತಿ-ಇಂದ್ರನು, ನಲವಿನಿಂದಲಿ-ಸಂತೋಷದಿಂದ, ನಿನ್ನ ಬಳಿಗೆ-ನಿನ್ನ ಸಮೀಪಕ್ಕೆ, ಐದಿದರೆ-ಬಂದರೆ, ಪುಣ್ಯವಲ-ಸುಕೃತವಲ್ಲವೆ ||೩೨||

ತಾತ್ಪರ್ಯ:— ಪುಷ್ಪಗಳಿಂದ ಮಕರಂದವನ್ನು ಪಾನಮಾಡಿ ತೃಪ್ತಿಹೊಂದುವುದಕ್ಕಾಗಿ ತುಂಬಿಯು ಪೂಗಳ ಪರಿಮಳವನ್ನು ತಿಳಿದು ಅದು ಎಲ್ಲಿಂದ ಬಂತೋ ಆ ದಿಕ್ಕನ್ನು ಕುರಿತು ಹುಡುಕಿಕೊಂಡು ಹೋಗುತ್ತದೆಯಲ್ಲದೆ, ತುಂಬಿಗಳಿರುವೆಡೆಗೆ ಹೂಗಳು ಹುಡುಕಿಕೊಂಡುಬರುತ್ತವೆಯೋ ! ಹಾಗೆಯೇ; ದೇವತಾಪುರುಷ ಸಂಸರ್ಗವು ಉಂಟಾದರೆ ಸಾಕೆಂದು ನೀನು ಇಂದ್ರನ ಬಳಿಗೆ ಹುಡುಕಿಕೊಂಡು ಬಂದಿರುವುದು ನಿನ್ನ ಪುಣ್ಯೋದಯವಲ್ಲವೇ, ಎಂದು ಹೇಳಲು ||೩೨||

ಟಿಪ್ಪಣಿ,— (೧) ರೀತಿವಾಚಕಾವ್ಯಯ, (೨) ಸುರ-ದೇವತೆಗಳಿಗೆ, ಪತಿ-ಒಡೆಯ (ಅವ) ||೩೨||

ಮೂ|| ಎನಲುಕೇಳಿದಳಾನುಡಿಯಸುರ | ವನಿತೆಗೆಂದಳುಚಿತ್ತವೆನ
ಗೊ |ಬ್ಬನಲಿಸಿಲುಕಿತುಮರಳಿಪ್ಪೊಡೆಕಮಲಾಕ್ಷಗಳವಲ್ಲ|| ಅನಿಮಿ
ಷಾಧಿಪತನಗೆದೇವಾಂ | ಗನೆಯರಿರುತಿರೆಮನುಜಸತಿಪಾ | ವನ

ವೆಬರಿದೆದುರಾಶೆತನಗೇಕೆಂದಳಿಂದುಮುಖಿ ॥೩೩॥

ಟೀಕೆ:— ಎನಲು-ಎಂಬದಾಗಿ ಹೇಳಲು, ಆನುಡಿಯು-ಆಮಾತನ್ನು, ಕೇಳಿದಳು, ಸುರವನಿತೆಗೆ-ದೇವಸ್ತ್ರೀಯನ್ನು ಕುರಿತು, ಎಂದಳು, ಎನಗೆ-ನನಗೆ, ಚಿತ್ತವು-ಮನಸ್ಸು, ಒಬ್ಬನಲಿ-ಒಬ್ಬನಲ್ಲಿ, ಸಿಲುಕಿತು-ಸಿಕ್ಕಿದೆ, ಮರಳಪ್ರೊಡೆ-ತಿರುಗಿಸಲು, (೧) ಕಮಲಾಕ್ಷಗೆ-ವಿಷ್ಣುವಿಗೂ, ಅಳವಲ್ಲ-ಸಾಧ್ಯವಲ್ಲ, (೨) ಅನಿಮಿಷಾಧಿಪ-ದೇವ ಶ್ರೇಷ್ಠನಾದ ಇಂದ್ರನು, ತನಗೆ, ದೇವಾಂಗನೆಯರ್ -ಅಪ್ಸರಸ್ತ್ರೀಯರು ಇರುತ್ತಿರೆ-ವಶರಾಗಿರಲು, ಮನುಜಸತಿ-ಮನುಷ್ಯ ಸ್ತ್ರೀಯು, ಪಾವನವೆ-ಹೆಚ್ಚಿನವಳೆ, ಬರಿದೆ-ವ್ಯರ್ಥವಾಗಿ (೩) ದುರಾಶೆ-ಚಾಪಲ್ಯವು, ತನಗೆ, ಏಕೆ, (ಎಂಬದಾಗಿ) ಇಂದುಮುಖಿ-ದಮಯಂತಿಯು, ಎಂದಳು-ಹೇಳಿದಳು ॥೩೩॥

ತಾತ್ಪರ್ಯ:— ದಮಯಂತಿಯು ಆ ಮಾತನ್ನು ಕೇಳಿ-ನನಗೆ ಒಬ್ಬನಲ್ಲಿ ಮನಸ್ಸು ನೆಲಸಿರುವುದು, ಅವನೇನನ್ನ ಪತಿಯೆಂದು ತಿಳಿದಿರುವೆನು. ಅದನ್ನು ಬದಲಾಯಿಸಲು ಸಾಕ್ಷಾತ್ ವಿಷ್ಣುವಾದರೂ ಆಗಲಾರದು. ಅಲ್ಲದೆ ದೇವ ವಲ್ಲಭನಾದ ಇಂದ್ರನ ಉಪಭೋಗಕ್ಕಾಗಿ ಉತ್ತಮರಾದ ದೇವತಾಸ್ತ್ರೀಯರು ಬಹುಮಂದಿಇರುವರಲ್ಲವೆ! ಎಲ್ಲವಿಷಯದಲ್ಲಿಯೂಮನುಷ್ಯಸ್ತ್ರೀಯರುಅವರಿಗಿಂತ, ಕನಿಷ್ಠಪಕ್ಷದವರು, ಅನ್ಯಾಯವಾಗಿ ಇಂದ್ರನಿಗೆ ಈ ದುರಾಶೆ ಏಕೆ ಉಂಟಾಯ್ತು ! ಎಂದಳು ॥೩೩

ಟಿಪ್ಪಣಿ:— ಕಮಲ-ತಾವರೆಯಂತೆ, ಅಕ್ಷ-ಕಣ್ಣುಳ್ಳವನು (ಅವ) (ಬ. ವ್ರೀ) (೨) ಅನಿಮಿಷ-ರೆಪ್ಪೆಇಲ್ಲದವರು (ಅವ) (ನಞ್. ಬ. ವ್ರೀ) ಅನಿಮಿಷರ ಅಧಿಪ-ಅನಿಮಿಷಾಧಿಪ (ಷ. ತ) (೩) ದುಷ್ಟವಾದ ಆಶೆ-ದುರಾಶೆ (ಪ್ರಾ. ಕರ್ಮ. ಸ) ॥೩೩॥

ಮೂ॥ ಮರಳೆತಾಮೂರ್ವಶಿಯರಿತ್ತಲು । ಬರುತನಳನೃಪತಿಲಕತಾ
ಮನ ।ಹರುಷದಲಿನಿಜರೂಪತಾಳ್ದನುರಾಜತೇಜದಲಿ ॥ ಅರಸನಿರೆ
ದಮಯಂತಿಕಂಡಚ್ಚರಿಯುಮನದೊಳುನಳನೊನಳೆಕೂ । ಬರಜ
ಯಂತನೊಯೆನುತವಿಸ್ಮಯಗೊಂಡಳಾತರುಣಿ ॥೩೪॥

ಟೀಕೆ:— ಊರ್ವಶಿಯರ್-ಅಪ್ಸರಃಸ್ತ್ರೀಯರು, ತಾಂ-ತಾವು, ಮರಳೆ-ಹಿಂದಿರುಗಲು, ಇತ್ತಲು-ಈಕಡೆ, ನಳನೃಪತಿಲಕ- ನಳರಾಜನು, ತಾಂ-ತಾನು, ಮನಹರ್ಷದಲಿ-ಮನಸ್ಸಂತೋಷದಿಂದ (೧) ನಿ

ಜರೂಪ-ಸ್ವಸ್ವರೂಪವನ್ನು, ಆಶ್ಚರ್ಯವನ್ನು ತಾಳ್ದನು-ಹೊಂದಿದನು, ಅ ಗಸಂ-ದೊರೆಯು, (೨)ರಾಜತೇಜದಲಿ-ದೊರೆಯಕಾಂತಿಯಿಂದ, ಇರೆ-ಇ ರಲು, ದಮಯಂತಿ, ಕಂಡು(೩) ಅಚ್ಚರಿಯತಾಳುತ್ತ-ಹೊಂದುತ್ತ, ಮ ನದಲಿ-ಮನಸಿನ್ನಲ್ಲಿ, ನಳನೊ, ನಳಕೂಬರನೊ, ಜಯಂತನೊ, ಎ ನುತ, ಆತರುಣಿ-ದಮಯಂತಿಯು, ವಿಸ್ಮಯಗೊಂಡಳು-ಆಶ್ಚರ್ಯವನ್ನು ಹೊಂದಿದಳು ॥೩೪॥

ತಾತ್ಪರ್ಯ:— ಈ ರೀತಿಯಾಗಿ ದಮಯಂತಿಯು ತಾನು ವರಿಸಿ ರುವ ನನ್ನಲ್ಲದೆ ಬೇರೊಬ್ಬನಲ್ಲಿ ಮನಸ್ಸನ್ನು ಮಾಡುವುದಿಲ್ಲವೆಂದು ಖಂ ಡಿತವಾಗಿ ಹೇಳಿದಮಾತನ್ನು ಕೇಳಿ ಆ ಅಪ್ಸರಸ್ತ್ರೀಯರು ಖಿನ್ನೆಯ ರಾಗಿ ಇಂದ್ರನಬಳಿಗೆ ಹೊರಡಲು, ಕೂಡಲೇ ನಳನೂ ಸಂತೋಷ ದಿಂದ ತನ್ನ ಪೂರ್ವರೂಪವನ್ನು ಹೊಂದಿ ದಿವ್ಯ ತೇಜೋ ವಿರಾಜಮಾನ ವಾದ ರಾಜಕಳೆಯಿಂದ ಕೂಡಿರಲು ದಮಯಂತಿ ನೋಡಿ ಇವನೇನು ನಳ ನೋ, ನಳಕೂಬರದೋ ಜಯಂತನೋ ಎಂದು ವಿಸ್ಮಿತ ಹೃದಯ ಳಾದಳು ॥೩೪॥

ಟಿಪ್ಪಣಿ: — (೧) ನಿಜವಾದರೂಪ-ನಿಜರೂಪ (ವಿ. ಪೂರ್ವ. ಕ) (೨) ರಾಜನತೇಜ-ರಾಜತೇಜ (ಷ. ತ.) (೩) ಅಚ್ಚರಿಗೆ (ತ್ಸ) ಆಶ್ಚರ್ಯ ॥೩೪॥

ಮೂ॥ ಅಂದುಸಂತೋಷದಲಿನಾರೀ। ವೃಂದಸಹಿತಿದಿರೆದ್ದು ವಿನಯದಿ
ನಿಂದುಕರಗಳಮುಗಿದುಸಿಂಹಾಸನದಿಕುಳ್ಳಿರಿಸಿ॥ ತಂದುಮುಕ್ತಾ
ಫಲಗಳನುಮುದ। ದಿಂದಕಾಣಿಕೆಯಿತ್ತುಸತಿಯುರ।ಸಂದಣಿಯುಕೆಲ
ಕೊತ್ತಿನುಡಿದಳುಮಧುರವಚನದಲಿ ॥ ೩೫ ॥

ಟೀಕೆ:— ಅಂದು-ಆಗ, ಸಂತೋಷದಲಿ-ಹರ್ಷದಿಂದ, (೧) ನಾರೀವೃಂದ ಸಹಿತ-ಸಖಿಯರೊಡನೆ, ಇದಿರೆದ್ದು- ಪ್ರತ್ಯುತ್ಥಾನಮಾಡಿ ವಿನಯದಿ-ಮರ್ಯಾದೆಯಿಂದ, ನಿಂತು-ನಿಂತುಕೊಂಡು, ಕರಗಳ-ಕೈಗ ಳನ್ನು, ಮುಗಿದು-ಜೋಡಿಸಿ, ಸಿಂಹಾಸನದಿ-ಸಿಂಹಪೀಠದಲ್ಲಿ ಕುಳ್ಳಿರಿ ಸಿ-ಕೂಡಿಸಿ, (೨) ಮುಕ್ತಾಫಲಗಳನ್ನು, ಕೆಲಕೆ-ಪಕ್ಕಕ್ಕೆ, ಒತ್ತಿ-ನಿಲ್ಲಿ ಸಿ, ಮಧುರವಚನದಲಿ- ಮೃದುವಾದ ಮಾತಿನಿಂದ, ನುಡಿದಳು-ಹೇ ಳಿದಳು ॥೩೫॥

ತಾತ್ಪರ್ಯ:- ಆಗ ಬಹು ಸಂಭ್ರಮದೊಡನೆ ತನ್ನ ಸಖಿಯರೊಂದಿ

ಗೆ ಪ್ರತ್ಯುತ್ಥಾನನಮಾಡಿ ಸಿಂಹಾಸನದಲ್ಲಿ ಕುಳ್ಳಿರಿಸಿ ದಿವ್ಯವಾದ ಆಣಿ ಮುತ್ತುಗಳನ್ನು ಕಾಣಿಕೆಯಾಗಿ ಸಮರ್ಪಿಸಿ ವಿನಯದಿಂದ ಕೈಜೋಡಿಸಿ ನಿಂತು; ತನ್ನ ಸಖಿಯರನ್ನು ಪಾರ್ಶ್ವದಲ್ಲಿ ಸ್ವಲ್ಪದೂರವಾಗಿ ನಿಲ್ಲಿಸಿ ಕೊಂಡು ಇಂಪಾದ ಮಾತುಗಳಿಂದ ನಳನೃಪನನ್ನು ಕುರಿತು ಇಂ ತೆಂದಳು ‖೭೫‖

ಟಿಪ್ಪಣಿ:— ನಾರಿಯರ ವೃಂದ-ನಾರೀವೃಂದ (ಷ. ತ) ವೃಂದ ದಿಂದ ಸಹಿತ-ವೃಂದಸಹಿತ (ತೃ. ತ) (೨) ಮುಕ್ತಗಳೇ ಫಲಗಳು-ಮು ಕ್ತಾಫಲ (ಅವ. ಪೂರ್ವ. ಕ) ‖೭೫‖

ಮೂ‖ ಆರುನೀವೆಲ್ಲಿಂದಬಂದಿರಿ| ಕಾರಣವಿದೇಂನಮ್ಮರಾಜ|. ದ್ವಾರವ
ನುನೀವ್‌ಹೊಕ್ಕಹದನೇನಿಲ್ಲಿಗಂಡುನೊಣ ‖ ಸೇರಲಮ್ಮದುನೀವ
ಘಾತದ | ವೀರರೇಂಸೌಂದರ್ಯವೆನೆನಳ | ಭೂರಮಣನಸುನಗುತ
ನುಡಿದನುಸತಿಗೆವಿನಯದಲಿ ‖೭೬‖

ಟೀಕೆ:— ನೀವ್-ನೀವು, ಆರು-ಯಾರು ? ಎಲ್ಲಿಂದ, ಬಂದಿರಿ? ಇದು-ಬಂದುದು, ಏಂಕಾರಣಂ-ಏನುಕಾರಣವು ? ಇಲ್ಲಿ-ಈ ಸ್ಥಳದಲ್ಲಿ (೧) ಗಂಡುನೊಣ-ಗಂಡಾಗಿರುವ ನೊಣವೂಸಹ, ಸೇರಲಮ್ಮದು-ಬರ ಲಾರದು, ನಮ್ಮ ರಾಜದ್ವಾರವನು-ಅರಮನೆಯ ಬಾಗಿಲನ್ನು, ನೀವ್-ನೀವು, ಹೊಕ್ಕ-ಪ್ರವೇಶಿಸಿದ, ಹದನ-ಸಮಾಚಾರವು, ಎಂ-ಏನು, ನೀವ್-ನೀವು, ಅಘಾತದ-ತಡೆಯಿಲ್ಲದ (೨) ವೀರರ್-ಪರಾಕ್ರಮವುಳ್ಳ ವರು, ಸೌಂದರ್ಯಂ-ಈ ರೂಪಲಾವಣ್ಯವು, ಏಂ-ಏನು, ಎನೆ-ಎಂದು ಕೇಳಲು, ನಳ ಭೂರಮಣ-ನಳರಾಜನು, ನಸುನಗುತ-ಮುಗುಳ್ನಗೆ ನಕ್ಕು, ವಿನಯದಲಿ-ನಮ್ರತೆಯಿಂದ, ಸತಿಗೆ-ದಮಯಂತಿಗೆ, ನುಡಿದ ನು-ಹೇಳಿದನು ‖೭೬‖

ತಾತ್ಪರ್ಯ;—ಎಲೈ ನೀವುಯಾರು ? ಎಲ್ಲಿಂದ ಬಂದಿರುವಿರಿ ? ನ ಮ್ಮ ಅರಮನೆಯ ಬಾಗಿಲೊಳಕ್ಕೆ ಗಂಡಾಗಿರುವ ನೊಣವೂ ಕೂಡ ಬ ರಕೂಡದೆಂದು ತಡೆದಿರುವಾಗ ನೀವು ಪ್ರವೇಶಿಸಲು ಕಾರಣವೇನು ? ನೀವು ಇಷ್ಟು ಪರಾಕ್ರಮಶಾಲಿಗಳಾಗಿಯೂ, ಇಷ್ಟು ಸೌಂದರ್ಯವುಳ್ಳವ ರೂ ಹೇಗಾಗಿರುವಿರಿ ? ಎಂದು ಪ್ರಶ್ನೆ ಮಾಡಲು ನಳನು ನಸುನಕ್ಕು ದ ಮಯಂತಿಯೊಡನೆ ಹೀಗೆ ಹೇಳಿದನು. ‖೭೬‖

ಟಿಪ್ಪಣಿ:—(೧) ಗಂಡಾದನೊಣ-ಗಂಡುನೊಣ (ವಿ.ಪೂರ್ವ.ಕ

(೨) (ದ್ಭ) ಬೀರ, ॥೩೬॥

ಮೂ॥ ತರುಣಿಕೇಳಮರೇಂದ್ರನಟ್ಟಿದ । ಚರನುತಾಮಿಗೆನಿನ್ನ ರೂಪ ನು। ಸುರಮುನಿಪನರುಹಿದುದಕೇಳಿದನಿಂದ್ರವಿರಹದಲಿ॥ಕರಗಿಮ ದನನಶರಹತಿಗೆಮನ। ಮರುಗಿಬಂದಿಹನಿಲ್ಲಿಗಾತಂ। ಗರಸಿಯಾಗೆನೆ ಕೇಳಿಮುಖದಿರುಹಿದಳುದಮಯಂತಿ ॥೩೭॥

ಟೀಕೆ:— ತರುಣಿ-ಕನ್ಯೆಯೇ, ಕೇಳ್-ಕೇಳು, ತಾಂ-ತಾನು, ಅಮರೇಂದ್ರಂ - ಇಂದ್ರನು, ಅಟ್ಟಿದ-ಕಳುಹಿದ, ಚರನು-ದೂತನು, ಸುರಮುನಿಪಂ-ದೇವರ್ಷಿಶ್ರೇಷ್ಠನು, ಅರುಹಿದುದ-ವಿವರಿಸಿದ, ನಿನ್ನ ರೂಪನು-ನಿನ್ನಲಾವಣ್ಯವನ್ನು, ಮಿಗೆ-ಹೆಚ್ಚಾಗಿ, ಇಂದ್ರ-ಇಂದ್ರನು, ಕೇಳಿದ-ಕೇಳಿದನು, ವಿರಹದಲಿ-ವಿಯೋಗದಿಂದ, ಕರಗಿ - ಕೃಶನಾಗಿ, ಮದನನ-ಮನ್ಮಥನ, (೧) ಶರಹತಿಗೆ-ಬಾಣದಪೆಟಿಗೆ,ಮನಮರುಗಿ-ಖಿನ್ನನಾಗಿ, ಇಲ್ಲಿಗೆ-ಈಸ್ಥಳಕ್ಕೆ, ಬಂದಿಹಂ-ಬಂದಿರುವನು, ಆತಂಗೆ-ಅವನಿಗೆ,-ಅರಸಿಯಾಗು-ಪತ್ನಿಯಾಗು, ಎನೆ-ಎಂದುಹೇಳಲು, ಕೇಳಿ, ದಮಯಂತಿ, (೨) ಮುಖದಿರುಹಿದಳು-ಮುಖವನ್ನು ತಿರಿಗಿಸಿದಳು. ॥೩೭॥

ತಾತ್ಪರ್ಯ:— ಎಲೌ ತರುಣೀ ! ನಾನು ಇಂದ್ರನ ದೂತನು. ನಾರದಮಹರ್ಷಿಯು ನಿನ್ನ ಅಮೋಘವಾದ ರೂಪರೇಖಾ ವಿಲಾಸಗಳನ್ನು ಇಂದ್ರನೊಡನೆ ವರ್ಣಿಸಿ ಹೇಳಲು, ಆ ದೇವೇಂದ್ರನು ವಿರಹಾಕ್ರಾಂತನಾಗಿ ನಿನ್ನನ್ನು ಮೋಹಿಸಿ ಮನ್ಮಥಬಾಣಕ್ಕೆ ಗುರಿಯಾಗಿ ಬಾಧೆಪಡಲಾರದೆ ನಿನ್ನನ್ನರಸಿಕೊಂಡು ಇಲ್ಲಿಗೆ ಬಂದಿರುವನು. ನೀನು ಆತನನ್ನು ಪತಿಯಾಗಿ ವರಿಸುವವಳಾಗು ಎಂದು ಹೇಳಲು, ದಮಯಂತಿಯು ಅದನ್ನು ಕೇಳಿದ ಕೂಡಲೆ ಅಸಹ್ಯಪಟ್ಟು ತನ್ನ ಮುಖವನ್ನು ತಿರುಗಿಸಿಕೊಂಡು ಉತ್ತರವನ್ನು ಹೇಳುತ್ತಾಳೆಂತೆಂದರೆ ॥೩೭॥

ಟಿಪ್ಪಣಿ:—(೧) ಶರಕ್ಕೆ(ದ್ಭ) ಸರ, ಶರದಹತಿ-ಶರಹತಿ (ಷ.ತ.) (೨) ಮುಖ- (ದ್ಭ) ಮೊಗ, ಮುಖಮಂತಿರುಹಿದಳು-ಮುಖದಿರುಹಿದಳು (ಕ್ರಿ. ಸ) ॥೩೭॥

ಮೂ॥ ಬಲ್ಲವರುನೀವಧಿಕರೆಮ್ಮೊಳು। ಸಲ್ಲದೀನುಡಿಯೇತಕಿದುಶಚಿ । ವಲ್ಲಭನವೂತೇನುಸಾಕಂತಿರಲಿಯೆನಗಿನ್ನು॥ ವಲ್ಲಭನುನಳನೃಪತಿ ಯುಲ್ಲದೆ। ನಲ್ಲರುಂಟೇಜಗದಿನೀವ್ಸುರ। ರಲ್ಲನಿಮ್ಮಭಿಧಾನವೇನೆಂದಳುಸರೋಜಮುಖಿ ॥೩೮॥

ಟೀಕೆ:—ನೀವ್-ನೀವು, ಬಲ್ಲವರು-ತಿಳಿದವರು, ಅಧಿಕರ್-ದೊಡ್ಡವರು, ಎಮ್ಮೊಳು-ನಮ್ಮಲ್ಲಿ, ಈನುಡಿ-ಈಮಾತು, ಸಲ್ಲದು-ನಡೆಯುವುದಿಲ್ಲ, ಇದು, ಏಕೆ-ಯಾತಕ್ಕೆ (೧) ಶಚಿವಲ್ಲಭನ-ಇಂದ್ರನ, ಮಾತೇನು-ಮಾತೆಂಥದು, ಸಾಕು (೨) ಅಂತಿರಲಿ-ಹಾಗಿರಲಿ, ಎನಗೆ - ನನಗೆ, ಇನ್ನು-ಈಗ, ವಲ್ಲಭನು-ಗಂಡನು, ನಳನೃಪತಿಯಲ್ಲದೆ-ನಳರಾಜನಲ್ಲದೆ, ಜಗದಿ-ಲೋಕದಲ್ಲಿ, ನಲ್ಲರು-ಬೇರೆಗಂಡಂದಿರು, ಉಂಟೇ - ಇರುವರೇ, ನೀವ್-ನೀವು, ಸುರರಲ್ಲ-ದೇವತೆಗಳಲ್ಲ, ನಿಮ್ಮ, ಅಭಿಧಾನಂ- ಹೆಸರು, ಏಂ-ಏನು, (ಎಂಬದಾಗಿ) ಸರೋಜಮುಖಿ-ಕಮಲಮುಖಿಯಾದ ದಮಯಂತಿಯು, ಎಂದಳು-ಹೇಳಿದಳು. ||೩೪||

ತಾತ್ಪರ್ಯ:—ನೀವು ವಿವೇಕಶಾಲಿಗಳು ದೊಡ್ಡವರು. (ನಿಮ್ಮಂತಹವರು ಇಂತಹಮಾತನ್ನಾಡಬಾರದೆಂಬ ಭಾವವು.) ನಿಮಗೆ ಹೇಳಬೇಕಾದುದೇನು ? ನಮ್ಮಲ್ಲಿ ಹೀಗೆ ಮಾಡುವುದು ನಡೆಯತಕ್ಕದ್ದಲ್ಲ. ಇಂದ್ರನು ಇಂತಹಮಾತನ್ನು ಹೇಳಬಹುದೇ? ಹೀಗೆ ಹೇಳಲು ಕಾರಣವೇನು ? ನನಗೆ ಈ ಲೋಕದಲ್ಲಿ ನಳನೊಬ್ಬನೇ ಪತಿಯಲ್ಲದೆ ಮತ್ತೊಬ್ಬರಲ್ಲ. ನಿಮ್ಮನ್ನು ನೋಡಿದರೆ ದೇವತೆಯಂತೆ ಕಾಣಬರುವುದಿಲ್ಲ. ನೀವು ಯಾರು ! ನಿಮ್ಮ ಹೆಸರೇನು ? (ನಿನ್ನ ರೂಪಲಕ್ಷಣಾದಿಗಳನ್ನು ನೋಡಿದರೆ ನಳನಂತೆಯೇ ಕಾಣುತ್ತದೆ ! ಎಂಬ ಭಾವವು) ಎಂದು ದಮಯಂತಿ ಕೇಳಿದಳು. ||೩೪||

ಟೀಕೆ:— (೧) ಶಚಿಯುವಲ್ಲಭ-ಶಚಿವಲ್ಲಭ (ಷ. ತ) (೨) ಅಂತೆ ಇರಲಿ-ಅಂತಿರಲಿ, ಲೋಪಸಂಧಿ ||೩೪||

ಮೂ|| ದೂತರನುಕುಲಗೊತ್ರಗಳನೀ । ನೇತಕರಸುವೆತರುಣಿಯಿಂ
ದ್ರನು|ಖ್ಯಾತಪುರುಷನುಬಯಸುವದುಕೃತಪುಣ್ಯನಿನಗೈಸೆ|| ಭೂ
ತಳದನರರಧಿಕರೇಸಂ|ಪ್ರೀತಿಯೇತರವಲಬಿಡುಪುರು| ಹೂತನನು
ಕೈವಿಡಿದುನೀಸುಖಿಯಾಗುನಡೆಯೆಂದ ||೩೫||

ಟೀಕೆ:—ತರುಣಿ-ನಾರಿಯು, ನೀಂ-ನೀನು, ದೂತರನು-ಸೇವಕರನು, ಕುಲಗೋತ್ರಗಳನ್ನು-ವಂಶ ಮತ್ತು ಗೋತ್ರಗಳನ್ನು (೧) ಏತಕೆ-ಏಕೆ, ಅರಸುವೆ-ಹುಡುಕುತ್ತೀಯೆ? ಇಂದ್ರನು, (೨) ಖ್ಯಾತಪುರುಷನು-ಪ್ರಸಿದ್ಧಪುರುಷನು (ಅವನನ್ನು) ಬಯಸುವುದು-ಅಪೇಕ್ಷಿಸುವುದು, ನಿನಗೆ (೩) ಕೃತಪುಣ್ಯವು-ಮಾಡಿದಸುಕೃತವು, ಐಸೆ - ಅಲ್ಲವೇ ?

ಭೂತಳದ-ಭೂಲೋಕದ, ನರರ್-ಮನುಷ್ಯರು, ಅಧಿಕರೇ-(ದೇವತೆಗಳಿಗಿಂತ) ದೊಡ್ಡವರೇ ? ಅವರಲ್ಲಿ-ಮನುಷ್ಯರಲ್ಲಿ, ಸಂಪ್ರೀತಿ- ಪ್ರೇಮವು, ಏಕೆ-ಏತಕ್ಕೆ, ಬಿಡು-ಬಿಟ್ಟುಬಿಡು, ನೀಂ-ನೀನು, ಪುರುಹೂತನನು-ಇಂದ್ರನನ್ನು, ಕೈವಿಡಿದು-ಕೈಹಿಡಿದು, ಸುಖಿಯಾಗು-ಸೌಖ್ಯಪಡು, ನಡೆ-ಹೊರಡು, ಎಂದ-ಎಂದನು ॥೩೯॥

ತಾತ್ಪರ್ಯ:—ಅದಕ್ಕೆ ನಳನು ಎಲೌ ತರುಣಿ, ಸೇವಕನಾದ ನನ್ನ ಕುಲಗೋತ್ರಗಳನ್ನು ವಿಚಾರಿಸುವುದರಿಂದ ಪ್ರಯೋಜನವೇನು ? ಪ್ರಸಿದ್ಧಪುರುಷನಾದ ದೇವೇಂದ್ರನು ನಿನ್ನನ್ನು ಅಪೇಕ್ಷಿಸುವುದುನಿನ್ನ ಪುಣ್ಯೋದಯವಲ್ಲವೇ ? ದೇವತೆಗಳಿಗಿಂತ ಮನುಷ್ಯರು ಶ್ರೇಷ್ಠರೇ ಮನುಷ್ಯರಲ್ಲಿರುವ ಪ್ರೇಮವನ್ನು ಬಿಡು. ಇಂದ್ರನನ್ನು ಸೇರಿ ಸುಖಿಯಾಗಿರು ಎಂದನು. ॥೩೯॥

ಟಿಪ್ಪಣಿ:—ಏತಕೆ-ಪ್ರಶ್ನಾರ್ಥಕ ಸರ್ವನಾಮ. ಏತರ್ಕೆ, ಏಕೆ, ಎಂಬರೂಪಗಳುಂಟು, (೧) ಖ್ಯಾತನಾದಪುರುಷನು-ಖ್ಯಾತಪುರುಷನು (ವಿ. ಪೂರ್ವ. ಕ) (೨) ಕೃತವಾದಪುಣ್ಯವು-ಕೃತಪುಣ್ಯವು (ವಿ. ಪೂರ್ವ. ಕ) ॥೩೯॥

ಮೂ॥ ಇಳೆಯಮರ್ತ್ಯರುನಾಕನಿಳಯರಿ। ಗಳವೆಯೇಂತರವಲ್ಲನುಡಿ
ಗಳು। ಕುಲಗಿರಿಗೆನೊರಜಂತರವೆನೀಂನೋಡುಚಿತ್ತದಲಿ॥ ನಳನೃ
ಪನಬಯಸುವ್ರೊಡೆನಿನಗವ। ನೊಲಿವನೇಧಾತ್ರೀಶರೊಳಗ।ಗ್ಗಳನೆ
ಸಾಕೆಂದೆನಲುಕೋಪದಿನುಡಿದಳಾತರುಣಿ ॥೪೦॥

ಟೀಕೆ:—ಇಳೆಯ-ಭೂಲೋಕದಲ್ಲಿರುವ, ಮರ್ತ್ಯರು-ಮನುಷ್ಯರು(೧)ನಾಕನಿಳಯರಿಗೆ-ಸ್ವರ್ಗಲೋಕವಾಸಿಗಳಿಗೆ, ಅಳವೆಯೇಂ - ಸಮಾನರಾದಾರೇನು ? ನುಡಿಗಳು-ನೀನಾಡುವಮಾತುಗಳು, ತರವಲ್ಲ - ಯೋಗ್ಯವಾದುದಲ್ಲ. ಕುಲಗಿರಿಗೆ-ಕುಲಾಚಲಕ್ಕೆ, ನೊರಜು-ಬೆಣಚುಕಲ್ಲು, ಅಂತರವೆ-ಸಮವೆ! ನೀಂ-ನೀನು, ಚಿತ್ತದಲಿ-ಮನಸ್ಸಿನಲ್ಲಿ, ನೋಡು-ಆಲೋಚಿಸು, ನಳನೃಪನ-ನಳರಾಜನನ್ನು, ಬಯಸುವ್ರೊಡೆ-ಅಪೇಕ್ಷಿಸಿದಮಾತ್ರಕ್ಕೆ, ಅವಂ-ಅವನು, ಒಲಿವನೇ - ಪ್ರೀತಿಸುತ್ತಾನೆಯೇ ! (೨) ಧಾತ್ರೀಶರೊಳಗೆ-ದೊರೆಗಳಲ್ಲಿ, ಅಗ್ಗಳನೆ-ಶ್ರೇಷ್ಠನೇ, ಸಾಕು-ಬಿಡು, ಎಂದೆನಲು-ಎಂದುಹೇಳಲು, ಆತರುಣಿ-ದಮಯಂತಿಯು, ಕೋಪದಿ-ಸಿಟ್ಟಿನಿಂದ, ನುಡಿದಳು. ॥೪೦॥

ತಾತ್ಪರ್ಯ:—ಎಷ್ಟು ಪ್ರಬಲರಾದರೂ ಮನುಷ್ಯರು ದೇವತೆಗಳಿಗೆ ಸಮನಾಗುವುದುಂಟೇ, ಕುಲಪರ್ವತಕ್ಕೆ, ನೊರಜುಕಲ್ಲೊಂದು ಸಮವಾದೀತೆ! ಚೆನ್ನಾಗಿ ಆಲೋಚಿಸು-ಮತ್ತು ನೀನು ನಳನನ್ನು ಅಪೇಕ್ಷಿಸಿದಮಾತ್ರಕ್ಕೆ ಅವನು ನಿನ್ನನ್ನು ಪ್ರೀತಿಸುವನೆಂದು ತಿಳಿದುಕೊಳ್ಳುವುದು ಹೇಗೆ? ಅಥವಾ ಪ್ರೀತಿಸದರೂ ಅವನೇನು ದೊರೆಗಳಲ್ಲಿ ಅಂತಹ ಅಗ್ರಗಣ್ಯನೇ! ಸುಮ್ಮನೆ ಹಠವನ್ನು ಹಿಡಿದು ಫಲವೇನು! ಬಿಡು, ಎಂದು ಹೇಳಲು ಆಕೆಯು ಕೋಪದಿಂದನುಡಿದಳು. ॥೪೦॥

ಟಿಪ್ಪಣಿ:— (೧) ಕ-ಸುಖವು, ಸುಖಾಭಾವವು ಅಕ, ಅದಿಲ್ಲದುದು-ನಾಕವು, ನಾಕವುಯಾರಿಗೆ ನಿಳಯವ್ರೋ ಅವರು- ನಾಕನಿಳಯರು, (ಬ. ವ್ರೀ.) (೨) ಧಾತ್ರಿ-ಭೂಮಿಗೆ, ಈಶ-ಒಡೆಯ, ಧಾತ್ರಿ-ಭೂಮಿ, ಧಾದಿ, ನೆಲ್ಲಿಗಿಡ (ನಾನಾ) ॥೪೦॥

ಮೂ॥ ಮಾನವಾಧೀಶ್ವರರೊಳಗೆಸನು । ಮಾನವುಳ್ಳವಸತ್ಯಸಂಧನಿ ।
ಧಾನಿಹಿಮಕರವಂಶಪಾವನಸಾರ್ವಭೌಮನಲ॥ ಆನರೇಂದ್ರಗೆಸರಿ
ಯೆಮನುಮುನಿ। ದಾನವಾಮರರಿನ್ನುನಿಮುಗೀ । ಹೀನವೃತ್ತಿಯ
ಮಾತದೇಕೆಂದಳುಸರೋಜಮುಖಿ ॥೪೧॥

ಟೀಕೆ:—ಮಾನವಾಧೀಶ್ವರರೊಳಗೆ-ದೊರೆಗಳಲ್ಲಿ, ಸನುಮಾನವುಳ್ಳವ-ಸನ್ಮಾನವನ್ನು ಪಡೆದಿರುವ, ಸತ್ಯಸಂಧ-ಸತ್ಯವ್ರತನಾದ, ನಿಧಾನಿ-ಆಶ್ರಯನಾದ, (೧) ಹಿಮಕರವಂಶಪಾವನ-ಚಂದ್ರವಂಶವನ್ನು ಪರಿಶುದ್ಧಮಾಡುವ, ಸಾರ್ವಭೌಮಂ-ಚಕ್ರವರ್ತಿಯು, (ನಳನು,) ಅಲ - ಅಲ್ಲವೇ, (೨) ಆನರೇಂದ್ರಗೆ- ರಾಜಶ್ರೇಷ್ಠನಿಗೆ, ಮನುಮುನಿದಾನವಾಮರರ್-ಮನುಗಳು, ಋಷಿಗಳು, ರಾಕ್ಷಸರು, ದೇವತೆಗಳು, ಸರಿಯೆ-ಸಮಾನರೇ, ಇನ್ನು-ಮುಂದೆ, ಹೀನವೃತ್ತಿಯ-ಅಲ್ಪಜೀವನದ, ಮಾತು, ಅದೇಕೆ-ಏತಕ್ಕೆ! ಎಂಬದಾಗಿ ಸರೋಜಮುಖಿ-ಕಮಲಮುಖಿಯಾದದಮಯಂತಿಯು, ಎಂದಳು-ಹೇಳಿದಳು ॥೪೧॥

ತಾತ್ಪರ್ಯ:—ದೊರೆಗಳೆಲ್ಲೆಲ್ಲಾ ಹೆಸರುವಾಸಿಕೆಯನ್ನು ಪಡೆದು, ಸತ್ಯವ್ರತನಾಗಿ, ಸರ್ವಾಶ್ರಯನಾಗಿ, ಚಂದ್ರವಂಶಕ್ಕೆ ತಿಲಕಪ್ರಾಯನಾಗಿ ಚಕ್ರವರ್ತಿಯೆನಿಸಿಕೊಂಡಿರುವ ಆ ನಳನಿಗೆ ಮನುಗಳಾಗಲಿ, ಮುನಿಗಳಾಗಲಿ, ದೇವತೆಗಳಾಗಲಿ, ರಾಕ್ಷಸರಾಗಲಿ ಸಮಾನರಾಗುವರೇ! ಅಂತಹರಾಜೇಂದ್ರನನ್ನು ಬಿಟ್ಟು ಉಳಿದವರನ್ನು ಆಶ್ರಯಿಸಿ ಅಲ್ಪಜೀವನ

ವನ್ನು ಮಾಡುವುದೇತಕ್ಕೆ ? ನನಗವಶ್ಯಕವಿಲ್ಲವೆಂದು ನುಡಿದಳು. ॥೪೧॥

ಟಿಪ್ಪಣಿ:—(೧) ಹಿಮ-ತಣ್ಣಗಿರುವ, ಕರ-ಕಿರಣವುಳ್ಳವನು (ಅವ) (೨) ನರ-ಮನುಷ್ಯರಿಗೆ, ಇಂದ್ರ-ಒಡೆಯ, (ಅವ) ನರರ ಇಂದ್ರ-ನರೇಂದ್ರ (ಷ. ತ) ಅವನುನರೇಂದ್ರ-ಆನರೇಂದ್ರ (ಗಮಕ) ನರ, ಇಂದ್ರ-ನರೇಂದ್ರ (ಗುಣ. ಸಂ) ನರೇಂದ್ರ-ದೊರೆ, ಹಾವಾಡಿಗ (ನಾ)॥೪೧

ಮೂ॥ನಿಷಧಪತಿಯೇಪತಿಯೆನುತಭಾ। ವಿಸಿದೆನಾತನಕರುಣವೆನ್ನಲಿ।ಪ
ಸರಿಸಿದೊಡದುಲೇಸುಲೇಸಲ್ಲದೊಡೆನಳನೃಪಗೆ॥ ಅಸುವತೆರುವೆನು
ಯೆನ್ನ ಫಲಸಿ। ದ್ಧಿಸಲಿನಿಜಸಂಕಲ್ಪವೆಂದಾ। ಶಶಿವದನೆಕಂಬನಿಯು
ಮಿಡಿದಳುನಖದಕೊನೆಯಲ್ಲಿ ॥೪೨॥

ಟೀಕೆ:—ನಿಷಧಪತಿಯೇ-ನಳನೇ, ಪತಿ-ನನ್ನ ಗಂಡನು, ಎನುತ-ಎಂಬದಾಗಿ, ಭಾವಿಸಿದೆಂ-ಆಲೋಚಿಸಿದೆನು, ಆತನ-ಅವನ, ಕರುಣಂ-ಕೃಪೆಯು, ಎನ್ನಲ್ಲಿ-ನನ್ನಲ್ಲಿ, ಪಸರಿಸಿದೊಡೆ-ಉಂಟಾದರೆ, ಅದು, ಲೇಸು-ಒಳ್ಳೇಯದು, ಲೇಸಲ್ಲದೊಡೆ-ಹಾಗಲ್ಲಸಿದ್ದರೆ, ನಳನೃಪಗೆ-ನಳರಾಜನಿಗೆ, ಅಸುವ-ಪ್ರಾಣವನ್ನು, ತೆರುವೆನು-ಒಪ್ಪಿಸುವೆನು, ಎನ್ನ-ನನ್ನ ಅಭಿಪ್ರಾಯವು, (ಇದು) ಎಂದು-ಎಂಬದಾಗಿ (೨) ಆಶಶಿವದನೆ-ದಮಯಂತಿಯು, (೩) ಕಂಬನಿಯು-ಕಣ್ಣೀರನ್ನು, ನಖದ - ಉಗುರಿನ, ಕೊನೆಯಲ್ಲಿ-ತುದಿಯಲ್ಲಿ, ಮಿಡಿದಳು-ಸಾರಿಸಿದಳು॥೪೨॥

ತಾತ್ಪರ್ಯ:—ನಿಷಧ ದೇಶಾಧೀಶ್ವರನಾದ ನಳನೇ ನನ್ನ ಗಂಡನೆದು ಮನಸ್ಸಿನಲ್ಲಿ ಭಾವಿಸಿಕೊಂಡಿದ್ದೇನೆ. ಆತನ ಕೃಪೆಯು ನನ್ನಲ್ಲಿ ಬಂದು ನನ್ನನ್ನು ಪತ್ನಿಯಾಗಿ ಪರಿಗ್ರಹಿಸಿದರೆ ಸರಿ. ಹಾಗಿಲ್ಲದಿದ್ದರೆ ಆತನಿಗಾಗಿ ಸಮರ್ಪಿಸಿರುವ ಈ ದೇಹವನ್ನು ಆತನಿಗೇ ಒಪ್ಪಿಸಿ ಪ್ರಾಣವನ್ನು ಪರಿತ್ಯಾಗ ಮಾಡುವೆನು. ಅಲ್ಲಿಗೆ ನನ್ನ ಕೋರಿಕೆಯು ನೆರವೇವುದು, ಇದೇ ನನ್ನ ಸಂಕಲ್ಪವು, ಇದಕ್ಕೆ ವಿಾರಿನಡೆವವಳಲ್ಲ, ಎಂದುಕಣ್ಣಿನಲ್ಲಿ ನೀರನ್ನು ಸುರಿಸುತ್ತಾ ಬೆರಲಿನಿಂದ ಮಿಡಿಯಲು ॥೪೨॥

ಟಿಪ್ಪಣಿ:—(೧) ನಿಜವಾದ ಸಂಕಲ್ಪವು-ನಿಜಸಂಕಲ್ಪವು (ವಿ. ಪೂ. ಕ) (೨) ಶಶಿ-ಚಂದ್ರನಂತೆ, ವದನೆ-ಮುಖವುಳ್ಳವಳು (ಅವ) (ಬ. ವ್ರಿ. ಸ) ಅವಳು-ಶಶಿವದನೆ, ಆಶಶಿವದನೆ (ಗಮಕ) (೩) ಕಣ್ + ಪನಿ ಕಂಬನಿ, ಪಕಾರಕ್ಕೆ ಬಕಾರಾದೇಶ. ಕನ್ನಡ ವ್ಯಂಜನಸಂಧಿ, ಕಣ್ಣಪನಿ-ಕಂಬನಿ (ಷ. ತ)॥೪೨॥

ಮೂ॥ ಕರಗಿತಂತಃಕರಣನೃಪತಿಗೆ। ಸರಸಿಜಾಕ್ಷಿಯದೃಢವಕಂಡನು।
ಕರುಣಲತೆಕುಡಿದೋರಿತಾಕ್ಷಣನುಡಿದನಾಸತಿಗೆ ॥ ಸರಸಿಜಾನನೆ
ಕೇಳುತಾನೇ। ಧರಣಿಪತಿನಳನೆನಲುಲಜ್ಜಿಸಿ। ಶಿರವನಸುಬಾಗಿಸುತ
ಮತ್ತಿಂತೆಂದಳಾನೃಪಗೆ ॥೪೩॥

ಟೀಕೆ:—ನೃಪತಿಗೆ-ದೊರೆಗೆ, ಅಂತಃಕರಣ-ಮನಸ್ಸು, ಕರಗಿತು-ಮರುಗಿತು, ಸರಸಿಜಾಕ್ಷಿಯ- ಕಮಲದಂತೆ ಕಣ್ಣುಳ್ಳ ದಮಯಂತಿಯ, (೧) ದೃಢವ-ನಿಶ್ಚಯವನ್ನು, ಕಂಡನು-ತಿಳಿದನು, (೨) ಕರುಣಲತೆ-ಕೃಪೆಎಂಬಬಳ್ಳಿಯು, (೩) ಕುಡಿದೋರಿತು-ಚಿಗುರಿತು, ಆಕ್ಷಣ- ತತ್‌ಕ್ಷಣದಲ್ಲಿ, ಆಸತಿಗೆ-ದಮಯಂತಿಗೆ, ನುಡಿದನು-ಹೇಳಿದನು, ಸರಸಿಜಾನನೆ-ಕಮಲಮುಖಿಯೇ, ಕೇಳು, ತಾನೇ-ನಾನೇ, ಧರಣಿಪತಿ - ದೊರೆಯಾದ, ನಳನು, ಎನಲು-ಎಂಬದಾಗಿ ಹೇಳಲು, ಲಜ್ಜಿಸಿ-ನಾಚಿ, ಶಿರವ-ತಲೆಯನ್ನು, ನಸುಬಾಗಿಸುತ-ಸ್ವಲ್ಪಬಗ್ಗಿಸಿ, ಮತ್ತೆ, ಆನೃಪಗೆ-ಆದೊರೆಗೆ, ಇಂತೆಂದಳು-ಹೀಗೆ ಹೇಳಿದಳು. ॥೪೩॥

ತಾತ್ಪರ್ಯ:—ಕರುಣಾಳುವಾದ ನಳನಹೃದಯವು ಕರಗಿ ಆಕೆಯ ಮನೋದಾರ್ಢ್ಯಕ್ಕೆ ಮೆಚ್ಚಿ ಆಕ್ಷಣದಲ್ಲಿಯೇ ದಮಯಂತಿಯನ್ನು ಕುರಿತು—ಎಲೌ ಮಂಗಳಾಂಗಿ, ನಾನೇ ಆ ನಳನು, ಎಂದು ಹೇಳಲು ಆಕೆಯು ನಾಚಿಕೆಯಿಂದ ತಲೆಯನ್ನು ಬಗ್ಗಿಸಿ ಆತನಂ ಕುರಿತು ಮತ್ತಿಂತೆಂದಳು ॥೪೩॥

ಟಿಪ್ಪಣಿ:— (೧) (ದೃ) ದಿಡ, (೨) ಕರುಣಾವೇಲತೆ- ಕರುಣಲತೆ (ಅವ. ಪೂರ್ವ. ಕ) ॥೪೩॥

ಮೂ॥ ನಾಕನಿಳಯರುಕುಟಿಲವಿದ್ಯರ।ನೇಕಮಾಯಾವಿದರುಲಳೆಯೊಳ್। ಪ್ರಾಕೃತರುನಾವ್‌ನಿಮ್ಮನಂಬುವಪರಿಯದೆಂತೆನುತ॥ಸಾಕು
ಮನನಂಬುವರೆಹೃದಯವ। ಜೋಕೆಯಲಿಕುರುಹೆನಗೆತೋರೆನ।
ಲಾಕಮಲಲೋಚನೆಗೆನುಡಿದನುನೃಪನಿದರ್ಶನವ ॥೪೪॥

ಟೀಕೆ:— ನಾಕನಿಳಯರು-ದೇವತೆಗಳು, (೧)ಕುಟಿಲವಿದ್ಯರ್-ವಂಚಕರು, ಅನೇಕ-ನಾನಾವಿಧವಾದ, ಮಾಯಾವಿದರ್-ಮೋಸವನ್ನು ತಿಳಿದವರು, ಇಳೆಯೊಳ್-ಭೂಲೋಕದಲ್ಲಿ, ನಾವ್-ನಾವು, ಪ್ರಾಕೃತರು-ಮನುಷ್ಯರು, ನಿಮ್ಮ-ನಿಮ್ಮನ್ನು, ನಂಬುವ, ಪರಿ-ಬಗೆಯು ಅದು, ಎಂತು-ಹೇಗೆ, ಎನುತ-ಎಂಬದಾಗಿ ಹೇಳುತ್ತಾ, ಸಾಕು-ಅದು

ಹಾಗಿರಲಿ, ಮನನಂಬುವರೆ ಮನಸ್ಸಿಗೆ ನಂಬುಗೆ ಹುಟ್ಟಲು, ಹೃದಯದ-ನನ್ನ ಮನಸ್ಸಿಗೆ, ಜೋಕೆಯಲಿ-ಬರುವಹಾಗೆ, ಎನಗೆ-ನನಗೆ, ಕುರುಹ-ಗುರುತನ್ನು, ತೋರು-ತೋರಿಸು, ಎನಲ್-ಎಂಬದಾಗಿ ಕೇಳಲು, ನೃಪ-ದೊರೆಯು, (೨) ಆ ಕಮಲ ಲೋಚನೆಗೆ-ದಮಯಂತಿಗೆ ನಿದರ್ಶನವ - ದೃಷ್ಟಾಂತವನ್ನು, (ಗುರುತನ್ನು) ನುಡಿದನು- ಹೇಳಿದನು ||೪೪||

ತಾತ್ಪರ್ಯ:— ದೇವತೆಗಳು ಬಹು ಕುಟಿಲ ವಿದ್ಯೆಯುಳ್ಳವರು, ಮೋಸಗಾರರು, ಮಾಯಾವಿಗಳು, ಈ ಲೋಕದಲ್ಲಿ ಅರಿಯದ ಸಾಮಾನ್ಯ ಮನುಷ್ಯರಾದ ನಾವು ಹೇಗೆ ನಿಮ್ಮನ್ನು ನಂಬುವುದು ? ಅದಿರಲಿ ನೀನೇ ನಳನೆಂಬುದು ನನ್ನ ಮನಸ್ಸಿಗೆ ದೃಢಪಡುವುದಕ್ಕೆ ಗುರುತೇನಾದರೂ ಇದ್ದರೆ ತೋರಿಸಿಕೊಡು. ಅದರಿಂದ ನಾನು ನಂಬುವೆನು ಎಂದು ಕೇಳಿದಳು ||೪೪||

ಟಿಪ್ಪಣಿ:—(೧) ಕುಟಿಲವಾದ ವಿದ್ಯವುಳ್ಳವರು-ಕುಟಿಲವಿದ್ಯರ್ (ಬ. ವ್ರೀ) (೨) ಕಮಲ-ತಾವರೆಯಂತೆ, ಲೋಚನೆ - ಕಣ್ಣುಳ್ಳವಳು, (ಅವ) (ಬ. ವ್ರೀ) ಅವಳು ಕಮಲಲೋಚನೆ - ಆ ಕಮಲಲೋಚನೆ, (ಗಮಕ) ||೪೪||

ಮೂ||ವನಜಮುಖಿನಿನ್ನಂತರಂಗದ|ಮನವನೋಡುವಬಗೆಯೊಳಾನಿಂ
ದಿನಲಿಯನಿಮಿಷನೆಂದುಪೇಳಿದೆಯಿದರತಪ್ಪೇನು||ಮನದಸಂಶಯ
ವೇನುಹಂಸೆಯುನಿನಗೆಕಳುಹಿದೆರಾಯಭಾರದಿ| ವನಿತೆನೀನಿದತಿಳಿ
ದುನಂಬುವುದೆನ್ನನೀನೆಂದ ||೪೫||

ಟೀಕೆ:— (೧) ವನಜಮುಖಿ - ದಮಯಂತಿಯೆ, ನಿನ್ನ, ಅಂತರಂಗದ-ರಹಸ್ಯವಾದ, ಮನವ - ಅಭಿಪ್ರಾಯವನ್ನು, ನೋಡುವಬಗೆಯೊಳ್-ನೋಡಬೇಕೆಂಬ ಮನಸ್ಸಿನಿಂದ, ಇಂದಿನಲಿ-ಈಗ, (೨)ಅನಿಮಿಷನೆಂದು-ತಾನು ದೇವತೆಯೆಂದು, ಪೇಳಿದೆ-ಹೇಳಿದೆನು, ಇದರತಪ್ಪೇನು, ಇದರಿಂದ ಬಾಧಕವೇನು ? ಮನದ-ಮನಸ್ಸಿನ, ಸಂಶಯವೇ ಸಂದೇಹವೇನು, ವನಿತೆ-ಎಲೌಮಾನಿನಿ, ನಿನಗೆ-ನಿನ್ನ ಸಮೀಪಕ್ಕೆ, ರಾಯಭಾರದಿ-ಮಾಧ್ಯಸ್ಥಿಕ್ಕಾಗಿ, ಹಂಸೆಯ-ಹಂಸಪಕ್ಷಿಯನ್ನು, ಕಳುಹಿದೆ-ಕಳುಹಿಸಿದ್ದೆನು, ಇದ-ಈ ಗುರುತನ್ನು, ತಿಳಿದು, ಎನ್ನ-ನನ್ನನ್ನು, ನೀಂ-ನೀನು, ನಂಬುವುದು-ನಂಬುವಳಾಗು, ಎಂದ ||೪೫||

ತಾತ್ಪರ್ಯ:— ಅದಕ್ಕೆ ನಳನು ಎಲೌ ಸುಂದರಿ ! ನಿನ್ನ ಮರ್ಮ ವನ್ನು ಪರೀಕ್ಷಿಸಬೇಕೆಂದು ನಾನು ದೇವತಾಪುರುಷನೆಂದು ಹೇಳಿದೆನಲ್ಲದೆ ಬೇರೇನೂ ಇಲ್ಲ. ಆದರೆ ತಪ್ಪೇನು ? ನೀನು ಹಾಗೆ ಪರೀಕ್ಷಿಸುವ ಪಕ್ಷದಲ್ಲಿ ನಿನಗೆ ತಕ್ಕ ದೃಷ್ಟಾಂತದಿಂದ ನನ್ನ ನಿಜ ಸ್ಥಿತಿಯಂ ತಿಳಿಯಪಡಿಸುವೆನು, ಸಂದೇಹವನ್ನು ಬಿಡು, ನಿನ್ನಲ್ಲಿ ರಾಯಭಾರ ಮಾಡುವುದಕ್ಕಾಗಿ ಒಂದು ಹಂಸವನ್ನು ನಾನು ನಿನ್ನ ಬಳಿಗೆ ಕಳುಹಿಸಿದ್ದೆನಲ್ಲವೆ ! ಈ ಗುರುತನ್ನಾದರೂ ತಿಳಿದು ನನ್ನನ್ನು ನಂಬು, ಎಂದು ಹೇಳಿದನು॥

ಟಿಪ್ಪಣಿ: — (೧) ವನ-ನೀರಿನಲ್ಲಿ, ಜ-ಹುಟ್ಟಿದುದು (ಕಮಲ.) ಅದರಂತೆ ಮುಖವುಳ್ಳವಳು (ಅವ) (ಬ. ವ್ರೀ. ಸ) (೨) ನಿಮಿಷವಿಲ್ಲದವನು-ಅನಿಮಿಷನು (ನಙ್. ಬ. ವ್ರೀ) ನಿಮಿಷ-ರಪ್ಪೆ, ಅದಿಲ್ಲದವನು, (ಅವ) ॥೪೫॥

ಮೂ॥ ನಳನೆನಲುತನುಪುಳಕಜಲದಲಿ । ಮುಳುಗಿಹೊಂಪುಳಿಯಾಗಿತ
ನ್ನಯ। ಕೆಳದಿಯರಮರೆಗೊಂಡುಹರುಷದಹೃದಯಭೀತಿಯಲಿ॥
ತೊಲಗಿದಳುನೃಪನಿತ್ತಪುರವನು। ಕಳೆದುಬಂದನುಮನದವಿರಹದಿ।
ಬಳಲುತಿಹದೇವೇಂದ್ರನೆಡೆಗೈತಂದನೊಲವಿನಲಿ ॥೪೬॥

ಟೀಕೆ:—ನಳಂ-ನಳನು, ಎನಲು-ಈರೀತಿಯಾಗಿ ಹೇಳಲು, ತನು-ದೇಹವು, ಪುಳಕಜಲದಿ-ರೋಮಾಂಚದಿಂದುಂಟಾದಜಲದಲ್ಲಿ ಮುಳುಗಿ-ಸ್ನಾನಮಾಡಿ, ಹೊಂಪುಳಿಯಾಗಿ-ಹರ್ಷಗೊಂಡು, ಕೆಳದಿಯರ-ಸಖಿಯರನ್ನು, ಮರೆಗೊಂಡು-ಮರೆಮಾಡಿಕೊಂಡು, ಹರುಷದ – ಸಂತೋಷವುಳ್ಳ, ಹೃದಯಭೀತಿಯಲಿ – ಮನದಂಜಿಕೆಯಿಂದ, ತೊಲಗಿದಳು-ಹೊರಟು ಹೋದಳು (೧) ನೃಪಂ-ದೊರೆಯು, ಇತ್ತ – ಈಕಡೆ, ಪುರವನು--ವಿದರ್ಭಪುರವನ್ನು, ಕಳೆದು-ಬಿಟ್ಟು, ಬಂದನು – ಹೊರಟನು, ಮನದ-ಮನಸ್ಸಿನ, ವಿರಹದಿ – ವಿಯೋಗವ್ಯಥೆಯಿಂದ, ಬಳಲುತಿಹ-ಆಯಾಸ ಪಡುತ್ತಿರುವ, (೨) ದೇವೇಂದ್ರನೆಡೆಗೆ-ಇಂದ್ರನಿದ್ದಕಡೆಗೆ ಒಲವಿನಲಿ-ಪ್ರೀತಿಯಿಂದ, ಐತಂದಂ-ಬಂದನು ॥೪೬॥

ತಾ:— ನಳನು ಹೀಗೆ ನಿದರ್ಶನದಮೂಲಕವಾಗಿ ತಿಳಿಯ ಪಡಿಸಿದ ಕೂಡಲೆ ಆತನೇ ನಳನೆಂದು ನಿಷ್ಕರ್ಷಿಸಿ, ಆನಂದ ಸಮುದ್ರದಲ್ಲಿ ಮುಳುಗಿ, ರೋಮಾಂಚನವನ್ನು ಹೊಂದಿ, ನಾಚಿ, ಸಖಿಯರನ್ನು ಮರೆಮಾಡಿಕೊಂಡು, ಪ್ರಾಣಕಾಂತನ ದರ್ಶನವಾದುದೆಂಬ ಸಂತೋಷದಿಂ

ದಲೂ, ಆತನೊಡನೆ ಬಗೆಬಗೆಯಾಗಿ ಹೀಯಾಳಿಸಿ ಮಾತನಾಡಿದುದಕ್ಕಾದ ಹೆದರಿಕೆಯಿಂದಲೂ, ಅಂತಃಪುರವನ್ನು ಹೊಕ್ಕಳು, ಕೂಡಲೆ ನಳನು ಅಲ್ಲಿಂದ ಹೊರಟು, ವಿರಹಾಕ್ರಾಂತನಾಗಿ ಖೇದವನ್ನು ಹೊಂದಿ ಬಳಲುತ್ತಿರುವ ಇಂದ್ರನ ಬಳಿಗೆ ಬಂದನು ||೪೬||

ಟಿಪ್ಪಣಿ:— (೧) ನೃ–ಮನುಷ್ಯರನ್ನು, ಪ – ರಕ್ಷಿಸತಕ್ಕವನು, (ಉಪಪದ) (೨) ದೇವ–ದೇವತೆಗಳಿಗೆ, ಇಂದ್ರ–ಒಡೆಯನು (ಅವ) ದೇವ + ಇಂದ್ರ, ದೇವೇಂದ್ರ (ಗುಣ ಸಂಧಿ) ||೪೬||

ಮೂ|| ಬಂದುಭಯಭಕ್ತಿಯಲಿನಳನೃಪ|ನಿಂದ್ರಮಾರುತಯಮವರು
ಣರಿಗೆ|ವಂದಿಸುತದಮಯಂತಿಪೇಳಿದಮಾತವಿವರಿಸಲು || ಇಂದುನಿ
ನ್ನಲಿಕುಟಿಲವಿಲ್ಲರ|ವಿಂದವದನೆಯರಿಂದಕೇಳಿದೆ| ವೆಂದುಸಂತೈಸಿ
ದರುಭಯಗೊಂಡಿಹನೃಪಾಲಕನ ||೪೭||

ಟೀಕೆ:— ನಳನೃಪಂ – ನಳರಾಜನು, ಬಂದು, ಭಯಭಕ್ತಿಯಲಿ – ಭಕ್ತಿ ಶ್ರದ್ಧೆಗಳಿಂದ, ಇಂದ್ರಮಾರುತಯಮವರುಣರಿಗೆ, ವಂದಿಸುತ–ನಮಸ್ಕರಿಸಿ, ದಮಯಂತಿ, ಪೇಳಿದ–ಹೇಳಿದ, ಮಾತ–ಮಾತನ್ನು ವಿವರಿಸಲು – ವಿಸ್ತಾರವಾಗಿ ತಿಳಿಸಲು, ಇಂದು – ಈಗ, ನಿನ್ನಲಿ– ನಿನ್ನಲ್ಲಿ, ಕುಟಿಲವಿಲ್ಲ–ಕೃತ್ರಿಮವಿಲ್ಲ, (೧) ಅರವಿಂದವದನೆಯರಿಂದ – ಕಮಲಮುಖಿಯರಿಂದ, ಕೇಳಿದೆವು–ತಿಳಿದುಕೊಂಡೆವು, ಎಂದು– ಎಂಬದಾಗಿ, (೨) ಭಯಗೊಂಡಿಹ – ಭಯಪಟ್ಟಿರುವ, ನೃಪಾಲಕನ– ದೊರೆಯನ್ನು, ಸಂತೈಸಿದರು–ಸಮಾಧಾನ ಪಡಿಸಿದರು ||೪೭||

ತಾತ್ಪರ್ಯ:—ಬಂದು ಭಯಭಕ್ತಿಗಳಿಂದ ನಾಲ್ಕುಮಂದಿ ದಿಕ್ಪಾಲರಿಗೂ ನಮಸ್ಕರಿಸಿ ದಮಯಂತಿಯಾಡಿದ ಮಾತನ್ನು ವಿಸ್ತಾರವಾಗಿ ತಿಳಿಸಿ, ತನ್ನನ್ನು ವಂಚಕನೆಂದು ತಿಳಿವರೋ ಏನೋ ಎಂಬ ಭಯದಿಂದ ವಿಹ್ವಲನಾಗಿ ನಿಂತಿರಲು, ದೊರೆಯನ್ನು ನೋಡಿ ಅಯ್ಯಾ ನಾವು ಮೊದಲೆ ಕಳುಹಿಸಿದ್ದ ಅಪ್ಸರಸ್ತ್ರೀಯರಿಂದ ದಮಯಂತಿಯಾಶೆಯವನ್ನು ತಿಳಿದೆವು. ನಿನ್ನಲ್ಲಿ ಕೌಟಿಲ್ಯವಿಲ್ಲ, ನೀನು ಅಸಮಾಧಾನ ಪಡಬೇಡ! ಎಂದು ಸಮಾಧಾನ ಪಡಿಸಿದರು ||೪೭||

ಟಿಪ್ಪಣಿ:— ಅರ–ದಳೆಗಳನ್ನು, ವಿಂದ–ಹೊಂದಿರುವುದು (ಕಮಲ) (ಅವ) ಅರವಿಂದದಂತೆ ವದನವುಳ್ಳವರು – ಅರವಿಂದವದನೆಯರು; (ಬ.ವ್ರೀ) (೨) ಭಯಮಂಕೊಂಡಿಹ–ಭಯಗೊಂಡಿಹ (ಕ್ರಿ.ಸ) ||೪೭||

ಮೂ॥ನಳಿನಮುಖಿಯರಕಪಟಚಿತ್ತವ।ತಿಳಿಯಲಾರಿಗೆಸಾಧ್ಯಕೇಳೈ।ನ
ಳನೃಪತಿನಮಗಾಗಿಬಳಲಿದೆಯೆನುತಲುಪಚರಿಸಿ॥ ಒಲಿದುಭೂಷಣ
ವಿತ್ತುಕಳುಹಿದ।ರಿಳೆಯವಲ್ಲಭಗಿತ್ತತಾವ್ತ।ಮ್ಮೊಳಗೆಯಾಲೋಚಿ
ಸಿದರಾಯುಮರೇಂದ್ರಮಾರುತರು ॥೪೮॥

ಟೀಕೆ:—ನಳಿನಮುಖಿಯರ-ಸ್ತ್ರೀಯರ, ಕಪಟಚಿತ್ತವ-ಕುಟಿಲವಾದಮನಸ್ಸನ್ನು,ತಿಳಿಯಲ್-ತಿಳಿಯುವುದಕ್ಕೆ, ಆರಿಗೆ-ಯಾರಿಗೆ, ಸಾಧ್ಯ-ಶಕ್ಯವು,ನಳನೃಪತಿ-ನಳರಾಜನೇ,ಕೇಳೈ-ಕೇಳೈಯಾ,ನಮಗಾಗಿ-ನಮ್ಮಕಾರ್ಯಕ್ಕಾಗಿ, ಬಳಲಿದೆ-ಶ್ರಮಪಟ್ಟದ್ದೀಯೆ, ಎನುತಲಿ-ಎಂಬದಾಗಿ, ಉಪಚರಿಸಿ-ಉಪಚಾರಮಾಡಿ, ಇಳೆಯ-ಭೂಮಿಯ, ವಲ್ಲಭಗೆ-ಪತಿಯಾದನಳನಿಗೆ, (೧) ಭೂಷಣವಿತ್ತು-ಮರ್ರ್ಯಾದೆಮಾಡಿ, ಕಳುಹಿದರ್ - ಕಳುಹಿಸಿಬಿಟ್ಟರು (೨) ಇತ್ತಲ್ - ಈಕಡೆ, ಆಯುಮರೇಂದ್ರಮಾರುತರು-ಇಂದ್ರವಾಯುಗಳು, ತಮ್ಮೊಳಗೆ-ತಮ್ಮಲ್ಲಿ, ತಾವ್-ತಾವು, ಆಲೋಚಿಸಿದರ್-ಆಲೋಚನೆಮಾಡುತ್ತಿದ್ದರು ॥೪೮॥

ತಾತ್ಪರ್ಯ:—ಅಯ್ಯಾ ನಳನೇ ಸ್ತ್ರೀಯರ ಚಿತ್ತವೃತ್ತಿಯು ಯಾರಿಗೆತಾನೇ ತಿಳಿಯಲು ಸಾಧ್ಯವಾದೀತು ? ನಮಗಾಗಿ ನೀನು ಬಹಳ ಶ್ರಮ ಪಟ್ಟದ್ದೀಯೆ ? ಇನ್ನು ಕಷ್ಟಪಡಬೇಡ ಹೊರಡು, ಎಂದು ಬಹಳವಾಗಿ ಉಪಚರಿಸಿ ವಸ್ತ್ರಾಭರಣಾದಿಗಳನ್ನು ಕೊಟ್ಟು ಮರ್ರ್ಯಾದೆಮಾಡಿ ಕಳುಹಿಸಿ ಇಂದ್ರನೂ ವಾಯುವೂ ತಮ್ಮೊಳಗೆತಾವೇ ಆಲೋಚಿಸಿದರು. ॥೪೮॥

ಟಿಪ್ಪಣಿ:— (೧) ಭೂಷಣವಂ ಇತ್ತು-ಭೂಷಣವಿತ್ತು(ಕ್ರಿ. ಸ) (೨) ಇದುಸ್ಥಾನವಾಚಕಾವ್ಯಯ, ಸಪ್ತಮೀವಿಭಕ್ತಿ ಪ್ರತ್ಯಯಕ್ಕೆ ,ಅಲ್, ಎಂಬುದು ಆದೇಶವಾಗಿದೆ ॥೪೮॥

ಮೂ॥ ಲಲನೆಯೊಲಿವುದಕಿನ್ನು ಹದನಿದು। ಹಲವುಮಾತೇನೆಂದುನಾಲ್ವ
ರು। ನಳನರೂಪನುತಾಳ್ದರಿತ್ತಲುಧರಣಿವಲ್ಲಭರು॥ಒಲಿದುಬರುತಿರೆ
ಸ್ವರ್ಗಮರ್ತ್ಯಾವಳಿಯಸುಜನರುಸಿದ್ಧಕಿನ್ನರ। ರುಲಿಯೆಗುಹ್ಯಕ
ಗರುಡಗಂಧರ್ವಾಮರೇಂದ್ರರಲಿ ॥೪೯॥

ಹಲವುಮಾತು-ಅನೇಕಮಾತುಗಳು, ಎನು-ಯಾತಕ್ಕೆ ? ಲಲನೆ-ದಮಯಂತಿಯು, ಒಲಿವುದಕೆ-ಮೆಚ್ಚುವುದಕ್ಕೆ, ಇನ್ನು-ಇನ್ನು ಮೇಲೆ, ಇದು-ಇದು, ಹದನು-ರೀತಿಯು, ಎಂದು-ಎಂಬದಾಗಿ,ನಾಲ್ವರು - ನಾ

ಲ್ಕುಮಂದಿಯೂ, ನಳನ–ನಳರಾಜನ, (೧) ರೂಪನು– ಆಕಾರವನ್ನು, ತಾಳ್ದರ್–ಹೊಂದಿದರು, ಇತ್ತಲು–ಈಕಡೆಯಲ್ಲಿ, ಧರಣಿವಲ್ಲಭರು– ರಾಜರು, ಸ್ವರ್ಗ–ಸುರಲೋಕದ (೨) ಮರ್ತ್ಯಾವಳಿಯು–ಮನುಷ್ಯಸಮೂಹದ, ಸುಜನರು–ಸಜ್ಜನರು, ಸಿದ್ಧಕಿನ್ನರರು – ಸಿದ್ಧರೂಕಿನ್ನರರೂ, ಗುಹ್ಯಕ–ಗುಹ್ಯಕರೂ, ಗರುಡ–ಗರುಡರೂ, ಗಂಧರ್ವ–ಗಂಧರ್ವರೂ, ಅಮರೇಂದ್ರರಲಿ–ದೇವಶ್ರೇಷ್ಠರಲ್ಲಿ, (ಎಲ್ಲರೂ) ಒಲಿದು–ಪ್ರೀತಿಸಿ, ಬರುತಿರೆ–ಬರುತಿರಲು, ||೪೯||

ತಾತ್ಪರ್ಯ:— ನಾವು ಸುಮ್ಮನೆ ಮಾತನಾಡುವುದರಿಂದ ಪ್ರಯೋಜನವೇನು ? ದಮಯಂತಿಯು ನಮ್ಮನ್ನು ಮೆಚ್ಚುವಂತೆ ಮಾಡಿಕೊಳ್ಳುವುದಕ್ಕೆ ಬೇರೆಉಪಾಯವೇ ತೋರುವುದಿಲ್ಲ, ಅದರಿಂದ ನಾವೆಲ್ಲರೂ ನಳನರೂಪವನ್ನು ಧರಿಸಿಕೊಳ್ಳೋಣ, ಇದರಿಂದ ನಮ್ಮ ಕಾರ್ಯವು ಕೈಕೂಡುವುದು, ಎಂದಾಲೋಚಿಸಿ ನಾಲ್ಕುಮಂದಿಯೂ ನಳನ ವೇಷವನ್ನು ಧರಿಸಿದರು, ಈ ಕಡೆಯಲ್ಲಿ ಸ್ವಯಂವರಕ್ಕಾಗಿ ಕ್ಷತ್ರಿಯರೂ, ಸಿದ್ಧ, ಕಿನ್ನರ, ಗುಹ್ಯಕ, ಗರುಡ, ಗಂಧರ್ವ, ಮೊದಲಾದ ದೇವತೆಗಳು ಬಂದು ಸೇರುತ್ತಿದ್ದರು ||೪೯||

ಟೀಕೆ:— (೧) (ದ್ಬ) ರೂಪು (೨) ಮರ್ತ್ಯ–ಸಾವುಳ್ಳವರು (ಅವ) ಮರ್ತ್ಯರ ಆವಳಿ–ಮರ್ತ್ಯಾವಳಿ (ಷ.ತ) ||೪೯||

ಮೂ|| ನೆರೆದರಗಣಿತದರಸುಗಳುಕರಿ|ತುರಗರಥಪಾಯ್ದಳಿವುಸಂದಣಿ|
ಮೆರೆವಶಂಖಮೃದಂಗತಂಬಟಭೇರಿನಿಸ್ಸಾಳ || ಉರುಬಿತಲ್ಲಿವಿದರ್ಭ
ಪುರಪತಿ| ಧರಿಸಲಾಪನೆಹರಮಹಾದೇ|ವರಸಬಣ್ಣಿಸಲರಿಯೆನೆರೆದ
ಮಹಾಮಹೀಸುರರ ||೫೦||

ಟೀಕೆ:—.ಅರಸ–ದೊರೆಯೇ ! ಲೆಕ್ಕವಿಲ್ಲದಷ್ಟು, ಅರಸುಗಳು–ದೊರೆಗಳು, ನೆರೆದರು–ಸೇರಿದರು, ಅಲ್ಲಿ–ಸ್ವಯಂವರಮಂಟಪದಲ್ಲಿ, ತುರಗ–ಕುದುರೆ, ರಥ–ತೇರು, ಪಾಯ್ದಳಿವು–ಕಾಲಾಳುಗಳು (ಇವುಗಳು ಸಂದಣಿ–ಗುಂಪು, ಮೆರೆವ–ಪ್ರಕಾಶಿಸುವ (೨) ಶಂಖ–ಶಂಖವೂ, ಮೃದಂಗ–ಮದ್ದಳೆಯೂ, ತಂಬಟಿ–ತಬಟೆಯೂ, ಭೇರಿ–ನಗಾರಿಯೂ, ನಿಸ್ಸಾಳ–ಕನಕತಬಟೆಯೂ, ಉರುಬಿತು– ಶಬ್ದಮಾಡಿತು, ವಿದರ್ಭಪುರಪತಿ–ಭೀಮರಾಜನು, ಧರಿಸಲಾಪನೇ–ತಡೆಯಬಲ್ಲನೇ ! ನೆರೆದ– ಸೇರಿರುವ, ಮಹಾಮಹೀಸುರರ– ಅನೇಕಬ್ರಾಹ್ಮಣರನ್ನು, ಹರಹರಮಹಾ

ದೇವಾ – ಈಶ್ವರನೇ ! ಅವರ – ಆಜನರನ್ನು, ಬಣ್ಣಿಸಲರಿಯೆ–ವರ್ಣಿಸಲಾರೆನು. ॥೫೦॥

ತಾತ್ಪರ್ಯ:—ಎಲೈ ದೊರೆಯೇ ಕೇಳು, ಆ ವಿದರ್ಭಪುರದಲ್ಲಿ ಅಸಂಖ್ಯಾತರಾದರಾಜರೂ ಅವರುಚತುರಂಗಸೈನ್ಯವೂ ಬಂದುಗುಂಪುಸೇರಿತು, ಭೇರಿ, ಶಂಖ, ಮೃದಂಗ, ತಬಟೆ, ಕಹಳೆ, ನಗಾರಿ, ಮೊದಲಾದ ವಾದ್ಯಗಳುಭೋರ್ಗರೆಯುತ್ತಿದ್ದುವು, ಇದೆಲ್ಲವನ್ನೂ, ತಡೆಯಲುಭೀಮರಾಜನಿಗೆ ಸಾಧ್ಯವೇ ! ಶಿವಶಿವಾ ಆಮಹೋತ್ಸವವನ್ನು ನೋಡುವುದಕ್ಕೆ ಬಂದಿರುವ ಬ್ರಾಹ್ಮಣರನ್ನು ವರ್ಣಿಸಲು ನನಗೆಶಕ್ತಿಸಾಲದು ॥೫೦॥

ಟಿಪ್ಪಣಿ:— (೧) ಗಣಿತವಲ್ಲದುದು–ಅಗಣಿತ (ನಞ್, ತ) (೨ (ದ್ಭ) ಸಂಕು ॥೫೦॥

ಮೂ॥ ಅವರವರಕರೆಕರೆದುವಿನಯುದೊ। ಳವರವರಮರಿಯಾದೆಮೇರೆ
ಯೊ।ಳವರವರಸತ್ಕರಸಿಕುಳ್ಳಿರಿಸಿದನುಭೀಮನೃಪ ॥ ಅವರವರಿಗು
ಚಿತೋಪಚಾರದೊ। ಳವರವರಮನ್ನಿಸುತಲಿರ್ದನು।ಭುವನಪತಿಗ
ಳನೇಕರನುಸಭೆಯೊಳಗೆಕೇಳೆಂದ ॥೫೧॥

ಟೀಕೆ:—ಭೀಮನೃಪ-ಭೀಮರಾಜನು, ಅವರವರ-ಆಯಾಜನರನ್ನು, ವಿನಯುದೊಳು–ಭಕ್ತಿಯಿಂದ, ಕರೆಕರೆದು–ಬರಮಾಡಿ, ಅವರವರ, ಮರಿಯಾದೆಮೇರೆಯೊಳ್–ಮರ್ಯಾದೆಗೆತಕ್ಕಂತೆ, ಅವರವರ, ಸತ್ಕರಿಸಿ–ಉಪಚಾರಮಾಡಿ, ಕುಳ್ಳಿರಿಸಿದನು–ಕೂರಿಸಿದನು, ಸಭೆಯೊಳಗೆ – ಸಭೆಯುಲ್ಲಿ, ಭುವನಪತಿಗಳನೇಕರನು–ಬಹುಮಂದಿರಾಜರನ್ನು (೨) ಅವರವರ, ಮನ್ನಿಸುತಲಿ–ಮರ್ಯಾದೆಮಾಡುತ್ತಾ, ಇರ್ದನು–ಇದ್ದನು, ಕೇಳು, ಎಂದ–ಎಂಬದಾಗಿಹೇಳಿದನು ॥೫೧॥

ತಾತ್ಪರ್ಯ:—ಭೀಮರಾಜನುಹೀಗೆಬಂದುಸೇರಿದ ಜನರೆಲ್ಲರನ್ನೂ, ನೋಡಿ ಬಹಳ ಮರ್ಯಾದೆಯಿಂದ ಕರೆತಂದು ಅವರವರ ಯೋಗ್ಯತೆಗೆ ತಕ್ಕಂತೆ ಉಪಚರಿಸಿ ಅವರವರಿಗೆ ಉಚಿತವಾದ ಸ್ಥಳಗಳಲ್ಲಿ ಕುಳ್ಳಿರಿಸುತ್ತಿದ್ದನು ॥೫೧॥

ಟಿಪ್ಪಣಿ:— (೧) ಭೀಮನೆಂಬನೃಪ-ಭೀಮನೃಪ (ಸಂ.ಪೂರ್ವ. ಕ) (೨) ವೀಪ್ಸಾರ್ಥದಲ್ಲಿ ಅವರು ಎಂಬಶಬ್ದಕ್ಕೆ ದ್ವಿರುಕ್ತಿ (ಎರಡುಸಾರಿಪ್ರಯೋಗವು) ಬಂದಿದೆ ॥೫೧॥

ಮೂ॥ ಒಂದುಕಡೆಯುಲಿತಾಳಮದ್ದಳೆ।ಯೊಂದುಕಡೆಯುಲಿಸರಸನೃತ್ಯ

ಗಳೊಂದುಕಡೆಯಲಿಸಾರತರಸಂಗೀತಸಾಹಿತ್ಯ ॥ ಒಂದುಕಡೆಯು
ಲಿಗದ್ಯಪದ್ಯಗ। ಳೊಂದುಕಡೆಯಲಿತರ್ಕಶಾಸ್ತ್ರಗ। ಳೊಂದುಕಡೆ
ಯಲಿಹಾಸ್ಯದಿಂದಿರುತಿರ್ದುದಾಸ್ಥಾನ ॥೩೦॥

ಟೀಕೆ:—ಒಂದುಕಡೆಯುಲಿ-ಒಂದುಸ್ಥಳದಲ್ಲಿ, ತಾಳಮದ್ದಳೆ-ತಾಳಮದ್ದಲೆಗಳನ್ನು ಬಾರಿಸೋಣವೂ. ಒಂದುಕಡೆಯಲಿ- ಮತ್ತೊಂದು ಪ್ರದೇಶದಲ್ಲಿ, (೧) ಸರಸನೃತ್ಯಗಳ್-ರಸವಾದನಾಟ್ಯವೂ, (೨) ಒಂದುಕಡೆಯುಲಿ, ಸಾರತರ-ಇಂಪಾದ, ಸಂಗೀತಸಾಹಿತ್ಯ- ಸಂಗೀತಸಾಹಿತ್ಯಗಳೂ, ಒಂದುಕಡೆಯುಲಿ, ಗದ್ಯಪದ್ಯಗಳ್-ವಚನಕಾವ್ಯ ಪದ್ಯಕಾವ್ಯಗಳನ್ನು ಹೇಳುವಿಕೆಯೂ, ಒಂದುಕಡೆಯುಲಿ, ತರ್ಕಶಾಸ್ತ್ರಗಳ್-ವಾಕ್ಯಾರ್ಥವೂ, ಒಂದುಕಡೆಯುಲಿ, ಹಾಸ್ಯದಿಂದ-ಹಾಸ್ಯಕಾರರಿಂದಲೂ ಆಸ್ಥಾನ-ರಾಜಸಭೆಯು, ಇರ್ದುದು-ಪ್ರಕಾಶಿಸುತ್ತಿತ್ತು ॥೩೦॥

ತಾತ್ಪರ್ಯ:—ಆ ಸಭೆಯ ಒಂದು ಭಾಗದಲ್ಲಿ ತಾಳ ಮೃದಂಗ ಮೊದಲಾದ ವಾದ್ಯಗಳನ್ನು ಬಾರಿಸುತ್ತಿದ್ದರು, ಭರತಶಾಸ್ತ್ರದಲ್ಲಿ ನಿಪುಣೆಯರಾದವರು ನವರಸಗಳನ್ನಭಿನಯಿಸಿ ನಾಟ್ಯವಾಡುತ್ತಿದ್ದರು, ಸಂಗೀತಶಾಸ್ತ್ರ, ಸಾಹಿತ್ಯಗಳಲ್ಲಿ ಪಾರಂಗತರಾದವರು ತಮ್ಮ ವಿದ್ಯೆಯನ್ನು ಪ್ರಚಾರಮಾಡಿ ಹರ್ಷಗೊಳಿಸುತ್ತಿದ್ದರು, ಕವೀಶ್ವರ ರೊಂದುಕಡೆಯುಯಲ್ಲಿ ಕೆಲವರು ರಸಹಾಸ್ಯವನ್ನು ಮಾಡುತ್ತಿದ್ದರು, ಹೀಗೆಸಭೆಯು ಅಂಗಗಳೆಲ್ಲವೂ ಪೂರ್ಣವಾಗಿದ್ದುದರಿಂದ ಬಹು ರಮ್ಯವಾಗಿತ್ತು. ॥೩೦॥

ಟಿಪ್ಪಣಿ:—(೧) ರಸದಿಂದ ಕೂಡಿದುದು-ಸರಸ (ಸಹ. ಪೂರ್ವ. ಬ. ವ್ರೀ) ಸರಸವಾದ ನೃತ್ಯಗಳ್-ಸರಸನೃತ್ಯಗಳ್ (ವಿ. ಪೂರ್ವ. ಕ) (೨) ಒಂದಾದಕಡೆ-ಒಂದುಕಡೆ (ದ್ವಿಗು.) ॥೩೧॥

ಮೂ॥ಇತ್ತಲಾದಮಯಂತಿಗೆಣ್ಣೆಯ। ನೊತ್ತಿದರುಶೋಭಾನೆಗಳಪಾ।
ಡುತ್ತನಲಿದರುತಿರುಗುಮಿಗೆವಿವಿಧೋಪಚಾರದಲಿ ॥ ಉತ್ತಮಾಂಗ
ನೆಗಳವಡಿಸೆನಲಿ। ವೃತ್ತಸತಿಯರುಮಜ್ಜನದಮನೆ। ಗತ್ಯಧಿಕಹರು
ಷದಲಿದಮಯಂತಿಯನುಕರದೊಯ್ದು ॥೩೨॥

ಟೀಕೆ:—ಇತ್ತಲ್‌ಈಕಡೆ,ತಿರುಗು-ಪುನಃ, ವಿವಿಧೋಪಚಾರದಲಿ-ನಾನಾವಿಧವಾದಉಪಚಾರಗಳಿಂದ, ಸತಿಯರು-ಹೆಂಗಸರು, ಶೋಭಾನೆಗಳ-ಹಾಡುಗಳನ್ನು,ಪಾಡುತ್ತ-ಹೇಳುತ್ತ, ಎಣ್ಣೆಯನು,ಒತ್ತಿದರು-ಹಚ್ಚಿದರು, ನಲಿದರು-ಹರ್ಷಿಸಿದರು, (೧)ಉತ್ತಮಾಂಗನೆಗೆ- ಉತ್ತಮಸ್ತ್ರೀಯಾದ

ದಮಯಂತಿಗೆ, ಅಳವಡಿಸೆ-ಅಲಂಕರಿಸಲು, ನಲಿವುತ್ತ-ಕುಣಿಯುತ್ತಾ, (೨) ಅತ್ಯಧಿಕಹರುಷದಲಿ-ಬಹಳಸಂತೋಷದಿಂದ, ದಮಯಂತಿಯುನ್ನು, ಮಜ್ಜನದ - ಸ್ನಾನವಮಾಡುವ, ಮನೆಗೆ, ಕರೆದೊಯ್ದು - ಕರೆದುಕೊಂಡುಹೋಗಿ ॥೫೩॥

ತಾತ್ಪರ್ಯ:—ಅರಮನೆಯಲ್ಲಿ ದಮಯಂತಿಯು ಸಖಿಯರೆಲ್ಲರೂ ಬಹು ಸಂತೋಷದೊಡನೆ ಹಾಡುಗಳನ್ನು ಹೇಳಿ ದಮಯಂತಿಗೆ ಎಣ್ಣೆಯೊತ್ತಿ ಸ್ನಾನಗೃಹಕ್ಕೆ ಕರೆದುಕೊಂಡು ಹೋಗಿ ಮಂಗಳ ಮಜ್ಜನಕ್ಕಾಗಿ ಯತ್ನಿಸಿದರು ॥೫೩॥

ಟಿಪ್ಪಣಿ:—(೧) ಉತ್ತಮಳಾದ ಅಂಗನೆ-ಉತ್ತಮಾಂಗನೆ (ವಿ. ಪೂರ್ವ. ಕ) ಉತ್ತಮ + ಅಂಗನೆ-ಉತ್ತಮಾಂಗನೆ (ಸವರ್ಣ ದೀರ್ಘ ಸಂ) (೨) ಅತಿ + ಅಧಿಕ-ಅತ್ಯಧಿಕ (ಯಣ್) ಅತ್ಯಧಿಕವಾದ ಹರುಷ-ಹತ್ಯಧಿಕಹರುಷ (ವಿ. ಪೂರ್ವ. ಕ) ಹರ್ಷಕ್ಕೆ (ದ್ಭ) ಹರುಷ, ಹರಿಸ ॥೫೩॥

ಮೂ॥ ಚೆರಸಿದರುಪನ್ನೀರಹೊಂಗೊ । ಪ್ಪರಿಗೆಯಲಿವೊಗೆವೊಗೆದು
ನಾರಿಯ।ರೆರದರಂಗನೆಗಮಲಚಂದನಗಂಧಪರಿಮಳವ ॥ ತರುಣಿಯ
ರುಲೇಪಿಸಿದರರಸಿಗೆ।ವರದುಕೂಲಾಭರಣಗಳಶೃಂ।ಗರಿಸಿದರುದಮ
ಯಂತಿಯೊಪ್ಪಿದಳಧಿಕತೇಜದಲಿ ॥೫೪॥

ಟೀಕೆ:—(೧) ಹೊಂಗೊಪ್ಪರಿಗೆಯಲಿ-ಚಿನ್ನದಕೊಪ್ಪರಿಗೆಯ,ಲ್ಲಿ ಪನ್ನೀರ-ಪನ್ನೀರನ್ನು, ಚೆರಸಿದರು-ನೀರಿನಲ್ಲಿ ಸೇರಿಸಿದರು, ನಾರಿಯರ್-ಹೆಂಗಸರು, (೨) ವೊಗೆವೊದೆದು-ತುಂಬಿಕೊಂಡು, ಅಂಗನೆಗೆ- ದಮಯಂತಿಗೆ, ಎರೆದರ್-ಹಾಕಿದರು, ತರುಣಿಯರು-ಸ್ತ್ರೀಯರು, ಅಮಲ-ನಿರ್ಮಲವಾದ, ಚಂದನಗಂಧ-ಶ್ರೀಗಂಧವೊದಲಾದ, ಪರಿಮಳವ- ಸುವಾಸನಾದ್ರವ್ಯಗಳನ್ನು, ಅರಸಿಗೆ-ರಾಜಪುತ್ರಿಗೆ, ಲೇಪಿಸಿದರು- ಬಳಿದರು, ವರ-ಶ್ರೇಷ್ಠವಾದ, (೩) ದುಕೂಲ-ಪಟ್ಟೆಯಸೀರೆಯನ್ನೂ, ಆಭರಣಗಳ-ಒಡವೆಗಳನ್ನೂ, ಶೃಂಗರಿಸಿದರು-ಅಲಂಕಾರವಮಾಡಿದರು, ದಮಯಂತಿ, ಅಧಿಕತೇಜದಲಿ - ಬಹುಕಾಂತಿಯಿಂದ, ಒಪ್ಪಿದಳು - ಪ್ರಕಾಶಿಸಿದಳು. ॥೫೪॥

ತಾತ್ಪರ್ಯ:—ದೊಡ್ಡದಾದ ಚಿನ್ನದ ಕೊಪ್ಪರಿಗೆಯಲ್ಲಿ ನೀರನು ತೋಡಿ ಪನ್ನೀರನ್ನು ಚೆರಸಿ ಸಖಿಯರು ದಮಯಂತಿಗೆ ನೀರೆರೆದರು,

ಕೆಲವರು ಶ್ರೀ ಗಂಧವೇ ಮೊದಲಾದ ಪರಿಮಳ ವಸ್ತುಗಳಿಂದ ಅಂಗಲೇಪನ ಮಾಡಿದರು, ಕೆಲವರು ಪಟ್ಟವಸ್ತ್ರವನ್ನುಡಿಸಿದರು, ನವರತ್ನಾಭರಣಗಳಿಂದ ಕೆಲವರು ಅಲಂಕರಿಸಿದರು, ಇಂತಹ ದಿವ್ಯಾಲಂಕಾರದಿಂದ ಆಕೆಯ ಲಾವಣ್ಯವು ಬಹಳ ವೃದ್ಧಿಯಾಯ್ತು ॥೫೪॥

ಟಿಪ್ಪಣಿ:—ಹೊನ್ + ಕೊಪ್ಪರಿಗೆ-ಹೊಂಗೊಪ್ಪರಿಗೆ (ಕ. ವ್ಯಂ. ಸಂಧಿ) ಕಕಾರಕ್ಕೆ ಗಕಾರಾದೇಶ ಬಂತು. ಹೊನ್ನ ಕೊಪ್ಪರಿಗೆ - ಹೊಂಗೊಪ್ಪರಿಗೆ (ಷ. ತ. ಸ) (೨) ಆಧಿಕ್ಯಾರ್ಥದಲ್ಲಿ ದ್ವಿರುಕ್ತಿ (೩) (ದ್ಭ) ದುಗುಲ ॥೫೪॥

ಮೂ॥ ಮಡದಿಯರುಬಳಸಿದರುಸುತ್ತಲು|ಹಡಪಚಾಮರಗಿಂಡಿವ್ರೂಳಿ
ಗ। ದೊಡನಿರಲುಬಂದಳುಸಿತಾಬ್ಜಕೆಲಕ್ಷ್ಮಿಯೆಂದದಲಿ॥ ಎಡಬಲ
ದೊಳಿಸಿಕಂಚುಕಿಗಳು| ಗ್ಗಡದಪಾಯುವಧಾರಿನಲಿಮುಂ|ಗುಡಿಯ
ಸಖಿಯರಗಡಣದಲಿನಡೆತಂದಳಿಂದುಮುಖಿ ॥೫೫॥

ಟೀಕೆ:—ಸುತ್ತಲು, ಮಡದಿಯರು - ಹೆಂಗಸರು, ಬಳಸಿದರು-ಸೇರಿದರು, ಒಡನೆ-ಸಂಗಡ, ಹಡಪ-ಅಡಕೆಲೆಯಚೀಲ, (೧) ಚಾಮರ-ಚಾಮರ, ಗಿಂಡಿ-ನೀರಿನಪಾತ್ರೆ, ಮೊದಲಾದವುಗಳನ್ನು ಹಿಡಿದಿರುವ, ಊಳಿಗಂ-ಸೇವಕರು, ಇರೆ-ಇರಲು, ಸಿತಾಬ್ಜಕೆ- ಬಿಳಿಯಕಮಲಕ್ಕೆ, ಲಕ್ಷ್ಮಿಯೆಂದದಲಿ - ಲಕ್ಷ್ಮಿದೇವಿಯಹಾಗೆ ಬಂದಳು, ಇಂದುಮುಖಿ-ಚಂದ್ರನಂತೆ ಮುಖವುಳ್ಳ ದಮಯಂತಿಯು, ಎಡಬಲದೊಳಿಹ-ಉಭಯ ಪಾರ್ಶ್ವಗಳಲ್ಲಿರುವ (೩) ಉಗ್ಗಡದ-ಹೆಚ್ಚಾದ, ಪಾಯುವಧಾರಿನಲಿ-ಪಾದಾವಧಾನ, ಮೊದಲಾದ ಉಪಚಾರದಿಂದ, ಮುಂಗುಡಿಯ- ಮುಂದಿರುವ, ಸಖಿಯರ-ಗೆಳತಿಯರ, ಗಡಣದಲಿ - ಗುಂಪಿನಲ್ಲಿ, ನಡೆತಂದಳ್-ಬಂದಳು ॥೫೫॥

ತಾತ್ಪರ್ಯ,—ಆಕೆಯ ಪರಿವಾರದವರು ಸುತ್ತಲೂ, ತಾಂಬೂಲ, ಚಾಮರ, ಜಲಕಲಶ, ಮೊದಲಾದ ಉಪಚಾರ ಸಾಮಗ್ರಿಗಳನ್ನು ಹಿಡಿದು ನಿಂತಿರಲು, ಸ್ತ್ರೀಯರ ಮಧ್ಯದಲ್ಲಿ ಸೇರಿಬರುತ್ತಾ ಕಮಲವನ್ನು ಸೇರುವ ಲಕ್ಷ್ಮಿಯೋ ಎಂಬಂತೆ ಬರುತ್ತಿರಲು ಕೈವಾರಿಗಳು ಪಾಯುವಧಾರು, ಎಂಬುದೇ ಮೊದಲಾದ ರಾಜ ಮರ್ಯಾದೆಯನ್ನು ಗ್ಗಡಿಸುತ್ತಿದ್ದರು. ॥೫೫॥

ಟಿಪ್ಪಣಿ:— (೧) (ದ್ಭ) ಚೌರಿ, ಚವರ (೨) (ದ್ಭ) ಲಕುಮಿ.

(೩) (ತ್ರ) ಉತ್ಕಟ, ಈ ಅದ್ಯದಲ್ಲಿ-ದಮಯಂತಿಯು ವಿವಾಹ ಮಂಟಪ ಕ್ಕೆ ಬಂದುದು, ಬಿಳಿಯ ಕಮಲವನ್ನು ಲಕ್ಷ್ಮಿ ಹೊಕ್ಕ ಹಾಗಿತ್ತು, ಎಂದಿರು ವುದರಿಂದ ಉಪಮಾಲಂಕಾರವು ॥೫೫॥

ಮೂ॥ ಕುಡಿತೆಗಂಗಳಬಿಡುಮುಡಿಯಬಡ । ನಡುವುಸೆಳೆವತಿಬೆಡಗಿನಲಿ
ಪೊಂಗೊಡವೊಲೆಯುವ್ಯೆಯಾರದುಡುಗೆಯನೆರಿಯಸಡಗರದ॥ತೊ
ಡರಝಣಝಣರವದಮೆಲ್ಲಡಿ। ಯಿಡುವಗಮನದಭರದಿಕಿರುಬೆಮ। ರಿ
ಡುತಬಂದಳುಸತಿಯರೊಡನೆವಿವಾಹಮಂಟಪಕೆ ॥೫೬॥

ಟೀಕೆ:— (೧) ಕುಡಿತೆಗಂಗಳ-ಸೇರೆಯಗಲವಿರುವಕಣ್ಣುಗಳ, (೨) ಬಿಡುಮುಡಿಯ-ಉದ್ದವಾದ ಕೂದಲಿನ (೩) ಬಡನಡುವು - ಸಣ್ಣನಾದನಡುವು, ಸೆಳೆವ-ಬಳುಕುವ, ಅತಿಬೆಡಗಿನಲಿ-ಬಹಳಸೊಗಸಿನಿಂದ, (೪) ಪೊಂಗೊಡವೊಲೆಯ-ಚಿನ್ನದಕಲಶದಂತಿರುವಸ್ತನಗಳ,ವ್ಯೆಯಾರದ-ರಮ್ಯವಾದ, ಉಡುಗೆಯ-ಉಡುವಿಕೆಯುಳ್ಳ, ನೆರಿಯ-ವಸ್ತ್ರದನಿರಿಯ, ಸಡಗರದ-ಸಂಭ್ರಮದ, ತೊಡರ-ಕಾಲ್ಕಡಗದ, ಝಣಝಣರವದ-ಇಂಪಾದಶಬ್ದದ, (೫) ಮೆಲ್ಲಡಿಯಿಡುವ-ಮೆಲ್ಲಗೆಹೆಜ್ಜೆಹಾಕುವ, ಗಮನದ- ನಡಿಗೆಯ, ಭರದಿ-ವೇಗದಿಂದ, ಕಿರುಬೆಮರಿಡುತ - ಮ್ಯೆಬೆವರುತಾ ,ಸತಿಯರೊಡನೆ-ಸ್ತ್ರೀಯರೊಡನೆ, ವಿವಾಹಮಂಟಪಕೆ-ಸ್ವಯಂವರಮಂಟಪಕ್ಕೆ, ಬಂದಳು. ॥೫೬॥

ತಾತ್ಪರ್ಯ:—ವಿಸ್ತಾರವಾದ ನೇತ್ರಗಳೂ, ಉದ್ದವಾದ ತಲೆಗೂದಲೂ, ಸೂಕ್ಷ್ಮವಾದ ಮಧ್ಯ ಪ್ರದೇಶವೂ ಹೊಳೆಯುತ್ತಿರಲು, ಸುವರ್ಣಕಲಶದಂತಿರುವ ಸ್ತನಗಳು ಶೋಭಿಸುತ್ತಿರಲು, ಉಟ್ಟಿರುವ ರಮ್ಯವಾದ ದುಕೂಲದ ನಿರಿಯನ್ನು ಚಿಮ್ಮುತ್ತಾ, ಕಾಲಂದುಗೆಯ ಶಬ್ದವು ಕಿವಿಗೆ ಅಮೃತವನ್ನು ಸುರಿಸುತ್ತಿರಲು ಮಂದಗಮನದಿಂದ ಬರುತ್ತಾ, ಸ್ವಲ್ಪವಾಗಿ ಮ್ಯೆಬೆವರಲು, ನೋಡುವರ ಕಣ್ಣನ್ನು ಸೆರೆ ಹಿಡಿಯುತ್ತಾ ಸ್ವಯಂವರ ಮಂಡಪವನ್ನು ಹೊಕ್ಕಳು ॥೫೬॥

ಟಿಪ್ಪಣಿ:— (೧) ಕುಡಿತೆಯಂತಿರ್ಪಕಣ್ಗಳ್ - ಕುಡಿತೆಗಂಗಳ್ (ಉ. ಪೂರ್ವ. ಕ) (೨) ಬಿಟ್ಟಮುಡಿ-ಬಿಡುಮುಡಿ (ಗಮಕ) (೩) ಬಡವಾದನಡು-ಬಡನಡು (ವಿ. ಪೂರ್ವ. ಕ) (೪) ಪೊನ್ನಕೊಡ- ಪೊಂಗೊಡ (ಷ. ತ) ಪೊಂಗೊಡದಂತಿರ್ಪವೊಲೆ (ಉ. ಪೂರ್ವ. ಕ) (೫)ಮೆಲಿತ್ತು ಅಡಿ-ಮೆಲ್ಲಡಿ (ವಿ. ಪೂರ್ವ, ಕ) ॥೫೬

ಮೂ॥ ಅವನಿಪತಿನಿಜಕುವರಿಗೆಂದನು| ವಿವಿಧರತ್ನದಮುಕುಟವರ್ಧನ|
ಭುವನಪತಿಗಳನೇಕರಿರಲಾಸಿಂಹಪೀಠದಲಿ ॥ ಯುವತಿನೋಡಿತ್ತರ
ದೊಳಿಹನೃಪ| ನಿವಹದಲಿನೀಹಾಕುಮನವಿ | ದ್ದವನಕೊರಳಿಗೆ
ನುತ್ತಕೊಟ್ಟನುಪುಷ್ಪಮಾಲಿಕೆಯ ॥೫೭॥

ಟೀಕೆ:—ಅವನಿಪತಿ-ಭೀಮರಾಜನು (೧) ನಿಜಕುವರಿಗೆ - ತನ್ನ ಮಗಳಿಗೆ, ಎಂದನು - ಹೀಗೆಹೇಳಿದನು, ಯುವತಿ - ದಮಯಂತಿಯೇ, ನೋಡು, ವಿವಿಧ-ಬಗೆ ಬಗೆಯಾದ, ರತ್ನದ-ರತ್ನಗಳುಳ್ಳ, ಮುಕುಟವ ರ್ಧನ-ಕಿರೀಟವನ್ನು ಧರಿಸಿಕೊಂಡಿರುವ, ಅನೇಕರ್-ಬಹುಮಂದಿ, ಭು ವನಪತಿಗಳ್-ರಾಜರು, (೨) ಆ ಸಿಂಹಪೀಠದಲಿ - ಸಿಂಹಾಸನದಮೇಲೆ, ಇರಲ್-ಕುಳಿತಿರಲು, (೩) ಇತ್ತರದೊಳ್-ಎರಡುಪಕ್ಕಗಳಲ್ಲಿ, ಇಹ- ಇ ರುವ, ನೃಪನಿವಹದಲಿ-ರಾಜಮಂಡಲಿಯಲ್ಲಿ, ಮನವಿದ್ದವನ-ಇಷ್ಟವುಳ್ಳ ವನ, ಕೊರಲಿಗೆ-ಕತ್ತಿಗೆ, ನೀ-ನೀನು, ಹಾಕು, ಎನುತ್ತ- ಎಂಬದಾಗಿ ಹೇಳಿ, ಪುಷ್ಪಮಾಲಿಕೆಯ-ಹೂವಿನಸರವನ್ನು, ಕೊಟ್ಟನು ॥೫೭॥

ತಾತ್ಪರ್ಯ:—ಭೀಮರಾಜನು ಕೂಡಲೆ ದಿವ್ಯವಾದ ಪುಷ್ಪಹಾರವ ನ್ನು ಕೊಟ್ಟು, ಎಲೌ ಪ್ರಿಯಪುತ್ರಿಯೇ ? ಈ ಸಭೆಯಲ್ಲಿ ನವರತ್ನ ಖ ಚಿತವಾದ ಕಿರೀಟಗಳಿಂದ ಶೋಭಿಸುತ್ತಾ ಸಿಂಹಾಸನಗಳಲ್ಲಿ ಕುಳಿತಿರು ವ ರಾಜಪುತ್ರರು ಉಭಯ ಪಾರ್ಶ್ವಗಳಲ್ಲಿ ಸಾಲಾಗಿ ಕುಳಿತಿರುವರು, ನಿನಗೆ ಬೇಕಾದವರನಿಗೆ ಈ ಹಾರವನ್ನು ಹಾಕಿ ವರಿಸಬಹುದು ಎಂದು ಹೇಳಿದನು. ॥೫೭॥

ಟಿಪ್ಪಣಿ:— (೧) ಕುವರಿಗೆ-(ತ್ಸ) ಕುಮಾರಿ (೨) ಅದುಸಿಂಹಪೀ ಠ-ಆಸಿಂಹಪೀಠ (ಗಮಕ) (೩) ಎರಡುತರ-ಇತ್ತರ (ದ್ವಿಗು) ॥೫೭॥

ಮೂ॥ ಬಂದಳಾದಮಯಂತಿನೃಪಸಭೆ | ಗಂದುಹೊಕ್ಕಳುಕೆಳದಿಯ
ರುಮುದ| ದಿಂದತೋರಿದರಲ್ಲಿಯಿವರಿವರೆಂದುವಿವರಿಸುತ ॥ ಮುಂ
ದೆಬರೆಕೈಕಂಬಿಯರುಬಹು| ಸಂದಣಿಯಕೆಲಕೊತ್ತಿಸುತಲಿರ| ಲಿಂ
ದುಮುಖಿನೋಡಿದಳುಲಜ್ಜಾಭರದೊಳವನಿಪರ ॥೫೮॥

ಟೀಕೆ:— ಆ ದಮಯಂತಿ, ಬಂದಳ್-ಬಂದಳು, ಅಂದು- ಆಗ, ನೃಪಸಭೆಗೆ-ರಾಜಸಭೆಯನ್ನು, ಹೊಕ್ಕಳು-ಸೇರಿದಳು, ಕೆಳದಿಯರು- ಸಖಿಯರು, (೧) ಮುದದಿಂದ - ಸಂತೋಷದಿಂದ, ಅಲ್ಲಿ - ಸಭೆಯಲ್ಲಿ ಇವರಿವರು-ಇವರಿಂಥವರು, ಎಂದು-ಎಂಬದಾಗಿ, ವಿವರಿಸುತ-ವರ್ಣಿಸು,

ತ್ತಾ, ತೋರಿಪರು-ತೋರಿಸಿದರು, ಮುಂದೆ- ಮುಂದುಮುಂದಕ್ಕೆ, ಬರೆ-ಬರುತ್ತಿರಲು (೨) ಕೈ ಕಂಬಿಯರು-ಬೆತ್ತವನ್ನು ಹಿಡಿದಿರತಕ್ಕ ಹೆಂಗಸರು, ಬಲುಸಂದಣಿಯ-ಜನದಗುಂಪನ್ನು, ಕೆಲಕೆ-ಪಕ್ಕಕ್ಕೆ, ಒತ್ತಿಸುತಲಿ-ಒತ್ತಲಿಸುತ್ತಾ, ಇರಲ್-ಇರಲು, ಇಂದುಮುಖಿ - ಚಂದ್ರಮುಖಿಯಾದ ದಮಯಂತಿಯು, ಅನಿಪರ-ದೊರೆಗಳನ್ನು, ಲಜ್ಜಾಭರದೊಳು-ಬಹುನಾಚಿಕೆಯಿಂದ, ನೋಡಿದಳು, ||೩೪||

ತಾತ್ಪರ್ಯ:— ದಮಯಂತಿಯು ಬಂದು ರಾಜಸಭೆಯನ್ನು ಹೊಕ್ಕಳು, ಸಖಿಯರು ಜತೆಯಲ್ಲಿದ್ದು ಅಲ್ಲಿ ಕುಳಿತಿರುವ ರಾಜಪುತ್ರರನ್ನು ಇವರಿಂಥವರೆಂದು ಕ್ರಮವಾಗಿ ವರ್ಣಿಸಿ ಹೇಳುತ್ತಿರಲು, ವೇತ್ರವತಿಯರಾದ ಕೆಳದಿಯರು ಮುಂದು ಮುಂದಕ್ಕೆ ಬರುತ್ತಿದ್ದ ಜನರಗುಂಪನ್ನು ಹಿಂದಕ್ಕೆ ಒತ್ತಲಿಸುತ್ತಿರಲು ಎಲ್ಲರಾಜಪುತ್ರರನ್ನೂ, ನೋಡುತ್ತಾ ಚಂದ್ರಮುಖಿಯಾದ ದಮಯಂತಿಯು ಲಜ್ಜಾನ್ವಿತಳಾಗಿ ಮುಂದಕ್ಕೆ ಹೊರಡುತ್ತಿದ್ದಳು. ||೩೪||

ಟಿಪ್ಪಣಿ:— (೧) ಸಂಸ್ಕೃತದಲ್ಲಿ ದಕಾರಾಂತವಾದ ,ಮುತ್, ಎಂಬ ಶಬ್ದವು ಪ್ರಥಮಾ ಬಹುವಚನ ರೂಪದ ವಿಸರ್ಗವನ್ನು ಬಿಡು ಕನ್ನಡಕ್ಕೆ ಲಿಂಗವಾಗಿದೆ, (೨) ಕೈಯಲ್ಲಿ ಕಂಬಿಯು ಯಾರಿಗೋ ಅವರು-(ಕೈ ಕಂಬಿಯರು-(ಬ-ವ್ರೀ.) ||೩೪||

ಮೂ||ಮಾಳವಾಧಿಪನೀತಮಗಧನೃಪಾಲನೀತನುಮತ್ಸ್ಯಕುರುನೇ|
ಪಾಳನೀತನುಕೋಸಲಾನ್ವಯನೀತಬರ್ಬರನು || ಚೋಳನೀತ
ನುಸಿಂಧುರಾಜನು | ಶೀಲನೀತಕಳಿಂಗಕುಂತಳ| ಪಾಲಕನನೋ
ಡಿತ್ತಲಮರೇಶ್ವರನವ್ಯೋಲಗವ ||೩೫||

ಟೀಕೆ:— ಈತನು, ಮಾಳವಾಧಿಪನು-ಮಾಳವದೇಶದದೊರೆಯು, ಮಗಧನೃಪಾಲಂ-ಮಗಧದೇಶದ ದೊರೆಯು, ಈತನು, ಮತ್ಸ್ಯಕುರುನೇಪಾಳಂ-ಮತ್ಸ್ಯ, ಕುರುನೇಪಾಳದೇಶದ ದೊರೆಯು, ಈತಂ-ಇವನು, ಈತ (೧) ಕೋಸಲಾನ್ವಯಂ-ಕೋಸಲವಂಶದರಾಜನು, ಈತ, ಬರ್ಬರನು-ಬರ್ಬರದೇಶದವನು, ಈತನು, ಚೋಳನು, ಈತನು, ಸಿಂಧುರಾಜನು-ಸಿಂಧುದೇಶದರಸನು, ಶೀಲನು-ಸದಾಚಾರವುಳ್ಳವನು, ಈತ, ಕಳಿಂಗ ಕುಂತಳಪಾಲಕನು-ಕಳಿಂಗ ಮತ್ತು, ಕುಂತಳದೇಶದರಸನು, ಇತ್ತಲ್-ಇಲ್ಲಿ, (೨) ಅಮರೇಶ್ವರನ-ಇಂದ್ರನ, ಓಲಗವ - ಸಭೆ

ಯುನ್ನು, ನೋಡು, ||೫೯||

ತಾತ್ಪರ್ಯ:— ಸಖಿಯರು ಅಂಗ ವಂಗ ಮೊದಲಾಗಿ ಸ್ವಯಂವರಕ್ಕೆ ಬಂದು ಸಭೆಯುಲ್ಲಿ ಸೇರಿದ್ದ ಎಲ್ಲರಾಜರನ್ನೂ, ಹೆಸರು ಹಿಡಿದು ತೋರಿಸಿ ಹೇಳುತ್ತಾ ಇಂದ್ರನ ಸಭೆಯಂತೆ ಮನೋಹರವಾದ ಆಸಭೆಯುನ್ನೆಲ್ಲಾ ಸುತ್ತಿಸಿದರು, ಆಕೆಯು ಯಾರಲ್ಲಿಯೂ ಮನಸ್ಸನ್ನು ಮಾಡದೆಸುಮ್ಮನೆ ನೋಡಿಕೊಂಡು ಹೊರಡಲು. ||೫೯||

ಟಿಪ್ಪಣಿ:—(೧) ಕೋಸಲವೆಂಬ ಅನ್ವಯದಲ್ಲಿ ಹುಟ್ಟಿದವನು, ಕೋಸಲಾನ್ವಯನು (ಬ. ವ್ರೀ) ಕೋಸಲ + ಅನ್ವಯ (ಸವರ್ಣ. ದೀ. ಸಂ.) (೨) ಅಮರದೇವತೆಗಳಿಗೆ, ಈಶ್ವರ-ಒಡೆಯ, ಅಮರ + ಇಂದ್ರ-ಅಮರೇಂದ್ರ (ಗುಣ) ||೫೯||

ಮೂ|| ಎನ್ನನೊಲಿದಿಹಳೆಂದುಕೆಲಬರುಸ|ನ್ನೆಮಾಡಿದಳೆಂದುಕೆಲಬರು
ಗನ್ನದಿಂದೀಕ್ಷಿಸುತಲಿರ್ದರುಕೆಲರುಹುಬ್ಬಿನಲಿ|ಎನ್ನನೋಡಿದಳೆಂ
ದುಕೆಲಬರು|ಬಿನ್ನಣದಿಮಿಗೆವ್ರೋರೆನೋಟದಿ| ಕಣ್ಣಿನಿಂದೀಕ್ಷಿಸಿ
ದಳೆಂದಾಡಿದರುಕೆಲಕೆಲರು ||೬೦||

ಟೀಕೆ:—ಕೆಲಬರು-ಕೆಲವರು, (೧) ಎನ್ನ-ನನ್ನನ್ನು, ಒಲಿದು-ಪ್ರೀತಿಸಿ, ಇಹಳ್-ಇರುವಳು, ಎಂದು-ಎಂಬದಾಗಿಯೂ, ಕೆಲಬರ್-ಮತ್ತೆಕೆಲವರು, (೨) ಸನ್ನೆಮಾಡಿದಳೆಂದು – ಸನ್ನೆಮಾಡಿದಳೆಂಬದಾಗಿಯೂ, ಹುಬ್ಬಿನಲಿ-ಹುಬ್ಬನ್ನುಹಾರಿಸುತ್ತಾ, (೩) ಗನ್ನದಿಂದೆ-ಬಹಳೆವಾಗಿ (ನಿರೀಕ್ಷಣೆಮಾಡಿ) ಈಕ್ಷಿಸುತಲಿರ್ದರು-ನೋಡುತ್ತಿದ್ದರು, ಕೆಲವರು, ಎನ್ನ-ನನ್ನನ್ನು, ನೋಡಿದಳೆಂದು-ನೋಡಿದಳೆಂಬದಾಗಿ, (೪) ಬಿನ್ನಣದಿಂದೆ-ಬೆಡಗಿನಿಂದ, ಮಿಗೆ-ಹೆಚ್ಚಾಗಿ, ಓರೆನೋಟದೊಳು- ಓರೆನೋಟದಿಂದ, ಕಣ್ಣಿನಿಂದ, ಈಕ್ಷಿಸಿದಳ್-ನೋಡಿದಳು, ಎಂದು, ಕೆಲಕೆಲರು-ಕೆಲವುಮಂದಿ, ಆಡಿದರ್-ಮಾತಾಡಿಕೊಂಡರು. ||೬೦||

ತಾತ್ಪರ್ಯ:— ಆ ಸಭೆಯುಲ್ಲಿ ಕುಳಿತಿದ್ದ ರಾಜಪುತ್ರರು ತಮ್ಮಲ್ಲಿ ತಾವು, ನನ್ನನ್ನು ಮೋಹಿಸಿದಳೆಂದೂ, ನನ್ನನ್ನು ಸನ್ನೆಮಾಡಿದಳೆಂದೂ, ನನ್ನನ್ನು ಪ್ರೀತಿಯಿಂದ ನೋಡಿದಳೆಂದೂ, ಕಟಾಕ್ಷದಿಂ ನೋಡಿದಳೆಂದೂ, ‘ ಕಾಮೀಸ್ವತಾಂಪಶ್ಯತಿ ’ ಎಂಬ ಲೋಕನ್ಯಾಯದಂತೆ ಆಕೆಯನ್ನು ಮೋಹಿಸಿ ಆಕೆಯಲ್ಲಿ ಇಲ್ಲದ ಚೇಷ್ಟೆಗಳನ್ನಾರೋಪಿಸಿ ತಮಗಾಗಿ ಆಕೆ ಹಾಗೆಮಾಡಿದಳೆಂದು ತಿಳಿದು ಸಮಾ

ಧಾನ ಪಟ್ಟುಕೊಂಡರು. ॥೬೦॥

ಟಿಪ್ಪಣಿ:— (೧) ಕರ್ಮಾರ್ಥದಲ್ಲಿ ಷಷ್ಠಿ (೨) ಸನ್ನೆಗೆ (ತ್ಸ) ಸಂಜ್ಞಾ, ಸನ್ನೆಯಂಮಾಡಿದಳ್-ಸನ್ನೆಮಾಡಿದಳ್ (ಕ್ರಿ. ಸ) (೩) (ತ್ಸ) ಘನ (೪) (ತ್ಸ) ವಿಜ್ಞಾನ, ॥೬೦॥

ಮೂ॥ ಬಾಯಬಿಂಕದಸವಿಯನುಡಿಗಳ| ರಾಯರಾಡಿದರಲ್ಲಿಕಮಲದ|
ಳಾಯತಾಂಬಕಿನಳನರೂಪಿನನಾಲ್ವರಿರೆಕಂಡು॥ ಮಾಯನಿದುತಾ
ನರಿಯೆನಿವರನಿ|ಜಾಯತವನೆಂದೆನುತಮುರಿದಾ|ವಾಯುಗತಿಯಲಿ
ಬಂದುಹೊಕ್ಕಳುತನ್ನಮಂದಿರವ ॥೬೧॥

ಟೀಕೆ:—ಬಾಯ-ಬಾಯಿಯ, ಬಿಂಕದ-ಗರ್ವದ, ಸವಿಯ-ರುಚಿಕರವಾದ, ನುಡಿಗಳ-ಮಾತುಗಳನ್ನು, ಅಲ್ಲಿ, ರಾಯರ್-ದೊರೆಗಳು, ಆಡಿದರ್-ಆಡಿದರು (೧) ಕಮಲ-ತಾವರೆಯ, ದಳ-ಎಸಳಿನಂತೆ, ಆಯತ-ವಿಸ್ತಾರವಾದ, ಅಂಬಕಿ- ಕಣ್ಣುಳುಳ್ಳ ದಮಯಂತಿಯು, ನಳನರೂಪಿನ-ನಳನವೇಷವುಳ್ಳ (೨) ನಾಲ್ವರ್-ನಾಲ್ಕುಮಂದಿ, ಇರೆ-ಇರಲು, ಕಂಡು, ಇದು, ಮಾಯವು- ಮೋಸವು, ಇವರ – ಈನಾಲ್ವರ,ನಿಜಾಯತವಂ-ನಿಶ್ಚಯಾಂಶವನ್ನು, ತಾಂ-ನಾನು, ಅರಿಯೆಂ-ಕಾಣೆನು, ಎಂದೆನುತ-ಎಂಬದಾಗಿ, ಮುರಿದು- ಹಿಂದಿರುಗಿ, ಆವಾಯುಗತಿಯಲಿ – ವಾಯುವೇಗದಿಂದ, ಬಂದು, ತನ್ನ, ಮಂದಿರವ – ಮನೆಯನ್ನು, ಹೊಕ್ಕಳು-ಸೇರಿದಳು. ॥೬೧॥

ತಾತ್ಪರ್ಯ:— ಹೀಗೆ ತಮ್ಮಬಾಯಿಗೆ ಬಂದಹಾಗೆ ಮಾತನಾಡಿಕೊಳ್ಳುತ್ತಿರಲು, ಅಲ್ಲಿ ನಳನಹೋಲಿಕೆಯುಳ್ಳ ನಾಲ್ವರನ್ನು ಕಂಡು ಯಾರು ನಳನೆಂಬುದನ್ನು ಕಂಡು ಹಿಡಿಯಲಾರದೆ, ಇದೇನೋ ಮೋಸವೆಂದು ಭಾವಿಸಿ ಕೂಡಲೆ ಮನೋವ್ಯಥೆಯಿಂದ ಹಿಂದಿರುಗಿ ಬಂದು ಬೇಗನೆ ತನ್ನಮನೆಯನ್ನು ಪ್ರವೇಶಿಸಿದಳು. ॥೬೧॥

ಟಿಪ್ಪಣಿ:—ಕಮಲದದಳ-ಕಮಲದಳ (ಷ. ತ) ದಳದಂತೆ ಆಯತ-ದಳಾಯತ (ಉ. ಪ್ರೂರ್ವ. ಕ) ಆಯತವಾದ ಅಂಬಕವುಳ್ಳವಳು- ಆಯತಾಂಬಕಿ (ಬ. ವ್ರೀ.) (೨) ನಾಲ್ಕು ಎಂಬಶಬ್ದದಮೇಲೆ ಪುಲ್ಲಿಂಗ ಬಹುವಚನದಲ್ಲಿ ,ವರ್, ಪ್ರತ್ಯಯವು ಬಂತು ॥೬೧॥

ಮೂ॥ ಕಂಡುಪೇಕ್ಷಿಸಿಬಂದಳಂಗನೆ|ಮಂಡಲಾಧಿಪರೆಲ್ಲರನೆಯದ|ಕಂ
ಡುಭೀಮನೃಪಾಲತನುಜೆಯಬಳಿಗೆನಡೆತಂದು ॥ ಅಂಡಲೆದುಬಿಸ

ಗೊಂಡೊಡೆಂದಳ। ಖಂಡಲನಮಾಯುಗಳವಿವರಿಸೆ। ಹಿಂಡುಬುದ್ಧಿ ಯನುಳ್ಳನೃಪಚಿಂತಿಸಿದಭಾರತಿಯು ॥೬೨॥

ಟೀಕೆ:— ಅಂಗನೆ-ದಮಯಂತಿಯು (೧) ಮಂಡಲಾಧಿಪರೆಲ್ಲರನೆ-ರಾಜರೆಲ್ಲರನ್ನೂ ಕಂಡು-ನೋಡಿ, ಉಪೇಕ್ಷಿಸಿ - ಒಪ್ಪದೆ, ಬಂದಳ್-ಬಂದಳು, ಅದ-ಆವಿಷಯವನ್ನು, ಕಂಡು, ಭೀಮನೃಪಾಲ- ಭೀಮರಾಜನು (೨) ತನುಜೆಯ-ಮಗಳ, ಬಳಿಗೆ - ಸಮೀಪಕ್ಕೆ, ನಡೆತಂದು-ಬಂದು, ಅಂಡಲೆದು-ತಿರಸ್ಕರಿಸಿ, ಬೆಸಗೊಂಡೊಡೆ-ಕೇಳಲು, ಎಂದಳು-ಹೇಳಿದಳು, ಅಖಂಡಲನ-ಇಂದ್ರನ, ಮಾಯುಗಳ-ಕೃತ್ರಿಮವನ್ನು ವಿವರಿಸೆ-ವಿಸ್ತಾರವಾಗಿ ತಿಳಿಸಲು, ಹಿಂಡು ಬುದ್ಧಿಯಂ - ಮಂದಬುದ್ಧಿಯನ್ನು, ಉಳ್ಳ-ಹೊಂದಿರುವ, ನೃಪ-ದೊರೆಯು, ಭಾರತಿಯ-ಸರಸ್ವತಿಯನ್ನು, ಚಿಂತಿಸಿದ-ಸ್ಮರಿಸಿದನು. ॥೬೨॥

ತಾತ್ಪರ್ಯ:—ದಮಯಂತಿ ಹೀಗೆ ರಾಜಪುತ್ರರೆಲ್ಲರನ್ನೂ ತಿರಸ್ಕರಿಸಿ ಒಬ್ಬರನ್ನೂ ವರಿಸದೆ ಹಿಂದಕ್ಕೆ ಬಂದುದನ್ನು ಕಂಡು ಭೀಮರಾಜನು ಮಗಳಮೇಲೆ ಕೋಪಿಸಿ ಬಹುವಾಗಿ ದೂಷಿಸಲು, ದಮಯಂತಿಯು ಇಂದ್ರನು ಮಾಡಿರುವ ಕೃತಕವನ್ನು ವಿವರಿಸಿಹೇಳಲು, ವಿಚಾರವಿಲ್ಲದವನಾಗಿ ಸರಸ್ವತಿಯನ್ನು ಧ್ಯಾನಮಾಡಿದನು. ॥೬೨॥

ಟಿಪ್ಪಣಿ:—(೧) ಮಂಡಲ - ಭೂಮಿಗೆ, ಅಧಿಪರ್ - ಒಡೆಯರು, (ಅವ) ಮಂಡಲದ ಅಧಿಪರ್-ಮಂಡಲಾಧಿಪರ್ (ಷ. ತ) ಮಂಡಲ+ಅಧಿಪ (ಸವರ್ಣ.ದೀ) (೨) ತನು-ದೇಹದಲ್ಲಿ,ಜೆ-ಹುಟ್ಟಿದದಳು(ಅವ)॥೬೨॥

ಮೂ॥ ವಾಣಿಪಂಕಜಪಾಣಿಬ್ರಹ್ಮನ|ರಾಣಿಪನ್ನಗವೇಣಿಸುಕೃತಶ್ರೇಣಿ ಸುರನಿಕುರುಂಬವಂದಿತೆಸತ್ಯಸಂಚಾರೆ ॥ ಆಣಿಸ್ತ್ರೀಕುಲರನ್ನೆವರಗೀ|ರ್ವಾಣಿರಕ್ಷಿಸುರಕ್ಷಿಸೆಂದಾ|ಕ್ಷೋಣಿಪತಿಕೈಮುಗಿದುಬೇಡಿದನಾಸರಸ್ವತಿಯ ॥೬೩॥

ಟೀಕೆ:—ವಾಣಿ-ವಾಗ್ರೂಪಳೇ, ಪಂಕಜ-ಕಮಲದಂತೆ, ಪಾಣಿ-ಹಸ್ತವುಳ್ಳವಳೇ, ಬ್ರಹ್ಮನ, ರಾಣಿ-ಪತ್ನಿಯೇ! (೧) ಪನ್ನಗ - ಸರ್ಪದಂತೆ, ವೇಣಿ-ಜಡೆಯುಳ್ಳವಳೇ, ಸುಕೃತ-ಪುಣ್ಯಗಳ, ಶ್ರೇಣಿ - ಪಙ್ತಿಯುಳ್ಳವಳೇ, ಸುರ-ದೇವತೆಗಳ, ನಿಕುರುಂಬ-ಸಮೂಹದಿಂದ, ವಂದಿತೆ-ನಮಸ್ಕೃತಳೇ, ಸತ್ಯಸಂಚಾರೆ-ಸತ್ಯದಿಂದನಡೆಯುತಕ್ಕವಳೇ, ಆಣಿ-ಶ್ರೇಷ್ಠಳೆ, ಸ್ತ್ರೀಕುಲ-ಸ್ತ್ರೀಯರಗುಂಪಿಗೆ (೨) ರನ್ನೆ- ರತ್ನದಂತಿರು

ವಳೇ, ವರಗೀರ್ವಾಣಿ-ದೇವಶ್ರೇಷ್ಠಳಾದ ಸರಸ್ವತಿಯೇ, ಎನ್ನಂ-ನನ್ನನ್ನು, ರಕ್ಷಿಸು ರಕ್ಷಿಸು - ಕಾಪಾಡು ಕಾಪಾಡು, ಎಂದು, ಕ್ಷೋಣಿಪತಿ-ದೊರೆಯು,ಕೈಮುಗಿದು-ಕೈಜೋಡಿಸಿಕೊಂಡು, ಆಸರಸ್ವತಿಯು-ಶಾರವೆಯನ್ನು, ಬೇಡಿದಂ-ಪ್ರಾರ್ಥಿಸಿದನು. ॥೬೩॥

ತಾತ್ಪರ್ಯ:— ಎಲೈ ವಾಗ್ದೇವತೆಯೇ ! ಕಮಲದಂತೆ ಹಸ್ತವುಳ್ಳವಳೇ, ಬ್ರಹ್ಮನರಾಣಿಯೇ, ಸರ್ಪವೇಣಿಯೇ, ಪುಣ್ಯಾವತಿಯೇ, ಸುರವಂದಿತೆಯೇ, ಸತ್ಯವ್ರತಳೇ, ಸ್ತ್ರೀರತ್ನವೇ, ಸರಸ್ವತಿಯೇ, ನನ್ನನ್ನು ಕಾಪಾಡು ಎಂದು ಕೈಮುಗಿದು ಬೇಡಿಕೊಂಡಳು ॥೬೩॥

ಟಿಪ್ಪಣಿ:—(೧) ಪತ್-ಕಾಲಿನಿಂದ, ನಗ-ನಡೆಯದಿರುವುದು (ಅವ) ಪನ್ನಗದಂತೆ ವೇಣಿಯುಳ್ಳವಳು-ಪನ್ನಗವೇಣಿ (ಬ. ವ್ರೀ) (೨) ರತ್ನಕ್ಕೆ (ದ್ಭ) ರನ್ನ, ಸ್ತ್ರೀಲಿಂಗದಲ್ಲಿ ರನ್ನೆ ॥೬೩॥

ಮೂ॥ ನೆನೆಯಲಾಕ್ಷಣಬಂದಳಲ್ಲಿಗೆ। ವನಜನಾಭನಸೊಸೆಜಗತ್ಪಾವ
ನೆಸುರಾರ್ಚಿತೆದೇವಿಭಕ್ತಾಶ್ರಿತಜನೋದ್ಧಾರೆ॥ಜನಪನೀನಿಂದಿನಲಿ
ಯೆನ್ನನು। ನೆನೆದಹದನೇನೆನಲುಪದಯುಗ। ವನಜಕಾನತನಾಗಿಬಿ
ನ್ನೈಸಿದನುಭಾರತಿಗೆ ॥೬೪॥

ಟೀಕೆ:— (೧) ವನಜನಾಭನ-ವಿಷ್ಣುವಿನ, (೨) ಸೊಸೆ-ಸೊಸೆಯಾದ, ಜಗತ್ಪಾವನೆ-ಲೋಕಕ್ಕೆಪರಿಶುದ್ಧಳಾದ, ಸುರ-ದೇವತೆಗಳಿಂದ, ಅರ್ಚಿತೆ-ಪೂಜಿಸಲ್ಪಟ್ಟ, ಭಕ್ತ-ಸೇವಕರಾದ, ಆಶ್ರಿತ- ಆಶ್ರಯಿಸಿದ, ಜನ-ಜನವನ್ನು, ಉದ್ಧಾರ-ರಕ್ಷಿಸುವ, ದೇವಿ-ಸರಸ್ವತಿಯು, ನೆನೆಯಲು-ಧ್ಯಾನಿಸಲು, ಆಕ್ಷಣ-ತತ್ಕಾಲದಲ್ಲಿಯೇ, ಅಲ್ಲಿಗೆ, ಬಂದಳ್- ಬಂದಳು, ಜನಪ-ದೊರೆಯೇ, ನೀಂ-ನೀನು, ಇಂದಿನಲ್ಲಿ-ಈಗ, ಎನ್ನನು-ನನ್ನನ್ನು, ನೆನೆದ-ಸ್ಮರಿಸಿದ, ಹದನು-ಕಾರಣವು, ಏನು? ಎನಲು-ಎಂದು ಕೇಳಲು, ಪದಯುಗವನಜಕೆ -ಪಾದಪದ್ಮಗಳಿಗೆ, ಆನತನಾಗಿ-ನಮಸ್ಕರಿಸಿ, ಭಾರತಿಗೆ - ಸರಸ್ವತಿಗೆ, ಬಿನ್ನೈಸಿದನು - ವಿಜ್ಞಾಪಿಸಿಕೊಂಡನು ॥೬೪॥

ತಾತ್ಪರ್ಯ:— ವಿಷ್ಣುವಿಗೆ ಸೊಸೆಯಾಗಿಯೂ ಲೋಕಪಾವನೆಯಾಗಿಯೂ ದೇವತೆಗಳಿಂದ ಪೂಜಿತಳಾಗಿಯೂ ಆಶ್ರಿತಜನವತ್ಸಲಳಾಗಿಯೂ ಇರುವ ಸರಸ್ವತಿಯು, ಭೀಮರಾಜನು ಧ್ಯಾನಿಸಿದಕೂಡಲೆ ಪ್ರತ್ಯಕ್ಷಳಾಗಿ, ಎಲೈ ದೊರೆಯೆ ಏಕೆ ನನ್ನನ್ನು ನೆನೆದೆ, ನನ್ನಿಂದ ಏನಾಗ

ಬೇಕು ? ಎಂದು ಕೇಳಲು ಆಕೆಯು ಪಾದಕಮಲಕ್ಕೆ ನಮಿಸಿ ನಡೆದ ಸಂಗತಿಯನ್ನೆಲ್ಲಾ ವಿಸ್ತಾರವಾಗಿ ಹೇಳಿಕೊಂಡನು. ||೬೪||

ಟಿಪ್ಪಣಿ:—ವನ-ನೀರಿನಲ್ಲಿ, ಜ-ಹುಟ್ಟಿದುದು (ಕಮಲ) ಅದರಂತೆ ಅಥವಾ ಅದೇನಾಭ ಹೊಕ್ಕಳುಳ್ಳವನು (ಅವ) (ಬ.ವ್ರೀ) (೨) (ತ್ರ) ಸ್ನುಷಾ ||೬೫||

ಮೂ|| ನಿಗಮನುತೆಗೀರ್ವಾಣಿರಕ್ಷಿಸು| ಮೃಗಧರನಕರುಣದಲಿನೋ
ಡುತ| ಲಗಣಿತದಿಭೂಭುಜರುನೆರೆದಿರೆತಿಳಿಯದಾದೆಮಗೆ || ಮಗಳ
ಮನವಿಗಡಿಸಿತುನಾಲ್ವರು| ಬೆಗಡುಗೊಳಿಸಿದರೆನಲುಭಾರತಿ|ನಗು
ತನುಡಿದಳುಕರೆದುದಮಯಂತಿಯಳನುಪಚರಿಸಿ ||೬೫||

ಟೀಕೆ:—ನಿಗಮನುತೆ-ವೇದವೇದ್ಯಳಾದ, ಗೀರ್ವಾಣಿ - ದೇವತೆಯೇ ! ರಕ್ಷಿಸು-ಪಾಲಿಸು, ಅಗಣಿತದಿ-ಲೆಕ್ಕವಿಲ್ಲದಷ್ಟು, (೧) ಭೂಭುಜರು-ರಾಜಪುತ್ರರು, ನೆರೆದಿರೆ-ಸೇರಿರಲು, (೨) ಮೃಗಧರನ-ಈಶ್ವರನ, ಕರುಣದಲಿ-ದಯೆಯಿಂದ, ನೋಡುತಲಿ-ನೋಡುತ್ತಾ, ಮಗಳ, ಮನ-ಮನಸ್ಸು, ವಿಗಡಿಸಿತು-ಕೆಟ್ಟುಹೋಯಿತು, ತಿಳಿಯದಾದ- ಏನನ್ನೂ ಅರಿಯದ, ನಮಗೆ, ನಾಲ್ವರು-ನಾಲ್ಕುಮಂದಿ, ಬೆಗಡುಗೊಳಿಸಿದರು-ಭಯವನ್ನುಂಟುಮಾಡಿದರು, ಎನಲು-ಎಂಬದಾಗಿಹೇಳಲು, ಭಾರತಿ-ಸರಸ್ವತಿಯು, ನಗುತ-ನಗುತ್ತಾ, ದಮಯಂತಿಯಳನು-ದಮಯಂತಿಯನ್ನು, ಕರೆದು, ಉಪಚರಿಸಿ-ಆದರಿಸಿ, ನುಡಿದಳು-ಹೇಳಿದಳು||೬೫||

ತಾತ್ಪರ್ಯ:—ಎಲೌವಾಗ್ದೇವಿ ಈಶ್ವರಕೃಪೆಯಿಂದ ಸ್ವಯಂವರಾರ್ಥವಾಗಿ ಬಹುಮಂದಿ ಕ್ಷತ್ರಿಯಪುತ್ರರು ಸೇರಿರಲು ಅವರತ ತನಗನುರೂಪನಾಗಿ, ಒಪ್ಪಿಕೆಯುಳ್ಳವನಾವನೆಂದು ನೋಡುತ್ತಾ ಬರುತ್ತಿದ್ದ ನನ್ನ ಮಗಳಿಗೆ ಮನಸ್ಸು ವಿಕಲ್ಪವಾಯ್ತು. ಆಕೆಗೆ ಒಪ್ಪಿಗೆಯಾದವನು ಕೊನೆಗೆ ಸಿಕ್ಕಲು ಅದೇರೂಪದಲ್ಲಿದ್ದ ನಾಲ್ಕುಮಂದಿಯನ್ನು ನೋಡಿ ಹೆದರಿ ವಿಮರ್ಶಿಸುವುದಕ್ಕಾಗದೆ ಖಿನ್ನಳಾಗಿ ವಿಮುಖತೆಯನ್ನು ಪಡೆದು ಬಂದಳು. ಎಂದು ಹೇಳುವಷ್ಟರಲ್ಲಿಯೇ ಸರಸ್ವತಿಯು ನಕ್ಕು ದಮಯಂತಿಯನ್ನು ಕರೆದು ಲಾಲಿಸಿ ಹೇಳುತ್ತಾಳೇನೆಂದರೆ ||೬೫||

ಟಿಪ್ಪಣಿ:—(೧) ಭೂಪ ಭೂಮಿಯನ್ನು ಭುಜರು-ಪಾಲಿಸತಕ್ಕವರು (ಅವ) (೨) ಮೃಗ-ಜಿಂಕೆಯನ್ನು, ಧರ-ಕೈಯಲ್ಲಿ ಹಿಡಿದಿರುವನು (ಈಶ್ವರ) (ಅವ) (ಷ. ತ) ||೬೫||

ಮೂ॥ ದೇವಮಾಯವಿದೀಗಕೇಳೆಲೆ| ದೇವಿಯಿಂದ್ರನಭಜಿಸೆನಲುಸಂ| ಭಾವನೀಯಳುಸಭೆಗೆಬಂದೆರಗಿದಳುಭಕ್ತಿಯಲಿ ॥ ದೇವಕುಲಸಂ ಭವರುರಕ್ಷಿಸಿ| ನೀವುಮಗಳೆಂದೆನುತಭಾವಿಸಿ| ಪಾವನರುತರಳೆಯ ನುಪತಿಕರಿಸೆಂದಳಿಂದುಮುಖಿ ॥೬೬॥

ಟೀಕೆ:—ದೇವಿ-ಅಮ್ಮಾ, ಕೇಳ್-ಕೇಳು, ಇದು, ದೇವಮಾಯವು-ದೇವತೆಗಳ ಮೋಸವು, ಈಗ, ಇಂದ್ರನ-ಇಂದ್ರನನ್ನು, ಭಜಿಸು-ಧ್ಯಾನಿಸು, ಎನಲು-ಎಂದುಹೇಳಲು, ಸಂಭಾವನೀಯಳು- ಪೂಜ್ಯಳಾದ ದಮಯಂತಿಯು, ಸಭೆಗೆ, ಬಂದು, ಭಕ್ತಿಯಲ್ಲಿ-ಭಕ್ತಿಯಿಂದ, ಎರಗಿದಳು-ನಮಸ್ಕರಿಸಿದಳು (೧) ದೇವಕುಲಸಂಭವರು-ದೇವತೆಗಳವಂಶದಲ್ಲಿ ಹುಟ್ಟಿ, ಪಾವನರು-ಪರಿಶುದ್ಧರಾದ, ನೀವು-ಇಂದ್ರಮೊದಲಾದ ನೀವುಗಳು, ಮಗಳೆಂದೆನುತ-ನಿಮ್ಮ ಮಗಳೆಂದು ,ಭಾವಿಸಿ-ನನ್ನನ್ನು ತಿಳಿದು (೨) ರಕ್ಷಿಸಿ-ಕಾಪಾಡಿರಿ, ತರಳೆಯನು - ಮಗಳನ್ನು , ಪತಿಕರಿಸಿ-ಪರಿಗ್ರಹಿಸಿ, (ಎಂಬದಾಗಿ) ಇಂದುಮುಖಿ-ದಮಯಂತಿಯು, ಎಂದಳ್-ಎಂದಳು. ॥೬೬॥

ತಾತ್ಪರ್ಯ:—ಎಲೆ ದಮಯಂತಿಯೇ ಕೇಳು! ಇದು ದೇವತೆಗಳ ಕಪಟವು, ಇದಕ್ಕಾಗಿ ನೀನು ಈಗ ಇಂದ್ರನನ್ನು ಭಜಿಸು, ಪರಿಹಾರವಾಗುವುದು, ಎಂದು ಹೇಳಲು;ದಮಯಂತಿಯು ಸಭೆಗೆ ಬಂದು ಅಡ್ಡಬಿದ್ದು ಇಂದ್ರಾದಿಗಳಿಗೆ ಕೈ ಮುಗಿದು ಅಯ್ಯಾ! ನೀವು ಮಹಾ ಪರಿಶುದ್ಧರು, ದೇವತಾಶ್ರೇಷ್ಠರು, ನಾನು ನಿಮ್ಮ ಮಗಳು, ನನ್ನನ್ನು ಮಗಳಂತೆಯೇ ಕಾಪಾಡಬೇಕು ಎಂದು ಬೇಡಿದಳು. ॥೬೬॥

ಟಿಪ್ಪಣಿ:— (೧) ದೇವತೆಗಳಕುಲ-ದೇವಕುಲ (ಷ. ತ) ದೇವಕುಲದಲ್ಲಿ ಸಂಭವವುಳ್ಳವರು ದೇವಕುಲಸಂಭವರು (ಬ. ವ್ರೀ) ರಕ್ಷಣ, ಎಂಬ ಸಂಸ್ಕೃತ ಭಾವನಾಮದ ಕೊನೆ ಅಕ್ಷರವನ್ನು ಲೋಪಮಾಡಿ ಇಸು ಪ್ರತ್ಯಯವನ್ನು ಸೇರಿಸಿ ಹೊಸಧಾತುವನ್ನು ಮಾಡಿದೆ ॥೬೬॥

ಮೂ॥ ಘಳಿಲನಾಪ್ರಚ್ಛನ್ನವೇಷವ | ಕಳೆದುಯಮಪವಮಾನವರುಣರು| ಬಳಿಕಸುರಪತಿಮೆಚ್ಚಿದಮಯಂತಿಯನುಕೊಂಡಾಡಿ ॥ ನಳನೃಪನಕರಸಿದರುಹುವ್ವಿನ|ಮಳೆಯಕರೆದರುದೇವದುಂದುಭಿ| ಮೊಳಗೆಯುರಸಿನಕೊರಳಿಗಿಟ್ಟಳುಪುಷ್ಪಮಾಲಿಕೆಯ ॥೬೭॥

ಟೀಕೆ:—ಯಮಪವ ಮಾನ ವರುಣರು - ಯಮವಾಯುವರುಣ

ರು, ಥಳಿಲನೆ-ಬೇಗನೆ, ಆ ಪ್ರಚ್ಛನ್ನ ವೇಷವ- ಮುಚ್ಚಿದ್ದರೂಪವನ್ನು, ಕಳೆದು-ಬಿಟ್ಟು, ಬಳಿಕ-ಆಮೇಲೆ, (೧) ಸುರಪತಿ-ಇಂದ್ರನು, ಮೆಚ್ಚಿ-ಮೆಚ್ಚಿಕೊಂಡು, ದಮಯಂತಿಯನ್ನು, ಕೊಂಡಾಡಿ-ಹೊಗಳಿ, (೨) ನಳನೃಪನ-ನಳರಾಜನನ್ನು, ಕರಸಿದರು - ಬರಮಾಡಿದರು, ದೇವದುಂದುಭಿ-ದೇವತೆಗಳಭೇರಿಯು, ಮೊಳಗೆ- ಶಬ್ದಮಾಡಲು, ಹೂವಿನಮಳೆಯ-ಪುಷ್ಪವೃಷ್ಟಿಯನ್ನು, ಕರೆದರು-ಸುರಿಸಿದರು, ಅರಸನ-ದೊರೆಯಾದನಳನ, ಕೊರಲಿಗೆ-ಕಂಠಕ್ಕೆ, ಪುಷ್ಪಮಾಲಿಕೆ-ಹೂಮಾಲೆಯನ್ನು, ಇಟ್ಟಳು-ಹಾಕಿದಳು. ||೬೩||

ತಾತ್ಪರ್ಯ:—ಕೂಡಲೆ ಇಂದ್ರನು ಆಕೆಯ ಮನೋ ನಿಶ್ಚಯಕ್ಕೆ ಮೆಚ್ಚಿದನು, ಮೂರುಜನ ದಿಕ್ಪಾಲಕರೂ ಸ್ವಸ್ವರೂಪವನ್ನು ಪಡೆದರು, ದಮಯಂತಿಯನ್ನು ಕೊಂಡಾಡಿದರು, ಆಕೆಯ ಸಂದೇಹವು ನಿವೃತ್ತಿಯಾಯಿತು, ತನ್ನ ಇಷ್ಟಾನುಸಾರ ನಳನನ್ನು ವರಿಸಿ ಅವನ ಕೊರಲಿಗೆ ಪುಷ್ಪಮಾಲಿಕೆಯನ್ನು ಹಾಕಿದಳು, ಆಕಾಶದಲ್ಲಿ ದೇವದುಂದುಭಿಯು ಮೊಳಗಿತು, ದೇವತೆಗಳು ಪುಷ್ಪವೃಷ್ಟಿಯನ್ನು ಮಾಡಿದರು||

ಟಿಪ್ಪಣಿ:—ಸುರರಪತಿ-ಸುರಪತಿ (ಷ. ತ) (೨) ನಳನೆಂಬನೃಪ-ನಳನೃಪ (ಸಂ. ಪೂರ್ವ, ಕ) ||೬೩||

ಮೂ|| ಆಸಮಯದಲಿಭೀಮನೃಪಸಂ| ತೋಷಪಡೆಮುನಿವಘಗಳಾ
ಕ್ಷಣ| ಸೇಸೆತಳಿದರುಹರಸುತಾವಧುವರರಿಗಕ್ಷತೆಯ||ಭೂಸುರರ
ಮತದಿಂದಲಾಧರ| ಣೀಶಧಾರೆಯನೆರದನಲ್ಲಿವಿ|ಲಾಸದಿಂಪಾಡಿದರು
ಮುತ್ತೈಯರುಶೋಭನವ ||೬೪||

ಟೀಕೆ:—ಆ ಸಮಯದಲಿ-ಆ ಕಾಲದಲ್ಲಿ, ಭೀಮನೃಪ - ಭೀಮರಾಜನು, ಸಂತೋಷಪಡೆ - ಸಂತೋಷವನ್ನು ಹೊಂದಲು, ಮುನಿವಘಗಳ್-ಋಷಿಸ್ತ್ರೀಯರು, (೧) ಆಕ್ಷಣ-ಕೂಡಲೆ, ಹರಸುತ-ಆಶೀರ್ವಾದಮಾಡುತ್ತಾ, ವಧುವರರಿಗೆ - ನಳ ದಮಯಂತಿಯರಿಗೆ, ಅಕ್ಷತೆಯ-ಮಂತ್ರಾಕ್ಷತೆಯನ್ನು (೨)ಸೇಸೆತಳಿದರು-ತಲೆಯಮೇಲೆ ಎರಚಿದರು, ಆ ಧರಣೀಶ-ದೊರೆಯು, ಭೂಸುರರ-ಬ್ರಾಹ್ಮಣರ, ಮತದಿಂದ-ಅಭಿಪ್ರಾಯವನ್ನು ತೆಗೆದುಕೊಂಡು, ಧಾರೆಯಂ- ಧಾರೆಯನ್ನು, ಎರೆದಂ-ಎರೆದನು, (೩) ಮುತ್ತೈದೆಯರು-ವೃದ್ಧಸುವಾಸಿನಿಯರು, ಅಲ್ಲಿ ವಿಲಾಸದಿಂ-ಸೊಗಸಿನಿಂದ, ಶೋಭನವ-ಮಂಗಳವನ್ನು, ಪಾಡಿದರು-

ಹೇಳಿದರು ||೬೪||

ತಾತ್ಪರ್ಯ:-ಆಗ ಭೀಮರಾಜನು ಬಹುಸಂತೋಷಪಟ್ಟನು,ವಧೂವರರನ್ನು ಎಲ್ಲರೂ ಆಶೀರ್ವದಿಸಿ ಶೇಷಾಕ್ಷತೆಗಳನ್ನು ತಳಿದರು, ದೊರೆಯು ಬ್ರಾಹ್ಮಣರ ಅನುಜ್ಞೆಯಿಂದ ದಮಯಂತಿಯನ್ನು ನಳನಿಗೆ ಧಾರೆಯೆರೆದು ಕೊಟ್ಟನು. ಮುತ್ತೈದೆಯರು ಹಾಡುಗಳನ್ನು ಹೇಳಿ ಆಶೀರ್ವದಿಸಿದರು. ||೬೪||

ಟಿಪ್ಪಣಿ:—(೧) ಅದುಕ್ಷಣ-ಆಕ್ಷಣ (ಗಮಕ) (೨) ಸೇಸೆಯುಂ ತಳಿದರ್-ಸೇಸೆದಳಿದರ್ (ಕ್ರಿ. ಸ) ಸೇಸೆಗೆ (ತ್ಸ) ಶೇಷಾ, (೩) ಮುತ್ತ-ಮುದಿಯಾದ, ಐದೆ-ಸುವಾಸಿನಿ (ಅವ) ಮುತ್ತ + ಐದೆ ಅಕಾರಲೋಪಸಂಧಿ(ಗಮಕ)||೬೪||

ಮೂ|| ಮಂಗಳಾರತಿಯೆತ್ತಿದರುದೇ | ವಾಂಗನೆಯರವನಿಪಗೆಧರೆಯೊಳು | ತುಂಗವಿಕ್ರಮನಾಗೆನುತಹರಸಿದರುವಿನಯದಲಿ || ಹಿಂಗದಮರೇಶ್ವರಮಹೋತ್ಸವ| ದಂಗವಸ್ತ್ರಾಭರಣವಿತ್ತುಸು|ರಾಂಗನೆಯರೊಡಗೂಡಿಕಳುಹಿಸಿಕೊಂಡನುಚಿತದಲಿ ||೬೯||

ಟೀಕೆ:—ಅವನಿಪಗೆ - ನಳರಾಜನಿಗೆ, ದೇವಾಂಗನೆಯರ್ - ದೇವತಾಸ್ತ್ರೀಯರು, (೧) ಮಂಗಳಾರತಿಯ - ಮಂಗಳಾರ್ಥವಾದ ಆರತಿಯನ್ನು, ಎತ್ತಿದರು - ಬೆಳಗಿದರು, ವಿನಯದಲಿ - ಸಡಗರದಿಂದ ತುಂಗವಿಕ್ರಮನಾಗು-ಬಹಳ ಪರಾಕ್ರಮವುಳ್ಳವನಾಗು,ಎನುತ-ಎಂಬದಾಗಿ, ಹರಸಿದರು-ಆಶೀರ್ವದಿಸಿದರು, ಅಮರೇಶ್ವರ-ಇಂದ್ರನು, ಹಿಂಗದೆ-ತಪ್ಪದೆ, (೨) ಮಹೋತ್ಸವದೆ-ವಿವಾಹಮಹೋತ್ಸವದಲ್ಲಿ, ಅಂಗ - ದೇಹಾಲಂಕಾರದ, ವಸ್ತ್ರಾಭರಣವ - ವಸ್ತ್ರಭೂಷಣಗಳನ್ನು, ಇತ್ತು-ಕೊಟ್ಟು, ಉಚಿತದಲಿ-ಮರ್ಯಾದೆಯಿಂದ. ಸುರಾಂಗನೆಯರೊಡನೆ-ಅಪ್ಸರಸ್ತ್ರೀಯರ ಸಹಿತವಾಗಿ, ಕಳುಹಿಸಿಕೊಂಡನು-ಹೊರಟನು ||೬೯||

ತಾತ್ಪರ್ಯ:—ದೇವಲೋಕದಿಂದ ಬಂದಿದ್ದ ಅಪ್ಸರ ಸ್ತ್ರೀಯರು ಸಂಭ್ರಮದೊಡನೆ ಜಯಶೀಲನಾಗೆಂದು, ಹರಸಿ ನಳನಿಗೆ ಆರತಿಗಳನ್ನೆತ್ತಿದರು, ಇಂದ್ರನು ಆಕಾಲಕ್ಕೆ ಯೋಗ್ಯವಾದ ವಸ್ತ್ರಾಭರಣಗಳನ್ನು ಒದಿಸಿ ಕೊಟ್ಟು ವಿವಾಹಮಹೋತ್ಸವವನ್ನು ನೋಡಿ ಆನಂದವನ್ನು ಹೊಂದುತ್ತಾ, ಭೀಮರಾಜನಿಂದ ಉಡುಗೊರೆ ಮೊದಲಾದಮರ್ಯಾದೆಯನ್ನು ಪಡೆದು ದೇವಸ್ತ್ರೀಯರೊಡನೆ ತನ್ನ ಲೋಕಕ್ಕೆ ಪ್ರಯಾಣ

ಮಾಡಿದನು ॥೧೯॥

ಟಿಪ್ಪಣಿ:—ಅರಿಸಮಾಸ, ಆರತಿಗೆ (ತ್ಸ) ಆರ್ತ್ರಿಕ್ಯ (೨) ಮಹೋತ್ಸಾದ ಉತ್ಸವ–ಮಹಾ + ಉತ್ಸವ (ವಿ. ಪೂರ್ವ. ಕ) ಗುಣ, ಸಂ. ಉತ್ಸವಕ್ಕೆ (ದ್ಭ) ಉಕ್ಕೆವ ॥೧೯॥

ಮೂ॥ ಅರಸಕೇಳ್ವೈವಾಹಸಮನಂ । ತರದೊಳೈದನೆದಿವಸದಲಿಕೊ।
ಪ್ಪರಿಗೆಯಲಿತುಂಬಿದರುಪನ್ನೀರಿನಲಿಕುಂಕುಮವ ॥ ।ಬೆರಸಿಹೊ
ಯ್ದಾಡಿದರುಭಯದ।ತರುಣಿಯರುವೋಕುಳಿಯಪರಿಮಳ। ಪೊ
ರೆದುದವನೀತಳವಸುರನಿಕುರುಂಬನಲಿದಾಡೆ ॥೨೦॥

ಟೀಕೆ:— ಅರಸ–ಧರ್ಮರಾಜನೆ, ಕೇಳ್–ಕೇಳು, ವೈವಾಹಸಮನಂತರದೊಳ್–ಮದುವೆಯಾದಮೇಲೆ, (೧) ಐದನೆಯದಿವಸದಲಿ–ಐದನೆದಿನದಲ್ಲಿ, ಪನ್ನೀರಿನಲಿ, ಕುಂಕುಮವ–ಕುಂಕುಮ ಕೇಸರವನ್ನು, ಬೆರಸಿ–ಸೇರಿಸಿ, ಕೊಪ್ಪರಿಗೆಯಲಿ–ಕಡಾಯಿಗಳಲ್ಲಿ, ತುಂಬಿದರು, ಉಭಯದ–ಹೆಣ್ಣುಗಂಡಿನ ಪಕ್ಷದವರಾದ, ತರುಣಿಯರು–ಸ್ತ್ರೀಯರು, ಓಕುಳಿಯ–ಓಕುಳಿಯನ್ನು, ಹೊಯ್ದಾಡಿದರು–ಎರಚಾಡಿದರು, (೨) ಸುರನಿಕುರುಂಬ– ದೇವತೆಗಳಗುಂಪು, ನಲಿದಾಡೆ–ಸಂತೋಷಿಸುತ್ತಿರಲು, ಅವನೀತಳವ–ಭೂಮಿಯೆಲ್ಲವನ್ನೂ, ಪರಿಮಳ–ಸುವಾಸನೆಯು, ಪೊರೆದುದು–ವ್ಯಾಪಿಸಿತು ॥೨೦॥

ತಾತ್ಪರ್ಯ:—ವಿವಾಹವು ಬಹು ವಿಜೃಂಭಣೆಯಿಂದ ನಡೆಯಿತು, ಐದನೆಯ ದಿನದಲ್ಲಿ ವಸಂತೋತ್ಸವಕ್ಕಾಗಿ, ಪನ್ನೀರು ಕುಂಕುಮಕೇಸರ ಮೊದಲಾದ ಸುವಾಸನಾ ದ್ರವ್ಯಗಳನ್ನು ಬೆರಸಿದನೀರನ್ನು ಕಡಾಯಿಗಳಿಗೆ ತುಂಬಿದರು. ವಧೂವರರ ಸಂಬಂಧಿಗಳಾದ ಸ್ತ್ರೀಯರು ಓಕುಳಿಯನ್ನಾಡಿದರು, ದೇವತೆಗಳೆಲ್ಲರೂ ಈ ವಿನೋದವನ್ನು ನೋಡಿ ಹರ್ಷವನ್ನು ತಳೆದರು, ಹರಿದನೀರಿನಿಂದ ಭೂಮಿಯೆಲ್ಲವೂ ಸುಗಂಧಮಯವಾಯ್ತು ॥೨೦॥

ಟಿಪ್ಪಣಿ:— (೧) ದಿವಸಕ್ಕೆ (ದ್ಭ) ದೆವಸ, (೨) ಸುರರನಿಕುರುಂಬ (ಷ. ತ) ॥೨೦॥

ಮೂ॥ ಅರಸಕೇಳೈತನ್ನ ಬಾಂಧವ।ಧರಣಿಪರಮಂತ್ರಿಗಳಮುನಿಮುಖ್ಯ
ರನುಗಾಯಕಪಂಡಿತರಭೂಸುರರಯಾಚಕರ॥ ಹರುಷವಿಗಿಲ್ಚದ
ರಿಸಿಕರಿರಥ। ತುರಗವಸ್ತ್ರಾಭರಣವಿಂದುಪ । ಚರಿಸಿಭೀಮನೃಪಾ

ಲನವರವರುಗಳಬೀಳ್ಕೊಟ್ಟ ॥೨೧॥

ಟೀಕೆ:— ಅರಸ-ಧರ್ಮರಾಜನೇ, ಕೇಳ್ಳೆ-ಕೇಳಯ್ಯಾ, ಭೀಮನೃಪಾಲಂ-ಭೀಮರಾಜನು, ತನ್ನ, ಬಾಂಧವ-ನಂಟರನ್ನೂ, ಧರಣಿಪರ-ದೊರೆಗಳನ್ನೂ, ಮಂತ್ರಿಗಳ-ಮಂತ್ರಿಗಳನ್ನೂ, (೧) ಮುನಿಮುಖ್ಯರನು-ಋಷಿಶ್ರೇಷ್ಠರನ್ನೂ, ಗಾಯಕ-ಸಂಗೀತಗಾರರನ್ನೂ, ಪಂಡಿತರ-ವಿದ್ವಾಂಸರನ್ನೂ, ಭೂಸುರರ-ಬ್ರಾಹ್ಮಣರನ್ನೂ, ಯಾಚಕರ-ಭಿಕ್ಷುದವರನ್ನೂ, ಹರುಷವಿಗಿಲು-ಹೆಚ್ಚಾದ ಸಂತೋಷದಿಂದ, ಆದರಿಸಿ-ಉಪಚರಿಸಿ (೨) ಕರಿ-ಆನೆ, ತುರಗ-ಕುದುರೆ, ರಥ-ತೇರು, ವಸ್ತ್ರ-ಬಟ್ಟೆ, ಆಭರಣದಿಂದ-ಒಡವೆ ಇವುಗಳಿಂದ, ಉಪಚರಿಸಿ-ಸನ್ಮಾನಮಾಡಿ, ಅವರುಗಳ-ಅವರೆಲ್ಲರನ್ನೂ, ಬೀಳ್ಕೊಟ್ಟ-ಕಳುಹಿಸಿಕೊಟ್ಟನು॥೨೧

ತಾತ್ಪರ್ಯ:— ಅನಂತರದಲ್ಲಿ ಭೀಮರಾಜನು ವಿವಾಹಮಹೋತ್ಸವಕ್ಕೆ ಬಂದಿದ್ದ, ನಂಟರು, ಸಾಮಂತರಾಜರು, ಮಂತ್ರಿಗಳು, ಮಹರ್ಷಿಗಳು, ಸಂಗೀತಗಾರರು, ಪಂಡಿತರು, ಬ್ರಾಹ್ಮಣರು, ಯಾಚಕರು ಮೊದಲಾದವರನ್ನು ಅವರವರ ತಾರತಮ್ಯಾನುಗುಣವಾಗಿ ವಸ್ತ್ರಭೂಷಣ, ದ್ರವ್ಯ, ದಕ್ಷಿಣಾದಿಗಳಿಂದ ತೃಪ್ತಿಪಡಿಸಿ, ಆನೆ, ಕುದುರೆ, ರಥ ಮೊದಲಾದ ವಾಹನಗಳನ್ನು ಕೊಟ್ಟು ಮರ್ಯಾದೆಮಾಡಿ ಎಲ್ಲರನ್ನೂ ಕಳುಹಿಸಿದನು ॥೨೧॥

ಟಿಪ್ಪಣಿ (೧) ಮೌನವ್ರತಶೀಲನಾದವನು-ಮುನಿ (ಅವ) ಮುನಿಗಳಲ್ಲಿ ಮುಖ್ಯರು-ಮುನಿಮುಖ್ಯರು (ಸ. ತ) (೨) ಕರಿತುರಗವಸ್ತ್ರಾಭರಣವು (ಸಮಾ. ದ್ವಂದ್ವ) ಇಂದೆ. ತೃ. ವಿಭಕ್ತಿಪ್ರತ್ಯಯ. ಇಂ, ಇಂದಂ, ಇಂದೆ, ಎ, ಇವೆಲ್ಲವೂ ತೃತೀಯಾವಿಭಕ್ತಿಗೆ ಬರುವ ಆದೇಶಗಳು. ॥೨೧॥

ಮೂ॥ ಅಳಿಯನನುಮನ್ನಿಸುತಮಗಳಿಗೆ। ಹೊಳೆವಮಣಿಭೂಷಣದ
ಪೆಟ್ಟಿಗೆ। ಗಳನುಗಜರಥತುರಗಮುಖ್ಯಪದಾತಿಲಲನೆಯರ॥ ಬಳು
ವಳಿಯನಿತ್ತವನಿಪತಿನಿಜ। ಬಲಸಹಿತಮಾಡಿದನುಪಯಣವ।ನುಲಿವ
ಮಂಗಳಪಾಠಕರಸಂದಣಿಯುರಭಸದಲಿ ॥೨೨॥

ಟೀಕೆ:—ಅವನಿಪತಿ-ಭೀಮರಾಜನು, ಅಳಿಯನನು, ಮನ್ನಿಸ-ಮರ್ಯಾದೆ ಮಾಡುತ್ತಾ, ಮಗಳಿಗೆ, ಹೊಳೆವ-ಪ್ರಕಾಶಿಸುವ, (೧) ಮಣಿಭೂಷಣದ-ರತ್ನಖಚಿತವಾದ ಒಡವೆಗಳ, ಪೆಟ್ಟಿಗೆಗಳನು-ಪೆಟ್ಟಿಗೆಗ

ಳನ್ನೂ, ಗಜ-ಆನೆ, ರಥ-ಬಂಡಿ, ತುರಗ-ಕುದುರೆ ಮುಖ್ಯ-ಶ್ರೇಷ್ಠವಾದ (೨)ಪದಾತಿ-ಕಾಲುಬಲ, ಲಲನೆಯರ-ದೂತಿಯರನ್ನೂ, ಬಳುವಳಿಯುಂ-ಬಳುವಳಿಯನ್ನಾಗಿ, ಇತ್ತ-ಕೊಟ್ಟನು, ಅವನಿಪತಿ-ನಳನು, ಮಂಗಳವಾತಕರ, ಸಂದಣಿಯ-ಗುಂಪಿನ, ರಭಸದಲಿ-ಶಬ್ದದಿಂದ, (೩) ನಿಜಬಲಸಹಿತ-ತನ್ನ ಸೈನ್ಯದೊಡನೆ, ಪಯಣವ-ಪ್ರಯಾಣವನ್ನು, ಮಾಡಿದನು ||೨೦||

ತಾತ್ಪರ್ಯ:— ಭೀಮರಾಜನು ಅಳಿಯನಿಗೆ ಬಹಳವಾಗಿ ಮರ್ಯಾದೆ ಮಾಡಿ, ನವರತ್ನ ಖಚಿತವಾಗಿ ಜಗಜಗಿಸುತ್ತಿರುವ ಆಭರಣಗಳನ್ನು ಪೆಟ್ಟಿಗೆಗಳಲ್ಲಿ ತುಂಬಿ ಕೊಟ್ಟದ್ದಲ್ಲದೆ, ಚತುರಂಗ ಸೈನ್ಯವನ್ನೂ, ಬಹು ಮಂದಿ ಗೌಡಿಯರನ್ನೂ, ಬಳುವಳಿಯಾಗಿ ಕೊಟ್ಟನು, ಮಾಗಧರು ನಾನಾವಿಧವಾದ ಬಿರುದುಗಳನ್ನು ಗ್ಗಡಿಸುತ್ತಿರಲು, ನಳನು ತನ್ನ ಸೇನೆಯೊಡನೆ ಪ್ರಯಾಣಕ್ಕೆ ಸಿದ್ಧನಾದನು ||೨೦||

ಟಿಪ್ಪಣಿ:— (೧) ಮಣಿಖಚಿತವಾದ ಭೂಷಣ-ಮಣಿಭೂಷಣ (ಮ. ಲೋ. ಕ. ಸ) (೨) ಪದ-ಕಾಲಿನಿಂದ, ಅತಿ-ನಡೆಯ ತಕ್ಕದ್ದು (ಅವ) (೩) ನಿಜವಾದ ಬಲ-ನಿಜಬಲ (ವಿ. ಪೂರ್ವ. ಕ) ನಿಜಬಲದಿಂದ-ಸಹಿತ-ನಿಜಬಲಸಹಿತ (ತೃ. ತ) ||೨೦||

ಮೂ|| ವರಮುಹೂರ್ತದೊಳೇರಿದನುಮಣಿ| ಕಿರಣದುನ್ನತರಥವನಳ
ಭೂ|ವರನುನಿಜಸತಿಸಹಿತಹೊಕ್ಕನುನಿಷಧಪಟ್ಟಣವ||ಮೊರೆವಶಂ
ಖಮೃದಂಗಭೇರಿಗ| ಳುರುಬಿಧಂಧಣಿರೆನಲುಮಿಗೆಮೋ| ಹರಿಸಿದ
ವುನಿಸ್ಸಾಳತತಿಘನವಾದ್ಯಘೋಷದಲಿ ||೨೩||

ಟೀಕೆ:— ನಳಭೂವರನು-ನಳರಾಜನು, ನಿಜಸತಿಸಹಿತ-ತನ್ನ ಹೆಂಡತಿಯೊಡನೆ, ವರಮುಹೂರ್ತದೊಳ್-ಶ್ರೇಷ್ಠವಾದ ಲಗ್ನದಲ್ಲಿ (೧) ಮಣಿಕಿರಣದ-ರತ್ನ ಕಾಂತಿಯಿಂದ ಕೂಡಿದ, ಉನ್ನತರಥವ ದೊಡ್ಡತೇರನ್ನು, ಏರಿದನು-ಹತ್ತಿದನು, ನಿಹಧಪಟ್ಟಣವ - ನಿಷಧಪುರವನ್ನು, ಹೊಕ್ಕನು-ಸೇರಿದನು. ಶಂಖ ಮೃದಂಗ ಭೇರಿಗಳ್-ಶಂಖ, ಮದ್ದಳೆ, ನಗಾರಿಗಳು, ಉರುಬಿ-ಹೆಚ್ಚಾಗಿ, ದಂಧಣಿರೆನಲು-ಧಣಧಣನೆ ಸದ್ದು ಮಾಡುತ್ತಿರಲು, ಘನವಾದ್ಯ ಘೋಷದಲಿ- ದೊಡ್ಡದಾದ ವಾದ್ಯಗಳ ಶಬ್ದದಿಂದ (೨) ನಿಸ್ಸಾಳತತಿ-ಕನಕತಬಟೆಗಳು, ಮಿಗೆ-ಹೆಚ್ಚಾಗಿ, ಮೋಹರಿಸಿದವು-ಸೇರಿದುವು ||೨೩||

ತಾತ್ಪರ್ಯ:— ಜ್ಯೋತಿಷ್ಕರಿಂದ ಪ್ರಯಾಣಕ್ಕೆ ಯೋಗ್ಯವಾದ

ಶುಭಮುಹೂರ್ತವನ್ನು ಗೊತ್ತುಮಾಡಿಸಿ, ನವರತ್ನ ಖಚಿತವಾದ ದೊಡ್ಡ ತೇರನ್ನು ಪತ್ನೀಸಮೇತನಾಗಿ ಹತ್ತಿದನು, ಶಂಖ, ಮೃದಂಗ, ಪಟಹ ನಿಸ್ಸಾಳ, ಮೊದಲಾದ ವಾದ್ಯಗಳು ಭೋರ್ಗರೆದುವು. ತನ್ನ ಹೆಂಡತಿ ಯೊಡನೆ ರಾಜಧಾನಿಯನ್ನು ಹೊಕ್ಕನು ॥೭೩॥

ಟಿಪ್ಪಣಿ:—(೧) ಮಣಿಗಳಂತೆ ಕಿರಣವುಳ್ಳದ್ದು-ಮಣಿಕಿರಣ (ಬ ವ್ರೀ. ಸ) (೨) ನಿಸ್ಸಾಳದತತಿ-ನಿಸ್ಸಾಳತತಿ (ಷ. ತ) ॥೭೩॥

ಮೂ॥ ಬಂದುಹೊಕ್ಕನುಅರಮನೆಯನೃಪ । ವೃಂದನಲಿಯಲುಸಕಲ
ಜನಸಹಿ। ತಂದುಸಿಂಹಾಸನಕೆಬಂದನುಸಚಿವರೊಗ್ಗಿನಲಿ ॥ ಯಿಂ
ದುಮುಖಿದಮಯಂತಿಯೊಡನಾ । ನಂದದಲಿಸಾಮ್ರಾಜ್ಯವಾಳಿದ ।
ನಂದುವರನಗರಾಧಿಪತಿಚನ್ನಿಗನಕರುಣದಲಿ॥೭೪॥

ಅಂತುಸಂಧಿ ೩ಕ್ಕೆ ಪದ-೧೯೭ಕ್ಕಂ ಮಂಗಳಮಸ್ತು.

ಟೀಕೆ:—ನೃಪವೃಂದ- ರಾಜರಸಮೂಹವು, ನಲಿಯಲು - ಸಂತೋಷಪಡುತ್ತಿರಲು, ಸಕಲಜನಸಹಿತ-ಸಮಸ್ತಪ್ರಜೆಗಳೊಡನೆ (೧) ಅರಮನೆಯ-ರಾಜಭವನವನ್ನು, ಬಂದುಹೊಕ್ಕನು - ಪ್ರವೇಶಿಸಿದನು, ಅಂದು-ಆಗ, ಸಚಿವರ-ಮಂತ್ರಿಗಳ, ಒಗ್ಗಿನಲಿ-ಜತೆಯಲ್ಲಿ, ಸಿಂಹಾಸನಕೆ-ಸಿಂಹಾಸನದ ಮೇಲೆ, ಬಂದನು-ಬಂದುಕುಳಿತನು, ಅಂದು-ಆಗ, ವರನಗರಾಧಿಪತಿ-ಶ್ರೇಷ್ಠವಾದ ಬೇಲೂರಿಗಧಿಪತಿಯಾದ, ಚೆನ್ನಿಗನ- ಚೆನ್ನಿಗರಾಯ ಸ್ವಾಮಿಯ, ಕರುಣದಲಿ-ಕೃಪೆಯಿಂದ, ಇಂದುಮುಖಿದ ಮಯಂತಿಯೊಡನೆ-ಚಂದ್ರಮುಖಿಯಾದ ದಮಯಂತಿಯೊಡನೆ, ಆನಂದದೊಡನೆ-ಹರ್ಷದಿಂದ (೨) ಸಾಮ್ರಾಜ್ಯವ-ಚಕ್ರವರ್ತಿಪದವಿಯನ್ನು, ಆಳಿದನು-ಅನುಭವಿಸಿದನು ॥೭೪॥

ತಾತ್ಪರ್ಯ:—ಸಾಮಂತ ರಾಜರೆಲ್ಲರೂ ಆನಂದಪಡುತ್ತಿರಲು, ಪ್ರಜನರಸಹಿತವಾಗಿ ಅರಮನೆಯನ್ನು ಸೇರಿದನು, ಮಂತ್ರಿಗಳೊಡನೆ ಬಂದು ತನ್ನ ಸಿಂಹಾಸನವನ್ನೇರಿ, ಬೇಲೂರು ಕೇಶವರಾಯಸ್ವಾಮಿಯ ಕೃಪೆಯಿಂದ ಬಹುಕಾಲವಾಗಿ ತನ್ನ ಹೆಂಡತಿಯಾದ ದಮಯಂತಿಯೊಡನೆ ಚಕ್ರವರ್ತಿಯಾಗಿ ಸಾಮ್ರಾಜ್ಯಸುಖವನ್ನನುಭವಿಸುತ್ತಿದ್ದ ನೆಂಬಲ್ಲಿಗೆ ಮೂರನೆಯ ಸಂಧಿ ಸಂಪೂರ್ಣವು ॥೭೪॥

ಟಿಪ್ಪಣಿ:—ಅರಸಿನಮನೆ-ಅರಮನೆ (ಷ. ತ) ಮತ್ತೊಂದುವಿಧ- ಅರಗಿನಮನೆ ಅರಮನೆ, ಸಮಾಸದಲ್ಲಿ ಅರಸು, ಅರಗು, ಎಂಬಶಬ್ದಗಳ ಕೊನೆಯ ಅಕ್ಷರಕ್ಕೆ ಲೋಪವಾಗುವುದು, (೨) ಸಮ್ರಾಜ-ಚಕ್ರವರ್ತಿ, ಸಮ್ರಾಜನಭಾವ - ಸಾಮ್ರಾಜ್ಯ, (ಚಕ್ರವರ್ತಿತ್ವ) ||೭೪||

ಪ್ರತಿಪದ ಟೀಕಾ ತಾತ್ಪರ್ಯವು ಮುಗಿದುದು.

ನಾಲ್ಕನೆ ಸಂಧಿ.

ಸೂಚನೆ|| ಮರುಗೆಪುರಜನಜೂಜಿನಲಿಪು | ಷ್ಕರಗೆರಾಜ್ಯವಸೋತು
ನಳಭೂ | ವರನುನಿಜಸತಿಸಹಿತನಡೆತಂದನುವನಾಂತರಕೆ ||

ಸೂಚನೆ—ಟೀ:— ಪುರ-ರಾಜಧಾನಿಯೆಲ್ಲವ್ರೂ, ಮರುಗೆ ಪಶ್ಚಾತ್ತಾಪ ಪಡುತ್ತಿರಲು, ನಳಭೂವರನು - ನಳರಾಜನು, ಪುಷ್ಕರಗೆ-ಪುಷ್ಕರನೆಂಬುವವನಿಗೆ (೧) ಜೂಜಿನಲಿ-ಪಂತದಿಂದ, ರಾಜ್ಯವ-ದೇಶವನ್ನು, ಸೋತು-ಸೋತವನಾಗಿ, ನಿಜಸತಿಸಹಿತ-ತನ್ನ ಹೆಂಡತಿಯೊಡನೆ, (೨) ವನಾಂತರಕೆ-ಅರಣ್ಯಮಧ್ಯಕ್ಕೆ, ನಡೆತಂದನು-ಬಂದನು||

ಸೂಚನೆ—ತಾತ್ಪರ್ಯ:— ನಳರಾಜನು ವಿಧಿವಶದಿಂದ ಜೂಜಾಡಿ ಪುಷ್ಕರ ನೆಂಬುವನಿಗೆ ರಾಜ್ಯವನ್ನೆಲ್ಲಾ ಸೋತು, ಹೆಂಡತಿಯೊಡನೆ ವನವಾಸಕ್ಕೆ ಹೊರಡಲು, ಪೌರರೆಲ್ಲರೂ ಬಹಳವಾಗಿ ದುಃಖಪಟ್ಟರು ||

ಸೂಚನೆ—ಟಿಪ್ಪಣಿ:— (೧) (ತ್ರ) ದ್ಯೂತ (೨) ವನದ ಅಂತರ ವನಾಂತರ (ಷ. ತ) ವನಕ್ಕೆ (ದ್ಭ) ಬನ,

ಮೂ|| ಕೇಳಿದೈರಾಜೇಂದ್ರಧರ್ಮನೃ | ಪಾಲನೈಷಧನತುಳಸಂಪದ |
ದೇಳಿಗೆಯನೇನೆಂಬೆಸಪ್ತದ್ವೀಪದವನಿಪರ | ಮೌಳಿಗಳುನೃಪನಂ
ಘ್ರಿಕಮಲದೊ | ಳೋಲಗಿಸುತಿಹುದಮಳಕೀರ್ತಿಛ | ಡಾಳಿಸಿತು
ತ್ರೈಜಗವನವನಿಪತಿ ಕೇಳೆಂದ ||೧||

ಟೀಕೆ:—ರಾಜೇಂದ್ರ-ರಾಜಾಧಿರಾಜನಾದ, ಧರ್ಮನೃಪಾಲ-ಧರ್ಮರಾಜನೇ, ಕೇಳಿದೈ-ಕೇಳಿದೆಯಾ ! ನೈಷಧನ-ನಳನ, (೧) ಅತುಳಸಂ

ಪದದ-ಅದ್ವಿತೀಯವಾದ ಐಶ್ವರ್ಯದ, ಏಳಿಗೆಯಂ-ಅಭಿವೃದ್ಧಿಯನ್ನು, ಏನೆಂಬೆಂ-ಎಷ್ಟೆಂದುವರ್ಣಿಸಲಿ ! (೨) ಸಪ್ತದ್ವೀಪದ- ಏಳುದ್ವೀಪಗಳ, ಅವನಿಪರ-ದೊರೆಗಳ, ಮೌಳಿಗಳು-ತಲೆಗಳು, ನೃಪನ-ದೊರೆಯ (೩) ಅಂಘ್ರಿಕಮಳದೊಳ್- ಪಾದಪದ್ಮದಲ್ಲಿ, ಓಲಗಿಸುತಿಹುದು-ಸೇವಿಸುತ್ತಿರುವುದು, ಅಮಳಕೀರ್ತಿ-ನಿರ್ಮಲವಾದ ಯಶಸ್ಸು, ತ್ರೈಜಗವಂ-ಮೂರುಲೋಕವನ್ನೂ, ಛಡಾಳಿಸಿತು-ವ್ಯಾಪಿಸಿತು, ಅವನಿಪತಿ-ದೊರೆಯೇ ? ಕೇಳ್-ಕೇಳು. ಎಂದ-ಎಂದನು ||೧||

ತಾತ್ಪರ್ಯ:— ಎಲೈ ಧರ್ಮರಾಜನೆ, ನಳರಾಜನ ಏಳಿಗೆಯನ್ನೇನೆಂದು ಹೇಳಲಿ ! ಲೋಕದಲ್ಲಿರುವ ರಾಜರೆಲ್ಲರೂ ಅವನಿಗೆ ಪಾದಾಕ್ರಾಂತರಾದರು, ಅವನಕೀರ್ತಿಯು ಎಲ್ಲ ದಿಕ್ಕುಗಳನ್ನೂ ವ್ಯಾಪಿಸಿತು ||೧||

ಟಿಪ್ಪಣಿ:— (೧) ಅತುಳವಾದ ಸಂಪದ – ಅತುಳಸಂಪದ (ವಿ. ಪೂರ್ವ. ಕ) (೨) ಸಪ್ತದ್ವೀಪ (ದ್ವಿಗು) (೩) ಕಮಲದಂತಿರುವ ಅಂಘ್ರಿ-ಅಂಘ್ರಿಕಮಲ (ಉ. ಉ. ಕ) ||೧||

ಮೂ|| ಇಂತೆಸೆವಸಂಪತ್ತಿನಲಿಭೂ|ಕಾಂತನಳಚಕ್ರೇಶನಲಿದಮ|ಯಂ
ತಿಪಡೆದಳುಪುತ್ರಕನವರಪುತ್ರಿಯೊರ್ವಳನು || ಸಂತಸದೊಳಿರಲಾ
ವಿದರ್ಭಪು| ರಾಂತರದಿನೆರೆದಿರ್ದಜನಭೂ | ಕಾಂತರೊಡನೈತಂ
ದುಹೊಕ್ಕರುತಮ್ಮನಗರಿಗಳ ||೨||

ಟೀಕೆ:— ಇಂತು-ಹೀಗೆ, ಎಸೆವ-ಪ್ರಕಾಶಿಸುವ (೧) ಸಂಪತ್ತಿನಲಿ-ಐಶ್ವರ್ಯದಿಂದ, ದಮಯಂತಿ, ಭೂಕಾಂತ ನಳಚಕ್ರೇಶನಲಿ- ನಳಚಕ್ರವರ್ತಿಯಲ್ಲಿ, ಪುತ್ರಕನ-ಮಗನೊಬ್ಬನನ್ನೂ, ವರಪುತ್ರಿಯ-ಶ್ರೇಷ್ಠಳಾದಮಗಳನ್ನು, ಒರ್ವಳನು-ಒಬ್ಬಳನ್ನೂ, ಪಡೆದಳು, (೨) ಸಂತಸದೊಳ್-ಹರ್ಷದಿಂದ, ಇರಲ್-ಇರಲು, ಆ ವಿದರ್ಭಪುರಾಂತರದಿ-ವಿದರ್ಭಪಟ್ಟಣದಲ್ಲಿ, ನೆರೆದಿರ್ದ-ಸೇರಿದ್ದ, ಜನ-ಜನವು, ಭೂಕಾಂತರೊಡನೆ-ದೊರೆಗಳಸಂಗಡ, ಐತಂದು-ಬಂದು, ತಮ್ಮ, ನಗರಿಗಳ-ಪುರಗಳನ್ನು, ಹೊಕ್ಕರು-ಸೇರಿದರು ||೧||

ತಾತ್ಪರ್ಯ:— ಹೀಗೆ ಅನ್ಯಾದೃಶ್ಯವಾದ ಸಂಪತ್ತನ್ನನುಭವಿಸುತ್ತಿರುವಾಗ ದಮಯಂತಿಯು ಒಂದು ಪುತ್ರರತ್ನವನ್ನೂ, ಸ್ತ್ರೀರತ್ನವನ್ನೂ ಪಡೆದಳು, ಈ ಉತ್ಸವಗಳನ್ನು ನೋಡುವುದಕ್ಕಾಗಿ ವಿದರ್ಭಪುರದಲ್ಲಿ ಸೇರಿದ ನಾನಾದೇಶದ ದೊರೆಗಳೂ ಅವರ ಪ್ರಜೆಗಳೂ ತಮ್ಮ

ತಮ್ಮೂರಿಗೆ ಪ್ರಯಾಣವಾಡಿದರು ||೨||

ಟಿಪ್ಪಣಿ:— (೧) ತಕಾರಾಂತ ಸಂಸ್ಕೃತಶಬ್ದದ ಕೊನೆಯ ವ್ಯಂಜನವು ಉಕರಾದೊಡನೆ ದ್ವಿತ್ವವನ್ನು ಹೊಂದಿದೆ. (೨)(ತೃ) ಸಂತೋಷ||

ಮೂ|| ಸುರಪನಾಗವಿದರ್ಭಪುರವನು| ತೆರಳುತವುರಾವತಿಗೆದಿಕ್ಪಾಲರ
ಸಹಿತನಲವಿಂದದಮಯಂತಿಯಚರಿತ್ರೆಯನು|| ಹರುಷವಿಗೆಕೊಂ
ಡಾಡುತ್ತೈತರು| ತಿರಲುಮಾರ್ಗದಿಕಂಡರಾಕಲಿ| ಪುರುಷನನುಕು
ಟಿಲಾತ್ಮಕನನಿಸ್ಸಾರಹೃದಯನನು ||೩||

ಟೀಕೆ:— ಆಗ, ಸುರಪಂ-ಇಂದ್ರನು, ವಿದರ್ಭಪುರವನು-ವಿದರ್ಭ ಪಟ್ಟಣವನ್ನು, ನಲವಿಂದ-ಸಂತೋಷದಿಂದ, ತೆರಳುತ-ಬಿಟ್ಟು ಹೊರಡುತ್ತಾ, ದಿಕ್ಪಾಲರಸಹಿತ-ದಿಕ್ಪಾಲಕರ ಸಂಗಡ, ದಮಯಂತಿಯ, ಚರಿತ್ರೆಯನು - ಕಥೆಯನ್ನು, ಹರುಷವಿಗೆ-ಬಹಳ ಸಂತೋಷದಿಂದ, ಕೊಂಡಾಡುತ-ಹೊಗಳುತ್ತಾ, ಅಮರಾವತಿಗೆ-ಸ್ವರ್ಗಕ್ಕೆ, ಐತರುತಿರಲು-ಬರುತ್ತಿರಲು, ಮಾರ್ಗದಲಿ-ದಾರಿಯಲ್ಲಿ, (೧) ಕುಟಿಲಾತ್ಮಕನ-ವಂಚಕನಾದ (೨) ನಿಸ್ಸಾರಹೃದಯನ-ಶೂನ್ಯವಾದ ಮನಸುಳ್ಳ, (೩) ಆ ಕಲಿಪುರುಷನನು-ಕಲಿಯುಗ ರೂಪನಾದ ಪುರುಷನನ್ನು ಕಂಡರು-ನೋಡಿದರು ||೩||

ತಾತ್ಪರ್ಯ:—ಇಂದ್ರನು ಅಗ್ನಿ ಮೊದಲಾಗುಳಿದ ಲೋಕಪಾಲಕರೊಡನೆ ವಿದರ್ಭ ಪುರವಂ ಬಿಟ್ಟು ಹೊರಟು ದಮಯಂತಿಯ ಚರಿತ್ರೆಯನ್ನು ಬಹುವಾಗಿ ಶ್ಲಾಘಿಸುತ್ತಾ ಸಂತುಷ್ಟಾಂತರಂಗನಾಗಿ ಅಮರಾವತಿಯಂ ಕುರಿತು ಬರುತ್ತಿರಲು, ದಾರಿಯಲ್ಲಿ ಮೋಸಗಾರನಾಗಿಯೂ, ದಯಾಶೂನ್ಯನಾಗಿಯೂ, ಇರುವ ಕಲಿಪುರುಷನು ಕಾಣಿಸಿಕೊಂಡನು||೩||

ಟಿಪ್ಪಣಿ:— (೧) ಕುಟಿಲ-ವಕ್ರವಾದ, ಆತ್ಮಕ-ಮನಸ್ಸುಳ್ಳವನು (ಬ. ವ್ರೀ) (೨) ನಿಸ್ಸಾರವಾದ ಹೃದಯವುಳ್ಳವನಾವನೋ ಅವನು ನಿಸ್ಸಾರಹೃದಯನು (ಬ. ವ್ರೀ) (೩) ಕಲಿಯೇಪುರುಷ - ಕಲಿಪುರುಷ (ಅವ. ಪೂರ್ವ. ಕ) ಅವನು ಕಲಿಪುರುಷ-ಆ ಕಲಿಪುರುಷ, (ಗಮಕ)||

ಮೂ|| ಕುರುಳುಜುಂಜುರತಲೆಯಕಗ್ಗಿನ| ಕೊರಳಕೆಂಗರಿಗಣ್ಣಮೋ
ರೆಯ| ಹರಕುಗಡ್ಡದಕೆಂಚುವಿಸೆಯಮಲಿನವದನವಲಿ || ನೆರೆದ
ವೀರಕರಾಳಭಟರಿ|ತ್ತೆರದೊಳುಕ್ಕಿನತೋಳಿನಲಿಕಲಿ| ಪುರುಷಕಾ
ಣಿಸಿಕೊಂಡನಮರೇಶ್ವರನನಸುನಗುತ ||೪||

ಟೀಕೆ:— ಕುರುಳು-ಕೂದಲಿನಿಂದ, ಜುಂಜುರು-ಗುಂಗುರಾದ ದತಲೆಯು-ತಲೆಯುಳ್ಳ, ಕಗ್ಗಿನ-ಕಪ್ಪಾದ ಕೊರಳ-ಕತ್ತುಳ್ಳ, ಕೆಂಗರಿಗಣ್ಣ-ಕೆಂಪಾದ ಕಣ್ಣುಗಳುಳ್ಳ, ಕೆಂಚುಮೀಸೆಯು-ಕೆಂಪುಮೀಸೆಯುಳ್ಳ, ಕಲಿಪುರುಷ-ಕಲಿಯು, ನೆರೆದ-ಸೇರಿದ, (೧) ವೀರಕರಾಳ ಭಟರ-ಶೂರರಾಗಿಯೂ ಭಯಂಕರರಾಗಿಯೂ ಇರುವದೂತರ (೨) ಇತ್ತೆರದೊಳ್-ಎರಡುಕಡೆಗಳಲ್ಲಿಯೂ, ಉಕ್ಕಿನ-ಕಬ್ಬಿಣದ, ತೋಳಿನಲಿ-ಬಾಹುಗಳಿಂದ, (ಕೂಡಿ) ನಸುನಗುತ-ಮುಗುಳ್ನಗೆ ನಗುತ್ತಾ, ಅಮರೇಶ್ವರನ-ಇಂದ್ರನನ್ನು, ಕಾಣಿಸಿಕೊಂಡಂ-ಕಂಡನು, ॥೪॥

ತಾತ್ಪರ್ಯ:- ಗುಂಗುರುಕೂದುಲುಳ್ಳ ತಲೆಯೂ, ಕಪ್ಪಾಗಿರುವಕೊರಲೂ ಕೆಂಪಗೆ ಹೊಳೆಯುತ್ತಿರುವ ಕಣ್ಣುಗಳೂ, ಮುಖವೂ, ಮೀಸೆಯೂ, ಕುರುಚು ಗಡ್ಡವೂ, ಕೊಳೆಬಟ್ಟೆಯೂ, ಇಂತಹ ವಿಕಾರವೇಷವುಳ್ಳವನಾದ ಕಲಿಯುನ್ನು ಉಭಯ ಪಾರ್ಶ್ವಗಳಲ್ಲಿಯೂ ಮಹಾವೀರರಾಗಿಯೂ, ಕ್ರೂರರಾಗಿಯೂ ಇರುವ ಭಟರು ಸೇವೆಮಾಡುತ್ತಿರಲು, ಈ ಇಂದ್ರಾದಿ ದೇವತೆಗಳನ್ನು ಕಂಡು ನಗುತ್ತಾ ಇಂದ್ರನನ್ನು ನೋಡಿ ಇಂತೆಂದನು ॥೪॥

ಟಿಪ್ಪಣಿ:..- (೧) ವೀರರಾದ ಕರಾಳ ಭಟರು- ವೀರಕರಾಳಭಟರು (ವಿ. ಉ. ಕ. ಸ.) (೨) ಎರಡುತೆರ-ಇತ್ತೆರ (ದ್ವಿಗು) ಎರಡೆಂಬುದಕ್ಕೆ ಸಮಾಸದಲ್ಲಿ ‹ಇತ್›, ಎಂದಾದೇಶಬಂತು ॥೪॥

ಮೂ॥ ಆರುಜಂಭಾರಿಯೆಇದೇನಿವ| ರಾರ್ಮಹಾಕರುಣಾಢ್ಯರೇಸಂ |
ಚಾರವೆತ್ತಲುನಿಮಗೆಯೆನಲಮರೇಂದ್ರನಸುನಗುತ॥ ತೋರುಹ
ಸ್ತದೊಳೆಂದನಳನಿಗೆ | ನಾರಿದಮಯಂತಿಯನುಮದುವೆಯ|ಧಾರೆ
ಯೆರೆಯಿಸಿಬಂದವೆನೆಖತಿಗೊಂಡಕಲಿರಾಯ ॥೫॥

ಟೀಕೆ:-ಆರು-ಯಾರು, (೧) ಜಂಭಾರಿಯೇ-ಇಂದ್ರನೇ, ಇದೇಂ-ಇದೇನುಇವರ್-ಈ ಜನಗಳು, ಆರ್-ಯಾರು, ಮಹಾ ಕರುಣಾಢ್ಯರೇ-ಬಹಳ ಕೃಪಾಶಾಲಿಗಳೇ, ನಿಮಗೆ, ಸಂಚಾರವು-ಗಮನವು, ಎತ್ತಲು-ಯಾವಡೆಗೆಎನಲ್-ಎಂದು ಕೇಳಲು, ಅಮರೇಂದ್ರ-ದೇವೇಂದ್ರನು, ನಸುನಗುತ-ಕಿರುನಗೆನಗುತ್ತಾ, ನಳನಿಗೆ (೨) ನಾರಿ ದಮಯಂತಿಯನು-ಹೆಂಗಸಾದ ದಮಯಂತಿಯನ್ನು, ಮದುವೆಯ, ಧಾರೆಯನು - ಉದಕಧಾರೆಯನ್ನು, ಎರೆಯಿಸಿ-ಬಿಡಿಸಿ, ಬಂದೆವು, ಎನೆ-ಎಂಬದಾಗಿ, (೩) ತೋ

ರುಹಸ್ತದೊಳ್ -ಕೈತೋರಿಸಿ, ಎಂದನು-ಹೇಳಿದನು, ಕಲಿರಾಯ-ಕಲಿ ಪುರುಷನು, ಖತಿಗೊಂಡ-ಕೋಪಗೊಂಡನು ॥೫॥

ತಾತ್ಪರ್ಯ:—ಎಲೈ ಇಂದ್ರನೇ ನಿನ್ನ ಸಂಗಡ ಬರುತ್ತಿರುವ ಇವರು ಯಾರು ? ಎಲ್ಲಿಗೆ ನೀವೆಲ್ಲರೂ ಹೋಗುತ್ತಿರುವಿರಿ, ಎಂದು ಕೇಳಲು ಇಂದ್ರನು, ಕಲಿಯಂ ಕುರಿತು ನಸುನಕ್ಕು ಅಯ್ಯಾ! ವಿದರ್ಭದೇಶಾಧಿ ಪತಿಯಾದ ನಳನಿಗೆ ದಮಯಂತಿಯನ್ನು ಕೊಟ್ಟು ಮದುವೆಮಾಡಿಸಿ ಧಾರೆಯೆರೆದು ಆ ಮಹೋತ್ಸವವನ್ನು ನೋಡಿ ಸಂತೋಷದಿಂದ ಬರುತ್ತಿದ್ದೇವೆ, ಎಂದು ಆ ಕಡೆಗೆ ಕೈ ತೋರಿಸಿ ಹೇಳಲು ಆವಾತನ್ನು ಕೇಳಿ ಕಲಿಯು ಬಹಳವಾಗಿ ಕೋಪಿಸಿಕೊಂಡು ॥೫॥

ಟಿಪ್ಪಣಿ:— (೧) ಜಂಭ-ಜಂಭನೆಂಬ ರಾಕ್ಷಸನಿಗೆ, ಅರಿ-ಶತ್ರು (ಅವ) (೨) ನಾರಿಯಾದದಮಯಂತಿ-ನಾರಿದಮಯಂತಿ (ವಿ. ಪೂರ್ವ. ಕ) (೩) ತೋರುವಹಸ್ತ-ತೋರುಹಸ್ತ (ಗಮಕ) ತೋರುಹತ್ತವೆಂಬುದು ರೂಪಾಂತವು. ॥೫॥

ಮೂ॥ ಅನಿಮಿಷರುನೀವಧಿಕಬಲರಾ। ವನಿತೆಯನುಕೈಕೊಳ್ಳಲಾರದೆ।
ಜನಪನಳನಿಂಗಿತ್ತುಬಂದಿರಿಹರಮಹಾದೇವ ॥ ಯೆನಗೆನೇಮಿಸಿಕ
ಳುಹಿನಿಮ್ಮಯ।ಮನದಬಯಕೆಯಸಲಿಸುವೆನುಕೇ।ಳೆನಲುಸುರಪ
ತಿನಸುನಗುತಕಲಿಪುರುಷಗಿಂತೆಂದ ॥೬॥

ಟೀಕೆ:—ಅನಿಮಿಷರು-ದೇವತೆಗಳಾದ, ನೀವ್-ನೀವು (೨) ಅಧಿಕಬಲರ್-ಮಹಾ ಪರಾಕ್ರಮಶಾಲಿಗಳು, ಆವನಿತೆಯನು-ಆಸ್ತ್ರೀಯನ್ನು, ಕೈಕೊಳ್ಳಲಾರದೆ - ಸ್ವಾಧೀನಮಾಡಿಕೊಳ್ಳಲಾರದೆ, ಜನಪನಳನಿಂಗೆ-ನಳರಾಜನಿಗೆ, ಇತ್ತುಬಂದಿರಿ- ಒಪ್ಪಿಸಿಬಂದಿದ್ದೀರಿ, ಹರಮಹಾದೇವಾ-ಶಿವಶಿವಾ, ಎನಗೆ-ನನಗೆ, ನೇಮಿಸಿ-ಅಪ್ಪಣೆಕೊಟ್ಟು, ಕಳುಹಿಸಿ, ನಿಮ್ಮಯ-ನಿಮ್ಮ (೩) ಮನದ-ಮನಸ್ಸಿನ, ಬಯಕೆಯ-ಕೋರಿಕೆಯನ್ನು, ಸಲಿಸುವೆನು-ಸಲ್ಲಿಸುವೆನು, ಎನೆ - ಎಂದುಹೇಳಲು, ಸುರಪತಿ-ಇಂದ್ರನು, ನಸುನಗುತ, ಕಲಿಪುರುಷಗೆ, ಇಂತು - ಈಪ್ರಕಾರವಾಗಿ, ಎಂದ-ಹೇಳಿದನು ॥೬॥

ತಾತ್ಪರ್ಯ:—ಎಲೈ ಇಂದ್ರನೇ ! ನೀವುದೇವತೆಗಳು, ಮಹಾಬಲಶಾಲಿಗಳು, ಆದರೂ ಆ ಹೆಂಗಸನ್ನು ಸ್ವಾಧೀನಮಾಡಿಕೊಳ್ಳಲಾರದೆ ನಳನಿಗೆ ಕೊಟ್ಟು ವಿಮುಖನಾಗಿ ಹೀಗೆ ಹೋಗುತ್ತಿರುವುದನ್ನು ನೋಡಿದ

ರೆ ನನಗೆ ಆಶ್ಚರ್ಯವೂ ಲಜ್ಜೆಯೂ ಉಂಟಾಗದೆ, ಆದರೂ ಚಿಂತೆಯಿಲ್ಲ, ಈಗಲೂ ನನಗೆ ಅಪ್ಪಣೆಯನ್ನು ಕೊಡಿ. ನಿಮ್ಮ ಕೋರಿಕೆಯನ್ನು ಕೈಗೂಡಿಸುವೆನು, ಎಂದು ಹೇಳಲು ಇಂದ್ರನಿಂತೆಂದನು ||೬||

ಟಿಪ್ಪಣಿ:—ದಪ್ಪೆಇಲ್ಲದವರು (ಅವ) (೨) ಅಧಿಕವಾಬಲವುಯಾರಗೋ ಅವರು ಅಧಿಕಬಲರು (ಬ, ವ್ರೀ) (೩) ಸಂಸ್ಕೃತದಸಕಾರಾಂತವಾದ, ಮನಸ್, ಶಬ್ದವು ಕಡೆಯವ್ಯಂಜನದ ಲೋಪವನ್ನು ಪಡೆದು ಕನ್ನಡಕ್ಕೆ ಲಿಂಗವಾಗಿದೆ ||೬||

ಮೂ||ಲೇಸನಾಡಿದೆಕಲಿಪುರುಷನಿನ| ಗೀಸುಪೌರುಷವುಂಟೆನಮಗಿ|
ನ್ನಾಸರೋರುಹಗಂಧಿಯಲಿಮನವಿಲ್ಲನಳನೃಪತಿ| ಈಸಮಸ್ತನೃ
ಪಾಲರಲಿಸ|ದ್ಭೂಷಣನುಶೌರ್ಯೋನ್ನತನುಕಮ|ಲಾಸನನಿಗಳವಲ್ಲ
ನಿನ್ನಲಿಹರಿವುದೇನೆಂದ ||೭||

ಟೀಕೆ:—ಕಲಿಪುರುಷ – ಕಲಿಯೇ, ಲೇಸಂ – ಒಳ್ಳೆಯಮಾತನ್ನು, ಆಡಿದೆ–ಹೇಳಿದೆ, ನಿನಗೆ, ಈಸುಪೌರುಷಂ– ಇಷ್ಟುಸಾಹಸವು, ಉಂಟೆ–ಇರುವುದೆ ? ನಮಗೆ, ಇನ್ನು (೧) ಆ ಸರೋರುಹಗಂಧಿಯಲಿ–ಸುಂದರಿಯಲ್ಲಿ, ಮನವಿಲ್ಲ–ಇಷ್ಟವಿಲ್ಲ, ನಳನೃಪತಿ–ನಳರಾಜನು, ಈ ಸಮಸ್ತನೃಪಾಲರಲಿ–ಲೋಕದಲ್ಲಿರುವರಾಜರಲ್ಲೆಲ್ಲಾ, ಸದ್ಭೂಷಣನು–ಬಹುಮರ್ಯಾದೆಯುಳ್ಳವನು, ಶೌರ್ಯೋನ್ನತನು–ಹೆಚ್ಚಾದಪರಾಕ್ರಮವುಳ್ಳವನು, (೨) ಕಮಲಾಸನನಿಗೆ– ಬ್ರಹ್ಮನಿಗೂ, ಅಳವಲ್ಲ – ಸಾಧ್ಯವಲ್ಲ, ನಿನ್ನಲಿ–ನಿನ್ನಿಂದ, ಹರಿವುದು–ಆಗತಕ್ಕದ್ದು, ಏನು – ಏನಿದೆ, ಎಂದ–ಎಂದನು ||೭||

ತಾತ್ಪರ್ಯ:—ಕಲಿಪುರುಷನೆ ಒಳ್ಳೆಯಮಾತಾಡಿದೆ, ನಿನಗೆ ಅಂತಹ ಪೌರುಷವೂ ಉಂಟೇ ! ಆದರೂ ನಾವು ಆ ಸ್ತ್ರೀಯನ್ನು ಇನ್ನು ಬಯಸುವವರಾಗಿಲ್ಲ. ನಳಚಕ್ರವರ್ತಿಯು ಪ್ರಪಂಚದಲ್ಲೆಲ್ಲಾ, ಬಹುಶೂರನೂ, ಮಾನ್ಯನೂ, ತಿಲಕಪ್ರಾಯನೂ ಆಗಿರುವನು. ಅಂತಹವನನ್ನು ನಾವು ವಿಾರಿಸುವುದು ಹೇಗಾದೀತು ? ಒಂದುವೇಳೆ ಬ್ರಹ್ಮನಿಗೂ ಸಾಧ್ಯವಲ್ಲ. ನಿನ್ನಿಂದೇನಾದೀತು ? ಎಂದನು ||೭||

ಟಿಪ್ಪಣಿ:— (೧) ಸರಃ–ಸರೋವರದಲ್ಲಿ, ರುಹ – ಹುಟ್ಟಿದುದು (ಕಮಲ) ಅದರಗಂಧದಂತೆಗಂಧ (ಸುವಾಸನೆ) ವುಳ್ಳವಳು – (ಅವ) (ಬ.ವ್ರೀ) (೨) ಕಮಲ – ತಾವರೆಯೇ – ಆಸನ – ಪೀಠವಾಗಿ ಉಳ್ಳ

ವನು (ಅವ) (ಬ. ವ್ರೀ.) ‖೭‖

ಪದ‖ ಎನಲುಖತಿಗೊಂಡೆಂದಕೇಳೆಲೆ । ಯನಿಮಿಷಾಧಿಪಯೆನ್ನ ನರಿ
ಯೆಯ| ದಿನಪನಿದಿರಲಿತಮಕೆಹಾವಳಿಯೇ ಮಹಾದೇವ ‖ ನನಗೆಸ
ರಿಯಾರಿನ್ನು ತಹೆನಾ । ವನಿತೆಯನುಕುಹಕದಲಿನಳಭೂಪನನುಕೆ
ಡಿಸಿಯೆಕಾನನಕೆಕಳುಹುವೆನುತಾನೆಂದ ‖೮‖

ಟೀಕೆ:—ಎನಲು-ಎಂದು ಹೇಳಲು (೧) ಖತಿಗೊಂಡು-ಕೋಪಿ
ಸಿಕೊಂಡು, ಎಂದ-ಎಂದನು, ಎಲೆ-ಎಲೈ, ಅನಿಮಿಷಾಧಿಪ - ದೇವೇಂ
ದ್ರನೇ ! ಕೇಳ್-ಕೇಳು, ಎನ್ನಂ-ನನ್ನನ್ನು, ಅರಿಯೆಯ- ಕಾಣೆಯಾ,
(೨) ದಿನಪನ-ಸೂರ್ಯನ, ಇದಿರಲಿ-ಮುಂದೆ, ತಮಕೆ-ಕತ್ತಲೆಗೆ, ಹಾವ
ಳಿಯೆ-ಕಾಡಿಸುವಶಕ್ತಿಯುಂಟೇ, ಮಹಾದೇವಾ, ಎನಗೆ - ನನಗೆ, ಸರಿ
ಯಾರು-ಸಮಾನರಾರು ? ಇನ್ನು-ಮುಂದೆ, ಆ ವನಿತೆಯನು-ಆ ದಮ
ಯಂತಿಯನ್ನು, ಕುಹಕದಲಿ-ಕುಯುಕ್ತಿಯಿಂದ, ತಹೆಂ - ತರುವೆನು,
ನಳಭೂಪನನು-ನಳರಾಜನನ್ನು, ಕೆಡಿಸಿಯೆ-ಹಾಳುಮಾಡಿ, ಕಾನನಕೆ-
ಅರಣ್ಯಕ್ಕೆ, ತಾನು-ನಾನು, ಕಳುಹುವೆನು-ಅಟ್ಟುತ್ತೇನೆ, ಎಂದ-ಎಂ
ಬದಾಗಿ ಹೇಳಿದನು ‖೮‖

ತಾತ್ಪರ್ಯ:—ಆ ಮಾತನ್ನು ಕೇಳಿದಕೂಡಲೆ ಕಲಿಯು ಕೋಪ್ರೋ
ದ್ದೀಪಿತನಾಗಿ ಎಲೈ ದೇವೇಂದ್ರನೆ ನಾನು ಯಾರೆಂಬುದನ್ನು ನೀನು ಕಾ
ಣೆಯೋ ! ಸೂರ್ಯನೆದುರಿಗೆ ಕತ್ತಲೆಯು ಹಾವಳಿಮಾಡುವಂತೆ ನನ್ನೆ
ದುರಿಗೆ ಪರಾಕ್ರಮವನ್ನು ತೋರಿಸುವರುಂಟೇ ನನಗೆಸಮಾನರುಯಾರು,
ನೋಡು ಈಗಲೇ ಆ ದಮಯಂತಿಯನ್ನು ವಂಚಿಸಿ ತರುವೆನಲ್ಲದೆ, ನಳ
ನನ್ನು ರಾಜ್ಯಭ್ರಷ್ಟನನ್ನಾಗಿ ಮಾಡಿ ಕಂಗೆಡಿಸಿ ಕಾಡಿಗಟ್ಟುವೆನು , ನ
ನ್ನ ಸಾಹಸವನ್ನು ನೋಡು ಎಂದು ನುಡಿದನು ‖೮‖

ಟಿಪ್ಪಣಿ:-(೧) ಖತಿಯಂಕೊಂಡು-ಖತಿಗೊಂಡು (ಕ್ರಿ. ಸ) (೨)
ದಿನ-ಹಗಲನ್ನು, ಪ-ರಕ್ಷಿಸುವನು (ಅವ) ‖೮‖

ಪದ‖ ಹರಿಹರಬ್ರಂಬಾದಿದೇವರ| ನರಸುರಾಸುರಯಕ್ಷಕಿನ್ನರ|ಗರು
ಡಗಂಧರ್ವಾದಿಸುಮನಸರೆಲ್ಲರನುಬಿಡದೆ‖ ಹುರುಳುಗೆಡಿಸುವೆಸೊ
ಕುನಳಭೂ। ವರನಮಾತೇನಿನ್ನು ಲೋಕಾಂ । ತರದೊಳೆದುರಿಲ್ಲ
ನಗೆನೀವೆಂತರಿಯರೋಯೆಂದ ‖೯‖

ಟೀಕೆ:—ಹರಿಹರ ಬ್ರಹ್ಮಾದಿದೇವರ - ವಿಷ್ಣು, ಶಿವ, ಬ್ರಹ್ಮ

ಮೊದಲಾದ ದೇವತೆಗಳನ್ನೂ, ನರ-ಮನುಷ್ಯರನ್ನು, ಸುರ-ದೇವತೆಗಳ ನ್ನೂ, ಅಸುರ-ರಾಕ್ಷಸರನ್ನೂ, ಯಕ್ಷ-ಯಕ್ಷರನ್ನೂ, ಕಿನ್ನರ-ಕಿನ್ನರರ ನ್ನೂ, ಗರುಡ-ಗರುಡರನ್ನೂ, ಗಂಧರ್ವ-ಗಂಧರ್ವರನ್ನೂ, ಆದಿ - ಇವ ರೇಮೊದಲಾದ, ಸುಮನಸರೆಲ್ಲರನು-ದೇವತೆಗಳೆಲ್ಲರನ್ನೂ, ಬಿಡದೆ-ತಪ್ಪ ದೆ, ಹುರುಳುಗೆಡಿಸುವೆ-ಬಲಹೀನರನ್ನಾಗಿ ಮಾಡುವೆನು, ನಳಭೂವರನ -ನಳರಾಜನ, ಮಾತೇನು-ವಿಷಯುವೆಷ್ಟರದು (೧) ಸಾಕು-ಸುಮ್ಮನಿ ರಿ, ಇನ್ನು, (೨)ಲೋಕಾಂತರದೊಳ್-ಯಾವಲೋಕದಲ್ಲಿಯೂ, ಎನ ಗೆ-ನನಗೆ ಇದಿರಿಲ್ಲ, ನೀವು, ಎಂತರಿಯರೋ-ಹೇಗೆಕಾಣಿರೋ, ಎಂದ-ಎಂಬದಾಗಿ ಹೇಳಿದನು ॥೯॥

ತಾತ್ಪರ್ಯ:—ತ್ರಿಮೂರ್ತಿಗಳನ್ನೂ, ಉಳಿದ ದೇವತೆಗಳನ್ನೂ, ಮನುಷ್ಯರನ್ನೂ, ರಾಕ್ಷಸರನ್ನೂ, ಯಕ್ಷ, ಕಿನ್ನರ, ಕಿಂಪುರುಷ, ಗ ರುಡ, ಗಂಧರ್ವ ಮೊದಲಾದ ದೇವತೆಗಳನ್ನೂ ನಾನು ನೆಲೆಗೆಡಿಸಬಲ್ಲೆನು. ನಳನಸುದ್ದಿಯೇತರದು ! ನನ್ನನ್ನು ಪ್ರತಿಭಟಿಸುವರು ಯಾವಲೋಕ ದಲ್ಲಿಯೂ ಇಲ್ಲ. ಎಂದು ಹೇಳಿದನು ॥೯॥

ಟಿಪ್ಪಣಿ:-- (೧) ಕ್ರಿಯಾರ್ಥಕಾವ್ಯಯ (೨) ಲೋಕ+ಅಂತರ, (ಸವರ್ಣ, ದೀ) ಲೋಕದ ಅಂತರ-ಲೋಕಾಂತರ (ಷ. ತ) ॥೯॥

ಮು॥ ನಿಮುಗೆಪೌರುಷವಿಲ್ಲನಳನಾ| ಕ್ರಮಿಸಿಕೊಂಡನುಸತಿಯಪುರು
ಷಾ| ಧಮರುನಿಮಗಿನ್ನೇಕೆಕೊಡಿವಟುವೇಷವನುಮಾನವನಗೆ॥ ಕ
ಮಲಮುಖಿಯನುನಿಮಗೆಪಟ್ಟದ| ರಮಣಿಯನುಮಾಡುವೆನು ಯೆಂ
ದುಭ್ರಮಿಸಿನುಡಿದನುಗರ್ವದಲಿಕಲಿಪುರುಷಸುರಪತಿಗೆ ॥೧೦॥

ಟೀಕೆ:—ನಿಮುಗೆ, ಪೌರುಷವಿಲ್ಲ- ಗಂಡುತನವಿಲ್ಲ, ನಳಂ-ನಳ ನು, ಸತಿಯ-ಆಹೆಂಗಸನ್ನು, ಆಕ್ರಮಿಸಿದನು-ಸ್ವಾಧೀನಪಡಿಸಿಕೊಂಡ ನು (೧) ಪುರುಷಾಧಮರು-ಅಲ್ಪರು, ನಿಮುಗೆ, ಇನ್ನೇಕೆ- (ಆಕೆಯ) ಗೊಡವೆಯೇತಕ್ಕೆ ! ಮಾನವಗೆ-ಆನಳನಿಗೆ, ವಟುವೇಷವನು- ಬ್ರಹ್ಮ ಚಾರಿಯ ರೂಪವನ್ನು, ಕೊಡಿ, ಕಮಲಮುಖಿಯನು-ಆಮಾನಿನಿಯನ್ನು ನಿಮುಗೆ, ಪಟ್ಟದ, (೨) ರಾಣಿಯನು-ಪಟ್ಟದಹೆಂಡತಿಯನ್ನಾಗಿ, ಮಾಡು ವೆನು-ಮಾಡುತ್ತೇನೆ, ಎಂದು-ಎಂಬದಾಗಿ, ಕಲಿಪುರುಷ, ಸುರಪತಿಗೆ - ಇಂದ್ರನಿಗೆ, ಭ್ರಮಿಸಿ-ಭ್ರಾಂತಿಯಿಂದ, ನುಡಿದನು-ಹೇಳಿದನು ॥೧೦॥

ತಾತ್ಪರ್ಯ:—ನಿಮುಗೆ ಕೈಯಲ್ಲಾಗದೆ ಆ ಸುಂದರಿಯನ್ನು ನಳನ

ಕೈವಶ ಮಾಡಿದಿರಿ, ನೀವು ಪುರುಷಾಧಮರು. ನಿಮ್ಮಿಂದ ಇನ್ನೇನೂ ಆಗಲಾರದು, ಈಗ ನನ್ನ ಸಾಹಸವನ್ನು ನೋಡಿ, ಖಂಡಿತವಾಗಿಯೂ, ನಳನಿಗೆ ಬ್ರಹ್ಮಚರ್ಯವನ್ನು ಕಲ್ಪಿಸಿರಿ, ಆ ದಮಯಂತಿಯನ್ನು ನಿಮಗೆ ಪಟ್ಟಮಹಿಷಿಯಾಗಿ ಮಾಡುವೆನು? ಎಂದು ಇಂದ್ರನಂ ಕುರಿತು ಹೇಳಿದನು ||೧೦||

ಟಿಪ್ಪಣಿ:—ಪುರುಷರಲ್ಲಿ ಅಧಮರು-ಪುರುಷಾಧಮರು (ಸ. ತ) (೨) (ತ್ರ) ರಾಜ್ಞೀ ||೧೦||

ಮೂ|| ಕೇಳಿಕಿವಿಮುಚ್ಚಿದನುಶಿವಶಿವ| ಭಾಳಲೋಚನನೆನುತಮನದ
ಲಿ| ಖೂಳನಾಡಿದನುಡಿಗೆಸುರಪತಿಕನಲಿಖತಿಗೊಂಡು || ಕೇಳುವಮಾ
ತುಗಳೇಕೆನಿನಗಿದು| ನೀಲಮೇಘಶ್ಯಾಮನಿಗೆಸಮ|ಪಾಳಿಯೆನಿಸು
ವನಳನೃಪಗೆಯೆರಡೆಣಿಸುವುದೆಯೆಂದ ||೧೧||

ಟೀಕೆ:— ಸುರಪತಿ-ಇಂದನು, ಕೇಳಿ, ಶಿವಶಿವ, ಭಾಳಲೋಚನನೆ-ಪರಮೇಶ್ವರನೇ ! ಎನುತ-ಎಂದುಜಪಿಸುತ್ತಾ (೧) ಕಿವಿ ಮುಚ್ಚಿದನು-ಕಿವಿಗಳನ್ನು ಕೈಯಿಂದ ಮುಚ್ಚಿಕೊಂಡನು, ಖೂಳಂ-ನೀಚನು, ಆಡಿದ-ಹೇಳಿದ, ಮಾತಿಗೆ, ಮನದಲಿ-ಮನಸ್ಸಿನಲ್ಲಿ,ಕನಲಿ-ಸಿಟ್ಟಾಗಿ, ಖತಿಗೊಂಡು-ಕೋಪಿಸಿಕೊಂಡು, ನಿನಗೆ ಇದು,ಏಕೆ, (೨) ನೀಲಮೇಘಶ್ಯಾಮನಿಗೆ-ಕಪ್ಪುಮೇಘದಂತೆ ನೀಲವರ್ಣವುಳ್ಳ (ವಿಷ್ಣುವಿಗೆ) ಸಮಪಾಳಿಯೆನಿಸುವ-ಸಮಾನನೆನಿಸುವ, ನಳನೃಪಗೆ-ನಳರಾಜನಿಗೆ, ಎರಡಂ-ಕೇಡನ್ನು, ಎಣಿಸುವುದೆ-ಹಾರೈಸಬಹುದೇ, ಎಂದ-ಎಂದನು||೧೧||

ತಾತ್ಪರ್ಯ:— ಇಂದ್ರನು ಆ ಮಾತನ್ನು ಕೇಳಿದಕೂಡಲೆ ಶಿವಶಿವಾ !ಇಂತಹ ಅನ್ಯಾಯದ ಮಾತನ್ನು ಕೇಳಬಾರದು? ಎಂದು ಕಿವಿಗಳನ್ನು ಮುಚ್ಚಿಕೊಂಡು ಕಲಿಯಾಡಿದ ಮಾತಿಗೆ ಬಹಳವಾಗಿ ಕೋಪಿಸಿ, ಎಲೈಕಲಿಯೇ ! ನೀಲಮೇಘಶ್ಯಾಮನಾದ ಆ ವಿಷ್ಣುವಿಗೆ ಸದೃಶನಾಕ ಆನಳನಿಗೆ ಕೇಡನ್ನು ಹಾರೈಸಿ ಇಂತಹ ಅವಾಚ್ಯವನ್ನಾಡಬಹುದೇ ನಿನಗೇಕೆ ಈದುರ್ಬುದ್ಧಿ.||೧೧||

ಟಿಪ್ಪಣಿ:— (೧) ಕಿವಿಯುಂಮುಚ್ಚಿದನು-ಕಿವಿಮುಚ್ಚಿದನು(ಕ್ರಿ. ಸ) (೨) ಕೇಳಾದಮಾತುಗಳ್- ಕೇಳುಮಾತುಗಳ್ (ವಿ. ಪೂರ್ವ. ಕ) (೩) ನೀಲವಾದ ಮೇಘ-ನೀಲಮೇಘ (ವಿ. ಪೂರ್ವ. ಕ.) ನೀಲಮೇಘದಂತೆ ಶ್ಯಾಮನು-ನೀಲಮೇಘಶ್ಯಾಮ (ಉ. ಪೂರ್ವ. ಕ) ||೧೧||

ಮೂ॥ ಭವಣೆಯೇಕೆಹಿಮಾಂಶುಕುಲಸಂ। ಭವನುಸುಜನೋದ್ಧಾ
ರನೃಪಕುಲ। ನಿವಹದೊಳುವಿಖ್ಯಾತನಿತ್ಯೋದ್ಧಾರನಿರ್ಮಳನು॥
ಇವಗೆವರವಿತ್ತೆವುಸದಾನೆನೆ। ದವಕಪಾತಕಹರಿವುದೆಂದಾ। ಭು
ವನಪತಿಗೆಣೆಯಾರುಲೋಕದೊಳೆಂದನಮರೇಂದ್ರ॥೧೨॥

ಟೀಕೆ (೧) ಭವಣೆ-ಭ್ರಾಂತಿಯು, ಏಕೆ-ವಿತರ್ಕ, ಹಿಮಾಂಶು ಕುಲಸಂಭವನು-ಚಂದ್ರ ವಂಶದಲ್ಲಿ ಹುಟ್ಟಿದ (೨) ಸುಜನೋದ್ಧಾರ-ಸಜ್ಜನ ರಕ್ಷಕನಾದ, ನೃಪಕುಲ ನಿವಹದೊಳು-ರಾಜವಂಶ ಸಮೂಹದಲ್ಲಿ, ವಿಖ್ಯಾತ-ಪ್ರಸಿದ್ಧನಾದ, ನಿತ್ಯೋದ್ಧಾರ-ಸರ್ವದಾದೀನರನ್ನುದ್ಧರಿಸುವ, ನಿರ್ಮಳನು-ಪರಿಶುದ್ಧನಾದವನು, ಸದಾ-ಯಾವಾಗಲೂ, ನೆನೆದವರ-ಅವನ ಸ್ಮರಣೆಮಾಡುವರ, ಪಾತಕ-ಪಾಪವು, ಹರಿವುದೆಂದು-ನಾಶವಾಗುವುದೆಂಬದಾಗಿ, ಇವನಿಗೆ- ಈನಳನಿಗೆ, ವರವಿತ್ತೆವು-ವರವನ್ನು ಕೊಟ್ಟಿದ್ದೇವೆ, ಆ ಭುವನಪತಿಗೆ - ದೊರೆಗೆ, ಲೋಕದೊಳ್ ಪ್ರಪಂಚದಲ್ಲಿ, ಎಣೆಯಾರು-ಸಮಾನರು ಯಾರು! (ಎಂಬದಾಗಿ) ಅಮರೇಂದ್ರ-ಇಂದ್ರನು, ಎಂದನು-ಹೇಳಿದನು॥೧೨॥

ತಾತ್ಪರ್ಯ:— ನಿನಗೆ ಈ ಭ್ರಾಂತಿಯೇಕೆ? ಚಂದ್ರವಂಶದಲ್ಲಿ ಹುಟ್ಟಿ ಕ್ಷತ್ರಿಯವಂಶದಲ್ಲಿ ಅಗ್ರಗಣ್ಯನಾಗಿ, ದೀನೋದ್ಧರಣದಲ್ಲಿ ಸಮರ್ಥನಾಗಿ, ಮಹಾ ಪರಿಶುದ್ಧನಾದ ಆ ನಳನಿಗೆ ಸಮಾನರಾದ ದೊರೆಗಳು ಈ ಲೋಕದಲ್ಲೇ ಇಲ್ಲ. ಅವನ ಮಹಿಮೆಯನ್ನು ನೋಡಿ ನಾವೆಲ್ಲರೂ, ಯಾರು ಆ ನಳನನ್ನು ಸರ್ವದಾ ನೆನೆವರೋ ಅಂತಹವರ ಪಾಪವೆಲ್ಲ ನಾಶವಾಗುವುದು, ಎಂದು ವರವನ್ನು ಕೊಟ್ಟಿದ್ದೇವೆ, ಎಂದು ಹೇಳಿದನು॥೧೨॥

ಟಿಪ್ಪಣಿ:— (೧) (ತ್ಸ) ಭ್ರಮಣ, (೨) ಸುಜನರ ಉದ್ಧಾರಮಾಡುವವನು-ಸುಜನೋದ್ಧಾರನು. (ಷ. ತ) ॥೧೨॥

ಮೂ॥ ಹಿಡಿಯೆಮುನ್ನವೆಹಿಡಿದಬಳಿಕದ। ಬಿಡೆನುಮತವೆನ್ನಲ್ಲಿನಿಷಧ
ನ। ನಡವಿಗೈಸದೆಮಾಣೆಮಾತಾಡದಿರಿನೀವೆನಲು। ಮಿಡುಕಿದರು
ಕಡುಪಾಪಿಯಿವತಾ। ಬಿಡನೆನುತಮನನೊಂದುಸುರಪತಿ॥ ತಡೆ
ಯುದ್ಯೆದಿದನಮರಪುರಕವನೀಶಕೇಳೆಂದ॥೧೩॥

ಟೀಕೆ:— ಮುನ್ನವೆ-ಮೊದಲು, ಹಿಡಿಯೆ-ಹಿಡಿಯುವುದಿಲ್ಲ, ಹಿಡದಬಳಿಕ-ಹಿಡದಮೇಲೆ, ಅದ-ಆಕಾರ್ಯವನ್ನು, ಬಿಡೆನು-ಬಿಡುವುದಿಲ್ಲ.

ಎನ್ನಲ್ಲಿ-ನನಗೆ, ಮತವು-ಇದೇಇಷ್ಟವು, ನಿಷಧನಂ-ನಳನನ್ನು, (೧) ಅಡವಿಗೈಸದೆ-ಕಾಡಿಗೆ ಕಳುಹಿಸದೆ, ಮಾಣೆ-ಬಿಡೆನು, ನೀವು, ಮಾತಾಡದಿರಿ-ಮಾತಾಡಬೇಡಿ, ಎನಲು-ಎಂದು ಹೇಳಲು, (೨) ಕಡುಪಾಪಿ-ನುಹಾ ಪಾಪಿಷ್ಠನಾದ, ಇವ-ಇವನು, ತಾ-ತಾನು, ಬಿಡನು-ಬಿಡುವುದಿಲ್ಲ ಎನುತ-ಎಂಬದಾಗಿ, ಮಿಡುಕಿದರು-ಹೆದರಿದರು, ಸುರಪತಿ-ಇಂದ್ರನು(೩) ಮನನೊಂದು-ವ್ಯಥೆಪಟ್ಟು, ಅಮರಪುರಕೆ-ಅಮರಾವತಿಗೆ, ತಡೆಯದೆ-ನಿಲ್ಲದೆ, ಐದಿದನು- ಹೋದನು, ಅವನೀಶ - ದೊರೆಯೇ, ಕೇಳು, ಎಂದ, ||೧೩||

ತಾತ್ಪರ್ಯ:— ನಾನು ಮುಂದಾಗಿ ಯಾವಕಾರ್ಯಕ್ಕೂ ಪ್ರವರ್ತಿಸು ವುದಿಲ್ಲ, ಹಿಡಿದರೆ ಬಿಡುವುದಿಲ್ಲ, ಇದೇ ನನ್ನಸ್ವಭಾವವು, ನಳನನ್ನು ವನವಾಸ ಮಾಡಿಸದೆ ಬಿಡೆನು, ನೀವು ಸುಮ್ಮನಿರಿ ಎಂದುಹೇಳಲು, ದೇವತೆಗಳೆಲ್ಲರೂ ಕೇಳಿ, ಅಯ್ಯೋ ಇವನು ಮಹಾಪಾಪಿ ಹಠವನ್ನು ಸಾಧಿಸದೆ ಹೋಗುವುದಿಲ್ಲ, ನಳನಿಗೆ ಏನುತೊಂದರೆ ಮಾಡುವನೋ !ಎಂದು ಹೆದರಿರಲು, ಇಂದ್ರನು ಈ ವೃತ್ತಾಂತವನ್ನು ಕೇಳಿ ಖಿನ್ನನಾಗಿ ಆ ಕ್ಷಣದಲ್ಲಿಯೇ ಸ್ವರ್ಗಲೋಕಕ್ಕೆ ತೆರಳಿದನು ||೧೩||

ಟಿಪ್ಪಣಿ:— (೧) ಅಡವಿಯಂಗೈಸದೆ-ಅಡವಿಗೈಸದೆ (ಕ್ರಿ. ಸ) ಅಡವಿಗೆ (ತ್ಸ) ಅಟವಿ, (೨) ಕಡಿದುಪಾಪಿ-ಕಡುಪಾಪಿ (ವಿ. ಪ್ರೂ್ವ. ಕ.) (೩) ಮನದಿಂನೊಂದು-ಮನನೊಂದು. (ಕ್ರಿ. ಸ) ||೧೩||

ಮೂ|| ಇಳಿದನವನೀತಳಕೆಖಳಕುಲ | ತಿಲಕನೆಂದನುತನ್ನಭಟರಿಗೆ
ನಳನೃಪನಕಟ್ಟುವಡಸಾಧ್ಯವಿದೆನಗೆಯಾತನಲಿ || ಒಲಿದಿಹಳುಜ
ಯವಧುಸುಶೀಲತೆ |ನೆಲಸಿಹುದುಮನಸಿನಲ್ಲಿದುರ್ಗಣ | ತಿಳಿಯು
ನರಸನೆನುತ್ತಹೊಕ್ಕನುನಿಷಧಪಟ್ಟಣವ ||೧೪||

ಟೀಕೆ:— (೧) ಖಳಕುಲತಿಲಕಂ-ದುಷ್ಟರಲಿ ಅಗ್ರೇಸರನಾದ ಕಲಿಯು, (೨) ಅವನೀತಳಕೆ-ಭೂಲೋಕಕ್ಕೆ, ಇಳಿದಂ-ಬಂದನು, ತನ್ನ, ಭಟರಿಗೆ-ಸೈನಿಕರಿಗೆ, ಎಂದನು-ಹೇಳಿದನು, ಏನಂದರೆ—ಎನಗೆ-ನನಗೆ, ನಳನೃಪನ-ನಳರಾಜನನ್ನು, ಕಟ್ಟುವೊಡೆ-ತಡೆಯಬೇಕಾದರೆ, ಇದು, ಅಸಾಧ್ಯವು-ದುರ್ಲಭವು, ಆತನಲಿ-ಅವನಲ್ಲಿ, ಒಲಿದು-ಪ್ರೀತಿಸಿ, ಜಯವಧು-ಜಯಲಕ್ಷ್ಮಿಯು, ಇಹಳು-ಇರುವಳು, ಮನಸನಲಿ-ಮನಸ್ಸನಲ್ಲಿ, ಸುಶೀಲತೆ-ಸದಾಚಾರವು, ನೆಲಸಹುದು-ಸ್ಥಿರವಾ

ಗಿದೆ,ಅರಸಂ-ದೊರೆಯು,ದುರ್ಗುಣ-ದುರಾಚರಣೆಗಳನ್ನು,ತಿಳಿಯಂ-ಅರಿಯನು,ಎನುತ್ತೆ-ಎಂಬದಾಗಿ ಹೇಳುತ್ತಾ,ನಿಷಧಪಟ್ಟಣವ-ನಿಷಧಪುರವನು, ಹೊಕ್ಕನು, ಪ್ರವೇಶಿಸಿದನು ||೧೪||

ತಾತ್ಪರ್ಯ: -ಖಳನಾದ ಕಲಿಯು ಭೂಲೋಕಕ್ಕೆಬಂದುತನ್ನ ಸೇವಕರಂ ಕುರಿತು-ನಳನನ್ನು ಬಂಧಿಸಿ, ತೊಂದರೆ ಪಡಿಸುವುದೇನೋ ನನಗಸಾಧ್ಯವಾಗಿದೆ, ಜಯಲಕ್ಷ್ಮಿಯು ಅವನನ್ನೇ ಒಲಿದು ನೆಲಸಿರುವಳು, ಸದಾಚಾರವು ಅವನ ಮನಸ್ಸನ್ನಾಟಿಹೋಗಿದೆ, ದುರ್ಗುಣವನ್ನರಿತವನೇಅಲ್ಲ, ಏನಮಾಡಲಿ ! ಎಂದುಹೇಳುತ್ತಾ ನಿಷಧ ನಗರವನ್ನು ಸೇರಿದನು ||೧೪||

ಟಿಪ್ಪಣಿ:— (೧) ಖಳರಕುಲ-ಖಳಕುಲ (ಷ. ತ) ಖಳಕುಲಕ್ಕೆ ತಿಲಕ-ಖಳತಿಲಕ (ಷ. ತ)(೨) ಅವನಿಯತಳ ಅವನೀತಳ (ಷ. ತ)||೧೪

ಮೂ||ಮಲ್ಲಿಗೆಯಬನಸಂಪಿಗೆಯಬನವೆಲ್ಲಕೇತಕಿಕುಸುಮಮಯಮೆ
ಳೆ । ಯೆಲ್ಲರುದ್ರಾಕ್ಷಿಗಳುಸರಸೀರುಹದಕೊಳಗಳನು || ಬೆಲ್ಲವತ್ತೆ
ಗಳಿಕ್ಷುದ್ರಾಕ್ಷೆಗ।ಳೆಲ್ಲಖರ್ಜೂರಾದಿವಸ್ತುಗ। ಳಲ್ಲದಿಲ್ಲವೃಥಾಯನ
ಳನೃಪನಾಳ್ವರಾಜ್ಯದಲಿ ||೧೫||

ಟೀಕೆ:— ಎಲ್ಲ-ಎಲ್ಲವೂ, ಮಲ್ಲಿಗೆಯ-ಮಲ್ಲಿಗೆ ಬಳ್ಳಿಯ, ವನ, ಸಂಪಗೆಯ, ಬನವು-ವನವು, ಕೇತಕಿ ಕುಸುಮಮಯ-ಕೇದಗೆಹೂಗಳಿಂದ ಕೂಡಿದುದು, ಮೆಳೆಯೆಲ್ಲ-ಪೊದೆಯೆಲ್ಲವೂ, (೧) ರುದ್ರಾಕ್ಷೆಗಳು, ಸರಸೀರುಹದ-ಕಮಲಗಳುಳ್ಳ, ಕೊಳಗಳನು, (೨) ಬೆಲ್ಲವತ್ತಗಳು-ಬೇಲದಗಿಡಗಳು, ಇಕ್ಷು-ಕಬ್ಬು, ದ್ರಾಕ್ಷೆಗಳು-ದ್ರಾಕ್ಷೆಯ ಬಳ್ಳಿಗಳು, ಎಲ್ಲ, ಖರ್ಜೂರಾದಿ ವೃಕ್ಷಗಳು, ಖರ್ಜೂರ ಮೊದಲಾದ ಫಲವೃಕ್ಷಗಳು, ಅಲ್ಲದೆ-ಹೊರತು, ನಳನೃಪಂ-ನಳರಾಜನು, ಆಳ್ವ-ಪಾಲಿಸುವ, ರಾಜ್ಯದಲ್ಲಿ-ದೇಶದಲ್ಲಿ, ವೃಥಾಯ-ವ್ಯರ್ಥವಾದ ಗಿಡ ಮರ ಮೊದಲಾದವು, ಇಲ್ಲ-ಇಲ್ಲವು ||೧೫||

ತಾತ್ಪರ್ಯ:— ಆ ನಳರಾಜನ ದೇಶದಲ್ಲಿ ಮಲ್ಲಿಗೆ, ಸಂಪಗೆ, ಕೇದಗೆ, ಮೊದಲಾದ ಸುವಾಸನೆಯುಳ್ಳ ಪುಷ್ಪಗಳನ್ನು ಬಿಡುವ ಪೊದರು (ಬೇಲಿ) ಗಳೂ, ಬೇಲ, ಕಬ್ಬು, ದ್ರಾಕ್ಷೆ, ಖರ್ಜೂರ ಮೊದಲಾದ ಫಲವೃಕ್ಷಗಳೂ ಇರುವವೇಹೊರತು, ನಿರ್ಗಂಧ ಕುಸುಮವುಳ್ಳ, ಅಥವಾ ಹೂವನ್ನೂ ಹಣ್ಣನ್ನೂ ಕೊಡದ ಮರಗಳೂ, ಮುಳ್ಳಿನ ಪೊದರೂ

ಇರಲಿಲ್ಲ ||೧೫||

ಟಿಪ್ಪಣಿ:— (೧) ರುದ್ರ-ಈಶ್ವರನ, ಅಕ್ಷ-ಕಣ್ಣಿನಿಂದಹುಟ್ಟಿದುವು (ಅವ.) ಈಶ್ವರನು ತ್ರಿಪುರ ಸಂಹಾರ ಕಾಲದಲ್ಲಿ ಕಣ್ಣೀರನ್ನು ಬಿಡಲು ಇವೆಲ್ಲವೂ ನೆಲದಲ್ಲಿ ಬಿದ್ದು ರುದ್ರಾಕ್ಷಗಳಾದುವೆಂದು ಶ್ರುತಿಯಲ್ಲಿಹೇಳಿದೆ. (೨) (ತ್ಸ) ಬಿಲ್ವಪತ್ರ, ||೧೫||

ಮೂ|| ಇಲ್ಲವೆನ್ನರುಬೇಡಿದರೆಬಿಡ | ರಲ್ಲಿಪಾಡಿನಪಂಥಗಳನುಡಿ| ಯೊ
ಲ್ಲರನೃತವನಾಡರಲ್ಲಿಹ ಸತ್ಯನಿರ್ಮಳರು || ಎಲ್ಲರೊಳಗತಿಹಿತರು
ಕ್ರೋಧಗ | ಳಿಲ್ಲದಿಹಸದ್ಧರ್ಮಜೀವಿಗ | ಳಲ್ಲಿಮೆರೆದರುಸುಜನ
ರಾನಳನೃಪನರಾಜ್ಯದಲಿ ||೧೬||

ಟೀಕೆ:—ಅಲ್ಲಿ-ಆಪುರದಲ್ಲಿ,ಬೇಡಿದರೆ-ಯಾಚಿಸಿದರೆ,ಇಲ್ಲವೆನ್ನರು-ಇಲ್ಲವೆಂದು ಹೇಳುವುದಿಲ್ಲ, ಪಾಡಿನಪಂಥಗಳ-ಜೂಜುಮೊದಲಾದನುಡಿಯ ಮಾತುಗಳನ್ನು, ಬಲ್ಲರು-ಅಪೇಕ್ಷಿಸರು, (೧) ಅನೃತವಂ-ಸುಳ್ಳನ್ನು, ಆಡರ್-ಹೇಳುವುದಿಲ್ಲ, ಅಲ್ಲಿಹ-ಅಲ್ಲಿರುವ (೨) ಸತ್ಯ ನಿರ್ಮಳರು-ಸತ್ಯದಿಂ ಪರಿಶುದ್ಧರಾದ ಜನಗಳು, ಎಲ್ಲರೊಳಗೆ-ಸಕಲಪ್ರಾಣಿಗಳಲ್ಲಿಯೂ, ಅತಿಹಿತರು-ಬಹುಪ್ರೀತಿಯುಳ್ಳವರು, ಕ್ರೋಧಗಳ್- ಅಸೂಯೆಗಳು, ಇಲ್ಲದಿಹ (೨) ಸದ್ಧರ್ಮ ಜೀವಿಗಳ್-ಧರ್ಮಮಾರ್ಗವನ್ನರಿತು ಜೀವಿಸುವರು, (ಇಂತಹ) ಸುಜನರ್-ಸತ್ಪುರುಷರು, ಆನಳನೃಪನ ರಾಜ್ಯದಲಿ-ನಳರಾಜನದೇಶದಲ್ಲಿ, ಅಲ್ಲಿ, ಮೆರೆವರು-ಪ್ರಕಾಶಿಸುವರು ||೧೬

ತಾತ್ಪರ್ಯ:— ಆ ಪುರದಲ್ಲಿ ಕೇಳಿದುವನ್ನು ಇಲ್ಲವೆಂದು ಯಾರೂ ಹೇಳುತ್ತಿರಲಿಲ್ಲ, ಪರಿಶುದ್ಧಾತ್ಮರು, ಸರ್ವಭೂತ ದಯಾಪರರು, ಕಾಮಕ್ರೋಧಾದಿಗಳಿಲ್ಲದವರು, ಸ್ವಧರ್ಮದಿಂದ ಜೀವಿಸುತ್ತಿದ್ದರಲ್ಲದೆ, ಎಷ್ಟುಕಷ್ಟವು ತೋರಿದರೂ ಅನ್ಯಧರ್ಮವನ್ನಾಚರಿಸುತ್ತಿರಲಿಲ್ಲ, ಇಂತಹ ಸುಜನರೇ ನಿಷಧಪುರದಲ್ಲಿ ವಾಸವಾಗಿದ್ದರು ||೧೬||

ಟಿಪ್ಪಣಿ: — (೧) ಋತವಲ್ಲದುದು-ಅನೃತ (ನಞ್,ತ) (೨)ಸದ್ಧರ್ಮದಿಂದ ಜೀವಿಗಳು-ಸದ್ಧರ್ಮಜೀವಿಗಳು, (ತೃ.ತ) ಸತ್+ಧರ್ಮ-ಸದ್ಧರ್ಮ (ಜಶ್ತ್ವ) ||೧೬||

ಮೂ|| ಪತಿಯೊಬಿಗೆವಂಚಿಸರುಸತಿಯರು | ಸುತರುಪಿತೃಗಳನುಡಿಗಳ
ನುತ|| ಪತಿಗಳೆಯರಾಚಾರವರ್ಣಾಶ್ರಮದಧರ್ಮದಲಿಮುಯುತರು
ಪರಿಟಕೃಭಾವಪ | ವ್ರತನಿಯುವನೇಮದಲಿಜನಸಂಮತವೊಳೆ

ಸೆದೊಪ್ಪುವರುನೈಷಧನೃಪನರಾಜ್ಯದಲಿ ||೧೭||

ಟೀಕೆ:—ನೈಷಧನೃಪನ-ನಳನ, ರಾಜ್ಯದಲ್ಲಿ-ದೇಶದಲ್ಲಿ, ಸತಿಯರು-ಹೆಂಗಸರು, ಪತಿಯ-ಗಂಡನ, ಅಡಿಗೆ-ಪಾದಕ್ಕೆ, ವಂಚಿಸರು-ದ್ರೋಹಮಾಡರು, ಸುತರು-ಮಕ್ಕಳು, (೧) ಪಿತೃಗಳ-ತಾಯಿತಂದೆಗಳ, ನುಡಿಗಳನ್ನು-ಮಾತುಗಳನ್ನು, ತಾವ್-ತಾವು, ಅತಿಗಳೆಯರು-ತಿರಸ್ಕರಿಸರು, ಆಚಾರ-ಒಳ್ಳೆಯನಡತೆಯೂ, ವರ್ಣ-ಜಾತಿಯೂ (೨) ಆಶ್ರಮನ-ಆಶ್ರಮಗಳೂ, ಇವುಗಳ, ಧರ್ಮದಲಿ-ಅನುಸಾರವಾಗಿ, ಮತಿಯುತರು-ಬುದ್ಧಿಯುಳ್ಳವರು, ಹರಿಭಕ್ತಿ ಭಾವದ-ವಿಷ್ಣುಭಕ್ತಿಯುಳ್ಳ, ವ್ರತನಿಯಮನೇಮದಲಿ-ವ್ರತಾಚರಣೆಯ ನಿರ್ಬಂಧದಲ್ಲಿಯೂ, ಜನಸಂಮತದೊಳ್- ಜನಗಳಿಗೆ ಸಂತೋಷ ವನ್ನುಂಟುಮಾಡುದರಲ್ಲಿಯೂ, ಒಪ್ಪುವರು-ಶೋಭಿಸುವರು, ||೧೭||

ತಾತ್ಪರ್ಯ:— ನಳನಾಳುವರಾಜ್ಯದಲ್ಲಿ ಸ್ತ್ರೀಯರು ಪತಿಗಳಿಗೆ ವಂಚನೆಮಾಡದೆ, ಭಕ್ತಿಯಿಂದಿರುತ್ತಿದ್ದರು. ಮಕ್ಕಳು ತಂದೆ ತಾಯಿಗಳ ಮಾತನ್ನು ಮೀರುತ್ತಿರಲಿಲ್ಲ, ಪ್ರಜೆಗಳೆಲ್ಲರೂ, ವರ್ಣಾಶ್ರಮ ಧರ್ಮಗಳನ್ನೂ, ಸದಾಚಾರಗಳನ್ನೂ ಬಿಡದೆ, ವ್ರತಾನುಷ್ಠಾನಗಳಿಂದ ವಿಷ್ಣು ಭಕ್ತಿ ತತ್ಪರರಾಗಿ ಪರೋಪಕಾರನಿರತರಾಗಿ ಇತರರಿಗೆ ಸಂತೋಷವನ್ನುಂಟುಮಾಡುವುದೇ ಉತ್ತಮವಾದ ವ್ರತವೆಂದೆಣಿಸಿದ್ದರು, ||೧೭||

ಟಿಪ್ಪಣಿ: — (೧) ಮಾತೃವ್ರೂ ಪಿತೃವ್ರೂ-ಪಿತೃಗಳು (ಏಕಶೇಷ) (೨) ಬ್ರಹ್ಮಚರ್ಯ ಗಾರ್ಹಸ್ಥ್ಯ, ವಾನಪ್ರಸ್ಥ, ಸಂನ್ಯಾಸ ಎಂಬ ನಾಲ್ಕುವಿಧವಾದ ಆಶ್ರಮಗಳುಂಟು, ||೧೭||

ಮೂ|| ಅಲ್ಲಿತಿರುಗಿದಬೀದಿಬೀದಿಗ | ಳಲ್ಲಿಪುರಜನರರಿಯದಂತಿರ | ಲ
ಲ್ಲಿಮಾಯಾರೂಪಿನಿಂದಪಿಶಾಚನಂದದಲಿ || ಸಲ್ಲಲಿತಶಿವವಿಷ್ಣುಭ
ಕ್ತರಿಗೆಲ್ಲನಯವಿದರಾದಸುಜನರ |ನೆಲ್ಲಕಾಣುತಬಂದನವರಮನೆಗಾ
ಗಿಕಲಿರಾಯ || ೧೮||

ಟೀಕೆ-ಅಲ್ಲಿ-ಆ ಸ್ಥಳದಲ್ಲಿ,(೧)ಬೀದಿಬೀದಿಗಳಲ್ಲಿ-ಪ್ರತಿಒಂದು ಬೀದಿಯಲ್ಲಿಯೂ, ಪುರಜನರ್-ಊರಿನಜನರು, ಅರಿಯದಂದದಲಿ-ತಿಳಿಯದಹಾಗೆ ಅಲ್ಲಿ, ಮಾಯಾರೂಪಿನಿಂದೆ-ಮರೆಯಾದಆಕಾರದಿಂದ, ಪಿಶಾಚನಂದದಲಿ-ಪಿಶಾಚದಂತೆ, ತಿರುಗಿದನು-ಸಂಚರಿಸಿದನು, ಸಲ್ಲಲಿತ-ಮೃದುವಾದ(೨) ಶಿವ ವಿಷ್ಣುಭಕ್ತರಿಗೆ-ಶಿವಭಕ್ತರಿಗೂ ವಿಷ್ಣುಭಕ್ತರಿಗೂ, ಎಲ್ಲನಯವಿ

ದರಾದ- ನ್ಯಾಯುವೆಲ್ಲವನ್ನೂ ತಿಳಿದಿರುವ, ಸುಜನರಂ-ಸಜ್ಜನರನ್ನು, ಎಲ್ಲಕಾಣುತ-ಎಲ್ಲವನ್ನೂ ನೋಡುತ್ತಾ, ಕಲಿರಾಯು-ಕಲಿಪುರುಷನು, ಅರಮನೆಗಾಗಿ-ಅರಮನೆಗೆಂದು, ಬಂದಂ-ಬಂದನು ||೧೪||

ತಾತ್ಪರ್ಯ:—ಆ ನಿಷಧಪುರದ ಬೀದಿಯಲ್ಲಿ, ಯಾರೂಕಾಣದಂತೆ ತಿರುಗುತ್ತಾ, ಅಲ್ಲಿರುವ ಮಹಾಭಕ್ತಿ ಪರಾಯಣರಾದ ಸುಜನರನ್ನು ನೋಡುತ್ತಾ ಅರಮನೆಯ ಸಮೀಪಕ್ಕೆ ಬಂದನು ||೧೪||

ಟಿಪ್ಪಣಿ:— (೧) (ತ್ರ) ವೀಥಿ, ಬೀದಿಬೀದಿ-ವೀಪ್ಸಾರ್ಥದಲ್ಲಿ ದ್ವಿರುಕ್ತಿಬಂದಿದೆ. (೨) ಶಿವನೂ ವಿಷ್ಣುವೂ-ಶಿವವಿಷ್ಣುಗಳು(ದ್ವಂದ್ವ) ಶಿವವಿಷ್ಣುಗಳಭಕ್ತರು (ಷ. ತ) ||೧೪||

ಮೂ|| ಮುರಿದುನೋಡಿದನಲ್ಲಿತೆಂಗಿನ | ಮರಗಳುನ್ನತವಿವಿಧವೃಕ್ಷ
ದ | ಹೊರಗೆಯಲಿಕಣ್ಗೆಸೆವನಗರೋದ್ಯಾನವೀಥಿಯಲಿ|| ಉರುತ
ರದೊಳಿಹಅರ್ಕಪತ್ರದ | ತರುವಿನಲಿನೆಲಸಿರ್ದಬಹುದಿನ | ವರಸ
ಕೇಳ್ಕಲಿಪುರುಷನಿತ್ತಲುರಾಜಭವನದಲಿ ||೧೫||

ಟೀಕೆ:— ಅಲ್ಲಿ, ಮುರಿದು ನೋಡಿದನು-ತಿರುಗಿನೋಡಿದನು, ತೆಂಗಿನಮರಗಳ, ಉನ್ನತ ವಿವಿಧವೃಕ್ಷಗಳ-ಎತ್ತರವಾಗಿ ಬೆಳೆದಿರುವ ಬಗೆಬಗೆಯ ಮರಗಳ,ಹೊರಗೆಯಲಿ-ಗುಂಪಿನಲ್ಲಿ, ಕಣ್ಗೆ-ಕಣ್ಣುಗಳಿಗೆ, ಎಸೆವ-ಪ್ರಕಾಶಿಸುವ(೧) ನಗರೋದ್ಯಾನವೀಥಿಯಲಿ-ಪಟ್ಟಣದ ಉದ್ಯಾನದಬೀದಿಯಲಿ, ಉರುತರದೊಳು-ಎತ್ತರವಾಗಿ, ಇಹ-ಇರುವ (೨) ಅರ್ಕಪತ್ರದ-ಎಕ್ಕದೆಲೆಯ, ತರುವಿನಲಿ-ಗಿಡದಲ್ಲಿ, ಕಲಿಪುರುಷಂ-ಕಲಿಯು, ಇತ್ತಲು-ಈಕಡೆ, ರಾಜಭವನದಲಿ-ಅರಮನೆಯಲ್ಲಿ, ಬಹುದಿನಂ-ಅನೇಕದಿನಗಳವರಿಗೆ, ನೆಲಸಿರ್ದ-ಸೇರಿಕೊಂಡಿದ್ದನು, ಅರಸ-ದೊರೆಯೇ, ಕೇಳ್, ಎಂದ-ಎಂಬದಾಗಿಹೇಳಿದನು ||೧೫||

ತಾತ್ಪರ್ಯ:— ಅರಮನೆಯ ಸಮೀಪದಲ್ಲಿರುವ ಉದ್ಯಾನವನದಲ್ಲಿ ತಿರುಗಾಡುತ್ತಾ ಅತ್ಯುನ್ನತವಾಗಿ ಬೆಳೆದಿರುವ ತೆಂಗಿನಮರ ಮೊದಲಾದ ಅನೇಕ ವೃಕ್ಷಗಳನ್ನು ನೋಡುತ್ತಾ, ತನ್ನವಾಸಕ್ಕೆ ಯೋಗ್ಯವಾದ ವೃಕ್ಷವಾವುದೆಂದು ಹುಡುಕುತ್ತಾ, ದೊಡ್ಡ ಎಲೆಗಳಿಂದ ತುಂಬಿ ದೊಡ್ಡದಾಗಿ ಬೆಳೆದಿರುವ ಒಂದು ಎಕ್ಕದ ಗಿಡವನ್ನು ನೋಡಿ ಅದರಲ್ಲಿ ಬಹುದಿನಗಳ ವರಿಗೆ ವಾಸಮಾಡುತ್ತಾ ಕಾಲವನ್ನು ನಿರೀಕ್ಷಿಸುತ್ತಿದ್ದನು ||೧೫||

ಟಿಪ್ಪಣಿ:— (೧) ನಗರ+ಉದ್ಯಾನ-ನಗರೋದ್ಯಾನ (ಗುಣ)

ಉದ್ಯಾನಕ್ಕೆ (ದ್ವಿ) ಉಜ್ಜಣೆ (೨) ಅರ್ಕದ ಪತ್ರ-ಅರ್ಕಪತ್ರ (ಷ.ತ) ಅರ್ಕಕ್ಕೆ (ದ್ವಿ) ಎಕ್ಕೆ ॥೧೯॥

ಮೂ॥ ಕರಿಸಿದನುನಳನೃಪತಿಮುನಿಮು । ಖ್ಯರನುಭೂಸುರವರ್ಗವ
ನುಸ । ತ್ಕರಿಸಿಜಪತಪಹೋಮಯಜ್ಞಾದಿಗಳನನುಕರಿಸಿ ॥ ಸು
ರರಸಂತರ್ಪಣೆಯೊಳಿರುತಿಹ । ನರಸನನುದಿನಪೂರ್ವಜನ್ಮಾಂ ।
ತರದಫಲವದನರಿಯೆಬಂದುದುಕಾಲಗತಿನೃಪಗೆ ॥೨೦॥

ಟೀಕೆ:— ನಳನೃಪತಿ-ನಳರಾಜನು, ಮುನಿಮುಖ್ಯರನು-ಋಷಿಶ್ರೇಷ್ಠರನ್ನು, ಕರಸಿದನು-ಬರಮಾಡಿದನು, ಭೂಸುರವರ್ಗವನು-ಬ್ರಾಹ್ಮಣ ಸಮೂಹವನ್ನು, ಸತ್ಕರಿಸಿ-ಮನ್ನಣೆಮಾಡಿ, ಜಪ-ಜಪವನ್ನು, ತಪ-ತಪಸ್ಸನ್ನೂ, ಅನುಕರಿಸಿ-ಮಾಡುತ್ತಾ, ಅರಸನು-ದೊರೆಯು ಸುರರ-ದೇವತೆಗಳ, ಸಂತರ್ಪಣೆಯೊಳ್-ತೃಪ್ತಿಯಲ್ಲಿ, ಇರುತಿಹಂ-ಇರುತ್ತಿರುವನು, ಪೂರ್ವ-ಹಿಂದೆ ಅನುಭವಿಸಿದ, ಜನ್ಮಾಂತರದ-ಬೇರೆ ಜನ್ಮಗಳ, ಫಲವ-ಫಲವನ್ನು, ಅದಂ-ಅದನ್ನು ಅರಿಯೆ-ಕೇಳಿತಿಳಿದ್ದು ಕೊಳ್ಳಲು, ನೃಪಗೆ-ದೊರೆಗೆ (೨) ಕಾಲಗತಿ-ಕಾಲಾನುಸಾರವಾದ ದುರ್ಗತಿಯು, ಬಂದುದು-ಬಂತು ॥೨೦॥

ತಾತ್ಪರ್ಯ:— ನಳರಾಜನು ಬಹುಮಂದಿ ಋಷಿಗಳನ್ನು ಕರೆಯಿಸಿ ಬ್ರಾಹ್ಮಣರಿಗೆ ನಾನಾವಿಧ ಸತ್ಕಾರವನ್ನು ಮಾಡಿ, ಮಂತ್ರ ಜಪಗಳನ್ನೂ, ತಪಸ್ಸನ್ನೂ, ಹೋಮಾದಿಗಳನ್ನೂ, ಯಜ್ಞಗಳನ್ನೂ ಮಾಡಿ ದೇವತೆಗಳನ್ನು ಹವಿರ್ಭಾಗದಿಂದ ತೃಪ್ತಿಪಡಿಸುತ್ತಾ ಕರ್ಮಠನಾಗಿದ್ದು, ಕಾಲವನ್ನು ಕಳೆಯುತ್ತಿದ್ದನು. ಆ ಮಹರ್ಷಿಗಳನ್ನು ಕೇಳಿ ತನ್ನ ಜನ್ಮಾಂತರ ವಿಷಯಗಳನ್ನೆಲ್ಲಾ ತಿಳಿದುಕೊಳ್ಳುತ್ತಿರಲು, ಅವರು ಹೇಳಿದಪ್ರಕಾರ ತನಗೆ ಕಾಲಾಧೀನತೆಯಿಂದ ಹೀನಸ್ಥಿತಿಯುಂಟಾಗುವ ಸಮಯವಿದೇ ಎಂಬುದನ್ನರಿತನು ॥೨೦॥

ಟಿಪ್ಪಣಿ:— (೧) ಯಜ್ಞಕ್ಕೆ (ದ್ವಿ) (ಜನ್ನ) ಯಜ್ಞ+ಆದಿ-ಯಜ್ಞಾದಿ (ಸ. ದೀ. ಸಂ) ಯಜ್ಞವೇ ಆದಿಯಾದುವು, ಯಜ್ಞಾದಿಗಳು (ಬ. ವ್ರೀ.) (೨) ಕಾಲದಗತಿ-ಕಾಲಗತಿ (ಷ. ತ) ಕಾಲ-ಕಪ್ಪು, ಯಮ (ಅವ) ॥೧೨॥

ಮೂ॥ ಒಂದುದಿವಸದೊಳಾಗನೃಪನಿಗೆ । ಬಂದುದಲ್ಪಾಚಮನಕಾ
ಲವೊ । ಳೊಂದುಶುದ್ಧಾಚಮನವಿಲ್ಲದೆಮರೆದುನೀರ್ಗುಡಿಯೆ ॥

ಇಂದುಯೆನಗಿದುಸಮಯವೆಂದಾ | ನಂದದಲಿಕಲಿಪುರುಷರಾಯ
ನ | ಸಂಧಿಸಿದವಿಧಿವಶವತಪ್ಪಿಸಲಾರಿಗಳವೆಂದ ॥೨೧॥

ಟೀಕೆ!—ಆಗ, ಒಂದು ದಿವಸದೊಳ್ - ಒಂದು ದಿನದಲ್ಲಿ, ನೃಪನಿಗೆ-ದೊರೆಗೆ, ಬಂದುದು-(ಹೀನಗತಿಯು) ಪ್ರಾಪ್ತವಾಯಿತು (೧) ಅಲ್ಪಾಚಮನದ-ಬಾಯಿಮುಕ್ಕಳಿಸಿದ, ಕಾಲದೊಳ್ - ಕಾಲದಲ್ಲಿ, (೨) ಒಂದು ಶುದ್ಧಾಚಮನವಿಲ್ಲದೆ-ಶುದ್ಧಾಚಮನ ವ್ರೊಂದನ್ನೂ ಮಾಡದೆ, ಮರೆದು, (೩) ನೀರ್ಗುಡಿಯೆ-ನೀರನ್ನು ಕುಡಿಯಲು, ಕಲಿಪುರುಷ - ಕಲಿಯು, ಇಂದು-ಈದಿನ, ಎನಗೆ-ನನಗೆ, ಇದು, ಸಮಯಂ - ಕಾಲವು, ಎದ್ದು, ಆನಂದದಲಿ-ಸಂತೋಷದಲ್ಲಿ, ರಾಯನ- ದೊರೆಯನ್ನು, ಸಂಧಿಸಿದನು-ಸೇರಿದನು, ವಿಧಿವಶವ-ದೈವಾಧೀನತೆಯನ್ನು, ತಪ್ಪಿಸಲು-ಪರಿಹರಿಸಲು, ಆರಿಗೆ - ಯಾರಿಗೆ, ಅಳವು - ಸಾಧ್ಯವಾಯಿತು ? ಎಂದ-ಎಂದನು. ॥೨೧॥

ತಾತ್ಪರ್ಯ:—ಅದೇ ಪ್ರಕಾರವಾಗಿ ಒಂದುದಿನ ಕಾಲಗತಿಯುಂದ ನಳನಿಗೆ ದುರ್ದೆಶೆಯು ಪ್ರಾಪ್ತವಾಗುವ ಕಾಲವ್ರೊದಗಿತು. ಆದಕಾರಣ ಅವನು ಒಂದುದಿನ ಅಲ್ಪಶಂಕೆಯನ್ನು ತೀರಿಸಿಕೊಂಡು ಬಾಯಿಮುಕ್ಕಳಿದ ಮೇಲೆ ಶುದ್ಧಾಚಮನ ಮಾಡುವುದನ್ನು ಅಕಸ್ಮಾತ್ ಮರೆತು ನೀರಡಿಕೆಯನ್ನು ತೀರಿಸುವುದಕ್ಕಾಗಿ ನೀರನ್ನು ಕುಡಿಯಲು, ಕಲಿಯು ಈ ದಿನದಲ್ಲಿ ನನಗೆ ತಕ್ಕ ಸಮಯವು ಸಿಕ್ಕಿತೆಂದು ಆನಂದದೊಡನೆ ನಳನ ಬಳಿಗೆ ಬಂದನು, ವಿಧಿಯನ್ನು ಮೀರುವುದು ಯಾರಿಗೆ ಸಾಧ್ಯವು. ॥೨೧॥

ಟಿಪ್ಪಣಿ:-- (೧) ಅಲ್ಪ (ಶಂಕಾರ್ಥವಾದ) ಆಚಮನ- ಅಲ್ಪಾಚಮನ (ಲು. ಮ. ಕ. ಸ.) (೨) ಶುದ್ಧಾರ್ಥವಾದ ಆಚಮನ- ಶುದ್ಧಾಚಮನ (ಲು. ಮ. ಕ. ಸ) ಒಂದಾದ ಶುದ್ಧಾಚಮನ-ಒಂದುಶುದ್ಧಾಚಮನ (ದ್ವಿಗು) (೩) ನೀರಂಕುಡಿಯೆ-ನೀರ್ಗುಡಿಯೆ (ಕ್ರಿ. ಸ)"೨೧॥

ಮೂ॥ ಕಪಟಭೂಸುರವೇಷದಲಿನಿ | ಷ್ಕಪಟ ನಳಭೂಪನನುಕೆಡಿಸುವ | ವುಪಮೆಯೆನುತಾನೆನೆದುಬಂದನುಪುಷ್ಕರನಬಳಿಗೆ ॥ ನಿಪುಣನೆಂದನುತಿರೆಗೆನಳಭೂ | ಪತಿಯುಸುಖನೆನೆಕೇಳಿಬಂದೆನು | ನೃಪದೆಸೆಗೆಹೆದರದರುನಿನಗಹುದಖಿಳಸಾಮ್ರಾಜ್ಯ ॥೨೨॥

ಟೀಕೆ:—ಕಪಟ ಭೂಸುರವೇಷದಲಿ - ಕಪಟ ಬ್ರಾಹ್ಮಣನವೇಷದಿಂದ, ನಿಷ್ಕಪಟ ನಳಭೂಪನನು - ಕಪಟವನ್ನರಿಯದ ನಳರಾಜ

ನನ್ನು, ಕೆಡಿಸುವ-ಹಾಳುಮಾಡುವ, ಉಪಮೆಯನು – ರೀತಿಯನ್ನು, ತಾಂ-ತಾನು, ನೆನೆದು-ಆಲೋಚಿಸಿ, ಪುಷ್ಕರನ, ಬಳಿಗೆ-ಸಮೀಪಕ್ಕೆ, ಬಂದನು, ನಿಪುಣಂ-ಚಮತ್ಕಾರಿಯಾದಕಲಿಯು, (೧) ತಿರೆಗೆ-ಭೂಮಿಗೆ, ನಳಭೂಪತಿಯು-ನಳರಾಜನು, ಸಖನೆಂದು-ಮಿತ್ರನೆಂದು, ಕೇಳಿ, ಬಂದೆನು, ನೃಪನ-ನಳನ (೨) ದೆಸೆಗೆ-ಏಳಿಗೆಗೆ, ಹೆದರದಿರು- ಭಯಪಡಬೇಡ,ಅಖಿಳಸಾಮ್ರಾಜ್ಯ-ರಾಜ್ಯಾಧಿಕಾರವೆಲ್ಲವೂ, ನಿನಗೆ, ಅಹುದು-ಆಗುವುದು, ಎಂದನು-ಎಂಬದಾಗಿ ಹೇಳಿದನು ॥೨೨॥

ತಾತ್ಪರ್ಯ:—ಸ್ವಲ್ಪವೂ ಕೃತ್ರಿಮವನ್ನರಿಯದ ಆ ನಳನನ್ನು ಮೋಸದಿಂದನಷ್ಟಪಡಿಸಬೇಕೆಂದುಬಗೆದು ಬ್ರಾಹ್ಮಣವೇಷವನ್ನುಹೊಂದಿಅಲ್ಲಿಂದ ಹೊರಟು ನಳನ ದಾಯಾದಿಯಾದ ಪುಷ್ಕರನೆಂಬುವನ ಬಳಿಗೆ ಬಂದು ಅವನಂ ಕುರಿತು ಅಯ್ಯಾ ಪುಷ್ಕರನೆ ನಿನ್ನ ಜ್ಞಾತಿಯಾದ ನಳನೇ ಭೂಮಿಗೆ ಒಡೆಯನಲ್ಲದೆ ಮತ್ತೊಬ್ಬರಿಲ್ಲವೆಂಬ ವರ್ತಮಾನವನ್ನು ಕೇಳಿ ಬಂದೆನು, ಆ ನಳನ ಮಹಾದಶೆಯನ್ನು ಕಂಡು ನೀನು ಹೆದರಬೇಡ, ಅವನ ಸಾಮ್ರಾಜ್ಯವೆಲ್ಲವೂ ನಿನ್ನ ಕೈವಶವಾಗುವಂತೆ ಮಾಡುವೆನು, ಎಂದು ಹೇಳಿದನು. ॥೨೨॥

ಟಿಪ್ಪಣಿ:— (೧) (ತ್ಸ) ಸ್ಥಿರಾ (೨) (ತ್ಸ) ದಶಾ ॥೨೨॥

ಮೂ॥ ಬಲ್ಲೆಯಾನೀನೆನ್ನಲೋಕಕ್ಕೆ । ಬಲ್ಲಿದನುತಾಕಲಿಪುರುಷನ
ಳ । ನಲ್ಲಿದ್ಯೂತವನಾಡೆಗೆಲಿಸುವೆನಿನ್ನಲೆತ್ತದಲಿ ॥ ಬಲ್ಲೆನೆನದಿರುಸ
ಕಲರಾಜ್ಯದ । ವಲ್ಲಭನಮಾಡುವೆನುಯಿದುಪುಸಿ ।ಯಲ್ಲನಿಷಧನಕಿ
ತ್ತುಬಿಸುಡುವೆನಂಬುನೀನೆಂದ ॥೨೩॥

ಟೀಕೆ:—ನೀಂ-ನೀನು, (೧) ಎನ್ನ-ನನ್ನನ್ನು, ಬಲ್ಲೆಯಾ-ತಿಳಿದಿರುವೆಯಾ, ತಾ-ನಾನು, ಲೋಕಕೆ-ಪ್ರಪಂಚಕ್ಕೆ, ಬಲ್ಲಿಧನು-ಬಲಿಷ್ಠನಾದ, ಕಲಿಪುರುಷ-ಕಲಿಯು, ನಳನಲ್ಲಿ – ನಳರಾಜನೊಡನೆ, ದ್ಯೂತವಂ-ಜೂಜನ್ನು, ಆಡೆ-ಆಡಲು, ನಿನ್ನ-ನಿನ್ನನ್ನು,ಲೆತ್ತದಲಿ-ಪಗಡೆಯಲ್ಲಿ, ಗೆಲಿಸುವೆನು (೨) ಒಲ್ಲೆಂ-ಒಲ್ಲೆನು, ಎನದಿರು-ಎನ್ನಬೇಡ, ಸಕಲರಾಜ್ಯದ-ಎಲ್ಲಾ ದೇಶಗಳ, ಒಡೆಯನನು-ಅಧಿಪತಿಯನ್ನಾಗಿ, ಮಾಡುವೆನು, ಇದು-ಈಮಾತು, ಪುಸಿಯಲ್ಲ-ಸುಳ್ಳಲ್ಲ, ನಿಷಧನ-ನಳನನ್ನು, ಕಿತ್ತುಬಿಸುಡುವೆ-(ರಾಜ್ಯಾಧಿ ಕಾರದಿಂದ) ಕಿತ್ತುಹಾಕುವೆನು, ನೀಂ – ನೀನು,

ನಂಬು-ನೆಚ್ಚು, ಎಂದ-ಎಂಬದಾಗಿ ಹೇಳಿದನು. ॥೨೩॥

ತಾತ್ಪರ್ಯ:—ಎಲೈ ಪುಷ್ಕರನೇ ನೀನು ನನ್ನನ್ನು ಬಲ್ಲೆಯಾ! ಪ್ರಪಂಚಕ್ಕೆಲ್ಲಾ ದೊಡ್ಡವನಾದ ಕಲಿಪುರುಷನೇ ನಾನು, ನೀನು ನಳನ ಸಂಗಡ ಜೂಜಾಡು, ಪಗಡೆಯಾಟದಲ್ಲಿ ನೀನು ಗೆಲ್ಲುವಂತೆ ಮಾಡಿ ಸಮಸ್ತದೇಶಗಳಿಗೂ ನಿನ್ನನ್ನೇ ಒಡೆಯನನ್ನಾಗಿ ಮಾಡಿ ಆ ನಳನ ಅಧಿಕಾರವನ್ನು ಮುರಿದು ಹಾಕುವೆನು. ಇದು ಸತ್ಯವು, ನಂಬು ಎಂದು ಭಾಷೆ ಕೊಟ್ಟನು. ॥೨೩॥

ಟಿಪ್ಪಣಿ:—(೧) ಕರ್ಮಾರ್ಥದಲ್ಲಿ ಷಷ್ಠಿ (೨) ಒಪ್ಪುವುದೆಂಬರ್ಥವು ಒಲ್, ಎಂಬದಾತುವಿನ ನಿಷೇಧ ರೂಪದ ಉತ್ತಮ ಪುರುಷೈಕವಚನವು. ॥೨೩॥

ಮೂ॥ ನಂಬಿದನುಲೇಸಾಗೆಭಾಷೆಯ । ನಿಂಬುಗೊಂಡುದುಹೃದಯ
ಪುಷ್ಕರ । ನಂದಖಿಳಸಂತೋಷದಲಿಕಲಿಪುರುಷನೊಡಗೊಂಡು।
ಅಂಬುಜಾಕ್ಷನಕಳೆಗೆತಾಪ್ರತಿ । ಬಿಂಬನೆನಿಸುವನಳನಬಳಿಗತಿ ।
ಸಂಭ್ರಮದೊಳೈತಂದರಿಬ್ಬರು ರಾಯಕೇಳೆಂದ ॥೨೪॥

ಟೀಕೆ:—ಲೇಸಾಗೆ-ಚೆನ್ನಾಗಿ, ಭಾಷೆಯ-ಕಲಿಯು ಕೊಟ್ಟಭಾಷೆಯನ್ನು, ನಂಬಿದನು-ಒಪ್ಪಿದನು (೧) ಹೃದಯ-ಮನಸ್ಸು, ಇಂಬುಗೊಂಡುದು-ಧೈರ್ಯವನ್ನು ಹೊಂದಿತು, ಪುಷ್ಕರಂ-ಪುಷ್ಕರನು, ಅಂದು-ಆಗ, ಅಖಿಳಸಂತೋಷದಲಿ-ಬಹಳಹರ್ಷದಿಂದ, ಕಲಿಪುರುಷನ, ಒಡಗೊಂಡು-ಕರೆದುಕೊಂಡು, ಇಬ್ಬರು-ಕಲಿಪುಷ್ಕರರು, (೨) ಅಂಬುಜಾಕ್ಷನ-ವಿಷ್ಣುವಿನ, ಕಳೆಗೆ-ಕಾಂತಿಗೆ, ತಾ-ತಾನು, ಪ್ರತಿಬಿಂಬವೆನಿಸುವ-ನೆರಲಿನಂತಿರುವ, ನಳನೆಬಳಿಗೆ-ನಳನಸಮೀಪಕ್ಕೆ,ಅತಿಸಂಭ್ರಮದೊಳ್-ಬಹಳವೈಭವದಿಂದ,ಐತಂದರು-ಬಂದರು, ರಾಯ-ಧರ್ಮರಾಜನೇ,ಕೇಳ್ ಎಂದ-ಎಂದನು ॥೨೪॥

ತಾತ್ಪರ್ಯ:—ಅದನ್ನು ಕೇಳಿ ಪುಷ್ಕರನು ನಿಶ್ಚಯವೆಂದು ನಂಬಿ ಒಪ್ಪಿಕೊಂಡನು, ಮನಸ್ಸಿಗೆ ಧೈರ್ಯವುಂಟಾಯ್ತು. ಆಗಲೆ ಲೋಕಾಧಿಪತ್ಯವು ಹಸ್ತಗತವಾದಂತೆ ಭಾವಿಸಿ ಸಂತೋಷದಿಂದ ಕಲಿಪುರುಷನನ್ನು ಜತೆಯಲ್ಲಿ ಕರೆದುಕೊಂಡು ಹೊರಟು ಎರಡನೆಯ ವಿಷ್ಣುವೋ ಎಂಬಂತೆ ಪ್ರಕಾಶಿಸುತ್ತಿರುವ ನಳನ ಸಮೀಪಕ್ಕೆ ಬಹು ಸಂಭ್ರಮದೊಡನೆ ಬಂದನು. ॥೨೪॥

ಟಿಪ್ಪಣಿ:—(೧) (ದ್ಭ) ಎರ್ದೆ, ಎದೆ, (೨) ಅಂಬು - ನೀರಿನಲ್ಲಿ, ಜ-ಹುಟ್ಟಿದುದು (ಕಮಲ) ಅದರಂತೆ ಅಕ್ಷಿ (ಕಣ್ಣು) ಯುಳ್ಳವನು- ಅಂಬುಜಾಕ್ಷ, (ಬ. ವ್ರೀ. ಸ) ಸಮಾಸದ ಕೊನೆಯಲ್ಲಿ ಅಕಾರವು ಬಂದಿದೆ. ॥೨೪॥

ಮೂ॥ ವಿಸುನಿರತ್ನಪ್ರಭೆಗಳಲಿರಂ। ಜಿಸುವಮಂಟಪದೊಳಗೆರಾಜ। ಪ್ರಸರಸಹಿತವನೀಶನಿದ್ದನುಸಿಂಹಪೀಠದಲಿ ॥ ಶಶಿಮುಖಿಯರೆಡ ಬಲದಿಕೈ। ವಾರಿಸುತಲಿರೆಚಾಮರವಚಮ್ಮಲು। ನಸುನಗುತಕೈ ಮುಗಿದು ಪುಷ್ಕರನೆಂದನಾನೃಪಗೆ ॥೨೫॥

ಟೀಕೆ:— ಅವನೀಶಂ-ದೊರೆಯು, (೧) ವಿಸುನಿರತ್ನಪ್ರಭೆಗ ಳಲಿ-ಸುವರ್ಣರತ್ನಕಾಂತಿಗಳಿಂದ, ರಂಜಿಸುವ-ಪ್ರಕಾಶಿಸುವ, (೨) ಮಂ ಟಪದೊಳಗೆ-ಓಲಗದ ಶಾಲೆಯಲ್ಲಿ, ಶಶಿಮುಖಿಯರ್- ಸ್ತ್ರೀಯರು, ಎಡಬಲದಿ-ಪಕ್ಕಗಳಲ್ಲಿ, ಕೈವಾರಿಸುತಲಿರೆ-ಹೊಗಳುತ್ತಿರಲು, ಚಾಮರ ವ-ಚಾಮರಗಳನ್ನು, ಚಮ್ಮಲು-ಬೀಸುತ್ತಿರಲು, ರಾಜಪ್ರಸರಸಹಿತ- ರಾಜರೊಡನೆ, ಸಿಂಹಪೀಠದಲಿ-ಸಿಂಹಾಸನದಲ್ಲಿ, ಇದ್ದನು-ಕುಳಿತಿದ್ದನು ಪುಷ್ಕರಂ-ಪುಷ್ಕರನು ಕೈಮುಗಿದು-ಕೈಜೋಡಿಸಿ, ನೃಪಗೆ-ರಾಜನಿಗೆ, ನಸುನಗುತ-ಮಂದಹಾಸದಿಂದ, ಎಂದಂ-ಹೇಳಿದನು ॥೨೫॥

ತಾತ್ಪರ್ಯ:— ನವರತ್ನಗಳಿಂದಲೂ ಸುವರ್ಣದಿಂದಲೂ ನಿರ್ಮಿ ಸಿರುವ, ಥಳಥಳಿಸಿಹೊಳೆಯುತ್ತಿರುವ ಸಭಾಮಂಟಪದಲ್ಲಿ ಅನೇಕಮಂ ಡಿಸಾಮಂತರಾಜರೊಡನೆ ದಿವ್ಯ ಸಿಂಹಾಸನದಲ್ಲಿ ಕುಳಿತು, ಉಭಯಪಾ ರ್ಶ್ವಗಳಲ್ಲಿ ನಿಂತು ಚಾಮರ ಗ್ರಾಹಿಣಿಯರು ಸರದಿಯಪ್ರಕಾರ ಚಾಮರ ವನ್ನು ಬೀಸುತ್ತಿರಲು, ಬಿರುದುಗಳನ್ನು ಗ್ಗಡಿಸಲು, ಮಹೇಂದ್ರನಿಗೆ ಸಮಾನವಾದ ರಾಜಮರ್ಯಾದೆಗಳನ್ನು ಹೊಂದುತ್ತಾ ಸುಖವಾಗಿ ಓಲಗವ ನ್ನು ಮಾಡುತ್ತಿರುವ ನಳನ ಸಮೀಪಕ್ಕೆ ಬಂದು, ಪುಷ್ಕರನು ಕೈಮು ಗಿದು ಮಂದಹಾಸದೊಡನೆ ನಳನಂ ಕುರಿತು ॥೨೫॥

ಟಿಪ್ಪಣಿ:— (೧)ಪ್ರಭಾ ಎಂಬುದಕ್ಕೆ (ದ್ಭ)ಹಚೆ (೨)(ದ್ಭ)ಮಂ ಡಪಿ ॥೨೫॥

ಮೂ॥ ಅರಸಕೇಳಾಶ್ಚರ್ಯವನುಭಾ। ಸುರದತೇಜದೊಳೆಸೆವಲೆತ್ತವ। ನಿರದೆಕಾಣಿಕೆಗೊಟ್ಟುಇದರಲಿನಮಗೆಮನವಾಯ್ತು ॥ ಹರಡುಹಾ ಸಂಗಿಗಳನಾಡುವ। ನಿರದೆಸೋತವನಾವನಾಗಲಿ। ಧರೆಯನುಳಿ

ದುವನಾಂತರಕೆಕಳುಹುವದುಸತಿಸಹಿತ ‖೨೬‖

ಟೀಕೆ:— ಅರಸ-ಧರ್ಮರಾಜನೇ (೧) ಆಶ್ಚರ್ಯವನ್ನು-ಆಶ್ಚರ್ಯ ವನ್ನು, ಕೇಳ್-ಕೇಳು, ಭಾಸುರ-ಪ್ರಕಾಶಮಾನವಾದ (೨) ಸುರತೇಜದೊಳು-ಒಳ್ಳೆಯ ಕಾಂತಿಯಿಂದ, ಎಸೆವ-ಹೊಳೆಯುತ್ತಿರುವ, ಲೆತ್ತವಂ-ದಾಳವನ್ನು, ಇರದೆ- ತಪ್ಪದೆ, ಕಾಣಿಕೆಗೊಟ್ಟು - ಕಾಣಿಕೆಯಾಗಿ ಕೊಟ್ಟು, ಇದರಲಿ-ಇದರಲ್ಲಿ, ನಮಗೆ, ಮನವಾಯ್ತು-ಮನಸ್ಸುಹುಟ್ಟಿದೆ, ಹಾಸಂಗಿಗಳಂ-ಚಾರಿಯನ್ನು, ಹರಡು-ಹಾಸು, ಇರದೆ-ಬಿಡದೆ, ಆಡುವಂ-ಆಡೋಣ, ಸೋತವಂ-ಸೋತವನು, ಆವನಾಗಲಿ-ಯಾವನಾದರೂ (ಅವನನ್ನು) ಧರೆಯುಂ-ರಾಜ್ಯವನ್ನು, ಉಳಿದು-ಬಿಟ್ಟು, (೩) ಸತಿಸಹಿತ-ಹೆಂಡತಿಯೊಡನೆ ವನಾಂತರಕೆ-ಕಾಡಿಗೆ, ಕಳುಹುವುದು-ಕಳುಹಿಸತಕ್ಕದ್ದು ‖೨೬‖

ತಾತ್ಪರ್ಯ:— ಸೊಗಸಾದೆರಡು ದಾಳಗಳನ್ನು ಕಾಣಿಕೆಯಾಗಿ ಒಪ್ಪಿಸಿ ಎಲೈ ನಳರಾಜೇಂದ್ರನೇ ನಮಗೆ ಪಗಡೆಯಾಟವನ್ನಾಡಬೇಕೆಂಬ ಕುತೂಹಲ ವುಂಟಾಗಿದೆ, ಹಾಸನ್ನು ಹಾಸಿ ಆಟಕ್ಕೆ ನಮ್ಮಸಂಗಡ ನೀನು ಪ್ರಾರಂಭಿಸುವವನಾನು. ಈ ಆಟದಲ್ಲಿ ಸೋತವರು ರಾಜ್ಯವನ್ನು ಬಿಟ್ಟು ಹೆಂಡತಿಯೊಡನೆ ವನವಾಸಕ್ಕೆ ಹೋಗತಕ್ಕದ್ದು, ಎಂಬುದು ನಮ್ಮಿಬ್ಬರಿಗೂ ಸಾಮಾನ್ಯವಾದ ಸಮಾಖ್ಯವಾಗಿರಲಿ, ಇದಕ್ಕೆನೀನು ಒಪ್ಪಬೇಕು ಎಂದು ಹೇಳಿದದು ‖೨೬‖

ಟಿಪ್ಪಣಿ:— (೧) (ದ್ಭ) ಅಚ್ಚರಿ (೨) ಸುತೇಜ (ಪ್ರಾದಿ. ಕ. ಸ) ಸಂಸ್ಕೃತದ ಸಕಾರಾಂತವಾದ ತೇಜಸ್, ಎಂಬ ಶಬ್ದದ ಕಡೆಯ ವ್ಯಂಜನವು ಲೋಪವಾಗಿ ತೇಜ, ಎಂದಾ ಕನ್ನಡಕ್ಕೆ ಲಿಂಗವಾಗಿದೆ(೩) ಸತಿಯಿಂದ ಸಹಿತ-ಸತಿಸಹಿತ (ತೃ. ತ) ‖೨೬‖

ಮೂ‖ ಧರಣಿಪತಿನಿನಗಿನಿತುಚಿತ್ತಕೆ । ಹರುಷವಾಗಿರಲಿನ್ನು ಮನದ
ಲಿ । ಕೊರತೆತೋರದುಮೊಣುಯಿದುಪಾರ್ಥಿವರವಂಥಕಣಾ । ಧು
ರಕೆಬೇಂಟಿಗೆಜೂಜಿನೆಡೆಯಲಿ । ಕರೆದೋಡೊಸರಿಸುವದುಹಗ
ರಣ । ದರಸುತನಚಿತ್ತ್ರಸುಯೆಂದನುನೃಪತಿಕೈಮುಗಿದು ‖೨೭‖

ಟೀಕೆ:— ಧರಣಿಪತಿ-ದೊರೆಯೇ, ನಿನಗೆ, ಇನಿತು-ಇಷ್ಟು, ಚಿತ್ತಕೆ-ಮನಸ್ಸಿಗೆ, ಹರಷವಾಗಿರಲ್-ಸಂತೋಷವಾಗಿರಲು, ಇನ್ನು, ಮನದಲಿ-ಮನಸ್ಸಿನಲ್ಲಿ, ಕೊರತೆ-ಚಿಂತೆಯು, ತೋರದು-ಕಾಣಬರು

ವುದಿಲ್ಲ, ಮಾಣ:-ಬಿಡು, ಇದು (೧) ಪಾರ್ಥಿವರ-ದೊರೆಗಳ, ಪಂಥ-ಜೂಜು, ಕಣಾ-ಅಲ್ಲವೇ, ಧುರಕೆ-ಯುದ್ಧಕ್ಕೆ, ಬೇಂಟೆಗೆ-ಬೇಟೆಗೂ, ಜೂಜಿನೆಡೆಯಲಿ-ಜೂಜಾಡುವ ಸಂದರ್ಭದಲ್ಲಿಯೂ, ಕರೆದೊಡೆ-ಕರೆಯಲು, ಒಸರಿಸುವುದು-ಬೇಡವೆಂದು ಹೇಳುವುದು, ಹೆಗರಣದ-ಕೆಲಸಕ್ಕೆ ಬಾರದ (೨) ಅರಸುತನ-ಪ್ರಭುತ್ವವು, ಚಿತ್ತೈಸು-ಕೇಳು (ಎಂಬದಾಗಿ) ನೃಪತಿ-ನಳನು, ಕೈಮುಗಿದು-ಕೈಜೋಡಿಸಿಕೊಂಡು, ಎಂದನು-ಹೇಳಿದನು ||೨೭||

ತಾತ್ಪರ್ಯ:—ಎಲೈ ಪುಷ್ಕರನೇ! ಇದು ನಿನಗೆ ಇಷ್ಟವಾಗಿರುವಲ್ಲಿ ನನಗೂ ಸಂತೋಷವೇಸರಿ, ಇದರಲ್ಲಿ ಕೊರತೆಯೇನು? ಇದು ಸ್ವಭಾವವಾಗಿ ರಾಜಯೋಗ್ಯವಾದ ಕಾರ್ಯವಲ್ಲವೇ! ಯುದ್ಧ, ಬೇಟೆ, ಜೂಜು, ಇವುಗಳಿಗೆ ಕರೆದಾಗ ಬರುವುದಿಲ್ಲವೆಂದು ಹೇಳುವವನ ಪ್ರಭುತ್ವವು ನಿಷ್ಪ್ರಯೋಜಕ ವಾದುದು, ಅದರಿಂದ ಈ ಕಾರ್ಯವು ನನಗೂ ಇಷ್ಟವಾಗಿದೆ, ಎಂದು ಹೇಳಿದನು ||೨೭||

ಟಿಪ್ಪಣಿ:— (೧) ಪೃಥಿವಿಯ ಒಡೆಯರು-ಪಾರ್ಥಿವರು, (೨) ಅರಸಿನಭಾವ-ಅರಸುತನ, ಭಾವಾರ್ಥದಲ್ಲಿ 'ತನ' ಪ್ರತ್ಯಯ ಬಂತು (ತದ್ಧಿತ. ಭಾ. ನಾ) ||೨೭||

ಮೂ|| ಮೇದಿನೀಪತಿಕೇಳುಸಜ್ಜನ |ಸಾಧುಬಲ್ಲನೆಖಳನಹೃದಯವ|
　ನಾದುರಾತ್ಮನನುಡಿಯಕೈಕೊಂಡಾಡಿದನುನೃಪತಿ || ಭೇದದಲಿಕ
　ಲಿಪುರುಷಮಾಯೋ | ಪಾಧಿಯಲಿಪುಷ್ಕರನಜೂಜಿನ | ವಾದದಂ
　ದರೆಘಳಿಗೆಯಲಿಗೆಲಿಸಿದನುವಸ್ತುಗಳ ||೨೮||

ಟೀಕೆ:— ಮೇದಿನೀ ಪತಿ-ಧರ್ಮರಾಜನೇ, ಕೇಳು, (೧) ಸಜ್ಜನಸಾಧು-ಸತ್ಪುರುಷರಲ್ಲಿ ಸಾಧುವಾದನಳನು, ಖಳನ-ನೀಚನ,ಹೃದಯವಂಮನಸ್ಸನ್ನು, ಬಲ್ಲನೆ-ತಿಳಿದಿರುವನೇ! ನೃಪತಿ-ನಳನು, ಆ ದುರಾತ್ಮನ ಆ ದುಷ್ಟನಾದ ಪುಷ್ಕರನ, ನುಡಿಯ-ಮಾತನ್ನು, ಕೈಕೊಂಡು-ಅಂಗೀಕರಿಸಿ, ಆಡಿದನು-ಹೇಳಿದನು, ಕಲಿಪುರುಷ-ಕಲಿಯು, ಭೇದದಲಿ-ಭೇದವನ್ನು ಕಲ್ಪಿಸಿ, ಮಾಯೋಪಾಧಿಯಲಿ-ಮೋಸವನ್ನು ಹೊಂದಿ, ಜೂಜಿನವಾದದಿ-ಜೂಜಿಗೆಹೇಳುವವಣದರೀತಿಯಾಗಿ, ಅಂದು-ಆಗ, (೨) ಅರೆಗಳಿಗೆಯಲಿ ಅರ್ಧಗಳಿಗೆಯ ಕಾಲದಲ್ಲಿ (೧೨ನಿಮಿಷ) ವಸ್ತುಗಳ-ಪಣ

ದ್ರವ್ಯಗಳನ್ನು, ಗೆಲಿಸಿದನು-ಜಯಿಸುವಂತೆ ಮಾಡಿದನು ||೨೪||

ತಾತ್ಪರ್ಯ:-- ಎಲೈ ಧರ್ಮರಾಜನೇ ಕೇಳು ಬಹು ಸಾಧುವಾಗಿ ಋಜುಸ್ವಭಾವವುಳ್ಳ ನಳನು ನೀಚನಾದ ಪುಷ್ಕರನ ಕಪಟ ಹೃದಯವನ್ನರಿಯಬಲ್ಲನೇ ! ತಿಳಿಯದೆ ಆ ದುಷ್ಟನ ಮಾತಿಗೆ ಅಂಗೀಕರಿಸಿ ಮಾತನಾಡಿದನು. ಇಬ್ಬರೂ ಪಗಡೆಯಾಟವನ್ನು ಆಡುತ್ತಿರುವಾಗ ಮಾಯಾವಿಯಾದ ಕಲಿಯು ಜೂಜಿಗೆ ಪಣವಾಗಿಟ್ಟ ವಸ್ತುಗಳೆಲ್ಲವನ್ನೂ ನಿಮಿಷಮಾತ್ರದಲ್ಲಿ ಪುಷ್ಕರನು ಗೆಲಿವಂತೆ ಮಾಡಿದನು ||೨೪||

ಟಿಪ್ಪಣಿ:— (೧) ಸತ್+ಜನ-ಸಜ್ಜನ (ಶ್ಚುತ್ವ)(ಪ್ರಾ. ಕರ್ಮ. ಸ) ಸಜ್ಜನರಸಾಧು (ಷ. ತ) (೨) ಅರೆಗಳಿಗೆ (ದ್ವಿಗು) ||೨೪||

ಮೂ|| ದುಗನುಪಂಚಕಬಾರವೆರಡಿ | ತ್ತಿಗೆಯುಬೇಡಿದಡಲ್ಲಿಬೀಳ್ವ
ದು | ವಿಗಡಪುಷ್ಕರನೃಪನಗೆಲಿದನುಹಲಗೆಯೊಂದರಲಿ || ಬಗೆಬಗೆ
ಯರತ್ನಗಳಧನಧಾನ್ಯಗಳಗಜರಥತುರಗಮೊದಲಾ | ದಗಣಿತದವ
ಸ್ತುಗಳಸೋತನುನೃಪತಿಪುಷ್ಕರಗೆ ||೨೫||

ಟೀಕೆ:— (೧) ದುಗನು-ಎರಡು, (ದುಗವು) ಪಂಚಕ-ಐದು ಬಾರವು-ಹನ್ನೆರಡು, ಎರಡಿತ್ತಿಗೆಯು-ಇತ್ತಿಗವು, ಬೇಡಿದಡೆ-ಕೇಳಿದ ಕೂಡಲೆ, ಅಲ್ಲಿ- ಆ ಆಟದಲ್ಲಿ, ಬೀಳ್ವುದು-ಬೀಳುತ್ತಾಬಂತು, (೨) ವಿಗಡ-ದುಷ್ಟನಾದ, ಪುಷ್ಕರ-ಪುಷ್ಕರನು, ನೃಪನ-ದೊರೆಯನ್ನು, ಹಲಗೆ ಯೊಂದರಲಿ-ಒಂದಾಟದಲ್ಲಿ, ಗೆಲಿದನು-ಗೆದ್ದನು, ನೃಪತಿ-ದೊರೆಯು (೩) ಬಗೆಬಗೆಯ-ನಾನಾವಿಧವಾದ, ರತ್ನಗಳ-ರತ್ನಗಳನ್ನೂ. ಧನಧಾನ್ಯಗಳ-ಹಣವನ್ನೂ ಧಾನ್ಯಗಳನ್ನೂ, ಗಜರಥ ತುರಗ ಮೊದಲಾದ-ಆನೆ, ಬಂಡಿ ಕುದುರೆ ಮೊದಲಾದ, ಅಗಣಿತ-ಲೆಕ್ಕವಿಲ್ಲದ, ವಸ್ತುಗಳ-ಪದಾರ್ಥಗಳನ್ನೂ, ಪುಷ್ಕರಗೆ-ಪುಷ್ಕರನೆಂಬುವನಿಗೆ, ಸೋತನು||

ತಾತ್ಪರ್ಯ:— ಪುಷ್ಕರನು, ದುಗ, ಇತ್ತಿಗ, ಐದು, ಹನ್ನೆರಡು ಮೊದಲಾದ ಯಾವದಾಯವನ್ನು ಕೋರಿದರೂ ತತ್ ಕ್ಷಣವೇ ಬೀಳುತ್ತಾ ಬಂತು, ದುಷ್ಟನು ಒಂದುಸಾರಿ ನಳನನ್ನು ಸೋಲಿಸಿದನು. ದೊರೆಯು ನವರತ್ನಗಳನ್ನೂ, ಧನಧಾನ್ಯಗಳನ್ನೂ, ಚತುರಂಗ ಸೈನ್ಯವನ್ನೂ, ಇನ್ನೂ ಅನೇಕ ಅಮೂಲ್ಯ ಪದಾರ್ಥಗಳನ್ನೂ ಪಣವಾಗಿಟ್ಟು ಸೋತನು ||೨೫||

ಟಿಪ್ಪಣಿ:— (೧) ದುಗ (ತ್ಸ) ದ್ವಿಕ, ತಿಗಕ್ಕೆ (ತ್ಸ) ತ್ರಿಕ,

ಎರಡುತಿಗ-ಇತ್ತಿಗ (ದ್ವಿಗು) (೨) (ತ್ರೃ) ವಿಕಟ (೩) ಆಧಿಕ್ಯಾರ್ಥದಲ್ಲಿ ದ್ವಿರುಕ್ತಿ ॥೨೯॥

ಮೂ ॥ ಆಡಿದನುಜೂಜಿನಲಿನೃಪಹೋ । ಗಾಡಿದನುರಾಜ್ಯವನುಕೋಶವ। ಕೇಡುಗರಕೈಮೇಳವಿಸಿದದುದೈವಗತಿಯಿಂತಿದ ॥ ಬಾಡಿತರಸನ ವದನಸಭೆಯುಲಿ । ನೋಡಿದರುಸಜ್ಜನರುಮರುಗಿದ । ರಾಗಲೇನದ ನರಸಸೋತನುವಿಧಿಯಘಟನೆಯುಲಿ ॥೩೦॥

ಟೀಕೆ:— ನೃಪ-ದೊರೆಯು, ಆಡಿದನು-ಆಟವಾಡಿದನು, ಜೂಜಿನಲಿ-ಪಂತದಿಂದ, ರಾಜ್ಯವನು-ದೇಶವನ್ನೂ, ಕೋಶವ-ಬಂಡಾರವನ್ನೂ, ಹೋಗಾಡಿದನು-ಹೋಗಲಾಡಿಸಿದನು, (೧) ದೈವಗತಿಯಿಂದ-ಅದೃಷ್ಟದಿಂದ (೨) ಕೇಡುಗರ-ಕೆಡುಕರ, ಕೈ-ಕೈಯಿಯು, ಮೇಳವಿಸಿದುದು - ಹೆಚ್ಚಿತು, ಅರಸನ-ದೊರೆಯ, ವದನ-ಮುಖವು, ಬಾಡಿತು - ಒಣಗಿತು, ಸಜ್ಜನರು - ಸಭೆಯುಲಿ - ಸಭೆಯಲ್ಲಿ, ನೋಡಿದರು, ಮರುಗಿದರು-ದುಃಖಪಟ್ಟರು, ಆಗಲೇನು-ಏನಾಯ್ತು ! ವಿಧಿಯ-ದೈವದ, ವಿಘಟನೆಯುಲಿ - ಅಗಲಿಸುವಿಕೆಯಿಂದ, ಅರಸ-ದೊರೆಯು, ಅದಂ - ರಾಜ್ಯಕೋಶ ಮೊದಲಾದುದನ್ನು, ಸೋತನು - ಸೋತು ಹೋದನು ॥೩೦॥

ತಾತ್ಪರ್ಯ:— ಇನ್ನೂ ಆ ಕೆಡುಕರಕೈಹೆಚ್ಚುತ್ತಾ ಬಂತು, ರಾಜ್ಯಕೋಶಗಳನ್ನೂ ಪಣವಾಗಿ ಒಡ್ಡಿ, ಅವುಗಳನ್ನೂ ಕಳೆದುಕೊಂಡನು, ದೊರೆಯ ಮುಖವು ಬಾಡಿತು. ಸಾಮ್ರಾಜ್ಯವೆಲ್ಲವೂ ಶತ್ರುವಿನ ವಶವಾಯ್ತು. ಸಭೆಯಲ್ಲಿದ್ದ ಸಜ್ಜನರು ನಳನ ದುರವಸ್ಥೆಯನ್ನು ನೋಡಿ ಮರುಗಿದರು. ದೈವವನ್ನು ಯಾರುತಾನೆವಿೂರಲಾದೀತು ? ಎಲ್ಲವನ್ನೂ ಕಳೆದುಕೊಂಡು ಖಿನ್ನನಾದನು ॥೩೦॥

ಟಿಪ್ಪಣಿ:— (೧) ದೈವದಗತಿ (ಷ. ತ) (೨) ಕೇಡನ್ನು ಮಾಡುವನು-ಕೇಡುಗ (ತದ್ಧಿತ. ಭಾ. ನಾ) ಆಚರಿಸುವನು ಎಂಬರ್ಥವಲ್ಲಿ ,ಗ, ಪ್ರತ್ಯಯವು ಬಂದಿದೆ ॥೩೦॥

ಮೂ॥ ತೀರಿತಿನ್ನೇನರಸಬಹುಭಂ । ಡಾರನಸ್ತುಸುವಸ್ತುವೆಲ್ಲವು । ಸೇರಿತೆನಗಿಂದಿನಲಿಪಯಣವನಿನ್ನು ಪೇಳೆನಲು ॥ ಭೂರಮಣಚಿಂತಿಸಿದಮನದಲಿ। ನಾರಿಯುಳನೊಡ್ಡುವೆನುಸೋತಿಹ । ಧಾರಿಣಿಯ ನೆರೆಗೆಲುವೆನೆನ್ನುತತನ್ನ ಮನದೊಳಗೆ ॥೩೧॥

ಟೀಕೆ:— ಅರಸ-ದೊರೆಯೇ, ಇನ್ನೇನು-ಮತ್ತೇನಿದೆ ಎನಗೆ-ನನಗೆ, ಇಂದಿನಲಿ-ಈಗ, (೧) ಬಹುಬಂಡಾರವಸ್ತುಸುವಸ್ತುವೆಲ್ಲವು-ಅನೇಕ ಬಂಡಾರವೂ, ಇತರವಸ್ತುಗಳೂ, ಸೇರಿತು-ಸಿಕ್ಕಿಹೋಯಿತು. ಇನ್ನು-ಮುಂದೆ, (೨) ಪಯಣವನು-ಪ್ರಯಾಣವನ್ನು, ಪೇಳ್-ಹೇಳು ಎನಲು-ಎಂದುಹೇಳಲು, ಭೂರಮಣ-ದೊರೆಯು, ಮನದಲಿ-ಮನಸ್ಸಿನಲ್ಲಿ, ಚಿಂತಿಸಿದ-ಆಲೋಚಿಸಿದನು, ಎನೆಂದರೆ—ತನ್ನ ಮನದೊಳಗೆ-ತನ್ನ ಮನಸ್ಸಿನಲ್ಲಿ, ನಾರಿಯಳಂ-ಹೆಂಡತಿಯನ್ನು, ಒಡ್ಡುವೆನು-ಪಣವಾಗಿಡುವೆನು, ಸೋತಿಹ-ಕಳೆದು ಕೊಂಡಿರುವ, ಧಾರಿಣಿಯ-ಭೂಮಿಯನ್ನು ನೆರೆ-ಚೆನ್ನಾಗಿ, ಗೆಲುವೆನು-ಗೆಲ್ಲುತ್ತೇನೆ, ಎನ್ನುತ ॥೩೧॥

ತಾತ್ಪರ್ಯ:— ಎಲೈ ನಳರಾಜನೇ ! ನಿನ್ನ ರಾಜ್ಯ ಕೋಶಾದಿ ಸಮಸ್ತ ಪದಾರ್ಥಗಳೂ ನನ್ನವಶವಾದುವು. ಇನ್ನೇನಿದೆ ಹೇಳು ? ಇನ್ನು ವನಪ್ರಯಾಣ ವಿಷಯವನ್ನು ತಿಳಿಸು ಎಂದು ಕೇಳಲು, ದೊರೆಯು ತನ್ನ ಮನಸ್ಸಿನಲ್ಲಿ-ಆಲೋಚಿಸಿ, "ಇರಲಿ, ನನ್ನ ಹೆಂಡತಿಯನ್ನು ಪಣವಾಗಿಟ್ಟು ಈಗ ಕಳೆದುಕೊಂಡಿರುವ ರಾಜ್ಯಾದಿಗಳನ್ನು ಗೆದ್ದು ಪುನಃ ಸ್ವಾಧೀನ ಪಡಿಸಿಕೊಳ್ಳುವೆನು" ಎಂದು ಕೊಂಡನು ॥೩೧॥

ಟಿಪ್ಪಣಿ:— (೧) ಬಂಡಾರಕ್ಕೆ (ತ್ಸ) ಭಾಂಡಾಗಾರ, (೨) (ತ್ಸ) ಪ್ರಯಾಣ ॥೩೧॥

ಮೂ॥ ಅರಸನಾಪ್ತಪುರೋಹಿತನುಮನ। ಹರುಷವಳಿದೈತಂದನಂತಃ।
ಪುರವಹೊಕ್ಕನುರಾಜವದನೆಯುಸಭೆಗೆತಾಬಂದು ॥ ತರುಣಿಯರ
ಮೇಳದಲಿನೃಪಸತಿ। ಪರಮರತ್ನದಪೀಠದಲಿತಾ। ಹರುಷಮಿಗೆರಂ
ಜಿಸಲುಸತಿಯಳಕಂಡುಕೈಮುಗಿದು ॥೩೨॥

ಟೀಕೆ:— ಅರಸನ-ದೊರೆಯ, (೧) ಆಪ್ತಪುರೋಹಿತನು-ಮುಖ್ಯಪುರೋಹಿತನು, ಮನಹರುಷವಳಿದು-ಮನಸ್ಸಿನಲ್ಲಿ ಹರ್ಷವಿಲ್ಲದವನಾಗಿ, ಐತಂದನು-ಬಂದನು, (೨) ಅಂತಃಪುರವ - ರಾಣಿವಾಸವನ್ನು, ಹೊಕ್ಕನು-ಪ್ರವೇಶಿಸಿದನು, ರಾಜವದನೆಯು-ಚಂದ್ರವದನೆಯಾದ ದಮಯಂತಿಯು, ಸಭೆಗೆ, ತಾಂ-ತಾನು, ಬಂದು, ತರುಣಿಯರ-ಹೆಂಗಸರ, ಮೇಳದಲಿ-ಗುಂಪಿನಲ್ಲಿ, ನೃಪಸತಿ-ರಾಜಪತ್ನಿಯು (೩) ಪರಮ-ಉತ್ಕೃಷ್ಟವಾದ, ರತ್ನದ-ರತ್ನಖಚಿತವಾದ, ಪೀಠದಲಿ-ಪೀಠದಮೇಲೆ, ತಾ-ತಾನು, ಹರುಷಮಿಗೆ-ಬಹುಸಂತೋಷದಿಂದ, ರಂಜಿಸಲು-ಪ್ರಕಾಶಿಸು

ತ್ತಿರಲು, ಸತಿಯುಳ-ಆಸ್ತ್ರೀಯನ್ನು, ಕಂಡು-ನೋಡಿ, (೪) ಕೈಮುಗಿದ-ಕೈಮುಗಿದನು ||೩೦||

ತಾತ್ಪರ್ಯ:—ಅಷ್ಟರಲ್ಲಿಯೇ, ಈ ಸಮಾಚಾರವನ್ನು ತಿಳಿದ ಆಪ್ತನಾದ ಕುಲಪುರೋಹಿತನು, ಅಂತಃಪುರವನ್ನು ಹೊಕ್ಕು, ಅಲ್ಲಿ ಬಹುಸಂತೋಷದೊಡನೆ ರತ್ನಖಚಿತವಾದ ಸಿಂಹಪೀಠದಲ್ಲಿ ಕುಳಿತು ಸ್ತ್ರೀಸಮಾಜದಲ್ಲಿ ಶೋಭಿಸುತ್ತಿರುವ ದಮಯಂತಿಯನ್ನು ಕಂಡು ಕೈಮುಗಿದಿಂತೆಂದನು. ||೩೦||

ಟಿಪ್ಪಣಿ:— (೧) ಆಪ್ತನಾದ ಪುರೋಹಿತ-ಆಪ್ತಪುರೋಹಿತ (ವಿಪ್ರೂರ್ವ. ಕ) (೨) (ದ್ಬ) ಅಂತವುರ, (೩) ಪರಮವಾದರತ್ನ - ಪರಮರತ್ನ (ವಿ. ಪ್ರೂರ್ವ. ಕ) ರತ್ನಕ್ಕೆ (ದ್ಭ) ರನ್ನ, ರತುನ, (೪) ಕೈಯಂಮುಗಿದ-ಕೈಮುಗಿದ (ಕ್ರಿ. ಸ) ||೩೦||

ಮೂ|| ತಾಯೆಬಿನ್ನಹವಿಂದುನಿಮ್ಮಯ| ರಾಯಸೋತನುಜೂಜಿನಲಿ
ನಿ| ರ್ದಾಯದಲಿಪುಷ್ಕರನುಗೆಲಿದನುಸಕಲರಾಜ್ಯವನು||ನೋಯ
ಲಾಗದುಚಿತ್ತದಲಿಸಿರಿ| ಬೀಯವಾದುದುಕೇಳಿಯಿನ್ನಿದ| ರಾಯತ
ವನೀವ್‌ಬಲ್ಲಿರೆಂದನುವಿಪ್ರಕೈಮುಗಿದು ||೩೧||

ಟೀಕೆ:—ತಾಯೆ-ಅಮ್ಮಾ, (೧) ಬಿನ್ನಹವು-ವಿಜ್ಞಾಪನೆ, ಇಂದು-ಈದಿನ, ನಿಮ್ಮಯ-ನಿಮ್ಮ, (೨) ರಾಯ-ದೊರೆಯು, ಪುಷ್ಕರಗೆ-ಪುಷ್ಕರನಿಗೆ, ಜೂಜಿನಲಿ-ದ್ಯೂತವಾಡಿ, ನಿರ್ದಾಯದಲಿ-ರೀತಿತಪ್ಪಿದುದರಿಂದ, ಸೋತನು, ಪುಷ್ಕರನು, ಸಕಲರಾಜ್ಯವನು-ರಾಜ್ಯವೆಲ್ಲವನ್ನು, ಗೆಲಿದನು-ಗೆದ್ದನು, ಚಿತ್ತದಲಿ-ಮನಸ್ಸಿನಲ್ಲಿ, ನೋಯಲಾಗದು-ವ್ಯಥೆಪಡಬಾರದು, (೩) ಸಿರಿ-ಐಶ್ವರ್ಯವು, (೪) ಬೀಯವಾದುದು - ವ್ಯಯವಾಯ್ತು, ಕೇಳಿ, ಇನ್ನು, ಇದರ, ಆಯತವ-ಸಮಾಚಾರವನ್ನು, ನೀವ್-ನೀವು, ಬಲ್ಲಿರಿ-ತಿಳಿದಿದ್ದೀರಿ, (ಎಂಬದಾಗಿ) ವಿಪ್ರ-ಬ್ರಾಹ್ಮಣನು, ಕೈಮುಗಿದು-ಕೈಜೋಡಿಸಿಕೊಂಡು, ಎಂದನು. ||೩೧||

ತಾತ್ಪರ್ಯ:—ಅಮ್ಮಾ ದೊರೆಯಾದನಳನು ಈದಿನದಲ್ಲಿ ಪಗಡೆಯಾಟವಾಡಿದಾಯವು ತಪ್ಪಿಹೋದುದರಿಂದ ರಾಜ್ಯ ಕೋಶಾದಿಗಳೆಲ್ಲವನ್ನೂ ಸೋತನು. ಪುಷ್ಕರನು ಗೆದ್ದುಕೊಂಡನು, ಇದಕ್ಕಾಗಿ ನೀವು ಮನೋವ್ಯಥೆಪಡಬೇಡಿ, ಸಾಮ್ರಾಜ್ಯವು ನಷ್ಟವಾಯ್ತು, ಮುಂದೆಮಾಡಬೇಕಾದ ಪ್ರತೀಕಾರವನ್ನು ನೀವೇ ಬಲ್ಲಿರಿ, ಇದ್ದ ಸಂಗತಿಯನ್ನು ತಿಳಿಸಿದ್ದೇ

ನೆ, ಎಂದನು. ‖೩೩‖

ಟಿಪ್ಪಣಿ:—(೧) (ತ್ಪ) ವಿಜ್ಞಾಪನಾ (೨) (ತ್ಪ) ರಾಜ್ಞ (೩) (ತ್ಸ) ಶ್ರೀ (೪) (ತ್ಸ) ವ್ಯಯ, ‖೩೩‖

ಮೂ‖ ಕಮಲವನದಲಿಮಂಜುಸುರಿದಾ। ಕ್ರಮದಬಗೆಯಲಿಸತಿಯಳಿಗೆಮುಖ। ಕಮಲಬಾಡಿತುನುಡಿಯಕೇಳುತಮನದಚಿಂತೆಯಲಿ‖ ಕಮಲನಾಭನಕರುಣದಳತೆಯು। ಸವೆದರಾರೇಗುವರುಶಿವಶಿವ। ಕುಮತಿಪುಷ್ಕರನಿಂತುಮುನಿದನೆಯೆನುತಮರುಗಿದಳು‖೩೪‖

ಟೀಕೆ:—ಕಮಲವನದಲಿ–ಕಮಲಸಮೂಹದಲ್ಲಿ, ಮಂಜು – ಹಿಮವು, ಸುರಿದ–ಬಿದ್ದ, ಆಕ್ರಮದ–ಆಸಂದರ್ಭದ, ಬಗೆಯಲಿ–ರೀತಿಯಲ್ಲಿ, ಸತಿಯಳಿಗೆ–ದಮಯಂತಿಗೆ (೧) ಮುಖಕಮಲ – ತಾವರೆಯಂತಿರುವ ಮುಖವು, ಬಾಡಿತು–ಒಣಗಿಹೋಯಿತು, ನುಡಿಯ–ಮಾತನ್ನು, ಕೇಳುತ, ಮನದ–ಮನಸ್ಸಿನ, ಚಿಂತೆಯಲಿ– ಆಲೋಚನೆಯಿಂದ, ಕಮಲನಾಭನ–ವಿಷ್ಣುವಿನ, ಕರುಣದ–ಕೃಪೆಯ, ಅಳತೆಯು–ಪ್ರಮಾಣವು, ಸವೆದರೆ–ಮುಗಿದುಹೋದರೆ, ಆರ್–ಯಾರು, ಏಗುವರ್–ಏನಮಾಡುವರು ? ಶಿವಶಿವ–ಹರಹರಾ, (೨) ಕುಮತಿ–ದುರ್ಬುದ್ಧಿಯುಳ್ಳ, ಪುಷ್ಕರ, ಮುನಿದನೇ–ಸಿಟ್ಟುಕೊಂಡನೇ, ಎನುತ, ಮರುಗಿದಳು–ಕೊರಗಿದಳು. ‖೩೪‖

ತಾತ್ಪರ್ಯ:—ತಾವರೆ ಹೂಗಳಮೇಲೆ ಹಿಮವು ಬಿದ್ದರೆ ದಳಗಳೆಲ್ಲವೂ ಉದುರಿಹೋಗುವುದಲ್ಲದೆ ಬಣ್ಣವೆಲ್ಲವೂ ಬೆಳ್ಳಗಾಗಿ ಕಾಂತಿಗುಂದುವಂತೆ, ಬ್ರಾಹ್ಮಣನ ಮಾತನ್ನು ಕೇಳಿದಕೂಡಲೆ ದಮಯಂತಿಯ ಮುಖವು ಕಳೆಗುಂದಿತು, ಈಶ್ವರನ ಕೃಪೆಯು ತಪ್ಪಿಹೋದಮೇಲೆ ಯಾರು ಏನಮಾಡಬಹುದು? ದುಷ್ಟನಾದ ಪುಷ್ಕರನಿಗೆ ಇಂತಹದುರ್ಬುದ್ಧಿ ಹುಟ್ಟಿತೇ ? ಹಾ ದೈವವೇ ಎಂದು ವ್ಯಥೆಪಟ್ಟಳು ‖೩೪‖

ಟಿಪ್ಪಣಿ:—(೧) ಕಮಲದಂತಿರುವ ಮುಖ–ಮುಖಕಮಲ (ಉ. ಉ. ಕ. ಸ) (೨) ಕು–ಕುತ್ಸಿತವಾದ, ಮತಿ – ಬುದ್ಧಿಯುಳ್ಳವನು (ಬ. ವ್ರೀ. ಸ) ‖೩೪‖

ಮೂ‖ ವಿಮಲಮುತಿನಳನೃಪಗೆರಾಹು। ಭ್ರಮಣವಾಯಿತೆಯೆನುತಸತಿಭೂ। ರಮಣನೆಡೆಗೈನಿದಳುಕಂಡಳುಯಿನಿಯನಿಂಗಿತವ ‖ ತಮದರಾಹುಗ್ರಹವುಸೋಂಕಿದ। ದ್ಯುಮಣಿಯಂತಿರೆಕಂಡುಧೈರ್ಯದಿ। ಕಮಲಮುಖಿಕೈಮುಗಿದುಬಿನ್ನೈಸಿದಳುನಿಜಪತಿಗೆ ‖೩೫‖

ಟೀಕೆ:—ವಿಮಲ-ಪರಿಶುದ್ಧವಾದ, ಮತಿ-ಬುದ್ಧಿಯುಳ್ಳ, ನಳನೃಪನೆ-ನಳರಾಜನಿಗೆ, (೧) ರಾಹುಭ್ರಮಣಂ-ರಾಹುವಿನಿಂದಭ್ರಾಂತಿಯು ಆಯ್ತೆ ? ಎನುತ, ಸತಿ-ದಮಯಂತಿಯು, ಭೂರಮಣನ- ದೊರೆಯ, ಎಡೆಗೆ-ಸಮೀಪಕ್ಕೆ, ಐದಿದಳು-ಹೋದಳು, ಇನಿಯನ-ಗಂಡನ, ಇಂಗಿತನ-ಅಭಿಪ್ರಾಯವನ್ನು, ಕಂಡಳು-ತಿಳಿದುಕೊಂಡಳು, ತಮದ - ಕತ್ತಲಾಗಿರುವ, ರಾಹುಗ್ರಹವು-ರಾಹುವು, ಸೋಂಕಿದ-ಹಿಡಿದ (೨) ದ್ಯುಮಣಿಯಂತೆ-ಸೂರ್ಯನಹಾಗೆ, ಇರೆ-ಇರಲು, ಕಂಡು-ನೋಡಿ, ಕಮಲಮುಖಿ-ಕಮಲದಂತೆ ಮುಖವುಳ್ಳ ದಮಯಂತಿಯು, ಧೈರ್ಯದಿ-ಧೈರ್ಯದಿಂದ, ನಿಜಪತಿಗೆ-ತನ್ನ ಗಂಡನಿಗೆ, ಕೈಮುಗಿದು-ಕೈಜೋಡಿಸಿ,ಬಿನ್ನೈಸಿದಳು-ಹೇಳಿಕೊಂಡಳು ||೩೫||.

ತಾತ್ಪರ್ಯ:—ಮಹಾವಿವೇಕಿಯಾದ ನಳನಿಗೂ ಈ ರಾಹುಬಾಧೆಯಿಂದ ಭ್ರಾಂತಿಯುಂಟಾಯಿತೇ ? ಎಂದು ಆಶ್ಚರ್ಯಪಡುತ್ತಾ ಅವನ ಸಮೀಪಕ್ಕೆ ಬಂದು ನೋಡಿ ಆತನ ಮನೋಭಿಪ್ರಾಯವನ್ನು ತಿಳಿದು, ರಾಹುಗ್ರಸ್ತವಾದ ಸೂರ್ಯಮಂಡಲದಂತೆ ಕಾಂತಿಹೀನನಾಗಿ ದೀನನಾಗಿದ್ದ ನಳನನ್ನು ಕುರಿತು ಕೈಮುಗಿದು ಧೈರ್ಯವಾಗಿ ಹೀಗೆ ಹೇಳಿ ಕೊಂಡಳು. ಏನಂದರೆ ||೩೫||

ಟಿಪ್ಪಣಿ:—(೧) ರಾಹುವಿನ ಭ್ರಮಣ-ರಾಹುಭ್ರಮಣ (ಷ.ತ) (೨) ದ್ಯು-ಆಕಾಶಕ್ಕೆ, ಮಣಿ-ರತ್ನ (ಅವ) ||೩೫||

ಮೂ|| ಶಶಿಕುಲಾಂಬುಧಿಚಂದ್ರರಿಪುನೃಪ | ನಿಶಿತಭಾಸ್ಕರತೇಜನಿಮ
ಗೀ|ವ್ಯಸನದೋರಲುಬಹುದೆಹರಹರಹರಮಹಾದೇವ|ಬಿಸರುಹಾ
ಕ್ಷನಕರುಣವದುಸೋ| ಲಿಸಿದನೇಪುಷ್ಕರನುಯಿದುವಿಧಿ|ವಶವಲಾ
ತಪ್ಪೇನುಸಾಕಿಂನೆಂದಳೆಂಬುಜಾಕ್ಷಿ ||೩೬||

ಟೀಕೆ:—(೧) ಶಶಿಕುಲ-ಚಂದ್ರವಂಶವೆಂಬ, ಅಂಬುಧಿ-ಸಮುದ್ರಕ್ಕೆ, ಚಂದ್ರ-ಚಂದ್ರನಂತಿರುವ. (೨) ರಿಪುನೃಪ-ಶತ್ರುರಾಜರಿಗೆ, ನಿಶಿತ-ತೀಕ್ಷ್ಣವಾದ, ಭಾಸ್ಕರತೇಜ-ಸೂರ್ಯಕಿರಣದಂತಿರುವನಳನೇ ! ನಿಮಗೆ, ಈ ವ್ಯಸನ-ಇಂತಹದುಃಖವು, ತೋರಲುಬಹುದೆ-ಉಂಟಾಗಬಹುದೇ ! ಹರಹರಹರಮಹಾದೇವ-ದೈವವೇ ! (೩) ಬಿಸರುಹಾಕ್ಷನ - ವಿಷ್ಣುವಿನ, ಕರುಣವು-ಕೃಪೆಯು, ಅದು, ಪುಷ್ಕರನು, ಸೋಲಿಸಿದನೇ ! ಇದು, ವಿಧಿವಶವಲಾ-ದೈವಾಧೀನವಲ್ಲವೇ ! ತಪ್ಪೇನು? ದೋಷವೇನು;

ಇನ್ನು, ಸಾಕು, (ಎಂಬದಾಗಿ) ಅಂಬುಜಾಕ್ಷಿ-ಕಮಲನೇತ್ರೆಯಾದ ದಮಯಂತಿಯು, ಎಂದಳ್-ಹೇಳಿದಳು. ||೩೬||

ತಾತ್ಪರ್ಯ:—ಚಂದ್ರವಂಶವನ್ನು ಅಭಿವೃದ್ಧಿಪಡಿಸುವನಾಗಿಯೂ, ಶತ್ರುಗಳನ್ನು ಕೊರಗಿಸುವ, ಮಹಾ ತೇಜಸ್ಸಿನಿಂದ ಬೆಳಗುವ ಸೂರ್ಯನಾಗಿಯೂ, ಇರುವ ಈ ನಳನಿಗೆ ಇಂತಹ ಅಪಾರವಾದ ವ್ಯಸನವುಂಟಾಗಬಹುದೇ, ಆಹಾ ದೈವವೇ, ದೈವಕಟಾಕ್ಷವು ಇಷ್ಟೇ ಇದ್ದಮೇಲೆ, ರಾಜ್ಯವು ಹೋದುದು ತಪ್ಪೇನು ? ಇನ್ನು ಚಿಂತಿಸಿ ಫಲವೇನು? ಎಂದು ಶೋಕಿಸಿದಳು ||೩೬||

ಟಿಪ್ಪಣಿ;—(೧) ಶಶಿಕುಲವೇ ಅಂಬುಧಿ-ಶಶಿಕುಲಾಂಬುಧಿ (ಅವ. ಪ್ರೂರ್ವ. ಕ) ಅಂಬುಧಿಯು ಚಂದ್ರನು (ಷ. ತ) ಅಂಬು-ನೀರು, ಧಿ-ನಿಲ್ಲುವ ಸ್ಥಳ, ಚಂದ್ರ-(ದ್ಭ) ಚಂದಿರ, ಚಂದುರ, (೨) ರಿಪುಗಳಾದ ನೃಪರು. (ವಿ. ಪ್ರೂರ್ವ. ಕ) ಭಾಸ್ಕರನತೇಜ (ಷ. ತ) ನಿಶಿತವಾದ ಭಾಸ್ಕರತೇಜ, (ವಿ. ಪ್ರೂರ್ವ, ಕ) ರಿಪುನೃಪರಿಗೆ-ನಿಶಿತಭಾಸ್ಕರತೇಜ (ಷ. ತ) ಭಾಸ್-ಕಾಂತಿಯನ್ನು, ಕರ-ಉಂಟುಮಾಡುವನು, (ಅವ) ತೇಜಸ್, ಎಂಬ ಸಕಾರಾಂತ ಸಂಸ್ಕೃತ ಶಬ್ದದ ಕೊನೆಯ ವ್ಯಂಜನವು ಲೋಪವಾಗಿ ಕನ್ನಡಕ್ಕೆ ಲಿಂಗವಾಗಿದೆ, (೩) ಬಿಸ-ತಾವರೆಯ ದಂಟಿನಲ್ಲಿ, ರುಹ-ಹುಟ್ಟಿದುದು (ಕಮಲ) (ಅವ) ಬಿಸರುಹದಂತೆ ಅಕ್ಷಿಗಳುಳ್ಳವನು-ಬಿಸರುಹಾಕ್ಷ (ಬ. ವ್ರೀ. ಸ) ||೩೬||

ಮೂ|| ಲಲನೆಯಾಡಿದನುಡಿಗೆಸಭೆಯುವ| ರಳಲಿಜೈದರುಪುಷ್ಕರನೆಕೇ|
ಳೆಲವೊಬಾಹಿರಸಾಕುತೆಗೆಚಾರಿಗಳನೆಂದೆನುತ || ಹೊಲಬುದಪ್ಪಿದ
ಹುಲ್ಲೆಬೇಡನ| ಬಲೆಗೆಬಿದ್ದಂತಾಗೆನಳನೃಪ | ತಿಲಕನೆಂದನುಮು
ನದದುಗುಡದಿತನ್ನನಿಜಸತಿಗೆ ||೩೭||

ಟೀಕೆ:—ಲಲನೆ-ದಮಯಂತಿಯು, ಆಡಿದ-ಹೇಳಿದ, ನುಡಿಗೆ-ಮಾತಿಗೆ, ಸಭೆಯುವರ್-ಸಭಾಜನರು, ಅಳಲಿ-ವ್ಯಥೆಪಟ್ಟು, ಎಲವೊ-ಎಲೈ, ಪುಷ್ಕರ, (೧) ಬಾಹಿರ-ನೀಚನೆ, ಕೇಳು. ಸಾಕು-ಆಟವನ್ನು, ನಿಲ್ಲಿಸು, ಚಾರಿಗಳಂ-ಹಲಗೆಗಳನ್ನು, ತೆಗೆ-ತೆಗೆದುಹಾಕು, ಎಂದೆನುತ-ಎಂಬದಾಗಿ, ಜೈದರು-ದೂಷಿಸಿದರು, (೨) ಹೊಲಬುದಪ್ಪಿದ - ಆಶ್ರಯಶೂನ್ಯವಾದ, ಹುಲ್ಲೆ-ಜಿಂಕೆಯು, (೩) ಬೇಡನ, ಬಲೆಗೆ, ಬಿದ್ದಂತಾಗೆ- ಸಿಕ್ಕಿದಹಾಗಾಗಲು, ನಳನೃಪತಿಲಕಂ-ನಳರಾಜೇಂದ್ರನು, ತನ್ನ ನಿಜಸತಿ

ಗೆ-ತನ್ನ ಹೆಂಡತಿಗೆ, ಮನದ-ಮನಸ್ಸಿನ, ದುಗುಡದಿ-ದುಃಖದಿಂದ, ಎಂದನು-ಹೇಳಿದನು ॥೩೭॥

ತಾತ್ಪರ್ಯ:—ಈರೀತಿಯಾಗಿ ದುಃಖಿಸುತ್ತಾ ದಮಯಂತಿಯಾಡಿದ ಮಾತನ್ನು ಕೇಳಿ ಸಭೆಯವರೆಲ್ಲರೂ ಪಶ್ಚಾತ್ತಾಪಪಟ್ಟು, ಪುಷ್ಕರನನ್ನು ಕುರಿತು ಎಲೈ ನೀಚನೆ, ಇನ್ನು ನಿನ್ನಾಟವುಸಾಕು ಬಿಡು ಎಂದು ದೂಷಿಸಿ ಹೇಳಿದರು, ವಾಸಸ್ಥಳವನ್ನು ಬಿಟ್ಟು, ಆಶ್ರಯವಿಲ್ಲದೆ ದಿಕ್ಕೆಟ್ಟು ಬಂದು ಬೇಡರವನು ಒಡ್ಡಿದ ಬಲೆಯಲ್ಲಿ ಸಿಕ್ಕುಬಿದ್ದ ಜಿಂಕೆಯ ಮರಿಯಂತೆ ಮನಸ್ಸಿನಲ್ಲಿ ಬಹುವ್ಯಥೆಯನ್ನು ತಾಳುತ್ತಾ ನಳನು ತನ್ನ ಹೆಂಡತಿಯೊಡನಿಂತೆಂದನು ॥೩೭॥

ಟಿಪ್ಪಣಿ:... (೧) (ತ್ಸ) ಬಾಹ್ಯ (೨) ಹೊಲಬಿನಿಂದತಪ್ಪಿದ-ಹೊಲಬುದಪ್ಪಿದ (ಕಿ. ಸ) (ತ್ಸ) ವ್ಯಾಧ ॥೩೭॥

ಮೂ॥ತರುಣಿಕೇಳಪಜಯದನಾರಿಯ। ಸೆರಗಹಿಡಿದೆನುರಾಜ್ಯಲಕ್ಷ್ಮಿಯ
ಪರರಿಗಿತ್ತುಳುಹಿದೆನುದೇಹವನಿದಕೆಯಂಜದಿರು॥ ತರುಣಿನೀಕಾನ
ನದಿಗಿರಿಗುಹ್ವರಗಳಲಿಬಿಡದೆಂತುತೊಳಲುವೆ। ಹರಹರಾಯೆನುತರ
ಸಸತಿಯನುನೋಡಿಬಿಸುಸುಯ್ದು ॥೩೮॥

ಟೀಕೆ:—ತರುಣಿ-ದಮಯಂತಿಯೇ, ಕೇಳ್-ಕೇಳು, ಅಪಜಯದ-ಸೋಲೆಂಬ,ನಾರಿಯ-ಹೆಂಗಸಿನ, ಸೆರಗ-ಸೆರಗನ್ನು,ಹಿಡಿದೆನು, (೧) ರಾಜ್ಯಲಕ್ಷ್ಮಿಯ-ರಾಜ್ಯವೆಂಬ ಲಕ್ಷ್ಮಿಯನ್ನು, ಪರರಿಗೆ,ಇತ್ತು-ಕೊಟ್ಟು ದೇಹವಂ-ದೇಹವನ್ನು, ಉಳುಹಿದೆಂ-ಮಿಗಿಸಿಕೊಂಡೆನು, ಇದಕೆ - ಇದಕ್ಕೆ, ಅಂಜದಿರು-ಹೆದರಬೇಡ, ತರುಣಿ? ನೀಂ-ನೀನು, ಕಾನನದಿ-ಅರಣ್ಯದಲ್ಲಿ, (೨) ಗಿರಿಗಹ್ವರಗಳಲಿ-ಬೆಟ್ಟಗವಿಗಳಲ್ಲಿ, ಬಿಡದೆ-ಅಗಲದೆ, ಎಂತು-ಹೇಗೆ, ತೊಳಲುವೆ-ತಿರುಗುತ್ತೀಯೆ, ಹರಹರಾ, ಎನುತ. ಅರಸ-ದೊರೆಯು, ಸತಿಯನು-ಹೆಂಡತಿಯನ್ನು ನೋಡಿ, (೩) ಬಿಸುಸುಯ್ದು-ನಿಟ್ಟುಸಿರು ಬಿಟ್ಟನು. ॥೩೮॥

ತಾತ್ಪರ್ಯ:—ಎಲೆತರುಣಿ ಪರಾಜಯವನ್ನು ಹೊಂದಿ ಸಾಮ್ರಾಜ್ಯವನ್ನು ಪರಾಧೀನಮಾಡಿ ದೇಹವನ್ನು ಮಾತ್ರವೇ ಉಳಿಸಿಕೊಂಡೆನು, ನೀನು ಹೆದರಬೇಡ, ನಾನು ಮಾಡಿಕೊಂಡಿರುವ ಸಮಯದಂತೆ ನನ್ನೊಡನೆ, ಕಾಡು ಬೆಟ್ಟ ಗುಹೆಗಳಲ್ಲಿ ಹೇಗೆ ಸಂಚರಿಸುವೆಯೋ ಕಾಣೆನು, ನಾನೇನಮಾಡಲಿ ಶಿವಶಿವಾ ಎಂದು ಹೆಂಡತಿಯನ್ನು ನೋಡಿ ದುಃಖದಿಂದನಿಟ್ಟು

ಸರನ್ನು ಬಿಟ್ಟನು, ॥೩೯॥

ಟಿಪ್ಪಣಿ:—(೧) ರಾಜ್ಯವೇಲಕ್ಷ್ಮಿ-ರಾಜ್ಯಲಕ್ಷ್ಮಿ (ಅವ. ಪೂರ್ವ ಕ) ಲಕ್ಷ್ಮಿಗೆ (ದ್ಭ) ಲಕುಮಿ (೨) ಗಿರಿಯೂ ಗಹ್ವರವೂ-ಗಿರಿಗಹ್ವರಗಳು (ದ್ವಂದ್ವ) ಗಹ್ವರಕ್ಕೆ (ದ್ಭ) ಗವಿ (೩) ಬೆಚ್ಚನೆಸುಯ್- ಬಿಸುಸುಯ್, ಬೆಚ್ಚನೆ ಎಂಬುದಕ್ಕೆ ಸಮಾಸದಲ್ಲಿ ಬಿಸು ಎಂದಾ ದೇಶವಾಗಿದೆ. ॥೩೮॥

ಮೂ। ಚಿತ್ತವಿಸುಶಶಿಕುಲಶಿರೋಮಣಿ। ಹೆತ್ತವರುಸತಿಸುತರುಮನೆ
 ಮನೆ। ವಾರ್ತೆಬಾಂಧವಧರಣಿಪರಭೋಗೈಕಸಂಪದವು ॥ ನಿತ್ಯವ
 ಲ್ಲಶರೀರಸುಖಗಳ। ನಿತ್ಯವೆಂಬುದತಿಳಿಯಿರೇನಿಜ। ಸತ್ಯವನುಕೈಹಿ
 ಡಿದುಸಲಹೆಂದಳುಸರೋಜಮುಖಿ ॥೩೯॥

ಟೀಕೆ:—ಶಶಿಕುಲ-ಚಂದ್ರವಂಶಕ್ಕೆ, ಶಿರೋಮಣಿ- ಶಿರೋರತ್ನಪ್ರಾಯನಾದ ನಳನೇ, ಚಿತ್ತವಿಸು-ಲಾಲಿಸು, ಹೆತ್ತವರು-ತಂದೆ ತಾಯಿಗಳು (೧) ಸತಿಸುತರು-ಹೆಂಡತಿಮಕ್ಕಳು, ಮನೆ, ಮನವಾರ್ತೆ-ಸಂಸಾರವೂ, ಬಾಂಧವ-ನಂಟರೂ, ಧರಣಿಪರ-ದೊರೆಗಳ, (೨) ಭೋಗೈಕಸಂಪದವು-ರಾಜಭೋಗಕ್ಕೆ ಮುಖ್ಯವಾದ ಸಂಪತ್ತು (೩) ನಿತ್ಯವಲ್ಲ, ಶರೀರಸುಖಗಳ್-ದೇಹಸೌಖ್ಯಗಳು, ಅನಿತ್ಯವು-ಅಶಾಶ್ವತವಾದುವು, ಎಂಬುದ-ಎಂಬುದನ್ನು, ತಿಳಿಯಿರೇ-ನೀವುಕಾಣಿರಾ, ನಿಜಸತ್ಯವನು - ನಿನ್ನ ಸತ್ಯವನ್ನು, ಕೈಹಿಡಿದು-ಅಂಗೀಕರಿಸಿ, ಸಲಹು-ಕಾಪಾಡು,(ಎಂಬದಾಗಿ) ಸರೋಜಮುಖಿ*ದಮಯಂತಿಯು, ಎಂದಳು ॥೩೯॥

ತಾತ್ಪರ್ಯ:—ಎಲೈ ಚಂದ್ರಕುಲ ಚೂಡಾಮಣಿಯಾದ ನಳನೇ ಕೇಳು, ತಾಯಿ, ತಂದೆ, ಹೆಂಡತಿ, ಮಕ್ಕಳು, ಮನೆ, ಸಂಸಾರ, ಬಂಧುಗಳು, ಸಾಮ್ರಾಜ್ಯ, ಇವೆಲ್ಲವೂ ಶರೀರಸೌಖ್ಯವೂ ಒಂದೂ ಶಾಶ್ವತವಲ್ಲ. ಎಂಬುದನ್ನು ನೀನರಿಯೆಯಾ ? ನಶ್ವರವಾದ ಈ ಸಂಪತ್ತನ್ನು ಬಯಸದೆ, ಕೀರ್ತಿ, ಸದ್ಗತಿ ಕಾರಣವಾದ ನಿನ್ನ ಸತ್ಯವ್ರತವನ್ನು ನೀನು ರಕ್ಷಿಸಿಕೊ, ಎಂದಳು ॥೩೯॥

ಟಿಪ್ಪಣಿ:—(೧) ಸತಿಯೂಸುತರೂ-ಸತಿಸುತರು(ದ್ವಂದ್ವ) (೨) ಭೋಗಕ್ಕೆ ಏಕವಾದುದು (ಮುಖ್ಯ) (ಷ. ತ)ಭೋಗೈಕವಾದಸಂಪದ-ಭೋಗೈಕಸಂಪದ (ವಿ. ಪೂರ್ವ, ಕ) ಸಂಪತ್, ಎಂಬ ವ್ಯಂಜನಾಂತವಾದ ಸಂಸ್ಕೃತ ಶಬ್ದದ ಕೊನೆಯ ವ್ಯಂಜನವು ಲೋಪವಾಗಿ ಕನ್ನಡ

ಕ್ಕೆ ಲಿಂಗವಾಗಿದೆ (೩) ನಿತ್ಯಕ್ಕೆ (ದ್ಭ) ನಿಚ್ಚ ॥೩೯॥

ಮೂ॥ ಚಿಂತೆಬೇಡೆಂದರಸನನುಮಿಗೆ।ಸಂತವಿಟ್ಟಳುನೀತಿಯುಲಿದಮ।
ಯಂತಿನಿಜಮಂದಿರಕೆಸರಿಯುಲುಕಂಡುಪುಷ್ಕರನು॥ ಇಂತುಜೂ
ಜಿಲಿಸೋತುತಿರುಗಿ।ನ್ನೆಂತುರಾಜ್ಯದಿನಿಲುವಿರೆನೆಭೂ। ಕಾಂತವನ
ವಾಸಕ್ಕೆನಿಜಸತಿಸಹಿತಲನುವಾದ ॥೪೦॥

ಟೀಕೆ:—ದಮಯಂತಿ, ಚಿಂತೆ-ದುಃಖವು,ಬೇಡ, ಎಂದೆನುತ-ಎಂಬದಾಗಿ, ನೀತಿಯುಲಿ-ನ್ಯಾಯದಿಂದ, ಅರಸನನು-ದೊರೆಯನ್ನು, ಮಿಗೆ-ಅತ್ಯಂತವಾಗಿ, ಸಂತವಿಟ್ಟಳು-ಸಮಾಧಾನಮಾಡಿದಳು (೧) ನಿಜಮಂದಿರಕೆ-ತನ್ನ ಮನೆಗೆ, ಸರಿಯುಲು-ಹೋಗುತ್ತಿರಲು, ಪುಷ್ಕರನು,ಕಂಡು-ನೋಡಿ, ಇಂತು-ಹೀಗೆ, ಜೂಜಲಿ-ದ್ಯೂತದಲ್ಲಿ, ಸೋತು-ಪರಾಜಿತರಾಗಿ ತಿರುಗಿ-ಪುನಃ, ಇನ್ನೆಂತು-ಇನ್ನುಹೇಗೆ, ರಾಜ್ಯದಿ-ದೇಶದಲ್ಲಿ, ನಿಲುವಿರಿ-ವಾಸಮಾಡುವಿರಿ ? ಎನೆ-ಎಂಬದಾಗಿ ಕೇಳಲು (೨) ಭೂಕಾಂತ-ದೊರೆಯು, ನಿಜಸತಿಸಹಿತಲಿ-ತನ್ನ ಹೆಂಡತಿಯೊಡನೆ, ವನವಾಸಕ್ಕೆ - ಅರಣ್ಯವಾಸಕ್ಕೆ, ಅನುವಾದ-ಸಿದ್ಧನಾದನು. ॥೪೦॥

ತಾತ್ಪರ್ಯ:—ದಮಯಂತಿಯು ಅನೇಕ ನೀತಿವಚನಗಳಿಂದ ನಳನನ್ನು ವ್ಯಥೆಪಡಬೇಡವೆಂದು ಸಮಾಧಾನಗೊಳಿಸಿ ತನ್ನ ಮನೆಗೆ ಹೊರಡುತ್ತಿರಲು, ಇದನ್ನು ಪುಷ್ಕರನು ಕಂಡು, ಏನಯ್ಯಾ ನನಗೆ ರಾಜ್ಯಾದಿಗಳನ್ನು ಸೋತು, ಪುನಃ ಅರಮನೆಗೆಹೋಗಿ ಅಲ್ಲಿ ವಾಸಿಸುವುದಕ್ಕೆ ಅಪೇಕ್ಷಿಸಿ ಆಡಿದಮಾತನ್ನು ತಪ್ಪುದಕ್ಕೆ ಯತ್ನಿಸುವೆಯಾ ? ನಿನಗೆ ವನಪ್ರವೇಶವಲ್ಲದೆ ರಾಜ್ಯಪ್ರವೇಶವು ಹೇಗುಂಟಾದೀತು ? ಎಂದು ಅಕ್ಷೇಪಿಸಲು, ನಳನು ಕೂಡಲೆ ತನ್ನ ಹೆಂಡತಿಯೊಡನೆ ವನವಾಸಕ್ಕೆ ಸಿದ್ಧವಾದನು ॥೪೦॥

ಟಿಪ್ಪಣಿ:—(೧) ನಿಜವಾದಮಂದಿರ-ನಿಜಮಂದಿರ (ವಿ. ಪೂರ್ವ. ಕ) (೨) ಭೂ-ಭೂಮಿಗೆ, ಕಾಂತ-ಗಂಡನು (ಅವ) ॥೪೦॥

ಮೂ॥ ತಳಿತಮಣಿಭೂಷಣಗಳೆಲ್ಲವಕ।ಳಚಿಬಿಸುಟನುಗುರುವಿನಂಘ್ರಿ
ಗೆ। ನಳಿನಮುಖಿಸತಿಸಹಿತಹೊರಹೊಂಟರುನಿಜಾಲಯವ॥ ಬಳಿಕ
ಲೈದಿದರಖಿಳಪುರಜನ। ಕಿಳಿಯೆಕಣ್ಜಲಧಾರೆಗಳುಗಾ। ವಳಿಮಸಗಿ
ತಲ್ಲಣಿಪಟ್ಟಣವೆಲ್ಲಶೋಕಿಸಲು ॥೪೧॥

ಟೀಕೆ:—ತಳಿತ-ಪ್ರಕಾಶಮಾನವಾದ, ಮಣಿಭೂಷಣಗಳೆ- ರತ್ನ

ಖಚಿತವಾದ ಒಡವೆಗಳ, ಎಲ್ಲವ-ಎಲ್ಲವನ್ನೂ, ಕಳಚಿ-ತೆಗೆದು, (೧) ಗುರುವಿನ-ಪುರೋಹಿತನ, ಅಂಘ್ರಿಗೆ-ಪಾದಕ್ಕೆ, ಬಿಸುಟನು-ಅರ್ಪಿಸಿದನು, ನಳಿನಮುಖಿಸಹಿತ-ದಮಯಂತಿಯೊಡನೆ, ನಿಜಾಲಯವ- ತಮ್ಮ ಮನೆಯನ್ನು, ಹೊರಹೊಂಟರು-ಬಿಟ್ಟುಹೊರಟರು, ಬಳಿಕಲಿ-ಆಮೇಲೆ, ಐದಿದರು-ಪ್ರಯಾಣಮಾಡಿದರು (೨) ಅಖಿಳಪುರಜನಕೆ- ಪಟ್ಟಣದಜನರಿಗೆಲ್ಲಾ, ಕಣ್ಜಲಧಾರೆಗಳು-ಕಣ್ಣೀರಧಾರೆಯು, ಇಳಿಯೆ-ಸುರಿಯಲು, ಪಟ್ಟಣವೆಲ್ಲ-ಊರೆಲ್ಲವೂ, ಶೋಕಿಸಲು-ವ್ಯಥೆಪಡಲು, ಅಲ್ಲಲ್ಲಿ, ಗಾವಳಿ - ಕೋಲಾಹಲವು, ಮಸಗಿತು-ಹಬ್ಬಿತು. ||೪೧||

ತಾತ್ಪರ್ಯ:—ನಳನು ಜಗಜಗಿಸುತ್ತಿರುವ ಅಮೂಲ್ಯವಾದ ರತ್ನಾಭರಣಗಳನ್ನೆಲ್ಲವನ್ನೂ ಕಳಚಿ ತೆಗೆದು ತನ್ನ ಕುಲಗುರುಗಳ ಪಾದಕ್ಕೆ ಸಮರ್ಪಿಸಿ ತನ್ನ ಪತ್ನಿಯೊಡನೆ ಅರಮನೆಯನ್ನು ಬಿಟ್ಟು ಕಾಡಿಗೆ ಹೊರಡಲು ಸಿದ್ಧನಾದನು, ಪೌರರೆಲ್ಲರೂ ಕಣ್ಗಳಲ್ಲಿ ಜಲಧಾರೆಗಳನ್ನು ಸುರಿಸಿದರು, ಪಟ್ಟಣವೆಲ್ಲ ಹಾ ಹಾ ಕಾರಧ್ವನಿಗಳಿಂದ ಗೋಳಿಡುತ್ತಿತ್ತು.||

ಟಿಪ್ಪಣಿ:—ಗುರು, ತಂದೆ, ಉಪಾಧ್ಯಾಯ, ಬೃಹಸ್ಪತಿ, ದೊಡ್ಡದು (ನಾನಾ) (೨) ಪುರದಜನರು-ಪುರಜನರು (ಷ. ತ) ಅಖಿಳರಾದ ಪುರಜನರು-ಅಖಿಳಪುರಜನರು (ವಿ. ಪೂರ್ವ. ಕ) ||೪೧||

ಮೂ|| ಸಾಲುಕಂಬನಿಗಳಲಿನೆನೆದರುವೂಳಿಗದವರಿಜನರುಮಂತ್ರಿಗ|
ಳೋಲಗದಸಾಮಂತಸಚಿವರುಮಲ್ಲಗಾಯಕರು|| ಬಾಲೆಯರುಬಾ
ಲಕರುಪುರಜನ| ಜಾಲವೆಲ್ಲವುಶೋಕದಲಿಕ್ಷಿತಿ|ಪಾಲನರಸಿಯಕಂ
ಡುಮರುಗಿತುಮುಂದಿಗೋಳಿಡುತ ||೪೨||

ಟೀಕೆ:—ಊಳಿಗದ-ಸೇವೆಮಾಡುವ,ಪರಿಜನರು-ದೂತರು, ಮಂತ್ರಿಗಳು, ಓಲಗದ-ಸಭೆಯ, ಸಾಮಂತ-ಅಧಿರಾಜರೂ, ಸಚಿವರು-ಅವರ ಮಂತ್ರಿಗಳೂ, ಮಲ್ಲ-ಜಟ್ಟಿಗಳೂ, ಗಾಯಕರು- ಸಂಗೀತಗಾರರೂ, (೧) ಬಾಲೆಯರು-ಹುಡುಗಿಯರು, ಬಾಲಕರು-ಹುಡುಗರು, ಪುರಜನ-ಪಟ್ಟಣದನಿವಾಸಿಗಳ (೨) ಜಾಲವೆಲ್ಲವು-ಸಮೂಹವೆಲ್ಲ, ಸಾಲುಕಂಬನಿಗಳಲಿ-ಸಾಲಾಗಿಕಣ್ಣೀರನ್ನು ಸುರಿಸುತ್ತಾ, ನೆನೆದರು - ಅದರಲ್ಲಿ ತೊಯ್ದುಹೋದರು, ಮುಂದಿ-ಜನವು, (೩) ಕ್ಷಿತಿಪಾಲನ - ದೊರೆಯ, ಅರಸಿಯ-ರಾಣಿಯನ್ನು, ಕಂಡು, ಗೋಳಿಡುತ-ಗೋಳಾಡುತ್ತಾ, ಮರುಗಿತು-ವ್ಯಥೆಪಟ್ಟಿತು ||೪೨||

ತಾತ್ಪರ್ಯ:—ಕಾಡಿಗೆ ಹೋಗುತ್ತಿದ್ದ ನಳದಮಯಂತಿಯರನ್ನು ನೋಡಿ, ಅವರವಿಯೋಗವನ್ನೂ, ದುರವಸ್ಥೆಯನ್ನೂ ನೆನೆದು ತಾಳಲಾರದೆ, ಸೇವಕರು ಮಂತ್ರಿಗಳು, ಸಾಮಂತರಾಜರು, ಸಚಿವರು, ಜಟ್ಟಿಗಳು, ನಟಗಾಯಕರು, ಪಟ್ಟಣಿಗರಾದ ಅಬಾಲವೃದ್ಧರೂ ಕಣ್ಣಿನಲ್ಲಿ ನೀರನ್ನು ಸುರಿಸುತ್ತಾ ಅದರಿಂದ ನೆನೆದು ಹೋದರು, ಘೋಳ್, ಎಂದು ಎಲ್ಲರೂಅತ್ತರು. ॥೪೨॥

ಟಿಪ್ಪಣಿ:— (೧) ಸಂಸ್ಕೃತದ ಆಕಾರಾಂತವಾದ ಬಾಲಾಶಬ್ದವು ಎ, ಕಾರಾಂತವಾಗಿ ಕನ್ನಡಕ್ಕೆ ಲಿಂಗವಾಗಿದೆ, (೨) ಬಲೆ, ಗವಾಕ್ಷ, ಸಮೂಹ, (ನಾನಾ) (೩) ಕ್ಷಿತಿ-ಭೂಮಿಯನ್ನು, ಪಾಲ-ಪಾಲಿಸುವವನು (ಅವ) ॥೪೨॥

ಮೂ॥ ಮನದಿಮುನ್ನವೆತಿಳಿದುನೃಪಸುತೆ । ತನಯರನುರಥದೊಳಗೆ
ತಂದೆಯ। ಮನೆಗೆಕಳುಹಿದಳಾಪ್ತರೊಡನೆವಿದರ್ಭಪಟ್ಟಣಕೆ ॥ ಜ
ನಪಕೇಳಿತ್ತಲುಮಹಾರೋ। ದನದಿಪಟ್ಟಣವೆಲ್ಲಮರುಗಲು। ವನಿ
ತೆಪತಿಯೊಡನೈದಿದಳುದೃಢತರದಮತಿಯಿಂದ ॥೪೩॥

ಟೀಕೆ:—ನೃಪಸುತೆ-ರಾಜಪುತ್ರಿಯು, ಮನದಿ – ಮನಸ್ಸಿನಲ್ಲಿ, ಮುನ್ನವೆ-ಮುಂದಾಗಿಯೇ, ತಿಳಿದು-ಆಲೋಚಿಸಿ, ತನಯರನು-ಮಕ್ಕಳನ್ನು, ರಥದೊಳಗೆ-ರಥದಮೂಲಕವಾಗಿ, ಆಪ್ತರೊಡನೆ – ಇಷ್ಟಜನದೊಡನೆ, ವಿದರ್ಭಪಟ್ಟಣಕೆ-ವಿದರ್ಭಪುರಕ್ಕೆ, (೧) ತಂದೆಯಮನೆಗೆ-ತನ್ನ ತಂದೆಯಮನೆಗೆ, ಕಳುಹಿದಳ್-ಕಳುಹಿಸಿದಳು, ಜನಪ-ಧರ್ಮರಾಜನೇ, ಕೇಳ್-ಕೇಳು, ಇತ್ತಲು-ನಿಷಧಪಟ್ಟಣದಲ್ಲಿ, (೨) ಮಹಾರೋದನದಿ-ಹೆಚ್ಚಾದ ಅಳುವಿನಿಂದ, ಪಟ್ಟಣವೆಲ್ಲ-ಪುರಜನವೆಲ್ಲವೂ,ಮರುಗಲು-ದುಃಖಪಡುತ್ತಿರಲು, ವನಿತೆ-ದಮಯಂತಿಯು, ದೃಢತರದ- ಬಹುನಿಷ್ಕರ್ಷೆಯಾದ, ಮತಿಯಿಂದ-ಮನಸ್ಸಿನಿಂದ, ಪತಿಯೊಡನೆ-ಗಂಡನಸಂಗಡ, ಐದಿದಳು-ಹೋದಳು ॥೪೩॥

ತಾತ್ಪರ್ಯ;—ದಮಯಂತಿಯು ತಮಗುಂಟಾಗಿರುವ ದುರವಸ್ಥೆಯನ್ನು ನೋಡಿ ಮೊದಲೇ ತನ್ನ ಮಕ್ಕಳ ವಿಷಯವನ್ನಾಲೋಚಿಸಿ ಏನೂ ತೋರದೆ ಅವರೆಲ್ಲರನ್ನೂ ತನಗೆ ಇಷ್ಟರಾದವರೊಡನೆ ರಥದಮೇಲೆ ಕುಳ್ಳಿರಿಸಿ, ವಿದರ್ಭರಾಜನಾದ ಭೀಮರಾಜನ ಬಳಿಗೆ ತನ್ನ ತೌರ್ಮನೆಗೆ ಕಳುಹಿಸಿದಳು. ಇತ್ತ ಪುರಜನರೆಲ್ಲರೂ ಶೋಕಾಕ್ರಾಂತರಾ

ಗಿರಲು ಒಂದೇ ಮನಸ್ಸಿನಿಂದ ತನ್ನ ಪತಿಯೊಡನೆ ಕಾಡಿಗೆ ಹೊರಟು ಹೋದಳು. ॥೪೩॥

ಟಿಪ್ಪಣಿ—(೧) ತಂದೆಗೆ (ತ್ಸ) ತಾತ, (೨) ಮಹತ್ತಾದರೋದನ ಮಹಾರೋದನ (ವಿ. ಪೂರ್ವ. ಕ) ॥೪೩॥

ಮೂ॥ ಏನನೆಂಬೆನುಜೀಯುಲೋಕದ। ಮಾನಿನಿಯೆದಮಯಂತಿಸತ್ಯ।
ಜ್ಞಾನಿಯುಲ್ಲವೆಸತಿಯರಿಗೆಗುರುಪತಿವ್ರತದೆಗುಣದಲ್ಲಿ ॥ ಮೌನದ
ಲಿಪತಿಯಂಘ್ರಿಕಮಲ। ಧ್ಯಾನದಲಿಮನಸಂದುಸತಿಘನ। ಕಾನನಕೆ
ಗಮಿಸಿದಳುವರಪುರದರಸನಾಜ್ಞೆಯಲಿ ॥೪೪॥

ಅಂತು ಸಂಧಿ ೪ ಕ್ಕೆ ಪದ ೨೧೧ಕ್ಕೆ ಮಂಗಳಮಸ್ತು.

ಟೀಕೆ:—ಜೀಯ-ಪ್ರಭುವೇ, ಏನನೆಂಬೆನು-ಏನೆಂದುಹೇಳಲಿ, ದಮಯಂತಿ, ಲೋಕದಮಾನಿನಿಯೋ-ಪ್ರಪಂಚಕ್ಕೆಸಾಮಾನ್ಯವಾದ ಹೆಂಗಸೇ, ಸತ್ಯಜ್ಞಾನಿಯುಲ್ಲವೆ-ಸತ್ಯವ್ರತವೂ, ಸುಜ್ಞಾನವೂ ಉಳ್ಳವಳಲ್ಲವೆ, (೧) ಪತಿವ್ರತದೆ-ಪಾತಿವ್ರತ್ಯದಲ್ಲಿಯೂ, ಗುಣದಲ್ಲಿ-ಸ್ವಭಾವದಯೂ ಸತಿಯರಿಗೆ-ಸ್ತ್ರೀಯರಿಗೆ, ಗುರು-ಶಿಕ್ಷಕಳು, ಮೌನದಲಿ-ಮಾತಾಡದೆ, ಪತಿಯ-ಗಂಡನ, (೨) ಅಂಘ್ರಿಕಮಲಧ್ಯಾನದಲಿ-ಪಾದಪದ್ಮವನ್ನು ನೆನೆವುದರಲ್ಲಿ, ಮನಸಂದು - ಮನಸ್ಸುಮಾಡಿ, ಸತಿ - ದಮಯಂತಿಯು, ವರಪುರ ದರಸನ-ಚೆನ್ನ ಕೇಶವಸ್ವಾಮಿಯ, (೩) ಆಜ್ಞೆಯಲಿ- ಅಪ್ಪಣೆಯ ಪ್ರಕಾರವಾಗಿ, ಘನಕಾನನಕೆ-ಘೋರವಾದ ಅರಣ್ಯಕ್ಕೆ, ಗಮಿಸಿದಳು-ಹೋದಳು. ॥೪೪॥

ತಾತ್ಪರ್ಯ:—ಎಲೈ ಧರ್ಮನಂದನನೇ ಕೇಳು ದಮಯಂತಿಯು ಪ್ರಪಂಚದ ಸಾಮಾನ್ಯಸ್ತ್ರೀಯೆ ! ಸತ್ಯ ಸಂಧತೆಯೂ, ದಿವ್ಯಜ್ಞಾನವೂ ಉಳ್ಳ ಮಹಾಪತಿವ್ರತೆಯಲ್ಲವೇ ! ಪತಿನಿಯಮ, ಸದಾಚಾರ, ಮೊದಲಾದ ಸದ್ಗುಣಗಳಲ್ಲಿ, ಲೋಕದ ಸ್ತ್ರೀಯರಿಗೆಲ್ಲಾ ಗುರುವೆನಿಸುವಳು, ಆ ದಕಾರಣ ಪತಿಯುಗತಿಯೇ ತನ್ನ ಗತಿಯೆಂದು ತಿಳಿದು ಪ್ರತ್ಯುತ್ತರವನ್ನು ಕೊಡದೆ ಆವನಮಾರ್ಗವನ್ನೇ ಅನುಸರಿಸಿ ಅವನ ಪಾದಕಮಲವನ್ನೇ ಸದಾಧ್ಯಾನಮಾಡುತ್ತಾ ಭಗವದಾಜ್ಞೆಯಂತೆ ಭಯರಹಿತಳಾಗಿ ಗಂಡನೊಡನೆ ಘೋರಾರಣ್ಯವನ್ನು ಪ್ರವೇಶಿಸಿದಳು, ಎಂದು ನುಡಿಯುತ್ತಿದ್ದನೇ ಬಿಲ್ಲಿಗೆ ನಾಲ್ಕನೆಯಸಂಧಿ ಮುಗಿಯಿತು. ॥೪೪॥

ಟಿಪ್ಪಣಿ:....(೧) ಪತಿಯುವ್ರತ-ಪತಿವ್ರತ (ಷ. ತ) (೨) ಕಮಲ ದಂತಿರುವ ಅಂಘ್ರಿ-ಅಂಘ್ರಿಕಮಲ (ಉ. ಉ. ಕರ್ಮ. ಸ) ಧ್ಯಾನಕ್ಕೆ (ದ್ಭ) ಜ್ಞಾನ, (೩) ಆಚಾರ (ದ್ಭ) ಆಣೆ ॥೪೪॥

ಪ್ರತಿಪದ ಟೀಕಾ ತಾತ್ಪರ್ಯವು ಮುಗಿದುದು.

ಐದನೆ ಸಂಧಿ.

ಸೂಚನೆ॥ ಅಡವಿಯೊಳುಪತಿಕಳೆದುಬಿಡೆಫಣಿ। ಯೊಡಲಿಗಿಳಿಯದೆ ಬಂದಕರಿಗಳ। ಪಡೆಗೆರಗಿದಮಯಂತಿಹೊಕ್ಕಳುಚೈದ್ಯನಗರಿಯನು ॥

ಟೀಕೆ:—ಪತಿ-ಗಂಡನು (೧) ಅಡವಿಯೊಳು-ಅರಣ್ಯದಲ್ಲಿ, ಕಳೆದುಬಿಡೆ-ಬಿಟ್ಟುಹೋಗಲು, (೨) ಫಣಿಯ-ಸರ್ಪದ, ಒಡಲಿಗೆ- ಹೊಟ್ಟೆಗೆ, ಇಳಿಯದೆ-ಆಹಾರವಾಗಿ ಹೋಗದೆ, ಬಂದ, (೩) ಕರಿಗಳ-ಆನೆಗಳ, ಪಡೆಗೆ-ಗುಂಪಿಗೆ, ಎರಗಿ-ನಮಸ್ಕರಿಸಿ,ದಮಯಂತಿ, ಚೈದ್ಯನಗರಿಯನು-ಚೈದ್ಯಪಟ್ಟಣವನ್ನು, ಹೊಕ್ಕಳು-ಪ್ರವೇಶಿಸಿದಳು. ॥

ತಾತ್ಪರ್ಯ:—ದಮಯಂತಿಯು ಪತಿಯಾದ ನಳನು ತನ್ನನ್ನು ವಂಚಿಸಿ ಕಾಡಿನಲ್ಲಿ ಬಿಟ್ಟುಹೋಗಲು ಅಲ್ಲಲ್ಲಿ ಸಂಚರಿಸುತ್ತಾ ಇದ್ದಳು ಅಲ್ಲಿ ಒಂದು ಘಟಸರ್ಪವು ನುಂಗುವುದಕ್ಕೆ ಬರಲು ಅದನ್ನು ದೈವವಶಾತ್ ತಪ್ಪಿಸಿಕೊಂಡು ಕಾಡಾನೆಗಳ ಬಾಧೆಗೊಳಪಟ್ಟು, ದೇವಧ್ಯಾನದಿಂದ ಅದನ್ನು ಪರಿಹರಿಸಿಕೊಂಡು ಅಲ್ಲಿಗೆ ಬಂದ ವ್ಯಾಪಾರಿಗಳಾದ ಮಾರ್ಗಸ್ಥರೊಡನೆ ಚೈದ್ಯನಗರವಂ ಪ್ರೊಕ್ಕಳು ॥

ಟಿಪ್ಪಣಿ:—(೧) (ತ್ಸ) ಅಟವಿ, (೨) ಫಣವುಳ್ಳದ್ದು (ಹೆಡೆಯುಳ್ಳದ್ದು) (ಅವ) (೩) ಕರವುಳ್ಳದ್ದು (ಕರಿ) ಸೊಂಡಿಲುಳ್ಳದ್ದು (ಆನೆ)॥

ಪದ್ಯ॥ ಕೇಳುಕುಂತೀತನಯನಳನೃಪ। ಬೀಳುಕೊಂಡನುಪುರವನಲ್ಲಿಂ। ಮೇಲೆನಡೆದರುಪಯಣಗತಿಯಲಿಹಲವುಯೋಜನವ॥ ಹೇಳಲೇನಾನವರವಿಧಿಯನು। ನಾಲಗೆಗಳೊಣಗಿದವುಪತಿಯಳ। ಕಾಲೊಡಲುಬಳಿವರುಣಜಲದಲಿಬಟ್ಟೆಕೆಸರಾಯು ॥೧॥

ಟೀಕೆ:—ಕುಂತೀತನಯ-ಧರ್ಮರಾಜನೆ, ಕೇಳು, ನಳನೃಪ-ನಳರಾಜನು, ಪುರವಂ-ಪಟ್ಟಣವನ್ನು, ಬೀಳುಕೊಂಡನು - ಬಿಟ್ಟುಹೊರಟನು, ಅಲ್ಲಿಂ ಮೇಲೆ-ಆ ಮೇಲೆ, ಪಯಣಗತಿಯಲಿ- ಪ್ರಯಾಣಹೊರಟು,

(೧) ಸಲವುಯೋಜನವಂ-ಕೆಲವುಗಾವುದಗಳನ್ನೂ, ನಡೆದರು-ಹೋದರು, ಅವರ, (೨) ವಿಧಿಯನು-ಅದೃಷ್ಟವನ್ನು, ಆಂ-ನಾನು, ಹೇಳಲೇಂ-ಏನೆಂದುಹೇಳಲಿ, ನಾಲಗೆಗಳು, ಒಣಗಿದವು-ಬತ್ತಿಹೋದವು, ಸತಿಯಳ-ದಮಯಂತಿಯು,ಕಾಲೊಡೆದು-ಕಾಲುಸೀಳಿಹೋಗಿ,ಬಸಿವ-ಸುರಿಯುತ್ತಿರುವ, (೩)ಅರುಣಜಲದಲಿ-ರಕ್ತದಿಂದ,ಬಟ್ಟೆ-ದಾರಿಯು, ಕೆಸರಾಯ್ತು-ಬದಿಯೊಾಯ್ತು. ||೧||

ತಾತ್ಪರ್ಯ:—ನಳ ದಮಯಂತಿಯರಿಬ್ಬರೂ ಪಟ್ಟಣವನ್ನು ಬಿಟ್ಟು ಹೊರಟು ಕಾಡಿನಲ್ಲಿ ಸಂಚರಿಸುತ್ತಾ ಕೆಲವು ಗಾವುದಗಳನ್ನು ನಡೆದು ಹೋಗಲು, ಮಾರ್ಗಾಯಾಸದಿಂದ, ನಾಲಗೆಗಳೊಣಗಿ ಮಹಾಸಂಕಟಪಡುತ್ತಿದ್ದ ಅವರ ದುರವಸ್ಥೆಯನ್ನು ನಾನು ಹೇಳಲಾರೆನು, ದಮಯಂತಿಯ ಕಾಲುಗಳು ಕಲ್ಲು ಮುಳ್ಳು ತಗಲಿದುದರಿಂದ ಒಡೆದು ಹೋಗಿ ನೆಲದಲ್ಲಿ ರಕ್ತಪ್ರವಾಹವು ಹೊರಟು ಕೆಸರಾಯ್ತು ||೧||

ಟಿಪ್ಪಣಿ— (೧) ಹಲವುಯೋಜನಗಳು-ಹಲವುಯೋಜನ (ವಿ. ಪ್ರೋಸ್ವ. ಕ) (೨) (ದ್ಭ) ಬಿದಿ, (೩) ಅರುಣ- ಕೆಂಪಾದ, ಜಲ- ನೀರು (ಅವ) ||೧||

ಮೂ|| ಎಳೆಯಬಾಳೆಯಸುಳಿಯನನಲ | ಜ್ವಾಲನಹೊಯ್ಲಲಿಕಾಯಿಸಿ
ದವ್ಲೋಲ್|ಬಳಲಿದಬಲೆಯಕಂಡುನೃಪಮರುಗಿದನುಮನದೊಳಗೆ||
ಲಲಿತಹೇಮನತೂಗುಮಂಚದ| ಹೊಳೆವಹಂಸೆಯಹಾಸಿನಲಿತಾಂ|
ಮಲಗುತಿಹಸತಿಗೀವಿಧಿಯೆಹಾಯೆನುತಬಿಸುಸುಯ್ದ ||೨||

ಟೀಕೆ:—ಎಳೆಯ-ಎಳೆಯದಾದ, ಬಾಳೆಯ ಸುಳಿಯಂ - ಬಾಳೆಯೆಲೆಯನ್ನು, ಅನಲಜ್ವಾಲನ-ಬೆಂಕಿಯ ಉರಿಯ, ಹೊಯ್ಲಲಿ- ಹೊಡೆತದಲ್ಲಿ, ಕಾಯಿಸಿದವ್ಲೋಲ್-ಸುಟ್ಟಹಾಗೆ, ಬಳಲಿದ-ಆಯಾಸಪಟ್ಟ (೧) ಅಬಲೆಯ-ಹೆಂಗಸನ್ನು, ಕಂಡು, ನೃಪ-ದೊರೆಯು, ಮನದೊಳಗೆ-ಮನಸ್ಸಿನಲ್ಲಿ, ಮರುಗಿದನು-ಸಂಕಟಪಟ್ಟನು, ಲಲಿತ - ಮನೋಹರವಾದ, ಮಂಚದ, ಹೇಮ-ಚಿನ್ನದ, ತಲ್ಪದೊಳು-ಹಾಸಿಗೆಯಲ್ಲಿ, ಹೊಳೆವ- ಪ್ರಕಾಶಿಸುವ (೨) ಹಂಸೆಯ-ಹಂಸಪಕ್ಷಿಯ ಪುಡಿತಕ್ಕೆಯಿಂದ ಮಾಡಿದ, ಹಾಸಿನಲಿ-ಹಾಸಿಗೆಯಲ್ಲಿ, ತಾಂ-ತಾನು, ಮಲಗುತಿಹ- ನಿದ್ರಿಸುತ್ತಿದ್ದ, ಸತಿಗೆ-ಹೆಂಡತಿಗೆ, ಈ ವಿಧಿಯೆ-ಈ ಸ್ಥಿತಿಯಾಯ್ತೆ, ಹಾ- ಅಯ್ಯೋ ! ಎನುತ-ಎಂಬದಾಗಿ, ಬಿಸುಸುಯ್ದು-ನಿಟ್ಟುಸಿರನ್ನು ಬಿಟ್ಟನು ||೨||

ತಾತ್ಪರ್ಯ:—ಕೋಮಲವಾದ ಬಾಳೆಯ ಸುಳಿಯನ್ನು ಉರಿಯಲ್ಲಿ ಕಾಸಿದರೆ ಅದು ಹೇಗೆ ಸುರುಟಿಕೊಂಡು ಒಣಗಿ ಹೋಗುವುದೋ ಹಾಗೆ ಬಿಸಿಲ ಬೇಗೆಯಿಂದ ಬಳಲಿದ ದಮಯಂತಿಯನ್ನು ನೋಡಿ ಅಯ್ಯೋ ದೈವವೇ ಸುವರ್ಣದ ಮಂಚದಮೇಲೆ ಹಂಸತೂಲಿಕಾತಲ್ಪದಲ್ಲಿ ಮಲಗುತ್ತಿದ್ದ ಈ ಸುಕುಮಾರಿಗೆ ಇಂತಹ ದುರವಸ್ಥೆ ಬರಬಹುದೇ, ದುರ್ವಿಧಿ ವಿಲಾಸವನ್ನೇನು ಹೇಳಲಿ ಎಂದು ದುಃಖಿಸಿದನು ‖೨‖

ಟಿಪ್ಪಣಿ:—(೧) ಬಲವಿಲ್ಲದವಳು, ಅಬಲೆ (ಅವ) (೨) (ದ್ಭ)-ಅಂಚೆ ‖೨‖

ಮೂ‖ಮರುಗಲಿನ್ನೇಕರಸಬಿಡುವಿಧಿ|ಬರೆದಬರಹವತಪ್ಪಿಸಲುಹರಿ|ಹ
ರವಿರಂಚಾದಿಗಳಿಗಳವೇನಮ್ಮಪಾಡೇನು ‖ ಹರೆವುದಾಕ್ಷಣತುಂ
ಬುವದುಗೋಚರಿಸುವುದುಶಿರಿನಿತ್ಯವೇಯಿದ| ನರಿಯದವನೇನೋ
ಯಲೇಕೆಂದಳುಸರೋಜಮುಖಿ ‖೩‖

ಟೀಕೆ:—ಅರಸ-ದೊರೆಯೇ, ಮರುಗಲಿನ್ನೇಕೆ-ಇನ್ನೇತಕ್ಕೆ ದುಃಖವು, ಬಿಡು-ಸುಮ್ಮನಿರು (೧) ವಿಧಿ-ಬ್ರಹ್ಮನು, ಬರೆದ, ಬರಹವ-ಲಿಖಿತವನ್ನು, ತಪ್ಪಿಸಲು-ತಪ್ಪುವಹಾಗೆ ಮಾಡಲು, ಹರಿಹರವಿರಿಂಚಾದಿಗಳಿಗೆ-ತ್ರಿಮೂರ್ತಿಗಳೇಮೊದಲಾದವರಿಗೆ, ಅಳವೇ- ಸಾಧ್ಯವಾದೀತೆ! ನಮ್ಮ-ನಮ್ಮಂತಹವರ, ಪಾಡೇನು, ಸಿರಿ-ಐಶ್ವರ್ಯವು, ನಿತ್ಯವೇ- ಶಾಶ್ವತವಾದದ್ದೇ, ಗೋಚರಿಸುವುದು- ಕಾಣಿಸಿಕೊಳ್ಳುವುದು, ತುಂಬುವುದು, ಅಭಿವೃದ್ಧಿಹೊಂದುವುದು, ಆಕ್ಷಣ-ಕೂಡಲೆ, ಹರಿವುದು-ತೊಲಗುವುದು, ಇದಂ-ಈ ವಿಷಯವನ್ನು, ಅರಿಯದವನೇ-ನೀನುಕಾಣೆಯಾ! ನೋಯಲೇಕೆ-ವ್ಯಥೆಪಡುವುದೇತಕ್ಕೆ (ಎಂಬದಾಗಿ) (೨) ಸರೋಜಮುಖಿ-ದಮಯಂತಿಯು, ಎಂದಳು-ಹೇಳಿದಳು ‖೩‖

ತಾತ್ಪರ್ಯ:—ಎಲೈ ದೊರೆಯೇ ಏಕೆ ದುಃಖ ಪಡುತ್ತೀಯೆ! ಬ್ರಹ್ಮಲಿಪಿಯನ್ನು ತಪ್ಪಿಸಿಕೊಳ್ಳಲು ತ್ರಿಮೂರ್ತಿಗಳಿಗೂ ಸಾಧ್ಯವಲ್ಲ, ನಮಗೆ ಸಾಧ್ಯವಾದೀತೇ? ಐಶ್ವರ್ಯವು ಶಾಶ್ವತವಾಗಿ ಒಂದು ಕಡೆಯಲ್ಲಿರುವುದುಂಟೇ! ಅದು ಕಾಣಿಸಿಕೊಳ್ಳುವುದು, ಆಗಲೇ ಬೆಳೆಯುವುದು, ಕೂಡಲೆ ಮಾಯವಾಗುವುದು. ಹೀಗೆ ಲಕ್ಷ್ಮಿಯುಚಪಲಳು ಎಂಬುದನ್ನು ನೀನು ಕಾಣದವನೇ! ಇದಕ್ಕಾಗಿ ಏಕೆ ವ್ಯಥೆಪಡಬೇಕು; ಎಂದು ದಮಯಂತಿಯು ನಳನನ್ನು ಸಮಾಧಾನ ಪಡಿಸಿದಳು ‖೩‖

ಟಿಪ್ಪಣಿ:—(೧) ವಿಧಿ-ಬ್ರಹ್ಮ, ದೈವ, ಅದೃಷ್ಟ, ನಿಯಾಮಕ, ಸೂತ್ರ, (ನಾನಾ) (೨) ಸರಸ್-ಸರೋವರದಲ್ಲಿ, ಜ-ಹುಟ್ಟಿದುದು (ಕಮಲ) ಅದರಂತೆ ಮುಖವುಳ್ಳವಳು-ಸರೋಜಮುಖಿ(ಬ. ವ್ರೀ. ಸ)॥೩॥

ಮೂ॥ ನುಡಿಯಕೇಳುತಮನದಿಮಿಡುಕುತ। ಪೊಡವಿಪನುಸತಿಸಹಿತ
ಘನವಾ।ದಡವಿಯೊಳುಬರುತಿರೆಜಗನ್ಮೋಹನದಪಕ್ಷಿಗಳು॥ಪೊಡ
ವಿಗಿಳಿಯಲುಕಂಡಪೇಕ್ಷಿಸಿ। ಪಿಡಿವೆನೆಂದುರವಣಿಸಿನೃಪಹ।ಚ್ಚಡ
ವಬೀಸಿದೊಡದರನುಕೊಂಡೊಯ್ದುದುನಭಸ್ಥಳಕೆ॥೪॥

ಟೀಕೆ:—ನುಡಿಯ-ಆಮಾತನ್ನು,ಕೇಳುತ-ಕೇಳುತ್ತಾ, ಮನದಿ-ಮನಸ್ಸಿನಲ್ಲಿ, ಮಿಡುಕುತ-ಭಯಪಡುತ್ತಾ, (೧) ಪೊಡವಿಪನು- ದೊರೆಯು, ಸತಿಸಹಿತ-ಹೆಂಡತಿಯೊಡನೆ, ಘನವಾದ-ದಟ್ಟವಾದ, (೨) ಅಡವಿಯೊಳು-ಕಾಡಿನಲ್ಲಿ, ಬರುತಿರೆ-ಬರುತ್ತಾಇರಲು,ಜಗನ್ಮೋಹನದ-ಪ್ರಪಂಚವನ್ನೆಲ್ಲಾ ಭ್ರಾಂತಿಗೊಳಿಸುವ, ಪಕ್ಷಿಗಳು-ಹಕ್ಕಿಗಳು, ಪೊಡವಿಗೆ-ಭೂಮಿಗೆ, ಇಳಿಯಲು-ಇಳಿದು ಬರುತ್ತಿರಲು, ಕಂಡು, ನೃಪ - ದೊರೆಯು, ಅಪೇಕ್ಷಿಸಿ-ಆಸೆಪಟ್ಟು, ಪಿಡಿವೆನೆಂದು-ಹಿಡಿಯುತ್ತೇನೆಂದು, ಉರವಣಿಸಿ-ಕೋಪಿಸಿ,ಹಚ್ಚಡವ-ಹೊದ್ದಿದ್ದಬಟ್ಟೆಯನ್ನು, ಬೀಸಿದೊಡೆ-ಎಸೆಯಲು, ಅದನು-ಆ ಬಟ್ಟೆಯನ್ನು, ನಭಸ್ಥಳಕೆ-ಆಕಾಶಕ್ಕೆ, ಕೊಂಡೊಯ್ದುವು-ತೆಗೆದು ಕೊಂಡು ಹೋದವು. ॥೪॥

ತಾತ್ಪರ್ಯ:—ನಳನು ಹೇಳಿದುದನ್ನು ಕೇಳಿ ದಮಯಂತಿಯೊಡನೆ ಘನವಾದ ಅಡವಿಯಲ್ಲಿ ಬರುತ್ತಿರಲು, ಲೋಕಕ್ಕೆ ಅತ್ಯಾಶ್ಚರ್ಯಕರವಾದ ಹಾರಿವಾಳದ ಹಕ್ಕಿಗಳು ಆಕಾಶದಿಂದ ಇಳಿದು ಬರಲು ಅವುಗಳನ್ನು ಹಿಡಿಪಟ್ಟುಕೊಳ್ಳಬೇಕೆಂದಪೇಕ್ಷಿಸಿ ನಳನು ತಾನು ಹೊದ್ದಿದ್ದ ಬಟ್ಟೆಯನ್ನು ಅವುಗಳಮೇಲಕ್ಕೆಸೆಯಲು, ಅವು ಆ ಬಟ್ಟೆಯನ್ನೇ ಎತ್ತಿಕೊಂಡು ಹಾರಿಹೋದುವು ॥೪॥

ಟಿಪ್ಪಣಿ:—(೧) ಪೊಡವಿಗೆ (ತ್ಭ) ಪೃಥಿವಿ, (೨) ಅಡವಿಗೆ (ತ್ಭ) ಅಟವಿ, ॥೪॥

ಮೂ॥ ಮೂಗಿನಲಿಬೆರಳಿಟ್ಟುಮಕುಟವ। ತೂಗಿದನುನಸುನಸುತನಿಂ
ದಿರ।ಲಾಗಸೂಚಿಸಿದವುಸರಂತರರಾಜ್ಯಭೋಗವನು॥ಬೇಗದಿಂದವ
ಹರಿಸಿಕೊಂಡವ।ರೀಗನಾವೀವಿವರವೆಂದುಸ। ರಾಗದಿಂದಲಿಮಾಯ
ವಾದವುಪಯಿರಡುಪಕ್ಷಿಗಳು ॥೫॥

ಟೀಕೆ:—ಮೂಗಿನಲಿ-ಮೂಗಿನಮೇಲೆ, ಬೆರಲಿಟ್ಟು - ಬೆರಲಿಟ್ಟು ಕೊಂಡು, ಮುಕುಟವ-ತಲೆಯನ್ನು, ತೂಗಿದನು-ಅಲ್ಲಾಡಿಸಿದನು, ನಸು ನಗುತ-ನಗುತ್ತಾ, ನಿಂದಿರಲು-ನಿಂತುಕೊಂಡಿರಲು, ಆಗ, ನಿರಂತರ-ಶಾಶ್ವತವಾದ, ರಾಜ್ಯಭೋಗವನು-ರಾಜ್ಯಸಂಪತ್ತನ್ನು, (೧) ಬೇಗದಿಂದ-ಬೇಗನೆ, ಅಪಹರಿಸಿಕೊಂಡವರು-ಕಿತ್ತುಕೊಂಡವರು, ನಾವು, ಈ ವಿವರವ-ಈ ಸಮಾಚಾರವನ್ನು, ಎಂದು-ಹೇಳಿ, ಸರಾಗದಿಂದಲಿ - ಬೇಗನೆ, (೨) ಎರಡು ಪಕ್ಷಿಗಳು-ಎರಡುಹಕ್ಕಿಗಳು, ಮಾಯವಾದವು - ಅದೃಶ್ಯವಾದುವು. ॥೫॥

ತಾತ್ಪರ್ಯ:—ಹಕ್ಕಿಗಳು ಹಚ್ಚಡವನ್ನು ಹೊತ್ತುಕೊಂಡು ಹೋಗುತ್ತಿರುವುದನ್ನು, ನಳನು ಮೂಗಿನಮೇಲೆ ಬೆರಲಿಟ್ಟುಕೊಂಡು ನೋಡುತ್ತಿರಲು, ಎಲೈ ನಳನೇ ನಿನ್ನ ಸಾಮ್ರಾಜ್ಯವನ್ನು ಅಪಹರಿಸಿದವರು ನಾವು, ಎಂದು ಸೂಚಿಸಿದುವೋ ಎನ್ನುವಹಾಗೆ ಎರಡು ಪಾರಿವಾಳಗಳೂ ಕೂಡಲೆ ಮಾಯವಾದುವು. ।೫॥

ಟಿಪ್ಪಣಿ:—(೧) (ತ್ಸ) ವೇಗ, (೨) ಎರಡಾದ ಪಕ್ಷಿಗಳು-ಎರಡು ಪಕ್ಷಿಗಳು (ದ್ವಿಗು) ಪಕ್ಷಿಗೆ (ದ್ಭ) ಪಕ್ಕಿ, ಹಕ್ಕಿ.॥೫॥

ಮೂ॥ ಧರಣಿಪತಿಕೇಳ್ನಿಷಧಪತಿಕಲಿ । ಪುರುಷಮಾಯವಬಲ್ಲನೇಮ
ನಮರುಗಿನಿರ್ವಾಣದಲಿನಿಂದಿರಲಾಗಸತಿಕಂಡು ॥ ಹರಹರಾಎನು
ತಾಗಸೀರೆಯು । ಸೆರಗಹರಿದಿತ್ತಳುನೃಪಾಲಗೆ । ಶಿರವನಸುಬಾಗಿ
ದನುನಾಚಿಕೆಯಾಗಲಿಂತೆಂದ ॥೬॥

ಟೀಕೆ:— ಧರಣಿಪತಿ-ಧರ್ಮರಾಜನೇ, ಕೇಳ್-ಕೇಳು, ನಿಷಧಪತಿ-ನಳನು, (೧) ಕಲಿಪುರುಷ ಮಾಯವ-ಕಲಿಯಕಪಟವನ್ನು, ಬಲ್ಲನೇ-ತಿಳಿಯುವನೇ ! ಮನಮರುಗಿ-ವ್ಯಥೆಪಟ್ಟು, ನಿರ್ವಾಣದಲಿ-ಬೆತ್ತಲೆ ನಿಂದಿರಲ್-ನಿಂತುಕೊಂಡಿರಲು, ಆಗ, ಸತಿ-ದಮಯಂತಿಯು, ಕಂಡು-ನೋಡಿ, ಹರಹರ-ಶಿವನೇ, ಎನುತ, ಆಗ, ಸೀರೆಯ-ತಾನುಟ್ಟಿದ್ದ ಬಟ್ಟೆಯ, ಸೆರಗ-ಕೊನೆಯನ್ನು, ನೃಪಾಲಗೆ-ದೊರೆಗೆ, ಹರಿದಿತ್ತಳ್-ಹರಿದುಕೊಟ್ಟಳು, (೨) ನಾಚಿಕೆಯಾಗಲು, ಶಿರವ-ತಲೆಯನ್ನು, ನಸು ಬಾಗಿದನು-ಸ್ವಲ್ಪಬಗ್ಗಿಸಿಕೊಂಡನು, ಇಂತು-ಹೀಗೆ, ಎಂದ ।೧೬॥

ತಾತ್ಪರ್ಯ:— ಎಲೈ ಧರ್ಮರಾಜನೇ ಕೇಳು-ಈ ರೀತಿಯಾಗಿ ಕಲಿ ಪುರುಷನು ಮಾಡಿದ ಮೋಸವನ್ನು ನಳನು ತಿಳಿಯಲಾರದೆ ಸುಮ್ಮನೆ

ದುಃಖಪಟ್ಟು, ಬಟ್ಟೆಯನ್ನು ಕಳೆದುಕೊಂಡು ನಿಂತಿರಲು, ದಮಯಂತಿಯುನೋಡಿ ಅಯ್ಯೋ ದೈವವೇ ಎಂತಹ ಅವಸ್ಥೆಗೆ ಗುರಿಮಾಡಿದೆ, ಎಂದು ತನ್ನ ಸೀರೆಯ ಸೆರಗನ್ನು ಹರಿದುಕೊಡಲು ಅದನ್ನು ತೆಗೆದುಕೊಂಡು ನಾಚಿ ತಲೆಯನ್ನು ಬಗ್ಗಿಸಿ ಇಂತೆಂದನು ||೬||

ಟಿಪ್ಪಣಿ:— (೧) ಕಲಿಯೀಪುರುಷ-ಕಲಿಪುರುಷ (ಅವ. ಪ್ರೊಸ್ವ ಕ.) ಕಲಿಪುರುಷನ ಮಾಯ-ಕಲಿಪುರುಷ ಮಾಯ (ಷ. ತ) (೨) ನಾಚು ಎಂಬ ಧಾತುವಿಗೆ ಭಾವಾರ್ಥದಲ್ಲಿ ,ಇಕೆ, ಎಂಬಪ್ರತ್ಯಯವು ಬಂತು (ತದ್ಧಿತಾಂತ) ||೬||

ಮೂ|| ಧರೆಯನೃಪರಿಗೆನಿಷಧಪುರಪತಿ | ಯರಮನೆಯವ್ರೋಲಗದ
ಸೌರಭ | ದೊರಕಲದುಕಾರುಣ್ಯವೆಂಬೀಯರಸುತನನಮಗೆ ||ಹ
ರಿದುದಲ್ಲಸಮಸ್ತರಾಜ್ಯದ | ಸಿರಿಗೆಬಾಹಿರನಾಗಿಸತಿಯಳ | ಸೆರಗ
ನುಡುವಂತಾಯ್ತುಹರಹರಯೆನುತಬಿಸುಸುಯ್ದ ||೭||

ಟೀಕೆ:— ಧರೆಯ-ಭೂಮಿಯ,ನೃಪರಿಗೆ-ದೊರೆಗಳಿಗೆ, ನಿಷಧಪುರಪತಿಯ-ನಳನ, ಅರಮನೆಯ-ರಾಜಮಂದಿರದ, ಓಲಗದ-ಸಭೆಯ, ಸೌರಭ-ಸುವಾಸನೆಯು, ದೊರಕಲ್-ಸಿಕ್ಕಲು, ಅದು, ಕಾರುಣ್ಯವೆಂಬ ದಯೆಯೆಂದುಹೇಳುವ (೧) ಈ ಯರಸುತನ - ಇಂತಹ ದೊರೆತನವು, ನಮಗೆ, ಹರಿದುದಲ್ಲ-ತಪ್ಪಿಹೋಯಿತಲ್ಲಾ, ಸಮಸ್ತರಾಜ್ಯದ-ಎಲ್ಲರಾಜ ಸಂಬಂಧವಾದ (೨) ಸಿರಿಗೆ-ಸಂಪತ್ತಿಗೂ, (೩) ಬಾಹಿರನಾಗಿ-ಹೊರಗಾದವನಾಗಿ, ಸತಿಯಳ-ಹೆಂಡತಿಯ, ಸೆರಗಂ-ಸೀರೆಯ ತುಂಡನ್ನು, ಉಡುವಂತೆ-ಸುತ್ತಿಕೊಳ್ಳುವಹಾಗೆ, ಅಯ್ತು ! ಹರಹರ-ಶಿವಶಿವ, ಎನುತ-ಎಂಬದಾಗಿ ದುಃಖಿಸುತ್ತಾ, ಬಿಸುಸುಯ್ದು-ನಿಟ್ಟುಸುರುಬಿಟ್ಟನು ||೭||

ತಾತ್ಪರ್ಯ:—ನಿಷಧದೇಶದ ದೊರೆಯ ಓಲಗದ ಗಂಧವು ನಮಗೆ ಸಿಕ್ಕಿದರೂ ನಾವು ಅವನ ಕೃಪೆಗೆ ಪಾತ್ರರಾದಂತೆಯೇ ಎಂದು, ಲೋಕದ ರಾಜರೆಲ್ಲರೂ ಬಯಸಿ ನಿರೀಕ್ಷಿಸುವಂತಿದ್ದ ಅಸದೃಶವಾದ ದೊರೆತನವು ತಪ್ಪಿ ಸಕಲಸಾಮ್ರಾಜ್ಯಕ್ಕೂ ಹೊರಬ್ಬಾಗಿ ಕೊನೆಗೆ ಉಡುವಬಟ್ಟೆಗೂ ಗತಿಯಿಲ್ಲದೆ ಹೆಂಡತಿಯ ಸೀರೆಯ ಹರುಕನ್ನು ಸುತ್ತಿಕೊಳ್ಳುವಹಾಗಾಯ್ತೇ ಹಾ ದೈವವೇ ! ಎಂದು ಸಂಕಟಪಟ್ಟು ನಿಟ್ಟುಸಿರನ್ನು ಬಿಟ್ಟನು ||೭||

ಟಿಪ್ಪಣಿ:— (೧) ಇದು ಅರಸುತನ-ಈ ಯರಸುತನ (ಗಮಕ)

ಉಕಾರಾ ಗಮಸಂಧಿ, (೨) ಸಿರಿ (ತ್ಸ) ಶ್ರೀ (೩) ಬಾಹಿರ (ತ್ಸ) ಬಾಹ್ಯ ||೭||

ಮೂ|| ಧರೆಯುಸಂಪದದಂಶಭೋಗವ | ಪರಿಹರಿಸಿನಿಜಪುತ್ರಮಿತ್ರರ |
ತೊರೆದುನಂಬಿದಸತಿಯಘೋರಾರಣ್ಯಮಧ್ಯದಲಿ || ಹಿರಿದುಬಳಲಿ
ಸಿನೋಯಿಸಿದೆಕೇ|ಳ್ತರುಣಿಯುನ್ನವೊಲುಂಟೆಪಾಪಿಗ|ಳರಿಯೆನೀ
ಪ್ರೋಗಿನ್ನುತಂದೆಯುಮನೆಗೆನಡೆಯೆಂದ ||೮||

ಟೀಕೆ:— ಧರೆಯು-ಭೂಮಿಯು, ಸಂಪದದ-ಸಂಪತ್ತಿನ, ಅಂಶ-ಭಾಗದ, ಭೋಗವ-ಸುಖವನ್ನು, ಪರಿಹರಿಸಿ-ಬಿಟ್ಟು, ನಿಜಪುತ್ರಮಿತ್ರರ-ತನ್ನ ಮಕ್ಕಳನ್ನೂ, ಸಖಿಯರನ್ನೂ ಸಹ, ತೊರೆದು-ಅಗಲಿ, ನಂಬಿದ-ನಂಬಿಕೊಂಡಿದ್ದ, ಸತಿಯು-ಹೆಂಡತಿಯಾದ ನಿನ್ನನ್ನು, ಘೋರಾರಣ್ಯಮಧ್ಯದಲ್ಲಿ-ಕ್ರೂರವಾದ ಕಾಡಿನಲ್ಲಿ, ಹಿರಿದು-ಹೆಚ್ಚಾಗಿ, ಬಳಲಿಸಿ ಆಯಾಸಪಡಿಸಿ, ನೋಯಿಸಿದೆ-ವ್ಯಥೆಪಡಿಸಿದೆ, ತರುಣಿ-ದಮಯಂತಿಯೇ ಕೇಳ್-ಕೇಳು, ಎನ್ನವೊಲ್-ನನ್ನಹಾಗೆ, ಪಾಪಿಗಳ್ - ಪಾಪಿಷ್ಠರು, ಉಂಟೇ-ಇರುವರೇ ! ಅರಿಯೆ-ಕಾಣೆನು, ನೀಂ-ನೀನು, ಇನ್ನು, (೧) ತಂದೆಯುಮನೆಗೆ (೨) ತೌರುಮನೆಗೆ (೨)ನಡೆ-ಹೊರಡು, ಎಂದ ||೧೮||

ತಾತ್ಪರ್ಯ:— ಸಾಮ್ರಾಜ್ಯ ಸುಖವನ್ನು ಬಿಟ್ಟು ಮಕ್ಕಳನ್ನೂ ಸ್ನೇಹಿತರನ್ನೂ ತೊರೆದು, ನೀನೇಗತಿಯೆಂದು ನನ್ನನ್ನೇ ನಂಬಿಕೊಂಡು ನನ್ನ ಜೊತೆಯಲ್ಲಿಯೇ ಬಂದು ನನಗೆ ಸಮಾನವಾಗಿ ಕಷ್ಟಗಳನ್ನು ಅನುಭವಿಸುತ್ತಿದ್ದ ನಿನ್ನನ್ನು ಈಘೋರವಾದ ಅಡವಿಗಳಲ್ಲಿ ಸುತ್ತಿಸಿ ಬಹು ಕಷ್ಟಪಡಿಸಿದೆನು. ಎಲೌದಮಯಂತಿಯೇ ! ನನ್ನಂತಹ ಪಾಪಿಗಳು ಲೋಕದಲ್ಲಾರಿರುವರೋ ನಾನು ಕಾಣೆನು, ನೀನು ನನಗಾಗಿಇಷ್ಟು ಆಯಾಸಪಟ್ಟದ್ದೇ ಸಾಕು. ಇನ್ನು ನಿನ್ನ ತೌರುಮನೆಗೆ ಹೋಗಿ ಅಲ್ಲಿ ಸುಖವಾಗಿರು ಹೋಗು, ಎಂದನು ||೮||

ಟಿಪ್ಪಣಿ:— (೧) (ತ್ಸ) ತಾತ (೨) ವಿಧಿರೂಪ, ಮಧ್ಯಮ ಪುರುಷೈಕ ವಚನವಾಗಿದೆ. ಇದೇರೂಪವೇ ಭಾವನಾಮವಾಗಿಯೂ ಧಾತುವಾಗಿಯೂ ಇರುವುದು ||೮||

ಮೂ|| ಇನಿಯನಾಡಿದನುಡಿಗೆಯಂಗನೆ | ಕನಲಿನುಡಿದಳುಶೋಕದ
ಲಿನೀ | ನಿನಿತುಮುನಿದಾಡುವರೆಸಾಕಿನ್ನಾರುಗತಿಯೆನಗೆ || ಅನು
ದಿನವು ಪಾನಿನ್ನ ಪದಯುಗ | ವನಜವನುಭಜಿಸುವುದನುಳಿದೀ |ತ

ನುವಸೈರಿಸಲಾರೆನೀಕೇಳೆಂದಳಿಂದುಮುಖಿ ॥೯॥

ಟೀಕೆ:— ಇನಿಯಂ-ಪ್ರಿಯನು, ಆಡಿದ-ಹೇಳಿದ, ನುಡಿಗೆ-ಮಾತಿಗೆ, ಅಂಗನೆ-ದಮಯಂತಿಯು, ಕನಲಿ-ಕೋಪಿಸಿ, ನುಡಿದಳು-ಹೇಳಿದಳು, ನೀಂ-ನೀನು, ಶೋಕದಲಿ-ದುಃಖದಿಂದ, ಇನಿತುಮುನಿದು-ಇಷ್ಟು ಸಿಟ್ಟಿನಿಂದ, ಆಡುವರೆ-ಆಡಬಹುದೇ, ಸಾಕು, ಎನಗೆ-ನನಗೆ, ಇನ್ನಾರುಗತಿ-ಇನ್ನು ದಿಕ್ಕು ಯಾರು ? ನಾ-ನಾನು, ಅನುದಿನದಿ-ಪ್ರತಿದಿನದಲ್ಲಿಯೂ, ನಿನ್ನ, (೧)ಪದಯುಗವನಜವನು- ಪಾದಪದ್ಮಗಳನ್ನು, ಭಜಿಸುವುದಂ-ಸೇವಿಸತಕ್ಕದ್ದನ್ನು, ಉಳಿದು-ಬಿಟ್ಟು (೨) ಈ ತನುವ-ಈ ದೇಹವನ್ನು, ಸೈರಿಸಲಾರೆ-ತಾಳಲಾರೆನು, ನೀ-ನೀನು, ಕೇಳ್-ಕೇಳು (ಎಂಬದಾಗಿ) ಇಂದುಮುಖಿ-ದಮಯಂತಿಯು, ಎಂದಳ್-ಹೇಳಿದಳು ॥೯॥

ತಾತ್ಪರ್ಯ:-- ನಳನು ಹೇಳಿದಮಾತನ್ನು ಕೇಳಿ ಬಹುಕೋಪಿಸಿಕೊಂಡು-ಎಲೈ ಪ್ರಿಯನೇ ದುಃಖದಿಂದ ನೀನು ಈರೀತಿ ಕೋಪಿಸಿ ಇಂತಹ ಮಾತನ್ನಾಡಬಹುದೇ ! ಇದು ತಕ್ಕದ್ದಲ್ಲ. ಸುಮ್ಮನಿರು, ನನಗೆ ನಿನ್ನನ್ನು ಬಿಟ್ಟು ಬೇರೆ ಗತಿಯುಂಟೇ ! ನಿನ್ನ ಪಾದಸೇವೆಯನ್ನು ಬಿಟ್ಟು ಒಂದುಗಳಿಗೆಯಾದರೂ ಈ ದೇಹವನ್ನು ಧರಿಸಲಾರೆನು. ಎಂದಳು ॥೯॥

ಟಿಪ್ಪಣಿ:— (೧) ಪದದಯುಗ-ಪದಯುಗ (ಷ. ತ) ವನಜವಂತಿರ್ಪಪದಯುಗ-ಪದಯುಗವನಜ (ಉ. ಉ. ಕರ್ಮ. ಸ) ಯುಗ-ಕಾಲಪ್ರಮಾಣ, ಎರಡು, ನೊಗ, ಯುಗಕ್ಕೆ (ದ್ಭ) ನೊಗ, ಜುಗ, ವನ-ನೀರಿನಲ್ಲಿ, ಜ-ಹುಟ್ಟಿದ್ದು (ಕಮಲ) (೨) ಇದುತನು-ಈತನು (ಗಮ)॥

ಮೂ॥ ನೆಳಲುತನುವಿನಬಳಿಯೊಳಲ್ಲದೆ । ಚಲಿಸುವುದೆತಾಬೇರೆಗತಿ
ಯೇ । ಹಲವುಮಾತಿನ್ನೇಕೆನೀನೇಗತಿಯುಮಿಂದೆನಗೆ ॥ ಹಳುವ
ಪೇಸಾಮ್ರಾಜ್ಯನಿನ್ನಡಿ । ನೆಳಲಿನಲ್ಲಿರೆನಿನ್ನನುಳಿದಾ । ನಿಳಯ
ಪೇಯೆನಗಡವಿಲೇಸೆಂದಳುಸರೋಜಮುಖಿ ॥೧೦॥

ಟೀಕೆ:—ನೆಳಲು, ತನುವಿನ-ದೇಹದ, ಬಳಿಯೊಳ್-ಪಕ್ಕದಲ್ಲಿ, ಅಲ್ಲದೆ-ಹೊರತು, ಚಲಿಸುವುದೆ-ಸಂಚರಿಸುವುದೇ ! (೧) ಹಲವುಮಾತು-ಅನೇಕಮಾತುಗಳು, ಇನ್ನೇಕೆ-ಇನ್ನುಏತಕ್ಕೆ ? ಎನಗೆ - ನನಗೆ, ಇಂದು-ಈಗ, ಗತಿಯುಂ-ದಿಕ್ಕುಸಹ, ನೀನೇ, ತಾ-ತಾನು, ಬೇರೆ-

ಮತ್ತೊಂದು, ಗತಿಯೇ-ದಿಕ್ಕುಂಟೇ! ನಿನ್ನ, ಅಡಿನೆಳಲಲ್ಲಿ-ಪಾದಚ್ಛಾಯೆಯಲ್ಲಿ, ಇರೆ-ಇರಲು, ಹಳುವವೇ-ಕಾಡೇ, ಸಾಮ್ರಾಜ್ಯ-ರಾಜ್ಯವವಿಯು, ನಿನ್ನಂ-ನಿನ್ನನ್ನು, ಉಳಿದ-ಬಿಟ್ಟ, ಆ ನಿಳಯವೇ-ಮನೆಯೇ ಎನಗೆ-ನನಗೆ, (೨) ಅಡವಿ-ಕಾಡು, ಲೇಸು-ಸತ್ಯವು, (ಎಂಬದಾಗಿ) ಸರೋಜಮುಖಿ-ಕಮಲದಂತೆ ಮುಖವುಳ್ಳದಮಯಂತಿಯು, ಎಂದಳು-ಹೇಳಿದಳು ॥೧೦॥

ತಾತ್ಪರ್ಯ:— ನೆಳಲುದೇಹದ ಸಮೀಪವನ್ನು ಬಿಟ್ಟು ಹೇಗೆ ಬೇರೆ ಕಡೆ ಹೊಗಲಾರದೊ ಹಾಗೆಯೇ ನಾನೂ ನಿನ್ನನ್ನಗಲಿರಲಾರೆನು. ನಿನ್ನ ಪಾದಸೇವೆಯಲ್ಲಿದ್ದರೆ ನನಗೆ ಅಡವಿಯಾದರೂ ರಾಜ್ಯ ಭೋಗವಾಗಿ ತೋರುವುದು. ನಿನ್ನನ್ನಗಲಿ ಮನೆಯಲ್ಲಿ ನಾನಿದ್ದರೂ ಅದು ನನಗೆ ಅರಣ್ಯವಾಸದಂತಿರುವುದು, ಎಂದುಹೇಳಿದಳು. ಅಂದರೆ ನಾನು ನಿನ್ನನ್ನಗಲಿರುವುದು ಅಸಂಭವವೆಂದು ಭಾವವು ॥೧೦॥

ಟಿಪ್ಪ:— (೧) ಹಲವಾದವಗಾತು-ಹಲವ್ರುನಾತು (ವಿ. ಪ್ರಾಪ್ಯ. ಕ) (೨) (ತ್ಸ) ಅಟವಿ ॥೧೦॥

ಮೂ॥ ಎನುತಸುರಿಸಿದಳುಕಣ್ಣಿನಲಿಕಂ | ಬನಿಯಮಿಡಿದಳುಬೆರಲಿನಲಿನಾ | ನಿನಿತುಮಾಡಿದಕರ್ಮಫಲವಿದಕೇನಮಾಡುವೆನು ॥
ಯೆನಗೆಚಿಂತಿಸಲೇಕೆನೀನಿಂ | ದಿನಲಿಚಿತ್ತದನಿರ್ಮಳದಿಕಾ | ನನದಿಚರಿಸುವೆನಿಕ್ಕೊಡನೆತಾನೆಂದಳಿಂದುಮುಖಿ ॥೧೧॥

ಟೀಕೆ:— ಎನುತ-ಎಂಬದಾಗಿ, ಕಣ್ಣಿನಲಿ-ಕಣ್ಣಿನಿಂದ, (೧) ಕಂಬನಿಯ-ಕಣ್ಣೀರನ್ನು, ಸುರಿದಳು-ಸುರಿಸಿದಳು, ಬೆರಲಿನಲಿ-ಬೆಟ್ಟಿನಿಂದ, ಮಿಡಿದಳು-ಹಾರಿಸಿದಳು, ನಾಂ-ನಾನು, ಮಾಡಿದ (೨) ಕರ್ಮಫಲವು - ದುಷ್ಕರ್ಮದ ಫಲವು, ಇನಿತು - ಇಷ್ಟು, ಇದಕೆ-ಈದುಷ್ಕರ್ಮಕ್ಕೆ, ಏನಮಾಡುವೆನು-ಏನಮಾಡಲಿ, ನೀಂ-ನೀನು, ಇಂದಿನಲಿ-ಈಗ ಎನಗೆ-ನನಗೆ, ಚಿಂತಿಸಲೇಕೆ-ಆಲೋಚಿಸುವುದೇತಕ್ಕೆ? ತಾಂ-ನಾನು, ಚಿತ್ತದ-ಮನಸ್ಸಿನ, ನಿರ್ಮಳದಿ-ಪರಿಶುದ್ಧಿಯಿಂದ, ಕಾನನದಿ-ಅರಣ್ಯನಲ್ಲಿ, ನಿನ್ನೊಡನೆ-ನಿನ್ನಜೊತೆಯಲ್ಲಿ, ಚರಿಸುವೆ-ಸಂಚರಿಸುವೆನು, (ಎಂಬದಾಗಿ) ಇಂದುಮುಖಿ-ದಮಯಂತಿಯು, ಎಂದಳು ॥೧೧॥

ತಾತ್ಪರ್ಯ:— ದಮಯಂತಿಯು ಈ ಪ್ರಕಾರವಾಗಿ ಹೇಳುತ್ತಾ, ನಾನು ಮಾಡಿದ ಪ್ರಾರಬ್ಧ ಕರ್ಮಫಲವು ಈರೀತಿಯಾಗಿದೆ, ನಾನೇನ

ಮಾಡಲಿ, ಎಂದು ಕಣ್ಣಿನಲ್ಲಿ ನೀರನ್ನು ಸುರಿಸಿ ಬೆರಲುಗಳಿಂದ ಮಿಡಿಯುತ್ತಾ, ನಳನಂ ಕುರಿತು, ಎಲೈ ಪ್ರಾಣಕಾಂತನೇ! ನನಗಾಗಿ ನೀನು ವ್ಯಥೆಪಡುವುದೇಕೆ ? ನಿನ್ನ ಸಂಗಡಲೇ ನಿಶ್ಚಿಂತವಾದ ಮನಸ್ಸಿನಿಂದ ಅರಣ್ಯ ಸಂಚಾರವನ್ನು ಮಾಡುತ್ತಿರುವೆನು ಎಂದಳು ||೧೧||

ಟಿಪ್ಪಣಿ:— (೧) ಕಣ್+ಪನಿ-ಕಂಬನಿ. (ಕನ್ನಡ, ವ್ಯಾಂ. ಸಂ.) ಬಕಾರಾದೇಶ ಬಂದಿದೆ. ಕಣ್ಣಪನಿ-ಕಂಬನಿ (ಷ. ತ) (೨) ಕರ್ಮದಫಲವು-ಕರ್ಮಫಲ (ಷ. ತ) ||೧೧||

ಮೂ|| ಶೋಕವೇಕೆಲೆರಮಣಿಬಾರೆಂ |ದಾಕಮಲಲೋಚನೆಯತೋ
ಳಿನೊ | ಳೌಕಿಬಿಗಿಯಪ್ಪಿದನುಸೆರಗಿನೊಳೊರಸಿಕಂಬನಿಯ ||
ಜೋಕೆಯಲಿಕುಳ್ಳಿರಿಸಿತೊಡೆಯೊಳ | ಗೇಕಪ್ರೀತಿಯೊಳೆಂದನೀ
ನವಿ | ವೇಕಿಯೇಬಿಡುಮನದದುಗುಡವನೆಂದನಾನೃಪತಿ ||೧೨||

ಟೀಕ:— ಎಲೆರಮಣಿ-ಎಲೌಪ್ರಿಯೆ, ಶೋಕವು-ದುಃಖವು, ಏಕೆ-ವಿತಕ್ಕೆ (೧) ಬಾರ-ಬಾ, ಎಂದು-ಎಂಬದಾಗಿ, (೨) ಆ ಕಮಲಲೋಚನೆಯ-ಕಮಲ ನೇತ್ರೆಯಾದ ದಮಯಂತಿಯನ್ನು, ತೋಳಿನೊಳ್ ತೋಳುಗಳಿಂದ, ಔಕಿ, ಬಿಗಿಯಾಗಿ, ಬಿಗಿಯಪ್ಪಿದನು-ಬಾಚಿ ತಬ್ಬಿಕೊಂಡನು, ಸೆರಗಿನೊಳ್-ವಸ್ತ್ರದ ತುದಿಯಿಂದ, ಕಂಬನಿಯ-ಕಣ್ಣೀರನ್ನು, ಒರಸಿ-ಒತ್ತಿ, ತೊಡೆಯೊಳಗೆ-ತೊಡೆಯಮೇಲೆ, ಜೋಕೆಯಲಿ-ಸೊಗಸಿನಿಂದ, ಕುಳ್ಳಿರಿಸಿ-ಕೂಡಿಸಿಕೊಂಡು, (೩) ಏಕಪ್ರೀತಿಯೊಳ್-ಅತ್ಯಂತ ಪ್ರೀತಿಯಿಂದ, ಎಂದ-ಹೇಳಿದನು, ಆನೃಪತಿ-ನಳನು ನೀಂ-ನೀನು, ಅವಿವೇಕಿಯೇ-ತಿಳಿಯದವಳೇ ! ಮನದ-ಮನ್ಸಿನ, ದುಗುಡವ-ದುಃಖವನ್ನು, ಬಿಡು, ಎಂದ ||೧೨||

ತಾತ್ಪರ್ಯ:— ಆ ಮಾತನ್ನು ಕೇಳಿ ನಳನು ಎಲೌ ಪ್ರಾಣಕಾಂತೆ ದುಃಖಿಸುವುದೇತಕ್ಕೆ? ಇಲ್ಲಿ ಬಾ, ಎಂದು ತೋಳುಗಳಿಂದ ಬಿಗಿದಪ್ಪಿ ಕಣ್ಣೀರನ್ನು ಒರಸಿ ತೊಡೆಯಮೇಲೆ ಕುಳ್ಳಿರಿಸಿಕೊಂಡು ಪ್ರೀತಿ ಪ್ರೋತ್ಸಾಹಕವಾಗಿ, ರಮಣೀ! ಮೂಢಳ ಹಾಗೆ ನೀನು ಶೋಕಿಸಬಹುದೇ ! ಬಿಡು ಎಂದು ಹೇಳುತ್ತಾ ||೧೨||

ಟಿಪ್ಪಣಿ:—(೧) ಬಾರ ಎಂಬುದು ಹಳೆಗನ್ನಡದ ಬರು ಧಾತುವಿನ ವಿಧಿರೂಪ ಮಧ್ಯಮ ಪುರುಷೈಕ ವಚನವು (೨) ಕಮಲದಂತೆ ಲೋಚನ ವುಳ್ಳವಳು-ಕಮಲಲೋಚನೆ-ಆ ಕಮಲಲೋಚನೆ (ಗಮಕ) (೩)

ಏಕವಾದಪ್ರೀತಿ-ಏಕಪ್ರೀತಿ (ವಿ. ಪೂರ್ವ. ಕ) ಏಕ-ಮುಖ್ಯ, ಒಂದು, ಬೇರೆ, ಕೇವಲ (ನಾನಾ) ||೧೨||

ಮೂ|| ಎಂದುಸತಿಯುನುಸಂತವಿಟ್ಟರ | ವಿಂದನಾಭಧ್ಯಾನದಲಿಬರೆ |
ಮುಂದೆಘೋರಾರಣ್ಯವೆಸೆದುದುಘನಭಯಂಕರದಿ || ಸಂದಘನ
ಮೃಗವಲ್ಲಿನೆರದಿರೆ | ಬಂದುಹೊಕ್ಕರುಕಾನನವನರವಿಂದ | ಸಖ
ಹೊದ್ದಿದನುಮೆಲ್ಲನೆ ಪಶ್ಚಿಮಾಂಬುಧಿಯು ||೧೩||

ಟೀಕೆ:— ಎಂದು-ಎಂಬದಾಗಿ, ಸತಿಯನು-ದಮಯಂತಿಯನ್ನು ಸಂತವಿಟ್ಟು-ಸಮಾಧಾನವಾಡಿ (೧) ಅರವಿಂದನಾಭ ಧ್ಯಾನದಲಿ-ವಿಷ್ಣುವನ್ನು ಧ್ಯಾನಿಸುತ್ತಾ, ಬರೆ-ಬರುತ್ತಿರಲು, ಮುಂದೆ- ಮುಂಭಾಗದಲ್ಲಿ, ಘೋರಾರಣ್ಯವು-ಭಯಂಕರವಾದಕಾಡು,ಎಸೆದುದು-ಹೊಳೆಯುತ್ತಿತ್ತು, ಅಲ್ಲಿ, ಸಂದ-ಸೇರಿದ, (೨) ಗನಮೃಘವು-ಕ್ರೂರವಾದ ಮೃಗಗಳು, ನೆರೆದಿರೆ-ತುಂಬಿರಲು, ಕಾನನವಂ-ಅರಣ್ಯವನ್ನು, ಬಂದುಹೊಕ್ಕರು-ಬಂದು ಸೇರಿದರು (೩) ಅರವಿಂದ ಸಖ-ಸೂರ್ಯನು, ಮೆಲ್ಲನೆ-ನಿಧಾನವಾಗಿ. (೪)ಪಶ್ಚಿಮಾಂಬುಧಿಯು-ಪಶ್ಚಿಮುಸಮುದ್ರವನ್ನು, ಹೊದ್ದಿದನು ಹೊಕ್ಕನು||೧೩||

ತಾತ್ಪರ್ಯ:— ಸಮಾಧಾನಗೊಳಿಸಿ ಭಗವಂತನನ್ನು ನೆನೆಯುತ್ತಾ ಬರಲು ಮುಂದೆ ಕೀಕಾರಣ್ಯವು ಕಂಗೊಳಿಸಿತು, ಹುಲಿ, ಕರಡಿ, ಸಿಂಹ, ಶರಭ, ಶಾರ್ದೂಲ ಮೊದಲಾದ ದುಷ್ಟಮೃಗಗಳ ಗುಂಪಿನಿಂದ ಭಯಂಕರವಾದ ಆ ಅಡವಿಯನ್ನು ಇಬ್ಬರೂ ಪ್ರವೇಶಿಸುತ್ತಿರುವಷ್ಟರಲ್ಲಿಯೇ ಸಾಯಂಕಾಲವಾಯಿತು ||೧೩||

ಟಿಪ್ಪಣಿ:— (೧) ಅರವಿಂದದಂತೆ ನಾಭಿ (ಹೊಕ್ಕಳು) ಉಳ್ಳವನು-ಅರವಿಂದನಾಭ (ಬ. ವ್ರೀ) ಅವನಧ್ಯಾನ-ಅರವಿಂದ ನಾಭಧ್ಯಾನ (ಷ. ತ) ಅರ-ದಳಗಳನ್ನು, ವಿಂದ-ಹೊಂದಿರುವುದು (ಕಮಲ) ಅವ, ಧ್ಯಾನಕ್ಕೆ (ದ್ಬ) ಜಾನ (೨) ಘನವಾದಮೃಗ-ಘನಮೃಗ (ವಿ. ಪೂರ್ವಕ) ಮೃಗಕ್ಕೆ (ದ್ಭ) ಮಿಗ, (೩) ಅರವಿಂದ-ಕಮಲದ, ಸಖ-ಮಿತ್ರನು. (ಸೂರ್ಯ) ಅವ (೪) ಪಶ್ಚಿಮದ ಅಂಬುಧಿ (ಷ. ತ) ಅಂಬು-ನೀರು, ಧಿ-ನಿಲ್ಲುವಸ್ಥಳ (ಸಮುದ್ರ) ಅವ ||೧೩||

ಮೂ|| ಲೋಕಕಧಿಪತಿನಳನರಾಣಿಗೆ | ಶೋಕಪರ್ಬಿದತೆರದಿಕತ್ತ
ಲೆ|ಲೋಕವನುಮುಸುಕಿದುದುಧರಣಿಯುಮುಚ್ಚಿದಂದದಲಿ || ಭೀ

ಕರಧ್ವನಿಗಳಿಗೆಹೆದರಿದ । ಳಾಕಮಲಲೋಚನೆಯಕಂಡುಪಿ। ವೇ
ಕನಿಧಿಸಂತೈಸಿದನುನಳನೃಪತಿತಾಪಿರಿದು ॥೧೪॥

ಟೀಕೆ:— ಲೋಕಕೆ-ಪ್ರಪಂಚಕ್ಕೆ (೧) ಅಧಿಪತಿ ನಳನ-ದೊರೆಯಾದ ನಳನ (೨) ರಾಣಿಗೆ-ಹೆಂಡತಿಗೆ ಶೋಕ-ದುಃಖವು, ಪರ್ಬಿದ-ಆವರಿಸಿದ, ತೆರದಿ-ರೀತಿಯಾಗಿ ಲೋಕವನು-ಪ್ರಪಂಚವನ್ನು, ಭರಣಿಯಮುಚ್ಚಿದ-ಭರಣಿಗೆ ಮುಚ್ಚಳವನ್ನು ಮುಚ್ಚಿದ, ಅಂದದಲಿ-ರೀತಿಯಾಗಿ, ಮುಸುಕಿದುದು-ಮುಚ್ಚಿಕೊಂಡಿತು (೩) ಭೀಕರಧ್ವನಿಗಳಿಗೆ-ಭಯಂಕರವಾದ ಮೃಗದ ಶಬ್ದಕ್ಕೆ, ಹೆದರಿದಳ-ಹೆದರಿದ (೪) ಆ ಕಮಲಲೋಚನೆಯ-ದಮಯಂತಿಯನ್ನು, ಕಂಡು, ವಿವೇಕನಿಧಿ-ವಿವೇಕಶಾಲಿಯಾದ, ನಳನೃಪತಿ, ತಾಂ-ತಾನು, ಪಿರಿದು-ಬಹಳವಾಗಿಸಂತೈಸಿದನು-ಸಮಾಧಾನಗೊಳಿಸಿದನು ॥೧೪॥

ತಾತ್ಪರ್ಯ:— ಲೋಕಕ್ಕೊಡೆಯನಾದ ನಳನ ಹೆಂಡತಿಗೆ ದುಃಖಾಂಧಕಾರವು ಮುಚ್ಚಿಕೊಂಡಂತೆಯೂ, ಭರಣಿಯನ್ನು ಮುಚ್ಚಿದರೆ ಅದರೊಳಗೆ ಕತ್ತಲೆಯು ಮುಚ್ಚಿಕೊಳ್ಳುವಂತೆಯೂ, ಬ್ರಹ್ಮಾಂಡವನ್ನೆಲ್ಲ ಕತ್ತಲೆಯು ಆವರಿಸಿತು. ಆಗ ದಮಯಂತಿಯು ಆ ಗಾಢಾಂಧಕಾರದಲ್ಲಿ, ದುಷ್ಟ ಮೃಗಗಳ ಕ್ರೂರ ಧ್ವನಿಗಳಿಗೆ ಬಹಳವಾಗಿ ಹೆದರುತ್ತಿರಲು ಆಕೆಯನ ನಳನು ಸಮಾಧಾನಮಾಡಿದನು ॥೧೪॥

ಟಿಪ್ಪಣಿ:— (೧) ಅಧಿಪತಿಯಾದ ನಳನು-ಅಧಿಪತಿನಳನು, (ವಿ. ಪೂರ್ವ. ಕ) (೨) (ತ್ಸ) ರಾಜ್ಞೀ (೩) ಭೀಕರಗಳಾದ ಧ್ವನಿಗಳು (ವಿ ಪೂರ್ವ. ಕ) ಧ್ವನಿಗೆ (ದ್ಭ) ದನಿ, (೪) ಅವಳು ಕಮಲ ಲೋಚನೆ-ಆ ಕಮಲಲೋಚನೆ (ಗಮಕ) ॥೧೪॥

ಮೂ॥ ತರುಣಿಯಂಜದಿರಂಜದಿರುವಿಧಿ। ಬರದಬರಹವಿದೆನುತವೃಕ್ಷದ । ತರಗೆಲೆಯಹಾಸಿನಲಿಮಲಗಿಸಿಸತಿಯನೀಕ್ಷಿಸುತ ॥ ವರರತುನಮಂಚದಲಿಪವಡಿಸಿ । ಪರಮಸುಖದಲ್ಲಿರುವಸತಿಗಿದು । ಸರಿಯೆಸರಸವೆನುತಕಂಬನಿದುಂಬಿದನುಮರುಗಿ ॥೧೫॥

ಟೀಕೆ:— ತರುಣಿ-ದಮಯಂತಿಯೇ! ಅಂಜದಿರಂಜದಿರು-ಹೆದರಬೇಡ, ಇದು, ವಿಧಿ-ಬ್ರಹ್ಮನು, ಬರೆದ, ಬರಹವು-ಲಿಪಿಯು, ಎನುತ ವೃಕ್ಷದ-ಮರದ, (೧) ತರಗೆಲೆಯ-ಒಣಗಿದೆಲೆಗಳ, ಹಾಸಿನಲಿ-ಹಾಸಿಕೆಯಲ್ಲಿ, ಸತಿಯಂ-ಹೆಂಡತಿಯನ್ನು, ಮಲಗಿಸಿ-ನಿದ್ರೆಮಾಡಿಸಿ, ಈಕ್ಷಿ

ಸುತ-ನೋಡುತ್ತಾ, ಮರುಗಿ-ದುಃಖಪಟ್ಟು, ವರ-ಶ್ರೇಷ್ಠವಾದ, ರತುನಮಂಚದಲಿ-ರತ್ನ ಮಂಚದಮೇಲೆ,ಪವಡಿಸಿ-ಮಲಗಿ(೨)ಪರಮಸುಖದಲ್ಲಿರುವ-ಅತ್ಯಂತಸುಖದಿಂದಿರುವ, ಸತಿಗೆ-ದಮಯಂತಿಗೆ, ಇದು-ತರಗೆಲೆಯ ಹಾಸಿಗೆಯು, ಸರಿಯೆ-ತಕ್ಕದ್ದೇ!ಹರಹರ-ಶಿವನೇ, ಎನುತ(೩) ಕಂಬನಿದುಂಬಿದನು-ಕಣ್ಣೀರ ಸುರಿಸಿದನು ||೧೫||

ತಾತ್ಪರ್ಯ:— ಪ್ರಿಯೆ ಹೆದರಬೇಡ ದೈವವಿಲಾಸಕ್ಕೆ ಚಿಂತಿಸಿ ಫಲವೇನು? ಎಂದು ಧೈರ್ಯವನ್ನು ಹೇಳಿ ಒಣಗಿದೆಲೆಗಳನ್ನು ಗುಡ್ಡೆಮಾಡಿ ಹಾಸಿ ಅದರಮೇಲೆ ಮಲಗಿ ನಿದ್ರಿಸುವಂತೆ ಹೇಳಿ, ಆಕೆಯದುರವಸ್ಥೆಯನ್ನು ಕಂಡು—ಹಾದೈವವೇ ರತ್ನಮಂಚವಲ್ಲಿ ಹಂಸತಲ್ಪದಮೇಲೆ ಸುಖದಿಂದ ಮಲಗುತ್ತಿದ್ದ ಈಕೆಗೆ ತರಗೆಲೆಗಳಮೇಲೆ ಮಲಗುವ ಗತಿ ಬರಬಹುದೇ,

ಎಂದು ಕಣ್ಣೀರನ್ನು ಸುರಿಸುತ್ತಿದ್ದನು ||೧೫||

ಟಿಪ್ಪಣಿ:— (೧) ತರಗಾದಎಲೆ-ತರಗೆಲೆ (ವಿ. ಪೂರ್ವ. ಕ) (೨) ಪರಮವಾದ ಸುಖ-ಪರಮಸುಖ (ವಿ. ಪೂರ್ವ. ಕ) (೩) ಕಂಬನಿಯಿಂ ತುಂಬಿದನು-ಕಂಬನಿದುಂಬಿದನು (ಕ್ರಿ. ಸ) ||೧೫||

ಮೂ|| ಎಲ್ಲರೋಪಾದಿಯಲಿಪತಿವ್ರತೆ | ಯಲ್ಲವೀದಮಯಂತಿಬಿಡುವ
ವ | ಳಲ್ಲತನ್ನನುತರುಣಿಕಾಣದಕಡೆಗೆತೆರಳಿದರೆ || ಅಲ್ಲಿತಂದೆಯ
ಮನೆಗೆಹೋಗುವ | ಳಿಲ್ಲಿತಾನಿರೆಬಿಡಳೆನುತಮನ | ದಲ್ಲಿಯೋಚಿ
ಸಿನಿದ್ರೆಗೈಸಿದನಾಗನಿಜಸತಿಯ ||೧೬||

ಟೀಕೆ:— ಈ ದಮಯಂತಿ, ಎಲ್ಲರೋಪಾದಿಯಲಿ-ಇತರ ಪತಿವ್ರತೆಗಳಂತೆ, ಪತಿವ್ರತೆಯಲ್ಲವು-ಸಾಧಾರಣಪತಿವ್ರತೆಯಲ್ಲ, ತನ್ನನು-ನನ್ನನ್ನು, ಬಿಡುವಳಲ್ಲ-ಬಿಟ್ಟಿರುವಳಲ್ಲ, ತರುಣಿ-ಈ ಸ್ತ್ರೀಯು, ಕಾಣದಕಡೆಗೆ-ತಿಳಿಯದೆಡೆಗೆ, ತೆರಳಿದರೆ-ಹೋದರೆ, ಅಲ್ಲಿ-ಆಗ, ತಂದೆಯಮನೆಗೆ-ತೌರುಮನೆಗೆ, ಹೋಗುವಳು, ಇಲ್ಲಿ-ಇವಳಸವಿಾಪದಲ್ಲಿ, ತಾಂ-ನಾನು, ಇರೆ-ಇರಲು, ಬಿಡಳು-ಬಿಡುವುದಿಲ್ಲ, ಎನುತ, ಮನದಲ್ಲಿ-ಮನಸ್ಸಿನಲ್ಲಿ, ಯೋಚಿಸಿ-ಆಲೋಚಿಸಿ, ಆಗ, (೧) ನಿಜಸತಿಯ ತನ್ನ ಹೆಂಡತಿಯನ್ನು (೨) ನಿದ್ರೆಗೈಸಿದನು-ನಿದ್ರೆಮಾಡಿಸಿದನು ||೧೬||

ತಾತ್ಪರ್ಯ:— ಈ ದಮಯಂತಿಯು ಲೋಕದಲ್ಲಿರುವಸಾಮಾನ್ಯ ಪತಿವ್ರತೆಯರಂತಲ್ಲ. ನನ್ನನ್ನು ಅಗಲಿ ನಿಮಿಷ ಮಾತ್ರವೂ ಇರುವಳ

ಲ್ಲ ಸಮೀಪದಲ್ಲಿದ್ದರೆ ನಾನು ಎಲ್ಲಿಗೆ ಹೋಗುವುದಕ್ಕೂ ಅವಕಾಶ ಕೊಡುವುದಿಲ್ಲ. ಆದಕಾರಣ ಮೋಸದಿಂದ ಇವಳು ಕಾಣದ ಕಡೆಗೆಹೊರಟು ಹೋದರೆ ದಿಕ್ಕು ತೋರದೆ ತೌರು ಮನೆಯನ್ನು ಸೇರುವಳು. ಆಗ ನಾನು ಸ್ವೇಚ್ಛೆಯಾಗೆ ಆತಂಕವಿಲ್ಲದೆ ವನವಾಸ ಮಾಡಬಹುದು, ಇವಳಿಗೆ ಕಷ್ಟವು ತಪ್ಪುವುದು. ಎಂದಾಲೋಚಿಸಿ ಆಕೆಯು ನಿದ್ರೆ ಮಾಡುವ ಸಮಯವನ್ನು ನಿರೀಕ್ಷಿಸುತ್ತಿದ್ದನು ||೧೬||

ಟಿಪ್ಪಣಿ:— (೧) ನಿಜಳಾದಸತಿ-ನಿಜಸತಿ (ವಿ. ಪೂರ್ವ. ಕ) (೨) ನಿದ್ರೆಯಂಗೈಸಿದನು-ನಿದ್ರೆಗೈಸಿದನು (ಕ್ರಿ. ಸ.) ||೧೧||

ಮೂ|| ಮರೆದುಮಲಗಿದಳವಳಮುಗ್ಗುಲ । ಸೆರಗಮೆಲ್ಲನೆಜಾರಿಸುತಲಾ
ಗರಸವೆಸನವಕೊಂಡುಮಲಗಿದ ಸತಿಯನೀಕ್ಷಿಸುತ ॥ ಮರು
ಗಿದನುಮನದೊಳಗೆನೃಪಶ್ರೀ । ಹರಿಯೆನಾನಿಂತಡವಿಯುಲಿದ್ದಂದ
ಯೆ । ಚ್ಚರಿಸಂತುಪೋಗುವೆನೆನುತಬಿಸುಸುಯ್ದ ||೧೭||

ಟೀಕೆ:— ಮರೆದು-ಮೈಮರೆದು, ಮಲಗಿದಳು - ನಿದ್ರಿಸಿದಳು, ಅವಳ, ಮುಗ್ಗುಲ-ಮುಗುಲಿಗೆ ಸಿಕ್ಕಿದ, ಸೆರಗ-ಬಟ್ಟೆಯ ಕೊನೆಯನ್ನು ಮೆಲ್ಲನೆ-ನಿಧಾನವಾಗಿ, ಜಾರಿಸುತಲಿ-ಬಿಡಿಸಿಕೊಳ್ಳುತ್ತಾ, ಆಗ, ಅರಸ ದೊರೆಯು, ವಸನವ-ವಸ್ತ್ರವನ್ನು, ಕೊಂಡು-ತೆಗೆದುಕೊಂಡು, ಮಲಗಿದ, ಸತಿಯಂ-ಹೆಂಡತಿಯನ್ನು, ಈಕ್ಷಿಸುತ-ನೋಡುತ್ತಾ, ನೃಪ ದೊರೆಯು, ಮನದೊಳಗೆ-ಮನಸ್ಸಿನಲ್ಲಿ, ಮರುಗಿದನು-ಪಶ್ಚಾತ್ತಾಪಪಟ್ಟನು (೧) ಶ್ರಿಹರಿಯೆ-ಎಲೈ ವಿಷ್ಣುವೆ? ನಾಂ-ನಾನು, ಇಂತು-ಹೀಗೆ, ಅಡವಿಯುಲಿ-ಕಾಡಿನಲ್ಲಿ, ಎಚ್ಚರಿಸದಂದದಿಂ-ಎಚ್ಚರ ಗೊಳಿಸದೆ (೨) ಎಂತು-ಹೇಗೆ, ಪೋಗುವೆಂ-ಹೋಗಲಿ, ಎನುತ, ಬಿಸುಸುಯ್ದು-ನಿಟ್ಟುಸಿರನ್ನು, ಬಿಟ್ಟನು, ೧೭.||

ತಾತ್ಪರ್ಯ:— ನಿದ್ರೆಯು ಹತ್ತಿದಕೂಡಲೆ ಆಕೆಯ ಮುಗ್ಗುಲಿಗೆ ಹಾಸಿದ ತನ್ನ ಬಟ್ಟೆಯ ಕೊನೆಯನ್ನು ಮೆಲ್ಲಗೆ ಎಳೆದುಕೊಂಡು ಹೊರಡುವುದಕ್ಕೆ ಪ್ರಯತ್ನಪಟ್ಟು ನಿದ್ದೆಮಾಡುತ್ತಿದ್ದ ಹೆಂಡತಿಯನ್ನು ನೋಡಿ ದುಃಖದಿಂದ ಅಯ್ಯೋ ವಿಧಿಯೇ ಇಂತಹ ಕಾಡಿನಲ್ಲಿ ಈಕೆಯನ್ನು ನಿದ್ರೆಗೊಳಿಸಿ, ಎಚ್ಚರಿಸದೆ ಹೇಗೆ ಬಿಟ್ಟು ಹೋಗಲಿ ! ಎಂದು ದುಃಖಿಸುತ್ತಾ ನಿಟ್ಟುಸಿರನ್ನು ಬಿಟ್ಟನು ||೧೭||

ಟಿಪ್ಪಣಿ:— (೧) ಶ್ರೀಯುಕ್ತನಾದಹರಿ-ಶ್ರೀಹರಿ (ಉ, ನ., ಕ,

ಸ) (೨) ಪ್ರಶ್ನಾರ್ಥಕವಾದ ಕ್ರಿಯಾವಾಚಕಾವ್ಯಯವು ॥೧೭॥

ಮೂ॥ ಮಡದಿಯಗಲಿದಬಳಿಕಲಲ್ಲಿಹ| ತಡಿಯದಾಂಟುವಮರಳಿನಿಜಸ
ತಿ| ಯೆಡಗೆತಿರುಗುವಚಂದ್ರಬಿಂಬಾನನವನೀಕ್ಷಿಸುವ| ಅಡಸಿದತಿ
ದುಃಖದಲಿಮೆಲ್ಲಡಿ| ಯಿಡುವವಸತಿಯನುನೋಡಿಮರುಗುವ| ನೊಡ
ನೆಶೋಕದಿನಡೆದನಳನೃಪನೊಂದುಯೋಜನವ ॥೧೮॥

ಟೀಕೆ:— ಮಡದಿಯ-ಹೆಂಡತಿಯನ್ನು, ಅಗಲಿದ-ಬಿಟ್ಟುಹೊರಟ, ಬಳಿಕ-ತರುವಾಯ, ಅಲ್ಲಿಹ-ಅಲ್ಲಿರುವ, ತಡಿಯ-ಹೊಳೆಯದಡಗನ್ನು, ದಾಂಟುವ-ದಾಟುವವನು, ಮರಳಿ-ಪುನಃ, ನಿಜಸತಿಯ-ತನ್ನ ಪತ್ನಿಯ, ಎಡೆಗೆ-ಕಡೆಗೆ, ತಿರುಗುವ-ತಿರುಗಿನೋಡುವವನು (೧) ಚಂದ್ರಬಿಂಬಾನನ-ಚಂದ್ರಮಂಡಲದಂತಿರುವ ಮುಖವನ್ನು, ಈಕ್ಷಿಸುವ- ನೋಡುವವನು, ಅಡಸಿದ-ಉಕ್ಕಿಬರುತ್ತಿರುವ, ಅತಿದುಃಖದಲಿ-ಹೆಚ್ಚಾದಶೋಕದಿಂದ, (೨) ಮೆಲ್ಲಡಿಯಿಡುವ-ಮೆತ್ತಗೆ ಹೆಜ್ಜೆಯನ್ನು ಇಡುವ, ಒಡನೆ-ಕೂಡಲೆ, ಸತಿಯನು-ಹೆಂಡತಿಯನ್ನು, ನೋಡಿ, ಶೋಕದೆ- ದುಃಖದಿಂದ, ನಳನೃಪಂ-ನಳರಾಜನು (೩) ಒಂದುಯೋಜನವ-ಒಂದುಗಾವುದವನ್ನು, ನಡೆದ-ಹೋದನು. ॥೧೮॥

ತಾತ್ಪರ್ಯ:—ಬಿಟ್ಟುಹೋಗಲಾರದೆ ವಿಧಿಯಿಲ್ಲದುದರಿಂದಹೇಗೋ ಹೊರಟು ಹೋಗುತ್ತಾ ಸ್ವಲ್ಪದೂರ ನಡೆದು ಪುನಃ ಹಿಂದಿರುಗಿ ನೋಡುತ್ತಾ, ಇನ್ನು ಸ್ವಲ್ಪದೂರಹೋಗಿ ಅಲ್ಲಿ ನಿಂತು ಹಿಂದಿರುಗಿ ಪತ್ನಿಯ ಮುಖಚಂದ್ರನನ್ನು ನೋಡುತ್ತಾ, ದುಃಖದಿಂದ ಮೆಲ್ಲಗೆ ಮುಂದಕ್ಕೆ ಒಂದೊಂದು ಹೆಜ್ಜೆಯನ್ನಿಡುತ್ತಾ, ಮತ್ತೆ ಹಿಂದಿರುಗುತ್ತಾ ಹೀಗೆಯೇ ಒಂದು ಗಾವುದ ದೂರವನ್ನು ನಡೆದನು ॥೧೮॥

ಟಿಪ್ಪಣಿ: —(೧) ಚಂದ್ರನಬಿಂಬ-ಚಂದ್ರಬಿಂಬ (ಷ. ತ) ಚಂದ್ರಬಿಂಬದಂತಿರುವ ಆನನ-ಚಂದ್ರಬಿಂಬಾನನ (ಉ. ಪೂರ್ವ. ಕ) ಮೆಲ್ಲಡಿಯಂ ಇಡುವ-ಮೆಲ್ಲಡಿಯಿಡುವ (ಕ್ರಿ. ಸ) (೩) ಒಂದಾದಯೋಜನ-ಒಂದು ಯೋಜನ (ದ್ವಿಗು) ॥೧೮॥

ಮೂ॥ ಮರುಗುವನುನೆನೆದೊಮ್ಮೆಕಂಗಳ| ಮರಳಿನೋಡುವನೊಮ್ಮೆ
ಸತಿಯೊಳಿರವಕಾಣದೆಕಳವಳಕ್ಕೀಡಾಮದಾಕ್ಷ್ಯದಯು॥ ಕರಗಿತ
ದನವಷ್ಕ್ವೈಸ ಚಿತ್ತ ದಿ| ಮುರಿದುತ್ತಗ್ಗದಮುಹಿಮಶೋಕದ| ಹೊರಗೆ
ಯಲಿಕಾತರಿಸನಡೆದನುನೃಪತಿಕೇಳೆಂದ ॥೧೯॥

ಟೀಕೆ:—ನೆನೆದು-ಜ್ಞಾಪಿಸಿಕೊಂಡು, ಒಮ್ಮೆ-ಒಂದುಸಾರಿ, ಮರುಗುವಂ-ದುಃಖಪಡುವದು (೧) ಒಮ್ಮೆ-ಮತ್ತೊಂದುಸಾರಿ, ಕಂಗಳ-ಕಣ್ಣುಗಳನ್ನು, ಮರಳಿ-ತಿರುಗಿಸಿ, ನೋಡಿದಂ-ನೋಡಿದನು, ಸತಿಯು-ಹೆಂಡತಿಯು, ಒಂದಿರನ-ಸ್ಥಿತಿಯನ್ನು, ಕಾಣದೆ, ಆ ಹೃದಯ-ಮನಸ್ಸು, ಕಳವಳಕ್ಕೆ-ಸಂಕಟಕ್ಕೆ, ಈಡಾದುದು-ಗುರಿಯಾಯ್ತು, ಅರಸನ-ದೊರೆಯ, ಧೈರ್ಯ, ಕರಗಿತು-ತಗ್ಗಿತು, ಚಿತ್ತದಿ-ಮನಸ್ಸಿನಲ್ಲಿ, ಮುರಿದು-ವ್ಯಥೆಪಟ್ಟು, ತಗ್ಗದ-ಕಡಿಮೆಯಾಗದ, (೨) ಮಹಿಮಶೋಕದ-ಹೆಚ್ಚಾದದುಃಖದ, ಹೊರಗೆಯಲಿ-ಭಾರದಿಂದ, ಕಾತರಿಸಿ-ಕಳವಳಪಟ್ಟು, ನೃಪತಿ-ದೊರೆಯು, ನಡೆದನು-ಹೋದನು, ಕೇಳು, ಎಂದ"೧೯||

ತಾತ್ಪರ್ಯ:—ತರುವಾಯ ಆಕೆಯನ್ನು ನೆನೆದು ದುಃಖಪಡುತ್ತಾ ಪುನಃ ಪುನಃ ತಿರುಗಿನೋಡುತ್ತಾ ಹೋಗುತ್ತಿರಲು ಕಾಣದೆ ಮನೋವ್ಯಥೆಯುಂಟಾಯ್ತು. ಧೈರ್ಯವು ಕುಂದಿತು. ಯತ್ನವಿಲ್ಲದೆ ಬಹುದುಃಖಾವೇಶದಿಂದಲೇ ಮುಂದು ಮುಂದಕ್ಕೆ ಪ್ರಯಾಣ ಮಾಡಿದನು ||೧೯||

ಟಿಪ್ಪಣಿ:—ಒಂದು ಎಂಬಶಬ್ದದಮೇಲೆ, ಸಾರಿ, ಎಂಬರ್ಥದಲ್ಲಿ, ಮೆ ಎಂಬ ಪ್ರತ್ಯಯವು ಬಂತಿದೆ, ತದ್ಧಿತಾಂತ-(೨)ಮಹಿಮವಾದ ಶೋಕ,-ಮಹಿಮಶೋಕ (ವಿ. ಪೂರ್ವ. ಕ) ||೧೯||

ಮೂ ಕರುಣದೋರದೆಮನದಿನಳನೃಪ| ತೊರೆದುಬಿಟ್ಟನುಸತಿಯುಳ
ನುಹುಲಿ| ಕರಡಿಮೃಗದುಪಟಳವತಾನಿನ್ನೆಂತುಸೈರಿಪಳೊ|| ಮೊರೆ
ಯಲಾಲಿಸಿನೋಳ್ಪೆನೆಂದುರು| ತರದಪ್ರೇಮದಿಬಂದುಸತಿಗೆ| ಚ್ಚರಿ
ಸುವಂದದಿತರಣಿತಲೆದೋರಿದನುಪೂರ್ವದಲಿ ||೨೦||

ಟೀಕೆ:—ನಳನೃಪ-ನಳರಾಜನು; ಮನದಿ-ಮನಸ್ಸಿನಲ್ಲಿ, (೧) ಕರುಣದೋರದೆ-ದಯಾಶೂನ್ಯನಾಗಿ, ಸತಿಯುಳನು-ಹೆಂಡತಿಯನ್ನು, ತೊರೆದುಬಿಟ್ಟನು-ಬಿಟ್ಟುಹೋದನು, ಹುಲಿಕರಡಿಮೃಗದ-ಹುಲಿ ಕರಡಿ ಮೊದಲಾದ ದುಷ್ಟಮೃಗಗಳ, ಉಪಟಳವ-ಕಾಟವನ್ನು, ತಾಂ-ತಾನು, ಇನ್ನೆಂತು-ಇನ್ನು ಹೇಗೆ, ಸೈರಿಪಳೊ-ತಡೆವಳೋ, ಮೊರೆಯ - ಆಕೆಯ ದುಃಖವನ್ನು, ಲಾಲಿಸಿ - ಕೇಳಿ, ನೋಳ್ಪೆನು - ನೋಡುವೆನು, ಎಂದು, ಉರುತರದ - ಹೆಚ್ಚಾದ, ಪ್ರೇಮದಿ - ಪ್ರೀತಿಯಿಂದ, ಬಂದು, ಸತಿಗೆ-ದಮಯಂತಿಗೆ, ಎಚ್ಚರಿಸುವಂದದಿ-ಎಚ್ಚರಗೊಳಿಸುವನೋ ಎಂಬಂತೆ, ತರಣಿ-ಸೂರ್ಯನು, ಪೂರ್ವದಲಿ-ಪೂರ್ವದಿಕ್ಕಿನಲ್ಲಿ, (೨) ತಲೆದೋರಿದನು-

ಉದಿಸಿದನು. ॥೨೦॥

ತಾತ್ಪರ್ಯ:—ನಳರಾಜನು ದಯಾಶೂನ್ಯನಾಗಿ ತನ್ನ ಹೆಂಡತಿಯ ನ್ನು ಕಾಡಿನಲ್ಲಿ ಬಿಟ್ಟುಹೋದನು, ದುಷ್ಟಮೃಗಗಳ ಬಾಧೆಯನ್ನು ಆ ಕೆಯು ಹೇಗೆ ಸೈರಿಸುವಳೋ ? ಆಕೆಯ ದುಃಖವಾರ್ತೆಯನ್ನು ನಾನಾ ದರೂ ವಿಚಾರಿಸುವೆನು, ಎಂದು ಸೂರ್ಯನು ದಮಯಂತಿಯನ್ನು ಎಚ್ಚ ರಿಸುವುದಕ್ಕೆ ಬಂದನೋ ಎಂಬಂತೆ ಪೂರ್ವದಿಕ್ಕಿನಲ್ಲಿ ಹುಟ್ಟಿದನು. ಅಂದ ರೆ-ರಾತ್ರಿ ಕಳೆದು ಬೆಳಗಾಯಿತೆಂದು ಭಾವವು ॥೨೦॥

ಟಿಪ್ಪಣಿ—(೧) ಕರುಣವಂ ತೋರದೆ-ಕರುಣದೋರದೆ (ಕ್ರಿ. ಸ) ದಕಾರಾದೇಶ (೨) ತಲೆಯಂತೋರಿದನು-ತಲೆದೋರಿದನು (ಕ್ರಿ.ಸ) ಈ ಪದ್ಯದಲ್ಲಿ, ಸೂರ್ಯನು ಉದಯಿಸಿದುದಕ್ಕೆ ದಮಯಂತಿಯ ವೃತ್ತಾಂ ತವನ್ನು ವಿಚಾರಿಸುವುದು, ಫಲವಲ್ಲದಿದ್ದರೂ ಫಲವೆಂದು ಹೇಳಿರುವುದ ರಿಂದ ಫಲೋತ್ಪ್ರೇಕ್ಷಾಲಂಕಾರವು ॥೨೦॥

ಮೂ॥ ನಳಿನಮುಖಿಮೈಮುರಿದುನಿದ್ರೆಯ। ತಿಳಿದುಮೆಲ್ಲನೆನೋಡುತ
ಲ್ಲೆಡಬಲವನೀಕ್ಷಿಸಿಪತಿಯಕಾಣದೆಬಳಲಿಮೂರ್ಛೆಯಲಿ॥ಮಲಗಿದ
ಳುಮೈಮರೆದುನಿಮಿಷಕೆ। ತಿಳಿದುಕಾಣದೆಕಾತರದಿಹಂ। ಬಲಿಸಿ
ಹಲುಬಿದಳಲ್ಲಿಗಿರಿತರುನಿಕರಮಧ್ಯದಲಿ ॥೨೧॥

ಟೀಕೆ:—ನಳಿನಮುಖಿ-ದಮಯಂತಿಯು, (೧) ಮೈಮುರಿದು, ನಿದ್ರೆಯ-ನಿದ್ದೆಯನ್ನು, ತಿಳಿದು-ತಿಳಿದುಕೊಂಡು, ಮೆಲ್ಲನೆ-ನಿಧಾನವಾಗಿ ನೋಡುತ, ಅಲ್ಲಿ, ಎಡಬಲವಂ-ಎಡಬಲಗಳನ್ನು, ಈಕ್ಷಿಸಿ-ನೋಡಿ, ಪತಿ ಯ-ಗಂಡನನ್ನು, ಕಾಣದೆ-ನೋಡದೆ, ಬಳಲಿ, ಮೂರ್ಛೆಯಲಿ-ಮೂರ್ಛೆ ಯಿಂದ, ಮೈಮರೆದು-ಪ್ರಜ್ಞೆತಪ್ಪಿ, ಮಲಗಿದಳು, ನಿಮಿಷಕೆ- ನಿಮಿಷ ಕಾಲದಲ್ಲಿ, ತಿಳಿದು-ಎಚ್ಚತ್ತು, ಕಾಣದೆ-ನಳನನ್ನು ಕಾಣದೆ, ಕಾತರದಿ- ಕಳವಳದಿಂದ, ಹಂಬಲಿಸಿ, ಅಲ್ಲಿ (೨) ಗಿರಿತರುನಿಕರಮಧ್ಯದಲಿ- ಬೆಟ್ಟಗಿ ಡಗಳ ಮಧ್ಯದಲ್ಲಿ, ಹಲುಬಿದಳು-ಗೋಳಾಡಿದಳು ॥೨೧॥

ತಾತ್ಪರ್ಯ:—ಅಷ್ಟರಲ್ಲಿಯೇ ದಮಯಂತಿಯು ಎಚ್ಚತ್ತು, ಮೈ ಮುರಿದು ತನ್ನೆರಡು ಪಾರ್ಶ್ವವನ್ನು ನೋಡಿ, ನಳನನ್ನು ಕಾಣದೆ ಮೈಮ ರೆದು ಮೂರ್ಛೆಹೊಂದಿದಳು, ಸ್ವಲ್ಪಕಾಲದಲ್ಲಿಯೇ ಪುನಃಚೇತರಿಸಿಕೊಂ ಡು, ತಾನೊಬ್ಬಳೇ ಅನಾದರದ ನಾನಾಬಗೆಯಾಗಿ ಹಂಬಲಿಸಿ ಆಕಾಡೆ ಲ್ಲವೂ ಮೊಳಗುವಂತೆ ವ್ಯಸನಪಡುತ್ತಿದ್ದಳು. ॥೨೧॥

ಟಿಪ್ಪಣಿ—(೧) ಮೈಯಂಮುರಿದು-ಮೈಮುರಿದು (ಕ್ರಿ.ಸ) (೨) ಗಿರಿಯೂ ತರುವೂ-ಗಿರಿತರುಗಳು (ದ್ವಂದ್ವ) ಗಿರಿ ತರುಗಳನಿಕರ- (ಷ. ತ) ನಿಕರದಮಧ್ಯ (ಷ. ತ) ॥೨೧॥

ಮೂ॥ ಹಾ ರಮಣ ನಳನೃಪತಿ ಹಾ ರಣ। ಧೀರ ಸದ್ಗುಣ ಹಾರ ರಿಪುಸಂ। ಹಾರ
ನಿತ್ಯೋದ್ಧಾರ ನಿರ್ಮಳ ಸತ್ಯಸಂಚಾರ। ಘೋರ ಕಾನನದೊಳಗೆ ನಂ
ಬಿದ ನಾರಿಯನು ಬಿಸುಡುವರೆ ತನಗಿ। ನ್ನಾರು ಗತಿ ಮೊಗದೋರೆನುತ
ಹಲುಬಿದಳು ದಮಯಂತಿ ॥೨೨॥

ಟೀಕೆ:—ರಮಣ-ಪತಿಯೇ, ಹಾ-ಅಯ್ಯೋ, ನಳನೃಪತಿ - ನಳನೇ, ಹಾ-ಅಯ್ಯೋ ? (೧) ರಣಧೀರ-ಯುದ್ಧದಲ್ಲಿ ಧೈರ್ಯಶಾಲಿಯಾದವನೇ, ಸದ್ಗುಣ-ಸುಗುಣಗಳ, ಹಾರ-ಸರವುಳ್ಳವನೇ, ರಿಪುಸಂಹಾರ-ಶತ್ರುಗಳನ್ನು ಕೊಂದವನೇ, ನಿತ್ಯೋದ್ಧಾರ-ಸರ್ವದಾರಕ್ಷಕನಾದವನೇ, ನಿರ್ಮಳ-ಪರಿಶುದ್ಧನೇ, ಸತ್ಯಸಂಚಾರ - ಸತ್ಯವಾದ ನಡತೆಯುಳ್ಳವನೇ, ಘೋರಕಾನನದೊಳಗೆ-ಭಯಂಕರವಾದ ಈ ಕಾಡಿನಲ್ಲಿ, ನಂಬಿದ- ನಂಬಿದ್ದ, ನಾರಿಯನು-ಹೆಂಗಸನ್ನು, ಬಿಸುಡುವರೆ-ಬಿಟ್ಟು ಹೋಗಬಹುದೇ, ತನಗೆ-ನನಗೆ, ಇನ್ನಾರುಗತಿ-ಇನ್ನು ಯಾರುದಿಕ್ಕು, (೨) ಮೊಗದೋರು-ಮುಖವನ್ನು ತೋರಿಸು, ಎನುತ-ಎಂಬದಾಗಿ, ದಮಯಂತಿ, ಹಲುಬಿದಳು-ಗೋಳಾಡಿದಳು ॥೨೨॥

ತಾತ್ಪರ್ಯ:—ಹಾ ಪತಿಯೇ ! ರಣಧೀರಾ ! ಸುಗುಣಾ ! ಶತ್ರುಸಂಹಾರಕಾ ! ನಿರ್ಮಲಾ ! ಸತ್ಯಸಂಧಾ ? ಇಂತಹ ನೀನು ನಿನ್ನನ್ನಾಶ್ರಯಿಸಿ ಬಂದಿದ್ದ ಹೆಂಡತಿಯನ್ನು ಈ ಘೋರಾಟವಿಯಲ್ಲಿ ಬಿಟ್ಟು ಹೋಗಬಹುದೇ ನನಗಾರುಗತಿ ! ಎಲ್ಲಿರುವಿ ! ಮುಖವನ್ನು ತೋರಿಸು ಎಂದು ನಾನಾವಿಧವಾಗಿ ಪ್ರಲಾಪಿಸಿದಳು ॥೨೨॥

ಟಿಪ್ಪಣಿ:....(೧) ರಣದಲ್ಲಿ ಧೀರ-ರಣಧೀರ (ಸ. ತ) (೨) ಮೊಗವಂತೋರು-ಮೊಗದೋರು (ಕ್ರಿ. ಸ) ಮೊಗಕ್ಕೆ (ತ್ಸ) ಮುಖ॥೨೨॥

ಮೂ॥ ಪೊಡವಿಗಿಳಿವೆನೊ ಹವ್ಯವಾಹಕ। ನೊಡಲ ಹೊಗುವೆನೊ ಹಾಸ
ರೆಯಬಲು। ಮಡುವಿನೊಳು ಮುಳುಗುವೆನೊ ಜೀವವ ತೊರವೆನೋ
ಬಿಡದೆ। ಅಡಸಿಗಾಪತ್ತಿನಲಿ ಗರಳವ। ಕುಡಿವೆನೋ ತಾನೆನುತ ಸತಿ ಬಾ
ಯ್ಬಿಡುತ ಕಾನನದೊಳಗೆ ತಿರುಗಿದಳಧಿಕ ಶೋಕದಲಿ ॥೨೩॥

ಟೀಕೆ:—ಪೊಡವಿಗೆ-ಭೂಮಿಗೆ, ಇಳಿವೆನೋ-ಇಳಿದು ಹೋಗ

ವೆನೋ ! ಹುಯ್ದ -ಉರಿಯುತ್ತಿರುವ, ಪಾವಕನ-ಅಗ್ನಿಯ, ಒಡಲ-ದೇಹವನ್ನು, ಹೊಗುವೆನೋ-ಪ್ರವೇಶಿಸಲೊ ! (೧) ಹಾಸರೆಯ-ಹಾಸಿದಬಂಡೆಯುಳ್ಳ, ಬಲುಮಡುವಿನೊಳು-ದೊಡ್ಡಮಡುವಿನೊಳಗೆ, ಮುಳುಗುವೆನೊ, ಜೀವವ-ಪ್ರಾಣವನ್ನು, ತೊರೆದೆನೋ- ಕಳೆದುಕೊಳ್ಳಲೋ, ಬಿಡದೆ-ತಪ್ಪದೆ, ಅಡಸಿದ-ಮುಚ್ಚಿಕೊಂಡು ಬಂದಿರುವ, ಆ ಪತ್ತಿನಲಿ-ವಿಪತ್ತಿನಲ್ಲಿ, ಗರಳವ-ವಿಷವನ್ನು, ತಾಂ-ನಾನು, ಕುಡಿವೆನೋ, ಎನುತ, ಸತಿ - ಅಂಗನೆಯು (೨) ಬಾಯ್ವಿಡುತ - ಬಾಯುಬಿಡುತ್ತಾ, ಕಾನನದೊಳಗೆ-ಅರಣ್ಯದಲ್ಲಿ, ಅಧಿಕಶೋಕದಲಿ-ಹೆಚ್ಚಾದದುಃಖದಿಂದ, ತಿರುಗಿದಳು-ಸಂಚರಿಸಿದಳು ||೨೩||

ತಾತ್ಪರ್ಯ:—ಈಗ ನನಗೆ ಪ್ರಾಪ್ತವಾಗಿರುವಾಪತ್ತನ್ನು ನಿವಾರಿಸುವುದಕ್ಕೆ ಭೂಮಿಯೊಳಕ್ಕಿಳಿಯಲೇ, ಉರಿವ ಬೆಂಕಿಯಲ್ಲಿ ಬೀಳಲೇ, ದೊಡ್ಡ ಬಂಡೆಯಿರುವ ಮಡುವಿನಲ್ಲಿ ಮುಳುಗಲೇ, ವಿಷವನ್ನು ಕುಡಿಯಲೇ, ಅಥವಾ ಹೇಗೆ ಪ್ರಾಣವನ್ನು ಕಳೆದು ಕೊಳ್ಳಲಿ, ಏನಮಾಡಲಿ ಎಂದು ಬಾಯುಬಿಡುತ್ತಾ ಕಾಡಿನಲ್ಲೆಲ್ಲಾ ತಿರುಗಾಡುತ್ತಿದ್ದಳು ||೨೩||

ಟಿಪ್ಪಣಿ:—(೧) ಹಾಸಿದ ಅರೆ-ಹಾಸರೆ (ಗಮಕ) (೨) ಬಾಯಂ ಬಿಡುತ-ಬಾಯ್ಬಿಡುತ (ಕ್ರಿ. ಸ) ಬಕಾರಕ್ಕೆ ವಕಾರಾದೇಶ ಬಂದಿದೆ|| ೨೩

ಮೂ|| ಕಾಣಿರೇಅರಸಂಚೆಗಳುನೀವ್|ಕಾಣಿರೇನಿಜಪತಿಯಗಿಳಿಗಳು||
ಕಾಣಿರೇಮೃಗಪಕ್ಷಿಗಳುನಳಚಕ್ರವರ್ತಿಯನು || ಕಾಣಿರೇತರುಲ
ತೆಗಳರಸನ| ಕಾಣಿರೇನೀವೆಂದುಶೋಕದೊ|ಳೇಣಲೋಚನೆಹಲು
ವಂಗದಲಿಪತಿಯ ||೨೪||

ಟೀಕೆ:—ನಿಜಪತಿಯ-ನನ್ನ ಪ್ರಿಯನನ್ನು, (೧) ಅರಸಂಚೆಗಳು-ರಾಜಹಂಸಗಳು, ನೀವ್-ನೀವು,ಕಾಣಿರೇ-ನೋಡಲಿಲ್ಲವೇ ! ಗಿಳಿಗಳು, ನೀವ್, ಕಾಣಿರೇ, ಮೃಗಪಕ್ಷಿಗಳು, ನಳಚಕ್ರವರ್ತಿಯನು, ಕಾಣಿರೇ-ನೋಡಲಿಲ್ಲವೇ ! ತರುಲತೆಗಳ್-ಗಿಡಬಳ್ಳಿಗಳು, ಅರಸನ - ದೊರೆಯನ್ನು, ಕಾಣಿರೇ ! ಎಂದು (೨) ಏಣಲೋಚನೆ - ಜಿಂಕೆಯಂತೆ ಕಣ್ಣುಳ್ಳ ದಮಯಂತಿಯು, ಪತಿಯ-ಗಂಡನನ್ನು, ಹಲವಂಗದಲಿ-ಅನೇಕ ಪ್ರಕಾರವಾಗಿ, ಹಲು ಬಿದಳು-ಕೂಗಿಕೊಂಡಳು ||೨೪||

ತಾತ್ಪರ್ಯ:—ದಮಯಂತಿ ಪತಿಶೋಕದಿಂದ ಮೋಹಿತಳಾಗಿ ಅಲ್ಲಿರುವ ಪಶು, ಪಕ್ಷಿ, ಮೃಗ, ತರು, ಲತಾ, ವೃಕ್ಷಗಳನ್ನು ನೋಡಿ- ಎಲೈ

ರಾಜಹಂಸವೇ ನೀನು ನಳರಾಜನನ್ನು ಕಾಣೆಯಾ, ಅರಗಿಳಿಯೇ ನೋಡಲಿಲ್ಲವೇ, ಮೃಗಪಕ್ಷಿಗಳೇ ನಿಮಗೆ ತಿಳಿಯದೇ, ತರುಲತೆಗಳಿರಾ ನಿಮಗೆ ಗೊತ್ತಿಲ್ಲವೇ, ಎಂದು ಕಂಡವಸ್ತುಗಳನ್ನು ಕೇಳುತ್ತಾ ಉನ್ಮತ್ತಳಾಗಿ ಪತಿಯನ್ನು ಕುರಿತು ಪ್ರಲಾಪಿಸುತ್ತಿದ್ದಳು ||೨೪||

ಟಿಪ್ಪಣಿ:—(೧) ಅರಸಾದ ಅಂಚೆಗಳು-ಅರಸಂಚೆಗಳು (ವಿ. ಪೂರ್ವ. ಕ) (೨) ಏಣದಲೋಚನದಂತೆ ಲೋಚನವುಳ್ಳವಳು-ಏಣಲೋಚನೆ (ಬ. ವ್ರೀ.) ||೨೪||

ಮೂ|| ಮುಡಿಚದುರೆಹುಡಿಯೊಳಗೆಹೊರಳುತ | ವಡಲನೀಡಾಡಿದಳುಧರೆಯೊಳೆ| ಗಡವಿಪಾಲಾಗೆಂದುಪಡೆದಳೆಾತನ್ನನಿಜಜನನಿ || ಮಡದಿ
ಯರುತನ್ನಂತೆಲೋಕದೊಳೊಡಲತೆತ್ತವರಾರುಶೋಕದಿ| ಪ್ರೊಡ
ವಿಪತಿಮುಖದೋರೆನುತಹಂಬಲಿಸಿದಳುಪತಿಯ ||೨೫||

ಟೀಕೆ:—ಮುಡಿ-ತುರುಬು, ಚದುರೆ-ಕೆದರಿಹೋಗಿರಲು, ಹುಡಿಯೊಳಗೆ-ದೂಳಿನಲ್ಲಿ, ಹೊರಳುತಲಿ-ಹೊರಳಾಡುತ್ತಾ, ಒಡಲಂ-ದೇಹವನ್ನು, ಧರೆಯೊಳಗೆ-ಭೂಮಿಯಲ್ಲಿ, ಹೊರಳಾಡಿಸಿದಳು, ನಿಜ ಜನನಿ- ನನ್ನತಾಯಿಯು, ತನ್ನ-ನನ್ನನ್ನು, ಅಡವಿಪಾಲಾಗು - ಕಾಡುಪಾಲಾಗು, ಎಂದು, ಪಡೆದಳೆ-ಹೆತ್ತಳೆ, ಮಡದಿಯರು-ಹೆಂಗಸರು, ಲೋಕದೊಳ್-ಪ್ರಪಂಚದಲ್ಲಿ, ತನ್ನಂತೆ-ನನ್ನಹಾಗೆ, ಒಡಲ-ದೇಹವನ್ನು, ಶೋಕದಿ-ದುಃಖದಿಂದ, ತೆತ್ತವರು-ಕಳೆದುಕೊಂಡವರು, ಆರು-ಯಾರು ? ಪ್ರೊಡವಿಪತಿ-ದೊರೆಯೇ, (೧) ಮುಖದೋರು-ಕಾಣಿಸಿಕೊಳ್ಳು, ಎನುತ, (೨) ಪತಿಯ-ಗಂಡನನ್ನು, ಹಂಬಲಿಸಿದಳು-ಕೂಗಿಕೊಂಡಳು. ||೨೫||

ತಾತ್ಪರ್ಯ:—ತಲೆಯನ್ನು ಕೆದರಿಕೊಂಡು ಮೈಯನ್ನು ನೆಲದ ಮೇಲೆ ಈ ಡಾಡಿ ಧೂಳಿನಲ್ಲಿ ಹೊರಳಾಡುತ್ತಾ,ನನ್ನ ತಾಯಿಯು ಕಾಡುಪಾಲಾಗಲಿ ಎಂದು ನನ್ನನ್ನು ಪಡೆದಳೋ ಏನೋ, ಲೋಕದಲ್ಲಿ ಯಾವ ಹೆಂಗಸು ನನ್ನಂತೆ ದುಃಖದಿಂದ ಪ್ರಾಣವನ್ನು ಕಳೆದುಕೊಂಡಳು ? ಇಂತಹ ದುರವಸ್ಥೆಗೆ ನನ್ನಂ ಗುರಿಮಾಡಿ ಎಲ್ಲಿ ಮರೆಯಾಗಿರುವಿ, ಕಾಣಿಸ ಬಾರದೇ ! ಎಂದು ಪತಿಯನ್ನು ಹಂಬಲಿಸಿ ಕೊಳ್ಳುತ್ತಿದ್ದಳು ||೨೫||

ಟಿಪ್ಪಣಿ:—(೧) ಮುಖಮಂತೋರು-ಮುಖದೋರು (ಕ್ರಿ. ಸ) (೨) ಕರ್ಮಾರ್ಥದ ಷಷ್ಠಿ ||೨೫||

ಮೂ||ಪಾಸವಾಧಿಪಕೇಳುಬನದಲಿ| ಮಾನಿನೀಮತ್ತೊಂದುಕಂಟಕ|

ಹಾನಿಬಂದುದನೇನನೆಂಬೆನುಪತಿಗೆಬಾಯ್ಬಿಡುತ|| ಕಾನನದಬಳಿವಿಡಿದುಬರೆಸುವ್ಮಾನದಲಿತರಗೆಲೆಯುಹಕ್ಕೆಯು |ಮೌನದೊಳಗುರಗೇಂದ್ರನಿದ್ದನುಬಲಿದನಿದ್ರೆಯಲಿ ||೨೬||

ಟೀಕೆ:—(೧) ಮಾನವಾಧಿಪ-ದೊರೆಯೇ, ಕೇಳು, ಮಾನಿನಿಗೆ-ದಮಯಂತಿಗೆ, ಬನದಲಿ-ಕಾಡಿನಲ್ಲಿ, ಮತ್ತೊಂದು-ಇನ್ನೊಂದು, (೨) ಕಂಟಕಹಾನಿ-ತೊಂದರೆಯಿಂದ ನಷ್ಟವು, ಬಂದುದಂ-ಬಂದದ್ದನ್ನು, ಏನನೆಂಬೆನು-ಏನಹೇಳಲಿ, ಪತಿಗೆ-ಗಂಡನಿಗೆ, ಬಾಗ್ಬಿಡುತ- ಶೋಕಿಸುತ್ತಾ, ಕಾನನದ-ಅರಣ್ಯದ (೩) ಬಳಿವಿಡಿದು - ಪ್ರದೇಶವನ್ನು ಹಿಡಿದು, ಬರೆ-ಬರಲು, ಉರಗೇಂದ್ರ-ಸರ್ಪರಾಜನು,ತರಗೆಲೆಯು-ಒಣಗಿದೆಲೆಗಳ, ಹಕ್ಕೆಯು-ಹಾಸಿನಲ್ಲಿ, ಸುವ್ಮಾನದಲಿ ಸಂತೋಷದಿಂದ, ಮೌನದಲಿ- ಶಬ್ದಮಾಡದೆ, (ಸುಮ್ಮನೆ) ಬಲಿದ ನಿದ್ರೆಯಲಿ - ಹೆಚ್ಚಾದ ನಿದ್ರೆಯಿಂದ, ಇದ್ದನು, ||೨೬||

ತಾತ್ಪರ್ಯ:— ಎಲೈ ಧರ್ಮನಂದನನೇ ಕೇಳು! ಈರೀತಿಯಾಗಿ ಕಾಡಿನಲ್ಲಿ ಸಂಕಟ ಪಡುತ್ತಿದ್ದ ಆ ದಮಯಂತಿಗೆ ಮತ್ತೊಂದು ದೊಡ್ಡವಿಪತ್ತು ಬಂದುದು. ಏನಹೇಳಲಿ! ನಾನಾ ವಿಧವಾಗಿಹಂಬಲಿಸುತ್ತಾ ಅರಣ್ಯದಲ್ಲಿ ಸಂಚರಿಸುತ್ತಿರಲು ಅಲ್ಲಿ ತರಗೆಲೆಯಲ್ಲಿ ಒಂದಾನೊಂದುಸರ್ಪವು ಮಲಗಿ ಸುಖದಿಂದ ನಿದ್ರಿಸುತ್ತಾ ಮೌನವಾಗಿತ್ತು. ||೨೬||

ಟಿಪ್ಪಣಿ:—(೧) ಮಾನವರ-ಅಧಿಪತಿ-ಮಾನವಾಧಿಪತಿ (ಷ. ತ) ಮಾನವ+ಅಧಿಪತಿ-(ಸವರ್ಣದೀರ್ಘ) (೨) ಕಂಟಕದಿಂದಹಾನಿ-ಕಂಟಕಹಾನಿ(ತೃ. ತ) (೩) ಬಳಿಯಂಪಿಡಿದು-ಬಳಿವಿಡಿದು (ಕ್ರಿ. ಸ) ಪಕಾರಕ್ಕೆ ವಕಾರಾದೇಶವು ||೨೬||

ಮೂ|| ತರಳೆಕಾಣದೆಬರುತಮೆಟ್ಟಿದ| ಳುರಗಪತಿಯನುಕೋಪದಲಿಮಿಗೆ|ಸುರಿವಗರಳದಿರೌದ್ರಮಯರೂಪಿನಲಿಬಾಲಕಿಯ|| ತರುಬಿಹಿಡಿದುದುತವಕದಲಿಹಿಮ | ಕರನನುಂಗುವರಾಹುವಂದದೊ| ಳರಸ ಕೇಳಂಗನೆಯ ವಿಧಿಯನು ಹೇಳಲೇನೆಂದ||೨೭||

ಟೀಕೆ:—ತರಳೆ-ದಮಯಂತಿಯು, ಕಾಣದೆ-ತಿಳಿಯದೆ, ಬರುತ, ಉರಗಪತಿಯನು-ಆದೊಡ್ಡ ಸರ್ಪವನ್ನು, ಮೆಟ್ಟಿದಳು-ತುಳಿದಳು, ಕೋಪದಲಿ-ಸಿಟ್ಟಿನಿಂದ, ಮಿಗೆ-ಹೆಚ್ಚಾಗಿ, ಸುರಿವ-ಸುರಿಯುತ್ತಿರುವ, ಗರಳದಿ-ವಿಷದಿಂದ, ರೌದ್ರಮಯರೂಪಿನಲಿ-ಕ್ರೂರವಾದ ಆಕಾರವುಳ್ಳದ್ದಾ

ಗಿ, ಬಾಲಕಿಯು-ದಮಯಂತಿಯನ್ನು, ತರುಬಿ-ಅಟ್ಟಿ, (೨) ಹಿಮಕರನ-ಚಂದ್ರನನ್ನು, ನುಂಗುವ,ರಾಹುವ-ರಾಹುವಿನ, ಅಂದದೊಳ್-ರೀತಿಯಿಂದ, ತವಕದಲಿ-ಬೇಗನೆ, ಹಿಡಿದುದು-ಹಿಡಿದುಕೊಂಡಿತು, ಅರಸ - ದೊರೆಯೇ, ಕೇಳು, ಅಂಗನೆಯ-ದಮಯಂತಿಯ, ನಿಧಿಯನು - ಅದೃಷ್ಟವನ್ನು, ಹೇಳಲೇನು-ಏನಹೇಳಲಿ, ಎಂದ. ||೨೬||

ತಾತ್ಪರ್ಯ:—ಕಾಡಿನಲ್ಲಿ ಹಂಬಲಿಸುತ್ತಾ ಬರುತ್ತಿದ್ದ ದಮಯಂತಿಯು ಮಾರ್ಗದಲ್ಲಿಯೇ ನಿದ್ರಿಸುತ್ತಿದ್ದ ಆ ಸರ್ಪವನ್ನು ತಿಳಿಯದೆ ತುಳಿಯಲು ಅದು ಕೂಡಲೆ ರೇಗಿ ಮೊರೆಯುತ್ತ ಭಯಂಕರವಾದ ರೂಪವನ್ನು ಹೊಂದಿ, ಹಲ್ಮೊರೆದು, ವಿಷವನ್ನು ಸುರಿಸುತ್ತಾ, ದಮಯಂತಿಯನ್ನು ಅಟ್ಟಿಬಂದು, ಚಂದ್ರನನ್ನು ನುಂಗುವುದಕ್ಕೆ ಬಂದರಾಹುವಿನಂತೆ ಬೇಗನೆ ಹಿಡಿದುಕೊಂಡಿತು. ಆ ದಮಯಂತಿಯ ದುರ್ವಿಧಿಯು ಇನ್ನೆಂಥಾದ್ದೊ ಹೇಳಲಶಕ್ಯವು ||೨೬||

ಟಿಪ್ಪಣಿ:—(೧) ಉರಃ-ಎದೆಯಿಂದ, ಗ-ನಡೆಯುವುದು (ಸರ್ಪ) ಉರಗಗಳ ಪತಿ-ಉರಗಪತಿ (ಷ. ತ) (೨) ಹಿಮ-ತಂಪಾದ, ಕರ - ಕಿರಣವುಳ್ಳವನು, ಚಂದ್ರ (ಅವ) (ಬ. ವ್ರೀ) ಹಿಮಕ್ಕೆ (ದ್ಭ) ಹಿವ, ||೨೬||

ಮೂ|| ಹಾರಮಣನಳ ನೃಪತಿತನ್ನನ | ದಾರಿಗೊಪ್ಪಿಸಿ ಕಳೆದೆಹರಹ
ರ|ಕ್ರೂರಸರ್ಪನ ಬಾಯ್ಗೆತುತ್ತಾದೆನೆ ಜಗನ್ನಾಥ | ಆರಿಗೊರಲು
ವೆನಿನ್ನುಪ್ರಾಣವ | ನಾರುಕಾಯುವರಿನ್ನು ಬಿಡಿಸೈ | ವಾರಿಜಾಕ್ಷ
ಮುಕುಂದಸಲಹೆಂದಳುಸರೋಜಮುಖಿ||೨೭||

ಟೀಕೆ:—ಹಾ-ಅಯ್ಯೋ, ರಮಣ, ನಳನೃಪತಿ-ನಳರಾಜನೆ, ತನ್ನಂ-ನನ್ನನ್ನು, ಅದಾರಿಗೆ-ಯಾರಿಗೆ, ಒಪ್ಪಿಸಿ-ವಶಪಡಿಸಿ,ಕಳೆದೆ-ಬಿಟ್ಟೆ, ಹರಹರ-ಶಿವಶಿವ (೧) ಜಗನ್ನಾಥ-ಜಗತ್ಪತಿಯೇ, (೨) ಕ್ರೂರಸರ್ಪನ-ಭಯಂಕರವಾದ ಸರ್ಪದ, ಬಾಯ್ಗೆ, ತುತ್ತಾದೆನೆ-ಆಹಾರವಾದೆನೆ, ಇನ್ನು, ಆರಿಗೆ-ಯಾರಿಗೆ, ಒರಲುವೆಂ-ಹೇಳಿಕೊಳ್ಳಲಿ, ಇನ್ನು (೩) ಪ್ರಾಣವಂ-ಜೀವವನ್ನು, ಆರು-ಯಾರು, ಕಾಯ್ವರು-ರಕ್ಷಿಸುವರು, ವಾರಿಜಾಕ್ಷ ಕಮಲನೇತ್ರನಾದ, ಮುಕುಂದ-ಕೃಷ್ಣನೇ, ಸಲಹು-ಕಾಪಾಡು, (ಎಂಬದಾಗಿ) ಸರೋಜಮುಖಿ-ಕಮಲದಂತೆ ಮುಖವುಳ್ಳ ದಮಯಂತಿಯು, ಎಂದಳು ||೨೭||

ಟಿಪ್ಪಣಿ:—(೧) ಜಗತ್+ನಾಥ-ಜಗನ್ನಾಥ. (ಸಂ. ಅನುನಾಸಿ

ಕ. ಸಂ (೨) ಕ್ರೂರವಾದ ಸರ್ಪ-ಕ್ರೂರಸರ್ಪ (ವಿ.ಪೂರ್ವ. ಕ)ಕ್ರೂರಕ್ಕೆ (ದ್ಭ) ಕಳ್, (೩) (ದ್ಭ) ಶರಣ ||೨೮||

ಮೂ|| ಶೈಲಶಿಖರ ದೊಳಿದ್ದು ಕೇಳುತ| ಬಾಲಕಿಯಶೋಕವನುಬಿಲ್ಲಿನ
ಕೋಲುಗರಿಗಳ ಕರದಕಣ್ಣಿಯಶಬರನೈತಂದ || ಆಲತಾಂಗಿಯ
ಪಿಡಿದುನುಂಗುವ | ಕಾಲಭುಜಗನಕಂಡುನಿಜಕರ | ವಾಳದಲಿಖಂ
ಡಿದಸಿನಹಿಯನುಬಿಡಿಸಿದನುಸತಿಯ ||೨೯||

ಟೀಕೆ:—(೨) ಶೈಲಶಿಖರದೊಳ್-ಪರ್ವತದ ಕೋಡುಗಲ್ಲಿನಮೇಲೆ, ಇದ್ದು, ಬಾಲಕಿಯ-ದಮಯಂತಿಯ, ಶೋಕವನು- ದುಃಖವನ್ನು, ಕೇಳುತ-ಕೇಳಿ, ಬಿಲ್ಲಿನ-ಧನುರ್ಧರನಾದ, ಕೋಲು-ಬಾಣವೂ, ಗರಿಗಳ-ಗರಿಗಳೂ ಇವುಗಳಿಂದ ಕೂಡಿದ, ಕರದ-ಕೈಯಲ್ಲಿ, ಕಣ್ಣಿಯ-ಹಗ್ಗವುಳ್ಳ, ಶಬರಂ-ಬೇಡನು, ಐತಂದ-ಬಂದನು, ಆ ಲತಾಂಗಿಯ- ಕೋಮಲಾಂಗಿಯಾದ ದಮಯಂತಿಯನ್ನು, ಪಿಡಿಯೆ - ಹಿಡಿದುಕೊಂಡು, ನುಂಗುವ, ತಿನ್ನುವ, (೨) ಕಾಲಭುಜಗನ - ಕೃಷ್ಣಸರ್ಪವನ್ನು, ಕಂಡು- ನೋಡಿ, ನಿಜಕರವಾಳದಲಿ-ತನ್ನ ಕೈ ಕತ್ತಿಯಿಂದ, ಅಹಿಯನು- ಸರ್ಪನನ್ನು, ಖಂಡಿಸಿದಂ-ಕತ್ತರಿಸಿದನು, ಸತಿಯ-ದಮಯಂತಿಯನ್ನು, ಬಿಡಿಸಿದನು-ತಪ್ಪಿಸಿದನು ||೨೯||

ತಾತ್ಪರ್ಯ:—ದಮಯಂತಿಯ ಆರ್ತಧ್ವನಿಯನ್ನು, ಸಮೀಪದ ಪರ್ವತ ಶಿಖರದಲ್ಲಿದ್ದ ಒಬ್ಬಾನೊಬ್ಬ ಬೇಡರವನು ಕೇಳಿ, ಧನುರ್ಬಾಣ ಖಡ್ಗಗಳನ್ನೂ, ಹಗ್ಗಗಳನ್ನೂ ಹಿಡಿದು ಬೇಗನೆ ಅಲ್ಲಿಗೆ ಬಂದು, ಆಕೆಯನ್ನು ಹಿಡಿದು ನುಂಗುತ್ತಿದ್ದ ಆ ಕೃಷ್ಣಸರ್ಪವನ್ನು ಎರಡು ತುಂಡಾಗಿ ಕತ್ತರಿಸಿ ಆಕೆಯ ಪ್ರಾಣವನ್ನುಳಿಸಿದನು. ||೨೯||

ಟಿಪ್ಪಣಿ:—(೧) ಶಿಲೆಗಳಿಂದ ಕೂಡಿದುದು-ಶೈಲ (ಅವ) ಶೈಲದಶಿಖರ (ಷ. ತ) (೨) ಭುಜ-ಭುಜದಿಂದ, ಗ-ನಡೆವುದು (ಸರ್ಪ) (ಅವ) ಕಾಲವಾದ ಭುಜಗ-ಕಾಲಭುಜಗ, (ವಿ. ಪೂರ್ವ. ಕ) ಕಾಲ- ಕಪ್ಪುಬಣ್ಣ, ಸಮಯ, ಯಮ, (ನಾನಾ) ||೨೯||

ಮೂ|| ಹಾಎನುತಸುರರುಲಿಯೆಹಾವಿನ| ಬಾಯೊಳಗೆಸಿಲುಕಿರ್ದಕಮ
ಲದ | ಳಾಯತಾಕ್ಷಿಯಬಿಡಿಸಿಸಂತೈಸಿದನುಬಾಲಕಿಯ || ರಾಯ
ಕೇಳ್ವೈರಾಹುವಿನಕಟ | ವಾಯಚಂದ್ರನಸೆಳವವೊಲ್ಸರಿ| ದಾಯ
ತವಲೇಮೂರ್ಛೆತಿಳಿದುದುಶಬರಮಂತ್ರದಲಿ ||೩೦||

ಟೀಕೆ:—ರಾಯ-ಧರ್ಮರಾಜನೆ, ಕೇಳ್ಳೈ - ಕೇಳಯ್ಯಾ ! ಹಾ, ಎನುತ-ಎಂಬದಾಗಿ, ಸುರರ್-ದೇವತೆಗಳು, ಉಲಿಯೆ-ಕೂಗಿಕೊಳ್ಳಲು, ಹಾವಿನ, ಬಾಯೊಳಗೆ-ಬಾಯೊಳಕ್ಕೆ,ಸಿಲುಕಿರ್ದ-ದಕ್ಕಿಹೋಗಿದ್ದ, (೧) ಕಮಲದಳಾಯತಾಕ್ಷಿಯ-ಕಮಲದಎಸಳಂತೆ ವಿಸ್ತಾರವಾದ ನೇತ್ರವುಳ್ಳ ದಮಯಂತಿಯನ್ನು, ರಾಹುವಿನ, ಕಟವಾಯ-ಕಟಬಾಯಿಯಲ್ಲಿರುವ, ಚಂದ್ರನ-ಚಂದ್ರನನ್ನು, ಸೆಳೆವವ್ರೋಲ್-ಎಳೆದುಕೊಂಡಹಾಗೆ, ಬಿಡಿಸಿ, ಬಾಲಕಿಯ-ಆಹುಡುಗಿಯನ್ನು, ಸಂತೈಸಿದನು-ಸಮಾಧಾನಗೊಳಿಸಿದನು, ಸರಿದು-ಹಿಮ್ಮೆಟ್ಟಿ, ಆಯತದಲೇ-ಹಾಗೆಯೇ, ಶಬರಮಂತ್ರದಲಿ-ಬೇಡರವನ ಮಂತ್ರದಿಂದ, (೨) ಮೂರ್ಛೆ-ಮೂರ್ಛೆಯು, ತಿಳಿದುದು-ಎಚ್ಚರವಾಯ್ತು ॥೩೦॥

ತಾತ್ಪರ್ಯ:—ಇದನ್ನು ಕಂಡು ದೇವತೆಗಳೆಲ್ಲರೂ ಹಾ ಹಾ ಕಾರಗಳಿಂದ ಕೂಗಿಕೊಳ್ಳುತ್ತಿರಲು, ರಾಹು ನುಂಗಿದ್ದ ಚಂದ್ರನನ್ನು ಈಚೆಗೆ ಸೆಳೆದುಕೊಂಡಹಾಗೆ ಕೃಷ್ಣಸರ್ಪನ ಬಾಯ್ಗೆ ತುತ್ತಾಗಿದ್ದ ಆ ದಮಯಂತಿಯನ್ನು ಬಿಡಿಸಿದನು, ಕೂಡಲೆ ಹಿಂದಕ್ಕೆ ಸರಿದು ಆಕೆಯು ಮೂರ್ಛೆಹೊಂದಲು, ಬೇಡನು ಮಂತ್ರಶಕ್ತಿಯಿಂದ ಪುನಃ ಎಚ್ಚರಗೊಳಿಸಿ ಸಮಾಧಾನ ಪಡಿಸಿದನು. ॥೩೦॥

ಟಿಪ್ಪಣಿ:—ಕಮಲದ-ದಳ, ಕಮಲದ (ಷ. ತ) ಆಯತವಾದ ಅಕ್ಷಿ-ಆಯತಾಕ್ಷಿ (ವಿ. ಪೂರ್ವ. ಕ) ಕಮಲದಳದಂತೆ ಆಯತವಾದ ಅಕ್ಷಿಯುಳ್ಳವಳಾವಳೋ ಅವಳು-ಕಮಲದಳಾಯ ತಾಕ್ಷಿ (ಬ. ವ್ರೀ.) (೨) (ದ್ಭ) ಮುಚ್ಛೆ; ಈ ಪದ್ಯದಲ್ಲಿ, ರಾಹು ಮುಖದಿಂದ ಚಂದ್ರನನ್ನು ತಪ್ಪಿಸಿದಹಾಗೆ ಸರ್ಪಮುಖದಿಂದ ದಮಯಂತಿಯನ್ನು ತಪ್ಪಿಸಿದನು. ಎಂಬ ವಾಕ್ಯಾರ್ಥದಲ್ಲಿ, ರಾಹು, ಚಂದ್ರ ಎಂಬ ಉಪಮಾನಗಳೂ, ಸರ್ಪ, ದಮಯಂತಿಗಳೆಂಬ ಉಪಮೇಯಗಳೂ, ವ್ರೋಲ್ (ಹಾಗೆ) ಎಂಬ ವಾಚಕಶಬ್ದವೂ, ಸೆಳೆವುದೆಂಬ ಸಾಮಾನ್ಯ ಧರ್ಮವೂ ಇರುವುದರಿಂದ ಪೂರ್ಣೋಪಮಾಲಂಕಾರವು. ॥೩೦॥

ಮೂ॥ ಬಂದುಕಂದಾವರೆಯಕೊಳದಲಿ। ಮಿಂದುನಿಂದಿರೆಶಬರನಂದೆಲೆ। ಯಿಂದುಮುಖಿನೀನೆನಗೆಸತಿಯಾಗೆನಲುಖತಿಗೊಂಡು॥ಇಂದೆನಗೆಅಸುನಿತ್ತುಸಲಹಿದ। ತಂದೆಯಲ್ಲವೆನೀನುಕೇಳುಪ್ರಳಿಂದಮುಳಿದರೆಶಪಿಸುವೆನುಹೋಗೆಂದಳಿಂದುಮುಖಿ ॥೩೧॥

ಟೀಕೆ:....ಬಂದು-(ದಮಯಂತಿಯು) ಅಲ್ಲಿಂದ ಹೊರಟು, (೧) ಕೆಂದಾವರೆಯ-ಕೆಂಪುತಾವರೆಗಳುಳ್ಳ, ಕೊಳದಲಿ-ಸರೋವರನಲ್ಲಿ, ಮಿಂದು-ಸ್ನಾನಮಾಡಿ, ನಿಂದಿರೆ-ನಿಂತಿರಲು, ಅಂದು-ಆಗ, ಶಬರಂ- ಬೇಡನು, ಇಂದುಮುಖಿ-ಅಂಗನೆಯೇ ! ನೀಂ-ನೀನು, ಎನಗೆ-ನನಗೆ, ಸತಿಯಾಗು-ಪತ್ನಿಯಾಗು, ಎನಲು, ಇಂದುಮುಖಿ-ದಮಯಂತಿಯು, ಪುಳಿಂದ-ವ್ಯಾಧನೇ ? ಕೇಳು, ನೀನು, ಇಂದು-ಈಗ, ಎನಗೆ-ನನಗೆ (೨) ಅಸುವಿತ್ತು-ಪ್ರಾಣವನ್ನು ಕೊಟ್ಟು, ಸಲಹಿದ-ರಕ್ಷಿಸಿದ, (೩) ತಂದೆಯಲ್ಲವೆ, ಮುಳಿದರೆ-ನನಗೆ ಕೋಪವುಂಟಾದರೆ, ಶಪಿಸುವೆನು-ಶಾಪವನ್ನು ಕೊಡುವೆನು. ಹೋಗು, ಎಂದಳ್-ಎಂಬದಾಗಿ ಹೇಳಿದಳು. ॥೩೧॥

ತಾತ್ಪರ್ಯ:—ಅನಂತರದಲ್ಲಿ ದಮಯಂತಿಯು ಅಲ್ಲಿದ್ದ ದಿವ್ಯವಾದೊಂದು ಪುಷ್ಕರಿಣಿಗೆ ಹೋಗಿ ಸ್ನಾನಮಾಡಿ ಶುದ್ಧಳಾಗಿ ನಿಂತಿರಲು, ಬೇಡನು ಈಕೆಯ ರೂಪ ರೇಖಾ ವಿಲಾಸಗಳನ್ನು ನೋಡಿ ಭ್ರಾಂತನಾಗಿ ಎಲೌ ಸುಂದರಿ ನೀನು ನನಗೆ ರಮಣಿಯಾಗಿರು; ಎಂದು ಪ್ರಾರ್ಥಿಸಲು ದಮಯಂತಿಯು ಎಲೈ ವ್ಯಾಧನೇ! ನೀನು ನನಗೆ ಬಂದ ಆಪತ್ತನ್ನು ತಪ್ಪಿಸಿ ಭಯದಿಂದ ರಕ್ಷಿಸಿದವನಾದುದರಿಂದ ತಂದೆಯಾಗಿದ್ದೀಯೆ! ಇಂತಹ ದುರಾಲೋಚನೆಯನ್ನು ಬಿಡು, ನನಗೆ ಇನ್ನು ಕೋಪಬಂದರೆ ಶಾಪವನ್ನೀಯುವೆನು, ದುರಾಶೆಯನ್ನು ಬಿಟ್ಟು ಹೊರಡು ಎಂದು ಮೂಕರಿಸಿ ಮಾತನಾಡಿದಳು ॥೩೧॥

ಟಿಪ್ಪಣಿ:—(೧) ಕೆಚ್ಚನೆತಾವರೆ-ಕೆಂದಾವರೆ (ವಿ. ಪೂರ್ವ. ಕ) ಕೆಚ್ಚನೆ ಎಂಬುದಕ್ಕೆ ಸಮಾಸದಲ್ಲಿ ,ಕೆಂ, ಎಂದಾ ದೇಶವೂ, ತಕಾರಕ್ಕೆ ದಕಾರಾದೇಶವೂ ಬಂದಿದೆ,(೨) ಅಸುವಂ ಇತ್ತು-ಅಸುವಿತ್ತು (ಕ್ರಿ. ಸ.) (೩) ಭಯದಲ್ಲಿ ರಕ್ಷಣೆ ಮಾಡಿದುದರಿಂದ ತಂದೆಯೆನ್ನಿಸುವನು, ಶ್ಲೋ ॥ ಜನಿತಾಚೋಪನೀತಾಚಯಸ್ತುವಿದ್ಯಾಂಪ್ರಯಚ್ಛತಿ । ಅನ್ನದಾತಾಭಯತ್ರಾತಾಪಂಚೈತೇಪಿತರಃಸ್ಮೃತಾಃ ॥ ಎಂದರೆ-ತನ್ನ ಜನನಕ್ಕೆ ಕಾರಣನಾದವನೂ, ಉಪನಯನ ಮಾಡಿದವನೂ, ವಿದ್ಯೆಯನ್ನು ಕಲಿಸಿದವನೂ, ಅನ್ನವನ್ನು ಕೊಟ್ಟು ಪೋಷಿಸಿದವನೂ, ಭಯದಿಂದ ತಪ್ಪಿಸಿ ಪ್ರಾಣದಾನಮಾಡಿದವನೂ, ಈ ಐದುಮಂದಿಯೂ, ತಂದೆಗಳೆಂದು, ಶಾಸ್ತ್ರವಿರುವುದು. ॥೩೧॥

ಮೂ॥ ತರುಣಿಕೋಪಿಸಿನುಡಿಯೆಭಯದಲಿ। ಶಿರವಬಾಗಿಪುಳಿಂದನತ್ತ

ಲು। ಮರಳಿದನುದಮಯಂತಿಬನದಲಿಪತಿಯಹಂಬಲಿಸಿ ॥ ಮರು
ಗುವಳ್ಮನದೊಳಗೆಭೂಪನ। ನರಸಿಕಾಣದೆಬಯಲನಪ್ಪುತ।ಲಾ
ರಮಣಿಕಣ್ಣೀರಿನಲಿನಡೆತಂದಳಿಂದುಮುಖಿ ॥೩೨॥

ಟೀಕೆ:—ತರುಣಿ-ದಮಯಂತಿಯು, ಕೋಪಿಸಿ, ನುಡಿಯೆ-ಹೇಳಲು, ಪುಳಿಂದಂ-ಬೇಡನು. ಭಯದಲಿ-ಅಂಜಿಕೆಯಿಂದ, ಶಿರವ- ತಲೆಯುಯನ್ನು, ಬಾಗಿ-ಒಗ್ಗಿಸಿಕೊಂಡು, ಅತ್ತಲು-ಆಕಡೆಗೆ,ಮರಳಿದನು-ಹೊರಟುಹೋದನು, ದಮಯಂತಿ, (೧) ಬನದಲಿ-ಕಾಡಿನಲ್ಲಿ, ಪತಿಯ-ಗಂಡನನ್ನು, ಹಂಬಲಿಸಿ-ಹಲುಬಿ, ಮನದೊಳಗೆ-ಮನಸ್ಸಿನಲ್ಲಿ,ಮರುಗುವಳ್-ವ್ಯಥೆಪಡುವಳು, (೨) ಆರಮಣಿ-ಆ ಅಂಗನೆಯು, (೩) ಭೂಪನಂ-ದೊರೆಯನ್ನು, ಅರಸಿ-ಹುಡುಕಿ, ಕಾಣದೆ-ನೋಡದೆ, ಬಯಲಂ- ವ್ಯರ್ಥವನ್ನು, ಅಪ್ಪುತಲಿ-ಹೊಂದುತಾ, ಕಣ್ಣೀರಿನಲಿ, ಇಂದುಮುಖಿ- ಚಂದ್ರಮುಖಿಯಾದ ದಮಯಂತಿಯು, ನಡೆತಂದಳ್-ಬಂದಳು, ॥೩೨॥

ತಾತ್ಪರ್ಯ:—ದಮಯಂತಿಯು ಕೋಪದಿಂದಾಡಿದ ಮಾತುಗಳನ್ನು ಕೇಳಿದ ಆ ಬೇಡನು ಬಹಳವಾಗಿ ಭಯಪಟ್ಟು ತಲೆಯನ್ನು ಬಗ್ಗಿಸಿಕೊಂಡು ಬೇರೆ ಏನನ್ನೂ ಹೇಳದೆ ತನ್ನ ದಾರಿಯನ್ನು ಹಿಡಿದನು, ಇತ್ತಲಾ ದಮಯಂತಿಯು ಕಾಡನ್ನೆಲ್ಲಾ ತೊಳಲಿ ಹಂಬಲಿಸಿ ಎಲ್ಲಿಯೂ ಪತಿಯನ್ನು ಕಾಣದೆ ವ್ಯರ್ಥಪ್ರಯತ್ನದಿಂದ ನಡೆಯುತ್ತಿದ್ದಳು. ॥೩೨॥

ಟಿಪ್ಪಣಿ:—(೧) (ತ್ಸ) ವನ (೨) ಅವಳು ರಮಣಿ-ಆ ರಮಣಿ (ಗಮಕ) (೩) ಭೂ - ಭೂಮಿಯನ್ನು, ಪ - ರಕ್ಷಿಸತಕ್ಕವನು - ದೊರೆ (ಅವ) ॥೩೨॥

ಮೂ॥ ಅರಸಕೇಳಾಶ್ಚರ್ಯವನುಸತಿ। ಬರುತಲಿರೆಕಾನನದಿನೆರದಿಹ।ಮ
ರುಳುಬಳಗವುಭೂತಪೇತಾಳಗಳುತೊಲಗಿದವು॥ ಶರಭಪುಲಿಕಾಡಾ
ನೆಸಿಂಹಗ । ಳಿರದೆಜಾರಿದವಲ್ಲಿಸತಿಯಳ। ಪರಮಪಾತಿವ್ರತ್ಯಮಹಿ
ಮೆಯನರಸಕೇಳೆಂದ ॥೩೩॥

ಟೀಕೆ:—ಅರಸ-ದೊರೆಯೇ, (೧) ಆಶ್ಚರ್ಯವನು, ಕೇಳು, ಸತಿ-ದಮಯಂತಿಯು, ಬರುತಲಿರೆ-ಬರುತ್ತಿರಲು, ಕಾನನದಿ-ಕಾಡಿನಲ್ಲಿ, ನೆರೆದಿಹ-ಸೇರಿರುವ, ಮರುಳುಬಳಗವು-ಪಿಶಾಚಗಳಗುಂಪೂ, ಭೂತ ಭೇತಾಳಗಳು, ತೊಲಗಿದುವು ದೂರವಾಗಿಹೋದವು, ಶರಭ-ಎಂಟುಕಾಲುಳ್ಳ ಮೃಗವೂ, ಪುಲಿ-ಹುಲಿಯೂ, (೨) ಕಾಡಾನೆ-ಕಾಡಾನೆಯೂ, ಸಿಂಹಗ

ಳು-ಸಿಂಹ ಮೊದಲಾದ ಕ್ರೂರಮೃಗಗಳು, ಅಲ್ಲಿ, ಇರದೆ-ನಿಲ್ಲದೆ, ಜಾರಿದವು-ಓಡಿಹೋದುವು, ಸತಿಯುಳ-ದಮಯಂತಿಯ, ಪರಮಪಾತಿವ್ರತ್ಯ ಮಹಿಮೆಯುಂ-ಶ್ರೇಷ್ಠವಾದ ಪತಿವ್ರತಾಧರ್ಮದಮಾಹಾತ್ಮ್ಯೆಯನ್ನು ಅರಸ ಧರ್ಮರಾಜನೇ, ಕೇಳು, ಎಂದ-ಎಂದನು ||೩೩||

ತಾತ್ಪರ್ಯ:—ಆ ಅರಣ್ಯದಲ್ಲಿದ್ದ ಭೂತ ಪ್ರೇತ ಪಿಶಾಚ ಮೊದಲಾದ ಮರುಳು ಬಳಗವೂ, ಸಿಂಹ ಹುಲಿ ಮೊದಲಾದ ದುಷ್ಟಮೃಗಗಳೂ ದಮಯಂತಿಯನ್ನು ನೋಡಿದಮಾತ್ರಕ್ಕೆ ಸಮೀಪಕ್ಕೆ ಬರಲು ಶಕ್ತಿಸಾಲದೆ ದೂರವಾಗಿ ತೊಲಗಿ ಹೋಗುತ್ತಿದ್ದವು, ಆಕೆಯ ಪತಿವ್ರತಾ ಧರ್ಮವು ಇನ್ನೆಷ್ಟು ಮಹತ್ತರವಾದದ್ದೋ ಕಾಣೆನು. ಎಲೈ ಧರ್ಮನಂದನನೇ ಕೇಳು ಎಂದು ನುಡಿದನು. ||೩೩||

ಟಿಪ್ಪಣಿ:—(೧) (ದ್ಭ) ಆಚ್ಚರಿ, (೨) ಕಾಡಿನಲ್ಲಿರುವ ಆನೆ-ಕಾಡಾನೆ (ಸ. ತ. ಅಥವಾ ಲು ಮ. ಕ) "೩೩||

ಮೂ|| ಮುಂದೆಕಂಡಳುಹೊಳೆವತಾಪಸ | ವೃಂದವನುಕಣ್ಣೀರಸುರಿ
ಸುತ| ಬಂದವನಿತೆಯುಕೇಳಿದರುಮುನಿವರರುವಿನಯದಲಿ||ಇಂದು
ಮುಖಿನೀನಾರುಯಿಲ್ಲಿಗೆ| ಬಂದಹದನೇನೆನಲುಶೋಕದಿ| ನೊಂದು
ನುಡಿದಳುಮುನಿಗಳಿಗೆಕೈಮುಗಿದುವಿನಯದಲಿ ||೩೪||

ಟೀಕೆ:— ಮುಂದೆ-ಮುಂಭಾಗದಲ್ಲಿ, ಹೊಳೆವ-ಪ್ರಕಾಶಿಸುವ, (೧) ತಾಪಸವೃಂದವನು-ಋಷಿಗಳ ಗುಂಪನ್ನು, ಕಂಡಳು-ನೋಡಿದಳು, ಕಣ್ಣೀರ, ಸುರಿಸುತ, ಬಂದ, ವನಿತೆಯು-ಆ ಹೆಂಗಸನ್ನು, ಮುನಿವರರು-ಋಷಿಶ್ರೇಷ್ಠರು, ವಿನಯದಲಿ-ಆದರದಿಂದ ಕೇಳಿದರು-ಮಾತನಾಡಿಸಿದರು, ಇಂದುಮುಖಿ-ಚಂದ್ರಮುಖಿಯಾದ, ನೀಂ-ನೀನು, ಆರು ಯಾರು? ಇಲ್ಲಿಗೆ-ಈಕಾಡಿಗೆ, ಬಂದ, ಹದನ-ಕಾರಣವು, ಏನು ? ಎನಲು-ಎಂಬದಾಗಿಕೇಳಲು, ಶೋಕದಿ-ದುಃಖದಿಂದ, ನೊಂದು-ವ್ಯಥೆಪಟ್ಟು, ಮುನಿಗಳಿಗೆ-ಋಷಿಗಳಿಗೆ, (೨) ಕೈಮುಗಿದು-ನಮಸ್ಕರಿಸಿ, ವಿನಯದಲಿ-ನಮ್ರತೆಯಿಂದ, ನುಡಿದಳು-ಹೇಳಿದಳು ||೩೪||

ತಾತ್ಪರ್ಯ:-- ಮುಂದುಮುಂದಕ್ಕೆ ಬರುತ್ತಾ ದಾರಿಯಲ್ಲಿ ಬರುತ್ತಿದ್ದ ಮಹಾತ್ಮರಾದ ಕೆಲವರು ಋಷಿಗಳನ್ನು ಕಂಡು ಹರ್ಷಗೊಳ್ಳುತ್ತಿರಲು, ಅವರು ಸುಂದರಿಯಾದೀಕೆಯನ್ನು ನೋಡಿ ವಿಸ್ಮಿತರಾಗಿ-ಅಮ್ಮಾನೀನುಯಾರು ! ಅಡವಿಯಲ್ಲಿ ಸಂಚರಿಸಲು ಕಾರಣವೇನು ?

ಎಂದು ಆದರ ಪೂರ್ವಕವಾಗಿ ಕೇಳಲು, ದಮಯಂತಿಯು ದುಃಖಿತಳಾಗಿ ಭಯಭಕ್ತಿಯಿಂದ ಮಹರ್ಷಿಗಳಿಗಭಿನಮಿಸಿ ನಮ್ರಳಾಗಿ ಹೇಳಿದಳು-ಏನೆಂದರೆ. ॥೩೪॥

ಟಿಪ್ಪಣಿ:— (೧) ತಾಪಸರ-ವೃಂದ, ತಾಪಸವೃಂದ (ಷ. ತ) (೨) ಕೈಯಂಮುಗಿದು-ಕೈಮುಗಿದು (ಕ್ರಿ. ಸ) ॥೩೪॥

ಮೂ॥ ಏನನೆಂಬೆನುತನ್ನಪುಣ್ಯದ ॥ ಹಾನಿಯನುಚಿತ್ತವಿಸಿಕರುಣದಿ
ಮಾನನಿಧಿಗಳುಬಲ್ಲಿರೇನಳಚಕ್ರವರ್ತಿಯನು । ಆನರೇಂದ್ರನಮಡ
ದಿತಾನಿ । ನ್ನೇನನೋಂತೆನೊಪತಿಯಗಲಿಘನ । ಕಾನನಕೆಗುರಿ
ಯಾದೆನೆಂದಳುತರುಣಿಬಿಸುಸುಯ್ದು ॥೩೫॥

ಟೀಕೆ:— (೧) ಮಾನಸಿಧಿಗಳು-ಅಬಿಮಾನ ಶಾಲಿಳಾದನೀವು, ಕರುಣದಿ-ಕೃಪೆಯಿಂದ, ಚಿತ್ತವಿಸಿ, ತನ್ನ-ನನ್ನ, ಪುಣ್ಯದ-ಸುಕೃತದ, ಹಾನಿಯನು-ಹೀನತೆಯನ್ನು, ಏನನೆಂಬೆನು-ಏನೆಂದುಹೇಳಲಿ, ನಳಚಕ್ರವರ್ತಿಯನು, ಬಲ್ಲಿರೇ-ನೀವುಕಂಡಿರ-ವಿರಷ್ಟೆ? ತಾನು-ನಾನು (೨) ಆ ನರೇಂದ್ರನ-ಆದೊರೆಯ, ಮಡದಿ-ಹೆಂಡತಿಯು, ಇನ್ನೇನ-ಇನ್ನೆಂತಹವ್ರತವನ್ನು, ನೋಂತೆನೊ-ಮಾಡಿದೆನೊ! ಪತಿಯ-ಗಂಡನನ್ನು ಅಗಲಿ-ವಿಯೋಗವನ್ನು ಹೊಂದಿ, ಘನಕಾನನಕೆ-ಈ ಭಯಂಕರವಾದಕಾಡಿಗೆ, ಗುರಿಯಾದೆನು-ಪಾತ್ರಳಾದೆನು, (ಎಂಬದಾಗಿ) ತರುಣಿ-ದಮಯಂತಿಯು, ಬಿಸುಸುಯ್ದು-ನಿಟ್ಟುಸಿರನ್ನು ಬಿಟ್ಟು, ಎಂದಳು ॥೩೫॥

ತಾತ್ಪರ್ಯ:— ಎಲೈ ಮಹನೀಯರಾದ ಮಹರ್ಷಿಗಳಿರಾ ದಯವಿಟ್ಟು ನನ್ನ ವಿಜ್ಞಾಪನೆಯನ್ನು ಕೇಳಿ, ನನ್ನ ದುಷ್ಕೃತವನ್ನು ಹೇಳಲಾರೆನು, ನಳಚಕ್ರವರ್ತಿಯನ್ನು ನೀವು ಕೇಳಿಬಲ್ಲಿರಲ್ಲವೇ! ಆ ದೊರೆಯ ಹೆಂಡತಿಯಾದ ದಮಯಂತಿಯು ನಾನು ಇನ್ನೆಂತಹ ಕ್ರೂರವ್ರತವನ್ನು ಜನ್ಮಾಂತರದಲ್ಲಿ ಮಾಡಿದ್ದೆನೋ. ಪತಿಯನ್ನಗಲಿ ಕಾರಣಾಂತರದಿಂದ ಹೀಗೆ ಕಾಡುಪಾಲಾಗುವ ಗತಿ ಬಂತು. ಏನಮಾಡಲಿ! ಎಂದು ದುಃಖದಿಂದ ನಿಟ್ಟುಸಿರನ್ನು ಬಿಡುತ್ತಾ ಹೇಳಿದಳು ॥೩೫॥

ಟಿಪ್ಪಣಿ:— (೧) ಮಾನ-ಅಭಿಮಾನವೇ, ನಿಧಿಗಳು-ನಿಕ್ಷೇಪವಾಗಿ ಉಳ್ಳವರು. (ಅವ) (ಬ. ವ್ರೀ.) ನರ+ಇಂದ್ರ (ಗುಣಸಂ) ನರರ ಇಂದ್ರ-ನರೇಂದ್ರ (ಷ. ತ) ಅವನು-ನರೇಂದ್ರ-ಆನರೇಂದ್ರ (ಗಮಕ) ನರೇಂದ್ರ-ಹಾವಾಡಿಗ (ನಾನಾ) ॥೩೫॥

ಮೂ॥ ಭೂತಳವನಳನೃಪತಿಜೂಜಲಿ । ಸೋತುಪುಷ್ಕರಗಿತ್ತುಸ
ತ್ಯದ । ನೀತಿತಪ್ಪದೆಬಂದುಬನದಲಿತನ್ನನಗಲಿದನು ॥ ಧಾತುಕುಂ
ದಿದೆನತಿಯಕಾಣದೆ । ಭೀತಿಯಲಿನಿಮ್ಮಡಿಯಕಂಡೆನು । ಭೂತದ
ಯೆನಿಮಗುಂಟು ಸಲಹೆಂದಳು ಸರೋಜಮುಖಿ ॥೩೬॥

ಟೀಕೆ:— ನಳನೃಪತಿ-ನಳರಾಜನು, ಜೂಜಲಿ - ದ್ಯೂತದಲ್ಲಿ, ಭೂತಳವ-ಭೂಮಿಯನ್ನು, ಸೋತು, ಪುಷ್ಕರಗೆ, ಇತ್ತು-ಕೊಟ್ಟು, ಸತ್ಯದನಿಶ್ಚಯವಾದ, ನೀತಿಯ-ನ್ಯಾಯವನ್ನು, ತಪ್ಪದೆ, ಬಂದು, ಬನದಲಿ-ಕಾಡಿನಲ್ಲಿ, ತನ್ನಂ-ನನ್ನನ್ನು, ಅಗಲಿದನು-ಬಿಟ್ಟುಹೋದನು, ಪತಿಯ ಗಂಡನನ್ನು, ಕಾಣದೆ-ನೋಡದೆ, ಭೀತಿಯಲಿ-ಭಯದಿಂದ, (೧) ಧಾತು-ಬಲವು, ಕುಂದಿದೆ-ತಗ್ಗಿತು, ನಿಮ್ಮ, ಅಡಿಯ-ಪಾದವನ್ನು, ಕಂಡೆನು, ನಿಮಗೆ (೨) ಭೂತದಯೆ-ಪ್ರಾಣಿಗಳಲ್ಲಿ-ಕರುಣೆಯು, ಉಂಟು, ಸಲಹಿ-ಕಾಪಾಡಿ, (ಎಂದು) ಸರೋಜಮುಖಿ- ಕಮಲಮುಖಿಯಾದ ದಮಯಂತಿಯು, ಎಂದಳು-ಹೇಳಿದಳು ॥೩೬॥

ತಾತ್ಪರ್ಯ:— ಆನಳನು ದುರದೃಷ್ಟದಿಂದ ಜೂಜಾಡಿ ಸೋತು ಪುಷ್ಕರನೆಂಬುವನಿಗೆ ಸಾಮ್ರಾಜ್ಯವನ್ನು ಸ್ವಾಧೀನಗೊಳಿಸಿ, ಪೂರ್ವದಲ್ಲಿ ಮಾಡಿಕೊಂಡಿದ್ದ ಸಮಾಖ್ಯೆಯಪ್ರಕಾರ ತನ್ನ ಸತ್ಯವ್ರತವನ್ನುಳಿಸಿಕೊಳ್ಳುವುದಕ್ಕಾಗಿ ನನ್ನೊಡನೆ ಕಾಡಿಗೆ ಬಂದನು, ಇಲ್ಲಿ ನನಗೆ ವಿಯೋಗವುಂಟಾಯ್ತು. ಆತನು ಎಲ್ಲಿಹೋದನೋ ಕಾಣೆನು. ನಾನೊಬ್ಬಳೇ ದಿಕ್ಕಿಲ್ಲದೆ ಅವನನ್ನು ಹುಡುಕುತ್ತಾ ಅನೇಕ ಕಷ್ಟಗಳಿಗೆ ಗುರಿಯಾಗಿ ಕೊನೆಗೆ ಮಹನೀಯರಾದ ನಿಮ್ಮ ಪಾದಕಮಲವನ್ನು ಕಂಡೆನು ಪತಿಯನ್ನು ಕಾಣದೆ ಭೀತಿಯಿಂದ ಶಕ್ತಿಹೀನಳಾಗಿದ್ದೇನೆ. ನೀವು ಸರ್ವಭೂತ ದಯಾಪರರಾದುದರಿಂದ ಕರುಣೆಯಿಂದ ಅನಾಥಳಾದ ನನ್ನನ್ನು ರಕ್ಷಿಸಬೇಕಾದುದು ನಿಮ್ಮಕರ್ತವ್ಯವು. ಎಂದು ನುಡಿದಳು ॥೩೬॥

ಟಿಪ್ಪಣಿ:— (೧) ತ್ವಕ್, ಚರ್ಮ, ಮಾಂಸ, ರುಧಿರ, ಮೇದಸ್ಸು, ಮಜ್ಜ, ಸ್ನಾಯು, ನಿಸ್ಸಿಈವಿಳು ದೇಹದಲ್ಲಿರುವ ಸಪ್ತಧಾತು. ಇಗಳನ್ನು ಶೋಷಿಸಿದರೆ ಬಲವ್ರೊ ಕುಂದುವುದು. (೨) ಭೂತಗಳಲ್ಲಿದಯೆ-ಭೂತದಯೆ (ಸ. ತ)

ಮೂ॥ ನೆನೆದುದಂತಃಕರಣಕೇಳುತ । ಮುನಿಗಳೆಂದರುತಾಯೆಶೋಕ
ದ । ಮನದಿಕಂಗೆಡಬೇಡನಿಜಪತಿರಾಜ್ಯಸಿರಿಸುತರು ॥ ನಿನಗೆಬಂ

ದಪರಿನ್ನುಯೋಗದ । ಮನದೊಳರಿದೆವುನಾಡೆಯಂಜದಿ । ರೆನುತ ಪೇಳಿಯದೃಶ್ಯರಾದರುಮುನಿಗಳೊಗ್ಗಿನಲಿ ॥೩೭॥

ಟೀಕೆ:— ಕೇಳುತ- ಆಮಾತನ್ನು ಕೇಳುತ್ತಾ, ಅಂತಃಕರಣ-ಮನಸ್ಸು, ನೆನೆದುದು-ಕರಗಿತು, ಮುನಿಗಳ್-ಋಷಿಗಳು, ಎಂದರು, ತಾಯೆ-ಅಮ್ಮಾ, ಶೋಕದ-ದುಃಖವುಳ್ಳ, ಮನದಿ-ಮನಸ್ಸಿನಿಂದ, (೧) ಕಂಗೆಡಬೇಡ-ಕೊರಗಬೇಡ, ನಿನಗೆ, ಇನ್ನು, ನಿಜ-ನಿನ್ನ, ಪತಿ-ಗಂಡನು, ರಾಜ್ಯ-ದೊರೆತನವೂ, ಸಿರಿ-ಐಶ್ವರ್ಯವೂ, ಸುತರು-ಮಕ್ಕಳೂ, ಬಂದಪರು-ಪುನಃದೊರೆಯುವರು,ಯೋಗದ ಮನದೊಳು-ಜ್ಞಾನದೃಷ್ಟಿಯಿಂದ, ನಾಡೆ-ಚೆನ್ನಾಗಿ, ಅರಿದೆವು-ತಿಳಿದೆವು, ಅಂಜದಿರು-ಹೆದರಬೇಡ ಎನುತ, ಪೇಳಿ-ಹೇಳಿ, ಮುನಿಗಳು-ಋಷಿಗಳು, ಒಗ್ಗಿನಲಿ-ಒಟ್ಟಾಗಿ (೨) ಅದೃಶ್ಯರಾದರು-ಅಂತರ್ಧಾನವನ್ನು ಹೊಂದಿದರು ॥೩೭॥

ತಾತ್ಪರ್ಯ:— ದಮಯಂತಿಯ ದುಃಖಾಲಾಪಗಳನ್ನು ಕೇಳಿದ ಆಮುನಿಗಳಮನಸ್ಸು ದಯೆಯಿಂದ ಮರುಗಿತು. ಪರೋಪಕಾರ ಬುದ್ಧಿಯುಳ್ಳವರಾದುದರಿಂದ ಕೂಡಲೇ ಆಕೆಯ ವೃತ್ತಾಂತವೆಲ್ಲವನ್ನೂ ಜ್ಞಾನದೃಷ್ಟಿಯಿಂದ ನೋಡಿ ಅಮ್ಮಾ ನಿನಗೆ ಕೆಲವುಕಾಲದಲ್ಲಿಯೇ ನಿನ್ನಪತಿ, ರಾಜ್ಯ, ಸಂಪತ್ತು, ಮಕ್ಕಳು ಇವರೆಲ್ಲ ಪುನಃ ದೊರಕಿ ಪೂರ್ವದಂತೆ ಸಾಮ್ರಾಜ್ಯ ವುಂಟಾಗಿ ಸುಖಪಡುತ್ತೀಯೆ, ಇದು ಸತ್ಯವೆಂದುನಂಬು ಇನ್ನು ಚಿಂತಿಸಬೇಡ, ಎಂದು ಹೇಳಿ ಆಶೀರ್ವದಿಸಿ ಅಲ್ಲಿಯೇ ಎಲ್ಲರೂ ಮಾಯವಾದರು ॥೩೭॥

ಟಿಪ್ಪಣಿ:— (೧) ಕಣ್+ಕೆಡಬೇಡ-ಕಂಗೆಡಬೇಡ- (ಗಕಾರಾದೇಶ) ಕಣ್ಣಿಂಕೆಡು ಕಂಗೆಡು (ಕ್ರಿ. ಸ) (೨) ದೃಶ್ಯರಲ್ಲದವರು-ಅದೃಶ್ಯರು (ಸಂಸ್ಕೃತ. ನಞ್, ತ) ॥೩೭॥

ಮೂ॥ ಆತರುಣಿಬೆರಗಾಗಿಕನಸಿನ । ರೀತಿಯಾಯ್ತುಕಟಕಟಮೌನಿ। ವ್ರಾತವೆತ್ತಲುಸರಿದುದೋವಿಸ್ಮಯವಲಾಎನುತ ॥ ಆತಳೋದರಿ। ಪತಿಯಕಾಣಳದೆ । ಕಾತರದಿಬರುತಿರಲುಕಂಡರು । ನೂತನದ ಬೇಹಾರಿಗಳುತೊಳಲುವನಿತಂಬಿನಿಯ ॥೩೮॥

ಟೀಕೆ:— ಆತರುಣಿ-ದಮಯಂತಿಯು, ಬೆರಗಾಗಿ-ಆಶ್ಚರ್ಯವನ್ನುಹೊಂದಿ, ಕನಸಿನ-ಸ್ವಪ್ನದ, ರೀತಿಯಾಯ್ತು-ಬಗೆಯಾಯಿತು, ಅಕಟಕಟ-ಆಹಾ ! ಮೌನಿವ್ರಾತವು-ಋಷಿಸಮೂಹವು, ಎತ್ತಲು-ಯಾ

ವಕಡೆಗೆ, ಸರಿದುದೋಹೋಯಿತೊ, ವಿಸ್ಮಯವಲಾ-ಅದ್ಭುತವಾಗಿದೆಯು ಲ್ಲವೇ ! ಎನುತ-ಎಂಬದಾಗಿ, ಆತಳೋದರಿ-ಕೃಶಾಂಗಿಯಾದ ದಮಯಂತಿಯು, ಪತಿಯ-ಗಂಡನನ್ನು, ಕಾಣದೆ, ಕಾತುರದಿ-ಭಯದಿಂದ ಬರುತಿರಲು, ತೊಳಲುವ-ಸುತ್ತುತ್ತಿರುವ (೧) ನಿತಂಬಿನಿಯ-ಆಸ್ತ್ರೀಯನ್ನು, ನೂತನದ-ಹೊಸದಾದ, (೨) ಬೇಹಾರಿಗಳು- ವರ್ತಕರು, ಕಂಡರು-ನೋಡಿದರು ॥೩೮॥

ತಾತ್ಪರ್ಯ:—ಆಗ ದಮಯಂತಿಯು ಆಃ ಇದೇನು ಸ್ವಪ್ನವೋ, ಕಳವಳವ್ರೋ ಭ್ರಮೆಯೋ ! ಈರೀತಿಯಾಗಿ ನನಗೆ ಧೈರ್ಯವನ್ನು ಹೇಳಿ ಸಮಾಧಾನಗೊಳಿಸಿದ, ಆ ಮುನಿಗಳು ಎಲ್ಲಿ ಹೋದರು ! ಏನು ಆಶ್ಚರ್ಯವು ! ಎಂದು ಕಳವಳಿಸುತ್ತಾ, ಪುನಃ ಪ್ರಿಯನನ್ನು ಹುಡುಕಲು ಕಾಡಿನಲ್ಲಿ ಬರುತ್ತಿರಲು, ಕೆಲವರು ವರ್ತಕರು ಆ ಮಾರ್ಗವಾಗಿ ಪ್ರಯಾಣಮಾಡುತ್ತಾ, ಈಕೆಯನ್ನು ಕಂಡರು. ॥೩೮॥

ಟಿಪ್ಪಣಿ:—(೧) ನಿತಂಬವೆಂದರೆ-ಕಟಿಪಶ್ಚಾದ್ಭಾಗ, ರಮ್ಯವಾದ ನಿತಂಬವುಳ್ಳವಳು, ನಿತಂಬಿನಿ – ಹೆಂಗಸು (ಅವ) (೨) (ತ್ಸ) ವ್ಯವಹಾರಿ ॥ ೩೮॥

ಮೂ ॥ಆರಿವಳುವನಲಕ್ಷ್ಮಿಯೋಸುರ । ನಾರಿಯೋವಾರಾಂಗನೆಯೊ
ಮದ । ನಾರಿಸತಿಯುಳಕೈಗಿಳಿಯೊಮೇಣಾರಮಾನಿನಿಯೊ॥ ಆರವ
ನಿತೆಯೊಮಾಯೆರೂಪಿನ। ಭೂರಿಭೂತವ್ರೊತಿಳಿಯದಿವಳಿಂ। ನಾರೆ
ನುತಭಯಗೊಂಡುವ್ರೋಡಿದರಲ್ಲಿವಾಣಿಜರು ॥೩೯॥

ಟೀಕೆ—ಇವಳು, ಆರು-ಯಾರಾಗಿರಬಹುದು, (೧) ವನಲಕ್ಷ್ಮಿಯೋ – ವನಾಭಿಮಾನದೇವತೆಯೋ, ಸುರನಾರಿಯೋ- ದೇವಾಂಗನೆಯೋ, (೨) ವಾರಾಂಗನೆಯೊ-ವೇಶ್ಯಾಸ್ತ್ರೀಯೊ, (೩) ಮದನಾರಿಸತಿಯುಳ-ಪಾರ್ವತಿಯ, ಕೈಗಿಳಿಯೊ-ಮುಂಗೈಗಿಣಿಯೊ, ಮೇಣ್ – ಮತ್ತೆ ಯಾವಜಾತಿಯ, ಮಾನಿನಿಯೋ-ಹೆಂಗಸೋ,ಆರ-ಯಾರ, ವನಿತೆಯೊ-ಹೆಂಡತಿಯೊ, (೪) ಮಾಯೆರೂಪಿನ-ರೂಪವನ್ನು ಮರೆಸಿರುವ, ಭೂರಿ ಭೂತವ್ರೊ-ಮಹಾಭೂತವ್ರೋ, ಇವಳ್, ಇನ್ನಾರು – ಇನ್ನುಯಾರೋ, ತಿಳಿಯದು – ಗೊತ್ತಾಗಲಿಲ್ಲ, ಎನುತ, ಅಲ್ಲಿ, ವಾಣಿಜರು- ವರ್ತಕರು, ಓಡಿದರು. ॥೩೯॥

ತಾತ್ಪರ್ಯ:—ವೈಶ್ಯರು ಈಕೆಯ ಅದ್ಭುತವಾದ ಲಾವಣ್ಯವನ್ನು

ನೋಡಿ, ಇವಳು ಸಾಮಾನ್ಯ ಮನುಷ್ಯಸ್ತ್ರೀಯಂತಿಲ್ಲವಲ್ಲಾ, ಇವಳೇನು ವನಲಕ್ಷ್ಮಿಯೋ, ಅಥವಾ ಅಪ್ಸರಃಸ್ತ್ರೀಯೋ? ಇಲ್ಲವೆ ಗೌರಿದೇವಿಯ ಮುಂಗೈಯಲ್ಲಿ ವಿನೋದಾರ್ಥವಾಗಿ ಕುಳ್ಳಿರಿಸಿಕೊಂಡಿರುವ ಲೀಲಾ ಶುಕಿಯೋ? ಕಾಮ ರೂಪವುಳ್ಳ ಭೂತವ್ರೋ, ಅಲ್ಲದೆ ಇತರ ಯಾವ ಹೆಂಗಸೋ, ಯಾರ ಹೆಂಡತಿಯೋ, ಈ ರೂಪವು ಅನ್ಯಾದೃಶ್ಯವಾದುದು? ಈಕೆಯನ್ನು ನೋಡಿದರೆ ನಮಗೇನು ತೊಂದರೆಯುಂಟಾಗುವುದೋ, ಎಂದು ಹೆದರಿ ಎಲ್ಲರೂ ದಿಕ್ಕು ದಿಕ್ಕಿಗೆ ಓಡಿದರು. ॥೩೯॥

ಟಿಪ್ಪಣಿ:—(೧) ವನವೇ ಲಕ್ಷ್ಮಿ—ವನಲಕ್ಷ್ಮಿ (ಅವ. ಪ್ರೂರ್ವ.ಕ) (೨) ಸಮೂಕ್ಕಪತ್ತಿ(ಅವ) (೩) ಮದನ—ಮನ್ಮಥನಿಗೆ,ಅರಿ—ಶತ್ರು, (ಈಶ್ವರ) (ಅವ) ಮದನನ ಅರಿ—ಮದನ+ಅರಿ, ಮದನಾರಿ (ಷ. ತ.) (ಸ. ದೀ.ಸಂ) ಮದನಾರಿಯ ಸತಿ—ಮದನಾರಿಸತಿ(ಷ. ತ) (೪)ಮಾಯೆಯುಳ್ಳ ರೂಪು—ಮಾಯೆರೂಪು (ವಿ. ಪ್ರೂರ್ವ. ಕ) ರೂಪು ಎಂಬುದಕ್ಕೆ (ತ್ಸ) ರೂಪ, ॥೩೯॥

ಮೂ॥ ನೋಡಿದಳುದಮಯಂತಿಭೀತಿಯೊಳೋಡುತಿಹಬೀಡಿಕೆಯ
ವೈಕ್ಯರ। ಹೇಡಿತನವನುಕಂಡುನಸುನಗುತಲ್ಲಿಗೈತಂದು ॥ ಓಡಲೇ
ತಕೆನಿಮಗುಪಹತಿಯ। ಮಾಡುವಳುತಾನಲ್ಲಜಗಕತಿ।ರೂಢಿಸಿದನಳ
ನೃಪನಸತಿತಾನೆಂದಳಿಂದುಮುಖಿ ॥೪೦॥

ಟೀಕೆ:—ದಮಯಂತಿ, ಭೀತಿಯೊಳ್—ಹೆದರಿಕೆಯಿಂದ, ಓಡುತಿಹ—ಓಡಿಹೋಗುತ್ತಿರುವ, ಬೀಡಿಕೆಯ—ಜನದಗುಂಪನ್ನು ನೋಡಿದಳು, ವೈಕ್ಯರ, ಹೇಡಿತನವನು—ಅಧೈರ್ಯವನ್ನು, ಕಂಡು, ನಸುನಗುತ— ಮುಗುಳ್ನಗೆನಕ್ಕು, ಅಲ್ಲಿಗೆ—ಅವರಿರುವಸ್ಥಳಕ್ಕೆ, ಐತಂದು—ಬಂದು, ಓಡಲೇತಕೆ—ಓಡುವುದೇತಕ್ಕೆ, ತಾಂ—ನಾನು, ನಿಮಗೆ, ಉಪಹತಿಯ – ತೊಂದರೆಯನ್ನು, ಮಾಡುವಳು, ಅಲ್ಲ, ತಾಂ—ನಾನು, ಜಗಕೆ—ಪ್ರಪಂಚಕ್ಕೆ, ಅತಿರೂಢಿಸಿದ—ಬಹು ಪ್ರಖ್ಯಾತನಾದ (೧) ನಳನೃಪನ—ನಳರಾಜನ, ಸತಿ—ಹೆಂಡತಿಯು, (ಎಂಬದಾಗಿ) (೨) ಇಂದು ಮುಖಿ— ದಮಯಂತಿಯು, ಎಂದಳು. ॥೪೦॥

ತಾತ್ಪರ್ಯ:—ಈ ಪ್ರಕಾರವಾಗಿ ಬೆದರಿ ಓಡಿಹೋಗುತ್ತಿದ್ದ ಆ ವರ್ತಕರ ಗುಂಪನ್ನು ನೋಡಿ, ವೈಕ್ಯರ ಹೇಡಿತನವನ್ನು ಕಂಡು ನಕ್ಕು

ಅವರಿದ್ದೆಡೆಗೆ ಬಂದು ಅಯ್ಯಾ ನೀವು ಏಕೆ ಓಡುವಿರಿ ! ನಾನು ನಿಮಗೆ ಯಾವತೊಂದರೆಯನ್ನೂ ಮಾಡತಕ್ಕವಳಲ್ಲ, ನಾನು ಲೋಕಪ್ರಸಿದ್ಧನಾದ ಆ ನಳಚಕ್ರವರ್ತಿಯ ಪತ್ನಿಯು, ದಯವಿಟ್ಟು ಸ್ವಲ್ಪ ನಿಲ್ಲಿ. ನನ್ನ ಸಮಾಚಾರವನ್ನು ಕೇಳಿ ಎಂದಳು ||೪೦||

ಟಿಪ್ಪಣಿ:---(೧) ನಳನೆಂಬನೃಪ-ನಳನೃಪ (ಸಂ. ಪ್ರಾಪ್ವ. ಕ) (೨) ಇಂದು-ಚಂದ್ರನಂತೆ, ಮುಖಿ-ಮುಖವುಳ್ಳವಳು (ಅವ) (ಬ. ವ್ರೀ. ಸ) ||೪೦||

ಮೂ|| ವೀರಸೇನನತನಯನಳನೃಪಧಾರಿಣಿಯನೆರೆಸೋತುಕಾರ್ಯಾ|
ಕಾರಣದಿನಡೆತಂದನಡವಿಗೆತನ್ನನಗಲಿದನು || ದಾರಿದಪ್ಪಿದೆನಿಲ್ಲಿನಿ
ಮ್ಮನು| ಸೇರಿದೆನುಪರದೇಶಿಯೆನಗೊಂ|ದೂರಕಾಣಿಸಿನೀವೆನುತ
ತುಂಬಿದಳುಕಂಬನಿಯ||೪೧||

ಟೀಕೆ:—ವೀರಸೇನನ-ವೀರಸೇನನೆಂಬ ದೊರೆಯ, ತನಯ - ಮಗನಾದ, ನಳನೃಪ-ನಳರಾಜನು, ಧಾರಿಣಿಯ- ಭೂಮಿಯನ್ನು, ನೆರೆ-ಚೆನ್ನಾಗಿ, ಸೋತು. (೧) ಕರ್ಯ್ಯಾಕಾರಣದಿ- ಸಂದರ್ಭಾನುಸಾರವಾಗಿ, ಅಡವಿಗೆ, ನಡೆತಂದಂ-ಬಂದನು, ತನ್ನಂ-ನನ್ನನ್ನು, ಅಗಲಿದನು--ಬಿಟ್ಟುಹೋದನು, ಇಲ್ಲಿ-ಈ ಕಾಡಿನಲ್ಲಿ, (೨) ದಾರಿದಪ್ಪಿದೆಂ-ದಾರಿತಪ್ಪಿನಡೆವೆನು, ನಿಮ್ಮನು-ನಿಮ್ಮ ಸಮೀಪವನ್ನು, ಸೇರಿದೆನು, ಪರದೇಶಿ- ಪರಸ್ಥಳದವಳಾಗಿದ್ದೇನೆ, ಎನಗೆ-ನನಗೆ, ನೀವು, ಒಂದೂರ-ಒಂದುಗ್ರಾಮವನ್ನು, ಕಾಣಿಸಿ-ತೋರಿಸಿ, ಎನುತ-ಎಂಬದಾಗಿ, ಕಂಬನಿಯ-ಕಣ್ಣೀರನ್ನು, ತುಂಬಿದಳು-ಸುರಿಸಿದಳು. ||೪೧||

ತಾತ್ಪರ್ಯ:—ವೀರಸೇನನೆಂಬ ಮಹಾರಾಜನ ಮಗನಾದ ನಳನು ಜೂಜಿನಲ್ಲಿ ಪುಷ್ಕರನೆಂಬುವನಿಗೆ ರಾಜ್ಯವೆಲ್ಲವನ್ನು ಸೋತು ಆಡಿದ್ದ ಪ್ರಕಾರವಾಗಿ ನನ್ನೊಡನೆ ವನವಾಸಕ್ಕೆ ಬಂದು ಇಲ್ಲಿ ನನ್ನೊಬ್ಬಳನ್ನೇ ಬಿಟ್ಟು ಎಲ್ಲಿಯೋ ಹೋದನು, ನಾನು ದಿಕ್ಕಿಲ್ಲದವಳಾಗಿ ಆತನನ್ನು ಹುಡುಕುತ್ತಾ ಕಾಡಿನಲ್ಲಿ ಸಂಚರಿಸುವವಳಾಗಿ, ದಾರಿತಪ್ಪಿ ಅಲೆಯುತ್ತಿದ್ದೆನು, ಈಗ ನಿಮ್ಮ ಬಳಿಗೆ ಬಂದಿದ್ದೇನೆ, ನನ್ನಲ್ಲಿ ಕೃಪೆಮಾಡಿ ಯಾವುದಾದರೊಂದೂರಿಗೆ ನನ್ನನ್ನು ಸೇರಿಸಿ ಕಾಪಾಡಿ, ಎಂದು ಬೇಡುತ್ತಾ ಕಣ್ಣಿನಲ್ಲಿ ನೀರನ್ನು ಸುರಿಸಿದಳು. ||೪೧||

ಟಿಪ್ಪಣಿ:—ಕಾರ್ಯ+ಅಕಾರಣ-ಕಾರ್ಯಾಕಾರಣ (ಸ. ದೀ. ಸಂ)

(೨) ದಾರಿಯಿಂತಪ್ಪಿದೆಂ-ದಾರಿದಪ್ಪಿದೆಂ (ಕ್ರಿ. ಸ) ದಕಾರಾದೇಶ ಬಂತು ||೪೧||

ಮೂ|| ತಾಯೆನಿಮ್ಮಪದಾಬ್ಜದರ್ಶನ| ವಾಯಿತೆಮಗಿಂದಿನಲಿಧನ್ಯತೆ |
ಯೀಯವಸ್ಥೆಗೆತಂದುದೇವಿಧಿಯೆನುತಲೆರಗಿದರು || ನೋಯದಿರಿ
ಯಿದೆಚೈದ್ಯಪುರವೆಂ| ದಾಯುವತಿಯೊಡಗೊಂಡುಬರುತಿರೆ| ತೋ
ಯಜಾಪ್ತನುಪಶ್ಚಿಮಾಂಬುಧಿಗಿಳಿದನೊಲವಿನಲಿ || ೪೨||

ಟೀಕೆ:—ತಾಯೆ-ಅಮ್ಮಾ, ನಿಮ್ಮ, (೧) ಪದಾಬ್ಜದರ್ಶನದೆ - ಪಾದಕಮಲಸಂದರ್ಶನದಿಂದ, ಎಮಗೆ-ನಮಗೆ, ಇಂಗಿನಲಿ-ಈದಿನದಲ್ಲಿ, ಧನ್ಯತ-ಸಾರ್ಥಕ್ಯವು, ಆಯಿತು, ಈ ಯವಸ್ಥೆಗೆ-ಇಂತಹ ಸ್ಥಿತಿಗೆ, ವಿಧಿ-ದೈವವು, (ನಿಮ್ಮನ್ನು) ತಂದುದೇ-ತಂದಿತೇ ! ಎನುತಲಿ-ಎಂಬದಾಗಿ, ಎರಗಿದರು-ನಮಸ್ಕರಿಸಿದರು, ನೋಯದಿರಿ-ವ್ಯಥೆಪಡಬೇಡಿ, ಇದೆ-ಇಲ್ಲಿ ಕಾಣುವುದೇ, ಚೈದ್ಯಪುರವು-ಚೈದ್ಯಪಟ್ಟಣವು, ಎಂದು, ಆ ಯುವತಿಯ-ಆಕೆಯನ್ನು, ಒಡಗೊಂಡು-ಕರೆದುಕೊಂಡು, ಬರುತಿರೆ- ಬರುತ್ತಿರಲು, (೨) ತೋಯಜಾಪ್ತನು-ಸೂರ್ಯನು, ಒಲವಿನಲಿ - ಸೊಗಸಿನಿಂದ, ಪಶ್ಚಿಮಾಂಬುಧಿಗೆ-ಪಶ್ಚಿಮ ಸಮುದ್ರಕ್ಕೆ, ಇಳಿದನು-ಮುಳುಗಿದನು.||

ತಾತ್ಪರ್ಯ:—ಅದನ್ನು ಕೇಳಿ ಆ ವೈಶ್ಯವರ್ತಕರು ಅಮ್ಮಾ? ನಿಮ್ಮ ಪಾದ ಪದ್ಮ ಸಂದರ್ಶನವು ನಮಗೆ ಲಭಿಸಿದುದರಿಂದ, ಇದೇ ಸುದಿವಸವು, ನಾವು ಧನ್ಯರಾದೆವು, ನಮ್ಮ ಜನ್ಮವು ಸಾಫಲ್ಯವನ್ನು ಹೊಂದಿತು. ಅಯ್ಯೋ ದುರ್ವಿಧಿಯು ನಿಮ್ಮನ್ನು ಇಂತಹ ದುರವಸ್ಥೆಗೆ ಗುರಿಮಾಡಿತೇ ಎಂದು ಪಶ್ಚಾತ್ತಾಪ ಪಡುತ್ತಾ, ನಮಸ್ಕರಿಸಿ ಇಲ್ಲಿ ಸಮೀಪವಾಗಿಯೇ ಚೈದ್ಯ ಪುರವಿರುವುದು, ನೀವು ದುಃಖಪಡಬೇಡಿ, ನಮ್ಮೊಡನೆ ಬನ್ನಿ, ಎಂದು ಸಮಾಧಾನ ಗೊಳಿಸಿ ಕರೆದುಕೊಂಡು ಬರುತ್ತಿರುವಷ್ಟರಲ್ಲಿ ಸೂರ್ಯನು ಅಸ್ತವನ್ನು ಹೊಂದಿದನು. ||೪೨||

ಟಿಪ್ಪಣಿ:—(೧) ಅಬ್ಜದಂತಿರುವ ಪದ-ಪದಾಬ್ಜ (ಉ. ಉ. ಕ.) ಅಪ್-ನೀರಿನಲ್ಲಿ, ಜ-ಹುಟ್ಟಿದುದು-ಕಮಲ (ಅವ) ಪದಾಬ್ಜದ ದರ್ಶನ ಪದಾಬ್ಜದರ್ಶನ (ಷ. ತ) (೨) ತೋಯ-ನೀರಿನಲ್ಲಿ, ಜ-ಹುಟ್ಟಿದುದು, (ಕಮಲ) ಅದಕ್ಕೆ ಆಪ್ತ-ಮಿತ್ರನು, ಸೂರ್ಯ (ಅವ) ||೪೨||

ಮೂ||ಹಗಲುಸವೆದುದುಪ್ರೊಂಬಿಸಲುನೆರೆ| ತೆಗೆದುದತಿವೇಗದಲಿಕತ್ತಲೆ| ಬಿಗಿದುದವನೀತಳವಪೆಟ್ಟಿಗೆಮುಚ್ಚಿದಂದದಲಿ|| ಸುಗುಣೆಸಮ

ಯಂತಿಯಳನೋಡಲು। ಸೊಗಸಿನಿಂದನಿಮಿಷರವ್ರೊಲ್ತಾರೆಗಳು
ಮಾಡಿದವಂಬರದಿಪ್ರಜ್ವಲಿಪಕಾಂತಿಯಲಿ ॥೪೩॥

ಟೀಕೆ:—ಹಗಲು, ಸವೆದುದು-ಕಳೆಯಿತು, (೧) ಪ್ರೊಂಬಿಸಿಲು-ಹೊಂಬಣ್ಣದ ಬಿಸಿಲು, ನೆರೆ-ಹೆಚ್ಚಾಗಿ, ತೆಗೆದುದು-ಹೋಯಿತು, ಪೆಟ್ಟಿಗೆ, ಮುಚ್ಚಿದಂದಲಿ-ಬಾಗಿಲನ್ನು ಮುಚ್ಚಿದಹಾಗೆ, ಅವನೀತಳವ_ ಭೂಮಿಯನ್ನು, ಅತಿವೇಗದಲಿ-ಬಹುಬೇಗನೆ, ಕತ್ತಲೆಬಿಗಿದುದು-ಕತ್ತಲೆ ಕವಿಯಿತು, ಸುಗುಣೆದಮಯಂತಿಯಳ-ಸುಗುಣವುಳ್ಳದಮಯಂತಿಯನ್ನು, ನೋಡಲು, ಸೊಗಸಿ-ಅಪೇಕ್ಷಿಸಿ, ನಿಂದ-ನಿಂತುಕೊಂಡ, (೨) ಅನಿಮಿಷರವ್ರೊಲ್-ದೇವತೆಗಳೋ, ಎಂಬಂತೆ, ಪ್ರಜ್ವಲಿಪ - ಪ್ರಕಾಶಿಸುವ, ಕಾಂತಿಯಲಿ-ಶೋಭೆಯಿಂದ, ಅಂಬರದಿ-ಆಕಾಶದಲ್ಲಿ, ತಾರೆಗಳು- ನಕ್ಷತ್ರಗಳು, ಮಾಡಿದವು-ಹುಟ್ಟಿದವು. ॥೪೩॥

ತಾತ್ಪರ್ಯ:—ಹಗಲು ಕಳೆದು ಹೋಯಿತು ಸಂಧ್ಯಾಕಾಲದ ಕೆಂಬಿಸಿಲೂ ಕಾಣದ ಹಾಗಾಯ್ತು. ಪೆಟ್ಟಿಗೆಯ ಬಾಗಿಲನ್ನು ಮುಚ್ಚಿದರೆ ಒಳಗೆ ಹೇಗೆ ಕತ್ತಲೆ ಕವಿಯುವುದೋ ಹಾಗೆಯೇ ಲೋಕವನ್ನೆಲ್ಲಾ ಅಂಧಕಾರವು ವ್ಯಾಪಿಸಿತು. ದಮಯಂತಿಯನ್ನು ನೋಡಿ ವಿಚಾರಿಸುವುದಕ್ಕಾಗಿ ದೇವತೆಗಳೆಲ್ಲರೂ ಬಂದು ನಿಂತಿರುವರೋ ಎಂಬಂತೆ ಆಕಾಶದಲ್ಲಿ ನಕ್ಷತ್ರಗಳು ಹೊಳೆಯುತ್ತಿದ್ದವು. ರಾತ್ರಿಯಾಯ್ತು. ॥೪೩॥

ಟಿಪ್ಪಣಿ:—(೧) ಪ್ರೊಕ್+ಬಿಸಿಲು-ಪ್ರೊಂಬಿಸಿಲು (ಅನುಸ್ವಾರಾದೇಶ) ಪೊನ್ನ ಬಿಸಿಲು-ಪ್ರೊಂಬಿಸಿಲು (ಷ. ತ) (೨) ನಿಮಿಷ-ರಪ್ಪೆಗಳು, ಅದಿಲ್ಲದವರು, ಅನಿಮಿಷರು (ಸಂ. ನಞ್. ಬ. ವ್ರೀ) ॥೪೩॥

ಮೂ॥ಅವನಿಪತಿಕೇಳ್ವೈಶ್ಯಕುಲಸಂ।ಭವರುಹಾಕ್ದಿದರಲ್ಲಿಗೂಡಾ।ರ
ವನುಬಿಟ್ಟರುಪಾಳ್ಯದಲಿಮಲಗಿದರುರಾತ್ರಿಯಲಿ ॥ ಅವಧಿಬಂದುದ
ನೇನನೆಂಬೆನು। ಕವಿಸುಕಾಡಾನೆಗಳುಮಡುವಿಗೆ। ತವಕದಿಂನೀರ
ಡಿಸಿಬಂದವುಗಿರಿಗಳೆಂದದಲಿ ॥೪೪॥

ಟೀಕೆ:--ಅವನಿಪತಿ-ದೊರೆಯೇ ? ಕೇಳ್-ಕೇಳು, ವೈಶ್ಯಕುಲಸಂಭವರು-ವೈಶ್ಯಜಾತಿಯವರು, ಅಲ್ಲಿ, (೧) ಗೂಡಾರವನು- ಡೇರೆಯನ್ನು, ಹಾಕಿದರು-ಹರಡಿದರು, ಬಿಟ್ಟರು-ನಿಂತರು. ರಾತ್ರಿಯಲಿ, ಪಾಳ್ಯದಲಿ-ಗುಂಪಾಗಿ, ಮಲಗಿದರು, ಅವಧಿ-ತೊಂದರೆಯು, ಬಂದುದಂ-ಬಂದದ್ದನ್ನು, ಏನನೆಂಬೆನು-ಏನೆಂದುಹೇಳಲಿ, (೨) ಕಾಡಾನೆಗಳು. ನೀರಡಿ

ಸಿ-ದಾಹದಿಂದ, ಮಡುವಿಗೆ-ಹೊಂಡಕ್ಕೆ, ಗಿರಿಗಳಂದದಿ- ಬೆಟ್ಟಗಳಂತೆ, ಕವಿದು-ಮೇಲೆಬಿದ್ದು, ತವಕದಿಂ-ಆತುರದಿಂದ, ಬಂದುವು, ||೪೪||

ತಾತ್ಪರ್ಯ:—ಎಲೈ ಧರ್ಮರಾಜನೇ ಕೇಳು ಸಾಯಂಕಾಲವಾದುದರಿಂದ ಕತ್ತಲೆಯಲ್ಲಿ ಮುಂದೆ ಪ್ರಯಾಣಮಾಡುವುದಕ್ಕನುಕೂಲವಿಲ್ಲದೆ, ವರ್ತಕರೆಲ್ಲರೂ ಅಲ್ಲಿಯೇ ಗುಡಾರವನ್ನು ಹಾಕಿಕೊಂಡು ಎಲ್ಲಗೂ ಅದರಲ್ಲಿ ಮಲಗಿರಲು, ಅಕಸ್ಮಾತ್ತಾಗಿ ಒಂದು ತೊಂದರೆಯು ಬಂದೊದಗಿತು. ಏನಹೇಳಲಿ! ಆ ಕಾಡಿನಲ್ಲಿದ್ದ ಆನೆಗಳೆಲ್ಲವೂ ನೀರಡಿಕೆಯಿಂದ ನೀರನ್ನು ಹುಡುಕಿಕೊಂಡು ಆ ಮಾರ್ಗವಾಗಿ ಆತುರದಿಂದ ನುಗ್ಗುತ್ತಾ ಬೆಟ್ಟಗಳೋ ಎಂಬಂತೆ ನಡೆದು ಬರುತ್ತಿದ್ದುವು. ||೪೪||

ಟಿಪ್ಪಣಿ:—(೧) (ತ್ಸ) ಗೂಢಾಗಾರ (೨) ಕಾಡು+ಆನೆ-ಕಾಡಾನೆ, ಉಕಾರಲೋಪಸಂಧಿ. ||೪೪||

ಮೂ|| ಮುರಿದುತರುಗಳನಿಡುತಮೆಳೆಗಳ|ನೊರಸಿಮೆಟ್ಟುತೆಕೋಡಿನ
ಲಿಭಲು| ಮೊರಡಿಯುಂಕಿತ್ತಿಡುತಶುಂಡಿಲತೂಗಿಮದವೇರಿ|| ಕರಿಗ
ಳೈತರೆಕಂಡುಭೀತಿಯೊ| ಳಿರದೆಹೊಯ್ದರುಕೆಲರುಧೈರ್ಯದೊ| ಳು
ರುಬಿನಿಂದರುಸಬಳದಲಿಹೊಕ್ಕಿರಿದುಕಾದಿದರು ||೪೫||

ಟೀಕೆ:—ತರುಗಳಂ-ಮರಗಳನ್ನು, ಮುರಿದು, ಇಡುತ- ಈಡಾಡುತ್ತಾ, ಮೆಳೆಗಳಂ-ಪೊದರುಗಳನ್ನು, ಒರಸಿ-ಹೊಸಗಿ, ಮೆಟ್ಟುತೆ - ಕಾಲಿಂದತುಳಿಯುತ್ತಾ, (೧) ಕೋಡಿನಲಿ-ಕೊಂಬಿನಿಂದ, (೨) ಬಲುಮೊರಡಿಯುಂ-ದೊಡ್ಡದಿಣ್ಣೆಗಳನ್ನು, ಕಿತ್ತು-ಅಗೆದು, ಇಡುತ-ಎಸೆಯುತ್ತಾ, ಶುಂಡಿಲ-ಸೊಂಡಿಲನ್ನು, ತೂಗಿ-ಅಲ್ಲಾಡಿಸಿ, ಮದವು, ಏರಿ - ಹೆಚ್ಚಿ, ಕರಿಗಳ್-ಆನೆಗಳು, ಐತರೆ-ಬರಲು, ಕಂಡು, ಭೀತಿಯೊಳ್-ಅಂಜಿಕೆಯಿಂದ, ಕೆಲರು-ಕೆಲವರು, ಇರದೆ-ಬಿಡದೆ, ಹೊಯ್ದರು - ಹೊಡೆದರು, ಧೈರ್ಯದೋಳ್-ಹೆದರದೆ, ಉರುಬಿ-ರೇಗಿ, ನಿಂದರು- ಎದುರುಬಿದ್ದರು, ಹೊಕ್ಕು-ಮುಂದೆನುಗ್ಗಿ, ಸಬಳದಲಿ-ಭಲ್ಲೆಯಿಂದ, ಇರಿದು - ತಿವಿದು, ಕಾದಿದರು-ಹೊಡೆದಾಡಿದರು. ||೪೫||

ತಾತ್ಪರ್ಯ:—ಮದವೇರಿದಾನೆಯ ಹಿಂಡು, ದೊಡ್ಡಮರಗಳನ್ನು ಮುರಿದು ಬೀಸಾಡುತ್ತಲೂ, ಪೊದೆಗಳನ್ನು ಹೊಸಗಿ ಹಾಕಿ ತುಳಿಯುತ್ತಲೂ, ಕೋಡುಗಳಿಂದ ನೆಲವನ್ನಗೆದುವಪ್ರಕ್ರೀಡೆಯಾಡುತ್ತಲೂ, ಸೊಂಡಲವನ್ನು ತೂಗಾಡಿಸುತ್ತಲೂ, ಭಯಂಕರವಾಗಿ ಬರುತ್ತಿರಲ

ವರ್ತ್ತಕರುನೋಡಿ ಪ್ರಾಣಭಯದಿಂದ ಧೈರ್ಯದೊಡನೆ ಕೆಲವರು ಪ್ರತಿಭ ಟಿಸಿದರು, ಕೆಲವರು ಹೊಡೆದರು, ಕೆಲವರು ಈಟಿ, ಭರ್ಜಿಗಳಿಂದ ತಿವಿ ಯುತ್ತಾ ಅವುಗಳೊಡನೆ ಹೋರಾಡಿದರು. ॥೪೫॥

ಟಿಪ್ಪಣಿ:—(೧) ಕೋಡು - ಆನೆಯದಂತ, ಮೃಗಗಳಕೊಂಬು, ಮರದಕೊಂಬೆ, ಪರ್ವತಶಿಖರ, ತಂಪು, ದಾನಮಾಡುವುದು. (ನಾನಾ) (೨) ಬಲಿತ್ತುನೊರಡಿ, ಬಲ್ಮೊರಡಿ (ವಿ. ಪೂರ್ವ. ಕ) ॥೪೫॥

ಮೂ॥ ಹೂಳಿದವುಮದಕರಿಗಳವರನು। ಸೀಳಿದವುಕೆಲಕೆಲರಮುಂವೊ
ನೆ। ಯಾಳುಕವಿದುದುಹೊಕ್ಕುಕಾದಿದರಖಿಳಭುಜಬಲರು ॥ ತಾಳ
ಬಲ್ಲರೆಅವರುಕರಿಗಳ। ಧಾಳಿಗಿದಿರೇಮುರಿದುಹಾಯ್ದರು। ಹೇಳಲೇ
ನದನರಸತೆಗೆದೋಡಿದರುದೆಸೆದೆಸೆಗೆ ॥೪೬॥

ಟೀಕೆ:—ಅವರನು-ಆವರ್ತ್ತಕರನ್ನು, ಮದಕರಿಗಳು-ಮದಿಸಿದಆನೆ ಗಳು, ಹೂಳಿದವು-ಹೂತುಬಿಟ್ಟವು, ಕೆಲಕೆಲರ-ಕೆಲವರನ್ನು, ಸೀಳಿದು ವು-ಸೀಳಿಹಾಕಿದವು, (೧) ಮುಂವೊನೆಯ - ಯುದ್ಧದಮುಂಭಾಗದಲ್ಲಿ ದ್ದ, ಆಳು-ಜನವು, ಕವಿದುದು-ಆನೆಗಳನ್ನು ಮುತ್ತಿತು, (೨) ಅಖಿಳಭು ಜಬಲರು-ಬಹುಬಲಿಷ್ಠರು, ಹೊಕ್ಕು-ನುಗ್ಗಿ, ಕಾದಿದರು-ಹೊಡೆದಾಡಿ ದರು, ಅವರು, ತಾಳಬಲ್ಲರೇ-ಸಹಿಸುವರೇ, ಕರಿಗಳ-ಆನೆಗಳ, ಧಾಳಿಗೆ- ಅವಾಂತರಕ್ಕೆ, ಇದಿರೇ-ಎದುರಾಗಬಲ್ಲರೆ, ಮುರಿದು-ಸೋತು, ಹಾಯ್ದ ರು - ಹೋದರು, ದೆಸೆದೆಸೆಗೆ - ದಿಕ್ಕುದಿಕ್ಕಿಗೆ, ತೆಗೆದೋಡಿದರು- ನು ಗ್ಗಿ ಓಡಿಹೋದರು, ಅರಸ-ದೊರೆಯೇ, ಅದಂ-ಅದನ್ನು, ಹೇಳಲೇಂ- ಏನಹೇಳಲಿ. ॥೪೬॥

ತಾತ್ಪರ್ಯ:—ಆನೆಗಳು ಅವರಲ್ಲಿ ಕೆಲವರನ್ನು ನೆಲಕ್ಕೆ ತುಳಿದು, ಮ ತ್ತೆ ಕೆಲವರನ್ನು ಕಾಲಿಂದ ಮೆಟ್ಟಿ ಸಿಗಿದು ಹಾಕಲು, ಮುಂದೆ ನಿಂತಿದ್ದ ಶಕ್ತಿವಂತರು ಅವುಗಳಮೇಲೆ ಬಿದ್ದು ಬಹುಕಾಲ ಹೋರಾಡಿದರು, ಆನೆ ಗಳ ಹಾವಳಿಯನ್ನು ತಡೆಯಬಲ್ಲರೇ ! ಭಗ್ನರಾಗಿ ಪ್ರಾಣಭೀತಿಯಿಂ ದ ಎಲ್ಲರೂ ನಾನಾದಿಕ್ಕುಗಳಿಗೆ ಓಡಲಾರಂಭಿಸಿದರು. ॥೪೬॥

ಟಿಪ್ಪಣಿ:—(೧) ವೊನೆಯಮುಂದು-ಮುನ್ನೊನೆ (ಅವ್ಯಯೀಭಾ ವ) (೨) ಭುಜದಲ್ಲಿ ಬಲವುಳ್ಳವರು-ಭುಜಬಲರು (ಬ. ವ್ರೀ) ಅಖಿಳರಾದ ಭುಜಬಲರು-ಅಖಿಳಭುಜಬಲರು (ವಿ. ಪೂರ್ವ. ಕ) ॥೪೬॥

ಮೂ॥ ತರಹರಿಸಿನಿಲಲರಿದುದಂತಿಗ। ಳುಉರುಬುಘನವಿಟ್ಟಣಿಸಿಕೊಲು

ತಿರೆ| ಹರಣವನುಹೋಗಾಡಲೇಕೆಂದೆನುತಪಟುಭಟರು|| ತೆರಳಿತ
ಲ್ಲಿಯುದಲ್ಲಿವಾಣಿ|ಜ್ಯರುಮುರಿದುಬರೆಕಾಣುತಾವೈ| ಶ್ಯರಿಳಧಿಪಚಿಂ
ತಿಸಿದನಿನಕಿನ್ನೇನುಗತಿಯೆನುತ ||೪೭||

ಟೀಕೆ:—ತರಹರಿಸಿ-ತಡೆದು, ನಿಲಲ್-ನಿಂತುಹೋರಾಡಲು, ಅ ರಿದು-ಅಸಾಧ್ಯವು, (೧) ದಂತಿಗಳ-ಆನೆಗಳ, ಉರುಬು-ತೊಂದರೆಯು, ಘನವು-ದೊಡ್ಡದು, ಇಟ್ಟಣಿಸಿ-ಸಾಲಾಗಿ, ಕೊಲುತಿರೆ- ಕೊಲ್ಲುತ್ತಿರಲು, ಹರಣವನು-ಪ್ರಾಣವನ್ನು, ಹೋಗಾಡಿಕೊಳಲು-ಕಳೆದುಕೊಳ್ಳಲು, ಏ ಕೆ-ಯಾತಕ್ಕೆ, ಎನುತ, ಪಟುಭಟರು-ಸಮರ್ಥರಾದ ದೂತರು, ತೆರಳಿ- ಹೊರಟು, (೨) ತಲ್ಲಯುದಲ್ಲಿ-ಆನೆಗಳಹೊಡೆತದಿಂದ, ವಾಣಿಜ್ಯರು- ವ್ಯಾ ಪಾರಿಗಳು, ಮುರಿದು-ಭಗ್ನರಾಗಿ, ಬರೆ-ಬರಲು, ವೈಶ್ಯರಿಗೆ, ಅಧಿಪ- ಯುಜಮಾನನು, ಇದಕೆ-ಇದಕ್ಕೆ, ಇನ್ನೇನುಗತಿ-ಇನ್ನೇನು ಆಲೋಚನೆ ಎನುತ, ಚಿಂತಿಸಿದಂ-ಆಲೋಚಿಸಿದನು. ||೪೭||

ತಾತ್ಪರ್ಯ:—ಆನೆಗಳೆದುರಿಗೆ ನಿಂತು ಹೋರಾಡುವದು ಕಷ್ಟವು, ಅವು ಬಹು ಬಲಶಾಲಿಗಳು, ಎಲ್ಲರನ್ನೂ ಸಾಲಾಗಿ ಕೊಲ್ಲುತ್ತಾ ಬರಲು,ಬ ಲಶಾಲಿಗಳಾದ ಸೇವಕರು, ನಾವು ಏಕೆ ಪ್ರಾಣವನ್ನು ಕಳೆದುಕೊಳ್ಳೋ ಣ ಎಂಬದಾಗಿ ಶೂರರಾದ ಭಟರು,ಹೊರಟು, ಕಾಡಾನೆಗಳ ಬಾಧೆಯಿಂ ದ ನಾಶವಾಗಿ ಎಲ್ಲ ವರ್ತಕರೂ ಯುದ್ಧದಿಂದ ಹಿಮ್ಮೆಟ್ಟಿಬರಲು, ಆಗುಂ ಪಿನ ಯುಜಮಾನನಾದ ವೈಶ್ಯನು, ಕಂಡು ಇದಕ್ಕಿನ್ನೇನುಗತಿ ಎಂದು ಚಿಂತಿಸಿದನು. ||೪೭||

ಟಿಪ್ಪಣಿ:—(೧) ದಂತವುಳ್ಳದ್ದು (ಹಲ್ಲುಳ್ಳದ್ದು) ದಂತಿ (ಅವ) (೨) ತತ್+ಲಯು-ತಲ್ಲಯು, ತಕಾರಕ್ಕೆ ಲಕಾರಾದೇಶ (ಪರಸವರ್ಣಸಂಧಿ) ||

ಮೂ|| ಅಮ್ಮಕೇಳೇಮದಗಜಂಗಳು | ನಮ್ಮಕೊಲುತಿದೆಹದನಕಾಣೆ
ವು| ನಮ್ಮನೀವ್ನೆರೆನಂಬಿಬಂದಿರಿಯಿದಕೆಗತಿಯೇನು||ನಿಮ್ಮನಿಲ್ಲಿಗೆ
ತಂದುದೇವಿಧಿ| ಬ್ರಹ್ಮಲಿಖಿತವಮೀರುವವನಾ| ರಮ್ಮಲೋಕದೊ
ಳೆಂದುಮರುಗಿದವೈಶ್ಯಕುಲತಿಲಕ ||೪೮||

ಟೀಕೆ:—ಅಮ್ಮ, ಕೇಳೇ, ಮದಗಜಂಗಳು- ಮದಹತ್ತಿದ ಆನೆಗ ಳು, ನಮ್ಮ-ನಮ್ಮನ್ನು, ಕೊಲುತಿದೆ-ಕೊಂದುಹಾಕುತ್ತಿವೆ, ಹದನ- ಪ್ರ ತೀಕಾರವನ್ನು, ಕಾಣೆವು-ತಿಳಿಯುಲಾರೆವು, ನೀವ್-ನೀವು, ನಮ್ಮ - ನ ಮ್ಮನ್ನು, ನೆರೆ-ಚೆನ್ನಾಗಿ, ನಂಬಿ-ಆಶ್ರಯಿಸಿ, ಬಂದಿರಿ, ಇದಕ್ಕೆಗತಿಯೇ

ನು, ನಿಮ್ಮಂ-ನಿಮ್ಮನ್ನು, ವಿಧಿ-ದೈವವು, ಇಲ್ಲಿಗೆ-ಈಸ್ಥಳಕ್ಕೆ, ತಂದು ದೇ-ತಂದುಹಾಕಿತೇ! (೧) ಬ್ರಹ್ಮಲಿಖಿತವ-ಬ್ರಹ್ಮಲಿಪಿಯನ್ನು, ಲೋಕದೊಳ್ - ಪ್ರಪಂಚದಲ್ಲಿ, ಮೀರುವವರು - ತಪ್ಪಿನಡೆವರು, ಆರಮ್ಮ-ಯಾರಿರುವರು, ಎಂದು (೨) ವೈಶ್ಯಕುಲತಿಲಕ-ವೈಶ್ಯಶ್ರೇಷ್ಠನು, ಮರುಗಿದನು-ವ್ಯಥೆಪಟ್ಟನು. ॥೪೭॥

ತಾತ್ಪರ್ಯ:—ಅವ್ಮಾ ಮದಿಸಿದ ಆನೆಗಳು ನುಗ್ಗಿ ಎಲ್ಲರನ್ನೂ ನಾಶಮಾಡುತ್ತಿದೆ, ತಪ್ಪಿಸಿಕೊಳ್ಳುವ ಉಪಾಯವಿಲ್ಲ. ನೀವು ನಮ್ಮನ್ನು ನಂಬಿ ಬಂದಿರುವಿರಿ. ಇಂತಹ ಅಪಾಯಕ್ಕೆ ನಿಮ್ಮನ್ನು ತಂದು ಸಿಕ್ಕಿಸಿದ ದುರ್ವಿಧಿಯು ಇನ್ನೆಷ್ಟು ನಿಷ್ಕರುಣವುಳ್ಳದ್ದೋ ಕಾಣೆ, ಹಣೆಯ ಬರಹವನ್ನತಿಕ್ರಮಿಸಲು ಯಾರಿಗೆ ಸಾಧ್ಯವು, ಎಂದು ಪಶ್ಚಾತ್ತಾಪ ಪಟ್ಟನು. ॥೪೭॥

ಟಿಪ್ಪಣಿ:—(೧) ಬ್ರಹ್ಮನ ಲಿಖಿತ - ಬ್ರಹ್ಮ ಲಿಖಿತ (ಷ. ತ)ಬ್ರಹ್ಮಕ್ಕೆ (ದ್ಭ) ಬೊಮ್ಮ, (೨) ವೈಶ್ಯಕುಲದ ತಿಲಕ - ವೈಶ್ಯಕುಲತಿಲಕ (ಷ. ತ) ॥೪೭॥

ಮೂ॥ ಜನಕನೇವರಭೀಮಸೇನನು।ತನಯಳಿಗೆನಳಚಕ್ರವರ್ತಿಯೆ।
ಯಿನಿಯನಗ್ಗದವೀರಸೇನನವೆಮಾವನಾಗಿರಲು॥ ವನದೊಳಿಹಕರಿಗ
ಳಿಗೆತಾನಿಜ। ತನುವತೆರಬೇಕೆಂಬಕಾರಣ।ತನಗಿರಲುನೀವೇನಮಾ
ಡುವಿರೆಂದಳಿಂದುಮುಖಿ ॥೪೮॥

ಟೀಕೆ:—ತನಯಳಿಗೆ-ಮಗಳಾದನನಗೆ, ಜನಕನೇ- ತಂದೆಯೋ, ವರಭೀಮಸೇನನು-ಮಹಾತ್ಮನಾದ ಭೀಮ ಭೂಪಾಲನು, ನಳಚಕ್ರವರ್ತಿ, ಇನಿಯಂ-ಗಂಡನು, (೧) ಅಗ್ಗದ-ಶ್ರೇಷ್ಠನಾದ, ವೀರಸೇನನೆ, ಮಾವನಾಗಿರಲು, ವನದೊಳಿಪ-ಕಾಡಿನಲ್ಲಿರುವ, ಕರಿಗಳಿಗೆ - ಆನೆಗಳಿಗೆ, ತಾಂ-ನಾನು, (೨) ನಿಜತನುವ-ನನ್ನ ದೇಹವನ್ನು, ತೆರಬೇಕೆಂಬ-ತೆತ್ತು ಬಿಡಬೇಕೆಂಬ, ಕಾರಣ-ಪ್ರಾಪ್ತಿಯು, ತನಗೆ-ನನಗೆ, ಇರಲು, ನೀವ್-ನೀವು, ಏನಮಾಡುವಿರಿ-ಏನಮಾಡಬಲ್ಲಿರಿ, (ಎಂದು) ಇಂದುಮುಖಿ-ದಮಯಂತಿಯು, ಎಂದಳು. ॥೪೮॥

ತಾತ್ಪರ್ಯ:—ಪ್ರಸಿದ್ಧನಾದ ಭೀಮರಾಜನ ಮಗಳಾಗಿ ಹುಟ್ಟಿ, ಲೋಕಪ್ರಸಿದ್ಧನಾದ ನಳಚಕ್ರವರ್ತಿಯ ಕೈಹಿಡಿದು, ವೀರಸೇನರಾಜನೇ ಮಾವನಾಗಿದ್ದರೂ, ಈ ಅರಣ್ಯದಲ್ಲಿಕಾಡಾನೆಗಳಿಗೆ ಈ ಪ್ರಾಣಗಳನ್ನೂ

ಪ್ಪಿಸಬೇಕೆಂದು ನನ್ನ ವಿಧಿಯು ಇರುವಾಗ ನೀವು ಮಾಡುವುದೇನು? ಇದು ನನ್ನ ಹಣೆಯ ಬರಹವು, ನೀವು ದುಃಖಿಸಬೇಡಿರಿ, ಎಂದು ನುಡಿದಳು. ||೪೯||

ಟಿಪ್ಪಣಿ:—(೧) (ತ್ಸ) ಅರ್ಘ, (೨) ನಿಜವಾದತನು - ನಿಜತನು. (ವಿ. ಪೂರ್ವ. ಕ) ಎಂತಹ ಮಹನೀಯರಿಗೂ, ಪರಾಕ್ರಮಿಗಳಿಗೂ, ಭಾಗ್ಯಶಾಲಿಗಳಿಗೂ, ವಿಧಿಯು ತಪ್ಪಿದ್ದಲ್ಲವೆಂದು ಭಾವವು. ||೪೯||

ಮೂ|| ಎನುತಕಣ್ಣೆವೆಬಿಗಿದುಮನದಲಿ| ನೆನೆದಳಚ್ಯುತನಂಘ್ರಿಕಮಲ
ವ| ವನಜನಾಭಮುಕುಂದಸಲಹೆನೆಕರಿಗಳಾ ಕ್ಷಣಕೆ| ವನಕೆತೆರಳಿ
ದುವವರನೆಲ್ಲರ| ವನಿತೆಸಂತೈಸಿದಳುದೈವವ| ನೆನೆವಭಕ್ತರಿಗುಂಟೆ
ಭಯವೆಲೆನೃಪತಿಕೇಳೆಂದ ||೫೦||

ಟೀಕೆ:—ಎನುತ-ಎಂಬದಾಗಿ ಹೇಳಿ, (೧) ಕಣ್ಣೆವೆಬಿಗಿದು- ಕಣ್ಣಾರಪ್ಪೆಯನ್ನುಮುಚ್ಚಿಕೊಂಡು, ವನಜನಾಭ-ಕಮಲದಂತೆಹೊಕ್ಕಳುಳ್ಳವನೇ,ಮುಕುಂದ-ಮೋಕ್ಷದಾಯಕನೇ, ಸಲಹು-ಕಾಪಾಡು,ಎನೆ-ಎಂಬದಾಗಿ,ಮನದಲಿ-ಮನಸ್ಸಿನಲ್ಲಿ, (೨)ಅಚ್ಯುತನ-ಕೃಷ್ಣನ, ಅಂಘ್ರಿಕಮಲವನು-ಪಾದಕಮಲವನ್ನು, ನೆನೆದಳು-ಧ್ಯಾನಿಸಿದಳು, ಆಕ್ಷಣಕೆ-ತತ್‌ಕ್ಷಣದಲ್ಲಿಯೇ, ಕರಿಗಳ್ - ಆನೆಗಳು, ವನಕೆ - ಕಾಡಿಗೆ, ತೆರಳಿದುವು-ಹೊರಟುಹೋದುವು, ವನಿತೆ-ದಮಯಂತಿಯು, ಅವರನೆಲ್ಲರ - ಆ ವೈಶ್ಯರನ್ನು, ಸಂತೈಸಿದಳು-ಸಮಾಧಾನಮಾಡಿದಳು, ದೈವವ - ದೇವರನ್ನು, ನೆನೆವ-ಧ್ಯಾನಿಸುವ, ಭಕ್ತರಿಗೆ, ಭಯವು-ಅಂಜಿಕೆಯು, ಉಂಟೇ ನೃಪತಿ-ದೊರೆಯೇ, ಕೇಳು, ಎಂದ || ೫೦||

ತಾತ್ಪರ್ಯ:—ದಮಯಂತಿಯು ಈ ರೀತಿಯಾಗಿ ವೈಶ್ಯನಿಗೆಸಮಾಧಾನೋಕ್ತಿಯನ್ನು ಹೇಳಿ, ದೀನರಕ್ಷಕನು ಭಗವಂತನಲ್ಲದೆ ಮತ್ತಾರಿರುವರೆಂದು, ಕೂಡಲೆ ಕಣ್ಣನ್ನು ಮುಚ್ಚಿ ಆ ಕೃಷ್ಣನನ್ನು ಮನದಲ್ಲಿ ಧ್ಯಾನಿಸಲು, ಆನೆಗಳೆಲ್ಲವೂ, ಸುಮ್ಮನೆಕಾಡಿಗೆ ಹೊರಟುಹೋದುವು, ಬಳಿಕ ಆ ವೈಶ್ಯರನ್ನು ಸಮಾಧಾನಮಾಡಿದಳು, ದೈವವನ್ನು ನೆನೆದವರಿಗೆ ಕೊರತೆಯುಂಟೇ? ಭಕ್ತರಕ್ಷಕನಲ್ಲವೇ ದೇವರು. ||೫೦||

ಟಿಪ್ಪಣಿ:—(೧) ಕಣ್ಣಎವೆ-ಕಣ್ಣೆವೆ (ಷ, ತ) ಕಣ್ಣೆವೆಯಂ ಬಿಗಿದು-ಕಣ್ಣೆವೆಬಿಗಿದು (ಕ್ರಿ. ಸ) (೨) ಚ್ಯುತಿ (ನಾಶ) ಇಲ್ಲದವನು. ಅಚ್ಯುತ (ಅವ) ||೫೦||

ಮೂ॥ ಕಳೆದರಂದಿನರಾತ್ರಿಯುನುರವಿ। ಬೆಳಗಿದನುಪೂರ್ವಾದ್ರಿಯ
ಲಿಸಂ। ದಣಿಸಿನಡೆದರುಮುಂದೆಕಂಡರುಚೈದ್ಯಪಟ್ಟಣವ ॥ ಹೊಳೆ
ವಹೇಮದಸೌಧಗಳಥಳ। ಥಳಿಪನೆಲೆಯುಪ್ಪರಿಗೆಗಳಕಂ। ಡೊಲಿ
ದುಮನಹರುಷದಲಿಹೊಕ್ಕರುಸತಿಸಹಿತಪುರವ ॥೫೧॥

ಟೀಕೆ:—ಅಂದಿನ-ಆದಿನದ, ರಾತ್ರಿಯನು-ರಾತ್ರಿಯನ್ನು, ಕಳೆದರು, ರವಿ-ಸೂರ್ಯನು, ಪೂರ್ವಾದ್ರಿಯಲಿ-ಉದಯಪರ್ವತಶಿಖರದಲ್ಲಿ, ಬೆಳಗಿದನು-ಪ್ರಕಾಶಿಸಿದನು, ಸಂದಣಿಸಿ-ಗುಂಪಾಗಿ, ನಡೆದರು-ಪ್ರಯಾಣ ಮಾಡಿದರು, ಮುಂದೆ, (೧) ಚೈದ್ಯಪಟ್ಟಣವ-ಚೈದ್ಯನಗರವನ್ನು, ಕಂಡರು-ನೋಡಿದರು, ಹೊಳೆವ-ಪ್ರಕಾಶಿಸುವ, ಹೇಮದ-ಚಿನ್ನದ, ಸೌಧಗಳ-ಅರಸರಮನೆಗಳನ್ನು, (೨) ನೆಲೆಯುಪ್ಪರಿಗೆಗಳ- ಅಂತಸ್ತಿನಮಹಡಿಗಳನ್ನು, ಕಂಡು, ಒಲಿದು-ಪ್ರೀತಿಯಿಂದ, ಸತಿಸಹಿತ- ದಮಯಂತಿಯೊಡನೆ, ಪುರವ-ಪಟ್ಟಣವನ್ನು, ಮನಹರ್ಷದಲಿ- ಮನಸ್ಸಂತೋಷದಿಂದ, ಹೊಕ್ಕರು-ಸೇರಿದರು. ॥೫೧॥

ತಾತ್ಪರ್ಯ:—ಆದಿನದರಾತ್ರಿಯು ಕಳೆಯಿತು, ಪೂರ್ವದಿಕ್ಕನ್ನು ಸೂರ್ಯನು ನಿಲಂಕರಿಸಿದನು, ಪುನಃ ಎಲ್ಲರೂ ಪ್ರಯಾಣಮಾಡಿದರು; ಮುಂದೆ ಸುವರ್ಣನಿರ್ಮಿತವಾದ ಮಹಡಿಗಳ ಸಾಲಿನಿಂದಲೂ, ರಾಜಸಂಬಂಧಿ ಗೃಹಗಳಿಂದಲೂ ಮನೋಹರವಾಗಿರುವ ಚೈದ್ಯನಗರವು ಕಂಗೊಳಿಸಿತು, ದಮಯಂತಿಯು ವೈಶ್ಯರೊಡನೆ ಪಟ್ಟಣವನ್ನುಹೊಕ್ಕಳು ॥೫೧॥

ಟಿಪ್ಪಣಿ:—(೧) ಚೈದ್ಯನಪಟ್ಟಣ-ಚೈದ್ಯಪಟ್ಟಣ (ಷ. ತ) (೨) ನೆಲೆಯಾದಉಪ್ಪರಿಗೆಗಳು-ನೆಲೆಯುಪ್ಪರಿಗೆಗಳು (ವಿ. ಪೂರ್ವ. ಕ) ॥೫೧॥

ಮೂ॥ ರಸದಲೇಪದಮಿಸುನಿಯೊಮಲಿನ। ವಸನದಲಿಹುದುಗಿರ್ದರತ್ನ
ವೊ। ವಿಶದಮೇಬಿದೊಳೆಸೆವಚಂದ್ರನಬಿಂಬದಂದದಲಿ॥ ಶಶಿವದನೆ
ಬರುತಿರಲುಪುರಜನ। ವೊಸೆದುನೋಡಿದರಲ್ಲಿಗಲ್ಲಿಗೆ। ಬಿಸಜಮುಖಿ
ಯಿವಳಾರೆನುತಬೆರಗಾಯ್ತುಜನನಿಕರ ॥೫೨॥

ಟೀಕೆ:—ರಸದ-ಪಾದರಸದ, ಲೇಪದ-ಲೇಪವುಳ್ಳ, ಮಿಸುನಿಯೊ-ಚಿನ್ನವೊ! ಮಲಿನವಸನದಲಿ-ಮಾಸಿದಬಟ್ಟೆಯಲ್ಲಿ, ಹುದುಗಿರ್ದ-ಅಡಗಿದ್ದ, ರತ್ನವೊ! (೧) ವಿಶದಮೇಘದೊಳ್-ವಿಸ್ತಾರವಾದಮೇಘದೊಳಗೆ, ಎಸೆವ-ಪ್ರಕಾಶಿಸುವ, ಚಂದ್ರನಬಿಂಬದಂದದಲಿ-ಚಂದ್ರಮಂಡಲದಂತೆ, ಶಶಿವದನೆ-ದಮಯಂತಿಯು, ಬರುತಿರಲು-ಬರುತ್ತಿರಲು, ಅಲ್ಲಿಗಲ್ಲಿ

ಗೆ-ಅಲ್ಲಲ್ಲಿ, ಪುರಜನ-ಪಟ್ಟಣಿಗರು, ಒಸೆದು-ಪ್ರೀತಿಯಿಂದ, ನೋಡಿದರು, ಬಿಸಜಮುಖಿ - ಕಮಲಮುಖಿಯಾದ, ಇವಳ್ - ಈಕೆಯು, ಆರ್-ಯಾರು, ಎನುತ, (೨) ಜನನಿಕರ-ಜನದಗುಂಪು, ಬೆರಗಾಯ್ತು-ಆಶ್ಚರ್ಯಪಟ್ಟಿತು, ||೫೨||

ತಾತ್ಪರ್ಯ:—ಮೇಲೆ ಪಾದರಸದ ಮುಲಾಮು ಮಾಡಿದ ಚಿನ್ನದಂತೆಯೂ, ಕೊಳಿಬಟ್ಟಿಯಲ್ಲಿ ಕಟ್ಟಿರುವರತ್ನದಂತೆಯೂ, (ಬಿಳಿಯ)ಮೇಘದಿಂದ ಮುಚ್ಚಿರುವ ಚಂದ್ರಬಿಂಬದಂತೆಯೂ, ಮೇಲೆಮಲಿನವಾಗಿಸ್ವಭಾವಸುಂದರಿಯಾಗಿದ್ದ ದಮಯಂತಿಯನ್ನು ಪುರಜನರೆಲ್ಲರೂ ಅಲ್ಲಲ್ಲಿನಿಂತುನೋಡುತ್ತಾ, ಈ ಸೌಂದರ್ಯವತಿಯು ಯಾರಿರಬಹುದು !ಎಂದು ಬೆರಗಾಗುತ್ತಿದ್ದರು. ||೫೨||

ಟಿಪ್ಪಣಿ:—(೧) ವಿಶದವಾದಮೇಘ-ವಿಶದಮೇಘ (ವಿ. ಪೂರ್ವ. ಕ) (೨) ಜನರನಿಕರ - ಜನನಿಕರ (ಷ. ತ) ಉತ್ಪ್ರೇಕ್ಷಾ ಲಂಕಾರವು. ||೫೨||

ಮೂ|| ನುಡಿಗೆಶುಕಪಿಕ ನಲಿಯೆಮಿಗೆಸೆಳೆ| ನಡುಬಳುಕೆವೃತ್ತಸ್ತನಕೆ
ಸೋಗ|ಮುಡಿಯಭಾರಕೆಕೊರಳುಕೊಂಕಲುಮೆಲ್ಲಡಿಯನಿಡುತ ||
ಕುಡಿತೆಗಂಗಳನೋಟಕಾರ್ಮುಗಿ|ಲೊಡೆದುಮಿಂಚುವಮಿಂಚಿನಂತಿ
ರೆ| ಸಡಗರದಿಬರುತಿರ್ದಳಂಗನೆಹೊಳಲಬೀದಿಯಲಿ ||೫೩||

ಟೀಕೆ:—ನುಡಿಗೆ-ಮಾತಿಗೆ, ಶುಕಪಿಕ-ಗಿಳಿ ಮತ್ತು ಕೋಗಿಲೆಗಳು, ನಲಿಯೆ-ಸಂತೋಷಪಡುತ್ತಿರಲು, ಮಿಗೆ-ಹೆಚ್ಚಾಗಿ, (೧) ಸೆಳೆನಡು,-ಸಣ್ಣನಾದನುಧ್ಯವು, ವೃತ್ತಸ್ತನಕೆ- ಗುಂಡಾದಸ್ತನಗಳಭಾರಕ್ಕೆ, ಬಳುಕೆ-ಬಳುಕುತ್ತಿರರು, (೨) ಸೋರ್ಮುಡಿಯ-ಉದ್ದವಾದ ಕೂದಲಿನ, ಭಾರಕ್ಕೆ, ಕೊರಳುಕೊಂಕಲು-ಒರೆಯಾಗಲು, ಮೆಲ್ಲಡಿಯಂ-ಮೆಲ್ಲಗೆಹೆಜ್ಜೆಯನ್ನು, ಇಡುತ-ಇಡುತ್ತಾ,(೩)ಕುಡಿತೆಗಂಗಳ್-ಸೇರೆಯಂತೆವಿಸ್ತಾರವಾದ ಕಣ್ಣುಗಳ, ನೋಟ-ನೋಟವು, (೪) ಕಾರ್ಮುಗಿಲ್-ಮಳೆಗಾಲದ ಮೋಡವು, ಒಡೆದು, ಮಿಂಚುವ-ಹೊಳೆವ, ಮಿಂಚಿನಂತಿರೆ- ಮಿಂಚಿನಹಾಗಿರಲು, ಅಂಗನೆ-ದಮಯಂತಿಯು, ಹೊಳಲ - ಪಟ್ಟಣದ, ಬೀದಿಯಲಿ - ಬೀದಿಯಲ್ಲಿ, ಸಡಗರದಿ - ಸಂಭ್ರಮದಿಂದ, ಬರುತಿರ್ದಳ್-ಬರುತ್ತಿದ್ದಳು, ||೫೩||

ತಾತ್ಪರ್ಯ:—ರಾಜವೀಧಿಯಲ್ಲಿ ದಮಯಂತಿಯು ಬರುತ್ತಿರಲು.

ಆಕೆಯ ಮಾತನ್ನು ಕೇಳಿ ಗಿಣಿಗೋಗಿಲೆ ಇವು ಬೆರಗಾದವು. ಸ್ತನ ಭಾರದಿಂದ ನಡುವು ಬಳುಕುತ್ತಿರಲು, ತಲೆಯು ಕೂದಲಿನ ಭಾರಕ್ಕೆ ಕೊರಲು ಒರೆಯಾಗುವಂತಿರಲು, ಕಟಾಕ್ಷವು, ಮಿಂಚಿನಂತೆ ಥಳಥಳಿಸುತ್ತಿರಲು, ಮಂದಗಮನದಿಂದ ಶೋಭಿಸುತ್ತಿದ್ದಳು. ॥೫೩॥

ಟಿಪ್ಪಣಿ:—(೧) ಸೆಳೆವನಡು–ಸೆಳೆನಡು (ಗಮಕ) (೨) ಸೋರ್ಮುಡಿ–ಸೋರ್ಮ್ಮುಡಿ, (ಗಮಕ) (೨) ಕುಡಿತೆಯಂತಿರ್ಪ ಕಂಗಳ್– ಕುಡಿತೆಗಂಗಳ್, (ಉ. ಪೂರ್ವ. ಕ) ಕುಡಿತೆ+ಕಂಗಳ್–ಕುಡಿತೆಗಂಗಳ್,ಕನ್ನಡವ್ಯಜನಸಂಧಿ ಗಕಾರಾದೇಶವು ಬಂತು, (೪) ಕಾರಮುಗಿಲ್–ಕಾರ್ಮ್ಮುಗಿಲ್ (ಷ. ತ) ॥೫೩॥

ಮೂ॥ ಹೇಮದುಪ್ಪರಿಗೆಯಲಿನೃಪಸತಿ।ಕಾಮಿನಿಯರೋಲಗದೊಳೊ
ಪ್ಪುತ। ತಾಮರಸದಳನಯನೆದಮಯಂತಿಯನುತಾಂ ಕಂಡು ॥ ಈ
ಮಹಾಸತಿಯಾರಿವಳುಸು । ತ್ರಾಮನರಸಿಯೊಯೆನುತಕರಸಿದೊ
ಡಾಮಹಿಳೆಬಂದಳುನೃಪಾಲನಸತಿಯಸಂಮುಖಕೆ । ೫೪॥

ಟೀಕೆ:—ತಾಮರಸದಳನಯನೆ–ಕಮಲದ ಎಸಳಿನೋಪಾದಿಯಲ್ಲಿ ಕಣ್ಣುಗಳುಳ್ಳ, ನೃಪಸತಿ–ರಾಜಪತ್ನಿಯು, ಹೇಮದ–ಚಿನ್ನದ, ಉಪರಿಗೆಯಲಿ–ಮಹಡಿಯಲ್ಲಿ, ಕಾಮಿನಿಯರ–ಸ್ತ್ರೀಯರ, ಓಲಗದೊಳ್–ಸಭೆಯಲ್ಲಿ, ಒಪ್ಪುತ–ಪ್ರಕಾಶಿಸುತ್ತಾ, ತಾಂ–ತಾನು, ದಮಯಂತಿಯನು, ಕಂಡು, ಈ ಮಹಾಸತಿ–ಈ ಮಹಾ ಪತಿವ್ರತೆಯು, ಆರ್–ಯಾರಾಗಿರಬಹುದು! ಸುತ್ರಾಮನ–ಇಂದ್ರನ, ಅರಸಿಯೊ–ರಾಣಿಯೋ! ಎನುತ, ಕರೆಸಿದೊಡೆ – ಕರೆಯಿಸಲು, (೨) ಆಮಹಿಳೆ – ಆ ದಮಯಂತಿಯು, ನೃಪಾಲನ – ದೊರೆಯ, ಸತಿಯ – ಹೆಂಡತಿಯ, ಸಂಮುಖಕೆ–ಎದುರಿಗೆ, ಬಂದಳು. ॥೫೪॥

ತಾತ್ಪರ್ಯ:—ಚೈದ್ಯರಾಜನ ಹೆಂಡತಿಯು ಉಪ್ಪರಿಗೆಯಲ್ಲಿ ಹೆಂಗಸರ ಸಭೆಯಲ್ಲಿ ಕುಳಿತು ಓಲಗಮಾಡುತ್ತಿರಲು, ಬೀದಿಯಲ್ಲಿ ಬರುತ್ತಿದ್ದ ಈ ದಮಯಂತಿಯನ್ನು ಕಂಡು, ಆಕೆಯ ಲಾವಣ್ಯಕ್ಕೆ ಬೆರಗಾಗಿ ಈಕೆಯು ಶಚೀದೇವಿಯಾಗಿರಬಹುದಲ್ಲವೇ ಎಂದು ಭಾವಿಸುತ್ತಾ ತನ್ನ ಬಳಿಗೆ ಕರೆಯಿಸಲು ದಮಯಂತಿಯು ರಾಣಿಯ ಸಭೆಯನ್ನು ಹೊಕ್ಕಳು॥೫೪॥

ಟಿಪ್ಪಣಿ:—(೧) ತಾಮರಸದದಳೆ–ತಾಮರಸದಳ, (ಷ. ತ) ತಾಮರಸ ದಳದಂತೆ ನಯನವುಳ್ಳವಳು–ತಾಮರಸದಳನಯನೆ. (ಬ. ವ್ರೀ)

ತಾಮರಸಕ್ಕೆ, (ದ್ವ) ತಾವರೆ, (೨) ಅವಳು ಮಹಿಳೆ - ಆಮಹಿಳೆ, (ಗಮಕ) ॥೫೪॥

ಮೂ॥ ತಾಯೆನೀನಾರಾವದೇಶದ। ರಾಯನರಸಿಯಿದೇನುನಿನಗೀಪ್ರಾ
ಯದಲಿಕಳೆಗುಂದಿಖೇದವಿದೇಕೆಹೇಳೆನಲು ॥ ಆಯುವತಿಕಣ್ಣೀರಿನ
ಲಿಪ್ರೂರಾಯಶೋಕದೊಳೆಂದಳಾತರ । ಳಾಯತಾಕ್ಷಿಗೆತನ್ನವೃ
ತ್ತಾಂತವನುಬಿಸುಸುಯ್ದು ॥೫೫॥

ಟೀಕೆ:—ತಾಯೆ-ಅಮ್ಮಾ, ನೀಂ-ನೀನು, ಆರ್-ಯಾರು, ಆವ ದೇಶದ-ಯಾವರಾಜ್ಯದ, ರಾಯನ-ದೊರೆಯ, ಅರಸಿ-ರಾಣಿಯು, ನಿನಗೆ, (೧) ಈ ಪ್ರಾಯದಲಿ-ಈ ಯೌವನಾವಸ್ಥೆಯಲ್ಲಿ, ಇದೇನು, (೨) ಕಳೆಗುಂದಿ-ಕಾಂತಿರಹಿತಳಾಗಿ, ಖೇದವು-ದುರವಸ್ಥೆಯು, ಇದೇಕೆ - ಇದೇತಕ್ಕೆ, ಹೇಳು, ಎನಲು-ಎಂಬದಾಗಿಕೇಳಲು, ಆ ಯುವತಿ - ಆ ದಮಯಂತಿಯು, ಕಣ್ಣೀರಿನಲಿ-ಕಣ್ಣೀರನ್ನುಸುರಿಸುತ್ತಾ, ಪ್ರೂರಾಯಶೋಕದೊಳ್-ಹೆಚ್ಚಾದದುಃಖದಿಂದ, (೩) ಆ ತರಳಾಯತಾಕ್ಷಿಗೆ- ಚಂಚಲವಾಗಿಯೂ ವಿಸ್ತಾರವಾಗಿಯೂ ಇರುವ ನೇತ್ರಗಳುಳ್ಳ ದಮಯಂತಿಗೆ, ತನ್ನ ವೃತ್ತಾಂತವನು-ತನ್ನಸಮಾಚಾರನನ್ನು, ಬಿಸುಸುಯ್ದು-ನಿಟ್ಟುಸಿರನ್ನುಬಿಟ್ಟು, ಎಂದಳ್-ಹೇಳಿದಳು. ॥೫೫॥

ತಾತ್ಪರ್ಯ:— ಚೈದ್ಯರಾಜನ ಹೆಂಡತಿಯು ದಮಯಂತಿಯನ್ನು ನೋಡಿ-ಅಮ್ಮ ನೀನು ಯಾವದೇಶದ ರಾಜನ ಹೆಂಡತಿಯು ! ಇಂತಹ ವಯಸ್ಸಿನಲ್ಲಿಯೂ ಹೀಗೆ ಕಾಂತಿಗುಂದಿ, ದುಃಖದಿಂದ ಕೊರಗುತ್ತಾ ಕೃಶಳಾಗಲು ಕಾರಣವೇನು ? ಎಂದು ಪ್ರಶ್ನೆಮಾಡಲು, ದಮಯಂತಿ ಬಹು ದುಃಖದಿಂದ ಕಣ್ಣೀರಿಡುತ್ತಾ ತನ್ನ ವೃತ್ತಾಂತವನ್ನು ಆಕೆಯೊಡನೆ ಹೇಳಿದಳು. ॥೫೫॥

ಟಿಪ್ಪಣಿ:—(೧) ಇದು ಪ್ರಾಯ-ಈ ಪ್ರಾಯ (ಗಮಕ) ಪ್ರಾಯಕ್ಕೆ (ದ್ವ)ಹರೆಯ, (೨)ಕಳೆಯಿಂಕುಂದಿ-ಕಳೆಗುಂದಿ (ಕ್ರಿ.ಸ) (೩) ತರಳವಾದ ಅಕ್ಷಿಗಳುಳ್ಳವಳು-ತರಳಾಯತಾಕ್ಷಿ (ಬ. ವ್ರೀ) ಅವಳು-ತರಳಾಯತಾಕ್ಷಿ, ಆ ತರಳಾಯತಾಕ್ಷಿ (ಗಮಕ) ॥೫೫॥

ಮೂ॥ ಕ್ಷಿತಿಯನೆಲ್ಲವಸೋತುಜೂಜಿಲಿ। ಪತಿಬನಕೆಬಂದೆನ್ನನಗಲಿದ।
ಮತಿವಿಕಳತನದಿಂದತಿರುಗುತಬಂದೆನಿಮ್ಮೆಡೆಗೆ ॥ ಹಿತವರಾರನು
ಕಾಣೆನೀವೆ। ಗತಿಯೆನಗೆಪರದೇಶಿಯೆನುತ। ಹಿತವೆಪುಣ್ಯಾವುರಕ್ಷಿ

ಸೆಂದಳುನಳನೃಪನರಾಣಿ ॥೫೬॥

ಟೀಕೆ:—ಪತಿ-ಗಂಡನು, ಜೂಜದಲಿ-ದ್ಯೂತದಲ್ಲಿ, ಕ್ಷಿತಿಯನೆಲ್ಲವ-ಭೂಮಿಯೆಲ್ಲವನ್ನೂ, ಸೋತು, ಬನಕೆ-ಕಾಡಿಗೆ, ಒಂದು (೧) ಮತಿವಿಕಳತನದಿಂದ-ವಿವೇಕರಹಿತನಾದುದರಿಂದ, ಎನ್ನಂ-ನನ್ನನ್ನು, ಅಗಲಿದ-ಬಿಟ್ಟುಹೋದನು, ತಿರುಗುತ-ಸಂಚರಿಸುತ್ತಾ, ನಿಮ್ಮೆಡೆಗೆ - ನಿಮ್ಮಬಳಿಗೆ, ಒಂದೆ-ಬಂದೆನು, ಹಿತವರ-ಆಪ್ತರನ್ನು, ಆರನು-ಯಾರನ್ನೂ, ಕಾಣೆ, ಎನಗೆ-ನನಗೆ, ನೀವೇ, ಗತಿ-ದಿಕ್ಕು, (೨) ಪರದೇಶಿಯೆನು-ಪರದೇಶಸ್ಥಳಾಗಿದ್ದೇನೆ, (೩) ಪರಹಿತವೆ-ಇತರರಿಗೆ ಹಿತವನ್ನು ಮಾಡುವುದೆ, ಪುಣ್ಯವು-ಸುಕೃತವು, ರಕ್ಷಿಸು-ಪಾಲಿಸು, (ಎಂಬದಾಗಿ) ನಳನೃಪನ-ನಳನ, (೪) ರಾಣಿ-ಪತ್ನಿಯು, ಎಂದಳು. ೫೬॥

ತಾತ್ಪರ್ಯ:—ನನ್ನ ಗಂಡನು ವಿಧಿವಶದಿಂದ ಜೂಜಾಡಿ ರಾಜ್ಯವನ್ನು ಶತ್ರುವಿಗೆ ಸೋತು ನನ್ನೊಡನೆ ಕಾಡಿಗೆ ಬಂದು ಅವಿವೇಕದಿಂದ ಅರಣ್ಯದಲ್ಲಿ ನನ್ನೊಬ್ಬಳನ್ನೇ ಬಿಟ್ಟು ಹೊರಟುಹೋದನು, ನಾನು ಅವನನ್ನು ಹುಡುಕಿಕೊಂಡು ತಿರುಗುತ್ತಾ, ದಿಕ್ಕಿಲ್ಲದವಳಾಗಿ ಇಲ್ಲಿಗೆ ಬಂದೆನು, ನನಗೆ ರಕ್ಷಕರಾರೂ ಇಲ್ಲ, ನೀವೇಗತಿ, ಪರೋಪಕಾರವೇ ಪುಣ್ಯಕ್ಕೆ ಕಾರಣವಾದುದರಿಂದ ನನ್ನನ್ನು ಸಲಹಬೇಕು, ಎಂದು ಬೇಡಿಕೊಂಡಳು. ॥೫೬॥

ಟಿಪ್ಪಣಿ:—(೧) ಮತಿಯಿಂದ ವಿಕಳನು-ಮತಿವಿಕಳನು (ತೃ.ತ) ಮತಿವಿಕಳನ ಭಾವ-ಮತಿವಿಕಳತನ, (೨) ,ಆಗಿದ್ದೇನೆ, ಎಂಬರ್ಥದಲ್ಲಿ ,ಎಂ, ಎಂಬಶಬ್ದವನ್ನು ಪ್ರಯೋಗಿಸಬಹುದೆಂದು ವ್ಯಾಕರಣ ಸೂತ್ರವಿರುವುದರಿಂದ, ಪರದೇಶಿ ಎಂಬ ಶಬ್ದದಮೇಲೆ ,ಎಂ, ಎಂಬುದುಸೇರಿ ಪರದೇಶಿಯೆಂ, ಎಂದಾಗಿ ಹೊಸಕನ್ನಡದಲ್ಲಿ ,ಪರದೇಶಿಯೆನು, ಎಂದಾಯಿತು (೩) ಪರರಹಿತ-ಪರಹಿತ (ಷ. ತ) ॥೫೬॥

ಮೂ॥ ನುಡಿಯಕೇಳುತಚೈದ್ಯಭೂಪನ।ಮಡದಿನೂಪುರಘಲ್ಲುಘಲಿರೆನ।
ಲಡಿಯಿಡುತತಬ್ಬಿದಳುಸೆರಗಿನೊಳೊರಸಿಕಂಬನಿಯ॥ ಬಿಡುವ್ಯಥೆ
ಯವರಭೂಷಣಂಗಳ। ತೊಡುದುಕೂಲವನುಡುಸುಮಾಲ್ಯವ।
ಮುಡಿಗೆಸೇರಿಸುತರುಣಿಯೆಂದಳುಚೈದ್ಯನೃಪನರಸಿ ॥೫೭॥

ಟೀಕೆ:—ಚೈದ್ಯಭೂಪನ-ಚೈದ್ಯರಾಜನ, ಮಡದಿ-ಹೆಂಡತಿಯು, ನುಡಿಯ-ಆಮಾತನ್ನು, ಕೇಳುತ, (೧) ನೂಪುರ-ಕಾಲ್ಕಡಗವು, ಘಲ್ಲುಘಲಿ

ಲಿರೆನಲ!-ಘಲ್‌ಘಲ್ಲೆಂದುಸದ್ದುಮಾಡುತ್ತಿರಲು, ಅಡಿಯಿಡುತ-ಹೆಜ್ಜೆಗಳ ನ್ನಿಡುತ್ತಾ, (ಬಂದು, ದಮಯಂತಿಯನ್ನು) ತಬ್ಬಿದಳು- ತಬ್ಬಿಕೊಂಡ ಳು, ಕಂಬನಿಯ-ಕಣ್ಣೀರನ್ನು, ಸೆರಗಿನೊಳ್-ವಸ್ತ್ರದತುದಿಯಿಂದ, ಒ ರಸಿ-ಒತ್ತಿ, ಚೈದ್ಯನೃಪನ-ಚೈದ್ಯರಾಜನ, ಅರಸಿ-ರಾಣಿಯು, ತರುಣಿ- ಅಬಲೆಯೇ, ವ್ಯಥೆಯ-ದುಃಖವನ್ನು, ಬಿಡು, ವರಭೂಷಣಂಗಳ - ಶ್ರೇ ಷ್ಠವಾದ ಆಭರಣಗಳನ್ನು, ತೊಡು-ಇಟ್ಟುಕೊ, (೨) ದುಕೂಲವಂ-ದಿ ವ್ಯವಸ್ತ್ರಗಳನ್ನು, ಉಡು, ಸುಮಾಲ್ಯವ-ಸುವಾಸನೆಯುಳ್ಳಪುಷ್ಪವನ್ನು, ಮುಡಿಗೆ-ತುರುಬಿಗೆ, ಸೇರಿಸು-ಮುಡಿದುಕೊ, ಎಂದಳು, ॥೫೭॥

ತಾತ್ಪರ್ಯ:--ದಮಯಂತಿಯು ಮಾತನ್ನು ಕೇಳಿದಕೂಡಲೆ ಚೈದ್ಯ ರಾಜಪತ್ನಿಯ ಮನಸ್ಸು ಕರಗಲು, ಕನಿಕರದಿಂದ ಎದ್ದುಬಂದು ಕಣ್ಣೀ ರನ್ನು ತೊಡೆದು, ಆಲಿಂಗನೆ ಮಾಡಿ ಎಲೌ ನಾರಿಯೇ ! ನಿನ್ನ ಮನೋ ವ್ಯಥೆಯನ್ನು ಬಿಡು, ದಿವ್ಯವಾದವಸ್ತ್ರಾಭರಣಗಳನ್ನೂ, ಪರಿಮಳಿಸುವ ಪುಷ್ಪಮಾಲಿಕೆಯನ್ನೂ ಧರಿಸಿ ನನ್ನೊಡನೆ ವಿನೋದದಿಂದ ಕಾಲವನ್ನು ಕಳೆಯುತ್ತಾ ಸೌಖ್ಯದಿಂದಿರು, ಹೆದರಬೇಡ, ಎಂದು ಸಮಾಧಾನ ಗೊಳಿಸಿದಳು. ॥೫೭॥

ಟಿಪ್ಪಣಿ:—(೧) (ದ್ಭ) ನೇವುರ, (೨) (ದ್ಭ) ದುಗುಲ. ॥೫೭॥

ಮೂ॥ದೇವಿನಿಮ್ಮುಪಚಾರವೇಸಂ।ಭಾವನೆಯಲಾನಮಗೆಬೇರಿ।ನ್ನಾವ
ಭೂಷಣವೇಕೆದೇಸಿಗರಾವುನಿಮ್ಮಡಿಯ ॥ ಸೇವೆಯಲಿತಾನಿಹೆನು
ಹೀನವ। ನಾವುಬಳಸುವರಲ್ಲತನ್ನನು । ಕಾವಹದನನುನೀವೆಬಲ್ಲಿರಿ
ಯೆಂದಳಾಸತಿಗೆ ॥೫೮॥

ಟೀಕೆ:---ದೇವಿ-ಅಮ್ಮ, ನಿಮ್ಮ, ಉಪಚಾರವೇ - ಆದರಣೆಯೇ, ಸಂಭಾವನೆಯಲಾ-ಮರ್ಯಾದೆಯಲ್ಲವೇ, ನಮಗೆ, ಬೇರೆ-ಮತ್ತೊಂದು, ಇನ್ನಾವಭೂಷಣವು-ಯಾವಒಡವೆಯು, ಏಕೆ-ಏತಕ್ಕೆ, ಆವು - ನಾವು, ದೇಸಿಗರು-ದೇಶಸಂಚಾರಮಾಡತಕ್ಕವರು, ನಿಮ್ಮಡಿಯ- ನಿಮ್ಮಪಾದದ, ಸೇವೆಯಲಿ-ಶುಶ್ರೂಷೆಯಲ್ಲಿ, ನಾಂ-ನಾನು, ಇಹೆನು-ಇರುವೆನು, ಹೀನ ವ-ನೀಚಾಶ್ರಯವನ್ನು, (ಅಲ್ಪಕೃತ್ಯ) ಬಳಸುವರಲ್ಲ-ಮಾಡತಕ್ಕವರಲ್ಲ, ತನ್ನನು-ನನ್ನನ್ನು, (೨) ಕಾವ-ರಕ್ಷಿಸುವ, ಹದನನು - ರೀತಿಯನ್ನು, ನೀವೆ, ಬಲ್ಲಿರಿ-ತಿಳಿದಿರುವಿರಿ, (ಎಂಬದಾಗಿ) ಆಸತಿಗೆ-ಚೈದ್ಯನರಸಿಗೆ, ಎಂದಳು-ಹೇಳಿದಳು. ॥೫೮॥

ತಾತ್ಪರ್ಯ:—ಅಮ್ಮಾ ನಿಮ್ಮ ಉಪಚಾರವೇ ನನಗೆಮರ್ಯಾದೆಯಾಗಿದೆ, ಬೇರೆ ಭೂಷಣವೇತಕ್ಕೆ ! ನಾನೊಬ್ಬಳು ದೇಶಾಟನೆಮಾಡತಕ್ಕವಳು, ನಿಮ್ಮ ಸೇವೆಯಲ್ಲಿರುವೆನಲ್ಲದೆ, ನೀಚಾಶ್ರಯವನ್ನು (ಹೀನಕಾರ್ಯ) ಮಾಡತಕ್ಕವಳಲ್ಲ. ನನ್ನನ್ನು ಸಂರಕ್ಷಿಸುವ ಭಾರವು ನಿಮ್ಮದಾಗಿದೆ, ಹೆಚ್ಚಾಗಿ ಹೇಳಿಕೊಳ್ಳಲಾರೆನು. ಎಂದು ಹೇಳಿದಳು. ||೫೪||

ಟಿಪ್ಪಣಿ:—(೧) ಆತ್ಮಾರ್ಥದಲ್ಲಿ ಬಹುವಚನವು ಬಂದಿದೆ, (೨) ರಕ್ಷಿಸುವಿಕೆ, ಎಂಬರ್ಥವುಳ್ಳ, ‹ಕಾ›, ಎಂಬಧಾತುವಿಗೆ ಭವಿಷ್ಯತ್ಕಾಲದ ಕೃತ್ಪ್ರತ್ಯಯವು ಸೇರಿದೆ, ||೫೭||

ಮೂ|| ಎನಲುನಗುತಿಂತೆಂದಳಾಕಾ| ಮಿನಿ ಕೇತನ್ನಿಂದಾಗದುಪಹತಿ|ನಿ
ನಗೆಪೇಳೆನುಹೀನಕಾರ್ಯವಚಿಂತೆಬೇಡೆನುತ| ತನಗೆಮಗಳುಸುನೀ
ತೆಯಾಕೆಯು|ಮನೆಯೊಳಿರುಸೈರಂಧ್ರತನದಿಂ|ದನವರತನೀನೆಂದು
ನೇಮಿಸಿಕಳುಹಿದಳುಮನೆಗೆ ||೫೮||

ಟೀಕೆ:—ಎನಲು–ಹೀಗೆಹೇಳಲು, ನಗುತ, ತನ್ನಿಂದ - ನನ್ನಿಂದ, ಉಪಹತಿ–ಕೇಡು, ಆಗದು, ನಿನಗೆ, (೧) ಹೀನಕಾರ್ಯವ – ಅಲ್ಪಕೃತ್ಯವನ್ನು, ಪೇಳೆನು–ಹೇಳುವುದಿಲ್ಲ, (೨) ಚಿಂತೆಬಿಡು–ಆಲೋಚಿಸಬೇಡ, ಎನುತ, ಆ ಕಾಮಿನಿಗೆ–ದಮಯಂತಿಗೆ, ಇಂತು–ಈಪ್ರಕಾರವಾಗಿ, ಎಂದಳ್–ಹೇಳಿದಳು, ತನಗೆ–ನನಗೆ ಮಗಳು, ಸುನೀತೆ–ಸುನೀತೆ ಎಂಬುವಳು, (ಇರುವಳು) ಆಕೆಯು, ಮನೆಯೊಳ್–ಮನೆಯಲ್ಲಿ, ನೀಂ–ನೀನು ಅನವರತ–ಯಾವಾಗಲೂ, ಸೈರಂಧ್ರತನದಿಂ–ದಾಸಿಯಾಗಿ, ಇರು, ಎಂದು–ಎಂಬದಾಗಿ, ನೇಮಿಸಿ – ಗೊತ್ತುಮಾಡಿ, ಮನೆಗೆ, ಕಳುಹಿದಳು–ಕಳುಹಿಸಿದಳು. ||೫೮||

ತಾತ್ಪರ್ಯ:—ದಮಯಂತಿಯ ಮಾತನ್ನು ಕೇಳಿ ಚೈದ್ಯನರಾಣಿಯು ನಸುನಕ್ಕು, ಅಮ್ಮಾ ನಾನು ನಿನಗೆ ಎಂದಿಗೂ ಕೇಡನ್ನು ಹಾರೈಸುವವಳಲ್ಲ. ನಿನ್ನಿಂದ ಹೀನಕೃತ್ಯವನ್ನು ಮಾಡಿಸುವುದಿಲ್ಲ. ಚಿಂತೆಯನ್ನು ಬಿಡು, ನನ್ನ ಮಗಳಾದ ಸುನೀತೆಯ ಮನೆಯಲ್ಲಿ ಸರ್ವದಾ ಸೈರಂಧ್ರಿಯಾಗಿ ವಾಸಮಾಡುತ್ತಿರು, ಎಂದು ಹೇಳಿ ಅಲ್ಲಿಗೆ ಕಳುಹಿಸಿದಳು||೫೮

ಟಿಪ್ಪಣಿ:—(೧) ಹೀನವಾದಕಾರ್ಯ–ಹೀನಕಾರ್ಯ (ವಿ. ಪೂರ್ವ. ಕ) ಕಾರ್ಯಕ್ಕೆ, ಪ್ರ) ಕಜ್ಜ (೨) ಚಿಂತೆಯಂಬಿಡು–ಚಿಂತೆಬಿಡು (ಕ್ರಿ. ಸ) ||೫೮||

ಮೂ॥ ಚೈದ್ಯಭೂಪನಮಡದಿತನ್ನ ಸ|ಹೋದರಿಯಸುತೆಯೆಂದುಬಲ್ಲ
ಳೆ। ಮೇದಿನಿಯೊಳಿವಳಾರಸತಿಯೆಂದರಿದುಮನದೊಳಗೆ॥ ಆದರಿಸಿ
ಸಲಹಿದಳುಮಗಳೋ । ಪಾದಿಯಲಿದಮಯಂತಿಯುನುಮನ|ಭೇದ
ವಿಲ್ಲದೆಕರುಣದಿಂದಂಗನೆಯುನೃಪನರಸಿ ॥೬೦॥

ಟೀಕೆ:--ಚೈದ್ಯಭೂಪನ-ಚೈದ್ಯರಾಜನ, ಮಡದಿ-ಹೆಂಡತಿಯು, ದಮಯಂತಿಯನು, ತನ್ನ, ಸಹೋದರಿಯ-ತಂಗಿಯ, ಮಗಳೆಂದು-ಮಗಳೆಂಬದಾಗಿ, ಬಲ್ಲಳೆ-ತಿಳಿದುಕೊಂಡಳೆ, ಮೇದಿನಿಯೊಳ್-ಭೂಮಿಯಲ್ಲಿ, ಇವಳ್-ಈಕೆಯು, ಆರಸತಿ-ಯಾರಹೆಂಡತಿಯೋ, ಎಂದು, ಮನದೊಳಗೆ-ಮನಸ್ಸಿನಲ್ಲಿ, ಅರಿದು-ತಿಳಿದುಕೊಂಡು, ಮಗಳೋಪಾದಿಯಲಿ- ತನ್ನ ಮಗಳಂತೆ, ಆದರಿಸಿ-ಮನ್ನಣೆಮಾಡಿ, ಸಲಹಿದಳು-ಪೋಷಿಸಿದಳು, ನೃಪನ-ಚೈದ್ಯನ, (೧) ಅರಸಿ-ರಾಣಿಯು, ಅಂಗನೆಯು - ಆಸ್ತ್ರೀಯನ್ನು, ಮನಭೇದವಿಲ್ಲದೆ-ಮನಸ್ಸಿನಲ್ಲಿ ಭೇದವನ್ನೆಣಿಸದೆ, (೨) ಕರುಣದಿಂದೆ-ದಯೆಯಿಂದ, (ಸಲಹಿದಳು) ॥೬೦॥

ತಾತ್ಪರ್ಯ:—ಚೈದ್ಯರಾಜನ ಹೆಂಡತಿಯು ದಮಯಂತಿಯನ್ನು, ತನ್ನ ತಂಗಿಯಮಗಳೆಂದು ಕಾಣದೆ, ಈಕೆಯು ಯಾವಮಹಾತ್ಮನ ಹೆಂಡತಿಯೋ ! ವಿಧಿವಶದಿಂದ ಈ ದುರ್ದಶೆಯನ್ನು ಹೊಂದಿರುವಳು, ಎಂದು ತಿಳಿದು ಆದರಿಸಿ, ತನ್ನ ಮಗಳಂತೆ ಭೇದಬುದ್ಧಿಯಿಲ್ಲದೆ ಆಕ್ಕರೆಯಿಂದ ಪೋಷಿಸುತ್ತಿದ್ದಳು. ॥೬೦॥

ಟಿಪ್ಪಣಿ:—(೧) ಅರಸ, ಎಂಬಶಬ್ದದಮೇಲೆ ಹೆಂಡತಿ ಎಂಬರ್ಥದಲ್ಲಿ ,ಇ, ಎಂಬಸ್ತ್ರೀಪ್ರತ್ಯಯವು ಸೇರಿ ತದ್ಧಿತಾಂತವಾಗಿದೆ, (೨) ಇಂದೆ ಎಂಬುದು ಹಳಗನ್ನಡ ತೃತೀಯಾವಿಭಕ್ತಿಪ್ರತ್ಯಯವು. ಇಂದಂ, ಎ, ಇಂ, ಎಂಬ ರೂಪಗಳೂ ಉಂಟು ॥೬೦॥

ಮೂ॥ಮನಪಥಗೆಯಡಗಿತುಸುನೀತೆಯ। ಮನೆಯೊಳಿದ್ದಳುಭೇದವಿಲ್ಲ
ದೆ।ಯನುದಿನದೊಳಾಹಾರನಿದ್ರಾಂಗನೆಯತಾನುಳಿದು॥ವನಜನಾಭ
ನಕರುಣದಲಿಬಂ।ದಿನಿಯನೆಂದಿಗೆಮುಖವತೋರುವ। ನೆನುತಚಿಂ
ತಿಸುತಿರ್ದಳಾವರಪುರದಚನ್ನಿಗನ ॥೬೧॥

ಅಂತು ಸಂಧಿ-೫ಕ್ಕೆ ಪದ ೨೭೦ ಕ್ಕಂ ಮಂಗಳಮಸ್ತು.

ಟೀಕೆ:—ಮನದ-ಮನಸ್ಸಿನ, ಧಗೆ-ತಾಪವು, ಅಡಗಿತು-ತಗ್ಗಿತು, ಸುನೀತಿಯ, ಮನೆಯೊಳ್-ಮನೆಯಲ್ಲಿ, ಅನುದಿನದೊಳ್-ಪ್ರತಿನಿತ್ಯದಲ್ಲಿಯೂ, (೧)ಆಹಾರ ನಿದ್ರಾಂಗನೆಯ-ನಿದ್ರಾಹಾರಗಳನ್ನು, ತಾಂ-ತಾನು, ತೊರೆದು-ಬಿಟ್ಟು, ಭೇದವಿಲ್ಲದೆ-ವ್ಯತ್ಯಾಸವನ್ನೆಣಿಸದೆ, ಇದ್ದಳು, ವನಜನಾಭನ-ಕೃಷ್ಣನ, ಕರುಣದಲಿ-ಕೃಪೆಯಿಂದ, ಇನಿಯಂ-ಪತಿಯು ಬಂದು, ಎಂದಿಗೆ-ಯಾವಾಗ್ಯೆ, ಮುಖವ, ಮುಖವನ್ನು, ತೋರುವಂ-ತೋರಿಸುವನೋ, ಎನುತ-ಎಂಬದಾಗಿ, ಆ ವರಪುರದ-ಆ ಬೇಲೂರಿನ ಚೆನ್ನಿಗನ-ಚೆನ್ನಿಗರಾಯಸ್ವಾಮಿಯನ್ನು, ಚಿಂತಿಸುತಿರ್ದಳ್-ಮನಸ್ಸಿನಲ್ಲಿ ಧ್ಯಾನಿಸುತ್ತಿದ್ದಳು. ॥೬೧॥

ತಾತ್ಪರ್ಯ:—ದಮಯಂತಿಗೆ ಆಗಮನದತಾಪವು ಸ್ವಲ್ಪಕಡಿಮೆಯಾಯ್ತು. ನಿದ್ರಾಹಾರಗಳನ್ನು ತೊರೆದು ಆ ಸುನೀತೆಯ ಮನೆಯಲ್ಲಿ ಭೇದವನ್ನೆಣಿಸದೆ ಏಕಗೃಹಕೃತ್ಯದಲ್ಲಿ ಸೇರಿದವಳಂತೆ ಇರುತ್ತಾ ದೇವರ ಕೃಪೆಯಿಂದ ತನ್ನ ಪತಿಯು ಎಂದಿಗೆಬಂದು ಮುಖವನ್ನು ತೋರಿಸುವನೋ ಎಂದು ಶ್ರೀಹರಿಯನ್ನು ಸರ್ವದಾ ಧ್ಯಾನಿಸುತ್ತಿದ್ದಳೆಂಬಲ್ಲಿಗೆ ಐದನೆಯ ಸಂಧಿಯ ತಾತ್ಪರ್ಯವು ಮುಗಿದುದು. ॥೬೧॥

೫ನೆ ಸಂಧಿಯ ಟೀಕಾ ತಾತ್ಪರ್ಯ ಮುಗಿದುದು.

———*———

ಆರನೆ ಸಂಧಿ.

ಸೂಚನೆ॥ ಇಂದುವದನೆಯನಗಲಿತಾಮನ । ನೊಂದುಕಾರ್ಕೋಟನದೆಸೆಯಿಂ। ಬಂದುಹೊಕ್ಕನುಳನನೃಪತಿಋತುಪರ್ಣನಗರಿಯನು ॥

ಟೀಕೆ:— ನಳನೃಪತಿ-ನಳರಾಜನು, ಇಂದುವದನೆಯ-ಚಂದ್ರಮುಖಿಯಾದ ದಮಯಂತಿಯನ್ನು, ಅಗಲಿ-ಬಿಟ್ಟು, ತಾಂ-ತಾನು, ಕಾರ್ಕೋಟಕನ ದೆಸೆಯಿಂ-ಕಾರ್ಕೋಟಕನಿಂದ, (೧) ಮನನೊಂದು-ವ್ಯಥೆಪಟ್ಟು, ಬಂದು, (೨) ಋತುಪರ್ಣನಗರಿಯನು-ಋತುಪರ್ಣರಾಜನ ಪಟ್ಟಣವನ್ನು, ಹೊಕ್ಕನು-ಪ್ರವೇಶಿಸಿದನು ॥

ತಾತ್ಪರ್ಯ:—ನಳರಾಜನು ದಮಯಂತಿಯನ್ನಗಲಿ ಕಾಡಿನಲ್ಲಿ ಸಂಚರಿಸುತ್ತಾ ಕಾರ್ಕೋಟಕನೆಂಬ ಸರ್ಪದಿಂದ ಬಹು ಬಾಧೆಯನ್ನು

ಹೊಂದಿ ಬಂದು, ಋತುಪರ್ಣರಾಜಧಾನಿಯಾದ ಅಯೋಧ್ಯಾಪುರವನ್ನು ಸೇರಿದನು॥

ಟಿಪ್ಪಣಿ:— (೧) ಮನದಿಂದನೊಂದು-ಮನನೊಂದು (ಕಿ. ಸ) (೨) ಋತುಪರ್ಣನ ನಗರಿ-ಋತುಪರ್ಣನಗರಿ (ಷ. ತ)॥

ಮೂ॥ ಕೇಳುಕುಂತೀತನಯನಿಷಧನೃ । ಪಾಲನಿತ್ತಲುಮರೆದುಮಲಗಿದ । ಬಾಲಕಿಯಬಿಟ್ಟಡವಿಯಲಿಹೊರವಂಟನಾಶ್ರಯುವ ॥ ಕಾಲವಾತನ ಕೀಳುಮಾಡಿತು । ಶೂಲಪಾಣಿಯೆಬಲ್ಲನಳಭೂ । ಪಾಲಕನವಿಧಿಯೇನನೆಂಬೆನುಬಂದನಡವಿಯಲಿ ॥೧॥

ಟೀಕೆ:— ಕುಂತೀತನಯ-ಧರ್ಮರಾಜನೇ, ಕೇಳು, ನಿಷಧನೃಪಾಲಂ-ನಳರಾಜನು, ಇತ್ತಲು-ಈಕಡೆ, ಮರೆದು - ಎಚ್ಚರವಿಲ್ಲದೆ, ಮಲಗಿದ - ನಿದ್ರಿಸುತ್ತಿದ್ದ, ಬಾಲೆಯನು - ದಮಯಂತಿಯನ್ನು, ಅಡವಿಯಲಿ-ಅರಣ್ಯದಲ್ಲಿ, ಬಿಟ್ಟು, ಆಶ್ರಯುವ - ಬೇರೊಂದು ಕಡೆಗೆ, ಹೊರವಂಟಂ-ಹೊರಟನು, ಕಾಲವು-ದುಷ್ಕಾಲವು, ಆತನ-ಅವನನ್ನು, ಕೀಳುಮಾಡಿತು-ತಿರಸ್ಕರಿಸಿತು (೧) ನಳಭೂಪಾಲಕನ-ನಳರಾಜನ, ವಿಧಿಯ-ದೈವವನ್ನು, ಏನನೆಂಬೆನು-ಏನೆಂದುಹೇಳಲಿ ! (೨) ಶೂಲಪಾಣಿಯೆ-ಈಶ್ವರನೆ, ಬಲ್ಲ-ಬಲ್ಲಿನು, ಅಡವಿಯಲಿ-ಕಾಡಿನಲ್ಲಿ, ಬಂದಂ-ಬರುತ್ತಿದ್ದನು ॥೧॥

ತಾತ್ಪರ್ಯ:— ಇತ್ತಲಾನಳನು ನಿದ್ರಿಸುತ್ತಿದ್ದ ದಮಯಂತಿಯಂತಿಯನ್ನು ಎಚ್ಚರಗೊಳಿಸದೆ ಅಲ್ಲಿಯೇ ಬಿಟ್ಟು, ತಾನು ಇನ್ನೊಂದು ವಾಸಸ್ಥಾನವನ್ನು ಹುಡುಕುತ್ತಾ ಹೊರಟನು. ಕಾಲಗತಿಯಿಂದ ಅವನಿಗಾದ ದುರವಸ್ಥೆಯನ್ನು ಈಶ್ವರನೇ ಬಲ್ಲನು, ನಾನೇನಹೇಳಲಿ ! ಕಾಡದಾರಿಯನ್ನು ಹಿಡಿದು ಬರುತ್ತಿದ್ದನು ॥೧॥

ಮೂ॥ ವನಿತೆಮಲಗಿಹಳೋಅಧೈರ್ಯದಿ । ನೆನೆವಳೋದೈವವನುನಿದ್ರೆಯ । ಕನಸಕಂಡೇಳುವಳೊಕಾಣದೆಹಲವಹಂಬಲಿಸಿ ॥ ಕನಲಿವಿಧಿಯನುಬೈವಳೋಕಂ । ಬನಿಯಸುರಿವಳೊಶೋಕದಲಿನಿಜ । ತನುವಬಿಡುವಳೊಕಾಂತೆಯೆಂತಿಹಳೆನುತಬಿಸುಸುಯ್ದ ॥೨॥

ಟೀಕೆ:— ವನಿತೆ-ಅಂಗನೆಯು, ಮಲಗಿಹಳೊ - ಮಲಗಿರುವಳೋ, ಅಧೈರ್ಯದಿ-ಹೆದರಿಕೆಯಿಂದ, ದೈವವನು- ದೇವರನ್ನು, ನೆನೆವಳೋ-ಧ್ಯಾನಿಸುವಳೋ ! ನಿದ್ರೆಯ-ನಿದ್ದೆಯ ಸಂಬಂಧವಾದ (೧) ಕ

ನಸ-ಸ್ವಪ್ನವನ್ನು, ಕಂಡು-ನೋಡಿ, ಏಳುವಳೋ-ಎಚ್ಚರಗೊಳ್ಳುವಳೋ, ಕಾಣದೆ-ನನ್ನನ್ನು ನೋಡದೆ, ಹಲವ-ಬಗೆಬಗೆಯಾಗಿ, ಹಂಬಲಿಸಿ-ಕಳವಳಿಸಿ, ಕನಲಿ-ಕೋಪಿಸಿ, ವಿಧಿಯನು- ದೈವವನ್ನು, ಬಯ್ವಳೊ-ದೂಷಿಸುವಳೊ, ಕಂಬನಿಯು- ಕಣ್ಣೀರನ್ನು, ಸುರಿವಳೊ-ಸುರಿಸುತ್ತಾಳೆಯೋ ! ಶೋಕದಲಿ-ದುಃಖದಿಂದ (೨) ನಿಜತನುವ-ತನ್ನ ದೇಹವನ್ನು, ಬಿಡುವಳೋ-ಬಿಡುತ್ತಾಳೆಯೋ, ಕಾಂತೆ-ದಮಯಂತಿಯು, ಎಂತಿಹಳು- ಹೇಗಿರುವಳು, ಎನುತ,ಬಿಸುಸುಯ್ದು - ನಿಟ್ಟುಸುರುಬಿಟ್ಟನು ‖೨‖

ತಾತ್ಪರ್ಯ: — ತನ್ನ ಮನಸ್ಸಿನಲ್ಲಿ-ದಮಯಂತಿಯು ಇನ್ನೂ ಮಲಗಿರುವಳೋ ! ಎಚ್ಚರಗೊಂಡು ಅಧೈರ್ಯದಿಂದ ದೇವರನ್ನು ನೆನೆವಳೋ ! ಅಥವಾ ಸ್ವಪ್ನವನ್ನು ಕಂಡು ಎಚ್ಚರಗೊಳ್ಳುವಳೋ ! ನಾನು ಸಮೀಪದಲ್ಲಿಲ್ಲದುದರಿಂದ ಬಗೆಬಗೆಯಾಗಿ ಹಂಬಲಿಸುತ್ತಾ, ಕೋಪದಿಂದ ಕಣ್ಣೀರಸಾಕುವಳೋ ! ಹೇಗೆ ಏನಾಗಿರುವಳೋ ! ಎಂದು ನಿಟ್ಟುಸಿರನ್ನು ಬಿಟ್ಟನು ‖೨‖

ಟಿಪ್ಪಣಿ:— (೧) ಕರ್ಮಾರ್ಥದಲ್ಲಿ ಷಷ್ಠಿ (೨) ನಿಜವಾದತನು-ನಿಜತನು (ವಿ. ಪೂರ್ವ. ಕ) ‖೨‖

ಮೂ‖ ಸುತರಪರರೆಡೆಗಿತ್ತುನಂಬಿದ| ತಂದಡವಿಯಲಿಮಲಗಿಸಿ |ಮತಿ
ವಿಕಳನಾದೆನುಪುರಾಕೃತಪುಣ್ಯಫಲವೈಸೆ ‖ಕ್ಷಿತಿಯೊಳಾರುಂಟೆನ್ನ
ವೊಲ್ನಿಜ | ಸತಿಗೆತಪ್ಪಿದಬಾಹಿರನುಯೆಂ|ದತಿಶಯದಶೋಕದಲಿ
ನಡೆದನುಶಿವಶಿವಾಯೆನುತ ‖೩‖

ಟೀಕೆ:— ಸುತರ-ಮಕ್ಕಳನ್ನು, ಪರರ -ಇತರ, ಎಡೆಗೆ-ವಶಕ್ಕೆ, ಇತ್ತು-ಕೊಟ್ಟು, ನಂಬಿದ-ನಂಬಿಕೊಂಡಿದ್ದ, ಸತಿಯು-ಹೆಂಡತಿಯನ್ನು, ತಂದು-ಕರೆತಂದು, ಅಡವಿಯಲಿ-ಅರಣ್ಯದಲ್ಲಿ, ಮಲಗಿಸಿ-ನಿದ್ರೆಗೊಳಿಸಿ, ಮತಿವಿಕಳನಾದೆನು - ಬುದ್ಧಿಹೀನನಾದೆನು, ಪುರಾಕೃತ-ಪೂರ್ವಜನ್ಮದಲಿ ಮಾಡಿದ, ಕರ್ಮ-ಪಾಪಕೃತ್ಯದ, ಫಲವೈಸೆ-ಫಲವಲ್ಲವೇ ಕ್ಷಿತಿಯೊಳ್-ಭೂಮಿಯಲ್ಲಿ, ನಿಜಸತಿಗೆ-ತನ್ನಹೆಂಡತಿಗೆ, ತಪ್ಪಿದ-ಮೋಸಮಾಡಿದ, ಬಾಹಿರರು-ನೀಚರು, (೧) ಎನ್ನ ವೊಲ್-ನನ್ನಹಾಗೆ, ಆರುಂಟು-ಯಾರಿರುವರು ! ಎಂದು-ಎಂಬದಾಗಿ, ಅತಿಶಯದ-ಹೆಚ್ಚಾದ, ಶೋಕದಲಿ-ದುಃಖದಿಂದ (೨) ಶಿವಶಿವಾಯೆನುತ-ಓದೇವರೇ ಎನ್ನುತ್ತಾ,

ನಡೆದನು-ಹೋದನು ॥೩॥

ತಾತ್ಪರ್ಯ:—ತನ್ನ ಮಕ್ಕಳನ್ನು ಕೂಡ ಪರಾಧೀನವಮಾಡಿ ನನ್ನನ್ನೇ ಗತಿಯೆಂದು ನಂಬಿಕೊಂಡು ಬಂದಿದ್ದ ಹೆಂಡತಿಯನ್ನು ಕರೆತಂದು ಘೋರವಾದ ಅಡವಿಯಲ್ಲಿ ನಿದ್ರೆಗೊಳಿಸಿ ಅವಿವೇಕಿಯಾದೆನು, ಹಿಂದೆ ಏನು ಪಾಪಕರ್ಮವನ್ನು ಮಾಡಿದ್ದೆನೋ ಕಾಣೆ, ಆದರಫಲವು ಈರೀತಿಯಾಗಿ ಪರಿಣಮಿಸಿದೆ, ನನ್ನಂತೆ ಹೆಂಡತಿಯನ್ನು ಮೋಸಗೊಳಿಸಿದ ನೀಚನು ಲೋಕದಲ್ಲಿ ಯಾರು ? ಹರಹರಾ ! ಎಂದು ದುಃಖಿಸುತ್ತಾ ನಡೆದನು ॥೩॥

ಟಿಪ್ಪಣಿ:— (೧) ಹೋಲಿಸುವ ಸಂದರ್ಭದಲ್ಲಿ ಅಂದರೆ (ಉಪಮಾವಾಚಕವು) ನ್ರೋಲ್, ಅಂತೆ. ಅಂತೆವ್ರೋಲ್ ಈ ಅವ್ಯಯಗಳನ್ನು ಪ್ರಯೋಗಿಸಬೇಕು (೨) ಇಲ್ಲಿ ನಿಪಾತದ ಆಕಾರಕ್ಕೆ ಸ್ವರಪರವಾದುದರಿಂದ ಸಂಧಿಕಾರ್ಯವು ಬರಲಿಲ್ಲ. ಪ್ರಕೃತಿಭಾವವು ॥೩॥

ಮೂ॥ ಲೋಕದೊಳಗ್ಗಳಿಯಮಹಿಪರ। ನೇಕರವರೊಳಗಾರನೊಲ್ಲ
ದೆ। ನೂಕಿತನ್ನನ್ನೊಲಿದುಕೈಕೊಂಡಳುಸರೋಜಮುಖಿ। ಆಕೆ
ಯಗಲಿದಪಾತಕನುತಾ। ನೇಕೆಧರೆಯೊಳುಶಿವಶಿವಾಎಂ। ದಾಕ
ಮಲಲೋಚನೆಗೆಮರುಗಿದನರಸಕೇಳೆಂದ ॥೪॥

ಟೀಕೆ:— ಲೋಕದೊಳಗೆ-ಪ್ರಪಂಚದಲ್ಲಿ, ಅಗ್ಗಳಿಯ-ಶ್ರೇಷ್ಠರಾದ, (೧) ಮಹಿಪರು-ರಾಜರು, ಅನೇಕರು- ಬಹುಜನ ರಿರುವರು, ಅವರೊಳಗೆ-ಅವರಲ್ಲಿ, ಆರನು-ಯಾರನ್ನೂ (೨) ಒಲ್ಲದೆ-ಮೆಚ್ಚದೆ, ನೂಕಿ-ತಿರಸ್ಕರಿಸಿ, ತನ್ನನ್ನು-ನನ್ನನ್ನು, ಒಲಿದು-ಪ್ರೀತಿಸಿ, ಸರೋಜಮುಖಿ-ದಮಯಂತಿಯು, ಕೈಕೊಂಡಳು-ಕೈಹಿಡಿದಳು, ಆಕೆಯ-ಅಂತಹವಳನ್ನು, ಅಗಲಿದ-ಬಿಟ್ಟುಬಂದ, ಪಾತಕನು - ಪಾಪಿಯಾದ, ತಾನು-ನಾನು, ಧರೆಯೊಳು-ಭೂಮಿಯಲ್ಲಿ, ಏಕೆ-ಏತಕ್ಕೆ, ಶಿವಶಿವಾ, ಎಂದು ಆ ಕಮಲಲೋಚನೆಗೆ-ಕಮಲನೇತ್ರಿಯಾದ ದಮಯಂತಿಗೆ, ಮರುಗಿದಂ-ದುಃಖಪಟ್ಟನು, ಅರಸ-ದೊರೆಯೇ, ಕೇಳು, ಎಂದ ॥೪॥

ತಾತ್ಪರ್ಯ:—ಪ್ರಪಂಚದಲ್ಲಿ ಪ್ರಖ್ಯಾತರಾದ ರಾಜರು ಅಸಂಖ್ಯಾತಗಿದ್ದರೂ, ಅವರೆಲ್ಲರನ್ನೂ ನನ್ನ ಮೇಲಣ ಮೋಹವಿಂದ ಸಂಹರಿಸಿ ನನ್ನ ಕೈಯನ್ನೂ ಹಿಡಿದು ನಂಬಿಕೊಂಡಿದ್ದ ಆ ಹೆಂಡತಿಯನ್ನು ತೊರೆದು ಬಂದಪಾಪಿಯಾದ ನಾನು ಈ ಲೋಕದಲ್ಲಿ ಬಹುವೇ ಹರಹರಾ !

ಎಂಬುದನ್ನು ಮುಂತಿಯನ್ನು ಕುರಿತು ಬಹಳವಾಗಿ ಸಂಕಟಪಟ್ಟನು॥೪॥

ಟಿಪ್ಪಣಿ:—(೧) ಮಹಿಯನ್ನು ಪಾಲಿಸುವರು-ಮಹೀಪರು (ಉಪಪದ) (೨) ಸ್ನೇಹಾರ್ಥಕವಾದ ,ಒಲ್, ಎಂಬಧಾತುವಿಗೆ ನಿಷೇಧಾರ್ಥಕವಾದ ಅದೆ ಎಂಬ ಕೃತ್ಪ್ರತ್ಯಯವು ಪರವಾಗಿ ನಿಷೇಧಕೃದಂತವಾಗಿದೆ. ಮೊದಲನೆಯ ಹ್ರಸ್ವ ಸ್ವರವಾದ , ಒ , ಎಂಬುದಕ್ಕೆ ಪರದಲ್ಲಿ , ಲ್ , ಎಂಬುದು ಲಿಂಗಾಂತವಾಗಿರುವುದರಿಂದ ಅದಕ್ಕೆ ಸ್ವರಪರವಾಗಿ ದ್ವಿತ್ವವು ಬಂತು ॥೪॥

ಮೂ॥ ಈಪರಿಯೊಳತಿಶೋಕದಿಂದಪ್ರ।ಳಾಪಿಸುತಲಾನೃಪತಿಹೆಚ್ಚಿದ।
ತಾಪದಲಿಕಡುನೊಂದುಬಳಲುತತನ್ನಮನದೊಳಗೆ ॥ ಶ್ರೀಪತಿಯ
ನೆನೆಯುತ್ತಹೃದಯದ।ತಾಪದೊಳುಬರುತಿರಲುಮುಂದೆಸ। ಮೀಪ
ದೊಳುಹುತವಹನಮಹಿಮೆಯಕಂಡನವನೀಶ ॥೫॥

ಟೀಕೆ—ಆ ನೃಪತಿ-ದೊರೆಯು, ಈ ಪರಿಯೋಳ್-ಈರೀತಿಯಾಗಿ, ಅತಿಶೋಕದಿಂದ-ಹೆಚ್ಚಾದದುಃಖದಿಂದ, ಪ್ರಲಾಪಿಸುತಲಿ-ಗೋಳಾಡುತ್ತಾ, ಹೆಚ್ಚಿದ-ಹೆಚ್ಚಾದ, ತಾಪದಲಿ, ದುಃಖದಿಂದ, ಕಡುನೊಂದು-ಬಹಳವ್ಯಥೆಪಟ್ಟು, ಬಳಲುತ- ಆಯಾಸಪಡುತ್ತಾ, ಅವನೀಶ - ದೊರೆಯು, ತನ್ನ, ಮನದೊಳಗೆ-ಮನಸ್ಸಿನಲ್ಲಿ (೧) ಶ್ರೀಪತಿಯ - ವಿಷ್ಣುವನ್ನು, ನೆನೆಯುತ್ತ-ಧ್ಯಾನಿಸುತ್ತಾ, ಹೃದಯದ-ಮನಸ್ಸಿನ, ತಾಪದೊಳು-ಸಂಕಟದಿಂದ, ಬರುತಿರಲು, ಮುಂದೆ, ಸಮೀಪದೊಳು-ಹತ್ತಿರದಲ್ಲಿ, (೨) ಹುತವಹನ - ಅಗ್ನಿಯ, ಮಹಿಮೆಯ - ಶಕ್ತಿಯನ್ನು, ಕಂಡ-ನೋಡಿದನು. ॥೫॥

ತಾತ್ಪರ್ಯ:—ನಳನು ಈರೀತಿಯಾಗಿ ಗೋಳಾಡುತ್ತಾ, ದೈವವನ್ನು ಮನದಲ್ಲಿ ನೆನೆಯುತ್ತಾ, ಪತ್ನೀವಿಯೋಗದುಃಖದಿಂದ ನೊಂದು ಸಂಕಟಪಡುತ್ತಾ ಮುಂದಕ್ಕೆ ಬರುತ್ತಿರಲು, ಸಮೀಪದಲ್ಲಿ ಕಾಳ್ಕಿಚ್ಚನ್ನು ಕಂಡನು.

ಟಿಪ್ಪಣಿ:—(೧) ಶ್ರೀಯಪತಿ-ಶ್ರೀಪತಿ (ಷ. ತ) ಶ್ರೀ-ಲಕ್ಷ್ಮಿಯ ಪತಿ-ಗಂಡ (ಅವ) (೨) ಹುತ-ಹೋಮಮಾಡಿದ ಪದಾರ್ಥವನ್ನು, ವಹ-ಹೊತ್ತುಕೊಂಡು ಹೋಗತಕ್ಕದ್ದು (ಅವ) ಹುತವನ್ನು ವಹಿಸುವುದು-ಹುತವಹ (ಉಪ. ಸ) ॥೫॥

ಮೂ॥ ಏನನೆಂಬೆನುನೃಪತಿಕಿಚ್ಚಿನ। ಹಾವಳಿಯಬನದೊಳಗೆಬೆರಸಿ

ತು। ಭಾನುಮಂಡಲವಡಗೆಮುಸುಕಿದಹೊಗೆಯಹೊರಳಿಯಲಿ॥ಕಾ
ನನವನೊಡಗೊಂಡಧಳ್ಳುರಿ। ಗಾನಲಾಪವೆತರುನಿಕರವೈ। ಮಾನಿಕ
ರುನಡನಡುಗೆಬೆಂದುದುಸಕಲವನಭೂಮಿ ॥೬॥

ಟೀಕೆ:—ನೃಪತಿ-ಧರ್ಮರಾಜನೆ, ಕಿಚ್ಚಿನ-ಬೆಂಕಿಯ, ಹಾವಳಿಯ-ತೊಂದರೆಯನ್ನು, ಏನನೆಂಬೆನು-ಏನೆಂದುಹೇಳಲಿ ! ಮುಸುಕಿದ-ಮುಚ್ಚಿದ, ಹೊಗೆಯ, ಹೊರಳಿಯಲಿ-ಗುಂಪಿನಲ್ಲಿ, ಭಾನುಮಂಡಲವು-ಸೂರ್ಯಮಂಡಲವು, ಅಡಗೆ-ಮುಚ್ಚಿಹೋಗಲು, ವನದೊಳಗೆ-ಕಾಡಿನಲ್ಲಿ, ಬೆರಸಿತು-ಸುತ್ತಿಕೊಂಡಿತು, ಕಾನನವಂ-ಕಾಡನ್ನು, ಒಡಗೊಂಡ-ಆವರಿಸಿದ, (೧) ದಳ್ಳುರಿಗೆ-ಬಲವಾದಉರಿಗೆ, ತರುನಿಕರ-ಮರದಗುಂಪು, ಆನಲಾಪವೆ-ತಡೆಯುವುವೇ, (೨) ವೈಮಾನಿಕರು-ಖೇಚರರು, ನಡನಡುಗೆ-ಭಯದಿಂದ ನಡುಗುತ್ತಿರಲು, (೩) ಸಕಲವನಭೂಮಿ-ಕಾಡುನೆಲವೆಲ್ಲವೂ, ಬೆಂದುದು-ಸುಟ್ಟಿತು. ॥೬॥

ತಾತ್ಪರ್ಯ:—ಕಾಡು ಬೆಂಕಿಯು ಪ್ರಬಲವಾಗಿ ಹೊತ್ತಿಕೊಂಡು ಹೊಗೆ ಹೊರಟು ಆಕಾಶವನ್ನೂ ಭೂಮಿಯನ್ನೂ ಮುಸುಕಲು, ಸೂರ್ಯಮಂಡಲವು ಕಾಣಿಸದಂತೆ ವ್ಯಾಪಿಸಿ, ಕಾಡನ್ನು ಸುತ್ತಿಕೊಂಡು ಧಗಧಗನೆ ಉರಿಯುತ್ತಾ ಕಾಡಿನಲ್ಲಿರುವ ಮರಗಳನ್ನೆಲ್ಲಾ ಸುಟ್ಟುಹಾಕಿತು. ಆಕಾಶದಲ್ಲಿ ವಿಮಾನದಲ್ಲಿ ಕುಳಿತು ಸಂಚರಿಸುವ ದೇವತೆಗಳೆಲ್ಲರೂ ಜ್ವಾಲೆಯನ್ನು ತಾಳಲಾರದೆ ನಡುಗುತ್ತಿದ್ದರು. ಆಕಾಡುನೆಲವನ್ನೆಲ್ಲಾ ಸುಟ್ಟು ಬೂದಿಮಾಡಿತು. ॥೬॥

ಟಿಪ್ಪಣಿ:—(೧) ದಳ್ಳಿತು ಉರಿ-ದಳ್ಳುರಿ (ವಿ. ಪೂರ್ವ. ಕ) (೨) ವಿಮಾನದಲ್ಲಿ ಸಂಚರಿಸುವ ದೇವತೆಗಳು-ವೈಮಾನಿಕರು, (೩) ವನದ ಭೂಮಿ-ವನಭೂಮಿ (ಷ. ತ) ಸಕಲವಾದವನಭೂಮಿ- ಸಕಲವನಭೂಮಿ (ವಿ. ಪ್ರೂರ್ವ. ಕ) ॥೬॥

ಮೂ॥ಬಿದಿರಮೆಳೆಧಗಧಗಿಸೆಘನಹೆ।ಬ್ಬಿದಿರುಛಟಛಟರೆನಲುಪುರಿಯೊ
ಳು। ಕದಳಿಗಳುಸಿಮಿಸಿಮಿಸಿತರುಗಳನುರುಹಿಮೆಳೆಗಳನು ॥ ಗದ
ಗದಿಸೆಗುಹೆಗಳಲಿಮೃಗತತಿ। ಬೆದರಿಹಾಯ್ದುವುಪಕ್ಷಿಸಂಕುಲ।ಮು
ದುರಿದವುಗರಿಸಹಿತಬೆಂದವುವನದಮಧ್ಯದಲಿ ॥೭॥

ಟೀಕೆ:—ಬಿದಿರಮೆಳೆ-ಬಿದಿರಗಿಡಗಳು, ಧಗಧಗಿಸೆ- ಧಗಧಗಎಂದು ಉರಿಯಲು, (೧) ಘನಹೆಬ್ಬಿದಿರು-ಹೆಚ್ಚಾದದೊಡ್ಡಬಿದಿರು, ಛಟಛ

ಟಿರೆನಲು-ಛಟಛಟನೆ ಸಿಡಿಯುತ್ತಿರಲು, ಉರಿಯೊಳು-ಜ್ವಾಲೆಯಲ್ಲಿ, ಕದಳಿಗಳು-ಬಾಳೆಯುಗಿಡಗಳು, ಸಿಮಿಸಿಮಿಸೆ-ಚೊಯ್, ಎಂದು ಶಬ್ದಮಾಡುತ್ತಿರಲು, ತರುಗಳಂ-ಗಿಡಗಳನ್ನು, ಉರುಹಿ-ಸುಟ್ಟು, ಮೆಳೆಗಳನು-ಪೊದರುಗಳನ್ನು, ಗದಗದಿಸೆ-ಸುಟ್ಟುಹಾಕಲು, ಗುಹೆಗಳಲಿ-ಗವಿಗಳಲ್ಲಿ, ಮೃಗತತಿ-ಮೃಗಗಳಗುಂಪು, ಜೆದರಿ-ಹೆದರಿ, ಹಾಯ್ದವು-ಓಡಿದವು (೨) ಪಕ್ಷಿಸಂಕುಲಂ - ಹಕ್ಕಿಯುಗುಂಪು, ಗರಿಸಹಿತ - ರೆಕ್ಕೆಯೊಡನೆ, ಉದುರಿದವು-ಬಿದ್ದುಹೋದವು, ವನದ, ಮಧ್ಯದಲಿ- ಮಧ್ಯದಲ್ಲಿ, ಬೆಂದವು-ಸುಟ್ಟವು. ‖೭‖

ತಾತ್ಪರ್ಯ:—ಸಣ್ಣ ಸಣ್ಣ ಬಿದಿರು ಮೆಳೆಗಳು ಧಗಧಗನೆ ಉರಿದವು, ಹೆಬ್ಬಿದರುಗಳು ಚಿಟಿಲ್ ಎಂದು ಸೀಳಿ ಉರಿದವು, ಬಾಳೆಯ ಗಿಡದಲ್ಲಿರುವ ರಸವು ಕಾದು ಉರಿಯಿಂದ ಚೊಯ್ ಚೊಯ್, ಎಂದು ಕೂಗುತ್ತಾ ಸುಟ್ಟುಹೋದವು, ಗಿಡಗಳೂ, ಬಳ್ಳಿಗಳೂ, ಪೊದರುಗಳೂಸುಟ್ಟು ನಾಶವಾದವು, ಗವಿಗಳಲ್ಲಿದ್ದ ಮೃಗಗಳು ಚೆದರಿ ದಿಕ್ಕು ತೋರದೆ ಓಡುತ್ತಿದ್ದವು. ಪಕ್ಷಿಗಳು ಆಕಾಶದಿಂದ ಗರಿಸಹಿತವಾಗಿ ಸುಟ್ಟುಬಿದ್ದು, ಆ ಕಾಡಿನಲ್ಲಿ ಬೆಂದು ಹೋದವು. ‖೭‖

ಟಿಪ್ಪಣಿ:—(೧) ಹಿರಿದು+ಬಿದಿರು-ಹೆಬ್ಬಿದಿರು (ವಿ. ಪೂರ್ವ. ಕ) ಹಿರಿದು ಎಂಬಗುಣವಾಚಕದ ಇಕಾರಕ್ಕೆ ಸಮಾಸದಲ್ಲಿ, ಎ, ಕಾರಾದೇಶವಾಗಿದೆ, (೨) ಪಕ್ಷ (ರೆಕ್ಕೆ) ಉಳ್ಳದ್ದು-ಪಕ್ಷಿ (ಅವ) (ದ್ಭ) ಪಕ್ಕಿ, ಹಕ್ಕಿ, ಪಕ್ಷಿಗಳ ಸಂಕುಲ-ಪಕ್ಷಿಸಂಕುಲ (ಷ. ತ) ‖೭‖

ಮೂ‖ ತೆಗೆದುಹಾಯ್ದವುಸಿಂಹಶಾರ್ದೂ । ಲಗಳುಕರಿಗಳಹಿಂಡುನಾ
ನಾ। ಮೃಗಗಳಗಣಿತಬೆಂದುಬಿದ್ದವುನಿಮಿಷಮಾತ್ರದಲಿ ‖ ಚಿಗಿದು
ಹಾಯ್ದುರೆಗಂಡಭೇರುಂ। ಡಗಳುಮೊದಲಾದಖಿಳಮೃಗಪಕ್ಷಿ । ಗ
ಳುಕೆಡೆದುವುಕಿಚ್ಚಿನೊಳಗವನೀಶಕೇಳೆಂದ ‖೮‖

ಟೀಕೆ:—(೧) ಸಿಂಹ-ಸಿಂಹವೂ, ಶಾರ್ದೂಲಗಳು-ಹುಲಿಗಳೂ, ಕರಿಗಳ-ಆನೆಗಳ, ಹಿಂಡು-ಗುಂಪು, ತೆಗೆದುಹಾಯ್ದವು- ತೂರಿಓಡಿದವು, ನಾನಾಮೃಗಗಳು-ಬಗೆಬಗೆಯ ಮೃಗಗಳು, ಅಗಣಿತ- ಲೆಕ್ಕವಿಲ್ಲದಷ್ಟು, ನಿಮಿಷಮಾತ್ರದಲಿ- ನಿಮಿಷಕಾಲದಲ್ಲಿ. ಬೆಂದು ಬಿದ್ದವು-ಸುಟ್ಟುಬಿದ್ದವು, ಗಂಡಭೇರುಂಡಗಳುಮೊದಲಾಗಿ- ಗಂಡಭೇರುಂಡವೇ ಮೊದಲಾದ, (೨) ಅಖಿಳಮೃಗಪಕ್ಷಿಗಳು-ಮೃಗಾಕಾರವಾದ ಪಕ್ಷಿಗಳೆಲ್ಲವೂ,ಚಿಗಿದು-

ಹಾರಿ, ಹಾಯ್ದು-ನುಗ್ಗಿ, ಉರೆ-ಹೆಚ್ಚಾಗಿ, ಕಿಚ್ಚಿನೊಳಗೆ-ಬೆಂಕಿಯಲ್ಲಿ, ಕೆಡೆದುವು ಬಿದ್ದುಹೋದವು, ಅವನೀಶ-ನೊರೆಯೇ, ಕೇಳು, ಎಂದ-ಎಂಬದಾಗಿ ಹೇಳಿದನು ||೮||

ತಾತ್ಪರ್ಯ—ಆ ಕಾಡುಕಿಚ್ಚಿನಲ್ಲಿ ಸಿಕ್ಕಿದ ಸಿಂಹ, ಹುಲಿ, ಆನೆ ಮೊದಲಾದ ಮೃಗಗಳು ಉರಿಯಲ್ಲಿ ತೂರಿ ಓಡುತ್ತಾ ನಿಮಿಷಮಾತ್ರದಲ್ಲಿ ಸುಟ್ಟುಬಿದ್ದವು, ಗಂಡಭೇರುಂಡ ಮೊದಲಾದ ಮೃಗಾಕಾರದ ಪಕ್ಷಿಗಳೆಲ್ಲವೂ ನೆಗೆದು ಉರಿಯಲ್ಲಿ ನುಗ್ಗಿ ಬೆಂದು ಬಿದ್ದು ಹೋದವು. ||೮||

ಟಿಪ್ಪಣಿ:—(೧) (ದ್ವ) ಸಿಂಗ, ಸಿಂಹವೂ, ಶಾರ್ದೂಲವೂ-ಸಿಂಹಶಾರ್ದೂಲಗಳು (ದ್ವಂದ್ವ) (೨) ಮೃಗಾಕಾರವಾದ ಪಕ್ಷಿಗಳು (ಉ. ಮ. ಕ. ಧಾ.) ಅಖಿಳವಾದ ಮೃಗಪಕ್ಷಿಗಳು - ಅಖಿಳಮೃಗಪಕ್ಷಿಗಳು. (ವಿ. ಪೂರ್ವ. ಕ) ||೮||

ಮೂ|| ಪ್ರಳಯದಿನದಲಿಸುಳಿವಬಡಬಾ | ನಲನೊಎಂದೆನೆವನವಸುಡು
ತಲಿ| ಸುಳಿಸುಳಿಯುತಾಹಾರಗೊಳುತಿರಲಲ್ಲಿದನಿಯಾಯ್ತು|| ಸಿಲು
ಕಿದೆನುಪಾವಕನೊಳೆನ್ನನೆ| ಒಲಿದುಹಾನೃಪಕುಲಶಿರೋಮಣಿ| ಕ
ಳೆದುಬಿಡಿಸೈಸುಕೃತನಿನಗಹುದೆಂದುದಾನಿನದ ||೯||

ಟೀಕೆ:—ಪ್ರಳಯದಿನದಲಿ-ಪ್ರಳಯಕಾಲದಲ್ಲಿ, ಸುಳಿವ-ಕಾಣಿಸಿಕೊಳ್ಳುವ, (೧) ಬಡಬಾನಲನೊ-ಬಡಬಾಗ್ನಿಯೊ, ಎಂದೆನೆ-ಎಂಬರೀತಿಯಿಂದ, ವನವ-ಕಾಡನ್ನು, ಸುಡುತಲಿ-ಸುಟ್ಟುಹಾಕುತ್ತಾ, ಸುಳಿಸುಳಿಯುತ-ಹೊತ್ತಿ ಹೊತ್ತಿ, ಆಹಾರಗೊಳುತಿರಲ್ - ತಿಂಡಿಯನ್ನು ತೆಗೆದುಕೊಳ್ಳುತ್ತಿರಲು, ಅಲ್ಲಿ, ದನಿಯಾಯ್ತು-ಶಬ್ದವಾಯಿತು, (೨) ಆನಿನದ-ಆಧ್ವನಿಯು, ಪಾವಕನೊಳ್-ಬೆಂಕಿಯಲ್ಲಿ, ಸಿಲುಕಿದೆನು-ಸಿಕ್ಕಿದ್ದೇನೆ ಹಾ-ಅಯ್ಯೋ (೩) ನೃಪಕುಲಶಿರೋಮಣಿ-ರಾಜಸಮೂಹಕ್ಕೆ ಅಲಂಕಾರಪ್ರಾಯನಾದವನೇ ! ಒಲಿದು-ಪ್ರೀತಿಯಿಂದ, ಕಳೆದು-ತಪ್ಪಿಸಿ, ಬಿಡಿಸೈ-ಬಿಡುಗಡೆಮಾಡಯ್ಯಾ, ನಿನಗೆ, ಸುಕೃತ-ಪುಣ್ಯವು, ಅಹುದು-ಬರುವುದು, ಎಂದುದು-ಎಂದು ಹೇಳಿತು. ||೯||

ತಾತ್ಪರ್ಯ:—ಲೋಕಪ್ರಳಯಕಾಲದಲ್ಲಿ ಆವರಿಸಿ ಎಲ್ಲವನ್ನು ಸುಡುವ ಬಡಬಾಗ್ನಿಯೋ ಎಂಬಂತೆ ಕಾಡಿನಲ್ಲೆಲ್ಲಾ ಸುತ್ತಿಕೊಂಡು ಉರಿಯುತ್ತಿರುವ ಕಾಳ್ಗಿಚ್ಚು ತನಗೆ ಬೇಕಾದ ಆಹಾರವನ್ನು ತೆಗೆದುಕೊಳ್ಳುತ್ತಿರಲು ಆದವಾಗ್ನಿ ಮಧ್ಯದಲ್ಲಿ- "ಎಲೈ ರಾಜೇಂದ್ರನೇ! ನಾನು ಉರಿಯಲ್ಲಿ

ಸಿಕ್ಕು ಬಿದ್ದಿದ್ದೇನೆ, ಇದರಿಂದ ತಪ್ಪಿಸಿ ಈಚೆಗೆ ಬಿಟ್ಟು ನನ್ನ ಪ್ರಾಣವನ್ನುಳಿಸಿದರೆ ನಿನಗೆ ಪುಣ್ಯವುಂಟು, " ಎಂದು ಒಂದಾನೊಂದು ಧ್ವನಿಯಾಯಿತ್ತು. ||೯||

ಟಿಪ್ಪಣಿ:—(೧) ಬಡಬವೆಂಬಅನಲ-ಬಡಬಾನಲ (ಸಂ. ಪೂರ್ವ. ಕ) ಸಾಗರ ಮಧ್ಯದಲ್ಲಿ ಕುದುರೆಯ ಆಕಾರವುಳ್ಳಅಗ್ನಿಯು ಸರ್ವದಾ ಉರಿಯುತ್ತಿರುವುದು. ಇದಕ್ಕೆ ಬಡಬವೆಂಬ ಹೆಸರು, ಪ್ರಳಯವಾಗುವಾಗ ಈ ಅಗ್ನಿಯು ಲೋಕವನ್ನೆಲ್ಲಾ ಆವರಿಸಿಕೊಂಡು ಸುಡುವುದೆಂಬ ಪ್ರಮಾಣವುಂಟು, (೨) ಅದು ನಿನದ-ಆನಿನದ (ಗಮಕ) (೩) ನೃಪವರಕುಲ-ನೃಪಕುಲ (ಷ. ತ) ನೃಪಕುಲದ ಶಿರೋಮಣಿ-ನೃಪಕುಲಶಿರೋಮಣಿ (ಷ. ತ) ||೯||

ಮೂ|| ಆಗಳಾಧ್ವನಿಕೇಳಿನೃಪತಿಸ| ರಾಗದಿಂದಲಿಬಂದುಹೊಕ್ಕನು |
ಕೂಗಿದವರಾರೆನುತಬರುತಿರೆಕಂಡನುರುಗಪತಿ |' ಪೋಗುತಿದೆಯೆ
ನ್ನಸುವುಸಲಹುಷ| ಡಾಗಮಜ್ಞನೃಪಾಲಯೆನಲಾ| ಭೋಗಿಯ
ನುಕಂಡರಸನೀನಾರೆಂದುಬೆಸಗೊಂಡ ||೧೦||

ಟೀಕೆ;—ಆಗಳ್-ಆಗ, ನೃಪತಿ-ನಳನು, ಆಧ್ವನಿಗೇಳಿ-ಆಶಬ್ದವನ್ನು ಕೇಳಿ, ಬಂದು, ಹೊಕ್ಕನು-ಸೇರಿದನು, ಕೂಗಿದವರ್- ಕೂಗಿಕೊಂಡವರು, ಆರು-ಯಾರು, ಎನುತ-ಎಂಬದಾಗಿ, ಬರುತಿರೆ - ಬರುತ್ತಿರಲು, ಉರಗಪತಿ-ಸರ್ಪರಾಜನು, ಕಂಡನು, (೧) ಷಡಾಗಮಜ್ಞ - ಷಟ್ಛಾಸ್ತ್ರಗಳನ್ನು ಬಲ್ಲ, ನೃಪಾಲ-ದೊರೆಯೇ, ಎನ್ನ-ನನ್ನ, ಅಸುವು-ಪ್ರಾಣವು, ಪೋಗುತಿದೆ-ಹೋಗುತ್ತಿದೆ, ಸಲಹು-ಕಾಪಾಡು, ಎನಲ್ - ಎಂಬದಾಗಿ ಹೇಳಲು, ಅರಸ-ದೊರೆಯು, (೨)ಆಭೋಗಿಯನು-ಸರ್ಪವನ್ನು, ಕಂಡು, ನೀಂ - ನೀನು, ಆರು - ಯಾರು, ಎಂದು, ಬೆಸಗೊಂಡ-ಕೇಳಿದನು. ||೧೦||

ತಾತ್ಪರ್ಯ:—ಆ ಧ್ವನಿಯನ್ನು ಕೇಳಿದಕೂಡಲೆ ನಳನು ಬೇಗನೆ ಬಂದು ಅಲ್ಲಿ ಯಾರನ್ನೂ ಕಾಣದೆ, ಕೂಗಿಕೊಂಡವರಾರೆಂದು ಕೇಳಲು, ಕರ್ಕೋಟಕನೆಂಬ ಸರ್ಪವು, ಅವನನ್ನು ನೋಡಿ ಷಟ್ಛಾಸ್ತ್ರಪಾರಂಗತನಾದ ಮಹೀಪತಿಯೇ ! ನನ್ನ ಪ್ರಾಣವು ಹೋಗುತ್ತಿದೆ, ಉದ್ಧರಿಸು ಎಂದು ಬೇಡಿಕೊಳ್ಳಲು, ಆ ಸರ್ಪವನ್ನು ನೋಡಿ ನೀನು ಯಾರು ? ಎಂದು ಕೇಳಿದನು. ||೧೦||

ಟಿಪ್ಪಣಿ:—(೧) ಷಟ್+ಆಗಮ-ಷಡಾಗಮ (ಜಶ್ತ್ವ) ಷಟ್ (ಆರು) ಆಗ ಮಗಳು-ಷಡಾಗಮ (ದ್ವಿಗು) ಷಡಾಗಮಗಳನ್ನು ತಿಳಿದವನು-ಷಡಾಗಮಜ್ಞ (ಉಪ. ಸ) ಶಿಕ್ಷೆ, ವ್ಯಾಕರಣ, ಛಂದಸ್ಸು, ನಿರುಕ್ತ, ಜ್ಯೋತಿಷ,ಕಲ್ಪ; ಇವು ಆರು ಆಗಮಗಳು, (೨) ಅವನುಭೋಗಿ-ಆಭೋಗಿ (ಗಮಕ) ಭೋಗ-ಸರ್ಪದೇಹ, ಅದನ್ನುಳ್ಳದ್ದು - ಭೋಗಿ, (ಅವ) ॥೧೦॥

ಮೂ॥ಉರಗಪತಿಕಾರ್ಕೋಟಕನುತಾ|ನರಸಕೇಳೈಬನದೊಳಿರುತಿರೆ|
ಪರಮಋಷಿಬಂದೆನ್ನತಾಗಿದನಂದುಭೀತಿಯಲಿ॥ ಕರೆದುಕೊಟ್ಟನು
ಶಾಪವನುಸಂ| ಚರಿಸದಂತಿರೆಯೆನಗೆಯಿದುಪರಿ|ಹರವದೆಂದಿಗೆಮು
ನಿಪಕರುಣಿಸುಯೆಂದೊಡಿಂತೆಂದ ॥೧೧॥

ಟೀಕೆ:—ಅರಸ-ದೊರೆಯೇ, ಕೇಳೈ-ಕೇಳಯ್ಯಾ, ತಾಂ-ನಾನು ಉರಗಪತಿ ಕಾರ್ಕೋಟಕನು-ಸರ್ಪರಾಜನಾದ ಕರ್ಕೋಟಕನೆಂಬುವನು, ಬನದೊಳ್-ಈಕಾಡಿನಲ್ಲಿ, ಇರುತಿರೆ-ಇರುತ್ತಿರಲು, (೧) ಪರಮಋಷಿ-ಒಬ್ಬಮುನಿಶ್ರೇಷ್ಠನು, ಬಂದು (೨) ಎನ್ನ-ನನ್ನನ್ನು, ತಾಗಿದನು-ಸಂಧಿಸಿದನು, ಅಂದು-ಆಗ, ಭೀತಿಯಲಿ-ಕೋಪದಿಂದ, ಕರೆದು-ನನ್ನನ್ನುಕೂಗಿ, ಸಂಚರಿಸದಂತಿರೆ-ಇದ್ದಸ್ಥಳವನ್ನು ಬಿಟ್ಟು ಚಲಿಸದಂತೆ, ಶಾಪವನು-ಶಾಪವನ್ನು, ಕೊಟ್ಟನು, (೩) ಮುನಿಪ-ಋಷಿವರ್‍ಯನೆ, ಎನಗೆ-ನನಗೆ, ಇದು-ಈಶಾಪವು, ಅದೆಂದಿಗೆ-ಯಾವಕಾಲಕ್ಕೆ, ಪರಿಹರವು-ತಪ್ಪಿಹೋಗುವುದು, ಕರುಣಿಸು-ದಯೆಮಾಡಿಹೇಳು,ಎಂದೊಡೆ- ಎಂದು ಕೇಳಿಕೊಳ್ಳಲು, ಇಂತೆಂದ-ಹೀಗೆ ಹೇಳಿದನು. ॥೧೧॥

ತಾತ್ಪರ್ಯ:—ಎಲೈ ರಾಜನೇ ಕೇಳು ! ನಾನು ಬಹುಕಾಲದಿಂದ ಈ ವನದಲ್ಲಿ ವಾಸಮಾಡುತ್ತಿರುವ ಕಾರ್ಕೋಟಕನೆಂಬ ಸರ್ಪರಾಜನು, ಕೆಲವುಕಾಲಕ್ಕೆ ಮುಂಚೆ ನಾನು ತಿಳಿಯದೆ ದಾರಿಗಡ್ಡಲಾಗಿ ಮಲಗಿದ್ದೆನು. ಒಬ್ಬಾನೊಬ್ಬಮುನೀಶ್ವರನು ಬಂದು ಕಾಣದೆ ನನ್ನನ್ನು ತುಳಿದು ತರುವಾಯ ನನ್ನನ್ನು ನೋಡಿ, ಎಲೈ ಸರ್ಪರಾಜನೇ ನೀನು ತಿರುಗಾಡುವರಕಾಲಿಗೆ ಸಿಕ್ಕಿ ತೊಂದರೆಯನ್ನುಂಟುಮಾಡುತ್ತಿರುವಿ ಯಾದುದರಿಂದ ಇನ್ನು ಮೇಲೆ ನಿನಗೆ ಸಂಚಾರಶಕ್ತಿಯು ಇಲ್ಲದೆ ಹೋಗಲಿ, ಬಿದ್ದಕಡೆಯಲ್ಲಿಯೇ ಬಿದ್ದಿರು, ಎಂದು ಕೋಪದಿಂದ ಶಾಪವನ್ನು ಕೊಟ್ಟನು, ನಾನು ಭಯಚಕಿತನಾಗಿ ಅಯ್ಯಾ ಮುನಿವರ್‍ಯನೇ ನನ್ನ ತಪ್ಪನ್ನು

ಕ್ಷಮಿಸು, ಈ ಕ್ರೂರವಾದ ಶಾಪವು ಪರಿಹಾರವಾಗುವುದು ಯಾವಾಗ? ದಯವಿಟ್ಟು ತಿಳಿಸು, ಎಂದು ಬೇಡಿಕೊಂಡೆನು. ಅದಕ್ಕೆ ಅವನು ಹೀಗೆ ಹೇಳಿದನು. ॥೧೧॥

ಟಿಪ್ಪಣಿ:—(೧) ಪರಮನಾದಋಷಿ-ಪರಮಋಷಿ (ವಿ. ಪೂರ್ವ. ಕ) ಇಲ್ಲಿ ಗುಣಸಂಧಿ ಬಾರದೆ ಪ್ರಕೃತಿ ಭಾವಕ್ಕೆ ಕಾರಣವಿಲ್ಲ, (೨) ಕರ್ಮಾರ್ಥದಲ್ಲಿ ಷಷ್ಠಿ (೩)ಮುನಿಗಳನ್ನು ಪಾಲಿಸತಕ್ಕವನು- ಮುನಿಪ (ಉಪ. ಸ) ॥೧೧॥

ಮೂ॥ ಇರಲಿರಲುಕಾಲಾಂತರಕೆಭೂ।ವರನುನಳನೃಪನಿಲ್ಲಿಗೈದುವ।ಧರ
ಣಿಪನಕರಕಮಲಸೋಂಕಲುಶಾಪವಿದುಬಳಿಕ ॥ ಪರಿಹರಿಪುದೆನೆ
ಮುನಿಯುವಚನದಿ। ಬರವಹಾರೈಸಿದೆನುಬಂದ್ಯೆ। ಕರುಣದಿಂವಗ್ನಿ
ಯನುಪರಿಹರಿಸೆಂದನುರಗಪತಿ ॥೧೨॥

ಟೀಕೆ:—ಇರಲಿರಲು-ಹೀಗೆಯೇ ಇರಲು (೧) ಕಾಲಾಂತರಕೆ-ಒಂದಾನೊಂದುಕಾಲದಲ್ಲಿ, ಭೂವರನು-ದೊರೆಯಾದ, ನಳನೃಪಂ- ನಳರಾಜನು, ಇಲ್ಲಿಗೆ-ಈಸ್ಥಳಕ್ಕೆ, ಐದುವ-ಬರುವನು, ಧರಣಿಪನ - ಅರಾಜನ, (೨) ಕರಕಮಲ-ಹಸ್ತಕಮಲವು, ಸೋಂಕಲು-ತಗುಲಲು, ಬಳಿಕ-ಅನಂತರದಲ್ಲಿ, ಇದುಶಾಪವು-ಈಶಾಪವು, ಪರಿಹರಿಪುದು - ಪರಿಹಾರವಾಗುವದು, ಎನೆ-ಎಂಬದಾಗಿ ಹೇಳಲು, ಮುನಿಯುವಚನದಿ-ಋಷಿಯುಮಾತಿನಂತೆ, ಬರವ-ನಿನ್ನಾಗಮನವನ್ನು, ಹಾರೈಸಿದೆನು-ಬಯಸಿದೆನು, ಬಂದ್ಯೆ-ಬಂದೆಯಲ್ಲವೆ, ಕರುಣದಿಂದೆ-ದಯೆಯಿಂದ, ಅಗ್ನಿಯನು-ಬೆಂಕಿಯನ್ನು, ಪರಿಹರಿಸು-ತಪ್ಪಿಸು, (ಎಂಬದಾಗಿ) ಉರಗಪತಿ- ಕಾರ್ಕೋಟಕನು, ಎಂದನು. ॥೧೨॥

ತಾತ್ಪರ್ಯ:—ಎಲೈ ಕಾರ್ಕೋಟಕನೇ, ಹೀಗೆಯೇ ಕೆಲವುಕಾಲವು ಕಳೆದತರುವಾಯ, ದೊರೆಯಾದ ನಳನು ಈವನಕ್ಕೆ ಬರುವನು ಅವನ ಹಸ್ತಸ್ಪರ್ಶವಾದಕೂಡಲೆ ನಿನಗೆ ಶಾಪವಿಮೋಚನೆಯಾಗಿ ಸಂಚಾರವುಂಟಾಗುವುದು ಎಂದು ಹೇಳಿದ್ದನು. (ನನಗೆ ಶಾಪವಿಮೋಚನೆಯು ನಿನ್ನಿಂದಾಗುತ್ತದೆಂದು ಹೇಳಿದ ಆ ಮುನಿಯುಮಾತು ಸುಳ್ಳಲ್ಲವಾದುದರಿಂದಲೂ, ಕಾಳ್ಕಿಚ್ಚಿನಲ್ಲಿ ನಾನು ಸಿಕ್ಕಿಕೊಂಡಿರುವುದರಿಂದ ಇಲ್ಲಿಂದ ತಪ್ಪಿಸಿಕೊಳ್ಳದಿದ್ದರೆ ಬದುಕುವುದು ಅಸಂಭವವಾದುದರಿಂದಲೂ, ನಾನು ತಪ್ಪಿಸಿಕೊಳ್ಳುವುದಕ್ಕಾಗಿ ಬೇರೆಕಡೆಗೆ ಹೋಗಬೇಕಾದುದಕ್ಕೆ

ಶಾಪವಿಮೋಚನೆಯಿಲ್ಲದೆ ಅವಕಾಶವಿಲ್ಲಮುದರಿಂದಲೂ, ಈಗ ನೀನು ಇಲ್ಲಿಗೆ ಬಂದೇ ಇರಬೇಕೆಂದು ಊಹಿಸಿ ನಿನ್ನ ಹೆಸರನ್ನು ಹಿಡಿದು ಕೂಗಿಕೊಂಡೆನಲ್ಲದೆ ನೀನು ಬಂದಿರುವುದನ್ನು ನಾನು ಕಾಣೆನು.) ಆ ಮಾತಿನಪ್ರಕಾರವಾಗಿ ನೀನು ಬಂದಿರುವಿಯಷ್ಟೆ? ದಯವಿಟ್ಟು ನನಗೆ ಅಗ್ನಿ ಬಾಧೆಯನ್ನು ಪರಿಹರಿಸು? ಎಂದು ಹೇಳಿ ಕೊಂಡನು ॥೧೨॥

ಟಿಪ್ಪಣಿ:—(೧) ಕಾಲದ ಅಂತರ-ಕಾಲಾಂತರ (ಷ. ತ) (೨)ಕಮಲದಂತಿರ್ಪಕರ-ಕರಕಮಲ (ಉ. ಉ. ಕ. ಸ) ॥೧೨॥

ಮೂ॥ ಕರುಣದಲಿನೃಪಭೀತಿಯುಂಬಿ। ಟ್ಟುರಗಪತಿಯನುತೆಗೆಯುತ
ನಲನ। ಪುರಿಯತಪ್ಪಿಸಿತಂದುಸರಸಿಯತಡಿಯೊಳುಪಚರಿಸೆ॥ಕರವಿ
ಡಿದುಧರಣಿಪನಕಚ್ಚಿದೊ।ಡುರವಣಿಸಿವಿಷವೇರಿನೃಪತಿಯ। ಪರಮ
ತೇಜದದೇಹಕೆಟ್ಟಿತುವಿಕೃತಿರೂಪಾಗಿ ॥೧೩॥

ಟೀಕೆ:—ನೃಪ-ದೊರೆಯು, ಕರುಣದಲಿ - ಕೃಪೆಯಿಂದ, ಭೀತಿಯಂ-ಭಯವನ್ನು, ಬಿಟ್ಟು, ಉರಗಪತಿಯನು- ಕಾರ್ಕೋಟಕನನ್ನು, ತೆಗೆಯುತೆ-ತೆಗೆದುಕೊಳ್ಳುತ್ತಾ, ಅನಲನ-ಅಗ್ನಿಯ, ಉರಿಯ - ಜ್ವಾಲೆಯನ್ನು, ತಪ್ಪಿಸಿ-ಬಿಡಿಸಿ, ತಂದು, ಸರಸಿಯ-ಸರೋವರದ, (೧) ತಡಿಯೊಳ್-ದಡದಲ್ಲಿ, ಉಪಚರಿಸೆ-ಶೈತ್ಯೋಪಚಾರಮಾಡಲು, ಉರವಣಿಸಿ-ರೇಗಿ, ಧರಣಿಪನ-ದೊರೆಯ, (೨) ಕರವಿಡಿದು-ಕೈಹಿಡಿದು, ಕಚ್ಚಿದೊಡೆ-ಕಚ್ಚಲು, ವಿಷವೇರಿ - ವಿಷವುವ್ಯಾಪಿಸಿ, ನೃಪತಿಯ - ದೊರೆಯ, (೩) ಪರಮತೇಜದ - ಬಹಳ ಕಾಂತಿಯುಕ್ತವಾದ, ದೇಹ - ದೇಹವು, ವಿಕೃತಿ ರೂಪಾಗಿ - ವಿಕಾರ ಸ್ವರೂಪವುಳ್ಳದ್ದಾಗಿ, ಕೆಟ್ಟಿತು - ಕೆಟ್ಟು ಹೋಯಿತು. ॥೧೩॥

ತಾತ್ಪರ್ಯ:—ಆಮಾತನ್ನು ಕೇಳಿದಕೂಡಲೆ ದೀನವತ್ಸಲನಾದ ನಳನು,ಕ್ರೂರಜಂತುವಾದರೂ ಹೆದರದೆ, ಆ ಕಾರ್ಕೋಟಕನನ್ನು ಹಿಡಿದು ತಂದು ಒಂದು ಸರೋವರದ ಬಳಿಯಲ್ಲಿ ಬಿಟ್ಟು ಶೈತ್ಯೋಪಚಾರದಿಂದ ಆಯಾಸವನ್ನು ಪರಿಹಾರಮಾಡುತ್ತಿರಲು, ಆ ಸರ್ಪವು ಅವನ ಕೈಯನ್ನು ಹಿಡಿದು ಕಚ್ಚಿತು, ವಿಷವು ದೇಹವನ್ನೆಲ್ಲಾ ವ್ಯಾಪಿಸಲು ಪ್ರಕಾಶಮಾನವಾದ ನಳನದೇಹವು ಕೆಟ್ಟು ವಿಕಾರವಾಯಿತು. ॥೧೩॥

ಟಿಪ್ಪಣಿ:—(೧) (ತ್ಸ)ತಟಿ (೨) ಕರವಂ ಪಿಡಿದು-ಕರವಿಡಿದು(ಕ್ರಿ. ಸ) ಪಕಾರಕ್ಕೆ ವಕಾರಾದೇಶವು ಬಂತು (೩) ಪರಮವಾದತೇಜ-ಪರಮ

ತೇಜ (ವಿ. ಪ್ರಾರ್ವ್ಯ. ಕ) ॥೧೩॥

ಮೂ॥ ಅಡ್ಡವೋರೆಯುಗಂಟುಮೂಗಿನ| ಜಡ್ಡುದೇಹದಗುಜ್ಜುಗೊರಲಿನ| ದೊಡ್ಡಕೈಕಾಲುಗಳವುದುರಿದರೋಮಮೀಸೆಗಳಾ॥ ದೊಡ್ಡಹೊಟ್ಟೆಯುಗೂನುಬೆನ್ನಿನ| ಗಿಡ್ಡುರೂಪಿನಹರಕುಗಡ್ಡದ| ಹೆಡ್ಡನಾದಕುರೂಪಿತನದಲಿನೃಪತಿವಿಷದಿಂದಂ ॥೧೪॥

ಟೀಕೆ:—ನೃಪತಿ–ದೊರೆಯು, (೧) ವಿಷದಿಂದಂ – ವಿಷದಿಂದ ಅಡ್ಡಮೊರೆಯು–ಅಡ್ಡಾಡ್ಡವಾದ ಮುಖವುಳ್ಳ, (೨) ಗಂಟುಮೂಗಿನ – ಗಂಟುಕಟ್ಟಿದಮೂಗುಳ್ಳ, ಜಡ್ಡುದೇಹದ–ಜಡ್ಡುಕಟ್ಟಿದ ದೇಹವುಳ್ಳ, (೩) ಗುಜ್ಜುಗೊರಲಿನ–ಕುಗ್ಗಿದಕೊರಲುಳ್ಳ, ದೊಡ್ಡಕೈಕಾಲುಗಳ– ಉದ್ದವಾದ ಕೈಕಾಲುಗಳುಳ್ಳ, ಉದುರಿದ, ರೋಮಮೀಸೆಗಳಾ–ಕೂದಲುಮತ್ತು ಮೀಸೆಗಳುಳ್ಳ, ದೊಡ್ಡಹೊಟ್ಟೆಯ, ಗೂನುಬೆನ್ನಿನ–ಬಗ್ಗಿದ ಬೆನ್ನುಳ್ಳ, ಗಿಡ್ಡುರೂಪಿನ–ಕುಳ್ಳಾದ ಆಕಾರವುಳ್ಳ, ಹರಕು ಗಡ್ಡದ– ಹರಿದುಹೋದ ಗಡ್ಡವುಳ್ಳ, ಕುರೂಪಿತನದಲಿ – ಕುರೂಪಿವೇಷದಿಂದ, ಹೆಡ್ಡನಾದ–ಮಂಕಾದನು. ॥೧೪॥

ತಾತ್ಪರ್ಯ:—ನಳನಿಗೆ ವಿಷವೇರಿದುದರಿಂದ ಮುಖವು ಕುಗ್ಗಿ ಅಗಲವು ಮಾತ್ರ ಹೆಚ್ಚಾಯಿತು, ಮೂಗು ಗಂಟಾಯಿತು, ಮೈಯೆಲ್ಲಾ ಜಡ್ಡುಗಟ್ಟಿದಂತಾಯ್ತು, ಕೊರಲು ಕುಸಿದುಹೋಯಿತು. ಕೈ ಕಾಲುಗಳು ಉದ್ದವಾದವು, ಮೈಯಕೂದಲೆಲ್ಲಾ ಉದುರಿಹೋಯಿತು, ಹೊಟ್ಟೆ ದಪ್ಪವಾಯಿತು, ಬೆನ್ನು ಬಗ್ಗಿ ಗೂನಾಯ್ತು, ಗಿಡ್ಡನಾಗಿ ವಿಕಾರಾಕಾರವನ್ನು ತಳೆದು ಮೂಢನಾದನು ॥೧೪॥

ಟಿಪ್ಪಣಿ:—(೧) (ದ್ಭ) ಬಿಸ, (೨) ಗಂಟಾದಮೂಗು – ಗಂಟುಮೂಗು (ವಿ. ಪ್ರಾರ್ವ್ಯ. ಕ) ಗಂಟು– (ತ್ಸ) ಗ್ರಂಥಿ (೩) ಗುಜ್ಜು–(ತ್ಸ) ಕುಬ್ಜ ॥೧೪॥

ಮೂ॥ ಮಾರನಾಕಾರದನೃಪಾಲಕ| ಕ್ರೂರರೂಪಾದನುಪುರಾಕೃತ| ಮಾರಲಾರಳವೆಂದುನುಡಿದನುತನ್ನ ಮನದೊಳಗೆ॥ ತೋರವಾಣಿಕವೆಂದುಪಿಡಿದರೆ| ಭೂರಿಕೆಂಡವಿದಾಯ್ತುಹರಹರ | ಕ್ರೂರಜಂತುವಿನೊಡನೆಸಖತನಫಲಿಸಿತೆನಗೆಂದ ॥೧೫॥

ಟೀಕೆ:—ಮಾರನ–ಮನ್ಮಥನ, ಆಕಾರದ–ರೂಪವುಳ್ಳ, ನೃಪಾಲಕ–ದೊರೆಯು, ಕ್ರೂರರೂಪಾದನು – ಭಯಂಕರಾಕಾರವುಳ್ಳವನಾದ

ನು, ತನ್ನ, ಮನದೊಳಗೆ - ಮನಸ್ಸಿನಲ್ಲಿ, ಪುರಾಕೃತ - ಪೂರ್ವದಲ್ಲಿ ಮಾಡಿದ ಕರ್ಮವನ್ನು, ಮೀರಲು-ದಾಟಲು, ಅರಳವು-ಯಾರಿಗೆಸಾಧ್ಯವು, ಎಂದು, ನುಡಿದನು-ಅಂದುಕೊಂಡನು, (೧) ತೋರವಾಣಿಕವೆಂದು-ದೊಡ್ಡದಾದ ರತ್ನವೆಂದು, ಪಿಡಿದರೆ-ಹಿಡಿದುಕೊಳ್ಳಲು, ಇದು, (೨) ಭೂರಿಕೆಂಡವು-ದೊಡ್ಡಬೆಂಕಿಯುಕೆಂಡವು, ಆಯ್ತು, ಹರಹರ-ದೇವರೇ! ತನಗೆ-ನನಗೆ, ಕ್ರೂರಜಂತುವಿನೊಡನೆ - ದುಷ್ಟ ಜಂತುವಿನಸಂಗಡ, ಸಖತನ - ಸ್ನೇಹವು, ಫಲಿಸಿತು - ಈ ರೀತಿಯಾಗಿ ಪರಿಣಮಿಸಿತು, ಎಂದ. ||೧೫||

ತಾತ್ಪರ್ಯ:—ಮನ್ಮಥನಂತೆ ಮನೋಹರವಾದ ರೂಪವುಳ್ಳ ನಳನು, ವಿಷದ ವ್ಯಾಪನೆಯಿಂದ ಭಯಂಕರನಾದ ಕುರೂಪಿಯಾದನು, ಜನ್ಮಾಂತರ ಕರ್ಮಫಲವನ್ನು ತಪ್ಪಿಸಿಕೊಳ್ಳಲು ಸಾಧ್ಯವಲ್ಲವೆಂದು ತನ್ನ ಮನಸ್ಸಿನಲ್ಲಿ ಭಾವಿಸಿ, ಆಹಾ! ಇದೊಂದಮೋಘವಾದ ರತ್ನವೆಂದು ತಿಳಿದು ಕೈಗೆ ತೆಗೆದುಕೊಂಡರೆ ದೊಡ್ಡಕೆಂಡವಾಗಿ ಕೈಯನ್ನು ಸುಟ್ಟಿತು. ದುಷ್ಟ ಜಂತುವಿನ ಸ್ನೇಹವು ತಕ್ಕ ಫಲವನ್ನು ಕೊಟ್ಟಿತು. ||೧೫||

ಟಿಪ್ಪಣಿ:—(೧) ತೋರಿತುಮಾಣಿಕವು-ತೋರಮಾಣಿಕವು (ವಿ. ಪೂರ್ವ.ಕ) ಮಾಣಿಕ, (ತ್ಸ) ಮಾಣಿಕ್ಯ (೨) ಭೂರಿಯಾದಕೆಂಡವು-ಭೂರಿಕೆಂಡವು (ವಿ. ಪೂರ್ವ. ಕ) ||೧೫||

ಮೂ|| ಮುನ್ನಮಾಡಿದಕರ್ಮಫಲವಿದು| ಬೆನ್ನಬಿಡುವುದೆವುರಗಪತಿಕೇ|
ಳಿನ್ನುನೋಯಲದೇಕೆತಾನೇಪಾಪಿಯಾದೆನಲಾ|| ಪನ್ನಗಾರಿಧ್ವಜ
ನಕೃಪೆತನ| ಗಿನ್ನುತಪ್ಪಿದಬಳಿಕಲೋಕದೊ| ಳಿನ್ನುಸೈರಿಸಲಾ
ರವಶವೆಂದೆನುತಮರುಗಿದನು ||೧೬||

ಟೀಕೆ:—ಉರಗಪತಿ-ಕಾರ್ಕೋಟಕನೇ, ಕೇಳು, ಇದು, ಮುನ್ನ-ಪೂರ್ವದಲ್ಲಿ, ಮಾಡಿದ, ಕರ್ಮಫಲವು-ದುಷ್ಕರ್ಮದಫಲವು, ಬೆನ್ನಬಿಡುವುದೆ-ಹಿಂದೆ ಬರದೆ ಇರುವುದೆ, ಇನ್ನು (೧) ನೋಯಲ್- ಸಂಕಟಪಡುವುದು, ಅದೇಕೆ-ಅದೇತಕ್ಕೆ? ತಾನೇ-ನಾನೇ, ಪಾಪಿಯಾದೆನಲಾ- ಪಾಪಿಷ್ಠನಾಗಿದ್ದೇನಲ್ಲವೇ, (೨) ಪನ್ನಗಾರಿಧ್ವಜನ-ವಿಷ್ಣುವಿನ, ಕೃಪೆ - ದಯೆಯು, ತನಗೆ-ನನಗೆ, ಇನ್ನು, ತಪ್ಪಿದಬಳಿಕ - ತಪ್ಪಿಹೋದಮೇಲೆ, ಲೋಕದೊಳ್-ಪ್ರಪಂಚದಲ್ಲಿ, ಇನ್ನು, ಸೈರಿಸಲ್-ತಡೆದುಕೊಳ್ಳಲು, ಆರವಶಂ-ಯಾರಿಗೆಸಾಧ್ಯವು, ಎಂದೆನುತ-ಎಂಬದಾಗಿ, ಮರುಗಿದನು-ವ್ಯಥೆ

ಪಟ್ಟನು. ||೧೬||

ತಾತ್ಪರ್ಯ:—ಎಲೈ ಕಾರ್ಕೋಟಕನೇ ! ನಾನು ಮಾಡಿದ ಪಾಪ ಕೃತ್ಯದ ಫಲವು ಈರೀತಿಯಾಗಿತ್ತು, ಇನ್ನು ದುಃಖಪಡುವುದೇತಕ್ಕೆ! ನಾನು ಪಾಪಿಯಾಗಿದ್ದೇನೆ, ದೈವಕೃಪೆಯು ತಪ್ಪಿದಮೇಲೆ ಲೋಕದಲ್ಲಿ ಸರಿಯಾಗಿ ಇರುವುದು ಹೇಗೆ ಸಾಧ್ಯವಾದೀತು ! ಎಂದು ಸಂಕಟ ಪಟ್ಟನು. ||೧೬||

ಟಿಪ್ಪಣಿ:—(೧)ನೋ+ಅಲ್-ನೋಯಲ್(ಯಕಾರಾಗಮ) (೨) ಪತ್-ಕಾಲಿನಿಂದ, ನಗ-ನಡೆಯದಿಗತಕ್ಕದ್ದು (ಹಾವು) ಪನ್ನಗಕ್ಕೆ,ಅರಿ-ಶತ್ರು, (ಗರುಡನು) ಗರುಡನೇ ಧ್ವಜವಾಗಿ ವುಳ್ಳವನು (ವಿಷ್ಣು) ಅವ, ||೧೬||

ಮೂ|| ಏಕೆನೃಪತಿವೃಥಾಮನೋವ್ಯಥೆ | ಕಾಕುಬಳಸಲುಬೇಡನೀನ
ವಿ| ವೇಕಿಯೇಸಾಕಿನ್ನು ನಿನಗುಪಕಾರವಂಜದಿರು|| ಲೋಕನಿನ್ನ
ನುಕಾಣದಂತಿರ| ಬೇಕೆನುತಲೇರಿಸಿದೆಗರಳವ | ನೇಕವುಪಾರಂ
ಗಳಹವಿದರಿಂದನಿನಗೆಂದ ||೧೭||

ಟೀಕೆ:—ನೃಪತಿ-ದೊರೆಯೇ, ವೃಥಾ-ವ್ಯರ್ಥವಾಗಿ, ಮನೋವ್ಯಥೆ-ಮನಸ್ಸಂಕಟವು, ಏಕೆ-ಯಾತಕ್ಕೆ, ಕಾಕುಬಳಸಲು-ದೈನ್ಯವೃತ್ತಿಯು, ಬೇಡ, ನೀಂ-ನೀನು, (೧) ಅವಿವೇಕಿಯೇ-ಬುದ್ಧಿಹೀನನೇ! ನಿನಗೆ, ಇನ್ನು, ಉಪಕಾರವು-ನನ್ನಿಂದಾದಉಪಕಾರವು, ಸಾಕು, ಅಂಜದಿರು-ಹೆದರಬೇಡ, ಲೋಕ-ಜನವು, ನಿನ್ನನು-ನಿನ್ನನ್ನು, ಕಾಣದಂತೆ-ಗುರುತು ಹಿಡಿಯದಹಾಗೆ, ಇರಬೇಕೆನುತಲಿ-ಇರಬೇಕೆಂದು, ಗರಳವ-ವಿಷವನ್ನು, ಏರಿಸಿದೆ-ಹತ್ತಿಸಿದೆನು, ನಿನಗೆ, ಇದರಿಂದ-ಈಕರೂಪದಿಂದ, (೨) ಅನೇಕ ವುಪಕಾರಂಗಳ್-ಬಹುಪ್ರಯೋಜನಗಳು, ಅಹವು-ಆಗುವವು, ಎಂದ. ||೧೭||

ತಾತ್ಪರ್ಯ:—ಆಮಾತನ್ನು ಕೇಳಿ ಕಾರ್ಕೋಟಕನು-ಅಯ್ಯಾದೊರೆಯೇ ! ನೀನು ಅವಿವೇಕಿಗಳಂತೆ ಹೀಗೆ ವ್ಯರ್ಥವಾಗಿ ದುಃಖಪಡಬಹುದೇ ! ನಾನು ನಿನಗೆ ವಿಷವನ್ನೇರಿಸಿ ವಿಕಾರರೂಪವನ್ನುಂಟುಮಾಡಿದುದರಿಂದ ಲೋಕದಲ್ಲಿ ನಿನ್ನನ್ನು ಯಾರೂ ನಳನೆಂದು ತಿಳಿಯಲಾರರು, ಇದಕ್ಕಿಂತಲೂ ನನ್ನಿಂದ ಆಗಬೇಕಾದ ದೊಡ್ಡ ಉಪಕಾರವು ಮತ್ತೇನಿರುವುದು. ಇದರಿಂದ ನಿನಗೆ ಮುಂದೆ ಬಹು ಅನುಕೂಲವಾ

ಗುವುದು. ||೧೭||

ಟಿಪ್ಪಣಿ:—(೧) ವಿವೇಕವಿಲ್ಲದವನು- ಅವಿವೇಕಿ (ನಞ್. ಬ. ವ್ರೀ) (೨) ಅನೇಕವಾದ ಉಪಕಾರಂಗಳ್ - ಅನೇಕವುಪಕಾರಂಗಳ್, (ವಿ. ಪೂರ್ವ. ಕ.) ||೧೭||

ಮೂ|| ಗರಳಮಯಸರ್ವಾಂಗದಲಿಸಂ | ಚರಿಸುತಿಹಪರಿಯಂತರಿಪು
ಗಳ | ಶರಜಲಾಗ್ನಿ ಭುಜಂಗರೋಗಾದಿಗಳದಭಯವಿಲ್ಲ || ನಿರತವಿ
ದುವಜ್ರಾಂಗಜೋಡಿನ್ನರಸಚಿಂತಿಸಬೇಡಕಾರ್ಯದ| ಹೊರೆಗೆತಾನಿ
ರೆಬೇರೆಭಯಬೇಡಿನ್ನು ನಿನಗೆಂದ ||೧೮||

ಟೀಕೆ:—ಗರಳಮಯ-ವಿಷಯುಕ್ತವಾದ, ಸರ್ವಾಂಗದಲಿ- ಸಮಸ್ತ ಅಂಗಗಳಿಂದ ಕೂಡಿ, ಸಂಚರಿಸುತಿಹ-ಸಂಚಾರಮಾಡುತ್ತಿರುವ, ಪರಿಯಂತ-ವರಿಗೂ, ರಿಪುಗಳ-ಶತ್ರುಗಳ, (೧) ಶರಜಲಾಗ್ನಿ ಭುಜಂಗರೋಗಾದಿಗಳ-ಬಾಣ, ನೀರು, ಬೆಂಕಿ, ಸರ್ಪ, ರೋಗ, ಮೊದಲಾದವುಗಳ, ಭಯವಿಲ್ಲ-ಭೀತಿಯುಂಟಾಗುವುದಿಲ್ಲ, ಇದು, ತಾನಿರೆ - ಇರಲು, ಕಾರ್ಯದಹೊರೆಗೆ-ಕಾರ್ಯಭಾರಕ್ಕೆ, ನಿರತಂ-ಯಾವಾಗಲೂ, (೨) ವಜ್ರಾಂಗಜೋಡು-ವಜ್ರಕವಚವು, ಅರಸ-ದೊರೆಯೇ, ಇನ್ನು, ಚಿಂತಿಸಬೇಡ-ಆಲೋಚಿಸಬೇಡ, ಇನ್ನು, ನಿನಗೆ ಬೇರೆ-ಪ್ರಕಾರಾಂತವಾದ, ಭಯವು-ಅಂಜಿಕೆಯು, ಬೇಡ, ಎಂದ. ||೧೮||

ತಾತ್ಪರ್ಯ:—ನೀನು ವಿಷಮಯವಾದ ಈ ದೇಹದೊಡನೆ ಎಲ್ಲಿ ಸಂಚರಿಸುತ್ತಿದ್ದರೂ, ಶತ್ರುಭಯವ್ರೊ, ಶಸ್ತ್ರಭಯವ್ರೊ, ನೀರಿನಭಯವ್ರೊ, ಅಗ್ನಿಭಯವ್ರೊ, ರೋಗಭಯವ್ರೊ, ಇರಲಾರದು, ನಿನ್ನ ದೇಹಕ್ಕೆ ಈ ವಿಷವ್ಯಾಪ್ತಿಯು ಸರ್ವಕಾರ್ಯಗಳಿಗೂ ವಜ್ರಕವಚದಂತಿರುವುದು, ಇನ್ನು ಚಿಂತಿಸಬೇಡ, ಇನ್ನೇನಾಗುವುದೋ ಎಂದು ಹೆದರದೆ ಧೈರ್ಯದಿಂದಿರು. ||೧೮||

ಟಿಪ್ಪಣಿ:—(೧) ಜಲ+ಅಗ್ನಿ-ಜಲಾಗ್ನಿ, ರೋಗ+ಆದಿ-ರೋಗಾದಿ (ಸ. ದೀ, ಸಂ) ಭುಜಂ-ಭುಜದಿಂದ, ಗ-ಸಂಚರಿಸುವುದು (ಸರ್ಪ) (೨) ವಜ್ರದ ಅಂಗಜೋಡು (ಷ. ತ) ||೧೮||

ಮೂ|| ಜನಪಕೇಳೈಧರೆಗೆಋತುಪ| ರ್ಣನುಮಹಾರಾಜೇಂದ್ರಗುಣನಿ
ಧಿ| ಜಿನಕುಲಾಂಬುಧಿಚಂದ್ರನಾತನಪುರವಯೋಧ್ಯವದು|| ನಿನಗೆ
ಬಸುದಕ್ಷದಹೃದಯವಾ | ತನಲಿನೀನವಗಶ್ವಹೃದಯವ | ನನು

ಗೊಳಿಸುಸಾಕಿನ್ನು ಚಿಂತಿಸಬೇಡಹೋಗೆಂದ ||೧೯||

ಟೀಕೆ—ಜನಪ-ದೊರೆಯೇ, ಕೇಳ್ಳೆ-ಕೇಳುಯ್ಯಾ, ಋತುಪರ್ಣನು-ಋತುಪರ್ಣನೆಂಬುವನು,ಧರೆಗೆ-ಭೂಮಿಯಲ್ಲಿ, ಮಹಾರಾಜೇಂದ್ರ-ದೊಡ್ಡರಾಜನು, (೧) ಗುಣನಿಧಿ-ಸದ್ಗುಣಗಳಿಗಾಶ್ರಯನು, ಇನಕುಲ-ಸೂರ್ಯವಂಶವೆಂಬ, (೨) ಅಂಬುಧಿ-ಸಮುದ್ರಕ್ಕೆ, ಚಂದ್ರನು-ಚಂದ್ರನಂತಿರುವನು, ಆತನ, ಪುರವು-ರಾಜಧಾನಿಯು, ಅದು, ಅಯೋಧ್ಯವು - ಅಯೋಧ್ಯಾಪಟ್ಟಣವು, ನಿನಗೆ, ಆತನಲಿ-ಅವನಿಂದ, (೩) ಅಕ್ಷದಹೃದಯವು-ಪಗಡೆಯಾಟವು,ಬಹುದು-ಬರುವದು,ನೀಂ-ನೀನು,ಅವಗೆ-ಅವನಿಗೆ, ಅಶ್ವಹೃದಯವಂ-ಅಶ್ವಶಾಸ್ತ್ರವನ್ನು,ಅನುಗೊಳಿಸು-ಹೇಳಿಕೊಡು, ಸಾಕು, ಇನ್ನು,ಚಿಂತಿಸಬೇಡ-ಆಲೋಚಿಸಬೇಡ, ಹೋಗು, ಎಂದ. ||೧೯||

ತಾತ್ಪರ್ಯ:--ಎಲೈ ರಾಜೇಂದ್ರನೇ ಈ ಲೋಕದಲ್ಲಿ ವಿಖ್ಯಾತನಾಗಿಯೂ, ಚಂದ್ರವಂಶೋತ್ಪನ್ನನಾಗಿಯೂ, ಗುಣಶಾಲಿಯಾಗಿಯೂ, ಇರುವ ಋತುಪರ್ಣನೆಂಬ ದೊರೆಯು ಅಯೋಧ್ಯಾಪಟ್ಟಣದಲ್ಲಿ ಆಳುತ್ತಿರುವನು, ನೀನು ಅವನಬಳಿಗೆ ಹೋದರೆ ಅವನು ನಿನಗೆ ಪಗಡೆಯಾಟವನ್ನು ಚೆನ್ನಾಗಿ ಕಲಿಸುವನು, ನೀನು ಅವನಿಗೆ ಅಶ್ವಶಿಕ್ಷೆಯನ್ನು ಕಲಿಸು, ಇದರಿಂದ ನಿನಗೆ ಸೌಖ್ಯವಾಗುವದು ಚಿಂತಿಸಬೇಡ ಹೋಗು||೧೯||

ಟಿಪ್ಪಣಿ:—(೧) ಗುಣಗಳನಿಧಿ-ಗುಣನಿಧಿ (ಷ. ತ) (೨) ಇನನ-ಕುಲ, ಇನಕುಲ, (ಷ. ತ) ಇನಕುಲವೇ-ಅಂಬುಧಿ, ಇನಾಕುಲಾಂಬುಧಿ (ಅವ. ಪೂರ್ವ. ಕ) ಅಂಬುಧಿಯಚಂದ್ರನು-ಅಂಬುಧಿ ಚಂದ್ರನು, (ಷ. ತ) ಅಂಬು-ನೀರು, ಧಿ-ನಿಲ್ಲುವಸ್ಥಳ(ಅವ) (೩) ಅಕ್ಷ-ಇಂದ್ರಿಯ ಬಂಡಿಯಅಚ್ಚು, ಪಗಡೆ (ನಾನಾ) ||೧೯||

ಮೂ|| ಪ್ರೌಢವಿಪನವ್ರೋಲೈಸುವಾಘೆಯ| ಪಿಡಿದುಬಾಹುಕನೆಂಬನಾ
ಮದಿ| ನಡೆಸುರಥವನುಹೀನವೃತ್ತಿಯಿದಲ್ಲನಿನಗಿನ್ನು|| ಬಿಡದುಮು
ನ್ನಿನರೂಪುಬೇಕಾ| ದೊಡೆನೆನೆವುದಾಪನ್ನಗಳಹು| ಟ್ಟಡವನೀವು
ವುಧರಿಸಲಡಗುವದೀಕುರೂಪಿತನ ||೨೦||

ಟೀಕೆ:—ಪ್ರೌಢವಿಪನಂ-ಋತುಪರ್ಣನನ್ನು,ಓಲೈಸು-ಸೇವೆಮಾಡು, ವಾಘೆಯ-ಕಡಿವಾಣವನ್ನು,ಪಿಡಿದು-ಹಿಡಿದು,ಬಾಹುಕನೆಂಬ, ನಾಮದಿ-ಹೆಸರಿನಿಂದ, ರಥವನು-ತೇರನ್ನು, ನಡೆಸು, ಇದು-ಈ ಸಾರಥಿತ್ವವು, ಹೀನವೃತ್ತಿಯಲ್ಲ-ನೀಚಸೇವನವಲ್ಲ, ಇನ್ನು-ಮುಂದೆ, ಮುನ್ನಿನ - ಪೂರ್ವ

ದ, (೧) ರೂಪು-ಸುಂದರವಾದ ಆಕಾರವು, ಬಿಡದು-ತಪ್ಪುವುದಿಲ್ಲ, ಬೇಕಾದೊಡೆ-ಅವಶ್ಯಕವಾದರೆ, ನೆನೆವುದು-ಸ್ಮರಿಸುವುದು, (೨) ಆಪಕ್ಷಿಗಳು-ಆ ಎರಡು ಪಾರಿವಾಳಗಳು, ಹಚ್ಚಡವಂ - ಹೊದ್ದಿದ್ದಬಟ್ಟೆಯನ್ನು, ಈವುವು-ಕೊಡುವುವು, ಧರಿಸಲ್-ಹೊದ್ದುಕೊಂಡರೆ, ಈ ಕುರೂಪಿತನ-ಈ ಕೆಟ್ಟಆಕಾರವು, ಅಡಗುವುದು ಹೋಗುವುದು. ||೨೦||

ತಾತ್ಪರ್ಯ:—ಅಯೋಧ್ಯೆಯಲ್ಲಿ ಋತುಪರ್ಣನ ಸೇವಕನಾಗಿನಿಂತು ಅವನ ಕುದುರೆಯ ಲಗಾಮನ್ನು ಹಿಡಿದು, ಬಾಹುಕನೆಂದು ಹೆಸರಿಟ್ಟುಕೊಂಡು ಅವನ ಬಂಡಿಯನ್ನು ನಡೆಯಿಸುತ್ತಾ ಇರು. ನಿನಗೆ ಈಸಾರಥ್ಯದಿಂದ ಅವಮಾನವಿಲ್ಲ. ನಿನಗೆ ಪೂರ್ವದಲ್ಲಿದ್ದ ತೇಜೋಮಯವಾದ ದೇಹವೂ ತಪ್ಪುವುದಿಲ್ಲ. ನಿನ್ನ ಬಟ್ಟೆಯನ್ನು ಕಾಡಿನಲ್ಲಿ ಎತ್ತಿಕೊಂಡು ಹೋಗಿರುವೆರಡು ಪಾರಿವಾಗಳನ್ನು ನೆನೆದರೆ ಅವು ನಿನ್ನ ಬಟ್ಟೆಯನ್ನು ತಂದು ಕೊಡುವುವು. ಅದನ್ನು ಧರಿಸಿದಕೂಡಲೆ ನಿನಗೆ ಪೂರ್ವದ ಸೌಂದರ್ಯವು ಲಭಿಸುವದು. ||೨೦||

ಟಿಪ್ಪಣಿ:—(೧) (ತ್ಸ) ರೂಪ (೨) ಅವುಪಕ್ಷಿಗಳು-ಆಪಕ್ಷಿಗಳು, (ಗಮಕ) ||೨೦||

ಮೂ|| ನಿನ್ನ ಹವಣೇ‌ಪೂರ್ವದಲಿಭಿ|ಕ್ಷಾನ್ನವನುಬೇಡಿದನುಪಶುಪತಿ|ಪ
ನ್ನಗಾರಿಧ್ವಜನುಕಾಯ್ದನುಪಶುಗಳಡವಿಯಲಿ || ಉನ್ನತೈಶ್ವರ್ಯ
ಪ್ರದನುಶತ| ಮನ್ಯುಬನದಲಿನಲಿಯನೇಸಾ|ಕಿನ್ನು ನೋಯದಿರಿದ
ಕೆನೀಹೋಗೆಂದನುರಗಪತಿ ||೨೧||

ಟೀಕೆ:—ಪೂರ್ವದಲಿ-ಹಿಂದೆ, ಪಶುಪತಿ-ಶಿವನು, ಭಿಕ್ಷಾನ್ನವನು, ಬೇಡಿದನು-ಯಾಚಿಸಿದನು, ಪನ್ನಗಾರಿಧ್ವಜನು-ವಿಷ್ಣುವು, ಅಡವಿಯಲಿ-ಕಾಡಿನಲ್ಲಿ, ಪಶುಗಳ-ದನಗಳನ್ನು, ಕಾಯ್ದನು,(೧) ಶತಮನ್ಯು-ಇಂದ್ರನು, (೨) ಉನ್ನತೈಶ್ವರ್ಯಪ್ರದನು-ಬಹಳಐಶ್ವರ್ಯಶಾಲಿಯಾದರೂ, ಬನದಲಿ-ಕಾಡಿನಲ್ಲಿ, (ವಾಸಿಸುತ್ತಾ) ನಲಿಯನೇ- ಸಂತೋಷಪಡುತ್ತಿರಲಿಲ್ಲವೇ ! ನಿನ್ನ, ಹವಣೇಂ-ಪಾಡೆಷ್ಟರದು, ಸಾಕು, ಇನ್ನು, ಇದಕ್ಕೆ-ಈ ವಿಕಾರಕ್ಕೆ, ಹೆದರದಿರ್-ಭಯಪಡಬೇಡ, (ಎಂಬದಾಗಿ) ಉರಗಪತಿ ಸರ್ಪರಾಜನು, ಎಂದನು. ||೨೧||

ತಾತ್ಪರ್ಯ:—ಹಿಂದೆ ವಿಧಿವಶದಿಂದ ಈಶ್ವರನು ಭಿಕ್ಷವನ್ನು ಬೇಡಲಿಲ್ಲವೇ ! ವಿಷ್ಣುವು ಗೋಪಾಲಕನಾಗಿರಲಿಲ್ಲವೇ ! ಅಷ್ಟೈಶ್ವರ್ಯವುಳ್ಳ

ಇಂದ್ರನೂ ಸಹ, ರಾಕ್ಷಸರಿಂದ ರಾಜ್ಯಭ್ರಷ್ಟನಾಗಿ ಕಾಡಿನಲ್ಲಿ ಅಲೆಯು ತ್ತಿರಲಿಲ್ಲವೇ ! ಇಂತಹ ದೇವತಾಶ್ರೇಷ್ಠರೂ ದುರವಸ್ಥೆಯನ್ನು ಹೊಂದಿ ಭಂಗಪಟ್ಟಿರುವಲ್ಲಿ ನಿನ್ನ ಮಾತೇತರದು ! ಬಿಡು ಹೆದರಬೇಡ ಧೈರ್ಯವಾಗಿರು. ‖೨೧‖

ಟಿಪ್ಪಣಿ:—(೧) ಶತ-ನೂರು, ಮನ್ಯು-ಯಜ್ಞವನ್ನು ಮಾಡಿದವನು. (ಅವ) (೨) ಉನ್ನತ+ಐಶ್ವರ್ಯ-ಉನ್ನತೈಶ್ವರ್ಯ, (ವೃದ್ಧಿಸಂಧಿ) (೩) ಹವಣ್ ಎಂಬುದಕ್ಕೆ (ತ್ಸ) ಪ್ರಮಾಣ. ‖ ೨೧‖

ಮೂ‖ ಪರಮಸತ್ಯವ್ರತನೆಕೇಳ್ಪು। ಷ್ಕರನಗೆಲಿದುನ್ನತದರಾಜ್ಯದ। ಸಿ
 ರಿಸಹಿತಸಾಮ್ರಾಜ್ಯವಾಳುವೆನಿನ್ನಸತಿಸಹಿತ ‖ ವರವನಿತ್ತೆನುನಿ
 ನಗೆಯೆಂದುಪ। ಚರಿಸಿಕಾರ್ಕೋಟಕನುನಳನೃಪ। ಗರುಹುತಾಕ್ಷ
 ಣಮಾಯುವಾದನುರಾಯಕೇಳೆಂದ।.೨೨‖

ಟೀಕೆ:—ಪರಮಸತ್ಯವ್ರತನೆ-ಬಹಳಸತ್ಯಸಂಧನಾದನಳನೇ, ಕೇಳ್-ಕೇಳು, ಪುಷ್ಕರನ-ಪುಷ್ಕರನನ್ನು, ಗೆಲಿದು-ಗೆದ್ದು, ಉನ್ನತದ-ಉತ್ಕೃಷ್ಟವಾದ, ರಾಜ್ಯದ-ದೇಶದ, ಸಿರಿಸಹಿತ-ಸಂಪತ್ತಿನೊಡನೆ, ನಿನ್ನ, ಸತಿಸಹಿತ-ಹೆಂಡತಿಯೊಡನೆ (೧) ಸಾಮ್ರಾಜ್ಯವಾಳುವೆ- ಚಕ್ರವರ್ತಿತ್ವವನ್ನು ಅನುಭವಿಸುತ್ತೀಯೆ, ನಿನಗೆ, ವರವಂ-ವರವನ್ನು, ಇತ್ತೆನು--ಕೊಟ್ಟಿದ್ದೇನೆ, ಎಂದು. ಕಾರ್ಕೋಟಕನು, ನಳನೃಪಗೆ-ಗೆಳರಾಜನಿಗೆ, ಉಪಚರಿಸಿ-ಉಪಚಾರಮಾಡಿ, ಅರುಹುತ-ತಿಳಿಸುತ್ತಾ, (೨) ಆಕ್ಷಣ-ಕೂಡಲೆ, ಮಾಯುವಾದನು-ಅದೃಶ್ಯನಾದನು, ರಾಯ - ದೊರೆಯೇ, ಕೇಳು, ಎಂದ. ‖೨೨‖

ತಾತ್ಪರ್ಯ:—ಎಲೈ ಸತ್ಯವ್ರತನಾದ ನಳನೇ, ನಿನ್ನ ಶತ್ರುವಾದ ಪುಷ್ಕರನನ್ನು ಪುನದ್ಯೂ೯ತದಲ್ಲಿಗೆದ್ದು, ಸಕಲೈಶ್ವರ್ಯದೊಡನೆ ನಿನ್ನ ರಾಜ್ಯದಲ್ಲಿ ನೀನು ಚಕ್ರವರ್ತಿಯ ಪದವಿಯನ್ನು ಪಡೆದು ಸುಖವಾಗಿ ನಿನ್ನ ಪತ್ನಿಯೊಡನೆ ರಾಜ್ಯಭಾರಮಾಡುವಿ, ನಾನು ನಿನಗೆ ವರವನ್ನು ಕೊಟ್ಟಿದ್ದೇನೆ, ಎಂದು ನಳನಿಗೆ ಉಪಚಾರೋಕ್ತಿಗಳನ್ನು ಹೇಳುತ್ತಾ ಹಾಗೆಯೇ ಅಂತರ್ಧಾನವನ್ನು ಹೊಂದಿದನು. ‖೨೨‖

ಟಿಪ್ಪಣಿ: —(೧) ಸಾಮ್ರಾಜ್ಯಮಂ ಆಳುವೆ-ಸಾಮ್ರಾಜ್ಯಮಾಳುವೆ (ಕ್ರಿ. ಸ) (೨) ಆಸುಕ್ಷಣ-ಆಕ್ಷಣ (ಗಮಕ) ಕ್ಷಣಕ್ಕೆ (ದ್ಭ) ಚಣ,ಕ್ಷಣ-೩೦ ಕಲೆ, ತಾಂಡವ್ರೋತ್ಸವ, ಅವಧಾನ (ನಾನಾ) ‖೨೨‖

ಮೂ॥ ಬಳಿಕಚಿಂತೆಯನಾಂತುಮನದಲಿ| ನಳನೃಪತಿಕಾನನದಿಬರುತಿ
ರೆ|ಮರೆದುಮಲಗಿದದುಷ್ಟಮೃಗಗಳಕಂಡುನಸುನಗುತ॥ ಹಲವು
ಗಿರಿಗುಹೆಗಳನುಕಾಣುತ| ಕಳಿದುಮುಂದಣಜನಪದಂಗಳ | ಬಳಿ
ವಿಡಿದುನಡೆತಂದನಲಸದೆಹಲವುಯೋಜನವ ॥೨೩॥

ಟೀಕೆ:—ಬಳಿಕ-ಅನಂತರದಲ್ಲಿ,ನಳನೃಪತಿ, ಚಿಂತೆಯಂ-ಆಲೋಚನೆಯನ್ನು, ಮನದಲಿ-ಮನಸ್ಸಿನಲ್ಲಿ, ಆಂತು-ಹೊಂದಿ, ಕಾನನದಿ- ಅರಣ್ಯದಲ್ಲಿ, ಬರುತಿರೆ-ಬರುತ್ತಿರಲು, ಮರೆದು-ಮರೆನಂತೆ, ಮಲಗಿದ- ಮಲಗಿದ್ದ, (೧) ದುಷ್ಟಮೃಗಗಳ-ಕ್ರೂರಜಂತುಗಳನ್ನು, ಕಂಡು- ನೋಡಿ ನಸುನಗುತ-ಮುಗುಳ್ನಗೆನಕ್ಕು, ಹಲವು-ಅನೇಕವಾದ, ಗಿರಿ ಗುಹೆಗಳನು-ಬೆಟ್ಟಗವಿಗಳನ್ನು, ಕಾಣುತ-ನೋಡುತ್ತಾ, ಕಳಿದು-ದಾಟಿ, ಮುಂದಣ-ಮುಂದೆಕಾಣುವ, (೨) ಜನಪದಂಗಳ-ದೇಶಗಳ, (೩) ಬಳಿವಿಡಿದು-ಸಮೀಪವನ್ನು ಕುರಿತು, (೪) ಹಲವುಯೋಜನವ-ಅನೇಕಗಾವುದಗಳನ್ನು, ಅಲಸದೆ-ಸಾವಕಾಶಮಾಡದೆ, ನಡೆತಂದನು-ಬಂದನು. ॥೨೩॥

ತಾತ್ಪರ್ಯ:—ಆಮೇಲೆನಳನುಮನದೊಳ್ಚಿಂತಿಸುತ್ತಾ ಬರುತ್ತಿರಲು ಆ ಕಾಡಿನಲ್ಲಿದ್ದ ಹುಲಿ ಕರಡಿ ಮೊದಲಾದ ದುಷ್ಟಮೃಗಗಳು ಮರೆತಂತೆ ಮಲಗಿ ಅವನಿಗೆ ಯಾವಬಾಧೆಯನ್ನೂ ಉಂಟುಮಾಡದೆ ಇದ್ದುದನ್ನು ನೋಡಿ ಕಾರ್ಕೋಟಕನ ವಿಷದ ಮಹಿಮೆಯೆಂದು ನಗುತ್ತಾ, ಅನೇಕಬೆಟ್ಟಗುಡ್ಡಗಳನ್ನು ಕಳೆದು ಮುಂದೆ ಕಾಣಬರುವ ದೇಶವನ್ನು ಪ್ರವೇಶಿಸಬೇಕೆಂದು ತಡಮಾಡದೆ ಅನೇಕ ಗಾವುದಗಳ ದೂರವನ್ನು ಪ್ರಯಾಣಮಾಡಿದನು. ॥೨೩॥

ಟಿಪ್ಪಣಿ:—(೧) ದುಷ್ಟಗಳಾದ ಮೃಗಗಳು- ದುಷ್ಟಮೃಗಗಳು, (ವಿ. ಪೂರ್ವ. ಕ) (೨) ಜನ-ಜನಗಳಿರುವ, ಪದಂಗಳ್ - ಸ್ಥಾನಗಳು, (ದೇಶ) ಅವ, (೩) ಬಳಿಯಂ ಪಿಡಿದು-ಬಳಿವಿಡಿದು, (ಕ್ರಿ. ಸ) ಪಕಾರಕ್ಕೆ ವಕಾರಾದೇಶಬಂತು (೪) ಹಲವಾದಯೋಜನಗಳು- ಹಲವುಯೋಜನ (ವಿ. ಪೂರ್ವ. ಕ) ॥೨೩॥

ಮೂ॥ ಉಪವನವಿಗಳನನತಟಾಕವ| ವರಕುಸುಮಮಲ್ಲಿಗೆಯಬನಗಳ|
ಪುರವಪ್ರಾಂತದೊಳೆಸೆವಕೆಂದಾವರೆಯಕೊಳಗಳನು ॥ ಉರುತರ
ಪಮಂಟಪಗಳಿಂದುರೆ| ಮೆರೆವರಾಜ್ಯವಕಳಿದುಮುಂದಕೆ | ಬರುತ
ಯೋಧ್ಯಾಪುರವಕಂಡನುನೃಪತಿಕೇಳೆಂದ ॥೨೪॥

ಟೀಕೆ:—ಹರಿವ-ಪ್ರವಹಿಸುತ್ತಿರುವ, ನದಿಗಳ - ಹೊಳೆಗಳನ್ನು, ವನತಟಾಕವ-ತೋಟ ಮತ್ತು ಕೆರೆಗಳನ್ನು, ವರಕುಸುಮಮಲ್ಲಿಗೆಯ-ಉತ್ತಮವಾದ ಮಲ್ಲಿಗೆ ಹೂಗಳು ಬಿಡುತ್ತಿರುವ, ಬನಗಳ- ತೋಟಗಳನ್ನು, ಪುರದ-ಪಟ್ಟಣದ, ಪ್ರಾಂತದೊಳ್-ಸಮೀಪದಲ್ಲಿ, ಎಸೆವ-ಪ್ರಕಾಶಿಸುವ, (೧) ಕೆಂದಾವರೆಯ-ಕೆಂಪುಕಮಲಗಳುಳ್ಳ, ಕೊಳಗಳನು- ಕೊಳಗಳನ್ನು, ಉರುತರದ-ಹೆಚ್ಚಾದ, ಮಂಟಪಗಳಿಂದ, ಉರೆ-ಚೆನ್ನಾಗಿ, ಮೆರೆವ-ಪ್ರಕಾಶಿಸುವ, ರಾಜ್ಯವ-ದೇಶಗಳನ್ನು, ಕಳೆದು-ದಾಟಿ, ಮುಂದಕೆ-ಮುಂದಕ್ಕೆ, ಬರುತ-ಬರುತ್ತಾ, (೨) ಅಯೋಧ್ಯಾಪುರವ, ಕಂಡನು, ನೃಪತಿ-ದೊರೆಯೇ, ಕೇಳು, ಎಂದ. ॥೨೪॥

ತಾತ್ಪರ್ಯ:—ದಾರಿಯಲ್ಲಿ ಅನೇಕ ದೊಡ್ಡನದಿಗಳನ್ನೂ, ಕೆರೆ ತೊರೆಗಳನ್ನು, ತೋಟಗಳನ್ನು, ಪುರದ ಸಮೀಪದ ಕಮಲ ಸರೋವರಗಳನ್ನು, ದೊಡ್ಡ ದೊಡ್ಡ ಮಂಟಪಗಳಿಂದ ಹೊಳೆಯುತ್ತಿರುವ, ದೇಶಭಾಗಗಳನ್ನು ದಾಟಿ ಬರುತ್ತಾ ಅಯೋಧ್ಯಾಪಟ್ಟಣವನ್ನು ಕಂಡನು. ॥೨೪॥

ಟಿಪ್ಪಣಿ:—(೧) ಕೆಚ್ಚನೆ-ತಾವರೆ, ಕಂದಾವರೆ(ವಿ. ಪೂರ್ವ. ಕ) ಕೆಚ್ಚನೆ, ಎಂಬ ಗುಣವಾಚಕಕ್ಕೆ ಸಮಾಸದಲ್ಲಿ, ಕೆಂ, ಎಂದಾದೇಶವು, ತಕಾರಕ್ಕೆ ದಕಾರಾದೇಶ ಬಂತು, (೨) ಅಯೋಧ್ಯಾ ಎಂಬಪುರವು - ಅಯೋಧ್ಯಾಪುರವು(ಸಂ ಪೂರ್ವ. ಕ) ॥೨೪॥

ಮೂ॥ ಧಗಧಗಿಪಕೋಟಾವಳಿಯಹೊಗ। ರೊಗುವಹೇಮದಕೊತ್ತ
ಳಂಗಳ। ಗಗನವನುಚುಂಬಿಸುವಸಾಲುತೆನೆಗಳರತ್ನಗಳ॥ ಸೊಗ
ಸುದೋರ್ಪಾಳ್ವೇರಿಸುತ್ತಿರು। ವಗಳಘಾತವನಾರುಬಲ್ಲರು। ಬಿ
ಗಿದವಜ್ರಕವಾಟವೆಸೆದಿತ್ತಷ್ಟದಿಕ್ಕಿನಲಿ ॥೨೫॥

ಟೀಕೆ:—ಧಗಧಗಿಪ - ಜಗಜಗಿಸುತ್ತಿರುವ, ಕೋಟಾವಳಿಯ-ಕೋಟೆಯಸಾಲಿನ, ಹೊಗರೊಗುವ-ಕಾಂತಿಯನ್ನು ಸುರಿಸುತ್ತಿರುವ, ಹೇಮದ-ಚಿನ್ನದ, ಕೊತ್ತಳಂಗಳ-ಕೊತ್ತಳಗಳ, ಗಗನವನು-ಆಕಾಶವನ್ನು, ಚುಂಬಿಸುವ-ಮುಟ್ಟುತ್ತಿರುವ, ತೆನೆಗಳ-ಕೋಟತೆನೆಗಳ, ಸಾಲುರತ್ನಗಳ-ಸಾಲಾಗಿರುವರತ್ನಗಳ, (೧) ಸೊಗಸುದೋರ್ಪ-ಸೊಗಸಾಗಿರುವ, ಆಳ್ವೇರಿ - ಆಳುವೇರಿಗಳು, ಸುತ್ತಿರುವ-ಸುತ್ತಿಕೊಂಡಿರುವ, ಅಗಳ-ಅಗಳ್ತೆಯ, ಘಾತವಂ-ಆಳವನ್ನು, ಆರುಬಲ್ಲರು- ಯಾರುಬಲ್ಲರು, ಬಿಗಿದ - ಕಟ್ಟಿರುವ, (೨) ವಜ್ರಕವಾಟವು - ವಜ್ರದ ಕದಗಳು,

ಅಷ್ಟದಿಕ್ಕಿನಲಿ-ಎಂಟುದಿಕ್ಕಿನಲ್ಲಿಯೂ, ಎಸೆದಿತ್ತು-ಪ್ರಕಾಶಿಸಿತು.॥೨೫॥

ತಾತ್ಪರ್ಯ:—ನಿಗನಿಗನೆ ಹೊಳೆಯುತ್ತಿರುವ ಕೋಟೆಗಳ ಸಾಲಿನಿಂದಲೂ, ಕಾಂತಿಯನ್ನು ಹರಡುತ್ತಿರುವ ಚಿನ್ನದ ಕೊತ್ತಳೆಗಳಿಂದಲೂ, ಆಕಾಶವನ್ನು ಮುಟ್ಟುವುದೋ ಎಂಬಂತಿರುವ ಕೋಟೆತೆನೆಗಳಿಂದಲೂ, ರತ್ನಖಚಿತವಾದ ಆಳ್ವೇರಿಗಳಸಾಲಿನಿಂದಲೂ; ಸುತ್ತಲಿರುವ ಆಳವಾದ ಅಗಳ್ತೆಯಿಂದಲೂ, ಕೋಟೆಯ ಎಂಟು ದಿಕ್ಕುಗಳಲ್ಲಿಯೂ, ಪ್ರಕಾಶಿಸುತ್ತಿರುವ ಬಾಗಿಲುಗಳಿಗೆ ಇಟ್ಟಿರುವ ವಜ್ರದ ಕದಗಳಿಂದಲೂ, ಆ ಪುರವು ಹೊಳೆಯುತ್ತಿತ್ತು. ॥೨೫॥

ಟಿಪ್ಪಣಿ:—ಸೊಗಸಂತೋರ್ಪ-ಸೊಗಸುದೋರ್ಪ (ಕ್ರಿ. ಸ) ತಕಾರಕ್ಕೆ ದಕಾರಾದೇಶಬಂತು, (ಕ. ವ್ಯಾ. ಸಂ) (೨) ವಜ್ರದಕವಾಟ-ವಜ್ರಕವಾಟ (ಷ. ತ) ॥೨೫॥

ಮೂ॥ ಹೊಳೆವಿಸುನಿಯರತ್ನನಿಚಯುದ। ನೆಲೆಯುಸೌಧಾಗ್ರದಲಿಮಿಗೆ
ಪ್ರ। ಜ್ವಲಿಪಹೇಮದಕಲಶಗಳರವಿಚಂದ್ರಶಾಲೆಗಳ ॥ ಲಲನೆಯರ
ನಾನಾವಿನೋದದ। ಹಲವುಗೋಪುರಶಿಖರದಗಣಿತ। ನೆಲೆಯುವ
ರ್ಣಿಸಲರಿದಯೋಧ್ಯಾಪುರವುರಂಜಿಸಿತು ॥೨೬॥

ಟೀಕೆ:—ಹೊಳೆವ-ಪ್ರಕಾಶಿಸುವ, ರತ್ನನಿಚಯುದ – ನವರತ್ನದ ಸಮೂಹದಿಂದ ಮಾಡಿದ, ನೆಲೆಯು-ಪ್ರದೇಶವುಳ್ಳ, (೧) ಸೌಧಾಗ್ರದಲಿ-ಉಪ್ಪರಿಗೆಯಮೇಲೆ, ಮಿಗೆ-ಹೆಚ್ಚಾಗಿ, ಪ್ರಜ್ವಲಿಪ-ಹೊಳೆಯುತ್ತಿರುವ, ಹೇಮದ-ಚಿನ್ನದ, ಕಲಶಗಳ-ಕಲಶಗಳುಳ್ಳ, ರವಿಚಂದ್ರಶಾಲೆಗಳ- ಸೂರ್ಯ ಚಂದ್ರಕಾಂತ ಶಿಲೆಗಳಿಂದ ಕಟ್ಟಿರುವ ಮನೆಗಳುಳ್ಳ, ಲಲನೆಯರ-ಸ್ತ್ರೀಯರ, ನಾನಾವಿನೋದದ-ಬಗೆಬಗೆಯಾದವಿಹಾರಕ್ಕಾಗಿ, ಹಲವು-ಅನೇಕವಾದ, ಗೋಪುರಶಿಖರದ- ಗೋಪುರಾಗ್ರಗಳುಳ್ಳ, ಅಗಣಿತನೆಲೆಯು – ಅನೇಕಮನೆಗಳುಳ್ಳ, ಅಯೋಧ್ಯಾಪುರವು, ರಂಜಿಸಿತು – ಮೆರೆಯುತ್ತಿತ್ತು,(೨)ವರ್ಣಿಸಲು-ವಿವರಿಸುವುದಕ್ಕೆ, ಅರಿದು-ಅಸಾಧ್ಯವು॥೨೬

ತಾತ್ಪರ್ಯ:—ನವರತ್ನಖಚಿತವಾದ ಉಪ್ಪರಿಗೆಗಳ ಮೇಲೆ ಸುವರ್ಣ ಕಲಶಗಳನ್ನಿಟ್ಟು, ಸೂರ್ಯ ಚಂದ್ರಕಾಂತ ಶಿಲಾನಿರ್ಮಿತವಾಗಿರುವ ಅನೇಕ ಕ್ರೀಡಾಗಾರಗಳನ್ನು ಸ್ತ್ರೀಯರಿಗಾಗಿ ನಿರ್ಮಿಸಿರಲು, ಗೋಪುರದ ಸಾಲಿನಿಂದ ಅಯೋಧ್ಯಾಪುರವು ವರ್ಣಿಸುವುದಕ್ಕಸಾಧ್ಯವಾದ ಅಲಂಕಾರದಿಂದ ಕಂಗೊಳಿಸುತ್ತಿತ್ತು. ॥೨೬॥

ಟಿಪ್ಪಣಿ:—(೧) ಸೌಧದಅಗ್ರ-ಸೌಧಾಗ್ರ (ಷ. ತ) (೨) ವರ್ಣನ, ಎಂಬಸಂಸ್ಕೃತ ಭಾವನಾಮದಮೇಲೆ ಇಸು ಪ್ರತ್ಯಯವನ್ನು ಸೇರಿಸಿ ಕೊನೆಯ ಅಕ್ಷರವನ್ನು ಲೋಪವಮಾಡಿದುದರಿಂದ ವರ್ಣಿಸು, ಎಂಬ ಧಾತುವು ಹುಟ್ಟಿತು. ॥೨೬॥

ಮೂ॥ ಅರಸುಗಳುಭೂಸುರರುಮಿಗೆವೈ । ಶ್ಯರುಚತುರ್ಥರುನಾಗರಿಕ
ರಾ । ಪುರಜನರುಸಂದಣಿಸಿತಗಣಿತಕೇರಿಕೇರಿಯಲಿ ॥ ಕರಿತುರಗರ
ಥಪಾಯದಳಗೋ । ಚರಿಸಿತಂಗದಿನವವಿಧಾನದೊಳಿರುವಯೋ
ಧ್ಯಾಪುರವಕಂಡೆನುಶಿರವತೂಗಾಡಿ ॥೨೭॥

ಟೀಕೆ:—ಅರಸುಗಳು-ಕ್ಷತ್ರಿಯರು, ಭೂಸುರರು- ಬ್ರಾಹ್ಮಣರು, ಮಿಗೆ-ಹೆಚ್ಚಾಗಿ, ವೈಶ್ಯರು, ಚತುರ್ಥರು-ಶೂದ್ರರು, ನಾಗರಿಕರು-ವಿವೇಕಿಗಳಾದ, ಆಪುರಜನರು-ಆ ಪಟ್ಟಣದ ಜನರು, ಅಗಣಿತ-ಲೆಕ್ಕಿಸುವುದಕ್ಕಾಗದಷ್ಟುಮಂದಿ, (೧) ಕೇರಿಕೇರಿಯಲಿ-ಎಲ್ಲಬೀದಿಗಳಲ್ಲಿಯೂ, ಸಂದಣಿಸಿತು-ಗುಂಪುಸೇರಿದರು, ಅಂಗದಿ-ರಾಜ್ಯಾಂಗವಾಗಿ, ಕರಿ-ಆನೆ, ತುರಗ-ಕುದುರೆ, ರಥ-ತೇರು, ಪಾಯದಳ-ಪದಾತಿ, ಗೋಚರಿಸಿತು-ಕಾಣಬಂತು, (೨) ನವವಿಧಾನದೊಳ್- ಹೊಸರೀತಿಯಿಂದ, ಇರುವ, ಅಯೋಧ್ಯಾಪುರವ - ಅಯೋಧ್ಯಾಪಟ್ಟಣವನ್ನು, ಶಿರವ-ತಲೆಯನ್ನು, ತೂಗಾಡಿ-ಅಲ್ಲಾಡಿಸುತ್ತಾ, ಕಂಡನು. ॥೨೭॥

ತಾತ್ಪರ್ಯ:—ಬ್ರಹ್ಮ, ಕ್ಷತ್ರಿಯ, ವೈಶ್ಯ ಶೂದ್ರರೆಂಬ ನಾಲ್ಕುವರ್ಣದವರೂ ನಾಗರಿಕರಾದ ಪುರಜನರೂ ಪಟ್ಟಣದ ಬೀದಿ ಬೀದಿಗಳಲ್ಲಿಯೂ, ಅಸಂಖ್ಯಾತರಾಗಿ ಗುಂಪುಸೇರಿದರು, ರಾಜಾಂಗವಾದ ಹಸ್ತ್ಯಶ್ವರಥಪದಾತಿಗಳೆಂಬ ನಾಲ್ಕುಬಗೆಯ ಸೈನ್ಯವೂ ಕಾಣಬರುತ್ತಿರಲು, ನವೀನವಾದ ಏರ್ಪಾಡಿನಿಂದ ಶೋಭಿಸುತ್ತಿರುವ ಅಯೋಧ್ಯಾಪುರವನ್ನು ನೋಡಿ ನಳನು ವಿಸ್ಮಿತನಾಗಿ ತಲೆದೂಗುತ್ತಿದ್ದನು. ॥೨೭॥

ಟಿಪ್ಪಣಿ:—(೧) ವೀಪ್ಸಾರ್ಥದಲ್ಲಿ ದ್ವಿರುಕ್ತಿ, (೨) ನವವಾದ ವಿಧಾನ-ನವವಿಧಾನ, (ವಿ. ಪೂರ್ವ. ಕ) ನವ-ಹೊಸದು, ಒಂಭತ್ತು, (ನಾನಾ) ॥೨೭॥

ಮೂ॥ ಬಂದುಹೊಕ್ಕನುಪುರವಮೆರೆವತಿ । ಚಂದವನುಸೆರೆನೋಡಿದು
ನದೊಳ।ಗಂದುಕೊಂಡಾಡಿದನುಋತುಪರ್ಣನಮಹಾಸಿರಿಯ।ತಂ
ದುವೇವಿಧಿತನ್ನನಿಲ್ಲಿಗೆ।ಮುಂದಭಾಗ್ಯನುತಾನೆನುತಮನ। ನೊಂದು

ನೆನೆದನುಪರಪುರಾಧಿಪಚನ್ನ ಕೇಶವನ ॥೨೮॥

ಅಂತು ಸಂಧಿ-೬ಕ್ಕೆ ಪದ ೩೦೦ ಕ್ಕಂ ಮಂಗಳಮಸ್ತು.

ಟೀಕೆ:—ಬಂದು,ಪುರವ-ಅಯೋಧ್ಯೆಯನ್ನು,ಹೊಕ್ಕನು-ಸೇರಿದನು, ಮೆರೆವ-ಪ್ರಕಾಶಿಸುವ ಅತಿಚಂದವನು- ಬಹಳ ಸೊಗಸನ್ನು, ನೆರೆ-ಚೆನ್ನಾಗಿ, ನೋಡಿ, ಅಂದು-ಆಗ, ಋತುಪರ್ಣನ, (೧) ಮಹಾಸಿರಿಯು-ಹೆಚ್ಚಾದಸಂಪತ್ತನ್ನು, ಕೊಂಡಾಡಿದನು-ಹೊಗಳಿದನು, ವಿಧಿ-ದೈವವು, ತನ್ನಂ-ನನ್ನನ್ನು, ಇಲ್ಲಿಗೆ, ತಂದುದೇ-ತಂತೇ, ತಾನು - ನಾನು, (೨) ಮಂದಭಾಗ್ಯನು-ಭಾಗ್ಯಹೀನನು, ಎನುತ, ಮನನೊಂದು- ವ್ಯಥೆಪಟ್ಟು, ವರಪುರಾಧಿಪ-ಬೇಲೂರಿಗೊಡೆಯನಾದ, ಚೆನ್ನಕೇಶವನ- ಕೇಶವಮೂರ್ತಿಯನ್ನು, ನೆನೆದನು-ಧ್ಯಾನಿಸಿದನು. ॥೨೮॥

ಆರನೆ ಸಂಧಿಯು ಟೀಕೆ ಮುಗಿದುದು.

ತಾತ್ಪರ್ಯ:—ನಳನು ಅಯೋಧ್ಯಾಪುರವನ್ನು ಹೊಕ್ಕು ಪಟ್ಟಣದ ಅಲಂಕಾರವನ್ನು ನೋಡಿ ಋತುಪರ್ಣನ ವೈಭವವನ್ನು ಹೊಗಳುತ್ತಾ, ದೈವವು ಅದೃಷ್ಟಹೀನನಾದ ನನ್ನನ್ನು ಇಲ್ಲಿಗೆ ಇಲ್ಲಿಗೆತಂದು ಸೇರಿಸಿತಲ್ಲಾ ಎಂದು ತನ್ನನ್ನು ತಾನು ನಿಂದಿಸಿಕೊಂಡು ವ್ಯಥೆಯಿಂದ ಮನಸ್ಸಿನಲ್ಲಿ ದೇವರನ್ನು ಧ್ಯಾನಿಸುತ್ತಿದ್ದನು. ಎಂಬಲ್ಲಿಗೆ ಆರನೆಯ ಸಂಧಿಯ ತಾತ್ಪರ್ಯವು. ॥೨೮॥

ಏಳನೆ ಸಂಧಿ.

ಸೂಚನೆ॥ ಮಗಳಕಾಣದೆಭೀಮನೃಪಮೂ । ಜಗವಭೇದಿಸಿಚೈದ್ಯಭೂಪನ । ನಗರದಲ್ಲಿರೆಕಂಡುಕರಸಿದತನ್ನ ನಂದನೆಯಾ ॥

ಸೂಚನೆ. ಟೀಕೆ;—ಭೀಮನೃಪ-ಭೀಮರಾಜನು, ಮಗಳ-ತನ್ನ ಪುತ್ರಿಯನ್ನು, (೧) ಮೂಜಗವ-ಮೂರುಲೋಕಗಳನ್ನು,ಭೇದಿಸಿ-ಹುಡುಕಿಸಿ, ಕಾಣದೆ-ತಿಳಿಯದೆ, (೨) ಚೈದ್ಯಭೂಪನ-ಚೈದ್ಯರಾಜನ, ನಗರದಲ್ಲಿ-ಪಟ್ಟಣದಲ್ಲಿ, ಇರೆ-ಇರಲು, ಕಂಡು-ನೋಡಿ, ತನ್ನ, ನಂದನೆಯ-

ಮಗಳನ್ನು, ಕರಸಿದನು-ತನ್ನ ಬಳಿಗೆ ಬರಮಾಡಿಕೊಂಡನು.॥

ತಾತ್ಪರ್ಯ;—ದಮಯಂತಿಯ ತಂದೆಯಾದ ಭೀಮರಾಜನು, ಆಕೆಯು ಎಲ್ಲಿರುವಳೆಂಬುದನ್ನು ತಿಳಿಯಲು ಲೋಕತ್ರಯವನ್ನು ಹುಡುಕಿಸಿ ಎಲ್ಲಿಯೂ ಕಾಣದೆ ಕೊನೆಗೆ ಚೈದ್ಯನಗರದಲ್ಲಿರುವಳೆಂದು ಕೇಳಿ ಅಲ್ಲಿಂದ ತನ್ನ ಬಳಿಗೆ ಕರೆಯಿಸಿ ಕೊಂಡನು.॥

ಟಿಪ್ಪಣಿ:— (೧) ಮೂರುಜಗಗಳಸಮೂಹಾರ- ಮೂಜಗ (ಸ. ದ್ವಿಗು) (೨) ಭೂ-ಭೂಮಿಯನ್ನು, ಪ-ಪಾಲಿಸತಕ್ಕವನು (ಅವ) (ಉ ಪ. ಸ) ಚೈದ್ಯನೆಂಬ ಭೂಪ-ಚೈದ್ಯಭೂಪ (ಸಂ. ಪೂರ್ವ್ವಕ) ॥

ಮೂ॥ ಕೇಳುಕುಂತೀತನಯನಿರ್ಮಿತ। ದಾಲಯದಸೊಂಪಿನಲಿವ್ರೋ
ಲಗ। ಶಾಲೆಯಲಿಋತುಪರ್ಣನಿದ್ದನುಸಿಂಹಪೀಠದಲಿ। ಸಾಲಮಕು
ಟದನೃಪರುಭೂಸುರ। ಜಾಲಮಂತ್ರಿಪುರೋಹಿತರುಗುಣ। ಶೀಲರು
ನ್ನತಸತಿಯರಿಂದೆಸೆದಿರ್ದುದಾಸ್ಥಾನ ॥೧॥

ಟೀಕೆ:— ಕುಂತೀತನಯ - ಧರ್ಮರಾಜನೇ, ಕೇಳು, ಋತುಪರ್ಣಂ-ಋತುಪರ್ಣರಾಜನು, ನಿರ್ಮಿತದ-ಕಟ್ಟಿರುವ, ಆಲಯದ-ಮನೆಯ, ಸೊಂಪಿನಲಿ-ಸೊಗಸಿನಿಂದ, (೧) ಓಲಗಸಾಲೆಯಲಿ-ಸಭಾಮಂಟಪದಲ್ಲಿ, ಸಿಂಹಪೀಠದಲಿ-ಸಿಂಹಾಸನದಮೇಲೆ, ಇದ್ದನು-ಕುಳಿತಿದ್ದನು, ಆಸ್ಥಾನ-ರಾಜಸಭೆಯು, ಸಾಲ-ಪಜ್ತಿಯಾಗಿರುವ, ಮಕುಟದ-ಕಿರೀಟವುಳ್ಳ, ನೃಪರು-ದೊರೆಗಳಿಂದ, ಭೂಸುರಜಾಲ - ಬ್ರಾಹ್ಮಣಮಂಡಲಿಯಿಂದ, ಮಂತ್ರಿಗಳಿಂದ, ಪುರೋಹಿತರು-ಪುರೋಹಿತರಿಂದ, ಗುಣಶೀಲರು-ಸದ್ಗುಣಿಗಳಿಂದ (೨) ಉನ್ನತ ಸತಿಯರಿಂದ-ಶ್ರೇಷ್ಠರಾದ ಸುವಾಸಿನಿಯರಿಂದ, ಎಸೆದುದು-ಪ್ರಕಾಶಿಸಿತು ॥೧॥

ತಾತ್ಪರ್ಯ:— ಋತುಪರ್ಣರಾಜನು ನವರತ್ನ ಖಚಿತವಾದ ಸಭಾಮಂಟಪದಲ್ಲಿ ದಿವ್ಯ ಸಿಂಹಾಸನದಮೇಲೆ ಕುಳಿತಿರಲು, ಆ ಸಭೆಯು ಮಂತ್ರಿ, ಪುರೋಹಿತರಿಂದಲೂ, ಗುಣವತಿಯರಾದ ಪತಿವ್ರತಾ ಸ್ತ್ರೀಯರಿಂದಲೂ ರಮಣೀಯವಾಗಿತ್ತು ॥೧॥

ಟಿಪ್ಪಣಿ:— (೧) ಓಲಗದಸಾಲೆ - ಓಲಗಸಾಲೆ (ಷ. ತ) ಸಾಲೆ (ತ್ಸ) ಶಾಲಾ (೨) ಉತ್+ನತ-ಉನ್ನತ (ಅನುನಾಸಿಕಸಂಧಿ) ಉನ್ನತರಾದ ಸತಿಯರು-ಉನ್ನತಸತಿಯರು (ವಿ. ಪೂರ್ವ್ವ. ಕ) ॥೧॥

ಮೂ॥ ಇದುಸಮಯತನಗೆಂನುನಳನೃಪ । ಮುದದಿವೇಷವಮರಸಿಕ

ರಿಯಂ|ದದಲಿತಾಬಂದಾಗಕಂಡನುನೃಪಗೆಕೈಮುಗಿದು|| ಸದಮಲ
ಜ್ಞಾನದಲಿರಿಪುನೃಪ। ಕದನಗಲಿಗಳುಜೀಯೆನಲುನಯು। ಹೃದ
ಯದಲಿಬಿನ್ನೈಸಿದನುರುತುಪರ್ಣಭೂಪತಿಗೆ ||೨||

ಟೀಕೆ:— ನಳನೃಪ-ನಳರಾಜನು, ತನಗೆ, ಇದು, ಸಮಯ-ಕಾಲವು, ಎಂದು, ಮುದದಿ-ಸಂತೋಷದಿಂದ, (೧) ವೇಷವ-ರೂಪವನ್ನು, ಮರಸಿ-ಮರೆಮಾಜಿ, ಹರಿಯಂದದಲಿ-ವಿಷ್ಣುವಿನಹಾಗೆ, ತಾ-ತಾನು, ಬಂದು, ಆಗ, ನೃಪಗೆ-ದೊರೆಗೆ, ಕೈಮುಗಿದು-ಕೈಜೋಡಿಸಿಕೊಂಡು, (೨) ಸದಮಲಜ್ಞಾನದಲಿ-ಬಹು ವಿವೇಕದಿಂದ, ಕಂಡನು-ನೋಡಿದನು, ರಿಪುನೃಪಕದನಗಲಿಗಳು-ಶತ್ರುರಾಜರಯುದ್ಧದಲ್ಲಿ ಶೂರರು, ಜೀಯ-ಸ್ವಾಮಿ, ಎನಲು-ಎನ್ನುತ್ತಿರಲು, ನಯುಹೃದಯದಲಿ-ಮೃದುವಾದಮನಸ್ಸಿನಿಂದ, ರುತುಪರ್ಣ ಭೂಪತಿಗೆ-ಋತುಪರ್ಣರಾಜನಿಗೆ, ಬಿನ್ನೈಸಿದನು- ವಿಜ್ಞಾಪಿಸಿದನು ||೨||

ತಾತ್ಪರ್ಯ:— ನಳರಾಜನು ತನಗೆ ಇದೇಸಮಯವೆಂದು ತಿಳಿದು ತನ್ನ ರೂಪನ್ನು ಮರೆಮಾಡಿಕೊಂಡು ಬಂದ ಶ್ರೀವಿಷ್ಣುವಿನಂತೆ ಸಭೆಗೆ ಬಂದು ದೊರೆಗೆ ಕೈಮುಗಿದು ಶುದ್ಧಮನದಿಂದ ಅವನಿಗೆ ಕಾಣಿಸಿಕೊಂಡನು. ಶತ್ರುರಾಜರಮೇಲೆ ಯುದ್ಧಮಾಡಿ ನಿಪುಣರಾದ ಭಟರು ಸ್ವಾಮಿಎಂದು ದೊರೆಯನ್ನು ಕೇಳಿಕೊಳ್ಳುತ್ತಿರಲು, ತನ್ನ ಸಮಾಚಾರವನ್ನು ನಳನು ಹೇಳಿಕೊಂಡನು ||೨||

ಟಿಪ್ಪಣಿ:— (೧) (ದ್ಬ) ವೇಸ (೨) ಸತ್+ಅಮಲ-ಸದಮಲ (ಜಶ್ತ್ವ) (ಪ್ರಾ. ಕ)ಸದಮಲವಾದ ಜ್ಞಾನ-ಸದಮಲಜ್ಞಾನ(ವಿ. ಪೂರ್ವ. ಕ) ||೨||

ಮೂ|| ಅವನಿಪತಿಕೇಳ್ನಿಮ್ಮಪದಕಮ| ಲವನುಭಜಿಸುವೆಜೀಯಚಿತ್ತ
ದಿ| ಸವಡಿನುಡಿಯೆನಗಿಲ್ಲಬಾಹುಕನೆಂಬುದಭಿಧಾನ || ಭುವನದೊ
ಳುತ್ತಾನಶ್ವಕುಲಹೃದ| ಯವನುಬಲ್ಲೆನುಪಾಕಪಾಕದಿ| ಸವಿಗೊ
ಳಿಪವರವಿಲ್ಲೆತನಗುಂಟೆಂದನವನಗುತ ||೩||

ಟೀಕೆ:— ಅವನಿಪತಿ-ದೊರೆಯೇ, ಕೇಳ್-ಕೇಳು, ನಿಮ್ಮ, (೧) ಪದಕಮಲವನು-ಪಾದಪದ್ಮವನ್ನು, ಭಜಿಸುವೆ-ಸೇವಿಸುವೆನು, ಜೀಯ-ಸ್ವಾಮಿಯೆ, ಚಿತ್ತದಿ-ಮನಸ್ಸಿನಲ್ಲಿ, ಸವಡಿನುಡಿ-ಸುಳ್ಳುಮಾತು, ಎನಗೆ ನನಗೆ, ಇಲ್ಲ, ಭುವನದೊಳು-ಲೋಕದಲ್ಲಿ, ಅಭಿಧಾನ-ಹೆಸರು, ಬಾ

ಹುಕನೆಂಬುದು–ಬಾಹುಕನೆಂಬುವುದು, ತಾಂ–ನಾನು, ಅಶ್ವಕುಲ ಹೃದಯವನು–ಅಶ್ವಶಾಸ್ತ್ರವನ್ನು, ಬಲ್ಲೆನು–ತಿಳಿದಿದ್ದೇನೆ, ಶಾಕಪಾಕದಿ–ಸೊಪ್ಪುಗಳಿಂದಡಿಗೆ ಮಾಡುವುದರಲ್ಲಿ (೨) ಸವಿಗೊಳಿಪ–ರುಚಿಯನ್ನು ಹುಟ್ಟಿಸುವ, ವರವಿದ್ಯೆ–ಶ್ರೇಷ್ಠವಾದ ವಿದ್ಯೆಯು, ತನಗೆ, ಉಂಟು, (ಎಂದು) ಅವ–ನಳನು, ನಗುತ–ನಗುತ್ತಾ,ಎಂದ–ಎಂದನು ॥೩॥

ತಾತ್ಪರ್ಯ:—ಎಲೈ ದೊರೆಯೇ ಕೇಳು, ನಾನು ನಿನ್ನ ಪಾದ ಸೇವಕನಾಗಿರುವೆನು, ನನ್ನಹೆಸರು ಬಾಹುಕನೆಂಬುದು, ನಾನು ಸುಳ್ಳು ಹೇಳತಕ್ಕವನಲ್ಲ, ನನಗೆ ಅಶ್ವಶಿಕ್ಷಣೆಯು ಚೆನ್ನಾಗಿ ತಿಳಿದಿರುವುದು, ಬಹು ರುಚಿಯಾಗಿರುವಂತೆ ಅಡಿಗೆ ಮಾಡುವ ಪಾಕವಿದ್ಯೆಯನ್ನು ಕಲ್ತಿರುವೆನು, ಎಂದು ನಗುತ್ತಾ ದೊರೆಯಸಂಗಡ ಹೇಳಿದನು ॥೩॥

ಟಿಪ್ಪಣಿ:— (೧) ಕಮಲದಂತಿರ್ಪಪದ–ಪದಕಮಲ (ಉ. ಉ. ಕ. ಸ) (೨) ಸವಿಯುಂಕೊಳಿಪ–ಸವಿಗೊಳಿಪ (ಕ್ರಿ.ಸ) ಗಕಾರಾದೇಶ ಸಂಧಿ ॥೩॥

ಮೂ॥ ಸೂಪಕಾರದೊಳಗ್ಗಳನುಕಡು। ರೂಪಿನವತಾನಲ್ಲಚಿತ್ತದಿ।ಕಾ
ಪುರುಷನೆನ್ನದಿರುನೋಡಾತನ್ನಪೌರುಷವ॥ ಭೂಪಮುಂಗೈಕಂ
ಕಣಕೆಕುಲ। ದೀಪಕನ್ನಡಿಯೇಕೆತರಿಸುಪ್ರ। ತಾಪವಾಜಿಯನೆಂ
ದುಬಿನ್ನೈಸಿದನುನಸುನಗುತ ॥೪॥

ಟೀಕೆ:—ತಾಂ–ನಾನು, ಸೂಪಕಾರದೊಳು–ಪಾಕವಿದ್ಯೆಯಲ್ಲಿ, ಅಗ್ಗಳನು–ಶ್ರೇಷ್ಠನು, ಕಡು ರೂಪಿನವಂ–ಸುಂದರವಾದ ರೂಪವುಳ್ಳವನು, ಅಲ್ಲ, ಚಿತ್ತದಲಿ–ಮನಸ್ಸಿನಲ್ಲಿ, ಕಾಪುರುಷಂ–ಅಲ್ಪಮನುಷ್ಯನು, ಎನ್ನದಿರು–ಎನ್ನಬೇಡ, ಆ ತನ್ನಪೌರುಷವ-ನನ್ನ ಪರಾಕ್ರಮವನ್ನು, ನೋಡು, (೧) ಕುಲದೀಪ–ವಂಶಭೂಷಣನಾದ, ಭೂಪ–ದೊರೆಯೇ, (೨) ಮುಂಗೈ ಕಂಕಣಕೆ – ಮುಂಗೈಬಳೆಗೆ, ಕನ್ನಡಿ–ಕನ್ನಡಿಯು (ನೋಡುವುದಕ್ಕೆ) ಏಕೆ–ಏತಕ್ಕೆ ? (೩) ಪ್ರತಾಪವಾಜಿಯಂ–ಪರಾಕ್ರಮವುಳ್ಳ ಕುದುರೆಯನ್ನು, ತರಿಸು, ಎಂದು, ನಸುನಗುತ–ಮುಗುಳ್ನಗೆಯನ್ನು ತೋರಿಸುತ್ತಾ, ಬಿನ್ನೈಸಿದನು–ವಿಜ್ಞಾಪಿಸಿ ಕೊಂಡನು ॥೪॥

ತಾತ್ಪರ್ಯ:— ಅಡಿಗೆಮಾಡುವುದರಲ್ಲಿ ಸಮರ್ಥನು, ರೂಪಿನಲ್ಲಿ ಮಾತ್ರ ಸುಂದರನಲ್ಲ, ಕುರೂಪಿಯಾದ ಮಾತ್ರಕ್ಕೆ ನನ್ನನ್ನು ಕುತ್ಸಿತನೆಂದು ತಿಳಿಯಬೇಡ, ಮುಂಗೈಬಳೆಯನ್ನು ನೋಡಿಕೊಳ್ಳಲು ಕನ್ನಡಿ

ಯೇತಕ್ಕೆ? ನನ್ನ ಯುಕ್ತಿಯನ್ನು ಪರೀಕ್ಷಿಸಲು ಬೇರೆ ಶಕ್ತಿಯೇಕೆ? ಪ್ರಬಲವಾದ ಕುದುರೆಯೊಂದನ್ನು ತರಿಸಿ ನನ್ನ ಪರಾಕ್ರಮವನ್ನು ಪ್ರತ್ಯಕ್ಷವಾಗಿ ನೋಡು ಎಂದನು ||೪||

ಟಿಪ್ಪಣಿ:— (೧) ಕುಲದದೀಪ-ಕುಲದೀಪ (ಷ. ತ) (೨) ಕೈಯ್ಯ ಮುಂದು-ಮುಂಗೈ (ಅವ್ಯಯೀಭಾವ) ಮುಂಗೈಯ್ಯಕಂಕಣ ಮುಂಗೈಕಂಕಣ (ಷ. ತ) ಸಂಸ್ಪರ್ಶ-ಸಂಬಂಧದಲ್ಲಿ ಷಷ್ಠಿ (೩) ಪ್ರತಾಪಯುಕ್ತವಾದ ವಾಜಿ-ಪ್ರತಾಪವಾಜಿ (ಲು. ಮ. ಕ. ಸ) ||೪||

ಮೂ|| ಪ್ರೌಢವಿಪತಿಋತುಪರ್ಣಬಾಹುಕ| ನುಡಿದವಚನಕೆಮೆಚ್ಚಿಮ
ನದುಗ್ಗಡದತೇಜಿಯತರಿಸಿಕೊಡಲೇರಿದನುಬೀದಿಯಲಿ||ಪಿಡಿಪಸ
ನ್ನೆಗೆಕುಣಿದುರೆವೆಗಾ| ಲಿಡುತಜೋಡಣೆಯಿಂದಹಯವಡಿ| ಗಡಿಗೆ
ಚಿಮ್ಮಿತುವಾಯುವೇಗದೊಳರಸಕೇಳೆಂದ ||೫||

ಟೀಕೆ:— ಪ್ರೌಢವಿಪತಿ-ದೊರೆಯಾದ, ಋತುಪರ್ಣ-ಋತುಪರ್ಣನು, ಬಾಹುಕನುಡಿದ-ಬಾಹುಕನಾಡಿದ, ವಚನಕೆ-ಮಾತಿಗೆ, ಮನದೆ-ಮನಸ್ಸಿನಲ್ಲಿ, ಮೆಚ್ಚಿ-ಒಪ್ಪಿ, (೧) ಉಗ್ಗಡದ-ತುಂಟನಾದ, ತೇಜಿಯ-ಕುದುರೆಯನ್ನು, ತರಿಸಿ, ಕೊಡಲು, ಬೀದಿಯಲಿ, ಏರಿದನು ಹತ್ತಿದನು. ಹಯವು-ಕುದುರೆಯು, ಪಿಡಿಪ-ಲಗಾಮನ್ನು ಹಾರಿಸಿದ (೨) ಸನ್ನೆಗೆ-ಸಂಜ್ಞೆಯಿಂದ, ಕುಣಿದು-ಕುಣಿದಾಡಿ, ಜೋಡಣೆಯಿಂದ-ಜೊತೆಯಾಗಿ, ರೆವೆಗಾಲಿಡುತ-ಕಾಲುಗಳನ್ನೆತ್ತಿಡುತ್ತಾ, ವಾಯುವೇಗದೊಳ್-ಗಾಳಿಯಷ್ಟುಬೇಗನೆ, ಅಡಿಗಡಿಗೆ-ಹೆಜ್ಜೆಹೆಜ್ಜೆಗೂ, ಚಿಮ್ಮಿತು-ಚಿಮ್ಮುತ್ತಿತ್ತು, ಅರಸ-ದೊರೆಯೇ, ಕೇಳು, ಎಂದ ||೫||

ತಾತ್ಪರ್ಯ:— ಋತುಪರ್ಣನು ಆಮಾತನ್ನು ಕೇಳಿ ಕೂಡಲೆ ಬಲವಾದ ತುಂಟ ಕುದುರೆಯೊಂದನ್ನು ತರಿಸಿ ಕೊಟ್ಟನು, ಬಾಹುಕನು ಅದರಮೇಲೆ ಹತ್ತಿ ಬೀದಿಯಲ್ಲಿ ಹೊರಟು ಲಗಾಮನ್ನು ಹಿಡಿದು ಎಳೆಯುವುದರಮೂಲಕ ಸನ್ನೆ ಮಾಡಲು ಆ ಕುದುರೆಯು ಕುಣಿದಾಡುತ್ತಾ, ಎರಡು ಕಾಲುಗಳನ್ನೂ ನೆಲದಮೇಲೆ ಒಂದೇ ಸಾರಿ ಊಡುತ್ತಾ ಹೆಜ್ಜೆ ಹೆಜ್ಜೆಗೂ ಚಿಮ್ಮುತ್ತಾ ವಾಯುವೇಗದಿಂದ ಓಡಿತು ||೫||

ಟಿಪ್ಪಣಿ:— (೧) (ತ್ಸ) ಉತ್ಕಟ (೨) (ತ್ಭ) ಸಂಜ್ಞಾ ||೫||

ಮೂ || ಕರದವಾಘೆಯಸಡಿಲಬಿಡೆನಿ| ಬ್ಬರದ ಮನದೊಳ್ಪೈಸಿತವನಿ
ಯೊ| ಳುರವಣಿಸಿಕೇಳಿಧರಾಳಿಮುಸುಕಿಮುದಂಬರನಬಿಡದೆ|| ಧರಣಿತ

ಲ್ಲಣಿಸಿದುದುಗಗನವಿ| ಸುರರುಕೊಂಡಾಡಿದರುಬಾಹುಕ| ನರಸನ
ಹುದೋ ಭಾಪುಭಾಪೆಂದುದುಸಭಾಸ್ಥಾನ ||೬||

ಟೀಕೆ:— ಕರದ-ಕೈಯಲ್ಲಿದ್ದ, ವಾಘೆಯ-ಲಗಾಮನ್ನು, ಸಡಿಲಬಿಡೆ-ಸಡಿಲವಾಗಿಮಾಡಲು, (೧) ನಿಬ್ಬರದ-ವೇಗವಾದ, ಗಮನದೊಳ್-ನಡಿಗೆಯಿಂದ, ಐದಿತು-ಹೋಯಿತು, ಅವನಿಯೊಳ್ - ನೆಲದಿಂದ, ಉರವಣಿಸಿ-ನೆಗೆದು, ಬಿಡದೆ-ತಪ್ಪದೆ, ಅಂಬರವ-ಆಕಾಶವನ್ನು (೨) ಕೆಂಧೂಳಿ-ಕೆಂಪಾದಧೂಳು, ಮುಸುಕಿದುದು ಕವಿಯಿತು, ಧರಣಿ-ಭೂಮಿಯು, ತಲ್ಲಣಿಸಿದುದು-ಕಳವಳಿಸಿತು, ಸುರರು - ದೇವತೆಗಳು, ಕೊಂಡಾಡಿದರು-ಹೊಗಳಿದರು. ಸಭಾಸ್ಥಾನ-ಸಭಾಜನರು, ಬಾಹುಕನ-ಬಾಹುಕನನ್ನು, ಅರಸನಹುದೋ-ದೊರೆಯೇಸರಿ, ಭಾಪು ಭಾಪು-ಶಹಬಾಸ್ (ಭಲಾ) ಎಂದುದು-ಎಂದುಹೇಳಿತು ||೬||

ತಾತ್ಪರ್ಯ:—ಕುದುರೆಯು ಲಗಾಮನ್ನು ಸ್ವಲ್ಪ ಸಡಿಲಮಾಡಲು. ಆ ಕುದುರೆಯು ವಾಯುವೇಗದಿಂದೋಡಿತು, ನೆಲದಿಂದೆದ್ದ ಕೆಂಧೂಳು ಅಂತರಿಕ್ಷವನ್ನೆಲ್ಲಾ ಮುಚ್ಚಿತು. ಭೂಮಿಯು ಆ ರಭಸಕ್ಕೆ ತಲ್ಲಣಿಸಿತು. ದೇವತೆಗಳೆಲ್ಲರೂ ವಿಸ್ಮಿತರಾಗಿ ಕೊಂಡಾಡಿದರು, ಸಭಾಸದರೆಲ್ಲರೂ, ಬಾಹುಕನೇ ನೀನು ರಾಜನೇ ಸರಿ ಸಾಮಾನ್ಯನಲ್ಲ ಭಲಾ, ಎಂದು ಆಶ್ಚರ್ಯ ಪಡುತ್ತಿದ್ದರು ||೬||

ಟಿಪ್ಪಣಿ:— (೧) (ತ್ಸ) ನಿರ್ಭರ (೨) ಕೆಚ್ಚನೆಧೂಳಿ (ವಿ. ಪೂರ್ವ. ಕ) ಧೂಳಿಗೆ (ದ್ಭ) ದೂಳಿ ||೬||

ಮೂ||ಮುರುಹಿಹಿಡಿಯಲುವಿಡಿವಸನ್ನೆಗೆ| ತಿರುಗಿತತಿವೇಗದಲಿಹಯ
ವೋ| ಸರಸಿಕಿರುಬೆಮರಿಡಲುನಿಲಿಸುತವಾರುವವನಿಳಿದು|| ಕರವ
ಮುಗಿಯಲುನೃಪತಿಮೆಚ್ಚುತ| ತರಿಸಿಕೊಟ್ಟನುಭೂಷಣಂಗಳ |
ಹಿರಿದುಸಂಬಳವಿತ್ತುನಿಲಿಸಿದನರಸಬಾಹುಕನ ||೭||

ಟೀಕೆ:— ಮುರುಹಿಹಿಡಿಯಲು-ತಿರುಗಿಸಿಹಿಡಿದುಕೊಳ್ಳಲು, ವಿಡಿದ-ಅಲ್ಲಾಡಿಸಿದ, ಸನ್ನೆಗೆ-ಸಂಜ್ಞೆಯಿಂದ, ಹಯವು-ಕುದುರೆಯು, ತಿರುಗಿತು-ಹಿಂದಿರುಗಿತು, ಓಸರಿಸಿ-ತಣೆದು (೧) ಅತಿವೇಗದಲಿ-ಬಹಳವೇಗನೆ ಓಡುತ್ತಾ ಬಂದು, (೨) ಕಿರುಬೆಮರಿಡಲು-ಬೆವರನ್ನು ಸುರಿಸುತ್ತಿರಲು, ನಿಲಿಸುತ-ನಿಲ್ಲಿಸಿಬಿಟ್ಟು ವಾರುವವ-ಕುದುರೆಯನ್ನು, ಇಳಿದು, ಕರವ ಮುಗಿಯಲು-ಕೈಮುಗಿಯಲು, ನೃಪತಿ-ದೊರೆಯು, ಮೆಚ್ಚುತ-ಮೆ

ಚ್ಚಿಕೊಳ್ಳುತ್ತಾ, ಭೂಷಣಂಗಳ-ಆಭರಣಗಳನ್ನು, ತರಿಸಿಕೊಟ್ಟು, ಅರಸ-ದೊರೆಯು, ಬಾಹುಕನ-ಬಾಹುಕನನ್ನು, ಹಿರಿದು-ಹೆಚ್ಚಾಗಿ (೩) ಸಂಬಳವಿತ್ತು-ಸಂಬಳವನ್ನು ಕೊಟ್ಟು, ನಿಲಿಸಿದನು-ಇಟ್ಟುಕೊಂಡನು ॥೭॥

ತಾತ್ಪರ್ಯ:— ಕುದುರೆಯು ಬಹುದೂರ ಓಡಿದಮೇಲೆ ಲಗಾಮಿನಿಂದ ಹಿಂದಿರುಗುವಂತೆ ಸನ್ನೆಯನ್ನು ಮಾಡಲು ಕೂಡಲೆ ಓಟವನ್ನು ನಿಲ್ಲಿಸಿ ತಿರುಗಿಕೊಂಡು ಓಡಲಾರಂಭಿಸಿ ನಿಮಿಷಮಾತ್ರದಲ್ಲಿ ಅರಮನೆಯ ಬಳಿಗೆ ಸೇರಿತು. ಕುದುರೆಗೆ ಮೈಬೆವರಹತ್ತಿತು. ಕುದುರೆಯನ್ನು ನಿಲ್ಲಿಸಿ ಇಳಿದು ದೊರೆಗೆ ಕೈಮುಗಿದು ನಿಂತುಕೊಳ್ಳಲು ದೊರೆಯು ವಿಸ್ಮಿತನಾಗಿ ಅನೇಕ ಪಾರಿತೋಷಿಕಗಳನ್ನು ಕೊಟ್ಟು ಹೆಚ್ಚು ಸಂಬಳವನ್ನು ಗೊತ್ತುಮಾಡಿ ಆ ಬಾಹುಕನನ್ನು ತನ್ನ ಬಳಿಯಲ್ಲೇ ಇಟ್ಟುಕೊಂಡನು

ಟಿಪ್ಪಣಿ:— (೧) ಅತಿಯಾದವೇಗ-ಅತಿವೇಗ (ಪ್ರಾದಿ. ಕ. ಸ) ವೇಗಕ್ಕೆ (ದ್ಭ) ಬೇಗ (೨) ಕಿರಿದುಬೆಮರ್ (ವಿ. ಪೂರ್ವ. ಕ) ಕಿರುಬೆಮರಂಇಡಲ್-ಕಿರುಬೆಮರಿಡಲ್ (ಕ್ರಿ. ಸ) ಕಿರಿದು ಎಂಬ ಗುಣವಾಚಕಕ್ಕೆ ಸಮಾಸದಲ್ಲಿ ‚ಕಿರು, ಎಂದಾದೇಶಬಂತು. ಹಳಗನ್ನಡ ದಲ್ಲಾದರೆ ‚ಕುರು, ಎಂದಾಗುತ್ತಿತ್ತು (೩) ಸಂಬಳವಂ ಇತ್ತು-ಸಂಬಳವಿತ್ತು, (ಕ್ರಿ. ಸ) ॥೭॥

ಮೂ॥ ಜನಪಕೇಳ್ಬಾಹುಕನುವಾಲಾ|ಖ್ಯನಲಿಸಖ್ಯವಬಳೆಸಿಯಾತನ|
ನನುದಿನವುಕೂಡಿರ್ದನೊಂದಾನೊಂದುದಿನರಾತ್ರಿ| ವನಜಮುಖಿ
ದಮಯಂತಿಯೊಳುಚುಂ| ಬನಸರಸಸಲ್ಲಾಪದಿಂದಿಹ| ಕನಸಕಂ
ಡೆಚ್ಚರದಿಕಾಣದೆಮತ್ತೆಹಲುಬಿದನು ॥೪॥

ಟೀಕೆ:—ಜನಪ-ದೊರೆಯೇ, ಕೇಳ್-ಕೇಳು, ಬಾಹುಕನು, (೧) ವಾಲಾಖ್ಯನಲಿ-ವಾಲನೆಂಬುವನೊಡನೆ, ಸಖ್ಯವ-ಸ್ನೇಹವನ್ನು, ಬಳೆಸಿ-ಹೆಚ್ಚಿಸಿ, ಅನುದಿನವು-ಪ್ರತಿನಿತ್ಯವೂ, ಆತನಂ-ಅವನನ್ನು, ಕೂಡಿರ್ದಂ-ಕೂಡಿಕೊಂಡಿದ್ದನು, ಒಂದಾನೊಂದುದಿನರಾತ್ರಿ-ಒಂದುದಿವಸ ರಾತ್ರಿಯಲ್ಲಿ, ವನಜಮುಖಿ ದಮಯಂತಿಯೊಳು- ಕಮಲನೇತ್ರೆಯಾದ ದಮಯಂತಿಯಲ್ಲಿ, ಚುಂಬನ-ಮುತ್ತಿಡುವಿಕೆ, ಸರಸ- ರಸಯುಕ್ತವಾಗಿ, (೨) ಸಲ್ಲಾಪದಿಂದೆ-ಅನ್ಯೋನ್ಯವಾಗಿ ಮಾತನಾಡಿ ಕೊಳ್ಳುವಿಕೆಯೇ ಮೊದಲಾದ ವಿನೋದಗಳಿಂದ ಕೂಡಿ, ಇಹ-ಇರುವ, ಕನಸ-ಸ್ವ

ಪ್ನವನ್ನು, ಕಂಡು-ನೋಡಿ, ಎಚ್ಚರವಿ-ಎಚ್ಚೆತ್ತು, ಕಾಣದೆ-ಅವಳನ್ನು ಕಾಣದೆ, ಮತ್ತೆ-ಪುನಃ, ಹಲುಬಿದನು-ಗೋಳಾಡಿದನು. ‖೮‖

ತಾತ್ಪರ್ಯ:—ಅನಂತರದಲ್ಲಿ ಬಾಹುಕನು, ವಾಲನೆಂಬುವನೊಡನೆ, ಸ್ನೇಹಮಾಡಿಕೊಂಡು ಸರ್ವದಾ ಅವನೊಡನೆಯೇ ಇರುತ್ತಾ ಕಾಲವನ್ನು ಕಳೆದನು, ಒಂದಾನೊಂದು ದಿನ ರಾತ್ರಿಯಲ್ಲಿ ದಮಯಂತಿಯೊಡನೆ ಚುಂಬನ ಸರಸಸಲ್ಲಾಪಾದಿಗಳಿಂದ ಇರುವಂತೆ ಸ್ವಪ್ನವನ್ನು ಕಂಡು ಎಚ್ಚೆತ್ತು ಆಕೆಯನ್ನು ಕಾಣದೆ ಖಿನ್ನನಾಗಿ ಹಲುಬಿದನು. ‖೮‖

ಟಿಪ್ಪಣಿ:—(೧) ವಾಲನೆಂಬ ಆಖ್ಯೆಯು ಯಾರಿಗೋ ಅವನು-ವಾಲಾಖ್ಯನು (ಬ. ವ್ರೀ) ವಾಲ+ಆಖ್ಯ-ವಾಲಾಖ್ಯ (ಸ. ದೀ. ಸಂ) (೨) ಸತ್+ಲಾಪ-ಸಲ್ಲಾಪ-ಸಂಸ್ಕೃತ ವ್ಯಂಜನ ಸಂಧಿ, ತಕಾರಕ್ಕೆ ಲಕಾರಾದೇಶ ಬಂತು. ‖೮‖

ಮೂ॥ ಹಾತರುಣಿನಳಿನಾಕ್ಷಿನಯಸು। ಪ್ರೀತಿಪೂರ್ವಕದಿಂದಕನಸಿಲಿ।
ಮಾತುದೋರದೆಬಂದುನನ್ನಲಿಕರುಣದಿಂನೀನು॥ ಧಾತುಗುಂದಿದೆ
ನಕಟಅಸುರಾ। ರಾತಿಬಲ್ಲನೆನುತ್ತಮನದಲಿ। ಕಾತರಿಸಿನಿಜಸತಿಗೆಹ
ಲುಬಿದಮದನನಿಸುಗೆಯಲಿ ‖೯‖

ಟೀಕೆ:—ಹಾ-ಅಯ್ಯೋ, ನಳಿನಾಕ್ಷಿ-ಕಮಲನೇತ್ರೆಯಾದ, ತರುಣಿ-ದಮಯಂತಿಯೇ, ನೀನು, ನನ್ನಲಿ-ನನ್ನಲ್ಲಿ, ಕರುಣದಿಂ-ದಯೆಯಿಂದ, ಕನಸಿಲಿ - ಕನಸಿನಲ್ಲಿ, ಬಂದು, ನಯಸು ಪ್ರೀತಿಪೂರ್ವಕದಿಂದ-ಪ್ರೇಮಯುಕ್ತವಾದ ಮೃದುನುಡಿಗಳಿಂದ, (೧) ಮಾತುದೋರದೆ- ಮಾತಾಡದೆ, (ಇದ್ದುದರಿಂದ) (೨) ಧಾತುಗುಂದಿದೆಂ- ಶಕ್ತಿಹೀನನಾದೆನು, (೩) ಅಸುರಾರಾತಿ-ವಿಷ್ಣುವು, ಬಲ್ಲಂ-ತಿಳಿವನು, ಅಕಟ-ಅಯ್ಯೋ, ಎನುತ್ತ-ಎಂಬದಾಗಿ, ಮನದಲಿ-ಮನಸ್ಸಿನಲ್ಲಿ, ಕಾತರಿಸಿ - ಕಳವಳಗೊಂಡು, ಮದನನ-ಮನ್ಮಥನ, (೪) ಇಸುಗೆಯಲಿ- ಬಾಣಪ್ರಯೋಗದಿಂದ, ಹಲುಬಿದನು-ಅತ್ತನು. ‖೯‖

ತಾತ್ಪರ್ಯ:—ಅದರಿಂದ ದಮಯಂತಿಯ ಜ್ಞಾಪಕವುಂಟಾಗಲು ಅಯ್ಯೋ ! ಕಮಲನೇತ್ರೆ ನನ್ನಲ್ಲಿ ನಿನಗೆ ಇನ್ನೆಷ್ಟು ಪ್ರೀತಿಯೋ ನಾನರಿಯೆನು, ನನ್ನ ಸ್ವಪ್ನದಲ್ಲಿ ಬಂದಿದ್ದರೂ ನನ್ನೊಡನೆ ಸವಿನುಡಿಯೊಂದನ್ನಾದರೂ ಆಡದೆ ಹೊದೆ, ನಿನ್ನ ವಿಯೋಗದಿಂದಲೂ, ಮದನನ ಶರಹತಿಯಿಂದಲೂ ದೇಹವು ಶೋಷಿಸಿತು. ಏನುಮಾಡಲಿ ಎಂದು ದುಃಖವ

ನ್ನು ತಾಳಲಾರದೆ ಬಗೆಬಗೆಯಾಗಿ ಹಲುಬಿದನು. ॥೯॥

ಟಿಪ್ಪಣಿ:—(೧) ಮಾತಂ ತೋರದೆ-ಮಾತುದೋರದೆ (ಕ್ರಿ. ಸ) (೨) ಧಾತುವಿಂಕುಂದಿದೆಂ-ಧಾತುಗುಂದಿದೆಂ (ಕ್ರಿ. ಸ) (೩) ಅಸುರ-ರಾಕ್ಷಸರ, ಆರಾತಿ-ಶತ್ರು (ವಿಷ್ಣು) ಅಸುರ+ಅರಾತಿ-ಅಸುರಾರಾತಿ (ಸ. ದೀ. ಸಂ) (ಷ. ತ) (೪), ಇಸು, ಬಾಣಪ್ರಯೋಗಮಾಡುವಿಕೆ, ಎಂಬಧಾತುವಿಗೆ ಭಾವಾರ್ಥದಲ್ಲಿ, ಗೆ, ಪ್ರತ್ಯಯವುಸೇರಿ ಕೃದ್ಭಾವನಾಮವಾಗಿದೆ. ॥೯॥

ಮೂ॥ ನಾರಿಪನ್ನಗವೇಣಿಮದನನ। ಕೂರಲಗಿನಿಸುಗೆಯನುತಪ್ಪಿಸು।
ಬಾರೆಬಳಲಿಸಬೇಡಮಲಯಜಗಂಧಿತಕ್ಕೆಯೊಳು॥ ಸೇರಿಸೆನ್ನಯ
ತನುವವದನಕೆ। ಸೇರಿಸಧರಾಮೃತವನೆನಗುಪ। ಕಾರವನುಮಾಡೆಂ
ದುಹಲುಬಿದನಂದುನಿಜಸತಿಗೆ ॥೧೦॥

ಟೀಕೆ:—(೧) ಮಲಯಜಗಂಧಿ-ಚಂದನದಂತೆ ಸುವಾಸನೆಯುಳ್ಳ, (೨) ಪನ್ನಗವೇಣಿ-ಸರ್ಪದಂತೆ ಜಡೆಯುಳ್ಳ,ನಾರಿ-ಸ್ತ್ರೀಯೆ, ಮದನನ-ಮನ್ಮಥನ, (೩) ಕೂರಲಗಿನ-ಹರಿತವಾದ ಬಾಣದ, ಇಸುಗೆಯನು-ಏಟನ್ನು, ತಪ್ಪಿಸು, ಬಾರೆ, ಬಳಲಿಸಬೇಡ-ಆಯಾಸಪಡಿಸಬೇಡ, ಎನ್ನಯ-ನನ್ನ, ತನುವ-ದೇಹವನ್ನು, ತಕ್ಕೆಯೊಳು-ಹೊಂದಿಕೆಯಿಂದ, ಸೇರಿಸು-ಕೂಡಿಸು, (೪) ಅಧರಾಮೃತವಂ-ಅಧರದಲ್ಲಿರುವ ಅಮೃತವನ್ನು, ವದನಕೆ -ಬಾಯಿಗೆ, ಸೇರಿಸು, ಎನಗೆ-ನನಗೆ, ಉಪಕಾರವನು – ಅನುಕೂಲವನ್ನು, ಮಾಡು, ಎಂದು, ನಿಜಸತಿಗೆ-ತನ್ನಹೆಂಡತಿಗೆ, ಅಂದು-ಆಗ, ಬಲುಬಿದನು-ಗೋಳಾಡಿದನು. ॥೧೦॥

ತಾತ್ಪರ್ಯ:—ಎಲೈ ಪತ್ನಿಯೇ! ನಿನ್ನಗಲಿಕೆಯನ್ನು ಕಂಡು ಮನ್ಮಥನು ಕ್ರೂರವಾದ ಬಾಣಗಳಿಂದ ಹೊಡೆಯುತ್ತಿರುವನು, ಈ ಬಾಧೆಯನ್ನು ತಪ್ಪಿಸಲು ಬೇಗನೆ ನಿನ್ನಆಲಿಂಗನೆಯನ್ನು, ಅಧರಾಮೃತಪಾನವನ್ನು, ನನಗೆ ದೊರಕಿಸುವಂತೆ ಮಾಡಿ ನನ್ನನ್ನು ರಕ್ಷಿಸು,ಎಂದು ಆಕೆಯ ರೂಪವನ್ನು ಬಗೆಬಗೆಯಾಗಿ ವರ್ಣಿಸುತ್ತಾ ಹಂಬಲಿಸಿದನು. ॥೧೦॥

ಟಿಪ್ಪಣಿ:—(೧) ಮಲಯ-ಮಲಯಪರ್ವತದಲ್ಲಿ, ಜ – ಹುಟ್ಟಿದುದು (ಶ್ರೀಗಂಧ) ಮಲಯಜದಂತೆ ಗಂಧವುಳ್ಳವಳು- ಮಲಯಜಗಂಧಿ (ಬ. ವ್ರೀ) (೨) ಪನ್ನಗ-ಸರ್ಪದಂತೆ, ವೇಣಿ-ಜಡೆಯುಳ್ಳವಳು (ಆನ) (ಬ. ವ್ರೀ) (೩) ಕೂರಿತ್ತು ಅಲಗು-ಕೂರಲಗು (ವಿ. ಪೂರ್ವ.

ಕ) (೪) ಅಥವಾ ಅಮೃತ-ಅಥವಾಮೃತ (ಅವ. ಪೂರ್ವ. ಕ) ಅಮೃತಕ್ಕೆ (ದ್ವ) ಅಮರ್ದು. ||೧೦||

ಮೂ|| ವಿಕಳಮತಿವಾಲಾಖ್ಯಕೇಳಿದ | ಪಕಪಕನೆನಗುತೆಂದನೆಲೆಬಾ|
ಹುಕನೆ ಹಲುಬುವದೇನು ಕಂತೆಗೆ ತಕ್ಕ ಬೊಂತೆಯನು|| ಅಕಟನೀ
ನತಿಚಲುವನೋ ಬಾ| ಲಕಿ ನಿನಗೆ ತಕ್ಕವಳೊಲೋಕಪ| ಮಕರಕೇ
ತನಮರುಳನೆಂದಪಹಾಸ್ಯಮಾಡಿದನು ||೧೧||

ಟೀಕೆ:—(೧) ವಿಕಳಮತಿ-ಅವಿವೇಕಿಯಾದ, (೨) ವಾಲಾಖ್ಯ-ವಾಲನೆಂಬುವನು, ಕೇಳಿದ-ನಳನ ಹಂಬಲಿಕೆಯನ್ನು ಕೇಳಿದನು, ಪಕಪಕನೆ-ಗಟ್ಟಿಯಾಗಿ, ನಗುತ-ನಗುತ್ತ, ಎಂದಂ-ಹೇಳಿದನು, ಎಲೆಬಾಹುಕನೆ, ಕಂತೆಗೆ-ಕುರೂಪಿಯಾದ ನಿನಗೆ, ತಕ್ಕ-ಸರಿಯಾದ, ಬೊಂತೆಯನು-ಕುತ್ಸಿತಳಾದ ಹೆಂಡತಿಯನ್ನು, ಹಲಬುವದೇನು-ಸ್ಮರಿಸಿ ಸಂಕಟ ಪಡುವುದೇಕೆ ? ನೀಂ-ನೀನು, ಅತಿಚಲುವನೋ - ಬಹುಸುಂದರನೋ ! ಬಾಲಕಿ-ಆ ನಿನ್ನ ಪತ್ನಿಯು, ನಿನಗೆ, ತಕ್ಕವಳೋ - ಅನುರೂಪಳೊ ! ಅಕಟ-ಅಯ್ಯೋ, ಲೋಕವ-ಪ್ರಪಂಚದಲ್ಲಿ, (೩) ಮಕರಕೇತನ-ಮನ್ಮಥನು, ಮರುಳಂ-ಹುಚ್ಚನು, ಎಂದು, ಅಪಹಾಸ್ಯಮಾಡಿದನು-ಪರಿಹಾಸ್ಯಮಾಡಿ ನಕ್ಕನು. ||೧೧||

ತಾತ್ಪರ್ಯ:— ಬಾಹುಕನ ಹಂಬಲಿಕೆಯನ್ನು ಅವಿವೇಕಿಯಾದ ವಾಲನೆಂಬುವನು ಕೇಳಿ ವಿಚಾರಶೂನ್ಯನಾಗಿ ಓಹೋ ನಿನ್ನ ಈ ಸೌಂದರ್ಯಕ್ಕೆ ತಕ್ಕವಳೇ ನಿನ್ನ ಹೆಂಡತಿಯು, ಇದಕ್ಕಾಗಿ ಕಳವಳವೇಕೆ? ನೀನು ಎಷ್ಟು ಚೆಲುವನೋ ನಿನಗೆ ಅನುರೂಪಳಾದ ನಿನ್ನ ಪತ್ನಿಯು ಎಂತಹ ಲಾವಣ್ಯವತಿಯೋ ಇಂತಹ ದಾಂಪತ್ಯದಲ್ಲಿ ಇಷ್ಟು ಮಮತೆಯನ್ನುಂಟುಮಾಡಿ ಹೀಗೆ ದುಃಖದಾಯಕನಾದ ಆ ಕಾಮನು ಹುಚ್ಚನಾಗಿರಬಹುದು ? ಎಂದು ಹಿಯ್ಯಾಳಿಸಿ ನಗುತ್ತಿದ್ದನು. ||೧೧||

ಟಿಪ್ಪಣಿ:—(೧) ವಿಕಳವಾದ ಮತಿಯುಳ್ಳವನಾವನೋ ಅವನು-ವಿಕಳಮತಿ (ಬ. ವ್ರೀ) (೨) ವಾಲನೆಂಬಾಖ್ಯೆಯಾರಿಗೋ ಅವನು- ವಾಲಾಖ್ಯ (ಬ. ವ್ರೀ) (೩) ಮಕರ-ಮೊಸಳೆಯು, ಕೇತನ-ಧ್ವಜವುಳ್ಳವನು (ಅವ) (ಬ. ವ್ರೀ) ||೧೧||

ಮೂ|| ಎಂದುಹಾಸ್ಯವನಾಡಿದವನೊಡ | ನೆಂದನಾಬಾಹುಕನು ಪೂರ್ವದೊ| ಳಂದು ಬ್ರಾಹ್ಮಣನೊಬ್ಬ ನಿಜಸತಿಯಲ್ಲಿಯೆ ನೊಂದನೆ|| ನೊಂ

ದುನುಡಿದನು ವಿರಹದಲಿತಾ। ನಿಂದುಕನಸಿಲಿಕಂಡಭ್ರಾಂತಿಯೊ|ಳೆಂ
ದೊಡದುತಪ್ಪೇನುಸತಿಸುತರಿಲ್ಲತನಗೆಂದ ‖೧೨‖

ಟೀಕೆ:—ಎಂದು-ಎಂಬದಾಗಿ, ಹಾಸ್ಯವನಾಡಿದ-ಅಪಹಾಸ್ಯವಮಾಡಿದ, ಅವನೊಡನೆ-ಆ ಪಾಲನಸಂಗಡ, ಆ ಬಾಹುಕನು, ಎಂದಂ-ಹೇಳಿದನು, ಪ್ರೂರ್ವದೊಳ್-ಹಿಂದೆ, ಅಂದು-ಒಂದಾನೊಂದು ಕಾಲದಲ್ಲಿ, ಬ್ರಾಹ್ಮಣನೊಬ್ಬ-ಒಬ್ಬ ಬ್ರಾಹ್ಮಣನು, (೧) ನಿಜಸತಿಯಲಿ-ತನ್ನ ಹೆಂಡತಿಯು ವಿಷಯದಲ್ಲಿ, ಎನ್ನೊಡನೆ-ನನ್ನಸಂಗಡ, ವಿರಹದಲಿ – ವಿಯೋಗದಿಂದ, ನೊಂದು-ವ್ಯಥೆಪಟ್ಟು, ನುಡಿದನು-ಹೇಳಿದನು, ತಾಂ - ನಾನು, ಇಂದು-ಈಗ, ಕನಸಿಲಿ-ಸ್ವಪ್ನದಲ್ಲಿ, ಕಂಡ-ನೋಡಿದ, ಭ್ರಾಂತಿಯೊಳು-ಭ್ರಮೆಯಿಂದ, ಎಂದೊಡೆ-ಹಲುಬಿದರೆ, ಅದು, ತಪ್ಪೇನು? ತನಗೆ-ನನಗ, (೨) ಸತಿಸುತರ್-ಹೆಂಡಿರುಮಕ್ಕಳು, ಇಲ್ಲ, ಎಂದ ‖೧೨‖

ತಾತ್ಪರ್ಯ:—ಈ ಪ್ರಕಾರವಾಗಿ ಹಾಸ್ಯಮಾಡಿದ ತನ್ನ ಸ್ನೇಹಿತನನ್ನು ನೋಡಿ, ಎಲೈ ಮಿತ್ರನೇ ! ಬಹುದಿನಗಳಹಿಂದೆ ಯಾವನೋ ಒಬ್ಬ ಬ್ರಾಹ್ಮಣನು ತನ್ನ ಹೆಂಡತಿಯ ವಿಯೋಗವ್ಯಥೆಯನ್ನು ನನ್ನೊಡನೆ ಹೇಳಿರಲು, ಅದನ್ನು ನಾನು ಕೇಳಿದ್ದುದರಿಂದ ಮನೋಗತವಾದ ಆ ವಿಷಯವು ಸ್ವಪ್ನದಲ್ಲಿ ಪುನಃ ಪ್ರತ್ಯಕ್ಷವಾದುದು. ಅದನ್ನು ನಾನು ಭ್ರಾಂತಿಯಿಂದ ಜಾಗ್ರದವಸ್ಥೆಯಲ್ಲಿ ನಡೆದುದೆಂದು ಭಾವಿಸಿ ಹೀಗೆ ಕಳವಳಿಸಿದೆನು, ತಪ್ಪೇನು ? ನನಗೆ ಹೆಂಡತಿಯೂ ಇಲ್ಲ, ಮಕ್ಕಳೂ ಇಲ್ಲ, ಎಂದು ಹೇಳಿದನು. ‖೧೨‖

ಟಿಪ್ಪಣಿ:—(೧) ನಿಜಳಾದಸತಿ-ನಿಜಸತಿ (ವಿ. ಪ್ರೂರ್ವ. ಕ) ವಿಷಯಾರ್ಥದ ಸಪ್ತಮಿ, (೨) ಸತಿಯೂ ಸುತನೂ – ಸತಿಸುತರ್, (ದ್ವಂದ್ವ) ‖೧೨‖

ಮೂ॥ ಅರಸಕೇಳಾಪುರದೊಳೊಬ್ಬರಿ।ಗರಿಯುದಂದದಿನಳನಿರಲುಭೂ
ಸುರರಮತದಲಿಕೇಳ್ದುಭೀಮನೃಪಾಲನೀಸದನ ‖ ಧರೆಯನೆಲ್ಲವ
ಜೂಜಿನಲಿಪು। ಷ್ಕರಗೆಸೋತುನೃಪಾಲನಡವಿಗೆ । ತೆರಳಿದನುಸತಿ
ಸಹಿತಲೆನೆಹೊರಳಿದನುಶೋಕದಲಿ ‖೧೩‖

ಟೀಕೆ:—ಅರಸ-ಧರ್ಮರಾಜನೇ, ಕೇಳ್-ಕೇಳು, (೧) ಆಪುರದೊಳ್-ಆ ಪಟ್ಟಣದಲ್ಲಿ, ಒಬ್ಬರಿಗೆ- ಯಾರಿಗೂ, ಅರಿಯದಂದದಿ – ತಿಳಿಯದಂತೆ, ನಳಂ-ನಳರಾಜನು, ಇರಲು, (೨) ಭೀಮನೃಪಾಲಂ-ಭೀಮ

ರಾಜನು, ಈ ಕದನ-ಈ ಸಮಾಚಾರವನ್ನು, ಭೂಸುರರ- ಬ್ರಾಹ್ಮಣ ರ, ಮತದಲಿ-ಅಭಿಪ್ರಾಯದಿಂದ, ಕೇಳ್ದು-ಕೇಳಿ, ನೃಪಾಲಂ - ನಳನು, ಜೂಜಿನಲಿ-ದ್ಯೂತದಿಂದ, ಪುಷ್ಕರಗೆ-ಪುಷ್ಕರನೆಂಬುವನಿಗೆ, ಧರೆಯನೆಲ್ಲ ವ-ಭೂಮಿಯೆಲ್ಲವನ್ನು, ಸೋತು, ಸತಿಸಹಿತಲಿ-ಹೆಂಡತಿಯೊಡನೆ, ಅಡ ವಿಗೆ-ಕಾಡಿಗೆ, ತೆರಳಿದಂ-ಹೋದನು, ಎನೆ-ಎಂದುಹೇಳಲು, ಶೋಕದ ಲಿ-ದುಃಖದಿಂದ, ಹೊರಳಿದನು-ಹೊರಳಾಡಿದನು. ॥೧೩॥

ತಾತ್ಪರ್ಯ:—ಈರೀತಿಯಾಗಿ ನಳನು ಚೈದ್ಯಪತ್ತನದಲ್ಲಿ ಯಾರಿ ಗೂ ತಿಳಿಯದಂತೆ ಇರುತ್ತಿರಲು, ಭೀಮರಾಜನು ಈ ಸಮಾಚಾರವನ್ನು ತಿಳಿದು ಬ್ರಾಹ್ಮಣರನ್ನು ಪ್ರಶ್ನೆಮಾಡಲು ಅವರು ಅಯ್ಯಾ! "ನಳನು ಪು ಷ್ಕರನೆಂಬುವನಿಗೆ ರಾಜ್ಯವನ್ನು ದ್ಯೂತದಲ್ಲಿ ಸೋತು ದಮಯಂತಿಯೊ ಡನೆ ವನವಾಸಕ್ಕೆ ತೆರಳಿದನು" ಎಂದು ಹೇಳಲು, ಬಹು ಚಿಂತಾಕ್ರಾಂತ ನಾಗಿ ಗೋಳಾಡಿದನು. ॥೧೩॥

ಟಿಪ್ಪಣಿ:— (೧) ಅದುಪುರ-ಆಪುರ (ಗಮಕ) (೨) ಭೀಮನೆಂ ಬ ನೃಪಾಲನು-ಭೀಮನೃಪಾಲನು (ಸಂ. ಪೂರ್ವ. ಕ) ॥೧೩॥

ಪ॥ ಹಾಮಗಳೆದಮಯಂತಿನಿಷಧನ । ನಾಮವನುಕೈವಿಡಿದು ಬಾ
ಳುವ। ನೇಮವನುಬಿಸುಟಡವಿಗೈಸಿತೆವಿಧಿವಿಕರ್ಮಫಲ॥ ಭೀಮನೃ
ಪನುದರದಲಿಜನಿಸಿವಿ। ರಾಮವಾಯಿತೆನಿನ್ನ ಸಿರಿಮುಖ । ತಾಮರಸ
ವನುಕಾಣೆತೋರೆಂದರಸಹಲುಬಿದನು ॥೧೪॥

ಟೀಕೆ:—ಮಗಳೆ, ದಮಯಂತಿ, ಹಾ-ಅಯ್ಯೋ, ನಿಷಧನ- ನಳ ನ, ನಾಮವನು-ಹೆಸರನ್ನು, (೧) ಕೈವಿಡಿದು-ಗ್ರಹಿಸಿ, ಬಾಳುವ-ಬದು ಕುವ, ನೇಮವನು-ವಿಧಿಯನ್ನು, ಬಿಸುಟು-ತಪ್ಪಿಸಿ, ವಿಧಿ-ಅದೃಷ್ಟದ, ಫಲ-ಪ್ರಯೋಜನವು, ಅಡವಿಗೈಸಿತೆ- ಕಾಡುಪಾಲು ಮಾಡಿತೇ ! ಭೀಮ ನೃಪನ-ಭೀಮರಾಜನ, ಉದರದಲಿ-ಹೊಟ್ಟೆಯಲ್ಲಿ, ಜನಿಸಿ-ಹುಟ್ಟಿ, ವಿ ರಾಮವಾಯಿತೆ-ವ್ಯರ್ಥವಾಯಿತೆ, ನಿನ್ನ, (೨) ಸಿರಿಮುಖತಾಮರಸವ ನು-ನಿನ್ನ ಮುಖಕಮಲವನ್ನು, ಕಾಣೆ-ನೋಡಲಿಲ್ಲ, ತೋರು-ಕಾಣಿಸು, ಎಂದು, ಅರಸ-ದೊರೆಯು, ಹಲುಬಿದನು-ಹಂಬಲಿಸಿದನು. ॥೧೪॥

ತಾತ್ಪರ್ಯ:—ಹಾ ಪುತ್ರೀ ದಮಯಂತೀ ! ನಳರಾಜನ ಹೆಸರನ್ನು ಹೇಳಿಕೊಂಡು ಬದುಕಬೇಕೆಂಬ ನ್ಯಾಯವಾದ ರೀತಿಯು ದುರ್ವಿಧಿವಿಲಾ ಸದಿಂದ ತಪ್ಪಿ ವನವಾಸವು ಪ್ರಾಪ್ತವಾಯ್ತೇ ! ನನ್ನ ಹೊಟ್ಟೆಯಲ್ಲಿ ನೀ

ನು ಹುಟ್ಟಿದುದು ವ್ಯರ್ಥವಾಯಿತೇ ! ನಿನ್ನ ಮುಖದರ್ಶನವು ದುರ್ಲಭವಾಗಿದೆಯಲ್ಲಾ, ಬಂದು ಮುಖವನ್ನಾದರೂ ತೋರಿಸಬಾರದೇ. ॥೧೪॥

ಟಿಪ್ಪಣಿ:—(೧) ಕೈ+ಪಿಡಿದು-ಕೈ ವಿಡಿದು, ಪಕಾರಕ್ಕೆ ವಕಾರಾದೇಶ, ಕನ್ನಡ ವ್ಯಂಜನಸಂಧಿ, ಕೈಯ್ಯಂ, ಪಿಡಿದು- ಕೈ ವಿಡಿದು (ಕ್ರಿ. ಸ) (೨) ಸಿರಿವುಳ್ಳ ಮುಖ-ಸಿರಿಮುಖ (ವಿ. ಪೂರ್ವ. ಕ) ಸಿರಿಮುಖವೇ ತಾಮರಸ-ಸಿರಿಮುಖ ತಾಮರಸ (ಅವ. ಪೂರ್ವ. ಕ) ॥೧೪॥

ಮೂ॥ ಮಗಳೆಮೋಹದಸುತರನಾರಿಗೆ। ತೆಗೆದುಬಿಸುಟಿನಿರಾಶೆಯುಲಿಯೊ।
ಬಗೆಗೆತಂದುದೆವಿಧಿಯುನಿನ್ನನುಹರಮಹಾದೇವ॥ ಹೊಗಲುಬಹುದೇಕಾನನದೊಳಿಹ। ಮೃಗಗಳಿಂದೇನಹಳೊಪತಿತಾ। ನಗಲಿದನೊ
ಭೇತಾಳನುಂಗಿತೊಯೆನುತಹಲುಬಿದನು ॥೧೫॥

ಟೀಕೆ:— ಮಗಳೆ, ಮೋಹದ- ಪ್ರೀತಿಪಾತ್ರರಾದ, ಸುತರಂ-ಮಕ್ಕಳನ್ನು, ಆರಿಗೆ-ಯಾರಿಗೆ, ನಿರಾಶೆಯುಲಿ-ಮಮತೆಯನ್ನು ತೊರೆದು, ತೆಗೆದುಬಿಸುಟಿ-ಕಳುಹಿಸಿಕೊಟ್ಟೆ, ನಿನ್ನನ್ನು -ನಿನ್ನನ್ನು, ವಿಧಿಯು-ದೈವವು (೧) ಈ ಬಗೆಗೆ-ಈ ಸ್ಥಿತಿಗೆ. ತಂದುದೆ-ತಂದುಬಿಟ್ಟಿತೇ ! ಹರಮಹಾದೇವ-ಪರಮೇಶ್ವರನೇ ! ಹೊಗಲುಬಹುದೇ-ವನವಾಸ ಮಾಡಬಹುದೇ ! ಕಾನನದೊಳ್- ಅರಣ್ಯದಲ್ಲಿ, ಇಹ-ಇರುವ (೨) ಮೃಗಗಳಿಂದ-ದುಷ್ಟಮೃಗಗಳಿಂದ, ಏನಹಳೊ-ಏನಾಗುವಳೊ, ಪತಿ-ಗಂಡನು, ತಾಂ-ತಾನು, ಅಗಲಿದನೊ-ವಿಯೋಗಪಡೆದನೋ, ಭೇತಾಳ ಭೇತಾಳವು, ನುಂಗಿತೊ-ತಿಂದಿತೊ, ಎನುತ, ಹಲುಬಿದನು-ಕಳವಳಗೊಂಡನು ॥೧೫॥

ತಾತ್ಪರ್ಯ:—ಎಲೈಮಗಳೆ ಪರಮ ಪ್ರೇಮಾಸ್ಪದರಾದ ಆ ನಿನ್ನ ಮಕ್ಕಳನ್ನು ತೊರೆದು ಹೇಗೆಯೊರವಶಮಾಡಿದೆ ! ವನವಾಸಮಾಡುವಂತೆ ನಿನಗೆ ದುರ್ದೈವವು ಹೀಗೆಮಾಡಬಹುದೇ ! ನನ್ನ ಪ್ರೇಮಪುತ್ರಿಯನ್ನು ಅರಣ್ಯದಲ್ಲಿ ಕ್ರೂರಸತ್ವಗಳು ಏನಮಾಡಿದುವೋ ! ಪತಿಯು ಅಗಲಿಹೋದನೋ ! ಏನೋ ! ಭೇತಾಳಾದಿಗಣಗಳು ಮುರಿದುಹಾಕಿದುವೋ ಏನೋ ! ಏನಾದಳೋಕಾಣೆನು ಎಂದು ವ್ಯಥೆಪಟ್ಟನು. ॥೧೫॥

ಟಿಪ್ಪಣಿ:— ಇದುಬಗೆ-ಈಬಗೆ (ಗಮಕ) (೨) (ದ್ವ) ಮಿಗ ॥

ಮೂ॥ ಬಗವರುಹನಬೊಳುವಿಳಿಸುಖವನು। ಪಡೆಯುಲೊಲ್ಲದೆಬಂದು
ನೀನೀಕ್ರೋಡವಿದಳಿಯು ಪರದಲಿ ಮಿಗೆಜನಿಸುವರೆಎಲೆತಾಯೆ॥ ಗಿಡಮು

ರಗಳಾರಣ್ಯದಲಿತನು | ವಿಡಿದುಸ್ಯೈರಿಪುದೆಂತುಮಗಳೇ|ಸುಡುತನು
ವನಿದನೆಂದುಮರುಗಿದಳವಳನಿಜಜನನಿ ||೧೬||

ಟೀಕೆ:— ಎಲೆತಾಯೆ-ಅಮ್ಮಾ, ಬಡವರ-ದರಿದ್ರರ, ಉದರದಲಿ ಹೊಟ್ಟೆಯಲ್ಲಿ, ಉದಿಸಿ-ಹುಟ್ಟಿ, ಸುಖವನು-ಸೌಖ್ಯವನ್ನು, ಪಡೆಯು-ಲೊಲ್ಲದೆ-ಹೊಂದುವುದನ್ನು ಬಿಟ್ಟು, ನೀಂ-ನೀನು, ಈ ಪ್ರೌಢವಿಪತಿಯ ರಾಜನ, ಉದರದಲಿ-ಹೊಟ್ಟೆಯಲ್ಲಿ, ಬಂದು-ಸೇರಿ, ಮಿಗೆ-ಮೇಲಾಗಿ, ಜನಿಸುವರೆ-ಹುಟ್ಟಬಹುದೇ, ಮಗಳೇ (೧) ಗಿಡಮರಗಳ-ಗಿಡಮರಗಳಿ ಗಾಶ್ರಯವಾದ, ಆರಣ್ಯದಲ್ಲಿ-ಕಾಡಿನಲ್ಲಿ (೨) ತನುವ-ದೇಹವನ್ನು ಇಡಿದು-ಧರಿಸಿಕೊಂಡು, ಸ್ಯೈರಿಪುದು-ತಡೆಯುವುದು, ಎಂತು-ಹೇಗೆ ! ಇದಂ-ಈ, ತನುವಂ-ನನ್ನದೇಹವನ್ನು, ಸುಡು-ಸುಟ್ಟುಹಾಕು, ಎಂದು, ಅವಳ-ಆ ದಮಯಂತಿಯ, ನಿಜ ಜನನಿ-ತಾಯಿಯು, ಮರುಗಿದಳು-ದುಃಖಪಟ್ಟಳು ||೧೬||

ತಾತ್ಪರ್ಯ:—ಅಮ್ಮಾ ದಮಯಂತೀ ! ಎಲ್ಲಿಯಾದರೂ ಬಡವರ ಹೊಟ್ಟೆಯಲ್ಲಿ ನೀನು ಹುಟ್ಟಿದ್ದರೆ ಸುಖವಾಗಿರಬಹುದಾಗಿತ್ತು. ಇಂತಹರಾಜನ ಹೊಟ್ಟೆಯಲ್ಲಿ ಹುಟ್ಟಿದುದರಿಂದ ನಿನಗೆ ಈ ಕಷ್ಟವು ಪ್ರಾಪ್ತವಾಯಿತು ಗಿಡಮರಗಳಿರುವುದಕ್ಕೆ ಯೋಗ್ಯವಾದ ಕಾಡಿನಲ್ಲಿ ಸುಕುಮಾರಿಯಾದ ನೀನು ಬದುಕಿರುವದುಹೇಗೆ! ಎಲೈಮಗಳೆ ನಿನಗೊದಗಿರುವ ಈವಿಪತ್ತನ್ನು ಕಂಡೂ ಜೀವಿಸಿರುವ ನನ್ನ ದೇಹವನ್ನು ಸುಡಬೇಕು, ಎಂದು ಭೀಮರಾಜನ ಹೆಂಡತಿಯು ವ್ಯಥೆಪಟ್ಟಳು ||೧೬||

ಟಿಪ್ಪಣಿ:— (೧) ಗಿಡವ್ರೂಮರವ್ರೂ-ಗಿಡಮರಗಳು (ಇತರೇತರ-ದ್ವಂದ್ವ) ಇಲ್ಲಿ ಷಷ್ಠೀವಿಭಕ್ತಿಯು ಆಶ್ರಯಾಶ್ರಯಿ ಭಾವಸಂಬಂಧದಲ್ಲಿ ಬಂತು. (೨) ತನು-ಸ್ವಲ್ಪ, ದೇಹ, ತಂಪಾಗಿರುವುದು, (ನಾನಾ) ||೧೬||

ಮೂ|| ಸತಿಪತಿಗಳೀಪರಿಯಶೋಕೋ | ನ್ನತಿಯಸ್ಯೈರಿಸಲಾರದಾ
ವಮಾ | ರುತನಸಖನೊಳ್ಪುಗುವೆವೆಂದುರವಣಿಸಿನಡೆತರಲು || ಕ್ಷಿ
ತಿಪಕೇಳಿಂತವನುಬರುತಿರೆ |ಮತಿಯುತನೆಚಿಂತೆಯನುಬಿಡುಪತಿ|
ವ್ರತೆಗೆಹಾನಿಯೆಸುಖದೊಳಿಪಳೆಂದುದುನಭೋವಚನ ||೧೭||

ಟೀಕೆ:— ಸತಿಪತಿಗಳ್-ಗಂಡಹೆಂಡಿರು, ಈ ಪರಿಯ-ಈರೀತಿಯಾದ (೧) ಶೋಕೋನ್ನತಿಯ-ದುಃಖಾತಿರೇಕವನ್ನು, ಸ್ಯೈರಿಸಲಾರದೆ-

ತಾಳಲಾರದೆ, ಅಮಾರುತನ-ವಾಯುವಿನ, ಸಖನೊಳ್ - ಮಿತ್ರನಲ್ಲಿ, ಪುಗುವೆವೆಂದು-ಬೀಳುತ್ತೇವೆಂದು, ಉರವಣಿಸಿ-ಕೋಪಿಸಿ, ನಡೆತರಲು-ಬರಲು, ಕ್ಷಿಪತಿ-ದೊರೆಯೇ, ಕೇಳ್-ಕೇಳು, ಇಂತು-ಹೀಗೆ, ಅವನು-ಭೀಮರಾಜನು, ಬರುತಿರೆ-ಬರುತ್ತಿರಲು(೨) ಮತಿಯುತನೆ-ಬುದ್ಧಿಶಾಲಿಯಾದದೊರೆಯೆಚಿಂತೆಯನು-ಆಲೋಚನೆಯನ್ನು, ಬಿಡು,ಪತಿವ್ರತೆಗೆ, ಹಾನಿಯೆ-ಕೊರತೆಯೆ, ಸುಖದೊಳ್-ಸೌಖ್ಯವಾಗಿ, ಇಪಳ್-ಇರುವಳು, (ಎಂಬದಾಗಿ) (೩) ನಭೋವಚನ-ಆಕಾಶವಾಣಿಯು, ಎಂದುದು ಹೇಳಿತು ||೧೭||

ತಾತ್ಪರ್ಯ:— ಈಪ್ರಕಾರವಾಗಿ ಅರಸನೂರಾಣಿಯೂ ಪುತ್ರೀ ವಿಯೋಗವನ್ನು ಸಹಿಸಲಾರದೆ ಪ್ರಾಣತ್ಯಾಗಮಾಡಿಕೊಳ್ಳುವುದಕ್ಕಾಗಿ ಅಗ್ನಿಪ್ರವೇಶಮಾಡುವೆವೆಂದು ಬರುತ್ತಿರಲು, ದೊರೆಯನ್ನು ಕುರಿತು "ಅಯ್ಯಾ ದೊರೆಯೇ ನೀನು ಅವಿವೇಕಿಯೇ! ಏಕೆ ಹೀಗೆ ಚಿಂತಿಸುವಿ! ಪತಿವ್ರತೆಯಾದ ಆ ದಮಯಂತಿಗೆ ಕೇಡಾಗುವುದುಂಟೇ! ಸುಖವಾಗಿರುವಳು, ವ್ಯಥೆಯನ್ನು ಬಿಡು," ಎಂದು ಅಶರೀರವಾಕ್ಯ ಕೇಳಬಂತು. ||೧೭||

ಟಿಪ್ಪಣಿ:—(೧) ಶೋಕ+ಉನ್ನತಿ-ಶೋಕೋನ್ನತಿ (ಗುಣ) ಶೋಕದ ಉನ್ನತಿ-ಶೋಕೋನ್ನತಿ (ಷ. ತ) ಮತಿಯಿಂದ ಯುತ-ಮತಿಯುತ (ತೃ. ತ) ||೧೭||

ಮೂ|| ಎಂದವಾಕ್ಯವಕೇಳಿಭೂಸುರ। ವೃಂದದಲಿಮುನಿಯೊರ್ವನು
ಡಿದನು। ಸಂದಪರಮಾನಂದಜ್ಯೋತಿರ್ಮಿಲನದವಾಕ್ಯವಿದು॥ ಇಂ
ದುಮುಖಿದಮಯಂತಿನಳನೃಪ। ರೆಂದಿಗೂಸುಕ್ಷೇಮಿಗಳುನೀ।ವಿಂ
ದುಕಳುಹಿಸಿಚರರಭೇದಿಸಿರೆಂದನಾಮುನಿಪ ||೧೮||

ಟೀಕೆ:—ಎಂದ-ಎಂಬದಾಗಿ ಹೇಳಿದ, ವಾಕ್ಯವನು-ಮಾತನ್ನು, ಕೇಳಿ, ಭೂಸುರ ವೃಂದದಲಿ-ಬ್ರಾಹ್ಮಣರ ಗುಂಪಿನಲ್ಲಿ, ಒರ್ವ-ಒಬ್ಬ, ಮುನಿ-ಋಷಿಯು, ನುಡಿದನು-ಹೇಳಿದನು, ಏನಂದರೆ, (೧) ಇಂದುಮುಖಿ ದಮಯಂತಿ ನಳನೃಪರ್- ಚಂದ್ರವದನೆಯಾದ ದಮಯಂತಿಯೂ, ಮತ್ತು ನಳನೂ, ಎಂದಿಗೂ-ಯಾವಾಗಲೂ, ಸುಕ್ಷೇಮಿಗಳು - ಕುಶಲದಿಂದಿರುವರು, ನೀವ್-ನೀವು, ಇಂದು-ಈಗ, ಚರರ-ದೂತರನ್ನು, ಕಳುಹಿಸಿ, ಭೇದಿಸಿರಿ-ಹುಡುಕಿಸಿರಿ, ಇದು, ಸಂದ-ಸೇರಿದ, (೨) ಪರಮಾ

ನಂದ-ಅಂತರಾನಂದದ, ಜ್ಯೋತಿರ್ಮನದ-ಬೆಳಕುಳ್ಳ ಮನಸ್ಸಿನಿಂದ ತಿಳಿದ, ವಾಕ್ಯವು-ಮಾತು, (ಎಂಬದಾಗಿ) ಆ ಮುನಿಪ-ಋಷಿಶ್ರೇಷ್ಠನು, ಎಂದನು. ॥೧೮॥

ತಾತ್ಪರ್ಯ:—ಈ ಆಕಾಶವಾಣಿಯನ್ನು ಕೇಳಿ ಬ್ರಾಹ್ಮಣಸಭೆಯಲ್ಲಿದ್ದ ಒಬ್ಬ ಮುನೀಶ್ವರನು ದೊರೆಗೆ ಇಂತೆಂದನು, “ದಮಯಂತಿಯೂ ನಳನೂ ಯಾವಾಗಲೂ ಕ್ಷೇಮದಿಂದಿರುವರಲ್ಲದೆ ಕೇಡಿಗೊಳಗಾಗರು, ಚಾರರಿಂದ ವಿಚಾರಿಸಿರಿ, ಜ್ಞಾನದೃಷ್ಟಿಯಿಂದ ತಿಳಿದು ನಾನು ಹೇಳಿದ್ದೇನೆ, ಇದು ಸತ್ಯವು” ಎಂದನು. ॥೧೮॥

ಟಿಪ್ಪಣಿ:—(೧) ಇಂದು-ಚಂದ್ರನಂತೆ, ಮುಖಿ-ಮುಖವುಳ್ಳವಳು, (ಅವ) (ಬ. ವ್ರೀ) ಇಂದು ಮುಖಿಯಾದದಮಯಂತಿ (ವಿ. ಪೂರ್ವ. ಕ) ಇಂದು ಮುಖಿ ದಮಯಂತಿಯೂ ನಳನೂ-ಇಂದುಮುಖಿ ದಮಯಂತಿ ನಳರ್ (ದ್ವಂದ್ವ) (೨) ಪರಮವಾದ ಆನಂದ-ಪರಮಾನಂದ (ವಿ. ಪೂರ್ವ. ಕ) ಪರಮಾನಂದದ ಜ್ಯೋತಿ-ಪರಮಾನಂದ ಜ್ಯೋತಿ (ಷ. ತ) ಪರಮಾನಂದ ಜ್ಯೋತಿಯ ಮನ - ಪರಮಾನಂದ ಜ್ಯೋತಿರ್ಮನ (ಷ. ತ) ॥೧೮॥

ಮೂ॥ ಎನಲುಮುನಿಪತಿಮಾತಿನೊಳಗರ | ಮನೆಗೆಬಂದುವಿಶಾಲಚಿಂ
ತೆಯ|ಮನದೊಳಿರಲಿನನಿಳಿದನಸ್ತಾಂಬುಧಿಗೆವಿನಯದಲಿ॥ ಜನಪ
ನಾರಾತ್ರಿಯಲಿನಿದ್ರಾಂ| ಗನೆಯನುಳಿದಿರೆಪೂರ್ವಶೈಲದಿ | ದಿನಪ
ತಲೆದೋರಿದನುಹರಿದುದುರಜನಿಯಾಕ್ಷಣಕೆ ॥೧೯॥

ಟೀಕೆ:—ಮುನಿಪತಿ-ಋಷಿಶ್ರೇಷ್ಠನು, ಎನಲು-ಹೇಳಲು, ಮಾತಿನೊಳಗೆ-ಆ ಮಾತಿನಲ್ಲಿ, ಅರಮನೆಗೆ, ಬಂದು, (೧) ವಿಶಾಲಚಿಂತೆಯ-ಹೆಚ್ಚಾದ ಆಲೋಚನೆಯುಳ್ಳ, ಮನದೊಳ್-ಮನಸ್ಸಿನಿಂದ, ಇರಲ್-ಇರಲು, ಇನಂ-ಸೂರ್ಯನು, ವಿನಯದಲಿ-ಸೌಮ್ಯನಾಗಿ, (೨) ಅಸ್ತಾಂಬುಧಿಗೆ-ಅಸ್ತಮಯ ಸಮುದ್ರಕ್ಕೆ, ಇಳಿದಂ-ಮುಳುಗಿದನು, ಜನಪಂ-ದೊರೆಯು, ಆ ರಾತ್ರಿಯಲಿ, (೩) ನಿದ್ರಾಂಗನೆಯಂ - ನಿದ್ರೆಯೆಂಬ ಸ್ತ್ರೀಯನ್ನು, ಉಳಿದು-ಬಿಟ್ಟು, ಇರೆ-ಇರಲು, ದಿನಪಂ-ಸೂರ್ಯನು, ಪೂರ್ವಶೈಲದಿ-ಉದಯ ಪರ್ವತದಲ್ಲಿ, ತಲೆದೋರಿದನು-ಕಾಣಿಸಿದನು, ರಜನಿ-ರಾತ್ರಿಯು, ಆಕ್ಷಣಕೆ-ಆಕಾಲಕ್ಕೆ, ಹರಿದುದು-ಹೋಯಿತು. ॥೧೯॥

ತಾತ್ಪರ್ಯ:—ಭೀಮರಾಜನು ಆ ಮಾತನ್ನು ಕೇಳಿ ಮನೋವ್ಯಥೆ

ಯಿಂದ ಅರಮನೆಗೆ ಬಂದನು, ಅಷ್ಟರಲ್ಲಿ ಸಂಜೆಯಾಯ್ತು, ರಾತ್ರಿಯಲ್ಲಿ ನಿದ್ರೆಯಿಲ್ಲದೆ ವ್ಯಸನದಿಂದ ಕಳೆಯಲು, ಸೂರ್ಯನು ಉದಯಾಚಲ ಶಿಖರವನ್ನಲಂಕರಿಸಲು, ಬೆಳಗಾಯಿತು, ||೧೯||

ಟಿಪ್ಪಣಿ:—(೧) ವಿಶಾಲವಾದ ಚಿಂತೆ-ವಿಶಾಲಚಿಂತೆ(ವಿ. ಪೂರ್ವ. ಕ) ಅಸ್ತವೆಂಬ ಅಂಬುಧಿ-ಅಸ್ತಾಂಬುಧಿ (ಸಂ, ಪೂರ್ವ. ಕ) (೩) ನಿದ್ರೆಯೇ ಅಂಗನೆ-ನಿದ್ರಾಂಗನೆ (ಅವ. ಪೂರ್ವ. ಕ) ||೧೯||

ಮೂ|| ಅರಸಕರಿಸಿದನಾಪ್ತರನುಭೂ | ಸುರರಿಗೆಂದನುನೀವುಕರುಣ
ದಿ| ಧರೆಯೊಳೆಲ್ಲಿಹಳೆನ್ನಸುತೆದಮಯಂತಿನಳನೃಪರ| ಇರಿಕೆಗಾಂ
ಬುದುಕಂಡುಕರೆತಂ| ದರಿಗೆಕೊಡುವೆನುಧರೆಯೊಳರ್ಧವ | ನಿರತ
ವೆಂದುಪಚರಿಸಿಕಳುಹಿದಭೀಮನೃಪನವರ ||೨೦||

ಟೀಕೆ:—ಅರಸ-ದೊರೆಯು, ಆಪ್ತರನು-ನಂಬಿಕೆಯುಳ್ಳವರನ್ನು, ಕರಸಿದನು-ಬರಮಾಡಿದನು, ಭೂಸುರರಿಗೆ - ಬ್ರಾಹ್ಮಣರಿಗೆ, ಎಂದನು, ನೀವು, ಕರುಣದಿ-ಕೃಪೆಯಿಂದ, ಧರೆಯೊಳ್-ಭೂಮಿಯಲ್ಲಿ, ಎನ್ನ-ನನ್ನ, ಸುತೆ-ಮಗಳು, ಎಲ್ಲಿಹಳು-ಎಲ್ಲಿರುವಳು, ದಮಯಂತಿ ನಳನೃಪರ-ನಳದಮಯಂತಿಯರನ್ನು, (೧) ಇರಿಕೆ ಗಾಂಬುದು-ಸ್ಥಿತಿಯನ್ನು ಕಾಣುವುದು, ಕಂಡು-ನೋಡಿ, ಕರೆತಂದವರಿಗೆ-ಕರೆದುಕೊಂಡು ಬಂದವರಿಗೆ, ಧರೆಯೊಳ್-(೨) ಭೂಮಿಯಲ್ಲಿ, ಅರ್ಧವ-ಅರ್ಧಭಾಗವನ್ನು, ನಿರತವು - ನಿಶ್ಚಯವು, ಎಂದು, ಉಪಚರಿಸಿ - ಉಪಚಾರಮಾಡಿ, ಭೀಮನೃಪಂ - ಭೀಮರಾಜನು, ಅವರ - ಆ ಬ್ರಾಹ್ಮಣರನ್ನು, ಕಳುಹಿದಂ-ಕಳುಹಿಸಿದನು. ||೨೦||

ತಾತ್ಪರ್ಯ:—ಕೂಡಲೆ ದೊರೆಯು ಯೋಗ್ಯರಾದ ಬ್ರಾಹ್ಮಣರನ್ನು ಕರೆಸಿಸಿ, ನೀವು ದಯವಿಟ್ಟು ನನ್ನ ಮಗಳ ನೆಲೆಯನ್ನು ಗೊತ್ತುಮಾಡಿ, ನಳ ದಮಯಂತಿಯ ಠಿಕಾಣಿಕೆಯನ್ನು ತಿಳಿದು ಬಂದು ಹೇಳಿದರೆ ಕಂಡು ಹಿಡಿದವರಿಗೆ ನನ್ನ ಅರ್ಧರಾಜ್ಯವನ್ನು ಕೊಡುವೆನು, ಎಂದು ಹೇಳಿ ಆ ಬ್ರಾಹ್ಮಣರನ್ನು ಕಳುಹಿಸಿ ಕೊಟ್ಟನು, ||೨೦||

ಟಿಪ್ಪಣಿ:—(೧) ಇರಿಕೆಯಂ ಕಾಂಬುದು-ಇರಿಕೆಗಾಂಬುದು (ಕ್ರಿ. ಸ) (ಕ. ವ್ಯಂ. ಸಂ) ಕಕಾರಕ್ಕೆ ಗಕಾರಾದೇಶ ಬಂತು, (೨) ಭೂಮಿಗೆ (ದ್ಬ) ಬುವಿ, ||೨೦||

ಮೂ|| ಪರಿಪರರಸಾಳುಗಳುವಕ್ಕಿ ಮು| ಕರಧಿದಕ್ಷಿಣಪೂರ್ವಪಶ್ಚಿಮೋತ್ತರ |

ಕುರುನರೇಂದ್ರರಾಷ್ಟ್ರಪರಿಯಂತವನಿಪಾಲಕರ॥ ಪುರಗಳಲಿನ
ವವೀಧಿಗಳತ||ದ್ಗಿರಿಗಳಲಿನಾನಾದಿಗಂತದೊಳ್| ಅರಸಿಕಾಣದೆಮುಂದೆ
ನಡೆದರುಹಲವುದಿವಸದಲಿ ॥ ೨೧॥

ಟೀಕೆ:—ಅರಸಾಳುಗಳು-ರಾಜದೂತರು, ಪಶ್ಚಿಮ ಶರಧಿ- ಪಶ್ಚಿಮ ಸಮುದ್ರವೂ, ದಕ್ಷಿಣ ಪೂರ್ವದ, ಉತ್ತರ- ಉತ್ತರದಿಕ್ಕಿನಸಮುದ್ರವೂ, (೧) ಕುರು ನರೇಂದ್ರರ-ಕೌರವರಾಜರ, ರಾಷ್ಟ್ರಪರಿಯಂತ-ರಾಜ್ಯದವರಿಗೆ, ಅವನಿಪಾಲಕರ-ದೊರೆಗಳ, ಪುರಗಳಲಿ-ಪಟ್ಟಣಗಳಲ್ಲಿ, ನವ-ಹೊಸದಾದ, ವೀಧಿಗಳ-ಬೀದಿಗಳನ್ನೂ, (೨) ತದ್ಗಿರಿಗಳಲಿ-ಆದೇಶದ ಬೆಟ್ಟಗಳಲ್ಲಿಯೂ, ನಾನಾದಿಗಂತದೊಳ್ - ನಾನಾದಿಕ್ಕುಗಳ ಕೊನೆಯುವರಿಗೂ, ಅರಸಿ - ಹುಡುಕಿ, ಕಾಣದೆ, ಹಲವುದಿವಸದಲಿ - ಅನೇಕದಿನಗಳವರಿಗೂ, ಮುಂದೆ-ಮುಂದು ಮುಂದಕ್ಕೆ, ನಡೆದರು-ಹೋಗುತ್ತಿದ್ದರು. ॥೨೧॥

ತಾತ್ಪರ್ಯ:—ದೊರೆಯ ಅಪ್ಪಣೆಯುನ್ನು ಪಡೆದು ಬಹುಮಂದಿ ಸೇವಕರು ಚತುಸ್ಸಮುದ್ರಗಳ ಮಧ್ಯದಲ್ಲಿ ಎಲ್ಲಾ ದೇಶಗಳಲ್ಲಿಯೂ, ಆಯಾ ರಾಜಧಾನಿಗಳಲ್ಲಿಯೂ, ಪುರವೀಧಿಗಳಲ್ಲಿಯೂ, ಬೆಟ್ಟ ಗುಡ್ಡ, ಗವಿಗಳಲ್ಲಿಯೂ, ದಮಯಂತಿಯುನ್ನು ಹುಡುಕುತಾ ಎಲ್ಲಿಯೂ ಕಾಣದೆ ದೂರದೇಶಗಳಿಗೆ ಕ್ರಮವಾಗಿ ಪ್ರಯಾಣಮಾಡಿ ಸಾಗುತ್ತಿದ್ದರು. ॥೨೧॥

ಟಿಪ್ಪಣಿ:—(೧) ಕುರುಗಳೆಂಬ ನರೇಂದ್ರರು-ಕುರುನರೇಂದ್ರರು (ಸಂ. ಪೂರ್ವ. ಕ) ನರ+ಇಂದ್ರ-ನರೇಂದ್ರ (ಗುಣ) (೨) ತತ್+ಗಿರಿ-ತದ್ಗಿರಿ (ಜಶ್ತ್ವ) (ವಿ. ಪೂರ್ವ.ಕ) ॥೨೧॥

ಮೂ॥ ಪುರವಳಯವೀಧಿಗಳಮಧ್ಯದಿ|ನೆರೆದಸಭೆಯುಲಿಮಾರ್ಗದಲಿಸಂ|
ಚರಿಸುವವರನುಕಂಡುಕೇಳುತಬಂದರಲ್ಲಲ್ಲಿ ॥ ಇರವಕಾಣದೆಬಳಲಿ
ಚಿಂತಿಸಿ| ಮರುಗುತವನೀಸುರರುಭೇದಿಸು| ತಿರಲುಮೂವರುಬೇ
ರೆಹೊಕ್ಕರುಚೈದ್ಯನಗರಿಯನು ॥ ೨೨॥

ಟೀಕೆ:—(೧) ಪುರವಲಯ-ಪಟ್ಟಣದ ಪ್ರದೇಶದಲ್ಲಿಯೂ, ವೀಧಿಗಳ-ಬೀದಿಗಳ, ಮಧ್ಯದಿ-ಮಧ್ಯದಲ್ಲಿಯೂ, ನೆರೆದ-ಕೂಡಿರುವ, ಸಭೆಯುಲಿ-ಗುಂಪುಗಳಲ್ಲಿಯೂ, ಮಾರ್ಗದಲಿ-ದಾರಿಗಳಲ್ಲಿ, ಸಂಚರಿಸುವವರನು-ತಿರುಗಾಡುತ್ತಿರುವವರನ್ನು, ಕಂಡು, ಕೇಳುತ-ವಿಚಾರಿಸುತಾ, ಅಲ್ಲಲ್ಲಿ, ಬಂದರು, ಮೂವರು-ಮೂರುಮಂದಿ,ಅವನೀಸುರರು-ಬ್ರಾಹ್ಮಣರು,

ಇರವ-ಸ್ಥಿತಿಯನ್ನು ಕಾಣದೆ-ತಿಳಿಯದೆ, ಬಳಲಿ-ಆಯಾಸಪಟ್ಟು, ಚಿಂತಿಸಿ-ಆಲೋಚಿಸುತ್ತಾ, ಮರುಗುತ-ವ್ಯಸನಪಡುತ್ತಾ, ಭೇದಿಸುತಿರಲು-ಹುಡುಕುತ್ತಿರಲು, ಬೇರೆ-ಗುಂಪನ್ನು ಬಿಟ್ಟು, (೨) ಚೈದ್ಯನಗರಿಯನು-ಚೈದ್ಯಪುರವನ್ನು, ಹೊಕ್ಕರು-ಸೇರಿದರು. ॥೨॥

ತಾತ್ಪರ್ಯ:—ಇವರೆಲ್ಲರೂ ಬಹಳವಾಗಿ ಹುಡುಕುತ್ತಾ ಕಾಣದೆ ಖಿನ್ನರಾಗೆ ಬೇಸತ್ತು ಪಟ್ಟಣಗಳಲ್ಲಿಯೂ, ಬೀದಿಗಳಲ್ಲಿಯೂ, ಅಲ್ಲಲ್ಲಿ ಸೇರಿರುವ ಸಭೆಗಳಲ್ಲಿಯೂ, ನೆರೆದಿರುವ ಜನರನ್ನು ವಿಚಾರಿಸುತ್ತಿರುವಾಗ ಮೂರು ಮಂದಿ ಬ್ರಾಹ್ಮಣರು ಮಾರ್ಗವಶದಿಂದ ಚೈದ್ಯ ನಗರವನ್ನು ಹೊಕ್ಕರು. ॥೨॥

ಟಿಪ್ಪಣಿ:—(೧) ಪುರದವಲಯು-ಪುರವಲಯು (ಷ. ತ) (೨) ಚೈದ್ಯನನಗರಿ-ಚೈದ್ಯನಗರಿ (ಷ. ತ) ॥೨॥

ವ್ನೂ॥ ಅಲ್ಲಿವಾರ್ತೆಯಕೇಳಿದರುಭೂ । ವಲ್ಲಭನಕ್ರತುಸಮಯವೆಂದ
ವ। ರಲ್ಲಿಗಮಿಸಲುಕಂಡುಮೂವರುಕೂಡುತವರೊಡನೆ॥ ನಿಲ್ಲದೈದಿ
ದರರಮನೆಗೆತಮ।ಗಲ್ಲಿದಕ್ಷಿಣೆತೃಪ್ತಿಭೋಜನ।ವೆಲ್ಲಮಿಗಿಲಹುದೆನು
ತಹೊಕ್ಕರುಯಜ್ಞಮಂಟಪವ ॥೩॥

ಟೀಕೆ:—ಅಲ್ಲಿ, ಭೂವಲ್ಲಭನ-ದೊರೆಯ, ಕ್ರತುಸಮಯವೆಂದು-ಯಜ್ಞಕಾಲವೆಂದು, (೧) ವಾರ್ತೆಯ-ಸಮಾಚಾರವನ್ನು, ಕೇಳಿದರು, ಅವರ್-ಅವರು, ಅಲ್ಲಿ-ಆ ಪಟ್ಟಣದಲ್ಲಿ, ಗಮಿಸಲು-ಹೋಗಲು, ಕಂಡು-ನೋಡಿ, ಅವರ್-ಅವರು, ಮೂವರು-ಮೂರುಮಂದಿಯೂ, ಕೂಡುತ-ಸೇರಿ, ಒಡನೆ-ಕೂಡಲೆ, ನಿಲ್ಲದೆ-ಬಿಡದೆ, ಅರಮನೆಗೆ, ಐದಿದರು-ಹೋದರು, ಅಲ್ಲಿ, ತಮಗೆ, ದಕ್ಷಿಣೆ(ಭೂರಿಯೂ,) (೨) ತೃಪ್ತಿಭೋಜನವೆಲ್ಲ-ತಣಿವಂತೆ ಊಟ ಮೊದಲಾದವು, ಮಿಗಿಲಹುದು - ಚೆನ್ನಾಗಿ ಆಗುವುವು, ಎನುತ-ಎಂಬದಾಗಿ, (೩) ಯಜ್ಞಮಂಟಪವ - ಯಜ್ಞಶಾಲೆಯನ್ನು, ಹೊಕ್ಕರು-ಪ್ರವೇಶಿಸಿದರು. ॥೩॥

ತಾತ್ಪರ್ಯ,—ಚೈದ್ಯನಗರದಲ್ಲಿ ಆಗದೊರೆಯು ಯಜ್ಞಮಾಡುತ್ತಿರುವನೆಂಬ ವರ್ತಮಾನವನ್ನು ತಿಳಿದು ಆ ಮೂವರೂ ಅರಮನೆಯ ಬಳಿಗೆ ಬಂದು ತಿಳಿದು, ಅಲ್ಲಿಂದ ಹೊರಟು ಬೇಗನೆ, ತಮಗೆ ಯಥೇಚ್ಛವಾಗಿ ದಾನ ದಕ್ಷಿಣೆಗಳೂ ಮೃಷ್ಟಾನ್ನ ಭೋಜನವೂ ದೊರೆಯುವುದೆಂದು ಯಜ್ಞಶಾಲೆಗೆ ಮೂರು ಜನವೂ ಬಂದು ಸೇರಿದರು. ॥೩॥

ಟಿಪ್ಪಣಿ:—(೧) (ದ್ಭ) ವಾಳ್ತೆ, (೨) ತೃಪ್ತಿಯಯದ ಭೋಜನ-ತೃಪ್ತಿಭೋಜನ- (ವಿ. ಪೂರ್ವ. ಕ) (೩) ಯಜ್ಞದಮಂಟಪ- ಯಜ್ಞಾಮಂಟಪ (ಷ. ತ) ಯಜ್ಞಕ್ಕೆ (ದ್ಭ) ಜನ್ನ, ಮಂಟಪಕ್ಕೆ (ದ್ಭ) ಮಂಡವಿ, ॥೨೩॥

ಮೂ॥ ಜನಪನವನೀಸುರರಮಂತ್ರದೊ । ಳನಿಲಸಖನಾರಾಧಿಸಲುನೃ
ಪ। ತನುಜೆಯಾದಸುನೀತೆಯುಳೆದಮಯಂತಿಭಾವಿಸುತ ॥ ವನಿತೆ
ಯಿರೆಕಂಡನುಸುದೇವನು। ಮನದೊಳೆನುಮಾನಿಸಿದನೀಮಾ।ನಿನಿ
ಮಹಾಸತಿಯೆನುತವಿಸ್ಮಯಗೊಂಡುಮನದೊಳಗೆ ॥೨೪॥

ಟೀಕೆ:—ಜನಪಂ-ದೊರೆಯು, ಅವನೀಸುರರ-ಬ್ರಾಹ್ಮಣರ,ಮಂತ್ರದೊಳ್-ಅನುಮತಿಯ ಪ್ರಕಾರ, (೧) ಅನಿಲಸಖನ-ಅಗ್ನಿಯನ್ನು, ಆರಾಧಿಸಲು-ಸೇವಿಸಲು, ನೃಪತನುಜೆಯಾದ-ರಾಜಪುತ್ರಿಯಾದ, ಸುನೀತೆಯುಳ-ಸುನೀತೆ ಎಂಬುವಳನ್ನು, ದಮಯಂತಿ,ಭಾವಿಸುತ-ಮರ್ಯಾದೆಯಿಂದ ಕಾಣುತ್ತಾ, ವನಿತೆ-ಆ ದಮಯಂತಿಯು, ಇರೆ-ಇರಲು, ಸುದೇವನು, ಕಂಡನು, (೨) ಈ ಮಾನಿನಿ-ಈ ಸ್ತ್ರೀಯು, (೩) ಮಹಾಸತಿ-ಮಹಾಪತಿವ್ರತೆ, ಎನುತ, ಮನದೊಳಗೆ-ಮನಸ್ಸಿನಲ್ಲಿ, ವಿಸ್ಮಯಗೊಂಡು-ಆಶ್ಚರ್ಯಪಟ್ಟು, ಮನದೊಳಗೆ-ಅಂತಃ, ಆನುಮಾನಿಸಿದನು-ಸಂದೇಹವನ್ನು ಹೊಂದಿದನು ॥೨೪॥

ತಾತ್ಪರ್ಯ:—ಚೈದ್ಯರಾಜನು ಯಜ್ಞಶಾಲೆಯಲ್ಲಿ ಬ್ರಾಹ್ಮಣರೊಡನೆ ಸೇರಿ ಯಾಗದಿಂದ ಅಗ್ನಿಯನ್ನಾರಾಧಿಸುತ್ತಿರಲು, ಇತ್ತ ಆ ರಾಜನ ಮಗಳಾದ ಸುನೀತೆಯು ಮನೆಯಲ್ಲಿ ಭೇದವನ್ನೆಣಿಸದೆ ಹೊಂದಿಕೊಂಡಿದ್ದ ದಮಯಂತಿಯನ್ನು ಸುದೇವನು ನೋಡಿ, ಅತ್ಯಾಶ್ಚರ್ಯಪಟ್ಟು, ಈಕೆಯೇ ಮಹಾ ಪತಿವ್ರತೆಯಾದ ಆ ದಮಯಂತಿ ಇರಬಹುದೆಂದೂಹಿಸಿದನು. ॥೨೪॥

ಟಿಪ್ಪಣಿ:—(೧) ಅನಿಲ-ವಾಯುವಿನ,ಸಖ-ಸ್ನೇಹಿತ, (ಅವ) (೨) ಇವಳು ಮಾನಿನಿ-ಈ ಮಾನಿನಿ (ಗಮಕ) ಮಾನ (ಕೋಪ) ವುಳ್ಳವಳು-ಮಾನಿನಿ, (೩) ಮಹಾಂತಳಾದ ಸತಿ-ಮಹಾಸತಿ(ವಿ.ಪೂರ್ವ.ಕ)॥

ಮೂ॥ ಮುಗಿಲುಮುಸುಕಿದಚಂದ್ರಬಿಂಬವೊ। ನಗಲೊಳೆಸೆವಸುದೀಪ
ಕಾಂತಿಯೊ। ಹೊಗೆಯೊಳೆಸಗಿದಚಿತ್ರಪ್ರತಿಮೆಯೊಹೇಳಲೇನದ
ನು॥ ಉಗಿದುಬಿಸುಟವಿಭೂಷಣದವೈ। ಲಿಗೆಯುಸೀರೆಯುಮಲಿನ

ತನುಕಳೆ। ತೆಗೆದುಕೈಗಲ್ಲದಲಿನಿಂದಿರೆಕಂಡನಾಸತಿಯು ॥೨೫॥

ಟೀಕೆ:—ಮುಗಿಲು–ಮೋಡವು, ಮುಸುಕಿದ–ಮುಚ್ಚಿಕೊಂಡಿರುವ, ಚಂದ್ರಬಿಂಬವೋ–ಚಂದ್ರಮಂಡಲವೋ ! ಪಗಲೊಳ್–ಹಗಲಿನಲ್ಲಿ, ಎಸೆವ–ಪ್ರಕಾಶಿಸುವ, ಸುದೀಪಕಾಂತಿಯೊ – ಉರಿವ ದೀಪದ ಬೆಳಕೊ, ಹೊಗೆಯೊಳ್-ಹೊಗೆಯಲ್ಲಿ, ಎಸಗಿದ–ಇಟ್ಟಿದ್ದ, ಚಿತ್ರಪ್ರತಿಮೆಯೊ–ಚಿತ್ರಿಸಿರುವ ವಿಗ್ರಹವೊ, ಅದನು–ಅದನ್ನು, ಪೇಳಲೇಂ – ಏನಹೇಳಲಿ ! ಉಗಿದು–ತೆಗೆದು, ಬಿಸುಟ–ಹಾಕಿದ, ವಿಭೂಷಣದ – ಆಭರಣಗಳುಳ್ಳ, ಮೈಲಿಗೆಯ–ಮಾಸಿದ, ಸೀರೆಯ–ವಸ್ತ್ರವುಳ್ಳ, (೧) ಮಲಿನ–ಕೊಳೆಯಾದ, ತನು–ದೇಹವುಳ್ಳವಮಯಂತಿಯು, ಕಳೆ–ಕಾಂತಿಯು, ತೆಗೆದು–ತಪ್ಪಿ (೨) ಕೈಗಲ್ಲದಲಿ–ಗಲ್ಲದಮೇಲೆ ಕೈಯನ್ನಿಟ್ಟುಕೊಂಡು, ನಿಂದಿರೆ– ನಿಂತಿರಲು, ಆ ಸತಿಯ–ದಮಯಂತಿಯನ್ನು, ಕಂಡನು–ನೋಡಿದನು. ॥೨೫॥

ತಾತ್ಪರ್ಯ:—ಮೇಘವು ಆವರಿಸಿಕೊಂಡಿರುವ ಚಂದ್ರಬಿಂಬದಂತೆಯೂ, ಹಗಲಿನಲ್ಲಿ ಉರಿಯುತ್ತಿರುವ ದೀಪದಂತೆಯೂ, ಹೊಗೆಹಿಡಿದಚಿತ್ರದ ವಿಗ್ರಹದಂತೆಯೂ, ಕಳೆಗುಂದಿ, ಪತಿವಿಯೋಗದಿಂದ ಖಿನ್ನಳಾಗಿ ಗಂಧಮಾಲ್ಯಾಂಬರಾಭರಣಾದಿಗಳಂ ತೊರೆದು ಏಕವಸ್ತ್ರಧರಳಾಗಿಕೆನ್ನೆಯಮೇಲೆ ಕೈಯನ್ನು ಇಟ್ಟು ಚಿಂತಾಕ್ರಾಂತಳಾಗಿರುವ ದಮಯಂತಿಯನ್ನು ನೋಡಿದನು. ॥೨೫॥

ಟಿಪ್ಪಣಿ:—ಮಲಿನವಾದ ತನುವು ಯಾರಿಗೋ ಅವಳು– ಮಲಿನತನು (ಬ. ವ್ರೀ.) (೨) ಕೈಯಗಲ್ಲ–ಕೈಗಲ್ಲ (ಷ. ತ) ॥೨೫॥

ಮೂ॥ ಇದುಪತಿವ್ರತಧರ್ಮವಹುದೀ। ಸುದತಿತೊರೆದಿಹಳೆಲ್ಲವನುನೃ
ಪ। ವಧುವಕಾಣಿಸಿಕೊಂಬೆನೆಂದುಸುದೇವನಡೆತಂದು ॥ ಹದನಿದೇ
ನೌತಾಯೆನಿಮ್ಮಯ। ವದನಕಮಲವುಬಾಡಿಕಡುಖೇ। ದದಲಿನೀನಿ
ಹುದೇನುಕಾರಣವೆನುತಲಿಂತೆಂದ ॥೨೬॥

ಟೀಕೆ:—ಇದು–ಹೀಗಿರುವುದು, ಪತಿವ್ರತ ಧರ್ಮವು–ಪತಿವ್ರತೆಯ ನಡೆವಳಿಕೆಯು, ಅಹುದು–ನಿಶ್ಚಯವು, ನೃಪವಧು – ರಾಜಪುತ್ರಿಯಾದ, (೧) ಈ ಸುದತಿ–ಈ ಸ್ತ್ರೀಯು, ಎಲ್ಲವನು– ರಾಜಭೋಗಗಳೆಲ್ಲವನ್ನೂ, ತೊರೆದಿಹಳು– ಬಿಟ್ಟಿರುವಳು, ಕಾಣಿಸಿಕೊಂಬೆಂ–ಈಕೆಯನ್ನು ಕಾಣಿಸಿಕೊಳ್ಳುವೆನು, ಎಂದು, ಸುದೇವ, ನಡೆತಂದು–ಬಂದು, ತಾಯೆ–ಅಮ್ಮಾ, ಇದು–ಈ, ಹದನ–ರೀತಿಯು, ಏನೌ–ಏನಮ್ಮ, ನಿಮ್ಮಯ–ನಿ

ಮ್ಮ, (೨) ವದನ ಕಮಲವು-ಮುಖ ಪದ್ಮವು, ಬಾಡಿ,ಒಣಗಿ, ನೀಂ-ನೀನು, ಕಡುಖೇದದಲಿ-ಬಹುದುಃಖದಿಂದ, ಇಹುದು-ಇರುವುದಕ್ಕೆ, ಏನು-ಕಾರಣವೇನು? ಎನುತಲಿ-ಎಂದು ಹೇಳುತ್ತಾ, ಇಂತು-ಹೀಗೆ, ಎಂದ-ಹೇಳಿದನು. ||೨೬||

ತಾತ್ಪರ್ಯ:—ಆಹ! ಇದೀಗ ಪತಿವ್ರತಾ ಧರ್ಮವು, "ಈಕೆಯು ರಾಜಪುತ್ರಿಯಾಗಿದ್ದರೂ ಪತಿವಿಯೋಗಕ್ಕಾಗಿ ರಾಜಭೋಗಗಳೆಲ್ಲವನ್ನೂ ತೊರೆದು, ನಿಯಮದಿಂದಿರುವಳು, ಇವಳಿಗೆ ನಾನು ಕಾಣಿಸಿಕೊಳ್ಳುವೆನು, ಎಂದು ಬಂದು "ಅಮ್ಮಾ ಇದೇನು, ನಿನ್ನ ಮುಖಕಮಲವು ಕೊರಗಿದೆ, ನೀನು ಇಷ್ಟು ದುಃಖದಿಂದ ಮಾಲಿನ್ಯವನ್ನು ಹೊಂದಿರಲು ಕಾರಣವೇನು," ಎಂದು ಸುದೇವನು ದಮಯಂತಿಯನ್ನು ಪ್ರಶ್ನೆಮಾಡಿ ಪುನಃ ಹೇಳುತ್ತಾನೆ. ||೨೬||

ಟಿಪ್ಪಣಿ:—(೧) ಇವಳು ಸುದತಿ-ಈ ಸುದತಿ (ಗಮಕ) ಸು-ಒಳ್ಳೆ, ದತಿ-ಹಲ್ಲುಳ್ಳವಳು, (ಅವ) (೨) ಕಮಲದಂತಿರ್ಪವದನ-ವದನಕಮಲ (ಉ. ಉ. ಕ. ಸ) ||೨೬||

ಮೂ|| ಇಂದುವದನೆವಿದರ್ಭಪಟ್ಟಣ| ದಿಂದಬಂದೆನುತಾಯಿಭೂಸುರ|
ವಂದ್ಯನೆನ್ನಭಿದಾನಕೇಳುಸುದೇವನೆಂಬುವದು|| ಇಂದುನಿಮ್ಮನು
ನೋಡೆಕಳುಹಿದ| ತಂದೆಭೀಮನೃಪಾಲನಾತನ | ನಂದನಗೆತಾಸ
ಖನುಚಿತ್ತೈಸೆನ್ನಬಿನ್ನಪವ ||೨೭||

ಟೀಕೆ:—ಇಂದುವದನೆ-ಚಂದ್ರಮುಖಿಯೇ, ತಾಯಿ - ಅಮ್ಮಾ, (ನಾನು) ಬಂದೆನು, ಎನ್ನ-ನನ್ನ, ಅಭಿಧಾನ-ಹೆಸರು, ಸುದೇವನೆಂಬುದು, ಇಂದು-ಈಗ, ತಂದೆ-ನಿಮ್ಮ ತಂದೆಯಾದ, ಭೀಮನೃಪಾಲಂ-ಭೀಮರಾಜನು, ನಿಮ್ಮನು-ನಿಮ್ಮನ್ನು, ನೋಡೆ-ಹುಡುಕಲು, ಕಳುಹಿದ-ನನ್ನನ್ನು ಕಳುಹಿಸಿರುವನು, ಆತನ-ಅವನ,ನಂದನಗೆ-ಮಗನಿಗೆ, ತಾಂ-ತಾನು, ಸಖನು-ಸ್ನೇಹಿತನು, ಎನ್ನ-ನನ್ನ, (೧) ಬಿನ್ನಪವ-ವಿಜ್ಞಾಪನೆಯನ್ನು, ಚಿತ್ತೈಸು-ಲಾಲಿಸು. ||೨೭||

ತಾತ್ಪರ್ಯ:—ಅಮ್ಮಾದಮಯಂತೀಯೆ ಕೇಳು! ನಾನು ವಿದರ್ಭಪುರದಿಂದ ಬಂದಿರುವ ಸುದೇವನೆಂಬ ಬ್ರಾಹ್ಮಣನು, ನಿಮ್ಮ ತಂದೆಯಾದ ಭೀಮರಾಜನು ನಿನ್ನ ನೆಲೆಯನ್ನು ತಿಳಿದು ಬರಬೇಕೆಂದು ನನ್ನನ್ನು ಕಳುಹಿಸಿರುವನು, ಅವನ ಮಗನು ನನಗೆ ಪರಮ ಮಿತ್ರನು, ನನ್ನ ಮಾತ

ನ್ನು ಸಾವಧಾನದಿಂದ ಲಾಲಿಸು. ||೨೭||

ಟಿಪ್ಪಣಿ:—(೧) ಭೂಸುರರ ವಂದ್ಯಂ-ಭೂಸುರವಂದ್ಯಂ (ಷ.ತ) (೨) (ತ್ಸ) ವಿಜ್ಞಾಪನಾ ||೨೭||

ಮೂ|| ಕ್ಷಿತಿಪಭೀಮನೃಪಾಲನಾತನ | ಸತಿಸುತರುಬಾಂಧವಸಹೋ
ದರ | ರತಿಶಯುರುನಿಮ್ಮಯಕುಮಾರರುಕುಶಲರಿಂದಿನಲಿ || ಕ್ಷಿತಿ
ಯುನಗಲುತನಳನೃಪತಿನಿಜ | ಸತಿಸಹಿತವನಕೈದಿದುದಕೇ | ಳು
ತಲಿನಿಮ್ಮವರೆಲ್ಲಶೋಕಾಬ್ಧಿಯಲಿಮುಳುಗಿಹರು ||೨೮||

ಟೀಕೆ:—(೧) ಕ್ಷಿತಿಪ ಭೀಮನೃಪಾಲಂ-ದೊರೆಯಾದಭೀಮರಾಜನೂ,ಆತನ-ಅವನ, ಸತಿಸುತರು-ಹೆಂಡತಿಮಕ್ಕಳೂ, ಬಾಂಧವಸಹೋದರರು-ನಂಟರು, ಅಣ್ಣ ತಮ್ಮಂದಿರೂ, ಅತಿಶಯುರು- ಕ್ಷೇಮವಾಗಿದ್ದಾರೆ, ನಿಮ್ಮಯ-ನಿಮ್ಮ, (೨) ಕುಮಾರರು-ಮಕ್ಕಳು, ಕುಶಲರ್- ಕ್ಷೇಮವಾಗಿರುವರು, ಇಂದಿನಲಿ-ಈಗ, ನಳನೃಪತಿ-ನಳರಾಜನು, ನಿಜಸತಿ ಸಹಿತ-ತನ್ನಹೆಂಡತಿಯೊಡನೆ, ವನಕೆ-ಕಾಡಿಗೆ, ಐದಿದುದ-ಹೋದದ್ದನ್ನು, ಕೇಳುತಲಿ-ಕೇಳುತ್ತಾ, ನಿಮ್ಮವರೆಲ್ಲ-ನಿಮ್ಮಬಂಧುಗಳೆಲ್ಲರೂ, (೩) ಶೋಕಾಬ್ಧಿಯಲಿ-ದುಃಖಸಮುದ್ರವಲ್ಲಿ, ಮುಳುಗಿಹರು- ಮುಳುಗಿಹೋಗಿರುವರು. ||೨೮||

ತಾತ್ಪರ್ಯ:—ಭೀಮರಾಜನೂ, ಅವನ ಹೆಂಡತಿಮಕ್ಕಳೂ, ಬಂಧುಗಳೂ ಸಹೋದರರೂ, ನಿಮ್ಮ ಮಕ್ಕಳೂ, ಎಲ್ಲರೂ ಕ್ಷೇಮವಾಗಿದ್ದಾರೆ, ಆದರೆ ನಳನು ರಾಜ್ಯವನ್ನು ಸೋತು ತನ್ನ ಪತಿಯೊಡನೆ ವನವಾಸಕ್ಕೆ ತೆರಳಿದನೆಂಬ ಅಶುಭವಾರ್ತೆಯನ್ನು ಕೇಳಿದಂದಿನಿಂದಲೂ, ನಿಮ್ಮ ಬಂಧು ಗಳೆಲ್ಲರೂ ಅಪಾರವಾದ ಶೋಕಸಾಗರದಲ್ಲಿ ಮುಳುಗಿರುವರು ||೨೮||

ಟಿಪ್ಪಣಿ:— (೧) ಕ್ಷಿತಿಪನಾದ-ಭೀಮನೃಪಾಲಂ-ಕ್ಷಿತಿಪಭೀಮನೃಪಾಲಂ (ವಿ ಪ್ರೂರ್ವ. ಕ) (೨) ಕುಮಾರಕ್ಕೆ (ದ್ಭ) ಕುವರ (೩) ಶೋಕವೇಅಬ್ಧಿ (ಅವ. ಪ್ರೂರ್ವ. ಕ) ||೨೮||

ಮೂ|| ಘೋರತರಶೋಕವನುಸೈರಿಸ | ಲಾರದೆಯೆಸತಿಪತಿಗಳಿಬ್ಬರು
| ಸೋರುತಿಹಕಂಬನಿಗಳಲಿಕರೆದೆಮ್ಮಕಳುಹಿದರು || ಧಾರಿಣಿಯು
ನರಸುತ್ತಬಂದೆವು| ಅವರಿಜಾನನೆನಿನ್ನ ಕಂಡೆವು| ಸೇರಿತೆಮ್ಮಯಪು
ಣ್ಯವೆನುತಸುದೇವಕೈಮುಗಿದ ||೨೯||

ಮೂ॥ ಘೋರತರಶೋಕವನುಸೈರಿಸ। ಲಾರದೆಯೆಸತಿಪತಿಗಳಿಬ್ಬ
ರು। ಸೋರುತಿಹಕಂಬನಿಗಳಲಿಕರೆದೆಮ್ಮಕಳುಹಿದರು॥ ಧಾರಿಣಿ
ಯನರಸುತ್ತಬಂದೆವು। ವಾರಿಜಾನನೆನಿನ್ನಿಕಂಡೆವು।ಸೇರಿತೆಮ್ಮ
ಯಪುಣ್ಯವೆನುತಸುದೇವಕೈಮುಗಿದ ॥೨೯॥

ಟೀಕೆ:— (೧) ಘೋರತರಶೋಕವನು-ಕ್ರೂರವಾದ ದುಃಖವನ್ನು, ಸೈರಿಸಲಾರದೆಯೆ-ತಡೆಯಲಾರದೆ, ಸತಿಪತಿಗಳ್-ಗಂಡಹೆಂಡತಿಯರು, ಇಬ್ಬರು, ಸೋರುತಿಹ-ಸುರಿಯುತ್ತಿರು, ಕಂಬನಿಗಳಲಿ-ಕಣ್ಣೀರುಗಳಿಂದ, ಕರೆದು-ಬರೆಮಾಡಿ, ಎಮ್ಮ-ನಮ್ಮನ್ನು, ಕಳುಹಿದರು-ಕಳುಹಿಸಿದರು, ಧಾರಿಣಿಯಂ- ಭೂಮಿಯೆಲ್ಲವನ್ನೂ, ಅರಸುತ್ತ-ಹುಡುಕುತ್ತ, ಬಂದೆವು, (೨) ವಾರಿಜಾನನೆ ಕಮಲಮುಖಿಯೇ ನಿನ್ನ-ನಿನ್ನನ್ನು, ಕಂಡೆವು, ಎಮ್ಮಯ-ನಮ್ಮನ್ನು, ಪುಣ್ಯವು-ಸುಕೃತವು, ಸೇರಿತು-ಹೊಂದಿತು, ಎನುತ, ಸುದೇವ-ಸುದೇವನು, ಕೈಮುಗಿದ-ಕೈಮುಗಿದನು ॥೨೯॥

ತಾತ್ಪರ್ಯ:— ಈ ಮಹಾ ದುಃಖವನ್ನು ಸಹಿಸಲಾರದೆ ನಿಮ್ಮ ತಂದೆತಾಯಿಗಳಿಬ್ಬರೂಕಣ್ಣೀರುಹಾಕುತ್ತಾ, ನಮ್ಮನ್ನು ಕರೆದು ಹೇಳಿ ಕಳುಹಿಸಿದರು, ನಾವು ಎಲ್ಲಕಡೆಯಲ್ಲಿಯೂ ಹುಡುಕುತ್ತಾ ಬಂದು ಇಲ್ಲಿ ನಿನ್ನನ್ನು ನಮ್ಮ ಪುಣ್ಯವಶದಿಂದ ಕಂಡೆವು, ಎಂದು ಕೈಮುಗಿದು ಸುದೇವನು ಹೇಳಿದನು ॥೨॥

ಟಿಪ್ಪಣಿ:—ಘೋರತರವಾದ ಶೋಕ-ಘೋರತರ ಶೋಕ (ವಿ. ಪೂ. ಕ) (೨)ವಾರಿಜದಂತೆ ಆನನವುಳ್ಳವನು-ವಾರಿಜಾನನೆ (ಬ. ವ್ರೀ (೩) ಕರ್ಮಾರ್ಥದಲ್ಲಿ ಷಷ್ಠಿ ॥೨೯॥

ಮೂ॥ ವನಿತೆಕೇಳುತಶೋಕದಲಿನೆನೆ। ನೆನೆದುಬುಧಕುಲತಿಲಕಬಾ
ರೆಂ। ದೆನುಕಮನ್ನಿಸಿತನ್ನವರನಡಿಗಡಿಗೆಬೆಸಗೊಳಲು ॥ ವನಿತೆ
ನೋಡಿದಳಾಸುನೀತೆಯು। ಜನನಿಗರುಹಲುಬಂದಳಾವಿ। ಪ್ರನ
ನುನೀವಾರೆನಲುನುಡಿದನುಬಂದಸಂಗತಿಯ ॥೩೦॥

ಟೀಕೆ:— ವನಿತೆ-ದಮಯಂತಿಯು, ಕೇಳುತ - ಆಮಾತನ್ನು ಕೇಳಿ, ಶೋಕದಲಿ-ದುಃಖದಿಂದ, ನೆನೆನೆನೆದು-ಸ್ಮರಿಸಿಕೊಂಡು, (೧) ಬುಧಕುಲತಿಲಕ-ಪಂಡಿತಶ್ರೇಷ್ಠನೇ, ಬಾರ-ಬಾ, ಎಂದೆನುತ, ಮನ್ನಿಸಿ-ಮರ್ಯಾದೆಮಾಡಿ, ತನ್ನವರಂ ತನ್ನ ತೌರುಮನೆಯವರ ಯೋಗಕ್ಷೇ

ಮವನ್ನು (೨)ಅಡಿಗಡಿಗೆ-ಪುನಃಪುನಃ, ಬೆಸೂಳಲು-ಕೇಳಲುಬಂದಳ್-ಬಂದಳು, ಆ ವಿಪ್ರನು-ಆ ಬ್ರಾಹ್ಮಣನನ್ನು, ನೀವಾರು-ನೀವುಯಾರು ಎನಲು, ಬಂದಸಂಗತಿಯು - ತಾನು ಬಂದ ವಿಷಯವನ್ನು, ನುಡಿದನು ||೩೦||

ತಾತ್ಪರ್ಯ:— ಆಮಾತನ್ನು ಕೇಳಿದ ದಮಯಂತಿಯು ತನ್ನ ಪೂರ್ವ ಸ್ಥಿತಿಯನ್ನು ಸ್ಮರಿಸಿ ದುಃಖಪಡುತ್ತಾ, ಆ ಸುದೇವನಿಗೆ ಮರಾದೆಮಾಡಿ ಕುಳ್ಳಿರಿಸಿ, ತನ್ನ ತೌರುಮನೆಯವರ ಕುಶಲವನ್ನು ಮತ್ತೆಮತ್ತೆ ಕೇಳುತ್ತಿರಲು, ಇದೆಲ್ಲವನ್ನೂ ನೋಡುತ್ತಿದ್ದ ಸುನೀತೆಯು ಈವೃತ್ತಾಂತವನ್ನು ತಮ್ಮ ತಾಯಿಗೆ ತಿಳಿಸಿ ತವಳನ್ನು ಕರೆತಂದಳು. ಆಕೆಯು ಬಂದು ನೀವು ಯಾರೆಂದು ಸುದೇವನನ್ನು ಪ್ರಶ್ನೆಮಾಡಲು, ತಾನು ಬಂದ ಸಮಾಚಾರವನ್ನು ಆಕೆಗೆ ತಿಳಿಸಿದನು ||೩೦||

ಟಿಪ್ಪಣಿ:— (೧) ಬುಧರಕುಲ-ಬುಧಕುಲ (ಷ. ತ) ಬುಧಕುಲದ ತಿಲಕ-ಬುಧಕುಲತಿಲಕ (ಷ. ತ) (೨) ಆಧಿಕ್ಯಾರ್ಥದಲ್ಲಿ (ಆಭೀಕ್ಷ್ಣ್ಯಾರ್ಥದಲ್ಲಿ) ದ್ವಿರುಕ್ತಿ ||೩೦||

ಮೂ|| ಕೇಳುತಾಯೆವಿದರ್ಭಪತಿಭೂ | ಪಾಲನಾತ್ಮಜಸತಿಯೊಡನೆ
ತನ್ನಾಲಯವತಾನುಳಿದುವನಕೈದಿದನುಯೆಂದೆನಲು || ತಾಳಲಾ
ರದೆನೋಡಿಕರೆತರ | ಹೇಳಿಕಳುಹಲುಬಂದೆನಿಲ್ಲಿಗೆ | ಬಾಲೆದಮ
ಯಂತಿಯನುಕಂಡೆನೆನುತ್ತಕೈಮುಗಿದ ||೩೧||

ಟೀಕೆ:— ತಾಯೆ-ಅಮ್ಮಾ, ಕೇಳು, ವಿದರ್ಭಪತಿ-ವಿದರ್ಭದೇಶಕ್ಕೆ ಒಡೆಯನಾದ (ಭೀಮರಾಜನು) ಭೂಪಾಲಂ-ನಳರಾಜನು (೧) ಆತ್ಮಜ-ತನ್ನ ಮಕ್ಕಳು, ಸತಿಯೊಡನೆ-ಹೆಂಡತಿ ಇವರೊಡನೆ, ತನ್ನ, ಆಲಯುವ-ಮನೆಯನ್ನು, ತಾಂ-ತಾನು, ಉಳಿದು-ಬಿಟ್ಟು, ವನಕೆ-ಅರಣ್ಯಕ್ಕೆ, ಐದಿದನು-ಹೋದನು, ಎಂದೆನಲು-ಎಂದು ತಿಳಿಸಲು, ತಾಳಲಾರದೆ-ಆ ದುಃಖವನ್ನು ಸಹಿಸಲಾರದೆ, ನೋಡಿ-ಹುಡುಕಿ, ಕರೆತರಹೇಳಿ-ಕರೆತರಬೇಕೆಂದು ಹೇಳಿ, ಕಳುಹಲು - ನನ್ನನ್ನು ಕಳುಹಿಸಿಕೊಡಲು, ಇಲ್ಲಿಗೆ, ಬಂದೆಂ-ಬಂದೆನು, (೨) ಬಾಲೆ ದಮಯಂತಿಯನು-ಬಾಲಕಿಯಾದ ದಮಯಂತಿಯನ್ನು, ಕಂಡೆ-ನೋಡಿದೆನು, ಎನುತ್ತ ಎಂಬದಾಗಿ ಹೇಳಿ, ಕೈಮುಗಿದ-ಕೈಜೋಡಿಸಿದನು ||೩೧||

ತಾತ್ಪರ್ಯ:— ಅಮ್ಮಾ ಸುನೀತೆಯೇ ಕೇಳು-ವಿದರ್ಭದೇಶಾಧೀ

ಶ್ವರನಾದ ಭೀಮ ಭೂಪಾಲಕನು-ತನ್ನ ಮಗಳೂ, ಅವಳ ಮಕ್ಕಳೂ ನಳನೂಸಹ ತಮ್ಮಪುರವನ್ನು ಬಿಟ್ಟು ಕಾರಣಾಂತರದಿಂದ ವನವಾಸಕ್ಕೆ ಹೋದರೆಂಬ ವರ್ತಮಾನವನ್ನು ಕೇಳಿ ದುಃಖವನ್ನು ಸಹಿಸಲಾರದೆ, ಹುಡುಕಿಕೊಂಡು ಬರುವಂತೆ ನನ್ನೊಡನೆ ಹೇಳಿ ಕಳುಹಿಸಿದನು. ನಾನು ಅಲ್ಲಲ್ಲಿ ಹುಡುಕುತ್ತಾ ಈ ಚೈದ್ಯನಗರಕ್ಕೆ ಬಂದೆನು, ಇಲ್ಲಿ ದಮಯಂತಿಯನ್ನು ನೋಡಿದೆನು, ತನ್ನ ವೃತ್ತಾಂತವನ್ನು ವಿಸ್ತಾರವಾಗಿ ತಿಳಿಸಿದನು ‖೨೧‖

ಟಿಪ್ಪಣಿ:— ಆತ್ಮ-ತನ್ನಲ್ಲಿ, ಜ-ಹುಟ್ಟಿದವನು (ಮಗ) (ಅವ) (೨) ಬಾಲೆಯಾದ ದಮಯಂತಿ-ಬಾಲೆದಮಯಂತಿ (ವಿ. ಪೂರ್ವ.ಕ)‖೨೧

ಮೂ‖ ಕೇಳಿಶಿವಶಿವಯೆನುತಶೋಕವ ।ತಾಳಿತೆಗೆದಪ್ಪಿದಳುಮಗುಳೆ
ವಿ । ಟಾಳಿಸಿತೆಸಿರಿರಾಜಸಂಪದವೀಮಹಾವ್ಯಥೆಯ ॥ ಬಾಳದಲಿ
ವಿಧಿಬರದನೇಜನ।ಪಾ ಳನಳನೃಪನೆತ್ತಸರಿದನೊ । ಕಾಲಗತಿ
ಯಿಂತಾದುದೇ ಹಾಯೆನುತಮರುಗಿದಳು ॥೨೨॥

ಟೀಕೆ:— ಕೇಳಿ, ಶಿವಶಿವಯೆನುತ- ಅಯ್ಯೋ ದೇವರೇಯೆನ್ನುತ್ತಾ, ಶೋಕವ-ದುಃಖವನ್ನು, ತಾಳಿ-ಹೊಂದಿ, ತೆಗೆದಪ್ಪಿದಳು-ಬಾಚಿತಬ್ಬಿಕೊಂಡಳು, ಸಿರಿ-ಐಶ್ವರ್ಯವು (೧) ರಾಜಸಂಪದವು-ಸಾಮ್ರಾಜ್ಯವು, ಮಗುಳೆ-ಮತ್ತೆ, ! ಈ ಮಹಾವ್ಯಥೆಯ-ದೊಡ್ಡ ದುಃಖವನ್ನು, ವಿಟಾಳಿಸಿತೇ-ಉಂಟುಮಾಡಿತೇ ವಿಧಿ-ದೈವವು, ಬಾಳೆಲಿದ- ಹಣೆಯಲ್ಲಿ, ಬರೆದನೇ-ಬರೆದುಬಿಟ್ಟನೇ (೨) ಜನಪಾಳ ನಳನೃಪಂ--ದೊರೆಯಾದನಳನು, ಎತ್ತಸರಿದನೊ-ಎಲ್ಲಿಹೋದನೋ, ಕಾಲಗತಿ-ಕಾಲಾಧೀನತೆಯು, ಇಂತಾದುದೇ-ಹೀಗಾಯ್ತೇ?ಹಾ-ಅಯ್ಯೋ, ಎನುತ-ಎಂಬದಾಗಿ, ಮರುಗಿದಳು-ದುಃಖಪಟ್ಟಳು ॥೨೨॥

ತಾತ್ಪರ್ಯ:— ಆ ಮಾತನ್ನುಕೇಳಿದಕೂಡಲೆ ಆಹಾ ದೇವರೇ ಅಷ್ಟೈಶ್ವರ ಸಾಮ್ರಾಜ್ಯಗಳು ಕೊನೆಗೆ ಇಂಥಾವ್ಯಥೆಗೆಕಾರಣವಾದುವೇ! ಎಂದು ದುಃಖಪಡುತ್ತಾ ದಮಯಂತಿಯನ್ನು ಆಲಿಂಗಿಸಿ, ಆಯ್ಯೋ ಇಂತಹದುರವಸ್ಥೆಯನ್ನು ವಿಧಿಹಣೆಯಲ್ಲಿ ಬರೆಯಬಹುದೇ ! ನಳನು ಎಲ್ಲಿಹೋದನೋ ಕಾಲಗತಿಯು ಎಷ್ಟು ವಿಪರೀತವಾಗಿ ಪರಿಣಮಿಸಿತು! ಎಂದು ದುಃಖಿಸಿದಳು ॥೨೨॥

ಟಿಪ್ಪಣಿ:— (೧) ರಾಜನಸಂಪದ-ರಾಜಸಂಪದ (ಷ. ತ) ಸಂ

ಪತ್, ಎಂಬ ಸಂಸ್ಕೃತ ವ್ಯಂಜನಾಂತಶಬ್ದದ ಪ್ರಥಮಾಬಹುವಚನವಾದ ಸಂಪದಃ, ಎಂಬುದು ವಿಸರ್ಗಲೋಪವನ್ನು ಹೊಂದಿ ಕನ್ನಡಕ್ಕೆ ಲಿಂಗವಾಗಿದೆ. (೨) ನಳನೆಂಬ ನೃಪಂ-ನಳನೃಪಂ (ಸಂ. ಪೂರ್ವ. ಕ) ಜನಪಾಳನಾದ ನಳನೃಪಂ-ಜನಪಾಳನಳನೃಪಂ (ವಿ. ಪೂರ್ವ. ಕ) ॥೩೨॥

ಮೂ॥ ಬಾಲೆಬಿಡುಶೋಕವನುಭೀಮನೃ। ಪಾಲನರಸಿಗೆತಂಗಿತಾತ।
ನ್ನಾಲಯದಿಕಡುನೊಂದೆಮಗಳೇಸಾಕುನಮ್ಮೊಡನೆ ॥ ಪೇಳದಿಹ
ರೆಸುನೀತೆಯಾಸಮ। ಪಾಳಿನೀನೆಮಗೆಂದುಹರುಷವ । ತಾಳಿತ
ಕ್ಕೈಸಿದಳುದಮಯಂತಿಯನುತಾಬಿಡದೆ ॥೩೩॥

ಟೀಕೆ:— ಬಾಲೆ- ಬಾಲಕಿಯೇ ! ಶೋಕವನು-ದುಃಖವನ್ನು, ಬಿಡು, ತಾ-ನಾನು (೧) ಭೀಮನೃಪಾಲನ-ಭೀಮರಾಜನ (೨) ಅರಸಿಗೆ-ಹೆಂಡತಿಗೆ, ತಂಗಿ, ತನ್ನ-ನನ್ನ, ಆಲಯದಿ-ಮನೆಯಲ್ಲಿ, ಕಡುನೊಂದೆ-ಬಹುವ್ಯಥೆಪಟ್ಟಿದ್ದೀಯೆ, ಸಾಕು, ಮಗಳೆ, ನಮ್ಮೊಡನೆ-ನಮ್ಮ ಸಂಗಡ, ಪೇಳದಿಹರೆ-ಹೇಳದೆ ಇರಬಹುದೆ, ನೀಂ-ನೀನು, ಎಮಗೆ-ನಮಗೆ, ಸುನೀತೆಯ, ಆಸಮಪಾಳಿ-ಸಮಾನಳು, ಎಂದು, ಹರುಷವ-ಸಂತೋಷವನ್ನು, ತಾಳಿ-ಹೊಂದಿ, ತಾ-ತಾನು, ದಮಯಂತಿಯನು, ಬಿಡದೆ, ತಕ್ಕೈಸಿದಳು-ಆಲಿಂಗಿಸಿದಳು ॥೩೩॥

ತಾತ್ಪರ್ಯ:—ಎಲೈ ಬಾಲಕಿಯೇ ನಾನು ನಿಮ್ಮ ತಂದೆಯಾದ ಭೀಮರಾಜನ ಹೆಂಡತಿಗೆ ತಂಗಿ, ನಮಗೆ ನೀನು ಯಾರೆಂಬುದನ್ನು ತಿಳಿಸದೆ ಹೀಗೆ ಮರೆಮಾಚಬಹುದೇ! ನಮ್ಮ ಸುನೀತೆಯಂತೆ ನೀನೂ ನನ್ನ ಮಗಳಲ್ಲವೇ ! ಇಲ್ಲಿನವರೆಗೂ ನಮ್ಮಮನೆಯಲ್ಲಿ ಬಹುಕಷ್ಟದಿಂದ ಇದ್ದೆ, ಎಂದು ಬಹುಸಂತೋಷಪಟ್ಟುತಬ್ಬಿಕೊಂಡಳು ॥೩೩॥

ಟಿಪ್ಪಣಿ:— (೧) ಭೀಮನೆಂಬ ನೃಪಾಲ-ಭೀಮನೃಪಾಲ (ಸಂ. ಪೂರ್ವ. ಕ) (೨) ಅರಸನ ಹೆಂಡತಿ-ಅರಸಿ, ಸ್ತ್ರೀಲಿಂಗದಲ್ಲಿ ಇ, ಎಂಬ ತದ್ಧಿತ ಪ್ರತ್ಯಯವು ಬಂತು ॥೩೩॥

ಮೂ॥ ಕಿರಿಯತಂದೆಸುಬಾಹುಮರುಗಿದ।ವರಕುವರಿದಮಯಂತಿಗೆಂ
ದನು । ಪುರುಷನಿಲ್ಲದೆಚಿಂತೆಯಿಂದೆಲ್ಲವನುನೀತೊರೆದು ॥ ಕರಗಿ
ಕಂದಿದೆಮಗಳೆತಾನಿಂ । ತರಿಪುದಿಲ್ಲಕಟಕಟಪುರುಷನ। ಕರೆಸಿಕೊ
ಡುವೆನಿದಕೆಚಿಂತಿಸಬೇಡನೀನೆಂದ ॥೩೪॥

ಟೀಕೆ:—ಕಿರಿಯತಂದೆ-ಚಿಕ್ಕಪ್ಪನಾದ, ಸುಬಾಹು-ಸುಬಾಹು

ವು, ಮರುಗಿದನು-ವ್ಯಥೆಪಟ್ಟನು (೧) ವರಕುವರಿದಮಯಂತಿಗೆ-ಮಗಳಾದ ದಮಯಂತಿಯನ್ನು ಕುರಿತು, ಎಂದನು-ಹೇಳಿದನು. (ಏನಂದರೆ) ಮಗಳೆ, ನೀ-ನೀನು, ಪುರುಷನಿಲ್ಲದೆ - ಗಂಡನಗಲಿದುದರಿಂದ, ಚಿಂತೆಯಿಂದೆ-ಆಲೋಚನೆಯಿಂದ, ಎಲ್ಲವನು - ಎಲ್ಲಸೌಖ್ಯಗಳನ್ನೂ, ತೊರೆದು-ಬಿಟ್ಟು, ಕರಗಿ-ಕೊರಗಿ, ಕಂದಿದೆ-ಕಳೆಗುಂದಿದ್ದೀಯೆ, ತಾಂ-ನಾನು (೨) ಇಂತು-ಹೀಗೆಂದು, ಅರಿದುದಿಲ್ಲ-ತಿಳಿಯಲಿಲ್ಲ, ಅಕಟಕಟ-ಅಯ್ಯೋ, ಪುರುಷನ-ನಿನ್ನ ಪತಿಯನ್ನು, ಕರೆಸಿ-ಕೊಡುವೆನು- ಬರ ಮಾಡುವೆನು, ನೀಂ-ನೀನು, ಇದಕೆ-ಇದಕ್ಕೆ ಚಿಂತಿಸಬೇಡ-ಆಲೋಚಿಸಬೇಡ, ಎಂದ-ಎಂಬದಾಗಿ ಹೇಳಿದನು ||೩೪||

ತಾತ್ಪರ್ಯ:--ಚಿಕ್ಕಪ್ಪನಾದ ಸುಬಾಹುವು ಈ ವೃತ್ತಾಂತವನ್ನು ಕೇಳಿ ದುಃಖಪಟ್ಟು ಮಗಳಾದ ದಮಯಂತಿಯನ್ನು ನೋಡಿ-ಮಗಳೇ ನೀನು ಹೀಗೆ ಗಂಡನನ್ನು ಅಗಲಿ ದುಃಖಕ್ಕೊಳಗಾಗಿ ಕೊರಗಿ ಕೃಶಳಾಗಿರುವಿಯೆಂದು ನನಗೆ ತಿಳಿದಿರಲಿಲ್ಲ. ಚಿಂತಿಸಬೇಡ, ನಿನ್ನ ಪತಿಯನ್ನು ಎಲ್ಲದ್ದರೂ ಕರೆಯಿಸಿಕೊಡುವೆನು, ಇನ್ನು ಇದಕ್ಕಾಗಿ ನೀನು ವ್ಯಥೆ ಪಡಬೇಡ ಎಂದು ಧೈರ್ಯವನ್ನು ಹೇಳಿದನು ||೩೪||

ಟಿಪ್ಪಣಿ:— (೧) ವರಳಾದ ಕುವರಿ-ವರಕುವರಿ (ವಿ. ಪೂರ್ವ.ಕ) ಕುವರಿಯಾದ ದಮಯಂತಿ-ವರಕುವರಿದಮಯಂತಿ (ವಿ. ಪೂರ್ವ. ಕ) (೨) ರೀತಿವಾಚಕಾವ್ಯಯ ||೩೪||

ಮೂ|| ತರಳೆಯನುಸಂತೈಸಿಕಣ್ಣಿನೊ | ಳೊರೆವಕಂಬನಿಗಳನುಸೆ
ರಗಿನೊ | ಳೊರಸಿದಮಯಂತಿಯಳಮನ್ನಿಸಿಬಂದನೋಲಗಕೆ ||
ಕರಸಿದನುಭೂಸುರಸುದೇವನ | ಮಿರುಪಮಣಿಭೂಷಣಗಳಿಂದು
ಪ | ಚರಿಸಿಕಳುಹಲುಬಂದ ಭೀಮನೃಪಾಲನೋಲಗಕೆ ||೩೫||

ಟೀಕೆ:— ತರಳೆಯನು- ಮಗಳನ್ನು, ಸಂತೈಸಿ - ಸಮಾಧಾನಗೊಳಿಸಿ, ಕಣ್ಣಿನೊಳ್-ಕಣ್ಣಿನಲ್ಲಿ ಒರೆವ-ಹರಿವ(೧)ಕಂಬನಿಯ-ಕಣ್ಣೀರನ್ನು, ಒರಸಿ-ತೊಡೆದು,ದಮಯಂತಿಯಳ-ದಮಯಂತಿಯನ್ನು, ಮನ್ನಿಸಿ-ಮರ್ಯಾದೆಮಾಡಿ,ಓಲಗಕೆ-ಸಭೆಗೆ, ಬಂದಂ-ಬಂದನು,ಭೂಸುರಸುದೇವನ-ಸುದೇವನೆಂಬ ಬ್ರಾಹ್ಮಣನನ್ನು, ಕರೆಸಿದನು, ಮಿರುಪ-ಪ್ರಕಾಶಿಸುವ (೨) ಮಣಿಭೂಷಣಗಳಿಂದೆ-ರತ್ನಖಚಿತವಾದ ಒಡವೆಗಳಿಂದ, ಕಳುಹಲು-ಕಳುಹಿಸಲು, ಭೀಮನೃಪಾಲನ-ಭೀಮರಾಜನ, ಓಲಗಕೆ-

ರಾಜಸಭೆಗೆ, ಬಂದ ॥೩೫॥

ಟಿಪ್ಪಣಿ:— (೧) ಕಣ್ಣಪನಿ-ಕಂಬನಿ-ಕಂಬನಿ (ಷ. ತ) (೨) ಮಣಿಖಚಿತವಾದ ಭೂಷಣಮಣಿ ಭೂಷಣ (ಲುಪ್ತ. ಮ. ಕ. ಸ) ॥೩೫॥

ಮೂ॥ ಅರಸಕೇಳುವಿದರ್ಭಪುರಪತಿ । ಮರುಗುತಿರಲಾಸಮಯದಲಿ
ಭೂ। ಸುರಸುದೇವನುಬಂದುಕೈಮುಗಿದೆಂದನೀಹದನ ॥ ತರುಣಿ
ದಮಯಂತಿಯನುಕಂಡೆನು । ಹರುಷಮಿಗಿಲಾಚೈದ್ಯಪುರದಲಿ ।
ವರಜನನಿ ಚಿಕ್ಕಮ್ಮನಲ್ಲಿಹಳೆಂದನಾವಿಬುಧ ॥೩೬॥

ಟೀಕೆ:— ಅರಸ-ಧರ್ಮರಾಜನೇ, ಕೇಳು (೧) ವಿದರ್ಭಪುರಪತಿ ಭೀಮರಾಜನು, ಮರುಗುತಿರಲ್-ವ್ಯಥೆಪಡುತ್ತಿರಲು, ಆಸಮಯದಲಿ-ಆಕಾಲದಲ್ಲಿ, ಭೂಸುರಸುದೇವನು-ಬ್ರಾಹ್ಮಣನಾದ ಸುದೇವನು, ಬಂದು, ಕೈಮುಗಿದು-ಕೈಜೋಡಿಸಿ,ಈಹದನ-ಈ ಸಮಾಚಾರವನ್ನು, ಎಂದನು, ಆವಿಬುಧ-ಆ ಬ್ರಾಹ್ಮಣನು, ತರುಣಿದಮಯಂತಿಯನು - ಹುಡುಗಿಯಾದ ದಮಯಂತಿಯನ್ನು, ಕಂಡೆನು, ಹರುಷಮಿಗಿಲು-ಸಂತೋಷವಾಗಿ (೨) ಆ ಚೈದ್ಯಪುರದಲಿ-ಆಚೈದ್ಯಪಟ್ಟಣದಲ್ಲಿ, ವರಜನನಿ-ತಾಯಿಗೆ ಸಮಾನಳಾದ, ಚಿಕ್ಕಮ್ಮನಲಿ-ಚಿಕ್ಕಮ್ಮನಮನೆಯಲ್ಲಿ, ಇಹಳ್-ಇರುವಳು, ಎಂದಂ-ಎಂದನು ॥೩೬॥

ತಾತ್ಪರ್ಯ:— ಇತ್ತಲಾ ವಿದರ್ಭರಾಜನು ತನ್ನ ಮಗಳ ವೃತ್ತಾಂತವನ್ನು ತಿಳಿದುಬರುವುದಕ್ಕೆ ಹೋದವರಾರೂ ಬರಲಿಲ್ಲವೆಂದು ಚಿಂತಾಕ್ರಾಂತನಾಗಿಸಭೆಯಲ್ಲಿರುತ್ತಿರುವಸಮಯದಲ್ಲಿ, ಸುಖವಾಗಿದ್ದಾಳೆ ನಾನು ಕಂಡು ಬಂದೆನು. ಎಂದು ಹೇಳಿದನು ॥೩೬॥

ಟಿಪ್ಪಣಿ:—(೧) ವಿದರ್ಭವೆಂಬಪುರ-ವಿದರ್ಭಪುರ(ಸಂ.ಪೂರ್ವ.ಕ) ವಿದರ್ಭಪುರದಪತಿ-ವಿದರ್ಭಪುರಪತಿ (ಷ.ತ.)(೨) ಚೈದ್ಯವೆಂಬಪುರ-ಚೈದ್ಯಪುರ(ಸಂ.ಪೂರ್ವ.ಕ)ಅದುಚೈದ್ಯಪುರ-ಆಚೈದ್ಯಪುರ(ಗಮಕ)॥

ಮೂ॥ ಕಂಡುಮಾತಾಡಿದನುಸತಿಯಳು । ಮುಂಡೆಮಾಸಿದಮಲಿನವಸನದ । ಗಂಡನಗಲಿದಚಿಂತೆಯಲಿಮುಖಬಾಡಿದೇಹವನು ॥ ದಂಡಿಸಿ
ದಳನ್ನದಲಿಮನಮುಂ । ಕೊಂಡುದಾಸತಿಗಿನಿಯನನುನೆರೆ ।
ಕಂಡುಹೇಳುವರಾರೆನುತಮರುಗುವಳುಮನನೊಳಗೆ ॥೩೭॥

ಟೀಕೆ:— ಕಂಡು-ನೋಡಿ, ಮಾತಾಡಿದನು-ಮಾತನಾಡಿದನು, ಸತಿಯಳು-ದಮಯಂತಿಯು, ಮುಂಡೆಮಾಸಿದ-ತಲೆಯು ಕೊಳೆಯಾಗಿ

ರುವ, ಮಲಿನವಸ್ತ್ರದ-ಕೊಳೆಯಾದಬಟ್ಟೆಯುಳ್ಳ, ಗಂಡನ-ಪತಿಯು ನ್ನು, ಅಗಲಿದ-ಬಿಟ್ಟಿರುವ, ಚಿಂತೆಯಲಿ - ಆಲೋಚನೆಯಿಂದ, ಮುಖ ಬಾಡಿ-ಮುಖವುಬಣಗಿಹೋಗಿ, ದೇಹವನು, ಅನ್ನದಲಿ, ದಂಡಿಸಿದಳು-ಘಾಸಿಪಡಿಸಿದವಳು (೧) ಆಸತಿಗೆ-ಆ ದಮಯಂತಿಗೆ, ಮನ-ಮನಸ್ಸು (೨) ಮುಂಕೊಂಡುದು-ಆತುರಪಡುತ್ತಿತ್ತು, ಇನಿಯನನು-ಪತಿಯನ್ನು, ನೆರೆ-ಚೆನ್ನಾಗಿ, ಕಂಡು-ನೋಡಿ, ಹೇಳುವರ್-ವರ್ತಮಾನವನ್ನು ತಿಳಿಸುವರು. ಆರ್-ಯಾರು ? ಎನುತ-ಎಂಬದಾಗಿ, ಮನದೊಳಗೆ-ಮನಸ್ಸಿನಲ್ಲಿ ಮರುಗುವಳು-ದುಃಖಿಸುವಳು ॥೩೭॥

ತಾತ್ಪರ್ಯ;— ಸುದೇವನು ಭೀಮರಾಜನಂ ಕುರಿತು—ಅಯ್ಯಾ ರಾಜೇಂದ್ರನೇ ಆ ದಮಯಂತಿಯು ಗಂಡನನ್ನಗಲಿರುವ ವ್ಯಥೆಯಿಂದ, ಅಭ್ಯಂಜನ ಸ್ನಾನಾದಿಗಳಿಲ್ಲದೆ ಮಾಸಿದ ತಲೆಯುಳ್ಳವಳಾಗಿಯೂ, ಮಲಿನವಾದ ಒಂದೇವಸ್ತ್ರವನ್ನು ಧರಿಸಿದವಳಾಗಿಯೂ, ಕ್ಲುಪ್ತವಾದ ಭೋಜನವನ್ನು ಬಿಟ್ಟು, ದೇಹವನ್ನು ದಂಡಿಸುವಳಾಗಿಯೂ, ಬಾಡಿದ ಮುಖವುಳ್ಳವಳಾಗಿಯೂ ಇರುತ್ತಾ ತನ್ನ ಪತಿಯ ವೃತ್ತಾಂತವನ್ನು ಸರಿಯಾಗಿ ತಿಳಿದು ಬಂದು ಯಾರು ಹೇಳುವರು !ಎಂದು ಚಿಂತಾಕ್ರಾಂತಳಾಗಿ ತಹತಹ ಪಡುತ್ತಿರುವಳು ॥೩೭॥

ಟಿಪ್ಪಣಿ:— (೧) ಅವಳುಸತಿ (ಗಮಕ) (೨) ಮುಂದಂಕೊಂಡುದು-ಮುಂಕೊಂಡುದು (ಕ್ರಿ. ಸ) ॥೩೭॥

ಮೂ॥ ಕೇಳುತರಸನವದನಕಾಂತಿವಿ ।ಶಾಲವಾದುದುಮನದಿಹರುಷ
ವ । ತಾಳಿಹೊಂಪುಳಿಯಾಗಿಭೀಮನೃಪಾಲಕರಸಿದನು ॥ ಬಾಲೆಯು
ರತನ್ನಾಪ್ತಸಚಿವರ । ಮೇಳದಲಿನಿಜಸುತೆಯುಕರತರ । ಹೇಳಿರ
ತ್ನಾಭರಣಗಳನಿತ್ತವನಿಪನುಕಳುಹಿದನು ॥೩೮॥

ಟೀಕೆ:— ಕೇಳುತ-ಈ ಮಾತನ್ನು ಕೇಳಿದಕೂಡಲೆ, ಅರಸನ-ದೊರೆಯ, ವದನಕಾಂತಿ-ಮುಖದಕಳೆಯು, ವಿಶಾಲವಾದುದು-ವಿಸ್ತಾರವಾಯ್ತು, ಭೀಮನೃಪಾಲ-ಭೀಮರಾಜನು, ಮನದಿ-ಮನಸ್ಸಿನಲ್ಲಿ, ಹರ್ಷವ-ಸಂತೋಷವನ್ನು, ತಾಳಿ-ಹೊಂದುತ್ತಾ, ಹೊಂಪುಳಿಯಾಗಿ-ರೋಮಾಂಚವನ್ನು ತಳೆದು, ಬಾಲೆಯುರ-ಹೆಂಗಸರನ್ನು, ಕರಸಿದನು-ಬರಮಾಡಿದನು, ಅವನಿಪನು-ದೊರೆಯು, ತನ್ನ, (೧) ಆಪ್ತಸಚಿವರ-ಮುಖ್ಯಮಂತ್ರಿಗಳ, ಮೇಳದಲಿ-ಜತೆಯಲ್ಲಿ (೨) ನಿಜಸುತೆಯು-ತನ್ನ

ಮಗಳನ್ನು, ಕರತರಹೇಳಿ - ಕರೆನುಕೊಂಡು ಬರಬೇಕೆಂದುಹೇಳಿ. (೨) ರತ್ನಾಭರಣಗಳಂ-ರತ್ನಖಚಿತವಾದ ಭೂಷಣಗಳನ್ನು, ಇತ್ತು-ಕೊಟ್ಟು ಕಳುಹಿದನು-ಕಳುಹಿಸಿಕೊಟ್ಟನು ॥೩೪॥

ತಾತ್ಪರ್ಯ:— ಸುದೇವನ ಮಾತನ್ನು ಕೇಳಿದ ಕೂಡಲೆ ದೊರೆಯ ಮುಖವು ವಿಕಾಸವಾಯ್ತು. ಸಂತೋಷದಿಂ ರೋಮಾಂಚವನ್ನು ಹೊಂದಿ ಕೂಡಲೆ ಕೆಲವುಮಂದಿ ಸ್ತ್ರೀಯರನ್ನೂ ಮುಖ್ಯ ಮಂತ್ರಿಗಳನ್ನೂ ಕರೆಯಿಸಿ ಅವರಿಗೆ ವಸ್ತ್ರಭೂಷಣಾದಿಗಳಿಂದ ಮರ್ಯಾದೆಮಾಡಿ ಮಗಳಾದ ದಮಯಂತಿಯನ್ನು ಕರೆದು ಕೊಂಡು ಬನ್ನಿ, ಎಂದು ಕಳುಹಿಸಿಕೊಟ್ಟನು ॥೩೪॥

ಟಿಪ್ಪಣಿ:— (೧) ಆಪ್ತರಾದ ಸಚಿವರು-ಆಪ್ತಸಚಿವರು (ವಿ. ಪೂರ್ವ.ಕ) (೨) ರತ್ನ + ಆಭರಣ-ರತ್ನಾಭರಣ - (ಸ. ದೀ. ಸಂ) ರತ್ನ (ಖಚಿತವಾದ) ಆಭರಣ-ರತ್ನಾಭರಣ (ಉ. ಮ. ಕ) ॥೩೪॥

ಮೂ॥ ಬಂದರಲ್ಲಿಗೆಚೈದ್ಯನೃಪತಿಯ । ನಂದುಕಾಣಿಸಿಕೊಂಡೊಡವರ
ನು। ಮಂದಿರದಸುಕ್ಷೇಮಕುಶಲವಕೇಳೆಪೇಳಿದರು॥ಇಂದುಮುಖಿ
ದಮಯಂತಿಯನುಕಳು । ಹೆಂದುಭೀಮನೃಪಾಲಹರುಷದೊ ।
ಳಿಂದುನಿಮಗುಡುಗೊರೆಗಳುಹಿದನುರಾಯಕೇಳೆಂದು ॥೩೫॥

ಟೀಕೆ:— ಅಲ್ಲಿಗೆ-ಚೈದ್ಯನಗರಕ್ಕೆ, ಬಂದರು, ಚೈದ್ಯನೃಪತಿಯಂ-ಚೈದ್ಯರಾಜನನ್ನು, ಅಂದು-ಆಗ, ಕಾಣಿಸಿಕೊಂಡೊಡೆ-ಕಾಣಿಸಿಕೊಳ್ಳಲು, ಅವರನು-ಅವರನ್ನು, ಮಂದಿರದ-ಮನೆಯ, ಸುಕ್ಷೇಮಕುಶಲವ-ಯೋಗಕ್ಷೇಮಗಳನ್ನು, ಕೇಳೆ-ಪ್ರಶ್ನೆಮಾಡಲು, ಪೇಳಿದರು-ಹೇಳಿದರು, ಇಂದು-ಈಗ (೧) ಇಂದುಮುಖಿ ದಮಯಂತಿಯನು-ಕಮಲಮುಖಿಯಾದ ದಮಯಂತಿಯನ್ನು, ಕಳುಹು-ಕಳುಹಿಸಿಕೊಡು, ಎಂದು ಎಂಬದಾಗಿ, ಭೀಮನೃಪಾಲನು-ಭೀಮರಾಜನು, ಹರುಷದೊಳ್-ಸಂತೋಷದಿಂದ, ನಿಮಗೆ, (೨) ಉಡುಗೊರೆಗಳುಹಿದನು- ಉಡೊಗೊರೆಯನ್ನು ಕಳುಹಿಸಿರುವನು: ರಾಯ-ದೊರೆಯೇ, ಕೇಳ್-ಕೇಳು ॥೩೫॥

ತಾತ್ಪರ್ಯ:—ಅವರೆಲ್ಲರೂ ಹೊರಟು ಚೈದ್ಯನಗರಕ್ಕೆಬಂದು ಚೈದ್ಯರಾಜನಾದ ಸುಬಾಹುವನ್ನು ಕಂಡರು, ಅವನು ವಿದರ್ಭರಾಜನ ಕುಶಲಪ್ರಶ್ನೆಯನ್ನು ಮಾಡಲು ಎಲ್ಲವನ್ನೂ ಹೇಳಿ-ತನ್ನ ಮಗಳಾದ ದಮಯಂತಿಯನ್ನು ಕಳುಹಿಸಿಕೊಡಬೇಕೆಂದು ಸಂತೋಷ ಪೂರ್ವಕವಾಗಿ

ವಸ್ತ್ರಾಭರಣಗಳನ್ನು ನಿಮಗೆ ಮರ್ಯಾದೆಮಾಡಿ ಕಳುಹಿಸಿರುವನು. ಎಂದು ಹೇಳಿದರು ||೩೯||

ಟಿಪ್ಪಣಿ:—(೧) ಇಂದುವಿನಂತೆ ಮುಖವುಳ್ಳವಳು-ಇಂದುಮುಖಿ (ಬ. ವ್ರೀ. ಸ) ಇಂದುಮುಖಿಯಾದ ದಮಯಂತಿ-ಇಂದುಮುಖಿದಮಯಂತಿ (ವಿ. ಪೂರ್ವ. ಕ) (೨) ಉಡುವಕೊರೆ (ವಸ್ತ್ರ) ಉಡುಗೊರೆ (ಗಮಕ) ಉಡುಗೊರೆಯಂ ಕಳುಹಿದನು - ಉಡುಗೊರೆಗಳುಹಿದನು (ಕ್ರಿ. ಸ) ||೩೯||

ಮ|| ಅರಸಕೇಳುಸುಬಾಹುಭೂಪತಿ | ಕರಸಿದನುಮಂತ್ರಿಗಳಭೀ
ಮನ| ಪುರಕೆಪಯಣವಮಾಡಿದನುದಮಯಂತಿಯನುಕರೆದು|| ತ
ರುಣಿನೀನಮ್ಮಲ್ಲಿತಿಂಗಳು| ಹೊರೆದೆದೇಹವಕಷ್ಟದಲಿಯೆಂ| ದುರು
ತರದಪ್ರೇಮದಲಿಕೊಟ್ಟನುಸಕಲಭೂಷಣವ ||೪೦||

ಟೀಕೆ:—ಅರಸ-ಧರ್ಮರಾಜನೆ, ಕೇಳು (೧) ಸುಬಾಹುಭೂಪತಿ-ಸುಬಾಹುರಾಜನು, ಮಂತ್ರಿಗಳ-ಸಚಿವರನ್ನು, ಕರಸಿದನು-ಬರಮಾಡಿದನು, ದಮಯಂತಿಯನು, ಕರೆದು-ಬರಹೇಳಿ, ಭೀಮನಪುರಕೆ-ವಿದರ್ಭಪುರಕ್ಕೆ, ಪಯಣವ-ಪ್ರಯಾಣವನ್ನು, ಮಾಡಿದನು-ಗೊತ್ತುಮಾಡಿದನು ತರುಣಿ-ದಮಯಂತಿಯೇ, ನೀ-ನೀನು, ನಮ್ಮಲ್ಲಿ - ನಮ್ಮ ಮನೆಯಲ್ಲಿ, ತಿಂಗಳು-ಒಂದು ತಿಂಗಳು, ಕಷ್ಟದಲಿ-ಕಷ್ಟಪಟ್ಟುಕೊಂಡು, ದೇಹವ ಹೊರದೆ-ಕಾಲಕ್ಷೇಪಮಾಡಿದೆ, ಎಂದು, ಉರುತರದ-ಹೆಚ್ಚಾದ, ಪ್ರೇಮದಲಿ-ಪ್ರೀತಿಯಿಂದ, (೨) ಸಕಲ ಭೂಷಣವ- ಎಲ್ಲ ಆಭರಣಗಳನ್ನು, ಕೊಟ್ಟನು. ||೪೦||

ತಾತ್ಪರ್ಯ:—ಕೂಡಲೆ ಸುಬಾಹುವು ತನ್ನ ಆಪ್ತಮಂತ್ರಿಗಳನ್ನು ಕರೆಯಿಸಿ, ದಮಯಂತಿಯನ್ನು ಬರಹೇಳಿ ಎಲ್ಲರನ್ನೂ ಭೀಮರಾಜನಬಳಿಗೆ ಹೋಗುವುದಕ್ಕಾಗಿ ಪ್ರಯಾಣಮಾಡಿಸಿ ದಮಯಂತಿಯನ್ನು ಕರೆತು ಅಮ್ಮಾ ನೀನು ನಮ್ಮ ಮನೆಯಲ್ಲಿ ನೀನು ಕಷ್ಟಪಟ್ಟು ಒಂದುತಿಂಗಳಿಂದಲೂ ಇದ್ದೆ. ಈಗ ನಿಮ್ಮ ತಂದೆಯಮನೆಗೆ ಹೋಗಿ ಸುಖವಾಗಿ ಇರು, ಎಂದು ಹೇಳಿ ಅನೇಕ ವಸ್ತ್ರಾಭರಣಗಳನ್ನು ಕೊಟ್ಟು ಮನ್ನಣೆ ಮಾಡಿದನು. ||೪೦||

ಟಿಪ್ಪಣಿ:—(೧) ಸುಬಾಹುವೆಂಬ ಭೂಪತಿ-ಸುಬಾಹು ಭೂಪತಿ (ಸಂ. ಪೂರ್ವ. ಕ) (೨) ಸಕಲವಾದ ಭೂಷಣ-ಸಕಲಭೂಷಣ

(ವಿ. ಪ್ರೂರ್ವ. ಕ) ॥೪೦॥

ಮೂ॥ ತರಿಸಿದನುದಂಡಿಗೆಯೊಳಗೆಕು। ಳ್ಳಿರಿಸಿಸತಿಯರಗಡಣದಲಿ
ಮಂ। ದಿರವಹೊರವಂಟರಸನೇರಿದಗಜದಕಂಧರವ ॥ ಮೆರೆವನಾ
ನಾವಾದ್ಯರಭಸದಿ। ಕರಿತುರಗಕಾಲಾಳುಸಂದಣಿ। ಯುರವಣಿಸೆನ
ಡೆತಂದುಹೊಕ್ಕವಿದರ್ಭಪಟ್ಟಣವ ೪೧॥

ಟೀಕೆ:—ತರಿಸಿದನು, ದಂಡಿಗೆಯೊಳಗೆ-ಪಲ್ಲಕ್ಕಿಯಲ್ಲಿ, ಸತಿಯು ರ-ಸಖಿಯರ, ಗಡಣದಲಿ-ಜೊತೆಯಲ್ಲಿ, ಕುಳ್ಳಿರಿಸಿ-ಕೂಡಿಸಿ, ಅರಸಂ-ದೊರೆಯು, ಮಂದಿರವ-ಮನೆಯನ್ನು, ಹೊರವಂಟು- ಬಿಟ್ಟು ಹೊರಟು, ಗಜದ-ಆನೆಯ, (೧) ಕಂಧರವ-ಹೆಗಲನ್ನು, ಏರಿದ-ಹತ್ತಿದನು, ಮೆರೆ ವ-ಪ್ರಕಾಶಿಸುವ, ನಾನಾವಾದ್ಯರಭಸದಿ - ಅನೇಕವಾದ್ಯ ಧ್ವನಿಗಳಿಂದ, ಕರಿ-ಆನೆ, (೨) ತುರಗ-ಕುದುರೆ, ಕಾಲಾಳು-ಕಾಲುಬಲ, (ಇವುಗಳ,) ಸಂದಣಿ-ಗುಂಪು, ಉರವಣಿಸೆ-ದಿಕ್ಕು ದಿಕ್ಕಿಗೂವ್ಯಾಪಿಸಲು, ನಡೆತಂದು-ಬಂದು, (೩) ವಿದರ್ಭಪಟ್ಟಣವ-ವಿದರ್ಭಪುರವನ್ನು, ಹೊಕ್ಕ- ಪ್ರವೇಶಿಸಿದನು. ॥೪೧॥

ತಾತ್ಪರ್ಯ:—ಪಾಲಕಿಯನ್ನು ತರಿಸಿ ಅನೇಕಮಂದಿ ಸಖಿಯರೊಡನೆ ದಮಯಂತಿಯನ್ನು ಕುಳ್ಳಿರಿಸಿ, ತಾನೂ ಒಂದು ದಿವ್ಯಗಜವನ್ನೇರಿ ಸುಬಾಹುರಾಜನು ಅನೇಕ ವಾದ್ಯಧ್ವನಿಗಳಿಂದ, ಚತುರಂಗಸಮೇತನಾಗಿ ಬಹಳ ವೈಭವದಿಂದ ಪ್ರಯಾಣಮಾಡಿ ವಿದರ್ಭಪುರಕ್ಕೆ ಬಂದನು॥

ಟಿಪ್ಪಣಿ:—(೧) ಕಂ-ತಲೆಯನ್ನು, ಧರ-ಹೊತ್ತಿರುವುದು-ಕೊರಲು, (೨) ತುರ-ವೇಗವಾಗಿ, ಗ-ನಡೆವುದು-ಕುದುರೆ, (೩) ವಿದರ್ಭನ ಪಟ್ಟಣ - ವಿದರ್ಭಪಟ್ಟಣ, (ಷ. ತ) ಪಟ್ಟಣಕ್ಕೆ, (ತ್ಸ) ಪತ್ತನ, ॥೪೧॥

ಮೂ॥ ದೂತರೈದಿದರೊಸಗೆಯಲಿಜನ। ಜಾತನಲಿಯಲುಬಂದುಬೇಗ
ದಿ। ಭೂತಳೇಂದ್ರಗೆಕೈಮುಗಿದುದಮಯಂತಿಬಂದಳೆನೆ॥ಮಾತಕೇ
ಳುತಲೆದ್ದುಬಲುಸಂಘಾತದೈತಂದವರಕಂಡತಿ।ಪ್ರೀತಿಯಿಂತಕ್ಕೈ
ಸಿಕರೆತಂದನುನಿಜಾಲಯಕೆ ॥೪೨॥

ಟೀಕೆ:—ದೂತರ್-ಸೇವಕರು, ಒಸಗೆಯಲಿ- ಶುಭವಾರ್ತೆಯಿಂದ, ಐದಿದರ್-ಬಂದರು, (೧) ಜನಜಾತ-ಜನಗಳಗುಂಪು, ನಲಿಯಲು, ಸಂತೋಷಪಡುತ್ತಿರಲು, ಬೇಗದಿ-ಬೇಗನೆ, ಬಂದು, (೨) ಭೂತಳೇಂ

ದ್ರಗೆ-ರಾಜಶ್ರೇಷ್ಠನಿಗೆ, ಕೈಮುಗಿದು, ದಮಯಂತಿ, ಬಂದಳು, ಎನೆ-ಎಂಬದಾಗಿಹೇಳಲು, ಮಾತ-ಆ ಮಾತನ್ನು, ಕೇಳುತಲಿ-ಕೇಳುತ್ತಾ, ಎಷ್ಟು, ಬಲುಸಂಘಾತವೆ-ಬಹಳಜನದೊಡನೆ,ಐತಂದು-ಬಂದು,ಅವರ-ಅವರೆಲ್ಲರನ್ನೂ, ಕಂಡು-ನೋಡಿ, ಅತಿಪ್ರೀತಿಯಿಂ - ಬಹಳಪ್ರೇಮದಿಂದ, ತಕ್ಕೈಸಿ-ಆಲಿಂಗಿಸಿ, ನಿಜಾಲಯಕೆ-ತನ್ನಮನೆಗೆ, ಕರೆತಂದನು-ಕರೆದುಕೊಂಡು ಬಂದನು. ||೪೨||

ತಾತ್ಪರ್ಯ:—ರಾಜದೂತರು ಶುಭವಾರ್ತೆಯನ್ನು ತೆಗೆದು ಕೊಂಡು ಅರಮನೆಗೆ ಬಂದುದನ್ನು ನೋಡಿ ಬಹುಮಂದಿ ಗುಂಪುಸೇರಿದರು. ಅವರು ದೊರೆಗೆ ಕೈಮುಗಿದು ದಮಯಂತಿ ಬಂದಳೆಂಬ ಸಮಾಚಾರವನ್ನು ತಿಳಿಸಲು ಕೂಡಲೆ ಎದ್ದುಬಂದು ಅವರೆಲ್ಲರನ್ನೂ ಉಚಿತೋಪಚಾರಗಳಿಂದ ಮರ್ಯಾದೆ ಮಾಡಿ ಅರಮನೆಗೆ ಕರೆದುಕೊಂಡು ಬಂದನು.||೪೨||

ಟಿಪ್ಪಣಿ:—(೧) ಜನದಜಾತ-ಜನಜಾತ (ಷ. ತ) (೨) ಭೂತಳ+ಇಂದ್ರ ಭೂತಳೇಂದ್ರ (ಗುಣ) ಭೂತಳದ ಇಂದ್ರ- ಭೂತಳೇಂದ್ರ, (ಷ. ತ) ||೪೨||

ಮೂ|| ಅವನಿಪತಿಕೇಳಾಪುರದೊಳು| ತ್ಸವವನದನೇನೆಂಬೆನಂದಿನ|ದಿ
ವಸದೊಳಗರಮನೆಯೊಳಾದಮಯಂತಿಯನುಜನನಿ || ತವಕದಿಂ
ಬಿಗಿಯಪ್ಪಿದಳುಬಾಂ| ಧವರುಸಂತೋಷಿಸಿದರನಿಬರು| ಯುವತಿ
ಯರುನಿಜತನಯರಾಲಿಂಗಿಸಿದರಂಗನೆಯ ||೪೩||

ಟೀಕೆ:—ಅವನಿಪತಿ-ಧರ್ಮರಾಜನೇ, ಕೇಳ್-ಕೇಳು, ಆಪುರದೊಳ್, ಆ ಪಟ್ಟಣದಲ್ಲಿ, (೧) ಉತ್ಸವವಂ-ಸಂತೋಷವನ್ನು, ಅದಂ-ಅದನ್ನು, ಏನೆಂಬೆಂ-ಏನೆಂದು ಹೇಳಲಿ, ಅಂದಿನ ದಿವಸದೊಳಗೆ-ಆದಿನದಲ್ಲಿ, ಅರಮನೆಯೊಳ್- ಅರಮನೆಯಲ್ಲಿ, ಆ ದಮಯಂತಿಯನು-ದಮಯಂತಿಯನ್ನು, ಜನನಿ-ತಾಯಿಯು, ತವಕದಿಂ-ಬೇಗನೆ, ಬಿಗಿಯಪ್ಪಿದಳು-ಆಲಿಂಗನಮಾಡಿಕೊಂಡಳು, ಅನಿಬರು-ಸಮಸ್ತರಾದ, ಬಾಂಧವರು-ನಂಟರು, ಯುವತಿಯರು-ಹೆಂಗಸರು, ಸಂತೋಷಿಸಿದರು- ಆನಂದಪಟ್ಟರು, ಅಂಗನೆಯ-ದಮಯಂತಿಯನ್ನು,(೨)ನಿಜತನಯರ್-ತನ್ನ ಮಕ್ಕಳು,ಆಲಿಂಗಿಸಿದರ್-ತಬ್ಬಿಕೊಂಡರು ||೪೩||

ತಾತ್ಪರ್ಯ:—ಆ ದಿನದಲ್ಲಿ ಆ ಪುರದೊಳಗೆ ನಡೆದ ಉತ್ಸವಕ್ಕೆ ಪಾರವೇ ಇಲ್ಲ, ತಾಯಿಯು ತನ್ನ ಪುತ್ರಿಯಾದ ದಮಯಂತಿಯನ್ನು

ಪ್ರೇಮದಿಂದ ಬಾಚಿ ತಬ್ಬಿಕೊಂಡಳು, ಸಕಲ ಬಂಧು ಜನವೂ, ಸ್ತ್ರೀ ಜನವೂ, ಸಂತೋಷಿಸಿದರು, ಆಕೆಯ ಮಕ್ಕಳು ಬಂದು ತಮ್ಮ ತಾಯಿಯನ್ನು ಆನಂದದಿಂದ ತಬ್ಬಿಕೊಂಡರು. ॥೪೩॥

ಟಿಪ್ಪಣಿ:—(೧) (ದ್ಭ) ಉಕ್ಕಿವ, (೨) ನಿಜರಾದ ತನಯರ್- ನಿಜತನಯರ್ (ವಿ. ಪೂರ್ವ. ಕ) ॥೪೩॥

ಮೂ॥ ಮಗನನೋಡಿದಳಿಂದ್ರಸೇನನ । ತೆಗೆದುತಕ್ಕೈಸಿದಳುಕರೆವ
ಳಿ । ಮಗಳಚಂದ್ರಾಸ್ಯಳನುತೊಡೆಯೊಳಗಿಟ್ಟುಮಮತೆಯಲಿ ॥
ಮೊಗವನೀಕ್ಷಿಸಿಮೊಲೆಗಳಲಿತೊರೆ। ಯುಗುವಹಾಲಿನಜನನಿಮಿಗೆ
ನೀ।ರೊಗುವಕಣ್ಣೀರಿನಲಿಸಂತೈಸಿದಳುನಿಜಸುತರ ॥೪೪॥

ಟೀಕೆ:—ಇಂದ್ರಸೇನನ-ಇಂದ್ರಸೇನನೆಂಬ, ಮಗನ - ಪುತ್ರನನ್ನು, ನೋಡಿದಳ್-ಕಂಡಳು, ತೆಗೆದುತಕ್ಕೈಸಿದಳು-ಬಾಚಿತಬ್ಬಿಕೊಂಡಳು, ಚಂದ್ರಾಸ್ಯಳನು-ಚಂದ್ರಾಸ್ಯೆಯೆಂಬ, ಮಗಳ-ಪುತ್ರಿಯನ್ನು, ತೊಡೆಯೊಳಗಿಟ್ಟು-ತೊಡೆಯಮೇಲೆಕುಳ್ಳಿರಿಸಿಕೊಂಡು, ಮಮತೆಯಲಿ-ಪ್ರೇಮದಿಂದ (೧) ಮೊಗವಂ-ಮುಖವನ್ನು, ಈಕ್ಷಿಸೆ - ನೋಡಲು, ಮೊಲೆಗಳಲಿ-ಸ್ತನಗಳಿಂದ, ತೊರೆಯುಗುವ-ಸುರಿಯುತ್ತಿರುವ, ಹಾಲಿನ-ಹಾಲುಳ್ಳ, ಜನನಿ-ತಾಯಿಯು, ಮಿಗೆ-ಹೆಚ್ಚಾಗಿ, ನೀರುಗುವ-ಪ್ರವಾಹವಾಗಿ ಹರಿಯುತ್ತಿರುವ, ಕಣ್ಣೀರಿನಲಿ - ಕಣ್ಣೀರಿನಿಂದ ಕೂಡಿ, (೨) ನಿಜಸುತರ-ತನ್ನ ಮಕ್ಕಳನ್ನು, ಸಂತೈಸಿದಳು - ಸಮಾಧಾನಗೊಳಿಸಿದಳು ॥೪೪॥

ತಾತ್ಪರ್ಯ:—ದಮಯಂತಿಯು ತನ್ನ ಮಗನಾದ ಇಂದ್ರಸೇನನನ್ನು ಮಗಳಾದ ಚಂದ್ರಾಸ್ಯೆಯನ್ನೂ, ಆಲಿಂಗಿಸಿ ತೊಡೆಯಮೇಲೆ ಕುಳ್ಳಿರಿಸಿಕೊಂಡು ಅವರ ಮುಖವನ್ನು ನೋಡಿದಕೂಡಲೆ ಪುತ್ರವಾತ್ಸಲ್ಯದಿಂದ ಕರಗಿ ಸ್ತನಗಳಲ್ಲಿ ಹಾಲು ಕಾಲುವೆಯಾಗಿ ಹರಿವಂತೆಸುರಿಯಿತು. ಕೂಡಲೆ ಪತಿವಿಯೋಗದಿಂದುಂಟಾದ ಪಶ್ಚಾತ್ತಾಪದಿಂದ ಕಣ್ಣೀರು ಸುರಿಯ ಹತ್ತಲು, ತನ್ನ ಮಕ್ಕಳನ್ನು ಉಪಚಾರೋಕ್ತಿಗಳಿಂದ ಸಮಾಧಾನ ಪಡಿಸಿದಳು. ॥೪೪॥

ಟಿಪ್ಪಣಿ:—(೧) (ತ್ಸ) ಮುಖ, (೨) ನಿಜರಾದ ಸುತರ್-ನಿಜಸುತರ್ (ವಿ. ಪೂರ್ವ. ಕ) ಕರ್ಮಾರ್ಥದಲ್ಲಿ ಷಷ್ಠಿ ಬಂದಿದೆ ॥೪೪॥

ಮೂ॥ ಕಂತುಪಿತನೊಲುಮೆಯಲಿಧರಣೀ।ಕಾಂತಭೀಮನೃಪಾಲಬಾಂ

ಧವ| ಸಂತತಿಯನಾದರಿಸಿಕಳುಹಿದನವರನುಚಿತದಲಿ ॥ ಸಂತತವು
ನಿಜಪತಿಯನಗಲಿದೆ| ಚಿಂತೆಯಲಿಮನಗುಂದಿದಳುದಮ| ಯಂತಿನೆ
ನೆವುತ್ತಿರ್ದಳಾವರಪುರದಚನ್ನಿಗನ ॥೪೫॥

ಅಂತು ಸಂಧಿ ೭ಕ್ಕೆ ಪದ ೩೮೪ಕ್ಕಂ ಮಂಗಳಮಸ್ತು.

ಟೀಕೆ:—(೧) ಕಂತುಪಿತನ-ವಿಷ್ಣುವಿನ, ಒಲುಮೆಯಲಿ-ಅನುಗ್ರಹದಿಂದ, ಧರಣೀಕಾಂತ-ದೊರೆಯಾದ, ಭೀಮನೃಪಾಲ-ಭೀಮರಾಜನು, (೨) ಬಾಂಧವ ಸಂತತಿಯಂ-ಬಂಧುಜನರನ್ನು, ಉಚಿತದಲಿ-ಯೋಗ್ಯತಾನುಸಾರವಾಗಿ, ಅವರವರಂ-ಪ್ರತಿಯೊಬ್ಬರನ್ನೂ, ಆದರಿಸಿ - ವಿಶ್ವಾಸ ಪೂರ್ವಕವಾಗಿ, ಉಪಚರಿಸಿ, ಕಳುಹಿದಂ-ಕಳುಹಿಸಿಕೊಟ್ಟನು, ದಮಯಂತಿ, ಸಂತತವು-ಯಾವಾಗಲೂ, ನಿಜಪತಿಯಂ-ತನ್ನ ಕಾಂತನನ್ನು, ಅಗಲಿದ-ಅಗಲಿಹೋಗಿರುವ, ಚಿಂತೆಯಲಿ - ವ್ಯಥೆಯಿಂದ, ಮನಗುಂದಿದಳು-ಧೈರ್ಯಗೆಟ್ಟಳು, ಆ ವರಪುರದ ಚನ್ನಿಗನ - ಬೇಲೂರ ಚನ್ನಕೇಶವನನ್ನು, ನೆನೆವುತ್ತಿರ್ದಳು-ಧ್ಯಾನಿಸುತ್ತಿದ್ದಳು. ॥೪೫॥

ಎಂಬಲ್ಲಿಗೆ ೭ನೆ ಸಂಧಿಯು ಟೀಕೆಯು ಮುಗಿದುದು.

ತಾತ್ಪರ್ಯ:—ಭೀಮರಾಜನು ತನ್ನ ಮಗಳನ್ನು ತಂದು ಬಿಡುವದಕ್ಕಾಗಿ ಬಂದಿದ್ದ ತನ್ನ ಬಂಧುಗಳಾದ ಸುಬಾಹು ಮೊದಲಾದವರಿಗೆ ಯಥೋಚಿತವಾದ ಮರ್ಯಾದೆಮಾಡಿ ಕಳುಹಿಸಿಕೊಟ್ಟನು, ದಮಯಂತಿಯು ಪತಿಯ ವಿರಹ ವ್ಯಥೆಯಿಂದ ಮನದಲ್ಲಿ ಸರ್ವಧಾ ಕಳವಳಿಸುತ್ತಾ ದೇವರನ್ನು ಧ್ಯಾನಿಸುತ್ತಿದ್ದಳೆಂಬಲ್ಲಿಗೆ ಏಳನೆ ಸಂಧಿಯು ತಾತ್ಪರ್ಯವು ಮುಗಿದುದು. ॥೪೫॥

ಟಿಪ್ಪಣಿ:—(೧) ಕಂತು-ಮನ್ಮಥನ,ಪಿತ-ತಂದೆ, (ಷ. ತ) (೨) ಬಾಂಧವರ ಸಂತತಿ-ಬಾಂಧವಸಂತತಿ (ಷ. ತ) ॥೪೫॥

ಏಳನೆ ಸಂಧಿ ಮುಗಿದುದು.

ಎಂಟನೆ ಸಂಧಿ.

ಸೂಚನೆ॥ ಸುರರದುಂದುಭಿಮೊಳಗೆಧರಣೀ। ಸುರರುಲಿಯೆಮುರಹರನಕ
ರುಣದಿ। ತರುಣಿದಮಯಂತಿಯಳನೊಡಗೂಡಿದನುನಳನೃಪತಿ ॥

ಸೂಚನೆ. ಟೀಕೆ:—ಸುರರ-ದೇವತೆಗಳ, ದುಂದುಭಿ-ಭೇರಿಯು ಮೊಳಗೆ-ಧ್ವನಿಮಾಡಲು, ಧರಣೀ ಸುರರ್-ಬ್ರಾಹ್ಮಣರು, ಉಲಿಯೆ- ಆಶೀರ್ವಾದಮಾಡುತ್ತಿರಲು, ಮುರಹರನ- ಕೃಷ್ಣನ, ಕರುಣದಿ - ದಯೆಯಿಂದ, (೧) ನಳನೃಪತಿ-ನಳರಾಜನು, (೨) ತರುಣಿ ದಮಯಂತಿಯಳಂ-ಬಾಲೆಯಾದ ದಮಯಂತಿಯನ್ನು, ಒಡಗೂಡಿದನು- ಬಂದು, ಸೇರಿದನು. ॥

ತಾತ್ಪರ್ಯ:—ದೇವತೆಗಳೆಲ್ಲರೂ ಉತ್ಸಾಹದಿಂದ ಶುಭ ಸೂಚಕವಾದ ದೇವ ದುಂದುಭಿಯನ್ನು ಬಾರಿಸುತ್ತಿರಲು, ಬ್ರಾಹ್ಮಣರೆಲ್ಲರೂ ಜಯಾಶೀರ್ವಾದವನ್ನು ಹೇಳುತ್ತಿರಲು ದೇವರ ದಯದಿಂದ ನಳರಾಜನು ದಮಯಂತಿಯ ಬಳಿಯನ್ನು ಪುನಃ ಸೇರಿದನು ॥

ಟಿಪ್ಪಣಿ:—(೧)ನಳನೆಂಬ ನೃಪತಿ-ನಳನೃಪತಿ (ಸಂ. ಪೂರ್ವ. ಕ) (೨) ತರುಣಿಯಾದ ದಮಯಂತಿ-ತರುಣಿದಮಯಂತಿ (ವಿ. ಪೂರ್ವ. ಕ)

ಮೂ॥ ಕೇಳಿದೈರಾಜೇಂದ್ರಧರ್ಮನೃ।ಪಾಲವಿಭವವನುಳಿಯಲಂಗನೆ।
ಧೂಳಿಮುಸುಕಿದಮುಡಿಯಮಾಸಿದವಸನಗಳನೋಡಿ॥ ಕೇಳಿದಳು
ಪೂರ್ವೋತ್ತರವಭೂ।ಪಾಲನವನಿಯನುಳಿದುಸಿನ್ನವ। ನಾಲಯದು
ದೊಳೆಂತಗಲಿದನುಹೇಳೆಂದುತಜ್ಜನನಿ ॥೧॥

ಟೀಕೆ:— (೧) ರಾಜೇಂದ್ರ ಧರ್ಮನೃಪಾಲ- ರಾಜಾಧಿ ರಾಜನಾದ ಧರ್ಮರಾಜನೆ, ಕೇಳಿದೈ-ಕೇಳಿದೇನಯ್ಯಾ, ಅಂಗನೆ- ದಮಯಂತಿಯು, ವಿಭವವಂ-ರಾಜವೈಭವವನ್ನು, ಉಳಿಯಲ್-ಬಿಟ್ಟಿರಲು, ಧೂಳಿಮುಸುಕಿದ-ದೂಳು ಮುಚ್ಚಿಕೊಂಡಿರುವ, ಮುಡಿಯ-ತುರುಬನ್ನೂ, ಮಾಸಿದ ಕೊಳೆಯಾದ, ವಸನಗಳ-ಬಟ್ಟೆಯನ್ನೂ, ನೋಡಿ-ಕಂಡು, (೨) ತಜ್ಜನನಿ-ಅವಳತಾಯಿಯು, ಭೂಪಾಲಂ-ನಳನು, ಅವನಿಯಂ-ರಾಜ್ಯವನ್ನು, ಉಳಿದು-ಬಿಟ್ಟು, ಮಾಲಯದುದೊಳ್-ವನಮಧ್ಯದಲ್ಲಿ, ನಿನ್ನ-ನಿನ್ನನ್ನು

ಎಂತು-ಹೇಗೆ, ಅಗಲಿದನು-ಬಿಟ್ಟುಹೋದನು, ಹೇಳೆಂದು, ಪ್ರೂರ್ವೋತ್ತರವ-ಹಿಂದೆ ನಡೆದ ವೃತ್ತಾಂತವನ್ನು, ಕೇಳಿದಳು. ||೧||

ತಾತ್ಪರ್ಯ—ಪತಿಯ ವಿರಹವ್ಯಥೆಯಿಂದ, ದಮಯಂತಿಯು ಚಿಂತಿಸುತ್ತಾ, ರಾಜಭೋಗಗಳೆಲ್ಲವನ್ನೂ ಬಿಟ್ಟು ಅಭ್ಯಂಜನಾದಿಗಳನ್ನು ಬಿಟ್ಟದ್ದರಿಂದ ಮಾಸಿದ ತಲೆಯುಳ್ಳವಳಾಗಿಯೂ, ಏಕವಸ್ತ್ರಧರಳಾಗಿಯೂ, ಮಲಿನಳಾಗಿರುವುದನ್ನು ಕಂಡು ಅವಳ ತಾಯಿಯು, ನಳನು ರಾಜ್ಯವನ್ನು ಕಳೆದುಕೊಂಡು ಕಾಡಿಗೆ ಬಂದು ಅಲ್ಲಿ ಪತ್ನೀವಿಯೋಗವನ್ನು ಹೊಂದಿ ಹೋಗಿರುವ ಹಿಂದಣ ವೃತ್ತಾಂತವನ್ನೆಲ್ಲಾ ಹೇಳೆಂದು ಕಳೆಹಿದಳು. ||೧||

ಟಿಪ್ಪಣಿ:—(೧) ರಾಜರ ಇಂದ್ರ, ರಾಜೇಂದ್ರ, (ಷ. ತ) ರಾಜ+ಇಂದ್ರ, ರಾಜೇಂದ್ರ (ಗುಣ) ರಾಜೇಂದ್ರನಾದ ಧರ್ಮ ನೃಪಾಲ-ರಾಜೇಂದ್ರ ಧರ್ಮನೃಪಾಲ (ವಿ. ಪೂರ್ವ. ಕ) (೨) ತತ್+ಜನನಿ-ತಜ್ಜನನಿ (ಶ್ಚುತ್ವ) (ಷ. ತ) ||೧||

ಮೂ|| ಕಪಟದಲಿರಾಜ್ಯವನುಪುಷ್ಕರ| ನಪಹರಿಸಿದನುಜೂಜಿನಲಿನಳ
ನೃಪತಿಸೋತಾರಣ್ಯಕೈದಿದನೊಂದುವಸ್ತ್ರದಲಿ|| ಗುಪಿತದಿಂಬರೆ
ಮುಂದೆಪಕ್ಷಿಗ| ಳುಪಮೆಯಲಿಕೊಂಡೊಯ್ದುದೊಲ್ಲಿಯ| ಕೃಪಣ
ತನದಲಿತನ್ನಸೀರೆಯೊಳೊಯ್ದನರ್ಧವನು ||೨||

ಟೀಕೆ:—(೧) ಪುಷ್ಕರಂ-ಪುಷ್ಕರನೆಂಬುವನು, ಕಪಟದಲಿ-ವಂಚನೆಮಾಡಿ, ಜೂಜಿನಲಿ, ರಾಜ್ಯವಂ-ದೇಶವನ್ನು, ಅಪಹರಿಸಿದನು - ಕಿತ್ತುಕೊಂಡನು, ನಳನೃಪತಿ-ನಳರಾಜನು, ಸೋತು, (೨) ಒಂದುವಸ್ತ್ರದಲಿ-ಬಟ್ಟೆಯೊಂದನ್ನು ಗ್ರಹಿಸಿ, ಆರಣ್ಯಕೆ-ಕಾಡಿಗೆ, ಐದಿದಂ-ಹೋದನು, ಗುಪಿತದಿಂ-ಯಾರೂಕಾಣದಂತೆ, ಬರೆ-ಅರಣ್ಯದಲ್ಲಿ ಬರುತ್ತಿರಲು, ಮುಂದೆ-ಮುಂದುಗಡೆ, ಪಕ್ಷಿಗಳು-ಎರಡು ಪಾರಿವಾಳಗಳು, ಉಪಮೆಯಲಿ-ಒಂದೇಸಮವಾಗಿ, ಒಲ್ಲಿಯ-ಅವನವಸ್ತ್ರವನ್ನು, ಕೊಂಡೊಯ್ದುದು-ತೆಗೆದುಕೊಂಡು ಹಾರಿಹೋದುವು, ಕೃಪಣತನದಲಿ-ಜಿಪುಣನಾಗಿ,ತನ್ನ-ನನ್ನ, ಸಿರೆಯೊಳ್-ಸೀರೆಯಲ್ಲಿ, ಅರ್ಧವನು-ಅರ್ಧಭಾಗವನ್ನು, ಒಯ್ದಂ-ತೆಗೆದುಕೊಂಡು ಹೋದನು. ||೨||

ತಾತ್ಪರ್ಯ:— ಪುಷ್ಕರನೆಂಬುವನುಬಂದು ನಳನನ್ನು ಜೂಜಾಡುವಂತೆ ಪ್ರೇರಿಸಿ ಮೋಸಮಾಡಿ ರಾಜ್ಯವನ್ನೆಲ್ಲವನ್ನೂ ದ್ಯೂತದಲ್ಲಿ ಗೆದ್ದು

ವಶಪಡಿಸಿಕೊಳ್ಳಲು, ನಳನು ಸೋತು ಮೊದಲು ಗೊತ್ತುಮಾಡಿದ್ದಂತೆ ವನವಾಸಕ್ಕೆ ಹೊರಟನು. ನಾನೂ ಅವನ ಬೆನ್ನಹತ್ತಿದೆನು. ಏಕವಸ್ತ್ರಧರನಾಗಿ ಯಾರಿಗೂ ಗೋಚರನಾಗದೆ ನನ್ನೊಡನೆಕಾಡಿನಲ್ಲಿ ಸಂಚರಿಸುತ್ತಿರುವಾಗ ಎರಡು ಪಾರಿವಾಳಗಳು ಬಂದು ಅವನು ಹೊದ್ದಿದ್ದ ಬಟ್ಟೆಯನ್ನು ಕಳೆದುಕೊಂಡು ಗತಿಯಿಲ್ಲದೆ-ನನ್ನ ಸೀರೆಯಲ್ಲಿ ಅರ್ಧವನ್ನು ತೆಗೆದುಕೊಂಡು ನಾನು ಕಾಣದಂತೆ ಹೊರಟುಹೋದನು ॥೨॥

ಟಿಪ್ಪಣಿ:— (೧) ಪುಷ್ಕರ-ಆಕಾಶ, ಕಮಲ, ನೀರು, ಆನೆಯ ಸೊಂಡಿಲು, ಒಂದುದ್ವೀಪ, (ನಾನಾ) (೨) ಒಂದುವಸ್ತ್ರ (ದ್ವಿಗು) ॥೨॥

ಮೂ॥ಮರೆದುಮಲಗಿದೆರಾತ್ರಿಯಲಿಯೆ। ಚ್ಚರಿಸದೆಯೆನೃಪತೆರಳಿದನು
ಕಾ। ತರಿಸಿಕಂಬನಿಯೊಳಗೆಬಂದೆನುಚೈದ್ಯನಗರಿಯಲಿ॥ ತರುಣಿಚಿ
ಕ್ಕಮ್ಮನಲಿತಿಂಗಳು। ಹೊರೆದೆನೀದೇಹವನುಯಿಲ್ಲಿಗೆ । ಕರಿಸಿದಿರಿ
ನೀವೆನುತಕಂಬನಿದುಂಬಿದಳುತರಳೆ ॥೩॥

ಟೀಕೆ:—ರಾತ್ರಿಯಲಿ-ರಾತ್ರಿಯಲ್ಲಿ, ಮರೆದು-ಮೈಮರೆನು, ಮಲಗಿದೆ-ನಿದ್ರಿಸಿದೆನು, ನೃಪ-ನಳನು, ಎಚ್ಚರಿಸದೆಯೆ-ನನ್ನನ್ನು ಎಚ್ಚರಗೊಳಿಸದೆ, ತೆರಳಿದನು-ಹೊರಟುಹೋದನು, ಕಾತರಿಸಿ-ಭಯಪಟ್ಟು ಕಂಬನಿಯೊಳಗೆ-ಕಣ್ಣೀರನ್ನು ಸುರಿಸುತ್ತಾ, ಬಂದೆನು-ಹುಡುಕುತ್ತಾ ಬಂದೆನು, ಚೈದ್ಯನಗರಿಯಲಿ-ಚೈದ್ಯಪಟ್ಟಣದಲ್ಲಿ, ತರುಣಿಚಿಕ್ಕಮನಲಿ-ಚಿಕ್ಕಮ್ಮನ ಮನೆಯಲ್ಲಿ (೧) ಈ ದೇಹವನು-ಈ ಶರೀರವನ್ನು, ಹೊರೆದೆಂ ಪೋಷಿಸಿದೆನು, ನೀವ್-ನೀವು, ಇಲ್ಲಿಗೆ, ಕರಿಸಿದಿರಿ, ಎನುತ, ತರಳೆ-ದಮಯಂತಿಯು (೨) ಕಂಬನಿದುಂಬಿದಳು – ಕಣ್ಣೀರು ಹಾಕಿಕೊಂಡಳು ॥೩॥

ತಾತ್ಪರ್ಯ:— ನಾನು ರಾತ್ರಿ ಮೈಮರೆದು ಆ ಅಡವಿಯಲ್ಲಿ ನಿದ್ರಿಸುತ್ತಿದ್ದದ್ದರಿಂದ ಅವನು ಯಾವಾಗ ಎಲ್ಲಿಗೆಹೋದನೋ ಗೊತ್ತಾಗಲಿಲ್ಲ. ನನ್ನನ್ನು ಎಚ್ಚರಿಸದೆ ಮೋಸಪಡಿಸಿ ಹೊರಟುಹೋದನು. ಬೆಳಗಾದಮೇಲೆ ಆ ನಳನನ್ನು ಸಮೀಪದಲ್ಲಿ ಕಾಣದೆ ಕಳವಳಪಡುತ್ತಾ ಭೀತಿಯಿಂದ ದುಃಖಪಟ್ಟು ಕಣ್ಣೀರನ್ನು ಸುರಿಸುತ್ತಾ ಕಾಡಿನಲ್ಲೆಲ್ಲಾ ಹುಡುಕಲಾರಂಭಿಸಿ ಎಲ್ಲಿಯೂಕಾಣದೆ ಕೊನೆಗೆ ಬೇಸತ್ತು ಮಾರ್ಗವಶಳಾಗಿ ಚೈದ್ಯನಗರವನ್ನು ಸೇರಿ ಅಲ್ಲಿ ಚಿಕ್ಕಮ್ಮನಮನೆಯಲ್ಲಿದ್ದು ಒಂದು ತಿಂಗಳು ಈ ದೇಹವನ್ನು ಪೋಷಿಸಿದೆನು. ಈಗ ನೀವು ಕರೆಯಿಸಿ

ಕೊಂಡದ್ದರಿಂದ ಇಲ್ಲಿಗೆ ಅದೃಷ್ಟವಶಾತ್ ಬಂದು ಸೇರಿದೆನು ॥೩॥

ಟಿಪ್ಪಣಿ:— (೧) ಇದುಬೇಹ-ಈ ದೇಹ (ಗಮಕ) (೨) ಕಣ್ಪನಿ-ಕಂಬನಿ (ಶ. ವ್ಯ. ಸಂ) ಪಕಾರಕ್ಕೆ ಬಕಾರಾದೇಶವುಬಂತು, ಕಣ್ಣಪನಿ-ಕಂಬನಿ (ಷ. ತ) ಕಂಬನಿಯುಂತುಂಬಿದಳು-ಕಂಬನಿದುಂಬಿದಳು (ಕ್ರಿ. ಸ) ॥೩॥

ಮೂ॥ ಏನನೆಂಬೆನುತನ್ನ ಪುಣ್ಯದ। ಹಾನಿಯುನ್ನೆಲೆತಾಯೆಲೋಕದ।
ಮಾನಿನಿಯರಾರೆನ್ನಯಾವ್ರೋಲ್ತೊಳಲಿಬಳಲಿದರು ॥ ದಾನವಾ
ಮರರೊಳಗೆಕಾಣೆಸಮಾನವೀನಳನೃಪಗೆಯಿನ್ನಿದ। ಕೇನಮಾಡು
ವೆನೆನುತಕಂಬನಿದುಂಬಿದಳುತರಳೆ ॥೪॥

ಟೀಕೆ:— ಎಲೆತಾಯೆ, ತನ್ನ-ನನ್ನ, ಪುಣ್ಯದ, ಹಾನಿಯುನು ನಷ್ಟವನ್ನು, ಏನನೆಂಬೆನು-ಏನೆಂದುಹೇಳಲಿ, ಎನ್ನಯಾವ್ರೋಲ್-ನನ್ನ ಹಾಗೆ, ತೊಳಲಿ-ಸುತ್ತಿಸುತ್ತಿ, ಬಳಲಿದರು-ಆಯಾಸಪಟ್ಟವರು, ಲೋಕದ-ಪ್ರಪಂಚದ, ಮಾನಿನಿಯರ್-ಸ್ತ್ರೀಯರು, ಆರ್ - ಯಾರಿರುವರು ? (೧) ಈ ನಳನೃಪಗೆ-ಈ ನಳರಾಜನಿಗೆ, ಸಮಾನವ-ಸಮಾನರಾದವರನ್ನು, (೨) ದಾನವಾಮರರೊಳಗೆ-ದೇವತೆಗಳಲ್ಲಿಯೂ ರಾಕ್ಷಸರಲ್ಲಿಯೂ, ಕಾಣೆ-ಯಾರನ್ನೂ ಕಾಣೆನು, ಇನ್ನು-ಮುಂದೆ, ಇದಕೆ-ಇದಕ್ಕೆ, ಏನಮಾಡುವೆನು-ಏನಮಾಡಲಿ, ಎನುತ, ತರಳೆ - ದಮಯಂತಿ ಕಂಬನಿದುಂಬಿದಳು-ಕಣ್ಣೀರನ್ನು ಸುರಿಸಿದಳು ॥೪॥

ತಾತ್ಪರ್ಯ:— ಅಮ್ಮಾನನಗುಂಟಾದ ಪುಣ್ಯ ಹೀನತೆಯನ್ನೇನೆಂದುಹೇಳಲಿ ಈ ಲೋಕದೊಳಗೆಲ್ಲಾ ನನ್ನಂತೆ ಇಂತಹ ದುರವಸ್ಥೆಗೆ ಗುರಿಯಾದ ಸ್ತ್ರೀಯರುಂಟೇ. ಈನಳಂಗೆ ಸಮಾನವಾದ ಶಕ್ತರನ್ನು ದೇವಾಸುರರಲ್ಲಿಯೂನಾನು ಕಾಣಲಿಲ್ಲ. ಇಂತಹವನ ಕೈಯನ್ನು ಹಿಡಿದರೂ ನನಗೆ ಈ ಗತಿಬಂದರೆ ನಾನು ಮಾಡತಕ್ಕದ್ದೇನು. ಎಂದು ಶೋಕಿಸಿದಳು ॥೪॥

ಟಿಪ್ಪಣಿ:— (೧) ಇವನುನಳನೃಪ-ಈ ನಳನೃಪ (ಗಮಕ) (೨) ದಾನವರೂ ಅಮರರೂ-ಧಾನವಾಮರರು (ದ್ವಂದ್ವ). ಧನು, ಧನುವೆಂಬುವಳಲ್ಲಿ ಹುಟ್ಟಿದವರು (ದಾನವರು) ಮರ-ಮರಣವು, ಅ-ಇಲ್ಲದವರು (ಅಮರರು) ॥೪॥

ಮೂ॥ ಕ್ಷಿತಿಯೊಳೆಲ್ಲಿ ಶನೋನೃಪತಿಪರ।ಸತಿ ಮರಿಗೆಮನಸೋತನೋ

ತಪ। ವ್ರತವಕೈಕೊಂಡಿಹನೊಅಸುರರಬಲಿಗೆಸಿಲುಕಿದನೊ॥ವಿತಳ
ಕಿಳಿದನೊಮತ್ತೆಯಮರಾ। ವತಿಗೆನಡೆದನೊತೊರೆದುನಳಭೂ।
ಪತಿಯಕಾಣೆನುನನಗೆಗತಿಯೇನೆಂದಳಿಂದುಮುಖಿ ॥೫॥

ಟೀಕೆ:— ನೃಪತಿ-ನಳರಾಜನು, ಕ್ಷಿತಿಯೊಳ್-ಭೂಮಿಯಲ್ಲಿ, ಎಲ್ಲಿಹನೋ-ಎಲ್ಲಿರುವನೋ, (೧) ಪರಸತಿಯರಿಗೆ-ಪರಸ್ತ್ರೀಯರಿಗೆ, (೨) ಮನಸೋತನೋ-ಸ್ವಾಧೀನನಾದನೋ, ತಪವ್ರತವ-ತಪಸ್ಸಿನನಿಯಮವನ್ನು, ಕೈಕೊಂಡಿಹನೋ-ಹೊಂದಿರುವನೋ, ಅಸುರರ-ರಾಕ್ಷಸರ, ಬಲೆಗೆ-ಮಾಯೆಗೆ, ಸಿಲುಕಿದನೋ-ಸಿಕ್ಕಿದನೋ, ವಿತಳಕೆ-ಪಾತಾಳಕ್ಕೆ, ಇಳಿದನೋ-ಇಳಿದುಹೋದನೋ, ಮತ್ತೆ-ಅಥವಾ, ತೊರೆದು-ನನ್ನನ್ನು ಬಿಟ್ಟು, ಅಮರಾವತಿಗೆ-ಸ್ವರ್ಗಕ್ಕೆ, ನಡೆದನೊ-ಹೊರಟುಹೋದನೋ, ನಳಭೂಪತಿಯ- ನಳರಾಜನನ್ನು, ಕಾಣೆನು-ಎಲ್ಲಿಯೂನೋಡಲಿಲ್ಲ, ಎನಗೆ-ನನಗೆ, ಗತಿಯೇನು-ಏನುಗತಿ, (ಎಂಬದಾಗಿ) ಇಂದುಮುಖಿ-ದಮಯಂತಿಯು, ಎಂದಳ್-ಹೇಳಿದಳು ॥೫॥

ತಾತ್ಪರ್ಯ:— ನನ್ನ ಪತಿಯು ಲೋಕದೊಳೆಲ್ಲಿರುವನೋ, ಯಾವಪರಸ್ತ್ರೀಯುನ್ಮಾದರೂಮೋಹಿಸಿದನೊ, ತಪಸ್ಸುಮಾಡಲು ಹೊರಟಿರುವನೋ ಯಾವರಾಕ್ಷಸ ಮಾಯೆಗೊಳಗಾದನೋ, ಪಾತಾಳಲೋಕಕ್ಕಿಳಿದುಹೋದನೋ ಇಲ್ಲವೇ ನನ್ನನ್ನು ತೊರೆದು ಸ್ವರ್ಗವನ್ನೇಸೇರಿದನೋ, ನನಗೆಬೇರೆ ಗೊತ್ತಾಗಲಿಲ್ಲ. ಮುಂದೆನನಗೆ ಗತಿಯಾರು? ಎಂದು ಚಿಂತಿಸಿದಳು ॥೫॥

ಟಿಪ್ಪಣಿ:— (೧) ಪರರಸತಿ-ಪರಸತಿ (ಷ.ತ) (೨) ಮನದಿಂದ ಸೋತನೋ-ಮನಸೋತನೊ (ಕ್ರಿ. ಸ) ॥೫॥

ಮೂ॥ ಪತಿವಿಹೀನೆಗೆಸಲುವುದೇಸು। ವ್ರತಸುಭೋಜನಸೌಖ್ಯಸುಖ
ಸ। ಪ್ರತಿಗಳುಂಟೇತಾಯೆಭಾವಿಸಿನೋಡುಚಿತ್ತದಲಿ ॥ ಸತಿಯರಿ
ಗೆಪತಿವ್ರತವೆಂಬುದ। ಶ್ರುತಿವಚನವಾಡುವದುತನಗಾ। ಪತಿಯನ
ಗಲಿದಬಳಿಕಗತಿಯಿಲ್ಲೆಂದಳಿಂದುಮುಖಿ ॥೬॥

ಟೀಕೆ:— (೧) ಪತಿವಿಹೀನೆಗೆ-ಗಂಡನಿಲ್ಲದವಳಿಗೆ, ಸುವ್ರತ-ಉತ್ತಮವಾದ ವ್ರತಾಚರಣೆಯೂ, ಸುಭೋಜನ-ಮೃಷ್ಟಾನ್ನ ಭೋಜನವೂ, ಸೌಖ್ಯ-ಭೋಗವೂ, ಸಲುವುದೆ-ಯೋಗ್ಯವಾದದ್ದೇ, ಸುಖಸಪ್ರತಿಗಳು-ಸುಖಸಂಪತ್ಸೌಖ್ಯಗಳು, ಉಂಟೇ-ಇದೆಯೇ, ತಾಯೆ-ಅಮ್ಮಾ

ಚಿತ್ತದಲಿ-ಮನಸ್ಸಿನಲ್ಲಿ, ಭಾವಿಸಿನೋಡು-ಆಲೋಚಿಸು, ಸತಿಯರಿಗೆ-ಹೆಂಗಸರಿಗೆ, ಪತಿ-ಗಂಡನು, ದೈವವು-ದೇವನು, ಎಂಬುದ- ಎಂಬವಾ ತನ್ನು (೨) ಶ್ರುತಿವಚನವು-ವೇದವಾಕ್ಯ, ಆಡುವುದು-ಹೇಳುತ್ತಿರುವು ದು, ಆ ಪತಿಯು-ಅಂತಹಗಂಡನನ್ನು, ಅಗಲಿದಬಳಿಕ-ತೊರೆದಮೇಲೆ, ತನಗೆ-ನನಗೆ, ಗತಿಯಿಲ್ಲ-ದಿಕ್ಕಿಲ್ಲ (ಎಂಬದಾಗಿ) ಇಂದುಮುಖಿ-ದಮ ಯಂತಿಯು, ಎಂದಳು ||೬||

ತಾತ್ಪರ್ಯ:—ಅಮ್ಮಾ ಗಂಡನನ್ನಗಲಿರುವಳಿಗೆ ವ್ರತಾಚರಣೆಯೂ ಒಳ್ಳೆ ಭೋಜನವೂ ಉಂಟೇ, ಇಹಲೋಕದ ಸೌಖ್ಯವೂ, ಪರಲೋ ಕದಲ್ಲಿ ಗತಿಯೂ ಅವಳಿಗೆ ಹೇಗೆ ಬಂದೀತು ? ನಿನ್ನಮನಸ್ಸಿನಲ್ಲಿ ಆ ಲೋಚಿಸಿ ನೋಡು, ಸ್ತ್ರೀಯರಿಗೆ ಪತಿಯೆ ದೈವವೆಂದು ವೇದವಚನ ವು ಸಾರಿಹೇಳುತ್ತಿರುವುದು, ಸರ್ವಸುಖಗಳಿಗೂ ಕಾರಣನಾದ ಪತಿಯ ನ್ನೇ ಅಗಲಿದ ನವಗೆ ಗತಿಯುಲ್ಲಿಯದು ? ಎಂದು ವ್ಯಥೆಪಟ್ಟಳು||೬||

ಟಿಪ್ಪಣಿ:— (೧) ಪತಿಯಿಂದ ವಿಹೀನೆ-ಪತಿವಿಹೀನೆ (ತೃ. ತ) (೨) ಶ್ರುತಿಯ ವಚನವು-ಶ್ರುತಿವಚನವು (ಷ. ತ) ||೬||

ಮೂ॥ ಧರೆಯೊಳೆಲ್ಲಿಹನೋವಿಚಾರಿಸಿ। ಕರಸಿಕೊಡುಯೆಲೆತಾಯೆಯೆ
ನ್ನಯ। ಪುರುಷನಿಲ್ಲದಬಳಿಕಬಿಡುವೆನುತನುವನೆಂದೆನಲು ॥ ಮ
ರುಗಿದಳುಮಗಳೆಂದಮಾತಿಗೆ। ಕರೆದುಕಂಬನಿದೊಡೆದುತನ್ನಯ।
ಪುರುಷನೊಡನಿಂತೆನಲುಭೀಮನೃಪಾಲಚಿಂತಿಸಿದ ॥೭॥

ಟೀಕೆ:— ಎಲೆತಾಯೆ-ಎಲೈತಾಯೇ, ಧರೆಯೊಳ್-ಭೂಮಿಯ ಲ್ಲಿ, ಎಲ್ಲಿಹನೋ-ಎಲ್ಲಿರುವನೋ, ವಿಚಾರಿಸಿ-ಹುಡುಕಿಸಿ, ಕರಸಿಕೊಡು ಎನ್ನಯ-ನನ್ನ, ಪುರುಷಂ-ಗಂಡನು, ಇಲ್ಲದಬಳಿಕ-ಇಲ್ಲದಮೇಲೆ, ತ ನುವಂ-ದೇಹವನ್ನು, ಬಿಡುವೆನು, ಎಂದೆನಲು - ಎಂಬದಾಗಿಹೇಳಲು, ಮಗಳ್-ಪುತ್ರಿಯು, ಎಂದ-ಹೇಳಿದ, ಮಾತಿಗೆ, ಮರುಗಿದಳು-ವ್ಯಥೆಪ ಟ್ಟಳು. ಕರೆದು- ಹತ್ತಿರಕ್ಕೆಕರೆದು, (೧) ಕಂಬನಿದೊಡೆದು-ಕಣ್ಣೀ ರನೊರಸಿ (೨) ತನ್ನಯ-ತನ್ನ, ಪುರುಷನೊಡನೆ-ಪತಿಯಸಂಗಡ, ಇಂ ತೆನಲು-ಈ ಪ್ರಕಾರವಾಗಿ ಹೇಳಲು, ಭೀಮನೃಪಾಲ-ಭೀಮರಾಜನು ಚಿಂತಿಸಿದ-ಆಲೋಚಿಸಿದನು ||೭||

ತಾತ್ಪರ್ಯ:— ಅಮ್ಮಾ ನನ್ನ ಪತಿಯು ಎಲ್ಲಿರುವನೋ ವಿಚಾರಿಸಿ ಕರೆಯಿಸಿಕೊಟ್ಟರೆ, ಸರಿ, ಇಲ್ಲದಿದ್ದರೆ ನಾನು ಪ್ರಾಣತ್ಯಾಗವನ್ನು

ಮಾಡುವೆನು, ಎಂದು ಹೇಳಲು ಆ ಮಾತನ್ನು ಕೇಳಿ ಅವಳು ಕೂಡಲೆ ಮಗಳನ್ನು ಹತ್ತಿರಕ್ಕೆ ಕರೆದು ಕಣ್ಣೀರನ್ನು ತೊಡೆದು ಈ ಸಂಗತಿಯನ್ನು ಭೀಮರಾಜನೊಡನೆ ಹೇಳಲು ಅವನು ಚಿಂತಿಸಿದನು ||೭||

ಟಿಪ್ಪಣಿ:— (೧) ಕಂಬನಿಯಂತೊಡೆದು - ಕಂಬನಿದೊಡೆದು (ಕ್ರಿ. ಸ) (ಕ. ವ್ಯಂ. ಸಂ) ತಕಾರಕ್ಕೆ ದಕಾರಾದೇಶವು ಬಂತು, (೨) ಷಷ್ಠೀವಿಭಕ್ತ್ಯಂತ ಶಬ್ದದಮೇಲೆ ಮತ್ತೊಂದು ,ಅ, ಕಾರವು ಬಂದು ತನ್ನ +ಅ-ತನ್ನಯ, ಎಂದಾಯಿತ್ತು ||೭||

ಮೂ|| ಅರಸಕೇಳುವಿದರ್ಭಪುರಪತಿ| ಕರಸಿದನುಭೂಸುರರನವರಿಗೆ|
ಪರಮವಸ್ತುವನಿತ್ತುಕಳುಹಿದನಿಷಧಪತಿಯಿರವ || ಶರಧಿಮೇರೆ
ಯೊಳೆಲ್ಲಭೇದಿಸಿ| ಕರೆದುತಾರೆನಲವರುಬರುತಿರೆ| ಕರಸಿದಳುದಮ
ಯಂತಿಯವರೊಡನೆಂದಳೀಮಾತ ||೮||

ಟೀಕೆ:— ಅರಸ-ಧರ್ಮರಾಜನೆ, ಕೇಳು, ವಿದರ್ಭಪುರಪತಿ-ಭೀಮರಾಜನು, ಭೂಸುರರಂ-ಬ್ರಾಹ್ಮಣರನ್ನು, ಕರಸಿದನು, ಅವರಿಗೆ,(೧) ಪರಮವಸ್ತುವಂ-ಜೀಕಾದ ಪದಾರ್ಥಗಳನ್ನು, ಇತ್ತು-ಕೊಟ್ಟು, ಕಳುಹಿದ-ಕಳುಹಿಸಿದನು, ನಿಷಧಪತಿಯ-ನಳನ, ಇರವ-ಇರುವಿಕೆಯನ್ನು, (೨) ಶರಧಿಮೇರೆಯೊಳೆಲ್ಲ - ಭೂಮಿಯಲ್ಲೆಲ್ಲಾ, ಭೇದಿಸಿ-ಹುಡುಕಿ, ಕರೆದುತಾರ-ಕರತರಬೇಕು, ಎನಲ್-ಎಂದು ಹೇಳಲು, ಅವರು, ಬರುತಿರೆ, ಕರೆಸಿದಳು - ಅವರನ್ನು ಕೂಗಿದಳು, ದಮಯಂತಿ, ಅವರೊಡನೆ - ಅವರಸಂಗಡ, ಈಮಾತ - ಈಮಾತನ್ನು, ಎಂದಳ್ - ಹೇಳಿದಳು ||೮||

ತಾತ್ಪರ್ಯ:— ಭೀಮರಾಜನು ಹಾಗೆಯೇ ಆಲೋಚಿಸಿ ಕೆಲವು ಮಂದಿ ಬ್ರಾಹ್ಮಣರನ್ನು ಕರೆಯಿಸಿ ಅವರು ಕೋರಿದ ವಸ್ತುಗಳನ್ನೆಲ್ಲ ಕೊಟ್ಟು, ನಳರಾಜನು ಲೋಕದಲ್ಲೆಲ್ಲಿದ್ದರೂ ಹುಡುಕಿಕರತರಬೇಕು, ಎಂದು ಹೇಳಿ ಕಳುಹಿಸಿಕೊಟ್ಟನು, ಅವರನ್ನು ದಮಯಂತಿಯು ಕರೆದು ಅವರೊಡನೆ ಒಂದು ಮಾತನ್ನು ಹೇಳಿಕಳುಹಿಸಿದಳು ||೮||

ಟಿಪ್ಪಣಿ:— (೧) ಪರಮವಾದವಸ್ತು-ಪರಮವಸ್ತು (ವಿ. ಪೂ. ಕ) (೨) ಶರ-ನೀರು, ಧಿ-ನಿಲ್ಲುವಸ್ಥಳ-ಶರಧಿಮೇರೆ (ಬ. ವ್ರೀ.)|

ಮೂ|| ನಳನೃಪತಿನಿಜರಾಜತೇಜವ| ನುಳಿನುತಾಪ್ರತಿರೂಪತಾಳಿಸ |
ನಿನಗಿನಿಗ್ಗದಸಭೆಯೊಳಗೆನೀವೆಂಬುದೀನುಡಿಯು|| ಹಳುವದಲಿಸ

ತಿಯುಟ್ಟವಸನದಿ। ಸೆಳೆಯುತರ್ಧವಕೊಂಡುನಾರಿಯ । ಕಳೆದು
ಹೋದವರುಂಟೆಯೆನಲುತ್ತರವಪೇಳುವನು ॥೯॥

ಟೀಕೆ:—ನಳನೃಪತಿ-ನಳರಾಜನು (೧) ನಿಜರಾಜತೇಜವಂ-ತನ್ನ ರಾಜಕಳೆಯುನ್ನು, ಉಳಿದು-ಬಿಟ್ಟು, ತಾ-ತಾನು, ಪ್ರತಿರೂಪ-ಬೇರೆವೇಷವನ್ನು, ತಳಿಹಂ-ಹೊಂದಿರುವನು, ಇಳೆಯೊಳ್-ಲೋಕದಲ್ಲಿ, ಅಗ್ಗದ-ದೊಡ್ಡದೊಡ್ಡದಾದ, ಸಭೆಯೊಳಗೆ, ನೀವ್-ನೀವು (೨) ಈ ನುಡಿಯು-ಈ ಮಾತನ್ನು, ಎಂಬುದು-ಹೇಳತಕ್ಕದ್ದು, (ಏನೆಂದರೆ) ಹಳುವದಲಿ-ಕಾಡಿದಲ್ಲಿ, ಸತಿ-ಹೆಂಡತಿಯು, ಉಟ್ಟ-ಉಟ್ಟಿರುವ, ವಸನದಿ-ವಸ್ತ್ರದಲ್ಲಿ, ಸೆಳೆಯುತ-ಎಳೆದುಕೊಳ್ಳುತ್ತಾ, ಅರ್ಧವ-ಅರ್ಧಭಾಗವನ್ನು, ಕೊಂಡು-ತೆಗೆದುಕೊಂಡು, ನಾರಿಯ-ಹೆಂಡತಿಯನ್ನು, ಕಳೆದುಹೋದವರು-ಬಿಟ್ಟು ಹೋದವರು, ಉಂಟೇ-ಇರುವರೇ, ಎನಲು-ಎಂದುಕೇಳಲು, ಉತ್ತರವ-ಬದಲನ್ನು, ಪೇಳುವನು-ಹೇಳುತ್ತಾನೆ ॥೯

ತಾತ್ಪರ್ಯ:— ಎಲೈ ವಿಪ್ರರೇ ಕೇಳಿ, ಆನಳನು ಪೂರ್ವದಂತೆ ತನ್ನ ರಾಜವೇಶದಲ್ಲಿಲ್ಲ. ಬೇರೆ ವೇಷದಿಂದ ಇರುವನು, ಆದಕಾರಣ ನೀವು ಅವನನ್ನು ಕಂಡು ಹಿಡಿಯಬೇಕಾದರೆ ಆಯಾ ಪಟ್ಟಣಗಳಲ್ಲಿರುವ ದೊಡ್ಡ ಸಭೆಗಳಲ್ಲಿ -ಕಾಡಿನಲ್ಲಿ ಮಲಗಿ ನಿದ್ರಿಸುತ್ತಿರುವಾ ತನ್ನ ಹೆಂಡತಿಯುಟ್ಟಿದ್ದ ವಸ್ತ್ರದಲ್ಲಿ ಅರ್ಧವನ್ನು ತೆಗೆದುಕೊಂಡು ಅವಳನ್ನು ಅಡವಿಯಲ್ಲಿ ಬಿಟ್ಟು ಹೋದವರಾದರೂ ಉಂಟೇ, ಎಂದು ಪ್ರಶ್ನೆ ಮಾಡಬೇಕು, ಅದಕ್ಕೆ ಯಾವನು ಉತ್ತರವನ್ನು ಹೋಳುವನೋ ಅವನೇ ನಳನೆಂದು ತಿಳಿಯಬೇಕಲ್ಲದೆ, ಸಾಮಾನ್ಯವಾಗಿ ಅವನನ್ನು ತಿಳಿಯುವುದಕ್ಕಾಗುವುದಿಲ್ಲ (ಎಂದು ಹೇಳಿದಳು) ॥೯॥

ಟಿಪ್ಪಣಿ:— ರಾಜನತೇಜ-ರಾಜತೇಜ (ಷ. ತ) ನಿಜವಾದರಾಜತೇಜ-ನಿಜರಾಜತೇಜ (ವಿ. ಪೂರ್ವ. ಕ) (೨) ಇದುನುಡಿ-ಈನುಡಿ, (ಗಮಕ) ॥೯॥

ಮೂ॥ ಆನುಡಿಯಬಂದೆನಗೆನೀವನು। ಮಾನವಿಲ್ಲದೆಪೇಳೆನುತಸ। ನ್ಮಾನದಲಿಬೀಳ್ಕೊಟ್ಟಳಂಗನೆತೆಗಳಿವರುಬಳಿಕ॥ ಮಾನವೇಂದ್ರರಸಭೆಯನೋಡಿಸಿ। ಧಾನಿಸುತನಾನಾಟಗನಾ್ತಸ್ಥಾನಗಳನಗರಗಳಶೋಧಿಸುತ್ತೈದಿದರುಪಥವ ॥೧೦॥

ಟೀಕೆ:— ನೀವ್-ನೀವು, ಬಂದು, ಆನುಡಿಯ-ಆಮಾತನ್ನು,

ಎನಗೆ-ನನಗೆ, ಅನುಮಾನವಿಲ್ಲದೆ-ಸಂದೇಹಪಡದೆ, ಪೇಳಿ-ಹೇಳಿ, ಎನುತ-ಎಂಬದಾಗಿ, ಅಂಗನೆ-ದಮಯಂತಿಯು (೧) ಸನ್ಮಾನದಲಿ-ಮರ್‍ಯಾದೆಮಾಡಿ, ಬೀಳ್ಕೊಟ್ಟಳು-ಕಳುಹಿಸಿದಳು, ಬಳಿಕ-ಅನಂತರದಲ್ಲಿ, ತೆರಳಿದರು-ಹೊರಟರು, ಮಾನವೇಂದ್ರರ-ದೊರೆಗಳ, ಸಭೆಯ-ಸಭೆಗಳನ್ನು, ನೋಡಿ, ನಿಧಾನಿಸುತ-ವಿಚಾರಿಸುತ್ತಾ (೩) ನಾನಾದಿಗಂತಾಸ್ಥಾನಗಳ-ಎಲ್ಲಾದಿಕ್ಕುಗಳ ಕೊನೆಯವರಿಗೂ ಇರುವ ರಾಜರಸಭೆಗಳನ್ನೂ,ನಗರಿಗಳ-ಪಟ್ಟಣಗಳನ್ನೂ, ಭೇದಿಸುತ-ಹುಡುಕುತ್ತಾ, ಹದವ-ದಾರಿಯನ್ನು, ಐದಿದರು-ಪ್ರಯಾಣಮಾಡಿದರು ॥೧೦॥

ತಾತ್ಪರ್ಯ:— ಅವನು ಹೇಳುವ ಪ್ರತ್ಯುತ್ತರವನ್ನು ನೀವು ಸಂಶಯಪಡದೆ ನನ್ನೊಡನೆ ಬಂದು ಹೇಳಬೇಕು, ಎಂದು ಅವರಿಗೆ ಬೇಕಾದ ಬಹುಮಾನಗಳನ್ನು ಮಾಡಿ ಕಳುಹಿಸಿದಳು, ಅವರು ಅದೇರೀತಿಯಾಗಿ ಲೋಕದಲ್ಲಿ ಎಲ್ಲಾದಿಕ್ಕುಗಳಲ್ಲಿಯೂ ಇರುವ ಪಟ್ಟಣಗಳನ್ನೂ, ರಾಜಸಭೆಗಳನ್ನೂ, ಚೆನ್ನಾಗಿ ವಿಚಾರಿಸುತ್ತಾ ಮುಂದುಮುಂದಕ್ಕೆಪ್ರಯಾಣಮಾಡುತ್ತಿದ್ದರು ॥೧೦॥

ಟಿಪ್ಪಣಿ:—(೧) ಸತ್+ಮಾನ, (ಸಂ. ಅನು. ಸ) (ವಿ. ಪ್ರೊಪ್ವಕ) (೨) ಮಾನವ-ಮನುಷ್ಯರ, ಇಂದ್ರ-ಒಡೆಯ (ಷ. ತ) ಮಾನವ+ಇಂದ್ರ-ಮಾನವೇಂದ್ರ (ಗುಣ) (೩) ನಾನಾಪಕ್ಕುಗಳ ಅಂತ-ನಾನಾದಿಗಂತ (ಷ. ತ) ದಿಗಂತದ ಆಸ್ಥಾನ-(ಷ. ತ) ॥೧೦॥

ಮೂ॥ ಇಳೆಯಮರರಲ್ಲಲ್ಲಿಗಿರಿವನ|ಗಳನಿರೀಕ್ಷಿಸಿಕೆಲವೃಖಯಿಗಳ|ನಿಳ
ಯಗಳನೋಡುತ್ತಕಾನನಗಳೆದುಬೇಗದಲಿ॥ ಜಲಧಿಮೇರೆಯಮ
ಧ್ಯದಲಿಭೂ| ವಳಯವೆಲ್ಲವಶೋಧಿಸುತತನು | ಬಳಲಿಕೆಯಭಾವಿ
ಸದೆನಡೆದರುಮುಂದೆಪಥವಿಡಿದು ॥೧೧॥

ಟೀಕೆ:—ಇಳೆಯಮರರ್-ಬ್ರಾಹ್ಮಣರು, ಅಲ್ಲಲ್ಲಿ-ಎಲ್ಲಕಡೆಗಳಲ್ಲಿಯೂ, (೧) ಗಿರಿವನಗಳ-ಬೆಟ್ಟ ಕಾಡು ಇವುಗಳನ್ನು, ನಿರೀಕ್ಷಿಸಿ- ಹುಡುಕಿ, ಕೆಲವೃಖಯಿಗಳ, ನಿಳಯಗಳ-ಮನೆಗಳನ್ನು, ನೋಡುತ್ತ. (೨) ಕಾನನಗಳೆದು-ಕಾಡನ್ನು ದಾಟಿ, ಬೇಗದಲಿ, ಜಲಧಿಮೇರೆಯ-ಭೂಮಿಯ, ಮಧ್ಯದಲಿ-ಮಧ್ಯಭಾಗದಲ್ಲಿ.(೩) ಭೂವಳಯವ-ಭೂಭಾಗವನ್ನು, ಎಲ್ಲವ-ಎಲ್ಲವನ್ನೂ, ಶೋಧಿಸುತ-ಹುಡುಕುತ್ತಾ, ತನುಬಳಲಿಕೆಯ-ದೇಹಾಯಾಸವನ್ನು, ಭಾವಿಸದೆ-ಲಕ್ಷ್ಯಮಾಡದೆ, ಮುಂದೆ-ಮುಂದಕ್ಕೆ,

ಪಥವಿಡಿದು-ದಾರಿಯನ್ನು ಹಿಡಿದು, ನಡೆದರು-ಹೋದರು ॥೧೧॥

ತಾತ್ಪರ್ಯ:—ಭೂಮಂಡಲದಲ್ಲಿರುವ ಎಲ್ಲ ಭೂಭಾಗಗಳನ್ನೂ, ಕಾಡು, ಬೆಟ್ಟಗಳ ಪ್ರದೇಶಗಳನ್ನೂ, ಹುಡುಕುತ್ತಾ ಅಲ್ಲಲ್ಲಿ ಋಷ್ಯಾಶ್ರಮಗಳನ್ನು ನೋಡಿ ಅಲ್ಲಿ ಹುಡುಕುತ್ತಾ ದೇಹಾಯಾಸವನ್ನು ಎಣಿಸದೆ ಮುಂದಣ ದಾರಿಯನ್ನು ನಡೆಯುತ್ತಾ ಹೋದನು. ॥೧೧॥

ಟಿಪ್ಪಣಿ:—(೧) ಗಿರಿಯುಂ ವನವ್ರಾ-ಗಿರಿವನಗಳು (ದ್ವಿಗು) (೨) ಕಾನನವಂ ಕಳೆದು-ಕಾನನಗಳೆದು (ಕ್ರಿ. ಸ) ಭೂವಿನವಳಯ-ಭೂವಳಯ (ಷ. ತ) ॥೧೧॥

ಮೂ॥ ಮುಂದೆಬರುತಿರೆಕಂಡರೊಬ್ಬನ। ನಿಂದಯಾಚಕಭೂಸುರನೆ
ಯೆ। ಲ್ಲಿಂದಬಂದಿರಿಯೆನಲಯೋಧ್ಯಾನಗರದಿಂದೆನಲು ॥ ಕುಂದದ
ಲ್ಲಿವಿಶೇಷವೇನುಂ। ಟೆಂದೆನಲುಪೇಳಿದನುಕ್ರತುವಹು। ದೆಂದುವಿ
ಪ್ರನಮಾತಿನಿಂದೈದಿದರವರಯೋಧ್ಯೆಯನು ॥೧೨॥

ಟೀಕೆ—ಮುಂದೆ-ಎದುರಿಗೆ, ಬರುತಿರೆ-ಬರುತ್ತಿರಲು, ಒಬ್ಬನ-ಒಬ್ಬಬ್ರಾಹ್ಮಣನನ್ನು, ಕಂಡರ್-ನೋಡಿದರು, ಯಾಚಕ-ಆಯಾಚಕನು, ನಿಂದ-ನಿಂತುಕೊಂಡನು, (೧) ಭೂಸುರನೆ-ಬ್ರಾಹ್ಮಣನೆ, ಎಲ್ಲಿಂದ-ಯಾವಸ್ಥಳದಿಂದ, ಬಂದಿರಿ, ಎನಲು, (೨) ಅಯೋಧ್ಯಾನಗರದಿಂದೆ-ಅಯೋಧ್ಯಾಪಟ್ಟಣದಿಂದ, (ಬಂದೆನು,) ಎನಲು, ಕುಂದದೆ-ತಪ್ಪದೆ, ಅಲ್ಲಿ-ಆ ಊರಲ್ಲಿ, ವಿಶೇಷವು-ಹೆಚ್ಚು ಸಮಾಚಾರವು, ಏನುಂಟು-ಏನಿರುವುದು, ಎಂದೆನಲು-ಎಂದುಕೇಳಲು, ಕ್ರತುವು-ಯಜ್ಞವು, ಅಹುದು-ಆಗುವುದು, ಎಂದು, ಪೇಳಿದನು-ಹೇಳಿದನು, ವಿಪ್ರನ-ಆಬ್ರಾಹ್ಮಣನ, ಮಾತಿನಿಂದ, ಅಯೋಧ್ಯೆಯನು, ಐದಿದರು-ಹೊಕ್ಕರು ॥೧೨॥

ತಾತ್ಪರ್ಯ:—ಎದುರಿಗೆ ಒಬ್ಬನು ಬರುತ್ತಿರಲು, ಅವನನ್ನು ಕಂಡು ಅಯ್ಯಾ ಎಲ್ಲಿಂದ ಬಂದಿರಿ, ಎಂದು ಕೇಳಲು, ಆ ಯಾಚಕನು, ನಾನು ಅಯೋಧ್ಯೆಯಿಂದ ಬಂದೆನೆಂದು ಹೇಳಿದನು, ಆ ಪುರದಲ್ಲಿ ವಿಶೇಷವೇನು, ಎಂದು ಕೇಳಲು, ಅಲ್ಲಿ ಯಜ್ಞವು ನಡೆಯುವುದೆಂದು ಹೇಳಿದನು. ಆ ಬ್ರಾಹ್ಮಣನ ಮಾತನ್ನು ಕೇಳಿ ಎಲ್ಲರೂ ಅಯೋಧ್ಯಾಪುರಕ್ಕೆ ಬಂದು ಸೇರಿದರು. ॥೧೨॥

ಮೂ॥ ಮರುದಿವಸದರುತುಪರ್ಣನನುನಿದು। ಸ್ಯರನಹಿತನೃಪರೋಲಗದೊಳಿ
ರೆಕಂ। ಡರುಮಹಾರಥರೊಳಗೆಹೊಕ್ಕರುನಿಂದುಕೈಸೆಗಹಿ ॥ ಹಿರಿ

ಯುವರುಸಾಮಾಜಿಕರುಸ| ಚ್ಚರಿತರಿದನೀವ್‍ಕೇಳಿರೆನ್ನುತ| ಲುರು
ತರವಗಂಭೀರವಾಕ್ಯದೊಳೆಂದನಾವಿಪ್ರ ||೧೩||

ಟಿಪ್ಪಣಿ:—(೧) ಭೂ-ಭೂಮಿಯ, ಸುರ-ದೇವತೆ (ಅವ) (೨) ಅಯೋಧ್ಯೆ ಎಂಬ ನಗರ-ಅಯೋಧ್ಯಾನಗರ (ಸಂ. ಪೂರ್ವ. ಕ) ||೧೨||

ಟೀಕೆ:—ಮರುದಿವಸ-ಮಾರನೆಯದಿನದಲ್ಲಿ, ಋತುಪರ್ಣ - ಋತುಪರ್ಣರಾಜನು, (೧) ಮುನಿಮುಖ್ಯರಸಹಿತ-ಋಷಿಶ್ರೇಷ್ಠರೊಡನೆ, ಓಲಗದೊಳ್-ಸಭೆಯಲ್ಲಿ, ಇರಲು, ಕಂಡರು, (೨) ಮಹಾಸಭೆಯೊಳಗೆ- ಆ ದೊಡ್ಡಸಭೆಯೊಳಕ್ಕೆ, ಹೊಕ್ಕರು-ಹೋದರು, ನಿಂದು-ನಿಂತುಕೊಂಡು (೩) ಕೈನೆಗಹಿ-ಕೈಯನ್ನು ಮೇಲಕ್ಕೆತ್ತಿ, ಆ ವಿಪ್ರ - ಆಸುದೇವನೆಂಬ ಬ್ರಾಹ್ಮಣನು, ಹಿರಿಯುವರು-ದೊಡ್ಡವರಾದ, (೪) ಸಚ್ಚರಿತರ್- ಸದಾಚಾರಸಂಪನ್ನರಾದ, ಸಾಮಾಜಿಕರ್-ಸಭಾಜನರಾದ, ನೀವ್-ನೀವು, ಕೇಳಿರಿ, ಎನ್ನುತಲಿ - ಎಂಬದಾಗಿ, ಉರುತರದ - ಹೆಚ್ಚಾದ, ಗಂಭೀರ ವಾಕ್ಯದೊಳು - ಗಂಭೀರವಾದ ಮಾತಿನಿಂದ, ಎಂದಂ - ಹೇಳಿದನು. ||೧೩||

ತಾತ್ಪರ್ಯ:—ಎರಡನೆಯದಿನ ಋತುಪರ್ಣನು ಕೆಲವರು ಋಷಿಗಳನ್ನು ಸೇರಿಸಿಕೊಂಡು ಸಭೆಯಲ್ಲಿರುವದನ್ನು ನೋಡಿ ಸಭೆಯನ್ನು ಹೊಕ್ಕರು, ಸುದೇವನೆಂಬ ಬ್ರಾಹ್ಮಣನು ಆ ಸಭೆಯಲ್ಲಿಕೈಯೆತ್ತಿಕೊಂಡು ನಿಂತು ಎಲೈ-ದೊಡ್ಡವರಾಗಿಯೂ, ಸಚ್ಚರಿತ್ರರಾಗಿಯೂ, ಸತ್ಪುರುಷರಾಗಿಯೂ ಇರುವ ಸಭಾಸದರೇ! ತಾವೆಲ್ಲರೂ ನಾನು ಹೇಳುವ ಮಾತನ್ನು ದಯವಿಟ್ಟು ಲಾಲಿಸಿರಿ, ಎಂದು ಗಂಭೀರವಾಣಿಯಿಂದ ಒಂದುಮಾತನ್ನು ಹೇಳಿದನು. ||೧೩||

ಟಿಪ್ಪಣಿ:—(೧) ಮುನಿಗಳಲ್ಲಿ ಮುಖ್ಯರು-ಮುನಿಮುಖ್ಯರು (ಸ. ತ) (೨) ಮಹತ್ತಾದಸಭೆ-ಮಹಾಸಭೆ (ವಿ. ಪೂರ್ವ. ಕ) (೩) ಕೈಯಂ ನೆಗಹಿ-ಕೈ ನೆಗಹಿ (ಕ್ರಿ. ಸ) (೪) ಸತ್+ಚರಿತರ್-ಸಚ್ಚರಿತರ್ (ಶ್ಚುತ್ವ) ಸತ್ತಾದ ಚರಿತೆಯುಳ್ಳವರಾರೋ ಅವರು - ಸಚ್ಚರಿತರ್, (ಬ. ವ್ರೀ) ||೧೩||

ಮಾ| ಹಳುವದಲಿಬಂದಲಸಿಮಲಗಿದ| ಕುಲಸತಿಯುವಸನದೊಳೆಗರ್ಧ
ವ| ಕಳೆದುಕೊಂಡೋಡ್ದುಗಲಿಹೋದವರುಂಟಿರಾತ್ರಿಯಲಿ || ಇಳೆ
ಯನಾಳುವನೃಪರಸಭೆಗೆ ಬಳಕೆಗಿದುರೀಸಲ್ಲವೆನೆಮನ | ವಳುಕಿ

ನಸುನಗೆಯಿಂದನುಡಿದನುವೊಲಿದುಬಾಹುಕನು ॥೧೪॥

ಟೀಕೆ:—ಹಳುವದಲಿ-ಕಾಡಿನಲ್ಲಿ, ಅಲಸಿ-ಆಯಾಸಪಟ್ಟು, ಬಂದು, ಮಲಗಿದ-ನಿದ್ರೆಮಾಡಿದ, (೧) ಕುಲಸತಿಯ- ಕುಲೀನಳಾದ ಸ್ತ್ರೀಯ, ವಸನದೊಳಗೆ-ವಸ್ತ್ರದಲ್ಲಿ, ಅರ್ಧವ-ಅರ್ಧಭಾಗವನ್ನು, ಕಳೆದುಕೊಂಡು-ಕಿತ್ತುಕೊಂಡು, ಒಯ್ದು - ತೆಗೆದುಕೊಂಡು, ರಾತ್ರಿಯಲಿ-ರಾತ್ರಿಯಲ್ಲಿ, ಅಗಲಿ-ಆಕೆಯನ್ನು ಬಿಟ್ಟು, ಹೋದವರುಂಟೆ- ಹೋಗಬಹುದೆ, ಇಳೆಯಂ - ಭೂಮಿಯನ್ನು, ಆಳುವ, ನೃಪರ - ದೊರೆಗಳ, ಸತ್ವದ - ಸತ್ಯವ್ರತದ, ಬಳಕೆಗೆ - ನಡವಳಿಕೆಗೆ, ಇದು - ಹೀಗೆ ಮಾಡುವುದು, ಲೇಸಲ್ಲವು - ಯೋಗ್ಯವಾದದ್ದಲ್ಲ, ಎನೆ - ಎಂದು ಹೇಳಲು, (೨) ಮನವಳುಕಿ-ಮನಸ್ಸು ಅಳುಕಿ, ಬಾಹುಕನು, ನಸುನಗೆಯಿಂದ-ಕಿರುನಗೆಯಿಂದ, ಒಲಿದು-ಪ್ರೀತಿಪೂರ್ವಕವಾಗಿ, ನುಡಿದನು-ಹೇಳಿದನು. ॥೧೪॥

ತಾತ್ಪರ್ಯ:—ಅರಣ್ಯದಲ್ಲಿ ಆಯಾಸದಿಂದ ಬಳಲಿ ನಿದ್ರೆಮಾಡುತ್ತಿರುವ ಕುಲಾಂಗನೆಯು ಉಟ್ಟಿದ್ದ ವಸ್ತ್ರದಲ್ಲಿ ಅರ್ಧಭಾಗವನ್ನು ತೆಗೆದುಕೊಂಡು ಆಕೆಯನ್ನು ಅಲ್ಲಿಯೇ ಬಿಟ್ಟು ರಾತ್ರಿಯಲ್ಲಿ ಮೋಸಮಾಡಿ ಹೋದವರು ಲೋಕದಲ್ಲಿ ಯಾರಾದರೂ ಉಂಟೇ ? ರಾಜ್ಯಭಾರ ಮಾಡುವ ದೊರೆಗಳ ಸತ್ಯಸಂಧತೆಗೆ ಈ ಬಗೆಯ ನಡತೆಯು ಯೋಗ್ಯವಾದದ್ದೇ ! ಎಂದು ಕೇಳಲು, ಆ ಮಾತಿಗೆ ಮನಸ್ಸು ಉಳುಕಿದುದರಿಂದ ಬಾಹುಕನು ನಸುನಗುತ್ತಾ ಪ್ರೇಮಾತಿಶಯದಿಂದ ಒಂದು ಮಾತನ್ನಾಡಿದನು. ॥೧೪॥

ಟಿಪ್ಪಣಿ:—(೧) ಕುಲಪಾಲಕಳಾದ ಸತಿ-ಕುಲಸತಿ, (ಉ. ಮ. ಕ. ಸ) (೨) ಮನದಲ್ಲಿ ಅಳುಕಿ-ಮನವಳುಕಿ (ಕ್ರಿ. ಸ) ॥೧೪॥

ಮೂ॥ ಕ್ಷಿತಿಯಮರರೆಲ್ಲಿಂದಬಂದಿರಿ। ಸತಿಯನಗಲಿದಬಾಹಿರನುನಿಜ।
ಪತಿಯೆಸಾಕಂತಿರಲಿಬಿಡುಋತುಪರ್ಣನೋಲಗದಿ॥ ಅತಿಶಯವನು
ಡಿಗೇಳ್ವಕಟಾ। ಸತಿಗೆವಂಚನೆಯಲ್ಲವಮನಿಜ। ಪತಿಗೆಕೊರತೆ
ಯದೆಂದುಸೂಚಿಸಿನುಡಿದವಿಪ್ರರಿಗೆ ॥೧೫॥

ಟೀಕೆ:—ಕ್ಷಿತಿಯಮರರು-ಬ್ರಾಹ್ಮಣರಾದ (ನೀವು) ಎಲ್ಲಿಂದ-ಯಾವೂರಿಂದ, ಬಂದಿರಿ-ಬಂದಿರುವಿರಿ ? ಸತಿಯ-ಹೆಂಡತಿಯನ್ನು, ಅಗಲಿದ-ಬಿಟ್ಟುಹೋದ, ಬಾಹಿರನು-ನೀಚನು, (೧) ನಿಜಪತಿಯೆ-ಆಕೆಯ

ಗಂಡನೆನಿಸುವನೇ, ಸಾಕು, ಅದಂತಿರಲಿ-ಹಾಗಿರಲಿ, ಬಿಡು, ಅಕಟಾ-ಅಯ್ಯೋ, ಋತುಪರ್ಣನೋಲಗದಿ-ಋತುಪರ್ಣರಾಜನ ಸಭೆಯಲ್ಲಿ, ಅತಿಶಯದ-ಆಶ್ಚರ್ಯಕರವಾದ, (೨) ನುಡಿಗೇಳ್ದೆವು-ಮಾತನ್ನು ಕೇಳಿದಹಾಗಾಯ್ತು, ಅದು-ಅಂತಹಮೋಸವು, ಸತಿಗೆ-ಹೆಂಗಸಿಗೆ, ವಂಚನೆಯುಲ್ಲ-ಮೋಸವಾದುದಲ್ಲ, ಅದು, ಪತಿಗೆ- ಗಂಡನಿಗೆ, ಕೊರತೆ - ನ್ಯೂನತೆಯು, ಎಂದು, ವಿಪ್ರರಿಗೆ-ಬ್ರಾಹ್ಮಣರಿಗೆ, ಸೂಚಿಸಿ-ತಿಳಿಸಿ, ನುಡಿದನು-ಹೇಳಿದನು. ||೧೫||

ತಾತ್ಪರ್ಯ:—ಅಯ್ಯಾ ಬ್ರಾಹ್ಮಣರೇ ನೀವು ಯಾವೂರಿಂದ ಬಂದಿರಿ ! ಯಾವನು ಪತ್ನಿಯನ್ನು ಅಗಲಿದನೋ ಅವನು ಆಕೆಯ ಪತಿಯೆನಿಸುವನೇ, ಎಂದಿಗೂ ಇಲ್ಲ, ಅದು ಹಾಗಿರಲಿ ಬಿಡಿ, ಸಾಕು, ಋತುಪರ್ಣನ ಸಭೆಯಲ್ಲಿ ಇದೊಂದು ವಿಶೇಷಸಮಾಚಾರವನ್ನು ಕೇಳಿದಂತಾಯ್ತು, ಆದರೆ, ಈ ರೀತಿಯಾಗಿ ವಂಚಿಸಿ ಹೋಗುವುದು ಹೆಂಡತಿಗೆವಂಚನೆಯಲ್ಲ, ಅವಳಪತಿಗೆ ನಿಂದಾಕರವಾದುದು, ಎಂದು ಉತ್ತರವನ್ನು ಹೇಳಿದನು. ||೧೫||

ಟಿಪ್ಪಣಿ:—ನಿಜನಾದಪತಿ-ನಿಜಪತಿ (ವಿ. ಪೂ. ಕ) (೨) ನುಡಿಯಂ ಕೇಳ್ದೆವು ನುಡಿಗೇಳ್ದೆವು, (ಕ್ರಿ. ಸ) ಕಕಾರಕ್ಕೆ ಗಕಾರಾದೇಶ ಬಂತು. ||೧೫||

ಮೂ|| ಈತನಾರುಕುರೂಪಿನೈಷಧ| ನೀತನೋಸಭೆಯೊಳಗೆತಾನೀ|
ಮಾತನಾಡಲದೇಕೆಸಂಶಯವೆನುತಮನದೊಳಗೆ| ಖ್ಯಾತರಾಲೋ
ಚಿಸುತಬಂದರು| ಭೂತಳಾಧಿಪಭೀಮನೃಪಸಂ| ಜಾತೆಯನುಕಂ
ಡೆರಗಿಕೈಮುಗಿದೊರೆದರೀಹದನ ||೧೬||

ಟೀಕೆ:—ಕುರೂಪಿ-ಕುತ್ಸಿತವಾದರೂಪವುಳ್ಳ, ಈತಂ-ಇವನು, ಆರು-ಯಾರು ? ನೈಷಧಂ-ನಳನು, ಈತನೋ-ಇವನೇನೋ ! ಸಭೆಯೊಳಗೆ, ತಾಂ-ತಾನು, ಈಮಾತಂ-ಈಮಾತನ್ನು, ಆಡಲದೇಕೆ-ಆಡಿದ್ದುದಕೆ ? ಸಂಶಯವು-ಅನುಮಾನವಾಗಿದೆ, ಎನುತ, ಮನದೊಳಗೆ-ಮನಸ್ಸಿನಲ್ಲಿ, ಖ್ಯಾತರ್-ಬುದ್ಧಿಶಾಲಿಗಳಾದ ಈ ಬ್ರಾಹ್ಮಣರು, ಆಲೋಚಿಸುತ-ಚಿಂತಿಸುತ್ತಾ, ಬಂದರು, (೧) ಭೂತಳಾಧಿಪ ಭೀಮನೃಪಸಂಜಾತೆಯನು-ದೊರೆಯಾದ ಭೀಮರಾಜನ ಮಗಳನ್ನು, ಕಂಡು-ನೋಡಿ, ಕೈ ಮುಗಿದು-ಕೈ ಜೋಡಿಸಿ, (೨) ಈ ಹದನ- ಈ ಸಮಾ

ಚಾರವನ್ನು, ಒರೆದರ್-ಹೇಳಿದರು. ||೧೩||

ತಾತ್ಪರ್ಯ:—ಆ ಮಾತನ್ನು ಕೇಳಿ ಬ್ರಾಹ್ಮಣರು ತಮ್ಮ ಮನಸ್ಸಿನಲ್ಲಿ "ಈ ಕುರೂಪಿ ಯಾರು? ಇವನೇ ನಳನಾಗಿರಬಹುದೋ ಏನೊ ಸಭೆಯಲ್ಲಿ ಇಂತಹ ಮಾತನ್ನು ಇವನು ಆಡಲು ಕಾರಣವೇನು? ಈವಿಷಯದಲ್ಲಿ ಸಂದೇಹವಾಗುವ್ರದು" ಎಂದು ಆಲೋಚಿಸುತ್ತಾ ದಮಯಂತಿಯ ಬಳಿಗೆ ಬಂದು ಕೈಮುಗಿದು ಈ ವಿಷಯವನ್ನು ತಿಳಿಸಿದರು. ||೧೬||

ಟಿಪ್ಪಣಿ:—(೧) ಭೂತಳದಅಧಿಪ-(ಷ. ತ) ಭೀಮನೆಂಬ ನೃಪ, (ಸಂ. ಪ್ರಾಸ್ವ ಕ) ಭೂತಳಾಧಿಪನಾದ ಭೀಮನೃಪ (ವಿ. ಪ್ರಾಸ್ವ. ಕ) ಭೀಮನೃಪನ ಸಂಜಾತೆ (ಷ. ತ) ಇದು ಹದನ-ಈ ಹದನ (ಗಮಕ) ||೧೬||

ಮೂ|| ದೇವಿಯರುಚಿತ್ತೈಸಿದಿರೆಭುವ| ನಾವಳಿಗಳೆಲ್ಲವನುನೋಡುತ|
ಲಾವುನುಂದೈತರಲುಕಂಡೆವಯೋಧ್ಯನಗರಿಯನು || ಭೂವರನ
ಋತುಪರ್ಣರಾಜನ| ಸೇವೆಯೊಳಗೆಕುರೂಪಿಯೊರ್ವನು| ಜೀವ
ಸಖನಾಗಿಹನುಬಾಹುಕನೆಂಬನಾಮದಲಿ ||೧೭||

ಟೀಕೆ:— ದೇವಿಯರು-ಅಮ್ಮನವರು, ಚಿತ್ತೈಸಿದಿರೆ-ಕೇಳಿರಿ, ಆವು-ನಾವು (೧) ಭುವನಾವಳಿಗಳೆಲ್ಲವನು - ಭೂಮಂಡಲವೆಲ್ಲವನ್ನೂ, ನೋಡುತಲಿ-ಹುಡುಕುತ್ತಾ, ಮುಂದೆ-ಮುಂದಕ್ಕೆ, ಐತರಲು-ಹೋಗಲು, (೨) ಅಯೋಧ್ಯನಗರಿಯನು, ಕಂಡೆವು, (೩) ಭೂವರನ-ದೊರೆಯಾದ, ಋತುಪರ್ಣರಾಜನ, ಸೇವೆಯೊಳಗೆ-ಸೇವೆಯಲ್ಲಿ, ಕುರೂಪಿ-ವಿಕಾರವುಳ್ಳ, ಒರ್ವನು-ಒಬ್ಬನು, ಬಾಹುಕನೆಂಬ, ನಾಮದಲಿ-ಹೆಸರಿನಿಂದ, (೪) ಜೀವಸಖನಾಗಿ - ಪ್ರಾಣಸ್ನೇಹಿತನಾಗಿ, ಇಹನು - ಇರುವನು. ||೧೭||

ತಾತ್ಪರ್ಯ:—ಅಮ್ಮಾ ಕೇಳಿ, ನಾವು ಹೊರಟು ಭೂಮಿಯನ್ನೆಲ್ಲಾ ಹುಡುಕುತ್ತಾ ಅಯೋಧ್ಯಾಪುರಕ್ಕೆ ಬಂದು ನೋಡಲು ಅಲ್ಲಿನದೊರೆಯಾದ ಋತುಪರ್ಣನ ಸೇವೆಯನ್ನು ಮಾಡುತ್ತಾ ಅವನ ಪ್ರಾಣಪ್ರಿಯನಾಗಿರುವ ಬಾಹುಕನೆಂಬ ಕುರೂಪಿಯೊಬ್ಬನನ್ನು ನೋಡಿದೆವು. ||೧೭||

ಟಿಪ್ಪಣಿ:—(೧) ಭುವನದ ಆವಳಿಗಳು-ಭುವನಾವಳಿಗಳು (ಷ, ತ) (೨) ಅಯೋಧ್ಯವೆಂಬನಗರಿ-ಅಯೋಧ್ಯನಗರಿ (ಸಂ. ಪ್ರಾಸ್ವ. ಕ) (೩) ಭೂ-ಭೂಮಿಗೆ, ವರ-ಪತಿ (ಅಪ) (೪) ಜೀವಸಖ-ಜೀವಸಖ

(ಷ. ತ) ||೧೭||

ಮೂ|| ತುರಗನಿಕರದಶಿಕ್ಷೆಯುಲಿಮಂ | ದಿರದಬಾಣಸಿತನದಕೆಲಸದಿ|
ನೆರೆನಿಪುಣನೆಂದೆನಿಸಿಕೊಂಡಿಹನೃಪನಸಭೆಯೊಳಗೆ || ಪರುಠವಿಸಿ
ನೀವೆಂದಮಾತನು| ವರಸಭಾಮಧ್ಯದಲಿನುಡಿಯುಲು | ಯಿರದೆತಾ
ನೀಮಾತನೆಂದನುನಗುತಬಾಹುಕನು ||೧೮||

ಟೀಕೆ:—(೧) ತುರಗನಿಕರದ-ಕುದುರೆಯುಸಮೂಹದ, ಶಿಕ್ಷೆಯು ಲಿ-ತಿದ್ದುವಿಕೆಯಲ್ಲಿಯೂ, ಮಂದಿರದ-ಮನೆಯು, ಬಾಣಸಿತನದ- ಅಡಿಗೆಯು, ಕೆಲಸದಿ-ಕೆಲಸದಲ್ಲಿಯೂ, ನಿಪುಣನೆಂದು-ಸಮರ್ಥನೆಂದು, ಎನಿಸಿಕೊಂಡಿಹ-ಎನ್ನಿಸಿಕೊಂಡಿರುವನು, ನೃಪನ-ದೊರೆಯ, ಸಭೆಯೊಳಗೆ, ಪರುಠವಿಸಿ-ಸಂಭ್ರಮದಿಂದ, ನೀವೆಂದ-ನೀವುಹೇಳಿದ, ಮಾತನು, (೨) ವರಸಭಾಮಧ್ಯದಲಿ-ಶ್ರೇಷ್ಠವಾದ ಸಭೆಯ ಮಧ್ಯದಲ್ಲಿ, ನುಡಿಯುಲು-ಹೇಳಲು, ಬಾಹುಕನು, ಇರದ-ಸುಮ್ಮನಿರದೆ, ನಗುತ, ತಾಂ-ತಾನು, ಈ ಮಾತಂ-ಈಮಾತನ್ನು, ಎಂದನು, ||೧೮||

ತಾತ್ಪರ್ಯ:-ಅವನು ಅಶ್ವಶಿಕ್ಷೆಯಲ್ಲಿಯೂ, ಪಾಕಶಾಸ್ತ್ರದಲ್ಲಿಯೂ ನಿಪುಣತೆಯನ್ನು ಪಡೆದಿರುವನು, ನಾವು ಆ ಸಭೆಯಲ್ಲಿ ನೀವು ಹೇಳಿದ್ದ ಮಾತನ್ನು ಗಂಭೀರವಾಗಿ ನುಡಿಯಲು ಅಲ್ಲಿದ್ದ ಆ ಬಾಹುಕನು ಸುಮ್ಮನಿರದೆ ಪ್ರತ್ಯುತ್ತರವನ್ನು ನಗುತ್ತಾ ಹೇಳಿದನು. ||೧೮||

ಟಿಪ್ಪಣಿ:—(೧) ತುರಗದನಿಕರ-ತುರಗನಿಕರ (ಷ. ತ) (೨) ವರವಾದಸಭಾ-ವರಸಭಾ (ವಿ. ಪೂರ್ವ. ಕ) ವರಸಭೆಯ ಮಧ್ಯ- ವರಸಭಾಮಧ್ಯ (ಷ. ತ) ||೧೮||

ಮೂ|| ಸತಿಗೆವಂಚನೆಗೈದಪತಿತಾ| ವಿಕಳಮತಿಯುಂತಿರಲಿಭೂಸುರ|ಪ
ಯಿಕೇಳಾಸತಿಗೆಭಂಗವೆಪತಿಗೆಕೊರತೆಕಣಾ|| ಪತಿವ್ರತವನಾಚರಿ
ಸುವವಳೇ| ಪತಿಯುಗುಣದೋಷಗಳನೆಣಿಪರೆ| ಗತಿಗೆಕಾರಣಸತ್ಯ
ನೇತನಗೆಂದನವನಗುತ ||೧೯||

ಟೀಕೆ:—(೧) ಭೂಸುರಪತಿಯೆ-ಬ್ರಾಹ್ಮಣಶ್ರೇಷ್ಠನೆ, ಕೇಳು, ಸತಿಗೆ-ಹೆಂಡತಿಗೆ, ವಂಚನೆಗೈದ-ಮೋಸಮಾಡಿದ, ಪತಿ-ಗಂಡನು, ತಾ-ತಾನು, ಮತಿವಿಕಳನು-ಬುದ್ಧಿಹೀನನು, ಅಂತಿರಲಿ-ಅದುಹಾಗಿರಲಿ, ಆ ಸತಿಗೆ-ಆ ಹೆಂಗಸಿಗೆ, ಭಂಗವೆ-ಅವಮಾನವೇ, ಪತಿಗೆ, (೨) ಕೊರತೆಕಣಾ-ನ್ಯೂನತೆಯಲ್ಲವೇ ! ಪತಿವ್ರತವಂ-ಪಾತಿವ್ರತ್ಯವನ್ನು, ಆಚರಿಸು

ನವಳ್-ನಡೆಯಿಸತಕ್ಕವಳು, ಈ ಪತಿಯ ಗುಣದೋಷಗಳಂ-ಗಂಡನ ಗುಣದೋಷಗಳನ್ನು, ಎಣಿಪರೆ-ಎಣಿಸಬಹುದೇ, ತನಗೆ-ಅವಳಿಗೆ, ಗತಿಗೆ-ಸದ್ಗತಿಗೆ, ಸತ್ಯವೇ-ಸತ್ಯವ್ರತವೇ, ಕಾರಣ-ನಿಮಿತ್ತವು (ಎಂಬನಾಗಿ) ಅವ-ಆ ಬಾಹುಕನು, ನಸುನಗುತ, ಎಂದನು||೧೯||

ತಾತ್ಪರ್ಯ:—ಎಲೈ ವಿಪ್ರವರ್ಯ್ಯನೇ ಕೇಳು! ಹೆಂಡತಿಗೆ ಮೋಸ ಮಾಡಿದ ಗಂಡನೇನೋ ಬುದ್ಧಿಹೀನನು, ಅದು ಹಾಗಿರಲಿ! ಅದರಿಂದ ಪತಿಗೆ ದೋಷವಲ್ಲದೆ ಪತ್ನಿಗೆ ಕೊರತೆಯೇನೂ ಇಲ್ಲ, ಆದರೆ ಪಾತಿವ್ರತ್ಯ ಧರ್ಮವನ್ನು ಸತ್ಯದಿಂದ ನಡೆಯಿಸತಕ್ಕ ಹೆಂಡತಿಯು ಗಂಡನಲ್ಲಿ ಗುಣದೋಷಗಳನ್ನೆಣಿಸಬಹುದೇ? ಇದು ಅವಳ ಸದ್ಗತಿಗೆ ಕಾರಣವಲ್ಲ, ಅವಳ ಸತ್ಯವ್ರತವನ್ನು ಬಿಡದೆ ಕಾಪಾಡಿಕೊಳ್ಳುವುದೇ ಅವಳಗತಿಗೆ ಕಾರಣವು, ಎಂದು ಹೇಳಿದನು. ||೧೯||

ಟಿಪ್ಪಣಿ:—(೧) ಭೂಸುರರಪತಿ-ಭೂಸುರಪತಿ (ಷ. ತ) (೨) ಕೊರಗು, ಎಂಬಧಾತುವಿಗೆ ಭಾವಾರ್ಥದಲ್ಲಿ ,ಅತೆ, ಎಂಬ ಕೃತ್ಪ್ರತ್ಯಯವು ಸೇರಿ ಧಾತುವಿನ ಕೊನೆಯ ಅಕ್ಷರಕ್ಕೆ ಲೋಪವಾಗಿದೆ, ಕಣಾ-ಎಂಬುದು ಅವ್ಯಯವು. ||೧೯||

ಮೂ|| ಪತಿಯುತಪ್ಪೆಣಿಸುವಳುತಾಪತಿ| ವ್ರತೆಯೆಧರಣಿಯಪಾಲಿಸುವ
　ಜನ| ಪತಿಯನಿಂದಿಸುವಾತಸೇವಕನೇನಿಧಾನಿಸಲು|| ಪಿತನವಾಕ್ಯ
　ವನತಿಗಳೆದವನು| ಸುತನೆಗುರುವಿಂಗೆರಡೆಣಿಸುತಿಹ| ಮತಿವಿಕಳನ
　ವಶಿಷ್ಯನೇಹೇಳೆಂದಬಾಹುಕನು ||೨೦||

ಟೀಕೆ:—ಪತಿಯ-ಗಂಡನ, ತಪ್ಪು-ದೋಷವನ್ನು, ಎಣಿಸುವಳು-ಗೊತ್ತುಮಾಡುವಳು, ತಾಂ-ತಾನು, ಪತಿವ್ರತೆಯೆ, ಧರಣಿಯ- ಭೂಮಿಯನ್ನು, ಪಾಲಿಸುವ-ಆಳುವ, (೧) ಜನಪತಿಯ-ರಾಜನನ್ನು, ನಿಂದಿಸುವಾತ-ದೂಷಿಸತಕ್ಕವನು, ಸೇವಕನೇ- ದೂತನೇ, ನಿಧಾನಿಸಲು-ಆಲೋಚಿಸಿದರೆ, (೨) ಪಿತನ-ತಂದೆಯ, ವಾಕ್ಯವಂ-ಮಾತನ್ನು, ಅತಿಗಳೆದವನು - ಮೀರಿದವನು, ಸುತನೆ - ಮಗನೆ, ಗುರುವಿಂಗೆ - ಉಪಾಧ್ಯಾಯನಿಗೆ, ಎರಡಂ-ಕೇಡನು, ಎಣಿಸುವ-ಕೋರುವ, (೩) ಮತಿವಿಕಳಂ-ಅವಿವೇಕಿಯು, ಅವ-ಅವನು, ಶಿಷ್ಯನೇ, ಹೇಳು, (ಎಂಬದಾಗಿ) ಬಾಹುಕನು, ಎಂದ, ||೨೦||

ತಾತ್ಪರ್ಯ:—ಗಂಡನಲ್ಲಿ ದೋಷಾರೋಪಣೆ ಮಾಡುವಳು ಪತಿ

ವ್ರತೆಯೇ ! ದೊರೆಯನ್ನು ದೂಷಿಸುವನು ಸೇವಕನೇ ! ತಂದೆಯು ಮಾತನ್ನು ತಿರಸ್ಕರಿಸುವನು ಪುತ್ರನೆ, ಗುರುವಿಗೆ ಎರಡು ಬಗೆವನು ಶಿಷ್ಯನಾದಾನೇ, ಹೇಳು ಎಂದು ಕೇಳಿದನು. ||೨೦||

ಟಿಪ್ಪಣಿ:—(೧) ಜನದಪತಿ–ಜನಪತಿ (ಷ. ತ) (೨) ಋಕಾರಾಂತವಾದ ಸಂಸ್ಕೃತ ಶಬ್ದವು ಅ, ಕಾರಾಂತವಾಗಿ ಕನ್ನಡಕ್ಕೆ ಲಿಂಗವಾಗಿದೆ, (೩) ಮತಿಯಿಂದ ವಿಕಲನು ಮತಿವಿಕಳನು (ತೃ. ತ) ||೨೦||

ಮೂ|| ಎನಲುತಲೆದೂಗಿದಳುಈಮಾ| ತಿನಲಿಸಂಶಯವಿಲ್ಲಬಾರೆಂದೆನು
ತಕಂಬನಿದುಂಬಿದಳುದಮಯಂತಿಮನದೊಳಗೆ||ಇನಿಯನಹುದಾ
ತನಪರೀಕ್ಷೆಗೆ|ನೆನೆಯಬೇಕೊಂದನುವನೆಂದಾ| ವನಿತೆತಂದೆಯನು
ಜ್ಞೆಯಲಿಕರೆದಳುಸುದೇವನನು ||೨೧||

ಟೀಕೆ:—ಎನಲು–ಎಂಬದಾಗಿ ಹೇಳಲು, ದಮಯಂತಿ, ಈಮಾತಿನಲಿ, ಸಂಶಯವಿಲ್ಲ–ಸಂದೇಹವಿಲ್ಲ, ಬಾರ–ಬಾ, ಎಂದೆನುತ (೧) ತಲೆದೂಗಿದಳು–ತಲೆಯನ್ನಲ್ಲಾಡಿಸಿದಳು, ಕಂಬನಿದುಂಬಿದಳು– ಕಣ್ಣೀರು ಹಾಕಿದಳು, ಮನದೊಳಗೆ–ಮನಸ್ಸಿನಲ್ಲಿ, ಇನಿಯಂ–ಗಂಡನು,ಅಹುದು–ಅವನೇಹೌದು, ಆತನ–ಅವನ, ಪರೀಕ್ಷೆಗೆ, (೨) ಒಂದನುವಂ – ಒಂದುಪಾಯವನ್ನು, ನೆನೆಯಬೇಕು–ಆಲೋಚಿಸಬೇಕು, ಎಂದು, (೩) ಆವನಿತೆ–ಆತರುಣಿಯು, ತಂದೆಯ, ಅನುಜ್ಞೆಯಲಿ–ಅಪ್ಪಣೆಯಪ್ರಕಾರ,ಸುದೇವನನು, ಕರೆದಳು–ಕರೆಯಿಸಿದಳು. ||೨೧||

ತಾತ್ಪರ್ಯ:—ಆಮಾತನ್ನು ಕೇಳಿ ದಮಯಂತಿಯು ಆಹಾ ! ಅವನೇ ನಳನೆಂಬುವದಕ್ಕೆ ಸಂದೇಹವೇ ಇಲ್ಲವೆಂದುತಲೆದೂಗುತ್ತಾ ಕಣ್ಣೀರು ಸುರಿಸಿ ತನ್ನ ಮನಸ್ಸಿನಲ್ಲಿ ಆ ನಳನನ್ನು ಕಂಡು ಹಿಡಿಯುವುದಕ್ಕೆ ಒಂದು ಯುಕ್ತಿಯನ್ನು ಹುಡುಕಬೇಕೆಂದು ಆಲೋಚಿಸಿ, ತಂದೆಯ ಅಪ್ಪಣೆಯನ್ನು ಕೇಳಿ ಸುದೇವನನ್ನು ಕರೆಯಿಸಿದಳು. ||೨೧||

ಟಿಪ್ಪಣಿ:—(೧) ತಲೆಯಂ ತೂಗಿದಳು– ತಲೆದೂಗಿದಳು (ಕ್ರಿ. ಸ) (೨) ಒಂದಾದ ಅನು-ಒಂದನು (ದ್ವಿಗು) (೩) ಅವಳುವನಿತೆ–ಆವನಿತೆ (ಗಮಕ) ||೨೧||

ಮೂ|| ಇಳೆಯುಮರಬಾರೆಂದುಪಿವರವ| ತಿಳುಹಿಪಯಣವಮಾಡಿಕಳುಹಲು| ಹೊಳಲಹೊರಹೊಂಟನುಸುದೇವನುಹಲವ್ರಯೋಜನವ||
ಕಳೆದುಬರುತಿರೆಮುಂದೆಕಂಡನು| ಲಲಿತರತ್ನಪ್ರಭೆಯಗೋಪುರ|

ಹೊಳೆವಯೋಧ್ಯಾಪುರವನೀಕ್ಷಿಸಿಹೊಕ್ಕನರಮನೆಯ ||೨೨||

ಟೀಕೆ:-ಇಳೆಯಮರ-ಬ್ರಾಹ್ಮಣನೆ,ಬಾರೆಂದು-ಬಾ ಎಂಬದಾಗಿ, ಕರೆದು, ವಿವರನ-ಸಂಗತಿಯನ್ನು, ತಿಳುಹಿ-ಹೇಳಿ, ಪಯಣವಮಾಡಿ- ಪ್ರಯಾಣಮಾಡಿಸಿ, ಕಳುಹಲು-ಕಳುಹಿಸಲು, ಸುದೇವನು, ಹೊಳಲ- ಪಟ್ಟಣವನ್ನು, ಹೊರಹೊಂಟನು-ಬಿಟ್ಟು ಹೊರಟನು, (೧) ಹಲವುಯೋಜನವ-ಕೆಲವುಗಾವುದಗಳನ್ನು, ಕಳೆದು-ದಾಟಿ, ಬರುತಿರೆ-ಬರುತ್ತಿರಲು, ಲಲಿತ-ಮನೋಹರವಾದ, ರತ್ನ-ನವರತ್ನಗಳ, ಪ್ರಭೆಯ-ಕಾಂತಿಯುಳ್ಳ ಗೋಪುರ-ಊರಬಾಗಿಲಿಂದ, ಹೊಳೆವ-ಹೊಳೆಯುತ್ತಿರುವ, (೨)ಅಯೋಧ್ಯಾಪುರವ-ಅಯೋಧ್ಯೆಯನ್ನು, ಈಕ್ಷಿಸಿ-ಕಂಡು, (೩) ಅರಮನೆಯ-ರಾಜಭವನವನ್ನು, ಹೊಕ್ಕಂ-ಪ್ರವೇಶಿಸಿದನು. ||೨೨||

ತಾತ್ಪರ್ಯ:—ಆ ಸುದೇವನಿಗೆ ಈ ಸಂಗತಿಯನ್ನು ತಿಳಿಸಿ ಪ್ರಯಾಣಮಾಡಿಸಲು, ಅವನು ಹೊರಟು ಹಲವು ಗಾವುದಗಳನ್ನು ನಡೆದು ಮುಂದೆ ರತ್ನಖಚಿತವಾದ ಗೋಪುರಗಳಿಂದ ಹೊಳೆಯುತ್ತಿರುವ ಅಯೋಧ್ಯಾಪುರವನ್ನು ಕಂಡು ಅರಮನೆಯ ಬಳಿಗೆ ಬಂದು ಒಳಕ್ಕೆ ಹೋದನು||

ಟಿಪ್ಪಣಿ:—(೧) ಹಲವಾದಯೋಜನ-ಹಲವುಯೋಜನ (ದ್ವಿಗು) (೨) ಅಯೋಧ್ಯೆಎಂಬಪುರ-ಅಯೋಧ್ಯಾಪುರ (ಸಂ. ಪೂರ್ವ. ಕ) (೩) ಅರಸಿನಮನೆ-ಅರಮನೆ (ಷ. ತ) ||೨೨||

ಮೂ|| ಇಟ್ಟಪಣೆಯೊಳಗೆಸೆವಮಟ್ಟೆಯ| ತೊಟ್ಟಹೊಸಯಜ್ಞೋಪವೀತದ| ಕಟ್ಟಿಯಿರಿಕಿದಗಂಟಕಕ್ಷದಬೆರಲದರ್ಭೆಗಳ|| ಉಟ್ಟವಸನದಬಳಲುಗಚ್ಚೆಯ| ಲಟ್ಟಹಾಸದನಗೆಯಜನಗಳ| ನಿಟ್ಟಸುತಪರಮೇಷ್ಠಿಯಂದದಿಬಂದನೋಲಗಕೆ ||೨೩||

ಟೀಕೆ:—ಇಟ್ಟ-ಇಟ್ಟುಕೊಂಡಿರುವ, ಪಣೆಯೊಳಗೆ, ಎಸೆವ-ಪ್ರಕಾಶಿಸುವ, ಮಟ್ಟೆಯ-ಮೃತ್ತಿಕೆಯುಳ್ಳ, ತೊಟ್ಟ-ಧರಿಸಿರುವ, ಹೊಸಯಜ್ಞೋಪವೀತದ-ಹೊಸಯಜ್ಞಸೂತ್ರವುಳ್ಳ, ಕಟ್ಟಿ, ಇರಿಕಿದ-ಸಿಕ್ಕಿಸಿರುವ, (೧) ಗಂಟ-ಗಂಟುಳ್ಳ, (೨) ಕಕ್ಷದ-ಕಂಕಳುಳ್ಳ, ಬೆರಲ-ಬೆರಲಿಗೆ ಸಿಕ್ಕಿಸಿದ,ದರ್ಭೆಗಳ-ದರ್ಭೆಗಳುಳ್ಳ,ಉಟ್ಟ, ವಸನದ-ವಸ್ತ್ರವುಳ್ಳ, (೩) ಬಳಲು ಗಚ್ಚೆಯ-ಜೋಲುತ್ತಿರುವ ಕಚ್ಚೆಯಿಂದ, ಅಟ್ಟಹಾಸದ-ನಗೆಯಿಂದಕೂಡಿದ, ನಗೆಯ-ಹಾಸ್ಯವುಳ್ಳ, ಪರಮೇಷ್ಠಿಯಂದದಿ-ಬ್ರಹ್ಮನಂತೆ, ಓಲಗಕೆ-ಸಭೆಗೆ, ಬಂದು-ಬಂದನು. ||೨೩||

ತಾತ್ಪರ್ಯ:—ಹಣೆಯಲ್ಲಿ ಮೃತ್ತಿಕೆಯ ತಿಲಕವನ್ನಿಟ್ಟು, ಹೊಸ ಯಜ್ಞೋಪವೀತವನ್ನು ಧರಿಸಿ, ಗಂಟನ್ನು ಕಂಕುಳಲ್ಲಿ ಇರಿಕಿಸಿಕೊಂಡು, ಬೆರಲುಗಳಲ್ಲಿ ದರ್ಭೆಗಳನ್ನು ಸಿಕ್ಕಿದ, ಬಳಲು ಗಚ್ಚೆಯನ್ನು ಹಾಕಿ ವಸ್ತ್ರವನ್ನುಟ್ಟು. ಎಲ್ಲ ಜನಗಳನ್ನೂ ನಗಿಸುತ್ತಿರುವ ಬ್ರಹ್ಮನೋ? ಎಂಬಹಾಗೆ ಈ ಬ್ರಾಹ್ಮಣನು ಸಭೆಗೆ ಬಂದನು. ॥೨೩॥

ಟಿಪ್ಪಣಿ:—(೧) ಗಂಟು-(ತ್ಭ) ಗ್ರಂಥಿ (೨) ಕಕ್ಷ (ದ್ಭ) ಕಕ್ಕ (೩) ಬಳಲುತ್ತಿರುವ ಕಚ್ಚೆ-ಬಳಲು ಗಚ್ಚೆ (ವಿ. ಪೂರ್ವ. ಕ) (ಕ. ವ್ಯಾಂ ಸಂ.) ಕಚ್ಚೆ (ತ್ಸ) ಕಚ್ಛ ॥೨೩॥

ಮೂ॥ ಆರುನೀವೆಲ್ಲಿಂದಬಂದಿರಿ। ದೂರದೇಶದಮಹಿಮರಿಳೆಯೊಳು। ಕಾರಣವದೇನಿರುವುದಲ್ಲಿವಿಶೇಷವೇನುಂಟು ॥ ಭೂರಮಣಕೇಳವನಿಯಲಿಸಂ। ಚರಿಸುತಂಬಂದೆವುವಿದರ್ಭಕೆ। ಭೂರಿನೃಪರೈತರುತಲಿರುವರುಭಟರಗಡಣದಲಿ ॥೨೪॥

ಟೀಕೆ:—ದೂರದೇಶದ - ದೂರದಲ್ಲಿರುವ, ಮಹಿಮರ್ -ಮಹಾತ್ಮ್ಯೆಯುಳ್ಳ, ನೀವ್-ನೀವು, (೧) ಆರು-ಯಾರು ? ಇಳೆಯೊಳು- ಭೂಭಾಗದಲ್ಲಿ, ಎಲ್ಲಿಂದ-ಯಾವಪ್ರದೇಶದಿಂದ, ಬಂದಿರಿ, ಕಾರಣವು-ನಿಮಿತ್ತವು, ಅದೇನಿರುವುದು-ಏನಾಗಿರಬಹುದು, ಅಲ್ಲಿ-ನಿಮ್ಮಸ್ಥಳದಲ್ಲಿ, ವಿಶೇಷವು-ಹೆಚ್ಚು ಸಮಾಚಾರವು, ಏನುಂಟು-ಏನಿದೆ,(ಎಂದುಕೇಳಲು) (೨) ಭೂರಮಣ-ದೊರೆಯೇ, ಕೇಳ್-ಕೇಳು, ಅವನಿಯಲಿ - ಭೂಮಿಯಲ್ಲಿ, ಸಂಚರಿಸುತಂ-ಸಂಚಾರಮಾಡುತ್ತಾ, ವಿದರ್ಭಕೆ-ವಿದರ್ಭಪುರಕ್ಕೆ, ಬಂದೆವು, ಭೂರಿನೃಪರ್-ಬಹುಮಂದಿರಾಜರು, ಭಟರ-ಸೇವಕರ, (೩) ಗಡಣದಲಿ-ಜೊತೆಯಲ್ಲಿ, ಐತರುತಲಿ-ಬರುತ್ತಾ, ಇರುವರು. ॥೨೪॥

ತಾತ್ಪರ್ಯ:—ಎಲೈ ಬ್ರಾಹ್ಮಣನೇ ನೀನು ದೂರದೇಶದವನೆಂದು ತೋರುವುದು ? ನೀನು ಯಾರು ? ಎಲ್ಲಿಂದ ಬಂದೆ ? ಏನುಕಾರಣ ? ನಿಮ್ಮ ದೇಶದಲ್ಲಿ ವಿಶೇಷವೇನು ? ಎಂದು ದೊರೆಯು ಕೇಳಲು, ಎಲೈ ರಾಜೇಂದ್ರನೇ ! ನಾವು ಯಾವಾಗಲೂ ಭೂಸಂಚಾರ ಮಾಡುತ್ತಿರುವ ಯಾಚಕರು ! ನಾವು ಆ ಗಂತುಕರಾಗಿ ವಿದರ್ಭನಗರಕ್ಕೆ ಹೋಗಿದ್ದೆವು, ಅಲ್ಲಿಗೆ ಬಹುಮಂದಿ ರಾಜರು ತಮ್ಮ ಭಟರೊಡನೆ ಬಂದು ಬಂದು ಸೇರುತ್ತಿರುವರು. ॥೨೪॥

ಟಿಪ್ಪಣಿ:—(೧) ಆರೆಂಬ ಸಂಖ್ಯೆ, ಸಾಮರ್ಥ್ಯವನ್ನು ತೋರಿಸುವ

ಕೂಗು, ಯಾರು (ನಾನಾ) (೨) ಭೂ-ಭೂಮಿಗೆ, ರಮಣ-ಪತಿ (ಷ. ತ) (೩) (ತ್ಸ) ಘಟನ ॥೨೪॥

ಮೂ॥ ದೇಶದೇಶದಯಾಚಕರುಧರಣೀಶರುನ್ನತತುರಗಗಜರಥ। ಭೂ
ಸುರರುಮಂತ್ರಿಗಳುದೈವಜ್ಞರುಸುಗಾಯಕರು॥ ಭಾಸುರದತೇಜ
ದಲಿಜನಸಂ। ತೋಷದಲಿನಡೆತರುತಲಿದೆಹರಿ। ವಾಸುದೇವನೆಬಲ್ಲ
ದಮಯಂತಿಯಸ್ವಯಂವರವ ॥೨೫॥

ಟೀಕೆ:—(೧) ದೇಶದೇಶದ-ಎಲ್ಲದೇಶಗಳ, ಯಾಚಕರು, ಧರಣೀಶರ್-ದೊರೆಗಳು, ಉನ್ನತ-ಅನೇಕ, ತುರಗ-ಕುದುರೆಗಳು, ಗಜ-ಆನೆಗಳು, ರಥ-ರಥಗಳು, ಭೂಸುರರು-ಬ್ರಾಹ್ಮಣರು, ಮಂತ್ರಿಗಳು-ಸಚಿವರು (೨) ದೈವಜ್ಞರು-ಜ್ಯೋತಿಷ್ಯರು, ಸುಗಾಯಕರು-ಸಂಗೀತಶಾಸ್ತ್ರಜ್ಞರು, ಭಾಸುರದ-ಪ್ರಕಾಶಮಾನವಾದ, ತೇಜದಲಿ-ಕಾಂತಿಯಿಂದ, ಜನ-ಜನವು, ಸಂತೋಷದಲಿ-ಹರ್ಷದಿಂದ, ನಡೆತರುತಲಿದೆ - ಬರುತ್ತಾಇದೆ, ಹರಿ - ಪಾಪಹರನಾದ, ವಾಸುದೇವನೆ - ದೇವರೇ, ದಮಯಂತಿಯ (೩) ಸ್ವಯಂವರವ-ವಿವಾಹವನ್ನು, ಬಲ್ಲ - ತಿಳಿದಿರುವನು. ॥೨೫॥

ತಾತ್ಪರ್ಯ:—ಸಕಲದೇಶದ ಯಾಚಕರೂ, ಸಮಸ್ತದೇಶದ ದೊರೆಗಳೂ ಅವರ ಚತುರಂಗಸೈನ್ಯವೂ, ಮಂತ್ರಿಗಳೂ, ಬ್ರಾಹ್ಮಣರೂ, ಜೋಯಿಸರೂ, ಸಂಗೀತಗಾರರೂ, ಬಹುಕುತೂಹಲದಿಂದ, ಸಂತೋಷ ಚಿತ್ತರಾಗಿ ಬರುತ್ತಿದ್ದಾರೆ, ಆ ದಮಯಂತಿಯ ಸ್ವಯಂವರದ ಅತಿಶಯವನ್ನೂ ಶ್ರೀಹರಿಯೇ ಬಲ್ಲನು. ನಾವು ವರ್ಣಿಸಲಾರೆವು. ॥೨೫॥

ಟಿಪ್ಪಣಿ:—(೧) ವೀಪ್ಸಾರ್ಥದಲ್ಲಿ ದ್ವಿರುಕ್ತಿ, (೨) ದೈವ - ಅದೃಷ್ಟವನ್ನು, ಜ್ಞ-ತಿಳಿಯತಕ್ಕವರು (ಅವ) (೩) ಸ್ವಯಂ-ತಾನಾಗಿ, ವರ-ವರಿಸುವುದು (ಅವ) ॥೨೫॥

ಮೂ॥ ಶಯನದಲಿಮಲಗಿರ್ದಳೆನುನಿ। ರ್ದಯದಿನಳನೃಪನಗಲಿಪೋ
ಗಲು। ನನುವಿಹೀನಂಗಾಗಿರಚಿಸಿದರೀಸ್ವಯಂವರವ॥ ಪಯಣ
ನಿಮಗುಂಟೀಗಲೆನೆನೃಪ। ಬಯಸಿಹೆಣ್ಣಿನಮೋಹದಲಿವಾ। ಜಿ
ಯವರರಥಕೆಹೂಡಹೇಳಿದಕರೆಸಿಬಾಹುಕನ ॥೨೬॥

ಟೀಕೆ:—ನಳನೃಪಂ-ನಳರಾಜನು, ಶಯನದಲಿ-ಹಾಸಿಗೆಯಮೇಲೆ, ಮಲಗಿರ್ದಳನು-ನಿದ್ರಿಸುತ್ತಿದ್ದವಳನ್ನು, ನಿರ್ದಯದಿ-ಕೃಪಾರಹಿ

ತನಾಗಿ, ಅಗಲಿ-ವಿಯೋಗವನ್ನು ಹೊಂದಿ, ಪೋಗಲು-ಹೊರಟುಹೋಗಲು, (೧) ನಯವಿಹೀನಂಗಾಗಿ-ಆ ನೀತಿರಹಿತನಾದ ನಳನಿಗೋಸುಗ, ಈ ಸ್ವಯಂವರವ, ರಚಿಸಿದರು-ನಿರ್ಮಿಸಿದರು, ನಿಮಗೆ, ಪಯಣ- ಪ್ರಯಾಣವು, ಈಗಲು, ಉಂಟು, ಎನೆ-ಎಂದುಹೇಳಲು, ನೃಪ - ಋತುಪರ್ಣನು, ಹೆಣ್ಣಿನ-ಸ್ತ್ರೀಯ, ಮೋಹದಲಿ - ಭ್ರಾಂತಿಯಿಂದ, ಬಯಸಿ-ಅಪೇಕ್ಷಿಸಿ, ಬಾಹುಕನ, ಕರಸಿ-ಬರಹೇಳಿ, ವಾಜಿಯ-ಕುದುರೆಯನ್ನು, (೨) ವರರಥಕೆ-ಶ್ರೇಷ್ಠವಾದರಥಕ್ಕೆ, ಹೂಡ ಹೇಳಿದ- ಕಟ್ಟೆಂದು ಹೇಳಿದನು. ||೨೬||

ತಾತ್ಪರ್ಯ:—ದಯಾಶೂನ್ಯನಾದ ನಳನು ತನ್ನ ಪತ್ನಿಯು ನಿದ್ರಿಸುತ್ತಿರುವಾಗ ಕಾಡಿನಲ್ಲಿ ವಂಚಿಸಿಬಿಟ್ಟು ಅನ್ಯಾಯವನ್ನುಮಾಡಿ ಹೋದನೆಂಬದಾಗಿ ವ್ಯಥೆಪಟ್ಟು ಅವನ ಉದ್ದೇಶವಾಗಿಯೇ ಈ ಪುನಃಸ್ವಯಂವರವನ್ನು ಗೊತ್ತುಮಾಡಿದ್ದಾರೆ, ಅದರಿಂದ ಈಗ ನೀವ್ರೂ ಈ ಸ್ವಯಂವರಕ್ಕಾಗಿ ಹೊರಡಬಹುದು। ಎಂದು ಹೇಳಲು ಋತುಪರ್ಣನು ಈ ವಾರ್ತೆಯನ್ನು ಕೇಳಿದ ಕೂಡಲೆ ಸ್ತ್ರೀ ವ್ಯಾಮೋಹಕ್ಕೊಳಗಾಗಿ ಹೊರಡಬೇಕೆಂದು ಬಾಹುಕನನ್ನು ಕರೆಯಿಸಿ ರಥಕ್ಕೆ ಕುದುರೆಯನ್ನು ಹೂಡೆಂದಾಜ್ಞೆಮಾಡಿದನು. ||೨೬||

ಟಿಪ್ಪಣಿ:—(೧) ನಯದಿಂದ ವಿಹೀನ - ನಯವಿಹೀನ (ತೃ. ತ) (೨) ವರ ವಾದರಥ-ವರರಥ (ವಿ. ಪೂರ್ವ. ಕ) ||೨೬||

ಮೂ|| ಹೈಹಸಾದವೆನುತ್ತವಂದಿಸಿ । ಬಾಹುಕನುಮುಂದಿರಕೆಬಂದು
ವಿ । ವಾಹಮುಂಟೇಮರಳಿದಮಯಂತಿಗೆಮಹಾದೇವ ॥ ಈಹದನ
ವಾರಿಂದಲಾದುದೊ।ದ್ರೋಹಿದಮಯಂತಿಯಳೊಯಿದುಸಂ। ದೇ
ಹವಾಗಿದೆಯೆನುತಚಿಂತಿಸಿಬಂದನರಮನೆಗೆ ॥೨೭||

ಟೀಕೆ:—ಬಾಹುಕನು, (೧) ಹೈಹಸಾದಂ-ಆಹ ಅಪ್ಪಣೆ, ಎನುತ್ತ-ಎಂಬದಾಗಿ, ವಂದಿಸಿ-ನಮಸ್ಕರಿಸಿ, ಮುಂದಿರಕೆ-ಮನೆಗೆ, ಬಂದು, ಮಹಾದೇವ-ಪರಮೇಶ್ವರನೆ! ದಮಯಂತಿಗೆ, ಮರಳಿ - ಪುನಃ, ವಿವಾಹಂ-ಮದುವೆಯು, ಉಂಟೇ, (೨) ಈ ಹದನಂ-ಈ ಕಾರ್ಯವು, ಆರಿಂದಂ-ಯಾರಿಂದ, ಆದುದೊ-ಆಯ್ತೋ, ದ್ರೋಹಿ-ದ್ರೋಹಮಾಡಿದವಳು, ದಮಯಂತಿಯಳೊ, ಇದು-ಈ ವಿಷಯವು, ಸಂದೇಹವಾಗಿದೆ- ಅನುಮಾನವಾಗಿದೆ, ಎನುತ-ಎಂಬದಾಗಿ, ಚಿಂತಿಸಿ-ಆಲೋಚಿಸಿ, ಅರಮ

ನೆಗೆ, ಬಂದಂ-ಬಂದನು. ||೨೭||

ತಾತ್ಪರ್ಯ:— ಕೂಡಲೆ ಬಾಹುಕನು ಅಪ್ಪಣೆಯೊಂದು ಕೈಮುಗಿದು ತನ್ನ ಮನೆಗೆಬಂದು ಮನಸ್ಸಿನಲ್ಲಿ ‹ಆಹಾ ಇದೇನು ಆಶ್ಚರ್ಯವು? ದಮಯಂತಿಗೆ ಪುನಃ ಮದುವೆಯುಂಟೇ ! ಇದನ್ನು ಯಾರುಮಾಡಿರಬಹುದು! ಅಥವಾ ದಮಯಂತಿಯೇ ನನಗೆ ದ್ರೋಹವನ್ನೆಣಿಸಿದಳೋ ಸಂಶಯವಾಗಿದೆ, ಎಂದು ಚಿಂತಿಸುತ್ತಾ ಅರಮನೆಗೆ ಬಂದನು ||೨೭||

ಟಿಪ್ಪಣಿ:—(೧) ಹಸಾದಕ್ಕೆ (ತ್ಸ), ಪ್ರಸಾದ, (೨) ಇದುಹದನ-ಈಹದನ (ಗಮಕ) ||೨೭||

ಮೂ|| ಲಾಯದೊಳಗುತ್ತಮದತೇಜಿಯ | ನಾಯ್ದು ಹೂಡಿದರಥಕೆ ಸೇರಿಸಿ | ವಾಯುವೇಗದತೇರನಿಲಿಸಿದತಂದುನೃಪನೆಡೆಗೆ ||ರಾಯ ನೇರಲುಕರಿತುರಗರಥ |ಪಾಯದಳಸಂದಣಿಸಿದುದುನೆಲ| ಬಾಯ ಬಿಡೆಹೊರವಂಟನೃಪಘನವಾದ್ಯರಭಸದಲಿ ||೨೮||

ಟೀಕೆ:— ಲಾಯದೊಳಗೆ- ಕುದುರೆಯ ಕೊಟ್ಟಿಗೆಯೊಳಗೆಲ್ಲ, ಉತ್ತಮದ-ಶ್ರೇಷ್ಠವಾದ, ತೇಜಿಯಂ-ಕುದುರೆಯನ್ನು, ಆಯ್ದು-ಆರಿಸಿತಂದು, ರಥಕೆ, ಸೇರಿಸಿ-ಕೂಡಿಸಿ, ಹೂಡಿದ-ಕಟ್ಟಿದನು, ನೃಪನೆಡೆಗೆ-ದೊರೆಯಬಳಿಗೆ, (೧) ವಾಯುವೇಗದ-ಗಾಳಿಯಂತೆವೇಗವುಳ್ಳ, ತೇರ-ರಥವನ್ನು, ತಂದು, ನಿಲ್ಲಸಿದನು- ನಿಲ್ಲಿಸಿದನು, ರಾಯಂ-ದೊರೆಯು, ಏರಲು-ಹತ್ತಲು, ಕರಿ-ಆನೆ, ತುರಗ-ಕುದುರೆ, ರಥ-ತೇರು, (೨) ಪಾಯದಳ - ಕಾಲಾಳು, ಸಂದಣಿಸಿದುದು-ಗುಂಪುಸೇರಿತು, ಘನವಾದ್ಯರಭಸದಲಿ-ಶ್ರೇಷ್ಠವಾದ ವಾದ್ಯಗಳ ಶಬ್ದದಿಂದ, ನೆಲ-ಭೂಮಿಯು, ಬಾಯಬಿಡೆ - ಬಿರಿಯಲು, ಹೊರವಂಟ - ಪ್ರಯಾಣಮಾಡಿದನು, ||೨೮||

ತಾತ್ಪರ್ಯ:— ರಾಜಾಜ್ಞೆಯ ಪ್ರಕಾರವಾಗಿ ಲಾಯದೊಳಗಿರುವುದರಲ್ಲಿ ಅತ್ಯುತ್ತಮವಾದ ಕುದುರೆಯನ್ನು ತೆಗೆದುಕೊಂಡು ಬಂದು ಶ್ರೇಷ್ಠವಾದ ರಥಕ್ಕೆ ಹೂಡಿ ತಂದು ನಿಲ್ಲಿಸಲು ದೊರೆಯು ಅದನ್ನೇರಿದ ಕೂಡಲೆ ಚತುರಂಗ ಸೈನ್ಯವು ಸಿದ್ಧವಾಯ್ತು. ಸಕಲವಾದ್ಯಗಳೂ ಭೋರ್ಗರೆಯಲು ಸ್ವಯಂವರಕ್ಕಾಗಿ ವಿಜೃಂಭಣೆಯಿಂದ ವಿದರ್ಭಪುರಕ್ಕೆ ಪ್ರಯಾಣಮಾಡಿದನು || ೨೮||

ಟಿಪ್ಪಣಿ:—ವಾಯುವಿನಂತೆ ವೇಗವುಳ್ಳದ್ದು, ವಾಯುವೇಗ (ಬ

ವ್ರೀ. ಸ) (೨) ವಾಯುಕ್ಕೆ (ತ್ಸ) ಪಾದ, ಪಾಯದದಳ-ಪಾಯುದಳ (ಷ. ತ) ||೨೮||

ಮೂ॥ ಜನಪನೆಂದನುಬಾಹುಕಗೆಮಾ । ನಿನಿಯನೀಕ್ಷಿಸಬೇಕುನಿಲ್ಲ
ದು । ಮನವಿದೊಂದೇದಿನಕೆನಡೆಸುವಿದರ್ಭಪುರವರಕೆ ॥ ಎನಲು
ನಕ್ಕನುಮನದೊಳಗೆತ । ನ್ನಿನಿಯಳಿಗೆವಿಧಿಬರೆದನೇಶಾ । ಸನನ
ಮೀರುವರಾರೆನುತಮರುಗಿದನುನಳನೃಪತಿ ॥೨೯॥

ಟೀಕೆ:— ಜನಪಂ-ದೊರೆಯು, ಬಾಹುಕಗೆ-ಬಾಹುಕನನ್ನು ಕುರಿತು, ಎಂದನು-ಹೇಳಿದನು, ಮಾನಿನಿಯಂ-ದಮಯಂತಿಯನ್ನು, ಈಕ್ಷಿಸಬೇಕು, ಮನವು- ಮನಸ್ಸು, ನಿಲ್ಲದು-ತಡೆಯಲಾರದು, ಇದೊಂದೇದಿನಕೆ-ಈದಿನದಲ್ಲಿಯೇ ? (೨) ವಿದರ್ಭಪುರವರಕೆ-ವಿದರ್ಭಪಟ್ಟಣಕ್ಕೆ, ನಡೆಸು-ರಥವನ್ನು ನಡೆಯಿಸು, ಎನಲು, ನಳನೃಪತಿ-ನಳರಾಜನು, ನಕ್ಕನು, ಮನದೊಳಗೆ-ಮನಸ್ಸಿನಲ್ಲಿ, ತನ್ನ, ಇನಿಯಳಿಗೆ-ಪತ್ನಿಗೆ, ವಿಧಿ-ಬ್ರಹ್ಮನು, ಬರೆದನೇ- (ಹಣೆಯಲ್ಲಿ ಈ ರೀತಿಯಾಗಿ) ಬರೆದನೇ, ಶಾಸನನ-ಆಜ್ಞೆಯನ್ನು, ಮೀರುವರಾರ್-ಮೀರಿನಡೆಯುವರು ಯಾರು ? ಎನುತ (೨) ನಳನೃಪತಿ-ನಳರಾಜನು, ಮರುಗಿದನು-ವ್ಯಥೆಪಟ್ಟನು ॥೨೯॥

ತಾತ್ಪರ್ಯ:— ಎಲೈ ಬಾಹುಕನೇ ಆ ನಾರಿಮಣಿಯನ್ನೀಕ್ಷಿಸಬೇಕೆಂಬ ಕುತೂಹಲವು ಬಹಳವಾಗಿದೆ, ಮನಸ್ಸು ವಿಳಂಬವನ್ನು ಸ್ವೀಕರಿಸಲಾರದು, ಜೇಗನೆ ಕುದುರೆಗಳನ್ನು ನಡೆಯಿಸಿ ಈದಿನವೇ ವಿದರ್ಭಪುರವನ್ನು ಸೇರಿಸುವಂತೆ ಮಾಡು, ಎಂದು ಹೇಳಲು, ನಳನು ನಸ್ಸುನಕ್ಕು ತನ್ನ ಮನಸ್ಸಿನಲ್ಲಿ "ಆಹಾ ! ನನ್ನ ಪ್ರಿಯಳ ಹಣೆಯಲ್ಲಿ ಇಂತಹ ದುರ್ದಶೆಯನ್ನು ಬ್ರಹ್ಮನು ಬರೆದನಲ್ಲಾ ! ದೈವಾಜ್ಞೆಯನ್ನು ಯಾರುತಾನೇ ಮೀರುವುದಕ್ಕಾದೀತು " ಎಂದು ದುಃಖಪಟ್ಟನು ॥೨೯॥

ಟಿಪ್ಪಣಿ:— (೧) ಪುರಗಳವರ-ಪುರವರ (ಷ. ತ) ವಿದರ್ಭವೆಂಬಪುರವರ-ವಿದರ್ಭಪುರವರ (ಸಂ. ಪೂರ್ವ. ಕ) (೨) ನಳನೆಂಬನೃಪತಿ ನಳನೃಪತಿ (ಸಂ. ಪೂರ್ವ. ಕ) ॥೨೯॥

ಮೂ॥ ಕರದವಾಘೆಯಸಡಿಲಬಿಡೆಮುಂ । ಬರಿದುಚುಂಬಿದವಡಿಗಡಿಗೆ
ರಥ । ತುರಗಹಾಯ್ದುದುತೇರುಮುಂದಕೆಪವನವೇಗದಲಿ ॥ ಭರ
ದೊಳೈತರೆನೃಪನಸಚ್ಚಡ । ಧರೆಗೆಬೀಳಲುಸಾರಥಿಗೆಯೆ । ಚ್ಚ

ರಿಸಿದನುಋತುಪರ್ಣನಿದಕಿನ್ನೇನುಹದನೆನುತ ॥೩೦॥

ಟೀಕೆ:— ಕರದ-ಕೈಯಲ್ಲಿಹಿಡಿದ, ವಾಘೆಯು - ಲಗಾಮನ್ನು, ಸಡಿಲಬಿಡೆ-ಸಡಿಲವಾಗಿ ಹಿಡಿಯಲು, ಅಡಿಗಡಿಗೆ-ಮುಂದುಮುಂದಕ್ಕೆ, (೧ ರಥತುರಗ-ರಥದಕುದುರೆಗಳು, ಚುಂಬಿದವು-ಓಡಿದವು, ತೇರು-ರಥವು (೨) ಪವನವೇಗದಲಿ- ವಾಯುವೇಗವಿಂದ, ಮುಂದಕೆ - ಮುಂದಕ್ಕೆ, ಹಾಯ್ದುವು- ನಡೆದವು, ಭರದೊಳು-ಬೇಗನೆ, ಐತರೆ-ಬರುತ್ತಿರಲು, ನೃಪನ-ಋತುಪರ್ಣನ, ಹಚ್ಚಡ-ಹೊದ್ದಿದ್ದ ಬಟ್ಟೆಯು, ಧರೆಗೆ-ಭೂಮಿಗೆ, ಬೀಳಲು, ಋತುಪರ್ಣನು, ಇದಕೆ-ಇದಕ್ಕೆ, ಇನ್ನೇನು ಹದನೆನುತ-ಇನ್ನೇನು ಉಪಾಯವೆಂಬದಾಗಿ, ಸಾರಥಿಗೆ, ಎಚ್ಚರಿಸಿದನು-ತಿಳಿಸಿದನು ॥೩೦॥

ತಾತ್ಪರ್ಯ:—ದೊರೆಯು ಆಜ್ಞಾನುಸಾರವಾಗಿ ಕೈಯಲ್ಲಿದ್ದ ಕಡಿವಾಣವನ್ನು ಸಡಿಲವಾಗಿ ಹಿಡಿಯಲು ಕುದುರೆಗಳು ವಾಯುವೇಗವಿಂದ ಮುಂದಕ್ಕೆ ಓಡಿದವು, ದೊರೆಯ ಹಚ್ಚಡವು ಜಾರಿ ನೆಲಕ್ಕೆ ಬಿತ್ತು, ಅದನ್ನು ತೆಗೆದುಕೊಳ್ಳುವದಕ್ಕೆ ಸಾಧ್ಯವಿಲ್ಲದೆ ಕೂಡಲೆ ಈ ವಿಷಯವನ್ನು ಸಾರಥಿಗೆ ಹೇಳಿ ಎಚ್ಚರಿಸಿದನು, ॥೩೦॥

ಟಿಪ್ಪಣಿ:— (೧) ರಥದತುರಗ-ರಥತುರಗ (ಷ. ತ) (೨) ಪವನನವೇಗ ಪವನವೇಗ (ಷ. ತ) ವೇಗಕ್ಕೆ (ದ್ಭ) ಬೇಗ, ॥೩೦॥

ವಾ॥ ಜೀಯಚಿತ್ತೈಸುರವಣಿಸೆನಿ । ದಾ¬ಯದಲಿರಥಹಿಂದೆವುಳಿದು
　ದು । ವಾಯುಗತಿಯಲಿದಾಟಿಬಂದುದುಹಲವುಯೋಜನವ॥ಹೋ
　ಯಿತಾವಾತೇಕೆನಡೆಯೆನೆ । ರಾಯಮೆಚ್ಚಿದಸಾರಥಿಯೆಬಿರು।ದಾ
　ಯಕನುನೀನೆಂದುಕೊಂಡಾಡಿದನುಬಾಹುಕನ ॥೩೧॥

ಟೀಕೆ:— ಜೀಯ-ಸ್ವಾಮಿ, ಚಿತ್ತೈಸು-ಲಾಲಿಸು, ರಥ-ತೇರು ನಿರ್ದಾಯದಲಿ-ಯತ್ನವಿಲ್ಲದೆ, ಉರವಣಿಸೆ-ಬಹಳಬೇಗನೆ ಓಡಲು, ಹಿಂದೆ, ಉಳಿದುದು- (ನಿನ್ನಹಚ್ಚಡವು) ನಿಂತುಹೋಯಿತು, (೧) ವಾಯುಗತಿಯಲಿ-ವಾಯುವೇಗದಿಂದ (೨) ಹಲವು ಯೋಜನವ-ಅನೇಕಯೋಜನಗಳನ್ನು, ದಾಟಿ-ಮೀರಿ, ಬಂದುದು-ಬಂತು, ಹೋಯಿತು-(ನಿನ್ನ ವಸ್ತ್ರವು) ಕಳೆದುಹೋಯಿತು, ಆವಾತು ಏಕೆ-ಇನ್ನು ಏತಕ್ಕೆ, ನಡೆ-ಮುಂದಕ್ಕೆ ಹೊರಡು, ಎನೆ-ಎಂದುಹೇಳಲು, ರಾಯ-ದೊರೆಯು, ಮೆಚ್ಚಿದ-ಒಪ್ಪಿಕೊಂಡನು, ಸಾರಥಿಯೆ-ನೀನು, ಬಿರುದಾಯಕನು-ಸಾರ

ಧ್ಯದಲ್ಲಿ ಬಿರುದನ್ನು ಪಡೆವುದಕ್ಕೆ ಅರ್ಹನು, ಎಂದು, ಬಾಹುಕನ-ಬಾಹುಕನನ್ನು, ಕೊಂಡಾಡಿದನು-ಹೊಗಳಿದನು ||೩೧||

ತಾತ್ಪರ್ಯ:— ಎಲೈ ರಾಜನೇ ಲಾಲಿಸು, ನೀನು ವೇಗನೆ ರಥವನ್ನು ನಡೆಯಿಸಬೇಕೆಂದು ಹೇಳಿದುದರಿಂದ ಯತ್ನವಿಲ್ಲದೆ ರಥವನ್ನು ವಾಯುವೇಗಕ್ಕೆ ಸಮಾನವಾಗಿ ಓಡಿಸಬೇಕಾಗಿಬಂತು, ನಿನ್ನ ಹಚ್ಚಡವು ಹಿಂದೆಬಿದ್ದುಹೋಯಿತು, ಅಲ್ಲಿಂದೀಚೆಗೆ ಬಹುದೂರಬಂದಿದೆ. ಅನೇಕ ಗಾವುದದದಾರಿ ಕಳೆದು ಹೋಯಿತು, ಅದರಸುದ್ದಿ ಇನ್ನೇತಕ್ಕೆ ? ಬಿಡುಎಂದುಹೇಳಲು ರಾಜನು ಬಹಳವಾಗಿ ಮೆಚ್ಚಿಕೊಂಡು ಅಯ್ಯಾ ಬಾಹುಕನೇ ನೀನು ರಥವನ್ನು ನಡೆಯಿಸುವುದರಲ್ಲಿ ಪ್ರಸಿದ್ಧವಾದ ಬಿರುದಿಗೆ ಅರ್ಹನು, ಎಂದು ಸ್ತೋತ್ರಮಾಡಿದನು ||೩೧||

ಟಿಪ್ಪಣಿ:— (೧) ವಾಯುವಿನಗತಿ-ವಾಯುಗತಿ (ಷ. ತ) (೨) ಹಲವಾದ ಯೋಜನಗಳು-ಹಲವುಯೋಜನ (ವಿ. ಪೂರ್ವ. ಕ.) ||೩೧||

ಮೂ|| ಮುಂದೆಕಂಡನುಬರುತಲಡವಿಯೊ | ಳೊಂದುತಾರೆಯಮರ
ನನವರೊಳು| ಸಂದಫಲಪರ್ಣಂಗಳೆಣಿಸದೆಸೂತಪೇಳೆನಲು || ಇಂ
ದೆನಗೆಮತಿದೋರದವನಿಪ| ಕುಂದದವರನುಪೇಳುನೀನೆನಗೆಂದೊ
ಡಾಸಾರಥಿಗೆಲೆಕ್ಕವನರುಹಿದನುನೃಪತಿ ||೩೨||

ಟೀಕೆ:— ಮುಂದೆ-ಮುಂಭಾಗದಲ್ಲಿ, ಬರುತಲಿ-ಬರುತ್ತಾ, ಅಡವಿಯೊಳ್-ಕಾಡಿನಲ್ಲಿ, (೧) ಒಂದುತಾರೆಯ ಮರನಂ-ಒಂದುತಾರೆಗಿಡವನ್ನು, ಕಂಡನು, ಸೂತ-ಸಾರಥಿಯೇ, ಅದರೊಳು-ಅದರಲ್ಲಿ, ಸಂದ-ಇರುವ, (೨) ಫಲಪರ್ಣಂಗಳ-ಎಲೆ ಮತ್ತು ಹಣ್ಣುಗಳನ್ನು, ಎಣಿಸದೆ-ಲೆಕ್ಕಮಾಡದೆ, ಪೇಳು-ಹೇಳು, ಎನಲು, ಅವನಿಪ-ದೊರೆಯೇ, ಇಂದು-ಈಗ, ಎನಗೆ-ನನಗೆ, (೩) ಮತಿದೋರದು-ಬುದ್ಧಿಗೆತೋರುವುದಿಲ್ಲ, ಕುಂದದೆ-ಬಿಡದೆ, ಅವರನು-ಅವುಗಳ ಲೆಕ್ಕವನ್ನು, ನೀನು ಎನ ಎನಗೆ-ನನಗೆ, ಪೇಳು-ಹೇಳು, ಎಂದೊಡೆ-ಎಂಬದಾಗಿ ಕೇಳಲು, ನೃಪತಿ-ದೊರೆಯು, ಆ ಸಾರಥಿಗೆ - ಬಾಹುಕನಿಗೆ, ಲೆಕ್ಕವಂ-ಎಣಿಕೆಯುನ್ನು, ಅರುಹಿದನು-ತಿಳಿಸಿದನು ||೩೨||

ತಾತ್ಪರ್ಯ:— ಈ ರೀತಿಯಾಗಿ ವೇಗನೆ ರಥದಲ್ಲಿ ಕುಳಿತು ಕಾಡಿನಲ್ಲಿ ಪ್ರಯಾಣಮಾಡುತ್ತಿರಲು ಅಲ್ಲಿ ದೊರೆಯು ಒಂದುತಾರೆಯಗಿಡವನ್ನು ನೋಡಿ-ಎಲೈ ಸಾರಥಿಯೇ ಈ ಗಿಡದಲ್ಲಿರುವ ಹಣ್ಣುಗಳನ್ನೂ, ಎ

ಲೆಗಳನ್ನೂ ಎಣಿಸದೆ, ಇಷ್ಟು ಇವೆ ಎಂದು ಲೆಕ್ಕಮಾಡಿಹೇಳು-ಎನ್ನಲು ಅ ಬಾಹುಕನು ಅಯೋಧ್ಯಾ ರಾಜೇಂದ್ರನೆ ನೀನು ಕೇಳತಕ್ಕ ವಿಷಯವನ್ನು ಬುದ್ಧಿಗೆ ಸ್ಫುರಿಸುವದಿಲ್ಲ ನೀನೇದರು ವಿದ್ಯೆ ತಿಳಿಸಬೇಕೆಂದುಕೇಳ ಲು ಮೊರೆಯ ಲೆಕ್ಕವನ್ನು ಸರಿಯಾಗಿ ಹೇಳಿದನು ॥೨೦॥

ಟಿಪ್ಪಣಿ:— (೧) ತಾರೆಯಮರ-ತಾರೆಯಮರ (ಅಲುಕ್ಸಮಾಸ) ಒಂದಾದ ತಾರೆಯಮರ-ಒಂದುತಾರೆಯಮರ (ದ್ವಿಗು) (೨) ಫಲವರ್ಣ ವರ್ಣ-ಫಲವರ್ಣಂಗಳು (ದ್ವಂದ್ವ) (೩) ಮತಿಯೊಳ್‌ತೋರದು-ಮತಿ ದೋರದು (ಸ. ತ) ॥೨೦॥

ಮೂ॥ ಇಳಿದುರಥವನುಬಂದುವೃಕ್ಷದ। ಬಳಿಯನಿಂದಾಶಾಖೆಗಳಲಿಹ।
ಫಲವದಂವರ್ಣ। ಗಳೆಣಿಸಿದಕೋಟಿಸಂಖ್ಯೆಯಲಿ। ಉಳಿದಲೆಕ್ಕವ
ಕಂಡುತಾಮನ। ನಲಿನುನಳನೃಪಪುಷ್ಕರನತಾಂ। ಗೆಲುವಹದನೀ
ಗಾಯ್ತೆನುತಬರೆ ಕಲಿಪುರುಷನಿದಿರಾದ ॥೩೩॥

ಟೀಕೆ:— ರಥವನು-ತೇರನ್ನು, ಇಳಿದು, ಬಂದು, ವೃಕ್ಷದ-ಆಗಿ ಡದ, ಬಳಿಯ-ಸಮೀಪದಲ್ಲಿ, ನಿಂದು-ನಿಂತುಕೊಂಡು, ಆಶಾಖೆಗಳಲಿ-ಆಮರಗಳಲ್ಲಿ, ಇಹ-ಇರುವ, ಫಲವ-ಹಣ್ಣನ್ನೂ, ಅದರ, ವರ್ಣಂಗಳ ಎಲೆಗಳನ್ನು, (೧) ಕೋಟಿಸಂಖ್ಯೆಯಲಿ-ಕೋಟಿಸಂಖ್ಯೆಯಿಂದ, ಎಣಿ ಸಿದ, ನಳನೃಪ-ನಳರಾಜನು, ಉಳಿದ-ಋತುಪರ್ಣನುಹೇಳಿದ, ಲೆಕ್ಕವ-ಎಣಿಕೆಯನ್ನು, ಕಂಡು - ನೋಡಿ, (೨) ಮನನಲಿದು - ಸಂ ತೋಷಪಟ್ಟು, ತಾಂ-ತಾನು, ಪುಷ್ಕರನ-ತನ್ನ ಶತ್ರುವಾದ ಪುಷ್ಕರ ನನ್ನು, ಗೆಲಿವ-ಜಯಿಸುವ, ಹದನ-ರೀತಿಯು, ಈಗಾಯ್ತು-ಈಗಸಿ ಕ್ಕಿತು, ಎನುತ, ಬರೆ-ಬರಲು, ಕಲಿಪುರುಷಂ-ಕಲಿಯು, ಇದಿರಾದ-ಎ ದುರಾಗಿ ಬಂದನು ॥೩೩॥

ತಾ:— ಋತುಪರ್ಣನು ಹೇಳಿದುದು ಸರಿಯೋ! ಎಂದು ಪರೀ ಕ್ಷಿಸಲು ನಳನು ರಥದಿಂದಿಳಿದು ಆಮರದ ಬಳಿಗೆಬಂದು ಎಣಿಸಲು, ಲೆ ಕ್ಕವು ಸರಿಯಾದದ್ದನ್ನು ಕಂಡು, ಮನಸ್ಸಿನಲ್ಲಿ ಅತ್ಯಂತ ಸಂತೋಷ ವನ್ನು ಹೊಂದಿ ಆಹಾ! ಈತನ ಸಹಾಯದಿಂದ ಪುಷ್ಕರನನ್ನು ಗೆಲಬ ಹುದೆಂಬುದಕ್ಕೆ ಈಗಿವ ನಿಕ್ಷದವೇ ಸಾಕಾಗಿದೆ, ಎಂದುಕೊಂಡು ಮುಂ ದೆ ಬರುತ್ತಿದ್ದನು, ಆಗ ಕಲಿಯು ಇವನೆದುರಿಗೆ ಬಂದನು ॥೩೩॥

ಟಿಪ್ಪಣಿ:— (೧) ಕೋಟಿಎಂಬಸಂಖ್ಯೆ-ಕೋಟಿಸಂಖ್ಯೆ (ಸಂ.

ಪೂರ್ವ. ಕ) (೨) ಮನದೊಳ್ ನಲಿದು-ಮನನಲಿದು (ಸ. ತ) ||೩೩||

ಮೂ|| ಎಲೆನೃಪಾಲಕನಿನ್ನಸತ್ಯದ| ನೆಲೆಯನೀಕ್ಷಿಸಬೇಕೆನುತಬಂ| ದಳಲಿಸಿದೆಹಿರಿದಾಗಿನೋಯದಿರಿನ್ನುಚಿತ್ತದಲಿ |ತೊಲಗಿದೆನುಯಿಂ ದಿನಲಿಶುಭಮಂ | ಗಳಕರವುನಿನಗಪ್ಪುದೆನಲಾ | ನಳನೃಪತಿಖತಿ ಗೊಂಡುಶಾಪವಕೊಡದೆಮನ್ನಿಸಿದ ||೩೩||

ಟೀಕೆ:— ಎಲೆ ನೃಪಾಲಕ-ಎಲೈರಾಜನೇ, ನಿನ್ನ, ಸತ್ಯವ್ರತದ, ನೆಲೆಯ-ದಾರ್ಢ್ಯವನ್ನು, ಈಕ್ಷಿಸಬೇಕೆನುತ-ಪರೀಕ್ಷಿಸಬೇಕೆಂದು, ಬಂದು (೧) ಹಿರಿದಾಗಿ-ಹೆಚ್ಚಾಗಿ, ಅಳಲಿಸಿದೆ-ದುಃಖಪಡಿಸಿದೆನು, ಇನ್ನು, ಚಿತ್ತದಲಿ-ಮನಸ್ಸಿನಲ್ಲಿ, ನೋಯದಿರು-ವ್ಯಥೆಪಡಬೇಡ, ಇಂದಿನಲಿ-ಈದಿನದಲ್ಲಿ, ತೊಲಗಿದೆನು-ನಿನ್ನನ್ನು ಬಿಟ್ಟುಹೋದೆನು, ನಿನಗೆ (೨) ಶುಭಮಂಗಳಕರವು- ಸಂಪೂರ್ಣವಾದ ಮಂಗಳವು, ಅಪ್ಪುದು-ಆಗುವುದು, ಎನಲ್-ಎಂಬದಾಗಿಹೇಳಲು, ಆ ನಳನೃಪತಿ-ಆನಳರಾಜನು (೩) ಖತಿಗೊಂಡು-ಕೋಪಿಸಿ, ಶಾಪವಕೊಡದೆ-ಶಾಪವಿಡದೆ, ಮನ್ನಿಸಿದ-ಕ್ಷಮಿಸಿದನು ||೩೪||

ತಾತ್ಪರ್ಯ:— ಎಲೈ ನಳರಾಜೇಂದ್ರನೆ! ನಿನ್ನ ದೃಢವಾದ ಸತ್ಯಸಂಧತೆಯ ಯೋಗ್ಯತೆಯನ್ನು ಪರೀಕ್ಷಿಸಬೇಕೆಂದು ನಿನ್ನ ಬಳಿಗೆ ಬಂದು ನಿನ್ನನ್ನು ಈರೀತಿಯಾಗಿ ದುಃಖಪಡಿಸಿದೆನು, ಬಹುಸಂತೋಷವಾಯಿತು, ನಿನ್ನಸತ್ಯಕ್ಕೆ ಮೆಚ್ಚಿದೆನು, ಇನ್ನು ಮನಸ್ಸಿನಲ್ಲಿ ವ್ಯಥೆಪಡಬೇಡ, ಈದಿನ ನಿನ್ನನ್ನು ಬಿಟ್ಟು ಹೋದೆನು, ಮುಂದೆನಿನಗೆ ಶುಭವಾಗುವುದು, ಎಂದು ಹೇಳುತ್ತಿರಲು, ನಳನು ಬಹಳವಾಗಿ ಕೋಪಿಸಿಕೊಂಡರೂ, ದಯೆಯಿಂದ ಕಲಿಗೆ ಶಾಪವನ್ನು ಕೊಡದೆ ಅವನನ್ನು ಮನ್ನಿಸಿದನು ||೩೪||

ಟಿಪ್ಪಣಿ:— (೧) ಹಿರಿದು+ಆಗಿ-ಹಿರಿದಾಗಿ (ಉ. ಲೋಪ. ಸಂ) (೨) ಶುಭವಾದಮಂಗಳಕರ - ಶುಭಮಂಗಳಕರ (ವಿ. ಪೂರ್ವ. ಕ) (೩) ಖತಿಯಂಕೊಂಡು, ಖತಿಗೊಂಡು (ಕ್ರಿ.ಸ) ||೩೪||

ಮೂ|| ಮಾನವಾಧಿಪಕೇಳುಲೋಕಕೆ |ದೀನಜನಬಾಂಧವನುನಳನೃಪ | ಕಾನನದಿಕಲಿಗತ್ತಕಳುಹಿಸಿಬಂದುರಥವೇರಿ || ಆನರೇಂದ್ರಂಗಶ್ವಹೃದಯವ | ತಾನರುಹಿಯಾತನಲಿಪಡೆದನು | ಸಾನುರಾಗದಿಭೂರುಹದಹೃದಯವನುನಿಮಿಷದಲಿ ||೩೫||

ಮೂ॥ ಮಾನವಾಧಿಪಕೇಳುಲೋಕಕೆ। ದೀನಜನಬಾಂಧವನುನಳನೃ
ಪ। ಕಾನನದಿಕಲಿಗತ್ತಕಳುಹಿಬಂದುರಥವೇರಿ ॥ಆನರೇಂದ್ರಂಗ
ಶ್ವಹೃದಯುವ। ತಾನರುಹಿಯಾತನಲಿಪಡೆದನು। ಸಾನುರಾಗದಿ
ಭೂರುಹದಹೃದಯುವನುನಿಮಿಷದಲಿ ॥೩೫॥

ಟೀಕೆ:— ಮಾನವಾಧಿಪ-ದೊರೆಯೇ, ಕೇಳು, ಲೋಕಕೆ-ಪ್ರ ಪಂಚದಲ್ಲಿ, (೧) ದೀನಜನಬಾಂಧವನು-ಕೃಪಣರನ್ನು ರಕ್ಷಿಸತಕ್ಕ, ನಳನೃಪ-ನಳರಾಜನು, ಕಾನನದಿ-ಕಾಡಿನಲ್ಲಿ, ಕಲಿಗೆ-ಕಲಿಯುನ್ನು, ಅತ್ತ-ಆಕಡೆಗೆ, ಕಳುಹಿ, ಬಂದು-ಬಂದವನಾಗಿ, ರಥವ-ತೇರನ್ನು, ಏರಿ-ಹತ್ತಿ, ಆನರೇಂದ್ರಂಗೆ-ಆ ಋತುಪರ್ಣನಿಗೆ, ಅಶ್ವಹೃದಯುವಂ-ಅಶ್ವಶಿಕ್ಷಣವನ್ನು, ಅರುಹಿ-ತಿಳಿಸಿ, ತಾಂ-ತಾನು, ಆತನಲಿ-ಅವನಿಂದ, ನಿಮಿಷದಲಿ-ನಿಮಿಷಮಾತ್ರದಲ್ಲಿ(೨) ಸಾನುರಾಗದಿ-ಪ್ರೀತಿಯಿಂದ, (೩) ಭೂರುಹದ- ವೃಕ್ಷಗಳ, ಹೃದಯುವನು - ಶಾಸ್ತ್ರವನ್ನು, ಪಡೆದನು-ಕಲ್ತನು ॥೩೧॥

ತಾ:— ದೀನದಯಾಳುವಾದ ನಳನು ಕಲಿಯುನ್ನು ಆಕಡೆ ಮ ನ್ನಿಸಿ ಕಳುಹಿಬಂದು ರಥವನ್ನು ಹತ್ತಿ ಋತುಪರ್ಣನಿಗೆ ಅಶ್ವಶಾ ಸ್ತ್ರವನ್ನು ಕಲಿಸಿ ಅವನಿಂದ ,ಅಥವಾ ವಿದ್ಯಯಾವಿದ್ಯಾ, ಎಂಬ ನ್ಯಾ ಯಾನುಸಾರವಾಗಿ ಮೂರನೆಯ ವಿದ್ಯಾರ್ಜನೆಯ ಉಪಾಯದಿಂದ ನಿ ಮಿಷಮಾತ್ರದಲ್ಲಿ ವನಸ್ಪತಿಶಾಸ್ತ್ರವನ್ನು ಸಂಪೂರ್ಣವಾಗಿ ಗ್ರಹಿಸಿದ ನು ॥೩೫॥

ಟಿಪ್ಪಣಿ:— (೧) ದೀನರಾದಜನರು-ದೀನಜನರು (ವಿ. ಪೂ.ರ್ವ ಕ) ದೀನಜನರಬಾಂಧವನು- ದೀನಜನಬಾಂಧವನು (ಷ. ತ) (೨) ಅ ನುರಾಗದಿಂದ ಕೂಡಿದುದು-ಸಾನುರಾಗ (೩) ಭೂ-ಭೂಮಿಯಲ್ಲಿ, ರು ಹ-ಹುಟ್ಟಿದ್ದು-ಮರ (ಅವ) ॥೩೫॥

ಮೂ॥ ಕರದವಾಘೆಯುಕೊಂಡುನೃಪಗೆ । ಚ್ಚರಿಸಿನೂಕಲುತೇಜಿ
ಗಳುಹುಂ। ಕರಿಸಿಮುನನುಂಕೊಂಡುಹಾಯ್ದುವುಬಿಟ್ಟಸೂಟಿಯು
ಲಿ। ಭರದಗಮನವೆನೇನನೆಂಬೆನು। ನೆರೆದಜನವಲ್ಲಲ್ಲಿನಿಂದುದು।
ಹರಹರಾಸಾರಥಿಗೆಸರಿಯಾರರಸಕೇಳೆಂದ ॥೩೬॥

ಟೀಕೆ:— ಕರದ-ಕೈಯ, ವಾಘೆಯ-ಕಡಿವಾಣವನ್ನು, ಕೊಂ ., ನೃಪಗೆ-ದೊರೆಗೆ, ಎಚ್ಚರಿಸಿ-ಹೇಳಿ, ನೂಕಲು-ನಡೆಸಿಸಲು,

ತೇಜಿಗಳು-ಕುದುರೆಗಳು,ಬಿಟ್ಟಸೂಟಿಯಲಿ-ನಡೆಯಿಸಿದಚಮತ್ಕಾರದಿಂ ದ ಹುಂಕರಿಸಿ-ಹೂಂಕಾರಮಾಡಿ, (೧) ಮನಮುಂಕೊಂಡು-ಮನಃಪೂರ್ವಕವಾಗಿ, ಹಾಯ್ದುವು-ಓಡಿದುವು; ಭರದ-ವೇಗವುಳ್ಳ, ಗಮನವಂ-ನಡಿಗೆಯನ್ನು, ಏನನೆಂಬೆನು-ಏನೆಂದುಹೇಳಲಿ, ನೆರೆದ-ಸೇರಿದ್ದ, ಜನವು-ಜನಗಳು, (೨) ಅಲ್ಲಲ್ಲಿ-ಇದ್ದಕಡೆಯಲ್ಲಿಯೇ, ನಿಂದುದು-ನಿಂತಿತ್ತು, ಹರಹರಾ-ಪರಮೇಶ್ವರನೇ ! ಸಾರಥಿಗೆ-ಬಾಹುಕನಿಗೆ, ಸರಿಯಾರು-ಸಮಾನರಾರು ? ಅರಸ- ದೊರೆಯೇ, ಕೇಳು, ಎಂದ-ಎಂಬದಾಗಿಹೇಳಿದನು ॥೩೬॥

ತಾತ್ಪರ್ಯ:— ಕೈಯ ಲಗಾಮನ್ನು ತೆಗೆದುಕೊಂಡು ಬಹುವೇಗವಾಗಿ ರಥವು ನಡೆವುದೆಂದು ದೊರೆಗೆ ಎಚ್ಚರಕೊಟ್ಟು, ಸನ್ನೆಯಿಂದ ಕುದುರೆಗಳನ್ನು ನಡೆಯಿಸಲು, ಅವುಘುರಕಾಯಿಸುತ್ತಾ, ಬಹುಬೇಗನೆ ಓಡುತ್ತಿರಲು ದಾರಿಯಲ್ಲಿದ್ದವರು ದಿಗ್ಭ್ರಾಂತರಾಗಿ ನಿಂತಿದ್ದಲ್ಲಿಯೇ ಸ್ತಬ್ಧರಾಗಿ ನಿಂತು ನೋಡುತ್ತಿದ್ದರು, ದೊರೆಯು ವಿಸ್ಮಯವನ್ನು ಹೊಂದಿದನು. ಸಾರಥ್ಯದಲ್ಲಿ ಬಾಹುಕನಿಗೆ ಸಮಾನರು ಯಾರುಂಟು ? ॥೩೬॥

ಟಿಪ್ಪಣಿ:— (೧) ಮುಂದಂಕೊಂಡು-ಮುಂಕೊಂಡು (ಕ್ರಿ. ಸ) ಮನಮಂಮುಂಕೊಂಡು-ಮನಮುಂಕೊಂಡು (ಕ್ರಿ. ಸ) (೨) ವೀಪ್ಸಾರ್ಥದಲ್ಲಿ ದ್ವಿರುಕ್ತಿ ಬಂತು ॥೩೬॥

ಮೂ॥ ತುರಗಹೇಷಾರವವುಗಾಲಿಯ । ದರಧುರದಚೀತ್ಕೃತಿಯುಸಾರಥಿ । ಯುರವಣಿಯುರಥದಚ್ಚುಗಳಝೇಂಕಾರನಾದದಲಿ । ಭರದಿಕೇಂದೂಳಿಡುತಲಿರಲಾ । ಪುರಜನರುಸಂದಣಿಸಿನೋಡಲು । ಪರಿಜನರುಬಂದರುವಿದರ್ಭನೃಪಾಲಗರುಹಿದರು ॥೩೭॥

ಟೀಕೆ:—(೧) ತುರಗಹೇಷಾರವವು-ಕುದುರೆಗಳ ಹೇಷಿತಧ್ವನಿಯೂ, ಗಾಲಿಯ-ಚಕ್ರಗಳ, ದರಧುರದ-ತಡೆದುನಡೆಯುವುದರಿಂದ, ಚೀತ್ಕೃತಿಯು-ಚೀತ್ಕಾರಶಬ್ದವೂ, ಸಾರಥಿಯ-ಬಾಹುಕನ, ಉರವಣಿಯು-ಆರ್ಭಟವೂ, ರಥದ-ತೇರುಗಳ, (೨) ಅಚ್ಚಿನ-ಚಕ್ರಗಳನ್ನು ತೊಡಿಸುವ ಕಬ್ಬಿಣದ ಗಡಾರಿಯ, ಝೇಂಕಾರನಾದದಲಿ-ಝೇಂಕಾರವೂಇವುಗಳಿಂದ, ಭರದಿ-ಬೇಗನೆ, (೩) ಕೇದೂಳಿ-ಕೇಸರಧೂಳಿಯು, ಇಡುತಿರಲ್-ಏಳುತ್ತಿರಲು, ಆಪುರಜನರು-ಆವಿದರ್ಭಪುರದಜನಗಳು, ಸಂದಣಿಸಿ-ಗುಂಪಾಗಿಸೇರಿ, ನೋಡಲು-ನೋಡುತ್ತಿರಲು, ಪರಿ

ಜನರು-ಸೇವಕರು, ಬಂದರು-ಒಡಿಬಂದರು, ವಿದರ್ಭನೃಪಾಲಗೆ-ಭೀಮ ರಾಜನಿಗೆ, ಅರುಹಿದರು-ತಿಳಿಸಿದರು ॥೩೭॥

ತಾತ್ಪರ್ಯ:— ಕುದುರೆ, ತೇರು, ಸಾರಥಿ, ಗಾಲಿ, ಇವುಗಳ ಶಬ್ದವು ದಿಗಂತವನ್ನು ವ್ಯಾಪಿಸುತ್ತಿರಲು ರಥವೇಗದಿಂದ ನೆಗೆದ ಕೆಂದೂಳಿಯು ಆಕಾಶವನ್ನು ತುಂಬುತ್ತಿರಲು, ಈ ಆಶ್ಚರ್ಯವನ್ನು ನೋಡುವುದಕ್ಕೆ ವಿದರ್ಭಪುರದ ಜನರೆಲ್ಲರೂ ಗುಂಪುಸೇರಿದರು, ಈ ಸಮಾಚಾರವನ್ನು ರಾಜಭಟರು ಬೇಗನೆಬಂದು ದೊರೆಗೆತಿಳಿಸಿದರು ॥೩೭॥

ಟಿಪ್ಪಣಿ:— (೧) ಹೇಷಾಎಂಬರವ-ಹೇಷಾರವ (ಸಂ.ಪ್ರಾರ್ವ. ಕ) ತುರಗದಹೇಷಾರವವು-ತುರಗಹೇಷಾರವವು (ಷ. ತ). (೨) (ತ್ರ) ಅಕ್ಷ (೩) ಕೆಚ್ಚನೆದೂಳಿ-ಕೆಂದೂಳಿ (ವಿ. ಪ್ರಾರ್ವ. ಕ) ಧೂಳಿಎಂಬುದಕ್ಕೆ (ಗ್ರಾ) ದೂಳಿ ॥೩೭॥

ಮೂ॥ ಬಂದನೇಋತುಪರ್ಣನೆನುತಾ | ನಂದದಿಂಕರಸಿದನುಸಚಿ
ವರ | ಮಂದಿಯನುಕಳುಹಿಸಲುಕರೆತಂದರುನಿಜಾಲಯಕೆ॥ ಸಂದ
ಣಿಯುಕೆಲಕೊತ್ತಿನೃಪಮುದ | ದಿಂದಬೇರರಮನೆಯೊಳುಲುಪೆಗ |
ಳಿಂದಯೋಧ್ಯಾಪತಿಯುಸತ್ಕರಿಸಿದನುಭೀಮನೃಪ ॥೩೮॥

ಟೀಕೆ:— ಋತುಪರ್ಣಂ-ಋತುಪರ್ಣರಾಜನು, ಬಂದನೇ-ಬಂದಿರುವನೇ ಎನುತ-ಎಂಬದಾಗಿ, ಆನಂದದಿಂ-ಸಂತೋಷದಿಂದ, ನೃಪ-ದೊರೆಯಾದ, ಭೀಮನೃಪ-ಭೀಮರಾಜನು, ಸಚಿವರ-ಮಂತ್ರಿಗಳನ್ನು, ಕರಸಿದನು- ಬರಮಾಡಿದನು, ಕಳುಹಿಸಲು- ಅವರನ್ನು ಕಳುಹಿಸಲು, (೧) ನಿಜಾಲಯಕೆ-ತನ್ನ ಮನೆಗೆ, ಕರೆತಂದರು-ಕರೆದುಕೊಂಡು ಬಂದರು, ಸಂದಣಿಯು-ಜನದಗುಂಪನ್ನು, ಕೆಲಕೆ-ಮಗ್ಗುಲಿಗೆ, ಒತ್ತಿ-ತಳ್ಳಿ ಮುದದಿಂದ-ಸಂತೋಷದಿಂದ, ಬೇರರಮನೆಯೊಳಗೆ - ಬೇರೊಂದುಅರಮನೆಯಲ್ಲಿ, ಉಲುಪೆಗಳಿಂದ-ಉಪಹಾರಗಳಿಂದ, (೨) ಅಯೋಧ್ಯಾಪತಿಯು-ಋತುಪರ್ಣನನ್ನು, ಸತ್ಕರಿಸಿದನು-ಉಪಚರಿಸಿದನು॥೩೮॥

ತಾತ್ಪರ್ಯ:— ಭೀಮರಾಜನು, ಋತುಪರ್ಣನು ಬಂದನೆಂಬಸಮಾಚಾರವನ್ನು ಕೇಳಿ ಸಂತೋಷದಿಂದ, ದೂತರನ್ನಟ್ಟಿ ಮಂತ್ರಿಗಳನ್ನು ಕರೆಯಿಸಿ ಅವರಮೂಲಕ ತನ್ನರಮನೆಗೆ ಬರಮಾಡಿಕೊಂಡು, ರಾಜೋಪಚಾರಗಳಿಂದ ಸತ್ಕರಿಸಿ ಮತ್ತೊಂದರ ಮನೆಯಲ್ಲಿ ಬಿಡಾರವನ್ನು ಮಾಡಿ ಅಲ್ಲಿ ಎಲ್ಲಪರಿವಾರದೊಡನೆ ವಿಶ್ರಮಿಸಿ ಕೊಳ್ಳುವಂತೆ ಮಾಡಿಬರಳ ಮ

ರ್ಯಾದೆಯಿಂದ ಉಪಚರಿಸುತ್ತಿದ್ದನು ॥೩೪॥

ಟಿಪ್ಪಣಿ:— (೧) ನಿಜ+ಆಲಯ - (ಸ. ದೀ. ಸ.) ನಿಜವಾದ ಆಲಯ-ನಿಜಾಲಯ (ವಿ. ಪೂರ್ವ. ಕ) (೨) ಅಯೋಧ್ಯೆಯಪತಿ ಅಯೋಧ್ಯಾಪತಿ (ಷ. ತ) ॥೩೪॥

ಮೂ॥ ಕೇಳಿದಳುದಮಯಂತಿ । ವಾರ್ತೆಯತಾಳಿದಳುಹರುಷವನು ಮನದಲಿ । ಫಾಲಲೋಚನನಿಂದಫಲಿಸಿತುಪುಣ್ಯವೆನಗಿಂದು॥ ಬಾಲೆ ಕೇಳೆನಗಿಂದುವಹ್ನಿ।ಜ್ವಾಲೆಪರಿಹರವಾಯ್ತುಮಂಗಳ। ದೇಳಿಗೆಯು ಪಸರಿಸಿತುಶುಭವಹುದೆಂದಳಿಂದುಮುಖಿ ॥೩೯॥

ಟೀಕೆ:— ದಮಯಂತಿ, (೧) ಈ ವಾರ್ತೆಯ - ಈ ಸುದ್ದಿಯು ಯನ್ನು, ಕೇಳಿದಳು, ಮನದಲ್ಲಿ-ಮನಸ್ಸಿನಲ್ಲಿ, ಹರುಷವನು-ಸಂತೋಷವನ್ನು, ತಾಳಿದಳು-ಹೊಂದಿದಳು (೨)ಫಾಲಲೋಚನನಿಂದ-ಈಶ್ವರನಿಂದ, ಎನಗೆ-ನನಗೆ,ಇಂದು-ಈಗ, ಪುಣ್ಯವು - ಸುಕೃತವು, ಫಲಿಸಿತು-ಲಭ್ಯವಾಯಿತು, ಬಾಲೆ-ಮಗಳೆ, ಕೇಳು, ಎನಗೆ-ನನಗೆ, ಇಂದು-ಈಗ (೩) ವಹ್ನಿಜ್ವಾಲೆ-ಬೆಂಕಿಯುರಿಯು, ಪರಿಹರವಾಯ್ತು-ತೀರಿಹೋಯಿತು (ಆರಿತು) ಮಂಗಳದ-ಶುಭಕರವಾದ, ಏಳಿಗೆಯು-ಅಭಿವೃದ್ಧಿಯು, ಪಸರಿತು-ಹೆಚ್ಚಿತು, ಶುಭವು, ಅಹುದು-ಆಗುವುದು (ಎಂಬದಾಗಿ) ಇಂದುಮುಖಿ-ಚಂದ್ರಮುಖಿಯಾದ ದಮಯಂತಿಯು, ಎಂದಳೆಂದುತನ್ನ ಮಗಳಿಗೆ ಹೇಳಿದಳು ॥೩೯॥

ತಾತ್ಪರ್ಯ:— ಈ ವೃತ್ತಾಂತವನ್ನು ದಮಯಂತಿಯುಕೇಳಿ ಮನಸ್ಸಿನಲ್ಲಿ ಆನಂದವನ್ನು ಹೊಂದಿ ತನ್ನ ಮಗಳನ್ನು ಕುರಿತು-ಅಮ್ಮಾ ಈ ದಿನ ನನ್ನ ಪುಣ್ಯವು ಕೈಸೇರಿತು, ಪರಮೇಶ್ವರನ ಕೃಪೆಯುಂಟಾಯ್ತು, ವಿರಹಾಗ್ನಿಜ್ವಾಲೆಯು ಅಡಗಿತು, ಇನ್ನು ಶುಭವಾಗುವುದು ಎಂದುಬಹುಕುತೂಹಲಯುಕ್ತಳಾಗಿ ಹೇಳಿದಳು ॥೩೯॥

ಟಿಪ್ಪಣಿ:— (೧) ಇದುವಾರ್ತೆ-ಈವಾರ್ತೆ (ಗಮಕ) (೨)ಫಾಲ-ಹಣೆಯಲ್ಲಿ, ಲೋಚನ-ಕಣ್ಣುಳ್ಳವನು (ಈಶ್ವರ) (ಬ. ವ್ರೀ. ಸ) (೩) ವಹ್ನಿಯಜ್ವಾಲೆ-ವಹ್ನಿಜ್ವಾಲೆ (ಷ. ತ) ॥೩೯॥

ಮೂ॥ ಒಲಗವನಿತ್ತನುವಿದರ್ಭನೃ । ಪಾಲಕರಪಿದಮಂತ್ರಿಬಾಂಧವ। ಜಾಲವನುಋತುಪರ್ಣಬಂದನುಬಾಹುಕನಸಹಿತ ॥ ಸಾಲುಮನೆಯಿಂ‌ದಪಲಿಕುಳ್ಳಿರೆ । ಬಾಲೆಯರಸಂಗೀತನೃತ್ಯದ ।ಕೇಳಿಮೇಳದಿ

ರಂಜಿಸಿತುಭೂಪಾಲನಾಸ್ಥಾನ ॥೪೦॥

ಟೀಕೆ:— ವಿದರ್ಭನೃಪಾಲ-ಭೀಮರಾಜನು, ಓಲಗವಂ-ಸಭೆಯನ್ನು, ಇತ್ತನು-ಮಾಡಿದನು (ಕೊಟ್ಟನು) ಮಂತ್ರಿ ಬಾಂಧವಜಾಲವನು- ಮಂತ್ರಿಗಳನ್ನೂ, ಬಂಧುಗಳನ್ನೂ ಕರಸಿದ - ಬರಮಾಡಿದನು, ಋತುಪರ್ಣನು - ಋತುಪರ್ಣರಾಜನು, ಬಾಹುಕನಸಹಿತ-ಬಾಹುಕನೊಡನೆ, ಬಂದನು, (೨) ಸಾಲುಮಣಿ ಪೀಠದಲಿ-ಸಾಲಾಗಿರುವ ರತ್ನಪೀಠಗಳಮೇಲೆ, ಕುಳ್ಳಿರೆ-ಕುಳಿತಿರಲು, ಭೂಪಾಲನ-ದೊರೆಯ , ಆಸ್ಥಾನಸಭೆಯು, ಬಾಲೆಯರ-ಸ್ತ್ರೀಯರ, ಸಂಗೀತನೃತ್ಯದ-ಸಂಗೀತಮತ್ತು ನಾಟ್ಯದ, ಕೇಳಿಮೇಳವಿ-ವಿನೋದಗಳಿಂದ, ರಂಜಿಸಿತು-ಪ್ರಕಾಶಿಸಿರಿತು॥

ತಾತ್ಪರ್ಯ:— ಭೀಮ ಭೂಪಾಲಕನು ಓಲಗದಲ್ಲಿ ಕುಳಿತುತನ ಮಂತ್ರಿಗಳನ್ನೂ ನಂಟರಿಷ್ಟರನ್ನೂ,ಕರೆಯಿಸಿದನು ಋತುಪರ್ಣನುಸಾರಥಿಯಾದ ಬಾಹುಕನೊಡನೆ ಅಲ್ಲಿಗೆ ಬಂದನು ಎಲ್ಲರೂ ರತ್ನ ಖಚಿತವಾದ ದಿವ್ಯಪೀಠಗಳಮೇಲೆ ಸಾಲಾಗಿ ಕುಳಿತು ಕೊಂಡರು, ವಿನೋದಾರ್ಥವಾಗಿ ನಾರಿಯರು ಸಂಗೀತನಾಟ್ಯಗಳನ್ನು ಶಾಸ್ತ್ರೋಕ್ತವಾಗಿ ತೋರಿಸುತ್ತಾ ಸಭಾಸದರ ಮನಸ್ಸನ್ನು ತಮ್ಮ ಚಾತುರ್ಯದಿಂದ ಮೆಚ್ಚಿಸುತ್ತಿರಲು, ರಾಜಸಭೆಯು ಬಹುರಮ್ಯವಾಗಿತ್ತು ॥೪೦॥

ಟಿಪ್ಪಣಿ:—(೧)ಮಂತ್ರಿಗಳೂ ಬಾಂಧವರೂ-ಮಂತ್ರಿಭಾಂಧವರು (ದ್ವಂದ್ವ) ಮಂತ್ರಿ ಬಾಂಧವರಜಾಲವು - ಮಂತ್ರಿ ಬಾಂಧವಜಾಲವು (ಷ. ತ) (೨) ಮಣಿಖಚಿತವಾದ ಪೀಠ-ಮಣಿಪೀಠ - ಸಾಲುಮಣಿಪೀಠ (ವಿ. ಪೂರ್ವ. ಕ) ॥೪೦॥

ಮೂ॥ ಖಿನ್ನನಾದನುಚಿತ್ತದಲಿಋತು । ಪರ್ಣಭೂಸುರನೆಂದಮಾತಿನ।
ಬಿನ್ನಣೆಗೆಮರುಳಾಗಿ ಬಂದೆನುಮೂಢನಾದನೆಲಾ ॥ ಭಿನ್ನವಿಲ್ಲದೆ
ಕೊಂಡನಾಚಿಕೆ । ಗಿನ್ನುಹದನೇನೆನುತಗುಣಸಂ । ಪನ್ನಮರುಗಿ
ದತನ್ನಮನದದುರಂತಚಿಂತೆಯುಲಿ ॥೪೧॥

ಟೀಕೆ:— ಋತುಪರ್ಣ-ಋತುಪರ್ಣನು, ಚಿತ್ತದಲಿ-ಮನಸ್ಸಿನಲ್ಲಿ, ಖಿನ್ನನಾದನು-ವ್ಯಥೆಪಟ್ಟನು, ಭೂಸುರಂ-ಬ್ರಾಹ್ಮನು, ಎಂದ-ಹೇಳಿದ, ಮಾತಿನ-ಮಾತುಗಳ (೧) ಬಿನ್ನಣೆಗೆ-ಬೇಳುವೆಗೆ, ಮರುಳಾಗಿ-ಹುಚ್ಚನಾಗಿ, ಬಂದೆನು-ಬಂದುಬಿಟ್ಟೆನು (೨) ಮೂಢಂ-ಅವಿವೇಕಿಯು ಆದೆನೆಲಾ-ಆಗಿದ್ದೇನೆಯಲ್ಲವೇ, ಭಿನ್ನವಿಲ್ಲದೆ-ಬಿಡದೆ, ಕೊಂಡ-ಉಂಟಾ

ಗಿರುವ, ನಾಚಿಕೆಗೆ, ಇನ್ನು-ಮುಂದೆ ಏದನು-ಮಾಡತಕ್ಕದ್ದು, ಏನು! ನನುತ-ಎಂಬದಾಗಿ ತನ್ನ, ಮನದ-ಮನಸ್ಸಿನ, ದುರಂತಚಿಂತೆಯುಲಿ-ಕೊನೆಯಿಲ್ಲದ ಆಲೋಚನೆಯಿಂದ (೩) ಗುಣಸಂಪನ್ನ - ಸುಗುಣಶಾಲಿಯಾದ ಋತುಪರ್ಣನು, ಮರುಗಿದ-ದುಃಖಪಟ್ಟನು ॥೪೧॥

ತಾತ್ಪರ್ಯ:— ಇದನ್ನೆಲ್ಲಾ ನೋಡಿ ಋತುಪರ್ಣನು ! ಅಯ್ಯೋ ಬ್ರಾಹ್ಮಣನ ಮಾತನ್ನು ನಿಶ್ಚಯವೆಂದು ನಂಬಿ ಹಿಂದುಮುಂದು ನೋಡದೆ, ಕಾಮಾತುರಾಣಾಂನಭಯಂನಲಜ್ಜಾ, ಎಂಬನ್ಯಾಯದಂತೆ, ದುಡುಕಿ ಬಂದು ಮೋಸಹೋದೆನಲ್ಲಾ ! ನನ್ನಂತಹ ಅವಿವೇಕಿಯುಂಟೇ ! ನಾಚಿಕೆಗೇಡಾಯ್ತು, ಏನಮಾಡಲಿ ಈ ಅವಮಾನವನ್ನು ಹೋಗಲಾಡಿಸುವುದು ಹೇಗೆ ಉಳಿದ ರಾಜರು ಈ ಸಮಾಚಾರವನ್ನು ಕೇಳಿದರೆ ನನ್ನ ಯೋಗ್ಯತೆಯೇನಾಗುವುದು ? ಎಂದು ಚಿಂತಾಕ್ರಾಂತನಾದನು॥೪೧॥

ಟಿಪ್ಪಣಿ:— (೧) ಬಿನ್ನಣಕ್ಕೆ (ತ್ಸ) ವಿಜ್ಞಾನ (೨) (ದ್ಭ) ಮೂಳ, ॥೪೧॥

ಮೂ॥ ನಾರಿಯರಮರೆಗೊಂಡುಸಭೆಯುಲಿ । ಸಾರಥಿಯುಕುಬ್ಜಾವ
ತಾರವ । ನೋರೆಗಣ್ಣಿನೊಳೀಕ್ಷಿಸುತದಮಯಂತಿಮನದೊಳಗೆ ॥
ಆರಿವನುನಳನೃಪನಪ್ರೋಲ್ವ । ಚಾರುಚಿಹ್ನೆಗಳೆಲ್ಲಿತೋರ್ಪವಿ ।
ಕಾರವಾಗಿದೆರೂಪೆನುತಚಿಂತಿಸಿದಳಿಂದುಮುಖಿ ॥೪೨॥

ಟೀಕೆ:— ದಮಯಂತಿ, ನಾರಿಯರ-ಹೆಂಗಸರನ್ನು, ಮರೆಗೊಂಡು-ಮರೆಮಾಡಿಕೊಂಡು, (ಜೊತೆಮಾಡಿಕೊಂಡು) ಸಭೆಯುಲಿ-ಆಸ್ಥಾನದಲ್ಲಿ, ಸಾರಥಿಯ (೧) ಕುಬ್ಜಾವತಾರವಂ-ಕುರೂಪವನ್ನು, (೨) ಓರೆಗಣ್ಣಿನೊಳ್-ಓರೆನೋಟದಿಂದ, ಈಕ್ಷಿಸುತ-ನೋಡುತ್ತಾ, ಮನದೊಳಗೆ-ತನ್ನ ಮನಸ್ಸಿನಲ್ಲಿ, ಇವನು-ಈ ಬಾಹುಕನು, ಆರು-ಯಾರಾಗಿರಬಹುದು ! ನಳನೃಪನ-ನಳರಾಜನನ್ನು, ಪ್ರೋಲ್ವ-ಹೋಲುವ, ಆಚಾರು ಚಿಹ್ನೆಗಳ್-ಮನೋಹರವಾದಗುರುತುಗಳು, ಎಲ್ಲಿ ! ರೂಪ-ಆಕಾರವು ತೋರ್ಪ-ಕಾಣುವ, ವಿಕಾರವಾಗಿದೆ-ಭಯಂಕರವಾಗಿದೆ, ಎನುತ-ಎಂಬದಾಗಿ, ಇಂದುಮುಖಿ - ದಮಯಂತಿಯು, ಚಿಂತಿಸಿದಳ್ - ಆಲೋಚಿಸಿದಳು ॥೪೨॥

ತಾತ್ಪರ್ಯ:— ದಮಯಂತಿಯು ಅಡಿಗಡಿಗೆ ಬಾಹುಕನ ಮುಖವನ್ನು ನೋಡುತ್ತಾ ಮೈಯ್ಯಕೂದಲೆಲ್ಲಾ ಉದುರಿ ಕಾಂತಿಹೀನವಾಗಿ

ಕಪ್ಪುಬಣ್ಣದಿಂದ ಕೂಡಿರುವ ದೇಹವನ್ನು ಪರೀಕ್ಷಿಸಿನೋಡುತ್ತಾ, ಹರಹರಾ ! ಇದರ ತತ್ತ್ವವನ್ನು ದೇವರೇ ಬಲ್ಲನು, ನಳನು ಇಂತಹ ವಿಕೃತ ತವೇಷವನ್ನು ಏಕೆ ತಳೆದನೋ ಕಾಣೆನು, ಎಂದು ದುಃಖಪಟ್ಟಳು ||೪೩

ಟಿಪ್ಪಣಿ:— (೧) ಕುಬ್ಜನ ಅವತಾರ–ಕುಬ್ಜಾವತಾರ (ಷ. ತ) (ಷ. ತ) ಕುಬ್ಜಕ್ಕೆ (ದ್ಭ) ಗುಜ್ಜು (೨) ಒರೆಯಾದ ಕಣ್ಣು – ಒರೆಗಣ್ಣು (ವಿ. ಪ್ರ್ವಾ. ಕ) ||೪೭||

ಮೂ॥ ಒರೆದೊರೆದು ನೋಡಿದಳು ಸೂತನ | ಸಿರಿಮುಖದ ಕಾಂತಿಯು
ನು ಕಳೆಗುಂ | ದಿರುವ ಕಾಯವ ಕಪ್ಪಿನಿಂದುದಿರಿರ್ದ ರೋಮದಲಿ॥ ಪ
ರಿಕಿಸಲ್ಕೀ ರೂಪ ಕೈಕೊಂ| ಡಿರುವನೋ ನಳನೃಪತಿ ಶಿವಶಿವ| ಮುರಹ
ರನು ತಾ ಬಲ್ಲನೆಂದುಮ್ಮಳಿಸಿದಳು ತರಳೆ ||೪೩||

ಟೀಕೆ:— ತರಳೆ–ದಮಯಂತಿಯು, ಸೂತನ–ಸಾರಥಿಯ, ಸಿರಿಮುಖದ–ಕಾಂತಿಯುಕ್ತವಾದ ಮುಖದ, ಕಾಂತಿಯನು– ಕಳೆಯನ್ನು ಒರೆದೊರೆದು–ಚೆನ್ನಾಗಿ ಪರೀಕ್ಷಿಸಿ, ನೋಡಿದಳು, ಪರಿಕಿಸಲ್ಕೆ–ಪರೀಕ್ಷೆ ಮಾಡಿದರೆ, (೧) ಕಳೆಗುಂದಿರುವ–ಕಾಂತಿರಹಿತವಾದ, ಕಾಯವ–ದೇಹವನ್ನೂ, ಕಪ್ಪಿನಿಂದೆ–ಕಪ್ಪುಬಣ್ಣದಿಂದ ಕೂಡಿ, ಉದುರಿರ್ದ–ಉದುರಿಹೋಗಿರುವ, ರೋಮದಲಿ-ರೋಮವುಳ್ಳವನಾಗಿ, ನಳನೃಪತಿ – ನಳರಾಜನು (೨)ಈ ರೂಪ–ಇಂತಹ ವಿಕಾರಾಕಾರವನ್ನು, ಕೈಕೊಂಡಿರುವನೋ–ಹೊಂದಿರುವನೋ, ಶಿವಶಿವ–ಮಹಾದೇವಾ, ಮುರಹರನು–ಕೃಷ್ಣನು, ತಾ–ತಾನೇ, ಬಲ್ಲಂ–ತಿಳಿದಿರುವನು, ಎಂದು, ತರಳೆ–ದಮಯಂತಿಯು, ಉಮ್ಮಳಿಸಿದಳು–ವ್ಯಥೆಪಟ್ಟಳು ||೪೩||

ತಾತ್ಪರ್ಯ:— ದಮಯಂತಿಯು ತನ್ನ ಸಖಿಯರೊಡನೆ ಬಂದು ಸಭೆಯಲ್ಲಿರುವ ಋತುಪರ್ಣನ ಸಾರಥಿಯಾದ ಬಾಹುಕನ ಕುರೂಪವನ್ನು ಒರೆನೋಟದಿಂದ ನೋಡುತ್ತಾ, ಇದೇನು ! ಇವನಾರು ? ನಳನಲ್ಲಿ ಕಾಣಬರುತ್ತಿದ್ದ ರಾಜಚಿಹ್ನೆಗಳೇನಾದುವು, ನಳನನ್ನು ಇವನು ಯಾವಭಾಗದಲ್ಲೂ ಹೋಲುವಂತಿಲ್ಲವಲ್ಲಾ ! ಇವನನ್ನು ನೋಡಿದರೆ ಭಯವಾಗುವುದು, ಶಿವಶಿವಾ ಈ ಮಾತುವನ್ನು ಭಗವಂತನೇ ಬಲ್ಲನು, ನಾನರಿಯೆನು, ಎಂದು ಚಿಂತಿಸಿದಳು ||೨೪||

ಟಿಪ್ಪಣಿ:— (೧) ಕಳೆಯಿಂ ಕುಂದಿ–ಕಳೆಗುಂದಿ (ಕ್ರಿ. ಸ) (೨) ಇದು ರೂಪ–ಈ ರೂಪ (ಗಮಕ) ||೪೩||

ಮೂ॥ ಹರದುದೋಲಗವಲಿನಿಜಮಂ । ದಿರಕೆಬಂದಾಲೋಚಿಸುತಮಿಗೆ । ತರುಣಿಯರಕಳುಹಿಸಲುಬಂದರುಬಾಣಸದಮನೆಗೆ ॥ ಇರವ ಕಂಡರುಶಾಕದಲಿಕೈ । ಕರಣವನುನೆರೆಸೂಪಕಾರದ । ಪರಿಯ ಹೊಗಳುತಬಂದುಬಿನ್ನೈಸಿದರುಭಾಮಿನಿಗೆ ॥೪೪॥

ಟೀಕೆ:— ಅತ, ಓಲಗವು-ಸಭೆಯು, ಹರದುನು-ಪೂರಯಿಸಿತು ಮಂದಿರಕೆ-ಮನೆಗೆ,ಬಂದು-ಬಂದವಳಾಗಿ ಮಿಗೆ-ಅತ್ಯಂತವಾಗಿ, ಆಲೋಚಿಸುತ-ಚಿಂತಿಸುತ್ತಾ, ತರುಣಿಯರ-ಹೆಂಗಸರನ್ನು, ಕಳುಹಿಸಲು-ಕಳುಹಿಸಿಕೊಡಲು (ಅವರು) ಬಾಣಸದಮನೆಗೆ-ಅಡಿಗೆಯಮನೆಗೆ ಬಂದರು, ಇರವ-ಸ್ಥಿತಿಯನ್ನು, ಶಾಕದಲಿ – ಶಾಕಪಾಕದಲ್ಲಿ, (೧) ಕೈ ಕರಣವನು-ಚಮತ್ಕಾರವನ್ನೂ, ಕಂಡರು-ನೋಡಿದರು, ನೆರೆ-ಚೆನ್ನಾಗಿ, (೨) ಸೂಪಕಾರದ-ಅಡಿಗೆಯ ಕೆಲಸದ, ಪರಿಯ-ರೀತಿಯನ್ನು, ಹೊಗಳುತ ಸ್ತುತಿಸುತ್ತಾ, ಬಂದು-ಬಂದವರಾಗಿ, ಭಾಮಿನಿಗೆ-ದಮಯಂತಿಗೆ, ಬಿನ್ನೈಸಿದರು-ವಿಜ್ಞಾಪಿಸಿದರು ॥೪೪॥

ತಾತ್ಪರ್ಯ:— ಆದಿನದ ಸಭೆಯು ಮುಗಿಯಿತು. ಸಭೆಯಲ್ಲಿದ್ದ ಬಾಹುಕನನ್ನು ಎಷ್ಟು ಪರೀಕ್ಷಿಸಿದರೂ ಇವನೇ ನಳನೆಂದು ತಿಳಿಯುವುದಕ್ಕಾಗದೆ ದಮಯಂತಿಯು ಮನೆಗೆ ಬಂದು, ಏನಾದರೂ ಉಪಾಯಯವನ್ನು ಮಾಡಿ ತಿಳಿಯಬೇಕೆಂದು ಆಲೋಚಿಸಿ, ತನ್ನ ಸಖಿಯರನ್ನು ಕರೆದು ನೀವು ಅಡಿಗೆಯಮನೆಗೆ ಹೋಗಿ, ಆತನು ಅಡಿಗೆಮಾಡುವ ರೀತಿತಿಯನ್ನು ತಿಳಿದು ಬನ್ನಿರೆಂದು ಕಳುಹಿಸಿ ಕೊಡಲು, ಅವರು ಬಂದು ಈತನು ಮಾಡುವ ಪಾಕದರೀತಿಯನ್ನೂ, ಚಮತ್ಕಾರವನ್ನೂ ನೋಡಿ, ಆ ನೋಡಿ, ಆಶ್ಚರ್ಯ ಗೊಂಡು, ಹೊಗಳುತ್ತಾ ಬಂದು ದಮಯಂತಿಗೆ ವಿಸ್ತಾರವಾಗಿ ಹೇಳಿದರು ॥೪೪॥

ಟಿಪ್ಪಣಿ:— (೧) ಕೈಯಕರಣ-ಕೈಕರಣ (ಷ. ತ) (೨) ಸೂಪ-ತೊವ್ವೆಯನ್ನು-ಕಾರ-ಮಾಡುವಿಕೆ, (ಅಡಿಗೆ) ॥೪೪॥

ಮೂ॥ ತಾಯೆಚಿತ್ತೈಸಿಸ್ಸವನಕರದಾಯುತವನೇನೆಂಬೆಲೋಕದ । ಸ್ತ್ರೀಯರೊಳಗಿನಿತಿಲ್ಲರಚಿಸುವಶಾಕಪಾಕದಲಿ ॥ ಮಾಯವಿನುತಾತಿಳಿಯಲರಿಯದು । ಪಾಕವಿಂದೀಕ್ಷಿಸಲಸಕಲರ । ಸಾಯನವುಪರಿಪಕ್ವವಾಗಿದೆಪೇಳಲರಿಪೆಮಗೆ ॥೪೫॥

ಟೀಕೆ:— ತಾಯೆ-ಅಮ್ಮಾ, ಚಿತ್ತೈಸು-ಆಲಿಸು, ಇನ್ನು,ಅವನ

ಆಬಾಹುಕನ, ಕರದ-ಕೈಯ, ಆಯುತರ್ಮ-ಚಮತ್ಕಾರವನ್ನು, ಏನೆಂಬೆ ಏನೆಂದುಹೇಳಲಿ ! ಲೋಕದ-ಪ್ರಪಂಚದ, ಸ್ತ್ರೀಯರೊಳಗೆ-ಹೆಂಗಸರಲ್ಲಿ, ಇನಿತಿಲ್ಲ-ಇಷ್ಟಿಲ್ಲ, ರಚಿಸುವ-ಮಾಡುವ, (೧) ಶಾಕಪಾಕದಲಿ-ಅಡಿಗೆಯಲ್ಲಿ, ಇವನಮಯುವ್ರು- ಈ ಮಾಯವು, ತಾಂ-ತಾನು, ತಿಳಿಯಲ್-ತಿಳಿವುದಕ್ಕೆ, ಅರಿಯದು-ಆಗುವುದಿಲ್ಲ, ಉಪಾಯದಿಂದೆ-ಉಪಾಯವಾಗಿ, ಈಕ್ಷಿಸಲು-ನೋಡಲು, (೨) ಸಕಲರಸಾಯನವು- ಎಲ್ಲರಸಗಳೂ, ಪಕ್ವವಾಗಿದೆ-ಹದವಾಗಿದೆ, ಎಮಗೆ, ನಮಗೆ, ಪೇಳಲ್-ಹೇಳುವುದಕ್ಕೆ, ಅರಿದು-ಅಸಾಧ್ಯವು ||೪೫||

ತಾತ್ಪರ್ಯ:— ಅಮ್ಮಾ ಅವನ ಕೈ ಚಮತ್ಕಾರವನ್ನೆಷ್ಟೆಂದು ಹೇಳೋಣ ಲೋಕದಲ್ಲಿ ಯಾವಸ್ತ್ರೀಗೂ ಇಷ್ಟರಮಟ್ಟಿಗೆ ತಿಳಿವಳಿಕೆ-ಇಲ್ಲ, ಇಷ್ಟು ಚೆನ್ನಾಗಿ ಅಡಿಗೆಯಮಾಡುವರೀತಿಯು ಹೇಗೆ ಆತನಿಗೆ ಲಭಿಸಿತೋ ತಿಳಿಯಲಿಕ್ಕಾಗದು ಮಾಯವಾಗಿದೆ, ಪರೀಕ್ಷಿಸಿನೋಡಿದರೆ ಷಡ್ರಸಗಳೂ ತಕ್ಕ ಹದವಿಂದ ಪಕ್ವವಾಗಿ ಬಹಳ ರುಚಿಯಾಗಿರುವವದು, ಅದನ್ನು ನಾವು ವರ್ಣಿಸಲಾರೆವು ||೪೫||

ಟಿಪ್ಪಣಿ:—(೧) ಶಾಕದಪಾಕ-ಶಾಕ ಪಾಕ (ಷ. ತ) (೨) ಸಕಲವಾದ ರಸಾಯನ-ಸಕಲರಸಾಯನ (ವಿ. ಪೂರ್ವ. ಕ) ||೪೫||

ಮೂ|| ದಾಧಿಯರುಬಾಹುಕನಗುಣಗಳ | ಭೇದಿಸಿದರೊಂದೊಂದು
ಬಗೆಯುತ | ಲೋದರಿಗೆಬಿನ್ನೈಸೆನಿಶ್ಚೈಸಿದಳುದಮಯಂತಿ ||
ಆದೊಡವನಳನಹುದುಗುಣದಲಿ | ಭೇದಿಸುವೆನಿನ್ನೊಮ್ಮೆಯೆನುತ
ವಿ | ನೋದದಿಂದಾಡುವಕುಮಾರರಕರಸಿದಳುತರುಣಿ ||೪೬||

ಟೀಕೆ:—ದಾದಿಯರು-ದೂತಿಯರು, ಬಾಹುಕನ, ಗುಣಗಳ-ಸ್ವಭಾವದ, ಒಂದೊಂದುಬಗೆಯ-ಪ್ರತಿ ಒಂದರರೀತಿಯನ್ನೂ, ಭೇದಿಸಿದರು-ತಿಳಿದರು, (೨) ತಲೋದರಿಗೆ-ದಮಯಂತಿಗೆ, ಬಿನ್ನೈಸೆ-ವಿಜ್ಞಾಪಿಸಲು, ದಮಯಂತಿ, ನಿಶ್ಚೈಸಿದಳು-ಗೊತ್ತುಮಾಡಿದಳು, ಆದೊಡೆ-ಆದರೆ, ಅವ-ಅವನು, ನಳಂ-ನಳರಾಜನು, ಅಹುದು-ಹೌದು, ಇನ್ನೊಮ್ಮೆ-ಇನ್ನೊಂದುಸಾರಿ, ಗುಣದಲಿ-ಗುಣದಿಂದ, ಭೇದಿಸುವೆಂ-ಪರೀಕ್ಷಿಸುವೆನು, ಎನುತ-ಎಂಬದಾಗಿ, ತರುಣಿ-ದಮಯಂತಿಯೂ, ವಿನೋದದಿಂದ-ಸಂತೋಷದಿಂದ, ಆಡುವ-ಆಡುತ್ತಿರುವ, (೩) ಕುಮಾರರ-ಮಕ್ಕಳನ್ನು, ಕರಸಿದಳ್-ಕರತರಿಸಿದಳು, ||೪೬||

ತಾತ್ಪರ್ಯ:—ದಾಸಿಯರು ಆತನ ಗುಣಗಳೆಲ್ಲವನ್ನೂ ಪರೀಕ್ಷಿಸಿ ಬಂದು ದಮಯಂತಿಗೆ ತಿಳಿಸಲು ಎಲ್ಲವನ್ನೂ ಕೇಳಿ ದಮಯಂತಿಯು ಆಹಾ ? ಅವನು ನಳನೆಂಬುದಕ್ಕೆ ಸಂದೇಹವೇ ಇಲ್ಲ, ಆದರೂ ಇನ್ನೊಂದು ಸಾರಿ ಅವನ ಗುಣವನ್ನು ಪರೀಕ್ಷೆ ಮಾಡಿ ನೋಡುತ್ತೇನೆ, ಎಂಬುದಾಗಿ ಮನಸ್ಸಿನಲ್ಲಿ ನಿಶ್ಚಯಿಸಿ ಒಂದುಪಾಯವನ್ನಾಲೋಚಿಸಿ, ಅರಮನೆಯಲ್ಲಿ ವಿನೋದದಿಂದಾಡುತ್ತಿದ್ದ ತನ್ನ ಮಕ್ಕಳನ್ನು ಕರೆದಳು. ॥೪೬॥

ಟಿಪ್ಪಣಿ:—(೧) (ತ್ರ) ಧಾತ್ರೀ, (೨) ತಲ-ಅಂಗೈಯಂತೆ ತೆಳುವಾದ, ಉದರಿ-ಹೊಟ್ಟೆಯುಳ್ಳವಳು (ಅವ) ತಲದಂತೆ ಉದರವುಳ್ಳವಳು-ತಲೋದರಿ (ಬ. ವ್ರೀ. ಸ) ॥೪೬॥

ಮೂ॥ ತರಳರಿಗೆನೀರೆರೆದುಕಾಂಚನ । ವರದುಕೂಲವನಿತ್ತುದಿವ್ಯಾ ।
ಭರಣಭೂಷಿತರಾದತನಯರದಾದಿಯರಕೈಯ । ಪಿರಿದುಕಳುಹ
ಲುಬಾಣಸಿನಮಂ । ದಿರದಬಾಗಿಲಮುಂದೆಬಿಡೆಸಂ । ಚರಿಸಿಸುಳಿ
ದಾಡುವರಕಂಡನುನೃಪತಿಹರುಷಿತ ॥೪೭॥

ಟೀಕೆ:—ತರಳರಿಗೆ-ಮಕ್ಕಳಿಗೆ, ನೀರೆರೆದು - ನೀರನ್ನು ಹಾಕಿ, (೧) ಕಾಂಚನವರದುಕೂಲವಂ-ಚಿನ್ನದ ಜರತಾರಿಯುಳ್ಳ ಪಟ್ಟೆವಸ್ತ್ರವನ್ನು, ಇತ್ತು-ಕೊಟ್ಟು, (೨) ದಿವ್ಯಾಭರಣ ಭೂಷಿತರಾದ-ಶ್ರೇಷ್ಠವಾದ ಒಡವೆಗಳಿಂದ ಅಲಂಕೃತರಾದ, ತನಯರ-ಮಕ್ಕಳನ್ನು, ದಾದಿಯರ-ದೂತಿಯರ, ಕೈಯ-ಜೊತೆಯಲ್ಲಿ, ಪಿರಿದು-ಹೆಚ್ಚಾದ ಸಂಭ್ರಮದಿಂದ, ಕಳುಹಲು-ಕಳುಹಿಸಲು, ಬಾಣಸಿನ-ಅಡಿಗೆಯ, ಮಂದಿರದ-ಮನೆಯ, ಮುಂದೆ, ಬಿಡೆ-ಬಿಡಲು, ನೃಪತಿ-ದೊರೆಯು, ಸಂಚರಿಸಿ-ತಿರುಗಾಡುತ್ತಾ, ಸುಳಿದಾಡುವರ-ಕಾಣಿಸಿಕೊಳ್ಳುತ್ತಿರುವ ಮಕ್ಕಳನ್ನು, ಹರುಷಿಸುತ-ಸಂತೋಷಿಸುತ್ತಾ, ಕಂಡನು-ನೋಡಿದನು. ॥೪೭॥

ತಾತ್ಪರ್ಯ:—ತನ್ನ ಮಕ್ಕಳಿಗೆ ಅಭ್ಯಂಜನ ಸ್ನಾನಮಾಡಿಸಿ ದಿವ್ಯವಾದ ವಸ್ತ್ರಾಭರಣಗಳಿಂದಲಂಕರಿಸಿ ದಾದಿಯರಮೂಲಕವಾಗಿ ಅಡಿಗೆಯ ಮನೆಯ ಬಾಗಿಲಮುಂದೆ ಬಿಡುವಂತೆ ಹೇಳಿ ಕಳುಹಿಸಲು, ಅವರು ಅದೇರೀತಿಯಾಗಿ ಮಾಡಿದರು, ಈ ಬಾಲಕರು ಅಲ್ಲಿ ಸಂಚರಿಸುತ್ತಾ ನಳನ ದೃಷ್ಟಿಗೆ ಕಾಣಿಸಲು, ಅವನು ಅವರನ್ನು ನೋಡಿ ಸಂತೋಷಪಟ್ಟನು. ॥೪೭॥

ಟಿಪ್ಪಣಿ:—(೧) ವರವಾದ ದುಕೂಲ-ವರದುಕೂಲ (ವಿ. ಪೂ

ವ್ಯಾ. ಕ) ಕಾಂಚನದ ವರದುಕೂಲ-ಕಾಂಚನ ವರದುಕೂಲ (ಷ. ತ) ದುಕೂಲಕ್ಕೆ, (ದ್ಭ) ದುಗುಲ (೨) ದಿವ್ಯವಾದ ಆಭರಣ - ದಿವ್ಯಾಭರಣ (ವಿ. ಪೂರ್ವ. ಕ) ದಿವ್ಯಾಭರಣದಿಂದ ಭೂಷಿತರು-ದಿವ್ಯಾಭರಣ ಭೂಷಿತರು (ತೃ. ತ) ॥೪೭॥

ಮೂ॥ ತರಳರನುಪಿಡಿದೆತ್ತಿತೊಡೆಯೊಳ । ಗಿರಿಸಿಮುದ್ದಾಡಿದನು
ನೋಡುತ । ಸುರಿವಕಂಬನಿಗಳಲಿಬಾಹುಕಮರುಗುತಿರಲಂದು ॥
ಮರೆಯಜಾಲಂಧ್ರದಲಿಕಂಡಳು । ತರುಣಿನಳನೃಪನೀತನಹುದೆಂ।
ದುರುತರಪ್ರೇಮದಲಿಬಂದಳುಜನನಿಯರಮನೆಗೆ ॥೪೮॥

ಟೀಕೆ:—ತರಳರನು-ಮಕ್ಕಳನ್ನು, ಪಿಡಿದು - ಕರೆದುಕೊಂಡು, ಎತ್ತಿ-ಎತ್ತಿಕೊಂಡು, ತೊಡೆಯೊಳಗಿರಿಸಿ - ತೊಡೆಯಮೇಲೆ ಕುಳ್ಳಿರಿಸಿಕೊಂಡು, ಮುದ್ದಾಡಿದನು-ಮುದ್ದಿಸಿದನು, ಬಾಹುಕ - ಬಾಹುಕನು, ನೋಡುತ - ಮಕ್ಕಳನ್ನು ನೋಡುತ್ತಾ, ಸುರಿವ - ಸುರಿಯುತ್ತಿರುವ, ಕಂಬನಿಗಳಲಿ-ಕಣ್ಣೀರಿನಿಂದ, ಮರುಗುತಿರಲು-ವ್ಯಥೆಪಡುತ್ತಿರಲು, ಅಂದು-ಆಗ, (೧) ತರುಣಿ-ದಮಯಂತಿಯು, ಮರೆಯ-ಮರೆಯಾಗಿರುವ, ಜಾಲಂಧ್ರದಲಿ-ಗವಾಕ್ಷದಿಂದ, ಕಂಡಳು-ನೋಡಿದಳು (೨) ಈತಂ-ಇವನು, ನಳನೃಪಂ-ನಳರಾಜನು, ಅಹುದು-ಹೌದು, ಎಂದು-ಎಂಬದಾಗಿ, ಉರುತರದ-ಹೆಚ್ಚಾದ, ಪ್ರೇಮದಲಿ-ಪ್ರೀತಿಯಿಂದ, ಜನನಿಯ-ತಾಯಿಯ, ಅರಮನೆಗೆ, ಬಂದಳು. ೪೮॥

ತಾತ್ಪರ್ಯ:—ನಳನು ತನ್ನ ಮಕ್ಕಳನ್ನು ನೋಡಿದಕೂಡಲೆ ಪುತ್ರವಾತ್ಸಲ್ಯವುಂಟಾಗಿ ಅವರನ್ನೆತ್ತಿ ತೊಡೆಯಮೇಲೆ ಕುಳ್ಳಿರಿಸಿಕೊಂಡು, ನೆತ್ತಿಯನ್ನು ಮೂಸಿನೋಡಿ, ಮುದ್ದಾಡುತ್ತಾ, ಆನಂದಬಾಷ್ಪಗಳನ್ನು ಸುರಿಸುತ್ತಿರಲು, ದಮಯಂತಿಯು ಮರೆಯಾಗಿ ಗವಾಕ್ಷದಿಂದ ಇವನ್ನೆಲ್ಲಾ ನೋಡಿ ಇವನು ನಳನೇಸರಿ ಎಂದು ನಿರ್ಧರಿಸಿಕೊಂಡು, ಪರಮ ಪ್ರೇಮದಿಂದ ತನ್ನ ತಾಯಿಯಮನೆಗೆ ಬಂದಳು. ॥೪೮॥

ಟಿಪ್ಪಣಿ:—(೧) ಯೌವನವುಳ್ಳವಳು (ಅವ) (೨) ಇವನು, ಎಂಬುದಕ್ಕೆ ಗೌರವಾರ್ಥದಲ್ಲಿ, ಈತ, ಎಂದಾಗಿದೆ, ॥೪೮॥

ಮೂ॥ ತಾನಿಸ್ಸಂಶಯವಿಲ್ಲನೈಷಧ । ರಾಮನೀತನುಸೂತನಲ್ಲನಿ ।
ಡಾಯದಲಿಬಂದಿಹನುನೋಡುಕುರೂಪಿವೇಷದಲಿ ॥ ರಾಯಕೊ
ಗ್ಗಿದನುನಳನೃಪ । ನಾಯುವರುತೋರಿಸದಿಹನಿ । ಜಾ

ಯತವನಾಬಲ್ಲೆ ಕರೆಸೆಂದಳುಸರೋಜಮುಖಿ ॥೪೯॥

ಟೀಕೆ:—ತಾಯೆ-ಅಮ್ಮಾ, ಸಂಶಯವಿಲ್ಲ-ಅನುಮಾನವಿಲ್ಲ, ಈತನು, (೧) ನೈಷಧರಾಯನು-ನಳನು, ಸೂತನಲ್ಲ-ಸಾರಥಿಯಲ್ಲ, ವಿಡಾಯದಲಿ-ಮೋಸದಿಂದ, (೨) ಕುರೂಪಿವೇಷದಲಿ - ಅಲ್ಪವೇಷದಿಂದ, ಬಂದಿಹನು-ಬಂದಿರುವನು, ನೋಡು, ರಾಯರೊಳಗೆ-ದೊರೆಗಳಲ್ಲಿ, ಅಗ್ಗಳಿಯು - ಶ್ರೇಷ್ಠನಾದ, ನಳನೃಪ - ನಳರಾಜನೇ, ವಾಯವನು-ಕಪಟವನ್ನು, ತೋರಿಹನು - ತೋರಿಸುತ್ತಿರುವನು, ಇವನ, ನಿಜಾಯತವ-ನಿಜ್ಜಯಾಂಶವನ್ನು, ನಾ-ನಾನು, ಬಲ್ಲೆ - ತಿಳಿದಿದ್ದೇನೆ, ಕರಸು-ಬರಮಾಡು, (ಎಂಬದಾಗಿ) ಸರೋಜಮುಖಿ - ದಮಯಂತಿಯು, ಎಂದಳು-ಹೇಳಿದಳು. ॥೪೯॥

ತಾತ್ಪರ್ಯ:—ಅಮ್ಮಾ ಈತನು ನಳನಲ್ಲದೆ ಸಾರಥಿಯಲ್ಲ, ಕಪಟದಿಂದ ಈ ಕುರೂಪಿವೇಷವನ್ನು ತಳೆದು ಬಂದಿದ್ದಾನೆ, ರಾಜಾಧಿರಾಜನಾದ ನಳನು ಮಾಯೆಯಿಂದ ಹೀಗಿದ್ದಾನೆ, ಇವನ ಸಂದರ್ಭವನ್ನು, ನಾನೇ ಬಲ್ಲೆನು. ಏನೂ ಸಂದೇಹವಿಲ್ಲ. ಆತನನ್ನು ಕರೆಯಿಸು ಎಂದು ಹೇಳಿದಳು. ॥೪೯॥

ಟಿಪ್ಪಣಿ:—(೧) ನೈಷಧನಾದರಾಯ-ನೈಷಧರಾಯ, (ವಿ.ಪೂರ್ವ. ಕ) (೨) ಕುತ್ಸಿತವಾದರೂಪವುಳ್ಳವನು - ಕುರೂಪಿ (ಪ್ರಾ, ಬ. ವ್ರಿ.) ಕುರೂಪಿಯುವೇಷ-ಕುರೂಪಿವೇಷ, (ಷ. ತ) ವೇಷಕ್ಕೆ, (ದ್ಭ) ವೇಸ ॥೪೯॥

ಮೂ॥ ಧರಣಿಪತಿಯನುಮತದೊಳಾತನ । ಕರೆಸಿದಳುನಳನೃಪನ
ರಬಿಬಾಹುಕ । ನಿರದೆಬಂದನುರಾಜಮಂದಿರದಲ್ಲಿಕುಳ್ಳಿರಲು ॥ತರ
ಳೆಮಾಸಿದಸೀರೆಯುಲಿಗರ। ಗರುಕೆತಪ್ಪಿಸಚೆಲುವಿಕಲಿನಿಂದಿರಲುಕಂ
ಡನುಸತಿಯುತಲೆಬಾಗಿದನುಲಜ್ಜೆಯಲಿ ॥೫೦॥

ಟೀಕೆ:—ಅರಸಿ-ರಾಣಿಯು, ಧರಣಿಪತಿಯ-ಭೀಮರಾಜನ, ಅನುಮತದೊಳು-ಸಮ್ಮತಿಯಂತೆ, ಆತನ-ಆ (ಬಾಹುಕನಾದ) ನಳನೃಪನ-ನಳರಾಜನನ್ನು, ಕರೆಸಿದಳು-ಬರಮಾಡಿದಳು, ಬಾಹುಕಂ-ಬಾಹುಕನು, ಇರದೆ-ತಪ್ಪದೆ, ಬಂದನು, (೧) ರಾಜಮಂದಿರದಲ್ಲಿ - ಅರಮನೆಯಲ್ಲಿ, ಕುಳ್ಳಿರಲು-ಕೂತುಕೊಂಡಿರಲು, ತರಳೆ - ದಮಯಂತಿಯು, ಮಾಸಿದ-ಕೊಳೆಯಾಗಿರುವ, ಸೀರೆಯುಲಿ-ವಸ್ತ್ರವನ್ನು ಧರಿಸಿ, ಗರಗರು

ಕೆತಪ್ಪಿದ-ಅ ವರ್ಣ್ಯವಿಲ್ಲದ, ಚೆಲುವಿನಲಿ- ಸೌಂದರ್ಯದಿಂದ, ನಿಂದಿರಲು- ನಿಂತು ಕೊಂಡಿರಲು, ಸತಿಯ-ಕೋಡತಿಯನ್ನು, ಕಂಡನು - ನೋಡಿದನು, ಲಜ್ಜೆಯಲಿ-ನಾಚಿಕೆಯಿಂದ, (೨) ತಲೆಬಾಗಿದನು- ತಲೆಯನ್ನು ತಗ್ಗಿಸಿದನು. ॥೫೦॥

ತಾತ್ಪರ್ಯ:—ವಿದರ್ಭನರಾಣಿಯು ತನ್ನ ಪತಿಯ ಅಪ್ಪಣೆಯಂತೆ ಆ ಬಹುಕ ರೂಪನಾದ ನಳನನ್ನು ಹೇಳಿ ಕಳುಹಿಸಿ ಅರಮನೆಗೆ ಕರೆಯಿಸಿದಳು. ಆವನು ಅರಮನೆಯಲ್ಲಿ ಬಂದು ಕುಳಿತಿರಲು, ದಮಯಂತಿ ಮಲಿನವಾದ ಏಕವಸ್ತ್ರವನ್ನುಟ್ಟು, ಕಳೆಗುಂದಿ, ಸೌಂದರ್ಯರಹಿತಳಾಗಿ ಬಂದು ನಿಂತು ಕೊಂಡಳು, ನಳನು ಅವಳನ್ನು ನೋಡಿದಕೂಡಲೆ ನಾಚಿ ತಲೆಯನ್ನು ಬಗ್ಗಿಸಿದನು. ॥೫೦॥

ಟಿಪ್ಪಣಿ—(೧) ರಾಜನವುಂದಿರ-ರಾಜಮಂದಿರ (ಷ. ತ) (೨) ತಲೆಯಿಂಬಾಗಿದನು-ತಲೆವಾಗಿದನು (ಕಿ, ಸ) ತಲೆ + ಬಾಗು- ತಲೆವಾಗು (ಕ. ವ್ಯಾ. ಸೂ) ಬಕಾರಕ್ಕೆ, ವಕಾರಾದೇಶವುಬಂತು ॥೫೦॥

ಮೂ॥ ಹಿಮಕರಾನ್ವಯತಿಲಕವಸುಧಾ । ರಮಣ ಪುಣ್ಯೋದಯ
ಸುಭಾಷಿತ ! ವಿಮಲಗುಣಚಾರಿತ್ರ ತನ್ನು ತಸತ್ಯಸಂಚಾರ ॥ ಕು
ಮತಿಪುಷ್ಕರಮುನಿದನೇ । ವಿಕ್ರಮದರಿದ್ರತೆಬಂದುದೇ ! ಸಾಕ
ನಿತಭುಜಬಲಪಾಲಿಸೆಂದಳುಪತಿಗೆದಮಯಂತಿ ॥೫೧॥

ಟೀಕೆ:—(೧) ಹಿಮಕರಾನ್ವಯತಿಲಕ - ಚಂದ್ರವಾಶಕ್ಕೆ ಅಲಂಕಾರಪ್ರಾಯನಾದ, ವಸುಧಾರಮಣ-ಭೂಮಿಗೊಡೆಯನದ, ಪುಣ್ಯೋದಯ-ಸುಕೃತವುಳ್ಳ, ಸುಭಾಷಿತ-ಸತ್ಯವಾಕ್ಯುಳ್ಳ, ವಿಮಲಗುಣಚಾರಿತ್ರ-ಸದ್ಗುಣವೂ. ಪರಿಶುದ್ಧವಾದ ನಡತೆಯೂ ಉಳ್ಳವನಾದ, ಸತ್ಯಸಂಚಾರ-ನಿಶ್ಚಯವಾದ ದಾರಿಯಲ್ಲಿ ನಡೆಯತಕ್ಕ, (ನಳನೇ) (೨) ಕುಮತಿಪುಷ್ಕರ - ದುರ್ಬುದ್ಧಿಯುಳ್ಳ ಪುಷ್ಕರನು. ಮುನಿದನೆ - ಕೋಪಿಸಿದನೇ, (೩) ವಿಕ್ರಮದರಿದ್ರವು-ಪರಾಕ್ರಮಕ್ಕೆ ಹಾನಿಯು. ಬಂದುದೇ- ಬಂತೇ ಸಾಕು-ಬಿಡು, (೪) ಅಮಿತಭುಜಬಲ-ಅಪಾರವಾದಬಾಹುಬಲವುಳ್ಳವನೇ, ಪಾಲಿಸು-ರಕ್ಷಿಸು, (ಎಂಬದಾಗಿ) ದಮಯಂತಿ, ಪತಿಗೆ-ಗಂಡನಿಗೆ, ಎಂದಳು-ಹೇಳಿದಳು. ॥೫೧॥

ತಾತ್ಪರ್ಯ:—ಎಲೈ ನಳನೇ ನೀನು ಚಂದ್ರವಂಶಕೆ ಭೂಷಣನಾಗಿಯೂ, ಮಹಾ ಸತ್ಯಸಂಧನೆಂಬ ಕೀರ್ತಿಯನ್ನು ಪಡೆದವನಾದರೂ,

ಮನೋವಾಕ್ಕಾಯಗಳಲ್ಲಿಶುದ್ಧನಾದವರೂ, ಸದಾಚಾರವುಳ್ಳವನಾದವರೂ, ಆ ದುಷ್ಟನಾದ ಪುಷ್ಕರನು ಅನ್ಯಾಯವಾಗಿ ನಿನ್ನೊಡನೆ ದ್ವೇಷವನ್ನು ಸಾಧಿಸಿ ಮೋಸಮಾಡಿದುದರಿಂದ ಅಪಾರಮತಿಮನಾದ ನಿನಗೆ ಈ ದುರವಸ್ಥೆ ಬಂತು, ಇನ್ನು ಆ ದುಃಖವನ್ನು ಬಿಡು, ವಿಧಿಯೊಂದವೇ ಇದಕ್ಕೆಲ್ಲಾ ಕಾರಣವು. ಮಾತಕ್ಕದ್ದೇನಕು, ಈಗ ನನ್ನನ್ನು ಉದ್ಧಾರ ಮಾಡು, ಎಂದಳು. ॥೫೧॥

ಟಿಪ್ಪಣಿ:—(೧) ಹಿಮ-ತಂಪಾದ, ಕರ-ಕರಣವುಳ್ಳವನು (ಚಂದ್ರ) (ಬ. ವ್ರೀ. ಸ) ಹಿಮಕರನ ಅನ್ವಯ - ಹಿಮಕರಾನ್ವಯ (ಷ. ತ) ಅನ್ವಯದತಿಲಕ-ಅನ್ವಯತಿಲಕ (ಷ. ತ)(೨) ಕುತ್ಸಿತವಾದಮತಿಯುಳ್ಳವನು-ಕುಮತಿ (ಪ್ರಾ. ಬ. ವ್ರೀ) ಕುಮತಿಯಾದ ಪುಷ್ಕರ-ಕುಮತಿಪುಷ್ಕರ (ವಿ. ಪೂರ್ವ. ಕ) (೩) ವಿಕ್ರಮದದರಿದ-ವಿಕ್ರಮದರಿದ್ರ (ಷ. ತ) (೪) ಮಿತವಿಲ್ಲದುದು-ಅಮಿತ (ನಞ್. ತ) ಭುಜಗಳಬಲ-ಭುಜಬಲ (ಷ. ತ) ಅಮಿತವಾದಭುಜಬಲವುಯಾರಿಗೋಅವನು ಅಮಿತಭುಜಬಲನು (ಬ. ವ್ರೀ. ಸ) ॥೫೧॥

ಮೂ॥ ಮುನ್ನಮಾಡಿದಕರ್ಮಫಲಋತು | ಪರ್ಣನಲಿಸೇವೆಯನು
ಮಾಡುವು | ದುನ್ನತಿಯಲೀಬಂದುದೇ ಮಿಗೆಸಾರ್ವಭೌಮರಿಗೆ॥
ತನ್ನಪುಣ್ಯದಹಾನಿತಾನಿದ | ಕಿನ್ನು ಮಾಡುವುದೇನುಗುಣಸಂ |
ಪನ್ನರಕ್ಷಿಸುಸತಿಯನೆಂದೆರಗಿದಳುಪದಯುಗಕೆ ॥೫೨॥

ಟೀಕೆ:—ಋತುಪರ್ಣನಲಿ-ಋತುಪರ್ಣನ ಬಳಿಯಲ್ಲಿ, ಸೇವೆಯನು-ಶುಶ್ರೂಷೆಯನ್ನು, ಮಾಡುವುದು-ಮಾಡತಕ್ಕದ್ದು, ಮುನ್ನ-ಪೂರ್ವದಲ್ಲಿ, ಮಾಡಿದ, (೧) ಕರ್ಮಫಲ-ದುಷ್ಕರ್ಮದಫಲವು, ಉನ್ನತಿಯಲಿ-ಗೌರವದಿಂದ, ಈ ಬಂದುದೇ-ಈಗ ಬಂದದ್ದೇ, ಸಾರ್ವಭೌಮರಿಗೆ-ಚಕ್ರವರ್ತಿಗಳಿಗೆ, ಮಿಗೆ-ಲೇಸು, ತನ್ನ-ನನ್ನ, ಪುಣ್ಯದ-ಸುಕೃತದ, ಹಾನಿ-ನ್ಯೂನತೆಯು, ತಾಂ-ನಾನು, ಇದಕೆ-ಇದಕ್ಕೆ, ಇನ್ನು, ಮಾಡುವುದೇನು ? (೨) ಗುಣಸಂಪನ್ನ-ಸುಗುಣಶಾಲಿಯೇ, ಸತಿಯಂ - ಹೆಂಡತಿಯಾದ ನನ್ನನ್ನು, ರಕ್ಷಿಸು-ಕಾಪಾಡು, ಎಂದು, (೩)ಪದಯುಗಕೆ-ಕಾಲಿಗೆ, ಎರಗಿದಳು-ನಮಸ್ಕರಿಸಿದಳು. ॥೫೨॥

ತಾತ್ಪರ್ಯ:—ಚಕ್ರವರ್ತಿಯಾಗಿದ್ದರೂ ಈ ಋತುಪರ್ಣರಾಜನ ಸೇವಕನಾದುದು ಪ್ರಾಚೀನ ಕರ್ಮಫಲವಲ್ಲವೆ ! ಇಷ್ಟರಮಟ್ಟಿಗೆ ಗೌ

ರವನಿಂದ ಬಂದುವೇ ಚಕ್ರವರ್ತಿಗಳವುುಂದೆ ಹಾಸ್ಯಕ್ಕೆ ಗುರಿಯಾಗದೆ ಇರುವುದಕ್ಕೆ ಕಾರಣವಾಯ್ತು, ಹಾಗಲ್ಲದೆ ಸ್ವರೂಪವು ವ್ಯಕ್ತವಾಗಿದ್ದರೆ ಎಷ್ಟು ಅವಮಾನವಾಗುತ್ತಿತ್ತೋ ಕಾಣೆನು, ಇದೆಲ್ಲಾ ನನ್ನ ದುರದೃಷ್ಟವು, ಅದಕ್ಕೆ ಮಾಡತಕ್ಕದ್ದೇನು ? ಪತ್ನಿಯಾದ ನನ್ನನ್ನು ಸುಗುಣಿಯಾದ ನೀನು ಉಪೇಕ್ಷಿಸದೆ ರಕ್ಷಿಸಬೇಕು. ಎಂದು ನಮಸ್ಕರಿಸಿದಳು. ॥೩೨॥

ಟಿಪ್ಪಣಿ:—(೧) ಕರ್ಮದಫಲ - ಕರ್ಮಫಲ, (ಷ. ತ) (೨) ಗುಣದಿಂದ ಸಂಪನ್ನ - ಗುಣಸಂಪನ್ನ (ತೃ. ತ) (೩) ಪದಗಳ ಯುಗ-ಪದಯುಗ (ಷ. ತ) ॥೩೨॥

ಪು॥ ತುರುಬಹಿಡಿದೆತ್ತಿದನುಸತಿಯಳ ಸುರಿವಕಂಬನಿದೊಡೆದುನು
ಡಿದನುಬರಿದೆಚಿಂತಿಸಲೇಕೆಮಾನಿನಿಬಿಡುಮನೋವ್ಯಥೆಯ ॥ ಅರಿ
ಯದವಳೇನೀನುಲೋಕದ। ಸರಸಿಜಾಕ್ಷಿಯರೆಲ್ಲರಿಗೆವರ। ಗುರುವ
ಲಾನೀಬರಿದೆಯೆನ್ನನುಬಯಸಬೇಡೆಂದ ॥೩೩॥

ಟೀಕೆ:—ಸತಿಯಳ-ಹೆಂಡತಿಯ, ತುರುಬ- ತಲೆಯಕೂದಲಗಂಟನ್ನು, ಹಿಡಿದೆತ್ತಿದನು-ಹಿಡಿದುಕೊಂಡು ಮೇಲಕ್ಕೆತ್ತಿದನು, ಸುರಿವ-ಸೋರುತ್ತಿರುವ, (೧) ಕಂಬನಿದೊಡೆದು-ಕಣ್ಣೀರನ್ನೊರಸಿ,ನುಡಿದನು-ಹೇಳಿದನು, ಮಾನಿನಿ-ರಮಣಿಯೇ ! ಬರಿದೆ-ವ್ಯರ್ಥವಾಗಿ, ಚಿಂತಿಸಲೇಕೆ-ಆಲೋಚಿಸುವುದೇತಕ್ಕೆ ? (೨) ಮನೋವ್ಯಥೆಯ-ಮನಸ್ಸಿನದುಃಖವನ್ನು, ಬಿಡು, ನೀನು, ಅರಿಯದವಳೇ- ತಿಳಿಯದವಳೇ ! ಲೋಕದ-ಪ್ರಪಂಚದ, ಸರಸಿಜಾಕ್ಷಿಯರಿಗೆ-ಸ್ತ್ರೀಯರಿಗೆ, ಎಲ್ಲರಿಗೆ-ಸರ್ವರಿಗೂ (೩) ವರಗುರುವಲಾ-ದೊಡ್ಡಗುರುವಲ್ಲವೆ ! ನೀ-ನೀನು, ಬರಿದೆ-ಅನ್ಯಾಯವಾಗಿ, ಎನ್ನನು-ನನ್ನನ್ನು, ಬಯಸಬೇಡ-ಅಪೇಕ್ಷಿಸಬೇಡ, ಎಂದ-ಎಂಬದಾಗಿ ಹೇಳಿದನು. ॥೩೩॥

ತಾತ್ಪರ್ಯ:—ನಳನು ದಮಯಂತಿಯ ಮುಡಿಯನ್ನು ಹಿಡಿದೆತ್ತಿ ಹರಿಯುತ್ತಿರುವ ಕಣ್ಣೀರನ್ನೊರಸಿ, ಎಲೈ ಸುಂದರಿಯೇ ? ನೀನು ವಿವೇಕರಹಿತಳೇ ! ಲೋಕದ ಸ್ತ್ರೀಯರಿಗೆಲ್ಲಾ ದೊಡ್ಡ ಗುರುವಿನಂತಿದ್ದೀಯೆ, ನಿನಗೆ ನಾನು ಮಾಡಿದ ಅನ್ಯಾಯವನ್ನು ಎಣಿಸದೆ ಇನ್ನು ನೀನು ನನ್ನನ್ನು ಬಯಸ ಬಹುದೇ ? ಬಿಡು ಎಂದನು ॥೩೩॥

ಟಿಪ್ಪಣಿ:—(೧) ಕಂಬನಿಯಂ ತೊಡೆದು – ಕಂಬನಿ ದೊಡೆದು,

(ಕ್ರಿ. ಸ) (೨) ಮನಸ್ಸಿನವ್ಯಥೆ-ಮನೋವ್ಯಥೆ, (ಷ. ತ) (೩) ವರವಾದಗುರು-ವರಗುರು (ವಿ. ಪೂರ್ವ. ಕ)॥೫೩॥

ಮೂ॥ ನಯವಿಹೀನನುತಾನುಮನದಲಿ । ನೆನೆದುತಪ್ಪಿದನಿರ್ದಯನು
ಕಾ । ನನದಿನಿನ್ನನುಬಿಸುಟುಕಳೆದದುರಾತ್ಮಬಾಹಿರನು ॥ ನೆನೆ
ವರೇಬಿಡುಮರುಳೆನಿನಗಿಂದಿ । ನಲಿಮಾಳ್ಪೆಪುನಸ್ಸ್ವಯಂವರ । ಮ
ನಕೆಸರಿಬಂದವನನೀನೊಲಿಸೆಂದನಾನೃಪತಿ ॥೫೪॥

ಟೀಕೆ:—ತಾನು-ನಾನು, (೧) ನಯವಿಹೀನನು - ನ್ಯಾಯರಹಿತನು, ಮನದಲಿ-ಮನಸ್ಸಿನಲ್ಲಿ, ನೆನೆದು-ಧ್ಯಾನಿಸಿಯೂ, ತಪ್ಪಿದ - ತಪ್ಪಿಹೋದ, (೨) ನಿರ್ದಯನು-ದಯಾರಹಿತನು, ಕಾನನದಿ-ಅರಣ್ಯದಲ್ಲಿ, ನಿನ್ನನು-ನಿನ್ನನ್ನು, ಬಿಸುಟುಕಳೆದ-ಬಿಟ್ಟುಬಿಟ್ಟ (೩) ದುರಾತ್ಮ-ದುಷ್ಟನಾದ, ಬಾಹಿರನು-ನೀಚನು, ಮರುಳೆ-ಹುಚ್ಚಳೇ, ನೆನೆವರೇ-ನನ್ನನ್ನು ಸ್ಮರಿಸಬಹುದೇ ! ಬಿಡು-ಸುಮ್ಮನಿರು, ನಿನಗೆ, ಇಂದಿನಲಿ-ಈಗ ಪುನಃ ಸ್ವಯಂವರವ-ಪುನರ್ವಿವಾಹವನ್ನು, ಮಾಳ್ಪೆ-ಮಾಡುವೆನು, ನೀಂ ನೀನು, ಮನಕೆ-ಮನಸ್ಸಿಗೆ, ಸರಿಬಂದವನಂ-ಒಪ್ಪಿದವನನ್ನು, ಒಲಿಸು-ವರಿಸು, (ಎಂಬದಾಗಿ) ಆನೃಪತಿ-ದೊರೆಯು, ಎಂದಂ-ಹೇಳಿದನು ॥

ತಾತ್ಪರ್ಯ:—ಎಲೌ ದಮಯಂತಿಯೇ ! ನಾನು ಬಹು ಅನ್ಯಾಯಕಾರನು, ಮನಸ್ಸಿನಲ್ಲಿ ನಿನ್ನನ್ನು ಸ್ಮರಿಸುತ್ತಿದ್ದರೂ ಮರೆದವನಂತೆ ಕಾಡಿನಲ್ಲಿ ಬಿಟ್ಟುಹೋದ ದುಷ್ಟವಂಚಕನು, ಇಂತಹನನ್ನನ್ನು ನೀನು ಮನದಲ್ಲಾದರೂ ಇನ್ನು ಸ್ಮರಿಸಬಹುದೇ ! ಬಿಡು, ಈಗ ನೀನಗೆ ಪುನಃ ಸ್ವಯಂವರವನ್ನು ಮಾಡಿಸುವೆನು, ನಿನಗೆ ಬೇಕಾದವರನ್ನು ವರಿಸಿ ಸುಖವಾಗಿರು ನನ್ನನ್ನು ಪುನಃ ನೀನು ಸೇರಬೇಕಂದು ಆಲೋಚಿಸುವುದು ನ್ಯಾಯವಾದುದಲ್ಲ ಎಂದು ಹೇಳಿದನು ॥೫೪॥

ಟಿಪ್ಪಣಿ:— (೧) ನಯದಿಂವಿಹೀನನು-ನಯವಿಹೀನನು (ತೃ. ತ) (೨) ದಯವಿಲ್ಲದವನು (ಪ್ರಾ, ಬ. ವ್ರೀ.) (೩) ದುಷ್ಟವಾದ ಆತ್ಮವುಳ್ಳವನು-ದುರಾತ್ಮ (ಪ್ರಾ. ಬ. ವ್ರೀ) ॥೫೪॥

ಮೂ॥ ಎನಲುಕರ್ಣಂಗಳಿಗೆಸಬಳದ । ಮೊನೆಗಳಿರಿವಂತಾಗೆಸತಿಕ
ಣ್ಣಿನಲಿತುಂಬಿದಜಳದಕವನುಹರಹರಶಿವಾಯೆನುತ ॥ ಎನಗೆಯಿಂ
ನುಪುನಸ್ಸ್ವಯಂವರ । ಮನದೊಳಿಂಟಿನೀನುಬಗದೆ । ಕೆಂನುತ
ವಾರ್ತೆಯಲಿಕಲ್ಪಿಸಿನೆಕೇಳೆಂದಳಿಂದುಮುಖಿ ॥೫೫॥

ಟೀಕೆ:— ಎನಲು-ಎಂಬದಾಗಿ ಹೇಳಲು, ಕರ್ಣಂಗಳಿಗೆ-ಕಿವಿಗೆ ಸಬಳದ-ಭಲ್ಲೆಯ, ಮೊನೆಗಳ್-ತುದಿಗಳು, ಇರಿದಂತಾಗೆ - ಚುಚ್ಚಿದ ಹಾಗಾಗಲು, ಸತಿ-ದಮಯಂತಿಯು, ಹರಹರ ಶಿವಾಯೆನುತ-ಅಯ್ಯೋ ದೇವರೇ ಎನ್ನುತ್ತಾ, ಕಣ್ಣಿನಲಿ (೧) ಉದಕವನು-ನೀರನ್ನು, ತುಂಬಿದ ಳು-ಸುರಿಸಿದಳು, ಎನಗೆ-ನನಗೆ, ಇನ್ನು-ಇನ್ನುಮೇಲೆ, ಪುನಃಸ್ವಯಂವರ-ಪುನರ್ವಿವಾಹವು, ಮನಸೊಳ್-ಮನಸ್ಸಿನಲ್ಲಿ, ಉಂಟೇ- ಇರುವುದೇ, ನೀನು, ಬರಬೇಕು-ಬರಲಿ, ಎನುತ-ಎಂಬದಾಗಿ ವಾರ್ತೆಯ-ಈಸುದ್ದಿಯನ್ನು, ಕಲ್ಪಿಸಿದೆ-ಹುಟ್ಟಿಸಿದೆನು, ಕೇಳ್-ಕೇಳು, (ಎಂಬದಾಗಿ) (೨) ಇಂದುಮುಖಿ-ದಮಯಂತಿಯು, ಎಂದಳು-ಹೇಳಿದಳು ॥೫೫

ತಾತ್ಪರ್ಯ:— ನಳನು ಆಡಿದಮಾತುಗಳನ್ನು ಕೇಳಿದ ಕೂಡಲೆ ದಮಯಂತಿಯು ಕಿವಿಯಲ್ಲಿ ಶೂಲವನ್ನು ನಾಟಿದಂತೆ ಕಠೋರವಾಗಲು ಮತ್ತಷ್ಟು ಹೆಚ್ಚಾದ ದುಃಖದಿಂದ ಕಣ್ಣಿನಲ್ಲಿ ನೀರನ್ನು ಸುರಿಸುತ್ತಾ, ಎಲೈ ರಮಣನೇ-ನನಗೆ ಪುನಃ ಸ್ವಯಂವರವು ಬೇರೆ ಆಗಬೇಕೆಂಬ ಮನವುಂಟೇ ! ಇಂತಹಮಾತನ್ನಾಡಬಹುದೇ ! ಸುಮ್ಮನೆನೀನು ಬರುರುವುದಿಲ್ಲ, ಇದಕ್ಕೇನಾದರೂ ಉಪಾಯವನ್ನು ಮಾಡಬೇಕೆಂದಾಲೋಚಿಸಿ, ನೀನು ಇಲ್ಲಿಗೆ ಬರಲೆಂದು ಈ ಸುದ್ದಿಯನ್ನು ಹುಟ್ಟಿಸಿದೆನು ಅನ್ಯಥಾಭಾವಿಸಕೂಡದು ಎಂದು ಹೇಳಿದಳು ॥೫೫॥

ಟಿಪ್ಪಣಿ:— (೧) ಉದ, ದಕ, ಕ, ಎಂಬರೂಪಗಳೂ ಉಂಟು, (೨) ಇಂದುವಿನಂತೆ ಮುಖವುಳ್ಳವಳು-ಇಂದುಮುಖಿ (ಬ. ವ್ರೀ) ॥೫೫॥

ಮ॥ ನ ಬಿದನುಲೇಸಾಗಿಮನದೊಳ । ಗಿಂಬುಗೊಂಡುದುವಿಕೃತಿ
ರೂಪಿನ । ಡೊಂಬಿಯೇಕಿದುಸಕಲಧರ್ಮವಿಚಾರವಂತರಿಗೆ ॥
ಅಂಬುಜಾಕ್ಷನರೂಪಿನಲಿಪ್ರತಿ । ಬಿಂಬನಲ್ಲವೆನೀನುಬಯಲಾ ।
ಡಂಬರದನುಡಿಯೇಕೆಸಾಕಿನ್ನೆಂದಳಿಂದುಮುಖಿ ॥೫೬॥

ಟೀಕೆ:—ಲೇಸಾಗಿ-ಚೆನ್ನಾಗಿ, ನಂಬಿದನು-ಒಪ್ಪಿದನು, ಮನದೊಳಗೆ, ಇಂಬು ಗೊಂಡುದು-ನೆಲಸಿತು, (೧) ವಿಕೃತಿರೂಪಿನ-ವಿಕಾರಾಕಾರದ, ಡೊಂಬಿ-ಕಲ್ಪನೆಯು, ಇದು (೨) ಸಕಲಧರ್ಮವಿಚಾರವಂತರಿಗೆ-ಸಮಸ್ತ ಧರ್ಮಗಳನ್ನೂ ಬಲ್ಲವರಿಗೆ, ಏಕೆ-ಯಾತಕ್ಕೆ ! ಅಂಬುಜಾಕ್ಷನ-ವಿಷ್ಣುವಿನ, ರೂಪಿನಲಿ-ಆಕಾರದಿಂದ, ನೀನು, ಪ್ರತಿಬಿಂಬಿನಲ್ಲವೆ-ಪ್ರತಿಬಿಂಬವನ್ನು ತೋರಿಸುತ್ತಿರುವವನಲ್ಲವೆ ! ಬಯಲಾಡಂಬರದ

ವ್ಯರ್ಥವಾದ ವಿಜೃಂಭಣೆಯುಳ್ಳ, ನುಡಿ-ಮಾತು ಏಕೆ-ಯಾತಕ್ಕೆ, ಇನ್ನು, ಸಾಕು-ಬಿಡು (ಎಂಬದಾಗಿ) ಇಂದುಮುಖಿ-ದಮಯಂತಿಯು, ಎಂದಳು॥

ತಾತ್ಪರ್ಯ:— ದಮಯಂತಿಯಾಡಿದ ಮಾತನ್ನು ಕೇಳಿ ನಳನು ತನ್ನ ಮನದನುಮಾನವನ್ನು ಬಿಟ್ಟನು, ಆಕೆಯಾಡಿದಮಾತು ಅವನ ಮನಸ್ಸಿಗೆ ಸತ್ಯವೆಂದು ಚೆನ್ನಾಗಿನಾಟಿತು, ಪೂರ್ವದಂತೆ ಪ್ರೇಮವನ್ನು ತೋರಿಸಿದನು, ಎಲೈ ಕಾಂತನೇ ! ನೀನು ಸಕಲಧರ್ಮಗಳನ್ನೂ ಅರಿತ ವನಲ್ಲವೇ! ಈ ವಿಕಾರವೇಷವನ್ನೇಕೆ ತಳೆದೆ, ಸಾಕ್ಷಾದ್ವಿಷ್ಣುವಿನಂತೆ ಇರುವನಿನಗೆ ಈ ಆಡಂಬರವುಬೇಕೆ ವ್ಯರ್ಥವಾದ ಮಾತುಗಳನ್ನಾಡಿದು ದೇಕೆ ! ಎಂದು ಕೇಳಿದಳು ॥೫೬॥

ಟಿಪ್ಪಣಿ:— (೧) ವಿಕೃತಿಯುಳ್ಳರೂಪು (ವಿ. ಪೂರ್ವ. ಕ) (೨) ಸಕಲವಾದಧರ್ಮ-ಸಕಲಧರ್ಮ (ವಿ.ಪೂರ್ವಕ) ಸಕಲಧರ್ಮಗಳವಿಚಾರವು ಳ್ಳವರಾರೋ ಅವರು ಸಕಲಧರ್ಮವಿಚಾರವಂತರು (ಬ. ವ್ರೀ) ॥೫೬॥

ಮೂ॥ ನಡೆಯುತೆಡವಿದಪಟ್ಟದಾನೆಯ । ಮಿಡಿದುಕೊಲ್ಲುವರುಂಟೆ
ನಂಬಿದ । ಮಡದಿಯಲ್ಲವೆತಾನುಬಿರುನುಡಿಯೇಕೆನಳನೃಪತಿ ॥ ಅ
ಡವಿಯಲಿಕಡುನೊಂದುದೇಹವ । ಬಿಡದೆಯುಳುಹಿದೆನಿನ್ನಪ್ರಾ
ಣದ । ಗೊಡವೆಯಿನ್ನೇಕೆನುತಕಂಬನಿದುಂಬಿದಳುತರಳೆ ॥೫೭॥

ಟೀಕೆ:— ನಡೆಯುತ, ಎಡಹಿದ-ಎಡವಿದ, ಪಟ್ಟದಾನೆಯನ್ನು, ಮಿಡಿದು-ಗುಂಡಿನಿಂದ ಹೊಡೆದು, ಕೊಲ್ಲುವರ್-ಸಂಹರಿಸುವರು, ಉಂ ಟೆ-ಇರುವರೇ ! ನಳನೃಪತಿ-ನಳರಾಜನೆ, ತಾನು-ನಾನು, ನಂಬಿದ-ನಿ ನ್ನನ್ನು ನಂಬಿಕೊಂಡಿರುವ, ಮಡದಿಯಲ್ಲವೆ-ಹೆಂಡತಿಯಲ್ಲವೆ ! (೧) ಬಿರುನುಡಿ-ಕಠಿಣೋಕ್ತಿಯು, ಏಕೆ- ಯಾತಕ್ಕೆ? ಅಡವಿಯಲಿ-ಕಾಡಿನಲ್ಲಿ, (೨) ಕಡುನೊಂದು-ಬಹಳವಾಗಿ ವ್ಯಥೆಪಟ್ಟು, ದೇಹವ-ಶರೀರವನ್ನು, ಬಿಡದೆ-ತ್ಯಾಗಮಾಡದೆ, ಉಳುಹಿದೆಂ-ಉಳಿಸಿಕೊಂಡೆನು, ಇನ್ನು-ಮುಂ ದೆ, ಪ್ರಾಣದಗೊಡವೆ-ಪ್ರಾಣದತಂಟೆಯು,ಇನ್ನೇಕೆ-ಇನ್ನುಯಾತಕ್ಕೆ ? ಎನುತ, ತರಳೆ-ದಮಯಂತಿಯು, ಕಂಬನಿದುಂಬಿದಳು - ಕಣ್ಣೀರನ್ನು ಸುರಿಸಿದಳು. ॥೫೭॥

ತಾತ್ಪರ್ಯ:—ನಡೆವಾಗ ಎಡವಿದಮಾತ್ರಕ್ಕೆ ಪಟ್ಟದಾನೆಯನ್ನು ಹೊಡೆದುಕೊಲ್ಲಬಹುದೆ! ಎಲೈ ನಳನೇ ನಾನು ನಿನ್ನನ್ನೇ ಆಶ್ರಯಿಸಿ ಕೊಂಡಿರುವವಳಲ್ಲವೆ ! ಅರಣ್ಯದಲ್ಲಿ ಅಂತಹ ಕಷ್ಟಗಳಲ್ಲಿಯೂ ಆಸೆ

ಯಿಂದ ಈ ದೇಹವನ್ನುಳಿಸಿಕೊಂಡು ಮುಂದೆ ನಿನ್ನಿಂದ ಬಹುವಾಗಿ ಸುಖವನ್ನನುಭವಿಸಬಹುದೆಂದು ಭಾವಿಸಿ ಜೀವಿತಳಾಗಿದ್ದೆನು. ನೀನು ಇಂತಹ ಕಠಿಕೋಕ್ತಿಯನ್ನಾಡಿದಮೇಲೆ ಈ ಪ್ರಾಣದಮೇಲೆ ಇನ್ನು ನನಗೆ ಆಸೆ ಯೇತಕ್ಕೆ? ಈಗಲೇ ತ್ಯಾಗಮಾಡುವುದೇ ಸರಿ : ಎಂದು ರೋದಿಸಿದಳು. ||೩೭||

ಟಿಪ್ಪಣಿ:—(೧) ಚಿಟ್ಟೆತುನುಡಿ-ಬಿರುನುಡಿ (ವಿ. ಪೂರ್ವ. ಕ) ಚಿಟ್ಟೆತು ಎಂಬ ಗುಣವಾಚಕಕ್ಕೆ ಸಮಾಸದಲ್ಲಿ, ಬಿರು, ಎಂಬಾದೇಶವು ಬಂತು, (೨) ಕಡಿದು ನೊಂದು-ಕಡುನೊಂದು (ಕ್ರಿ. ಸ) ಕಡಿದು ಎಂಬುದಕ್ಕೆ ಸಮಾಸನಲ್ಲಿ, ಕಡು, ಎಂಬಾದೇಶವು ಬಂದಿದೆ. ||೩೭||

ಮೂ|| ನೋಯುತಿಂತಿಹಸತಿಯನಾಡಲು | ನ್ಯಾಯವೇನಿದುನಿನಗೆ
ಕೇಳೆಲೆ | ರಾಯನಿನ್ನನುನೋಡೆಕಳುಹಿದೆಚರರದಿಕ್ಕಿನಲಿ ಮಾ
ಯರೂಪನುಕಾಣಲಾರದೆ | ಬಾಯಬಿಡುತಿರಲಿನ್ನಯೋಧ್ಯದ |
ರಾಯನಲಿನೂತನದಸಾರಥಿಯೆನಲುಕೇಳಿದೆನು ||೩೮||

ಟೀಕೆ:—ಎಲೆರಾಯ—ದೊರೆಯೇ! ಕೇಳ್-ಕೇಳು, ಇಂತು-ಹೀಗೆ, ನೋಯುತೆ-ವ್ಯಥೆಪಡುತ್ತಾ, ಇಹ-ಇರುವ, ಸತಿಯಂ-ಹೆಂಡತಿಯನ್ನು, ಆಡುವುದು-ಮಾತಾಡತಕ್ಕದ್ದು, ಇದು, ನ್ಯಾಯವೇಂ-ನ್ಯಾಯವಾದದ್ದೇನು? ನಿನ್ನನ್ನು-ನಿನ್ನನ್ನು, ನೋಡೆ-ಹುಡುಕಲು, ಚರರ-ಆಳುಗಳನ್ನು, ದಿಕ್ಕಿನಲಿ-ನಾನಾದಿಕ್ಕುಗಳಿಗೂ, ಕಳುಹಿದೆ-ಕಳುಹಿಸಿದೆನು, (೧) ಮಾಯರೂಪನು-ಮರೆಯಿಸಿಕೊಂಡಿರುವ ನಿನ್ನ ರೂಪವನ್ನು, ಕಾಣಲಾರದೆ, ಬಾಯಬಿಡುತಿರಲು – ತೊಂದರೆಪಡುತ್ತಿರಲು, ಇನ್ನು, (೨) ಅಯೋಧ್ಯದರಾಯನಲಿ – ಅಯೋಧ್ಯಾದೇಶದದೊರೆಯಬಳಿಯಲ್ಲಿ, ನೂತನದ-ಹೊಸದಾಗಿ, ಸಾರಥಿ-ಸಾರಥಿಯಾಗಿರುವನು, ಎನಲು-ಎಂದುಹೇಳಲು, ಕೇಳಿದೆನು-ತಿಳಿದೆನು. ೩೮||

ತಾತ್ಪರ್ಯ:—ಎಲೈ ರಾಜನೆ ನಿನಗಾಗಿಯೇ ಸರ್ವದಾ ವ್ಯಥೆಪಡುತ್ತಿರುವ ನಿನ್ನ ಪತ್ನಿಯಾದ ನನ್ನನ್ನು ಹೀಗೆ ತಿರಸ್ಕರಿಸಿ ಮಾತನಾಡುವುದು ನಿನಗೆ ನ್ಯಾಯವೇ! ನಿನ್ನನ್ನು ಹುಡುಕುವುದಕ್ಕಾಗಿ ಚಾರರನ್ನು ಎಲ್ಲ ದಿಕ್ಕುಗಳಿಗೂ ಕಳುಹಿಸಿದೆನು, ನಿನ್ನ ಮಾಯಾವೇಷವನ್ನು ತಿಳಿದುಕೊಳ್ಳಲಾರದೆ ಅವರೆಲ್ಲರೂ ವಿಮುಖರಾಗಿರಲು ದೈವವಶಾತ್ ನೀನು ಋತುಪರ್ಣರಾಜನ ಬಳಿಯಲ್ಲಿ ಸಾರಥಿಯಾಗಿರುವಂತೆ ತಿಳಿದು ಬಂದು

ಬೃಹುಕಶ್ರೇಷ್ಠನಿಂದ ಕಂಡು ಹಿಡಿದೆವೆಂದು, ಕೆಲವರು ಬ್ರಾಹ್ಮಣರು ನನಗೆ ಹೇಳಿದರು. ॥೫೮॥

ಟಿಪ್ಪಣಿ:—(೧) ಮಾಯಾವುಳ್ಳರೂಪ-ಮಾಯಾರೂಪ (ವಿ. ಪೂರ್ವ. ಕ) (೨) ಇಲ್ಲಿ ಸ್ವಾಮಿಸಂಬಂಧದಲ್ಲಿ ಷಷ್ಠಿ ಬಂದಿದೆ, ರಾಜ್ಯ ಎಂಬುದಕ್ಕೆ (ತ್ಸ) ರಾಜ್ಞ ॥೫೮॥

ಮೂಲ। ಆಗಭೂಸುರಪತಿಸುದೇವನ । ಬೇಗಲಟ್ಟಿದೆನಿನ್ನ ಬಳಿಗೆಸ ।
ರಾಗದಿಂದುತ್ತರಕೆಪ್ರತ್ಯುತ್ತರವಹೇಳ್ದಿರಲು। ಈಗಲಿದುಸಂಶಯ
ವೆತಾನದ । ಕಾಗಿಕರೆಸಿಸ್ವಯಂವರವರಿನ । ಗಾಗಿಪೇಳಿದೆನದರ
ತಪ್ಪೇನೆಂದಳಿಂದುಮುಖಿ ॥೫೯॥

ಟೀಕೆ:—ಆಗ (೧) ಭೂಸುರಪತಿಸುದೇವನ-ಬ್ರಾಹ್ಮಣಶ್ರೇಷ್ಠನಾದ ಸುದೇವನನ್ನು, ನಿನ್ನ ಬಳಿಗೆ-ನಿನ್ನ ಸಮೀಪಕ್ಕೆ, ಬೇಗಲಿ- ಬೇಗನೆ, ಅಟ್ಟಿದೆ-ಕಳುಹಿಸಿದೆನು, ಸರಾಗದಿಂದ-ತಡೆಯಿಲ್ಲದ, ಉತ್ತರಕೆ-ಮಾತಿಗೆ, (೨)ಪ್ರತ್ಯುತ್ತರವ-ಬದಲನ್ನು, ಪೇಳ್ದಿರಲು-ಹೇಳಲು, ಈಗಲಿ-ಈಗ, ಇದು-ಈ ಮಾತು, ಸಂಶಯವೆ- ಅನುಮಾನವೇ, ತಾನ-ನಾನು, ಅದಕಾಗಿ-ಆದಕಾರಣ, ಕರಸಿ-ಕರೆಸಿ, ನಿನಗಾಗಿ - ನಿನಗಾಗಿಯೇ, ಸ್ವಯಂವರವ-ಪುನರ್ವಿವಾಹ ವಿಷಯವನ್ನು, ಪೇಳಿದೆ-ಹೇಳಿದೆನು, ಇದರ-ಈಮಾತಿನ, ತಪ್ಪೇನು-ದೋಷವೇನು (ಎಂಬದಾಗಿ) ಇಂದುಮುಖಿ-ದಮಯಂತಿಯು, ಎಂದಳು-ಹೇಳಿದಳು. ॥೫೯॥

ತಾತ್ಪರ್ಯ:—ಆಗ ಸುದೇವನೆಂಬ ಬ್ರಾಹ್ಮಣನನ್ನು ಕರೆಸಿ ನಿನ್ನನ್ನು ಪರೀಕ್ಷಿಸಿ ತಿಳಿದುಕೊಳ್ಳುವುದಕ್ಕನುಕೂಲವಾಗುವಂತೆ ಕೆಲವು ಮಾತುಗಳನ್ನು ಹೇಳಿ ನಿನ್ನ ಬಳಿಗೆ ಕಳುಹಿಸಿದೆನು. ಆ ಮಾತುಗಳನ್ನು ಸುದೇವನು ಹೇಳಲು ಅವಕ್ಕೆ ನೀನು ತಕ್ಕ ಉತ್ತರವನ್ನು ಹೇಳಿದ್ದರಿಂದ ನೀನೇ ನಳನೆಂದು ತಿಳಿದು, ನೀನು ಇಲ್ಲಿಗೆ ಬರುವುದಕ್ಕೇನುಪಾಯವೆಂದು ಹುಡುಕಿ ನೋಡಿ ಬೇರೆ ಏನೂ ತೋರದೆ ಸ್ವಯಂವರದ ಸುದ್ದಿಯನ್ನು ಕಳ್ಸಿಸಿದೆನು, ಇದೆಲ್ಲವನ್ನು ನಿನಗಾಗಿಯೇ ಮಾಡಿದೆನಲ್ಲದೆ, ನಿನ್ನನ್ನು ಬಿಟ್ಟು ಮತ್ತೊಬ್ಬನನ್ನು ವರಿಸಬೇಕೆಂದಲ್ಲ, ಇದು ಸತ್ಯವು ? ಅನ್ಯಥಾ ಆಲೋಚಿಸಬೇಡ, ಇದರಲ್ಲಿ ಏನು ತಪ್ಪು ಎಂದಳು. ॥೫೯॥

ಟಿಪ್ಪಣಿ:—(೧) ಭೂಸುರರಪತಿ-ಭೂಸುರಪತಿ (ಷ. ತ) ಭೂಸುರಪತಿಯಾದ, ಸುದೇವ-ಭೂಸುರಪತಿಸುದೇವ (ವಿ. ಪೂರ್ವ. ಕ)

(೨) ಪ್ರತಿ + ಉತ್ತರ - ಪ್ರತ್ಯುತ್ತರ (ಯಣ್. ಸಂ) ಪ್ರಾ. ಕರ್ಮ. ಸ. ||೫೯||

ಮೂ|| ಜನನುತನೆಕೇಳಾದಿಯುಲಿಯೌ|ವ್ವನವನಿನಗೊಪ್ಪಿಸಿದೆನಲ್ಲದೆ|
ತನುಮನೋವಾಕ್ಕಾಯಕರ್ಮಂಗಳಲಿತಾನೆರಡ || ನಿನಗೆನೆನೆದವಳ
ಲ್ಲನೀನೇ | ನನಗೆಗತಿಯೆಂದಿಹುದನರಿಯಾ | ಜನಪಪಕ್ಷಿಸುಕೈ
ವಿಡಿದುಸಲಹೆಂದಳಿ ದುಮುಖಿ ||೬೦||

ಟೀಕೆ:—ಜನನುತನೆ-ಪ್ರಖ್ಯಾತನಾದನಳನೇ, ಕೇಳ್ - ಕೇಳು, ಆದಿಯುಲಿ-ಮೊದಲೇ, ನಿನಗೆ, (೨) ಯೌವ್ವನವ-ನನ್ನ ಯೌವನವನ್ನು, ಒಪ್ಪಿಸಿದೆನಲ್ಲದೆ-ಸಮರ್ಪಿಸಿದೆನಲ್ಲದೆ, ತನುಮನೋವಾಕ್ಕಾಯಕರ್ಮಂಗಳಲಿ-ಕಾಯದಿಂದಲಾಗಲಿ, ಮನಸ್ಸಿನಿಂದಾಗಲಿ, ವಚನದಿಂದಾಗಲಿ, ತಾಂ-ನಾನು, ಎರಡ-ಭೇದವನ್ನು ನಿನಗೆ, ನೆನೆದವಳಲ್ಲ-ಚಿಂತಿಸಲಿಲ್ಲ, ಜನಪ-ದೊರೆಯೇ, ನೀನೇ, ನನಗೆ, ಗತಿ-ದಿಕ್ಕು. ಎಂದು-ಎಂಬದಾಗ, ಇಹುದ-ಇರುವುದನ್ನು, ಅರಿಯಾ-ಕಾಣೆಯಾ, (೩) ಕೈವಿಡಿದು - ಕೈಯನ್ನು ಹಿಡಿದು, ಸಲಹು-ಕಾಪಾಡು (ಎಂಬದಾಗಿ) ಇಂದುಮುಖಿ - ದಮಯಂತಿಯು, ಎಂದಳು, ||೬೦||

ತಾತ್ಪರ್ಯ:—ಎಲೈ ನಳರಾಜೇಂದ್ರನೆ ! ನಾನು ಮೊದಲೇ ನನ್ನ ಯೌವನವನ್ನು ನಿನಗೆ ಸಮರ್ಪಿಸಿದ್ದೇನಲ್ಲದೆ ದೇಹದಿಂದಲೂ, ಮನಸಿನಲ್ಲಿಯೂ, ಮಾತಿನಿಂದಲೂ, ಅಥವಾ ಕೃತ್ಯದಿಂದಲೂ ಅಂದರೆ - ಕಾಯೇನ, ವಾಚಾ, ಮನಸಾ, ಕರ್ಮಣಾ (ಕರಣಚತುಷ್ಟಯ) ನಿನ್ನನ್ನು ಬಿಟ್ಟು ಮತ್ತೊಬ್ಬನನ್ನು ಭಾವಿಸಲಿಲ್ಲ, ನೀನೇಗತಿಯಲ್ಲದೆ ಮತ್ತಾರೂ ಇಲ್ಲವೆಂದು ನಾನು ತಿಳಿದಿರುವೆನೆಂಬುದನ್ನರಿಯೆಯಾ ಕೈಹಿಡಿದುದ್ಧಾರ ಮಾಡು ಎಂದು ನುಡಿದಳು. ||೬೦||

ಟಿಪ್ಪಣಿ:—(೧) ಜನದಿಂದನುತ-ಜನನುತ (ತೃ. ತ) (೨) (ದ್ಭ) ಜೌವನ (೩) ಕೈಯಂಪಿಡಿದು-ಕೈವಿಡಿದು (ಕ್ರಿ. ಸ) ಪಕಾರಕ್ಕೆ ವಕಾರಾದೇಶ ಸಂಧಿ ||೬೦||

ಮೂ|| ಇದಕೆಯುಮವರುಣಾನಿಲೇಂದ್ರರು | ಮದನಜನಕನುಸಾಕ್ಷಿ
ಯೆನೆನೆಮೀ | ಘದಲಿನುಡಿದನುವಾಯುನಳನೃಪನೊಡನೆಸತ್ಯವನು |
ಚದುರೆಕೇಳ್ದಮಯಂತಿಲೋಕದ | ಸುದತಿಯೇತಿಳಿಲೋಕಪಾವ
ನೆ | ಇದಕೆಸಂಶಯವೇಕೆಪಾಲಿಸುಸತಿಯನೀನೆಂದು ||೬೧||

ಟೀಕೆ:—ಇದಕೆ-ಈ ಸಂದರ್ಭಕ್ಕೆ, ಯಮವರುಣಾನಿಲೇಂದ್ರರು-ಯಮ, ವರುಣ, ವಾಯು, ಇಂದ್ರ, ಈ ನಾಲ್ಕುಮಂದಿಯೂ, (೧) ಮದನಜನಕನು-ವಿಷ್ಣುವೂ, ಸಾಕ್ಷಿ-ಸಾಕ್ಷಿಗಳು, ಎನೆ - ಎಂದುಹೇಳಲು, ವಾಯು-ವಾಯುವು, ನಳನೃಪನೊಡನೆ-ನಳರಾಜನಸಂಗಡ, (೨) ಚತುರ-ವಿವೇಕಿಯೇ, ಕೇಳ್-ಕೇಳು, ದಮಯಂತಿ, ಲೋಕದಸುದತಿಯೇ-ಸಾಮಾನ್ಯಸ್ತ್ರೀಯೆ! (೩) ಲೋಕಪಾವನೆ-ಮಹಾಪರಿಶುದ್ಧಳು, ಇದಕೆ-ಈ ಸಂದರ್ಭಕ್ಕೆ, ಸಂಶಯವೇಕೆ-ಅನುಮಾನವೇಕೆ? ನೀನು, ಸತಿಯ-ಪತ್ನಿಯನ್ನು, ಪಾಲಿಸು ರಕ್ಷಿಸು, ಎಂದು-ಎಂಬದಾಗಿ, ಮೇಘದಲಿ - ಮೇಘದಿಂದ, ಸತ್ಯವನು - ಯಥಾರ್ಥವನ್ನು, ನುಡಿದನು-ಹೇಳಿದನು. ॥೬೧॥

ತಾತ್ಪರ್ಯ:—ಎಲೈ ಪತಿಯೇ ನಾನು ಅನ್ಯಥಾ ಭಾವಿಸಿದವಳಲ್ಲವೆಂಬುದಕ್ಕೆ ಇಂದ್ರ, ವರುಣ, ಯಮ, ವಾಯುಗಳೆಂಬ ದಿಕ್ಪಾಲಕರೂ, ವಿಷ್ಣುವೂ ಸಾಕ್ಷಿಗಳು, ಎಂದು ಹೇಳುತ್ತಿರುವಷ್ಟರಲ್ಲಿಯೇ, ವಾಯುವು ಮೇಘಮಂಡಲದಲ್ಲಿದ್ದು ನಳನನ್ನು ಕುರಿತು ಅಯ್ಯಾ ಬುದ್ಧಿಶಾಲಿಯಾದ ನಳರಾಜನೇ ಕೇಳು, "ಈ ದಮಯಂತಿಯನ್ನು ಲೋಕದ ಸಾಮಾನ್ಯಸ್ತ್ರೀಯೆಂದು ಭಾವಿಸಬೇಡ, ಲೋಕಕ್ಕೆಲ್ಲಾ ಪರಿಶುದ್ಧಳು, ಇವಳಲ್ಲಿ ಸಂಶಯಪಡದೆ ಅಂಗೀಕರಿಸು" ಎಂದು ನುಡಿದನು. ॥೬೧॥

ಟಿಪ್ಪಣಿ:—(೧) ಮದನ-ಮನ್ಮಥನ, ಜನಕ-ತಂದೆ (ಅವ) (೨) (ತ್ಸ) ಚತುರ, (೩) ಲೋಕದ ಪಾವನೆ - ಲೋಕ ಪಾವನೆ (ಷ. ತ) ॥೬೧॥

ಮೂ॥ ಪವನನಾಡಿದನುಡಿಯಕೈಕೊಂ । ಡವನಿಪತಿಬಿನ್ನೈಸಿದನು
ಮೇಣ್ । ತವಕದಲಿಕಲಿಯಿಂದನೊಂದೆನುನಿಮ್ಮದರುಶನದಿ ॥ ಭ
ವಣೆಹಿಂಗಿಕೃತಾರ್ಥನಾದೆನು । ನನಗೆಯಿನ್ನೇನೆನುತಪಕ್ಷಿಯ।ಸ
ವಣಮನದಲಿನೆನೆಯೆಬಂದುದುದಿವ್ಯಮಯವಸನ ॥೬೨॥

ಟೀಕೆ: —ಅವನಿಪತಿ-ದೊರೆಯು, ಪವನಂ-ವಾಯುವು, ಆಡಿದ-ಹೇಳಿದ, ನುಡಿಯ-ಮಾತನ್ನು, ಕೈಕೊಂಡು-ಅಂಗೀಕರಿಸಿ, ಮೇಣ್-ಮತ್ತು, ತವಕದಲಿ-ಕುತೂಹಲದಿಂದ, ಬಿನ್ನೈಸಿದನು-ಹೇಳಿದನು, ಕಲಿಯಿಂದ-ಕಲಿಪುರುಷನಿಂದ, ನೊಂದೆನು-ವ್ಯಥೆಪಟ್ಟೆನು, ನಿಮ್ಮ, ದರುಶನದಿ-ದರ್ಶನದಿಂದ, (೧) ಭವಣೆ-ಭ್ರಾಂತಿಯು, ಹಿಂಗಿ-ತೊಲಗಿ(೨)

ಕೃತಾರ್ಥಂ-ಕೃತಕೃತ್ಯನು, ಆದೆನು, ನನಗೆ, ಇನ್ನೇನು-ಇನ್ನೇನುಕಡಿಮೆ, ಎನುತ-ಎಂಬದಾಗಿ, ಪಕ್ಷಿಯ-ಪಾರಿವಾಳಗಳ, ಹವಣ-ಪ್ರಮಾಣವನ್ನು (ಮಾತನ್ನು) ಮನದಲಿ-ಮನಸ್ಸಿನಲ್ಲಿ, ನೆನೆಯೆ-ಸ್ಮರಿಸಲು, (೩) ದಿವ್ಯಮಯವಸನ-ದಿವ್ಯವಾದತನ್ನ ಹಚ್ಚಡವು, ಬಂದುದು-ಸಿಕ್ಕಿತು॥೭೦॥

ತಾತ್ಪರ್ಯ:—ವಾಯುವು ಹೇಳಿದ ಮಾತನ್ನಂಗೀಕರಿಸಿ ನಳನು ಆ ವಾಯುವನ್ನು ಕುರಿತು ನಿನಮದೊಡನೆ -ಕಲಿಯ ಸಂಪರ್ಕದಿಂದ ಈವರಿಗೂ ನಾನಾ ದುಃಖಗಳಿಗೆ ಗುರಿಯಾಗಿದ್ದೆನು, ನಿಮ್ಮದರ್ಶನದಿಂದ ಕೃತಾರ್ಥನಾದೆನು, ನನ್ನ ಭ್ರಮಾಜ್ಞಾನವುತೊಲಗಿತು ನನಗಿನ್ನಾವಬಾಧೆಯೂ ಇಲ್ಲ, ಎಂಬದಾಗಿ ಹೇಳುತ್ತಾ, ಪ್ರೌ್ವನಲ್ಲಿ ಪಾರಿವಾಳಗಳು ಹೇಳಿದ್ದಮಾತಿನಪ್ರಕಾರವಾಗಿ ಅವುಗಳನ್ನು ಸ್ಮರಿಸಲು ತನ್ನ ದಿವ್ಯ ದುಕೂಲವನ್ನು ಅವು ತಂದು ಕೊಟ್ಟುವು. ॥೭೦॥

ಟಿಪ್ಪಣಿ:— (೧) (ತ್ಸ) ಭ್ರಮಣ (೨) ಕೃತವಾದರ್ಥವುಳ್ಳವನು ಕೃತಾರ್ಥ, (೩) ದಿವ್ಯಮಯವಾದ ವಸನ - ದಿವ್ಯಮಯವಸನ (ವಿ. ಪೂರ್ವ. ಕ.) ॥೭೦॥

ಮೂಲ॥ ಧರಿಸಿದನುನಳನಾದುಕೂಲವ। ಪರಿಹರಿಸಿತಾರೂಪುಮುನ್ನಿನ। ಪರಮತೇಜದದಿವ್ಯತನುವಿನೊಳೆಸೆದುರಂಜಿಸಲು । ಸುರರದುಂದುಭಿಮೊಳಗೆಮಲ್ಲಿಗೆ।ಯರಳಮಳೆಸೂಸಿದರುಗಗನದಿ । ಸುರಸತಿಯರಕ್ಷತೆಯತಳಿದರುಹರಸಿನಳನೃಪಗೆ ॥೭೩॥

ಟೀಕೆ:— ನಳಂ-ನಳನು, ಆ ದುಕೂಲವ-ಆ ವಸ್ತ್ರವನು ಧರಿಸಿದನು-ಹೊದ್ದುಕೊಂಡನು, (೧) ಆರೂಪು-ಆಕುರೂಪವು, ಪರಿಹರಿಸಿತು-ಹೋಯಿತು, ಮುನ್ನಿನ-ಮೊದಲಿದ್ದ (೨) ಪರಮತೇಜದ-ಬಹಳವಾದ ಕಾಂತಿಯುಳ್ಳ, ದಿವ್ಯ ತನುವಿನೊಳ್-ದಿವ್ಯವಾದ ದೇಹದಿಂದ ಎಸೆದು-ಶೋಭಿಸಿ, ರಂಜಿಸಲು - ಪ್ರಕಾಶಿಸುತ್ತಿರಲು, ಸುರರ-ದೇವತೆಗಳ, ದುಂದುಭಿ-ಭೇರಿಯು, ಮೊಳಗೆ-ಧ್ವನಿಮಾಡಲು, (೩) ಸುರಸತಿಯರು-ದೇವಸ್ತ್ರೀಯರು, ಗಗನದಿ-ಆಕಾಶದಲ್ಲಿ, ಮಲ್ಲಿಗೆಯರಳ-ಮಲ್ಲಿಗೆಹೂವಿನ, ಮಳೆಸೂಸಿದರು- ಮಳೆಯನ್ನು ಸುರಿಸಿದರು, ನಳನೃಪಗೆ-ನಳರಾಜನಮೇಲೆ, ಹರಸಿ-ಆಶೀರ್ವಾದಮಾಡಿ, ಅಕ್ಷತೆಯ-ಮಂತ್ರಾಕ್ಷತೆಗಳನ್ನು, ತಳಿದರು-ಎರಚಿದರು ॥೭೩॥

ತಾತ್ಪರ್ಯ:—ಆ ದಿವ್ಯವಸ್ತ್ರವನ್ನು ಧರಿಸಿದ ಕೂಡಲೆ ನಳನ ಕು

ರೂಪವು ಪರಿಹಾರವಾಗಿ ನಿವ್ಯತೇಜೋವಿರಾಜಮಾನನಾದನು, ದೇವತೆಗಳು ದುಂದುಭಿ ಧ್ವನಿಮಾಡಿದರು, ಆಕಾಶದಲ್ಲಿ ಅಪ್ಸರಃಸ್ತ್ರೀಯರೆಲ್ಲರೂ ಪುಷ್ಪವೃಷ್ಟಿಯನ್ನು ನಳನ ಮೇಲೆ ಸುರಿಸಿದುದೂ ಅಲ್ಲದೆ, ಆಶೀರ್ವಾದದಿಂದ ಅಕ್ಷತೆಗಳನ್ನು ಎರಚಿದರು ||೬೩||

ಟಿಪ್ಪಣಿ:— (೧) ಅದು ರೂಪು-ಆರೂಪು (ಗಮಕ) (೨) ಪರಮವಾದ ತೇಜವುಳ್ಳದ್ದು-ಪರಮತೇಜ (ಬ. ವ್ರೀ. ಸ.) (೩) ಸುರಸತಿ-ಸುರಸತಿ (ಷ. ತ) ||೬೩||

ಮೂ|| ಸುರರುಕೊಂಡಾಡಿದರು ಯಮಭಾ | ಸ್ಕರವಿರಿಂಚಾದಿಗಳು
ಲಿಯೆವರ | ತರುಣಿಬಂದೆರಗಿದಳುಪತಿಯಂಘ್ರಿಯುಲಿದಮಯಂತಿ ||
ಹರುಷದಲಿಬಿಗಿಯಪ್ಪಿದನುಭೂ | ಸುರರುಸಂಭ್ರಮಿಸಿದರುವರಪು
ರ | ದರಸಚೆನ್ನಿಗರಾಯಸಲಹಿದನವರಕರುಣದಲಿ ||೬೪||

ಅಂತು ಸಂಧಿ ೪ಕ್ಕಂಪದ ೪೧೦ಕ್ಕಂ ಮಂಗಳಮಸ್ತು.

ಟೀಕೆ:—ಸುರರು-ದೇವತೆಗಳು,ಕೊಂಡಾಡಿದರು - ಹೊಗಳಿದರು ಯಮ ಭಾಸ್ಕರ ವಿರಿಂಚಾದಿಗಳು-ಯಮ, ಸೂರ್ಯ, ಬ್ರಹ್ಮ ಮೊದಲಾದವರು, ಉಲಿಯೆ-ಸ್ತೋತ್ರಮಾಡಲು, (೧) ವರತರುಣಿ-ಶ್ರೇಷ್ಠಸ್ತ್ರೀಯಾದ, ದಮಯಂತಿ, ಪತಿಯಂಘ್ರಿಯುಲಿ-ಗಂಡನಪಾದಗಳಿಗೆ, ಬಂದೆರಗಿದಳು-ಬಂದು ನಮಸ್ಕರಿಸಿದಳು, ಹರುಷದಲಿ- ಸಂತೋಷದಿಂದ, ಬಿಗಿಯಪ್ಪಿದನು-ಬಿಗಿದುತಬ್ಬಿಕೊಂಡನು, ಭೂಸುರರು-ಬ್ರಾಹ್ಮಣರು, ಸಂಭ್ರಮಿಸಿದರು-ವಿನೋದವನ್ನುಪಡೆದರು (೨) ಅವರ-ನಳದಮಯಂತಿಯರನ್ನು, ವರಪುರದರಸ-ಬೇಲೂರಿನಸ್ವಾಮಿಯಾದ ಚೆನ್ನಿಗರಾಯ, ಕೇಶವಮೂರ್ತಿಯು, ಕರುಣದಲಿ-ಕೃಪೆಯಿಂದ, ಅವರ-ನಳದಮಯಂತಿಯರನ್ನು ಸಲಹಿದನು - ರಕ್ಷಿಸಿದನು ||೬೪||

ತಾತ್ಪರ್ಯ:— ಬ್ರಹ್ಮಾದಿದೇವತೆಗಳೆಲ್ಲರೂ ಹೊಗಳುತ್ತಿರಲು, ದಮಯಂತಿಯು ತನ್ನ ಪತಿಯಪಾದಕ್ಕೆರಗಿದಳು - ಪರಮಪ್ರೇಮದಿಂದ ನಳನು ಬಾಚಿ ತಬ್ಬಿಕೊಂಡನು, ಬ್ರಾಹ್ಮಣರು ಈ ಅದ್ಭುತವನ್ನು ನೋಡಿ ಸಂಭ್ರಮಿಸಿದರು. ಆ ದಂಪತಿಗಳನ್ನು ಶ್ರೀಮಹಾವಿಷ್ಣುವು ಕರುಣದಿಂದ ಸಂರಕ್ಷಿಸಿದನು ||೬೪||

ಎಂಬಲ್ಲಿಗೆ ೪ನೆಯ ಸಂಧಿಯು ಟೀಕಾ ತಾತ್ಪರ್ಯವು ಮುಗಿದುದು

ಟಿಪ್ಪಣಿ:—(೧) ವರಳಾದತರುಣಿ–ವರತರುಣಿ (ವಿ. ಪೂರ್ವ. ಕ) (೨) ಕರ್ಮಾರ್ಥದಲ್ಲಿ ಷಷ್ಠೀವಿಭಕ್ತಿ ಬಂದಿದೆ ॥೬೪॥

ಲ್ನೆ ಸಂಧಿಯ ಟೀಕೆಯು ಮುಗಿದುದು,

ಒಂಭತ್ತನೆ ಸಂಧಿ.

ಸೂಚನೆ॥ ಕದನದಲಿಪುಷ್ಕರನಬಲವನು|ಸದೆದುಜೂಜಲಿಗೆಲಿದುರಾ
ಜ್ಯವ! ಮುದದಿಪಾಲಿಸುತಿರ್ದನಾಸತಿಸಹಿತನಳನೃಪತಿ ॥

ಸೂಚನೆ ಟೀಕೆ:—ನಳನೃಪತಿ–ನಳರಾಜನು, ಕದನದಲಿ – ಯುದ್ಧದಲ್ಲಿ, ಪುಷ್ಕರನ, ಬಲವನು–ಸೈನ್ಯವನ್ನು, ಸದೆದು–ಕೊಂದು, ಜೂಜಲಿ–ಜೂಜಿನಲ್ಲಿ, ಗೆಲಿದು–ಗೆದ್ದು, (೧) ಆಸತಿಸಹಿತ–ದಮಯಂತಿಯೊಡನೆ, ರಾಜ್ಯವ–ದೇಶವನ್ನು, ಮುದದಿ–ಸಂತೋಷದಿಂದ, ಪಾಲಿಸುತಿರ್ದನು–ಆಳುತ್ತಿದ್ದನು. ॥

ತಾತ್ಪರ್ಯ:—ನಳನು ಯುದ್ಧದಲ್ಲಿ ಪುಷ್ಕರನ ಚತುರಂಗಸೈನ್ಯವನ್ನು ನಾಶಮಾಡಿದುದರಿಂದ ಅವನು ಪೂರ್ವದಂತೆ ಮೋಸಮಾಡಿ ಜೂಜಿನಿಂದಲೇ ಗೆಲ್ಲಬೇಕೆಂದು, ಜೂಜಾಡಲಪೇಕ್ಷಿಸಲು ಅದರಂತೆ ಅವನನ್ನು ದ್ಯೂತದಲ್ಲಿಯೂ ಗೆದ್ದು, ದಮಯಂತಿಯೊಡನೆ ಪರಮಸಂತೋಷದಿಂದ ಮೊದಲಿನಹಾಗೆ ಚಕ್ರಾಧಿಪತ್ಯವನ್ನು ಪಡೆದು ಸುಖವಾಗಿ ಆಳುತಿದ್ದನು. ॥

ಟಿಪ್ಪಣಿ:—(೧) ಅವಳು ಸತಿ–ಆಸತಿ (ಗಮಕ) ಆ ಸತಿಯುಸಹಿತ–ಆ ಸತಿಸಹಿತ (ಷ. ತ) (೨) , ದಿ , ಎಂಬುವುದು , ದಿಂ , ಎಂಬಹಳಗನ್ನಡ ಪ್ರತ್ಯಯದಬದಲಾಗಿ ಹೊಸಕನ್ನಡದಲ್ಲಿ ಬಂದುದು. ॥

ಮೂ॥ ಕೇಳುಪಾಂಡುವಕುವರನಳಭೂ| ಪಾಲನಭ್ಯುದಯುವನುಮಂ
ಗಳ| ದೇಳಿಗೆಯನೇನೆಂಬೆದಮಯಂತಿಯುಮಹೋತ್ಸವವ|| ಲೀಲೆ
ಯಲಿಮಜ್ಜನವಮಾಡಿದು| ಕೂಲಮಣಿಭೂಷಣವಧರಿಸಿಚ| ಡಾಳಿ
ಸುವಕಾಂತಿಯಲಿಸಿಂಹಾಸನದಿಕುಳ್ಳಿರ್ದ ॥೧॥

ಟೀಕೆ;—(೧) ಪಾಂಡವಕುವರ–ಧರ್ಮರಾಜನೆ, ಕೇಳು, ನಳಭೂಪಾಲನ–ನಳರಾಜನ, ಅಭ್ಯುದಯುವನು–ಅಭಿವೃದ್ಧಿಯನ್ನು, ಮಂಗಳದ–ಶುಭದ, ಏಳಿಗೆಯನು–ಹೆಚ್ಚಿಗೆಯನ್ನೂ, ದಮಯಂತಿಯು, (೨)

ಮಹೋತ್ಸವವ-ಆನಂದವನ್ನು, ಏನನೆಂಬೆ-ಏನೆಂದುಹೇಳಲಿ, ಲೀಲೆಯು ಲಿ-ಸೊಗಸಿನಿಂದ, ಮಜ್ಜನವ-ಸ್ನಾನವನ್ನು, ಮಾಡಿ, ದುಕೂಲಮಣಿ ಭೂಷಣವ-ವಸ್ತ್ರಾಭರಣಗಳನ್ನು, ಧರಿಸಿ-ಧಾರಣೆಮಾಡಿಕೊಂಡು, ಚ ಡಾಳಿಸುವ-ಹೆಚ್ಚುತ್ತಿರುವ, ಕಾಂತಿಯುಲಿ-ಕಳೆಯಿಂದ, ಸಿಂಹಾಸನದಿ-ಸಿಂಹಾಸನದಮೇಲೆ, ಕುಳ್ಳಿರ್ದ-ಕೂತಿದ್ದನು. ||೧||

ತಾತ್ಪರ್ಯ:—ಎಲೈ ಧರ್ಮನಂದನನೇ ಕೇಳು, ಆನಳನಿಗುಂಟಾದ ಪುರೋವೃದ್ಧಿಯನ್ನು ಕಲ್ಯಾಣಪರಂಪರೆಗಳನ್ನು, ದಮಯಂತಿಯ ಉ ತ್ಸಾಹವನ್ನು ಏನೆಂದುಹೇಳಲಿ, ಆ ನಳನು ಮಂಗಳಸ್ನಾನಮಾಡಿ ದಿವ್ಯ ವಾದ ಪಟ್ಟವಸ್ತ್ರಗಳನ್ನೂ, ರತ್ನಾಭರಣಗಳನ್ನೂ ಧರಿಸಿ ದಿವ್ಯ ತೇ ಜೋ ವಿರಾಜಮಾನನಾಗಿ ಸಿಂಹ ಸನದಲ್ಲಿ ಕುಳಿತುಕೊಂಡನು. ||೧||

ಟಿಪ್ಪಣಿ:—ಪಾಂಡುವಿನ ಮಕ್ಕಳು-ಪಾಂಡವರು, ಪಾಂಡವನಾದ ಕುಮಾರ-ಪಾಂಡವಕುವರ (ವಿ. ಪೂರ್ವ. ಕ) ಕುವರಕ್ಕೆ (ತ್ರ) ಕುಮಾ ರ. (೨) ಮಹಾ + ಉತ್ಸವ-ಮಹೋತ್ಸವ (ಗುಣ) ಹೆಚ್ಚಾದಹರ್ಷವ ನ್ನುಂಟುಮಾಡತಕ್ಕದ್ದು-ಉತ್ಸವ (ಅವ) (ದ್ವ) ಉಕ್ಕೆವ ||೧||

ಪ॥ ಈತನಾಗುಪಿತಾಮಹನೊಪುರು | ಹೂತನೋಮನ್ಮಥನೊಲ
ಕ್ಷ್ಮೀಶ ನಾಥನೋಚಂದ್ರಮನೊಶಂಕರನೋ ಮಹಾದೇವ || ಈ
ತನೇನಳನೃಪತಿಜಗವಿಖ್ಯಾತನೆಲ್ಲಿಂದಿಲ್ಲಿಬಂದನು | ಪ್ರೂತುಮುಯು
ರೇಯೆನುತಕೊಂಡಾಡಿತುನೃಪಸ್ತೋಮ ||೨||

ಟೀಕೆ:—ಈತಂ-ಇವನು, ಆರು-ಯಾರಾಗಿರಬಹುದು ! ಪಿತಾ ಮಹನೊ-ಬ್ರಹ್ಮನೋ, ಪುರುಹೂತನೋ-ಇಂದ್ರನೋ, ಮನ್ಮಥನೊ-ಕಾಮನೋ, ಲಕ್ಷ್ಮೀನಾಥನೋ-ಮಹಾವಿಷ್ಣುವೋ, ಚಂದ್ರಮನೊ-ಚಂದ್ರನೋ ! ಶಂಕರನೋ-ಈಶ್ವರನೋ, ಮಹಾದೇವ-ಪರಮೇಶ್ವರ ನೇ, ಈತನೇ-ಇವನೇ, (೧) ಜಗವಿಖ್ಯಾತಂ-ಲೋಕಪ್ರಸಿದ್ಧನಾದ, ನ ಳನೃಪತಿ-ನಳರಾಜನು, ಪ್ರೂತುಮುರಭರೇ !- ಭಲಾ, ಎಲ್ಲಿಂದ-ಯಾವ ಪ್ರದೇಶದಿಂದ, ಬಂದನು, ಎನುತ, (೨) ನೃಪಸ್ತೋಮ-ದೊರೆಗಳಗುಂ ಪು, ಕೊಂಡಾಡಿತು-ಸ್ತೋತ್ರಮಾಡಿತು. ||೨||

ತಾತ್ಪರ್ಯ:—ರಾಜತೇಜೋ ವಿರಾಜಮಾನನಾಗಿ ದಿವ್ಯ ಸಿಂಹಾಸ ನದಲ್ಲಿ ಕುಳಿತಿರುವ ನಳನನ್ನು ನೋಡಿ ಸಭೆಯಲ್ಲಿ ಸೇರಿದ್ದ ನರಪತಿಗಳೆಲ್ಲ ರೂ ಆಹಾ ! ಈತನಾರು, ಬ್ರಹ್ಮನೋ ! ಇಂದ್ರನೋ ! ಮನ್ಮಥ

ನೋ ! ವಿಷ್ಣುವೋ ; ಚಂದ್ರನೋ ! ಶಿವನೋ ! ಎಂದು ಸಂಶಯ ಪಡುತ್ತಾ ಚೆನ್ನಾಗಿ ವಿಚಾರವಾಡಿ ಓಹೋ ! ಜಗತ್ಪ್ರಸಿದ್ಧನಾದ ನಳನೇ ಈತನು ! ಎಲ್ಲಿದ್ದನೋ ! ಎಲ್ಲಿಂದ ಬಂದನೋ, ಭಲಾ ! ಎಂದು ಅತ್ಯಾಶ್ಚರ್ಯವುಳ್ಳವರಾಗಿ ಹೊಗಳುತಿದ್ದರು. ||೨||

ಟಿಪ್ಪಣಿ:—(೧) ಜಗದಲ್ಲಿ ವಿಖ್ಯಾತ-ಜಗವಿಖ್ಯಾತ (ಸ. ತ) (೨) ನೃ-ಮನುಷ್ಯರನ್ನು, ಪ-ರಕ್ಷಿಸತಕ್ಕವರು (ದೊರೆಗಳು) ಅವ, (ಉಪ. ಸ) ನೃಪರಸ್ತೋಮ-ನೃಪಸ್ತೋಮ (ಷ. ತ) ||೨||

ಮೂ|| ಬಂದುಕಂಡರುನಿಖಿಳಪುರಜನ | ತಂದುಕಾಣಿಕೆಗೊಟ್ಟುಮುದ
ದಲಿ| ಸಂದಣಿಸಿಋತುಪರ್ಣಬಂದನುಮಂತ್ರಿಜನಸಹಿತ|| ಚಂದದ
ಲಿಕಾಂಚನಸುವಸ್ತುವ| ತಂದುಯಿದಿರೊಳಗಿಟ್ಟುವಿನಯದಿ|ನಿಂ
ದುಬಿನ್ನೈಸಿದನುಕರಗಳಮುಗಿದುನಳನೃಪಗೆ ||೩||

ಟೀಕೆ:—(೧) ನಿಖಿಳಪುರಜನ-ಪೌರರೆಲ್ಲರೂ, ತಂದು – ತೆಗೆದುಕೊಂಡು ಬಂದು, (೨) ಕಾಣಿಕೆಗೊಟ್ಟು – ಕಾಣಿಕೆಯನ್ನೊಪ್ಪಿಸಿ, ಬಂದು-ಬಂದವರಾಗಿ, ಕಂಡರು-ರಾಜದರ್ಶನವಮಾಡಿದರು. ಋತುಪರ್ಣ-ಋತುಪರ್ಣರಾಜನೂ ಸಹ, ಮುದದಲಿ-ಸಂತೋಷದಿಂದ, ಮಂತ್ರಿಜನಸಹಿತ-ಮಂತ್ರಿ ಮೊದಲಾದ ಪರಿಜನರೊಡನೆ, ಸಂದಣಿಸಿ-ಸೇರಿ, ಬಂದನು, ಚಂದದಲಿ-ಸೊಗಸಿನಿಂದ, ಕಾಂಚನಸುವಸ್ತುವ- ಚಿನ್ನದಪದಾರ್ಥಗಳನ್ನು, ತಂದು-ತೆಗೆದುಕೊಂಡುಬಂದು, ಇದಿರೊಳಗೆ-ಎದುರಿಗೆ, ಇಟ್ಟು-ಒಪ್ಪಿಸಿ, ವಿನಯದಿ-ನಮ್ರತೆಯಿಂದ, ನಿಂದು-ನಿಂತುಕೊಂಡು, ನಳನೃಪಗೆ-ನಳರಾಜನಿಗೆ, ಕರಗಳ-ಕೈಗಳನ್ನು, ಮುಗಿದು-ಜೋಡಿಸಿ, ಬಿನ್ನೈಸಿದನು-ವಿಜ್ಞಾಪಿಸಿದನು. ||೩||

ತಾತ್ಪರ್ಯ:—ಪಟ್ಟಣಿಗರೆಲ್ಲರೂ ರಾಜಭಕ್ತಿಯನ್ನು ತೋರಿಸಿ ಕಾಣಿಕೆ (ನಜರು) ಗಳನ್ನು ತಂದೊಪ್ಪಿಸಿದರೂ, ಋತುಪರ್ಣನು ಪರಿವಾರದೊಡನೆ ಸುವರ್ಣ ನಾಣ್ಯ ಮೊದಲಾದ ಅನೇಕ ಅಮೂಲ್ಯವಸ್ತುಗಳನ್ನು ತಂದು ನಳನ ಎದುರಿಗಿಟ್ಟು ವಿನಯದಿಂದ ಕೈಮುಗಿದುನಿಂತು ಭಯಭಕ್ತಿಗಳಿಂದ ವಿಜ್ಞಾಪಿಸಿ ಕೊಂಡನು. ||೩||

ಟಿಪ್ಪಣಿ:—(೧) ಪುರದಜನ-ಪುರಜನ (ಷ. ತ) ನಿಖಿಳರಾದ ಪುರಜನ-ನಿಖಿಳಪುರಜನ (ವಿ ಪೂರ್ವ. ಕ) (೨)ಕಾಣಿಕೆಯಂಕೊಟ್ಟು-ಕಾಣಿಕೆ ಗೊಟ್ಟು, (ಕ್ರಿ. ಸ) ||೩||

ಮೂ ಸೋಮಕುಲನೃಪಸಾರ್ವಭೌಮನು ಸ। ನಾಮಮಂಗಳನಿಳಯಜಿ
ತಸಂ। ಗ್ರಾಮಧೀರವಿರೋಧಿಸಾಮಜಸಿಂಹದಳನಚಣ ॥ ತಾಮ
ಸನುಮತಿಗೇಡಿಯಾನಲೆ। ಪಾಮರನಗುಣದೋಷವೆಣಿಸದೆ। ಪ್ರೇ
ಮದಿಂದೊಲಿದೆನ್ನ ಸಲಹೆಂದೆನುತಕೈಮುಗಿದ ॥೪॥

ಟೀಕೆ:—ಸೋಮಕುಲ-ಚಂದ್ರವಂಶದ, ನೃಪ - ದೊರೆಗಳಲ್ಲಿ, ಸಾರ್ವಭೌಮ-ಚಕ್ರವರ್ತಿಯಾದ, ಸನಾಮ-ಪ್ರಸಿದ್ಧನಾದ, (೧) ಮಂಗಳನಿಳಯ-ಶುಭಕ್ಕಾಸ್ಪದನಾದ, (೨) ಜಿತಸಂಗ್ರಾಮ-ಯುದ್ಧದಲ್ಲಿಜಯಶೀಲನಾದ, (೩) ಧೀರವಿರೋಧಿಸಾಮಜ ಸಿಂಹದಳನಚಣ, ಧೀರ-ಶೂರರಾದ, ವಿರೋಧಿ-ಶತ್ರುಗಳೆಂಬ, ಸಾಮಜ-ಆನೆಯನ್ನು, ಸಿಂಹ-ಸಿಂಹದಂತೆ, ದಳನ-ಸೀಳುವುದರಲ್ಲಿ, ಚಣ-ಸಮರ್ಥನಾದ, (ನಳನೇ) ಆ-ನಾನು, ತಾಮಸನು-ಜಡನು, ಮತಿಗೇಡಿ-ಅರಿವಿಲ್ಲದವನು, ಅಲೆ-ಅಲ್ಲವೆ, ಪಾಮರನ-ಮೂಢನಾದ ನನ್ನ, ಗುಣದೋಷವ-ಒಪ್ಪು ತಪ್ಪುಗಳನ್ನು, ಎಣಿಸದೆ-ಲೆಕ್ಕಿಸದೆ, ಪ್ರೇಮದಿಂದ-ಪ್ರೀತಿಯಿಂದ, ಒಲಿದು - ಪ್ರೀತಿಸಿ, ಎನ್ನ-ನನ್ನನ್ನು, ಸಲಹು-ಕಾಪಾಡು, ಎಂದೆನುತ-ಎಂಬದಾಗಿ, ಕೈಮುಗಿದ-ನಮಸ್ಕರಿಸಿದನು. ॥೪॥

ತಾತ್ಪರ್ಯ:—ಎಲೈ ನಳರಾಜನೇ ! ನೀನು ಚಂದ್ರವಂಶದ ದೊರೆಗಳಲ್ಲಿ ಚಕ್ರವರ್ತಿಯಾದವನು, ಮಂಗಳಾಸ್ಪದನು, ಯುದ್ಧದಲ್ಲಿಜಯಶಾಲಿ, ಶತ್ರುಗಳೆಂಬ ಮದಿಸಿದಾನೆಗಳನ್ನು ಸಿಂಹದಂತೆ ಸೀಳುವ ಸಮರ್ಥನು, ನಾನು ಅಜ್ಞಾನು, ನಿನ್ನನ್ನು ಸಾಮಾನ್ಯಸೇವಕನಂತೆ ಭಾವಿಸಿ ಬಹಳ ತುಚ್ಛವಾಗೆಣಿಸಿ ದೋಷಿಯಾಗಿರುವೆನು, ನನ್ನ ದೋಷಗಳೆನ್ನು ಮನ್ನಿಸಿ ಕೃಪೆಯಿಂದ ಕಾಪಾಡು, ಎಂದು ಕೈಮುಗಿದು ಬೇಡಿಕೊಂಡನು. ॥೪॥

ಟಿಪ್ಪಣಿ:—(೧) ಮಂಗಳದನಿಳಯ-ಮಂಗಳನಿಲಯ (ಷ. ತ) (೨) ಜಿತ-ಜಯಿಸಲ್ಪಟ್ಟ, ಸಂಗ್ರಾಮ-ಯುದ್ಧವುಳ್ಳವನು (ಬ. ವ್ರೀ) (೩) ಧೀರನಾದ ವಿರೋಧಿ (ವಿ. ಪೂ. ಕ) ವಿರೋಧಿಯೇ ಸಾಮಜ (ಅವ. ಪೂ. ಕ) ಸಿಂಹದಂತೆ ದಳನಚಣ (ಉ. ಪೂ. ಕ) ಸಾಮಜದ ಸಿಂಹದಳನಚಣ (ಷ. ತ) ॥೪॥

ಮೂ॥ ಮೂಢಮತಿನಾನಿಮ್ಮನರಿಯದೆ। ಮೂಢಮತಿಯವಿವೇಕಿತುರಗ
ವ। ನೋಡಿವಾಗಲೆರಥಕೆಅಡಿಗೆಯೊಳರಿದೆನೇನಾನು। ಮಾಡಿದಪರಾ

ಧಗಳನೊಂದನು| ನೋಡಲಾಗದುಚಿತ್ತದಲಿಖಯು | ಖೋಡಿಯಿಲ್ಲ
ದೆಸಲಹಬೇಕೆಂದೆರಗಿದನುಪದಕೆ ||೫||

ಟೀಕೆ:—ನಾ-ನಾನು, ರೂಢಿಯಲಿ-ಗುರುತಾಗಿ, ನಿಮ್ಮಂ-ನಿಮ್ಮ ನ್ನು, ಅರಿಯದೆ-ತಿಳಿಯದೆ, (೧) ಮೂಢಮತಿ- ಮೂಢಬುದ್ಧಿಯುಳ್ಳವನಾಗಿ, (೨) ಅವಿವೇಕಿ-ತಾರತಮ್ಯವಿಲ್ಲದವನಾಗಿ, ತುರಗವ-ಕುದುರೆಯನ್ನು, ರಥಕೆ-ತೇರಿಗೆ, ಹೂಡಿದಾಗಲೆ-ಕಟ್ಟಿದಾಗಲೆ, (ಅಥವಾ) ಅಡಿಗೆಯೊಳು-ಪಾಕಕಾರ್ಯದಲ್ಲಿ ಯಾಗಲಿ, ಅರಿದೆನೆ-ತಿಳಿದುಕೊಂಡೆನೇ, ನಾನು, ಮಾಡಿದ, ಅಪರಾಧಗಳ-ತಪ್ಪುಗಳನ್ನು, ಒಂದನು - ಒಂದನ್ನು, ನೋಡಲಾಗದು-ಎಣಿಸಕೂಡದು, ಚಿತ್ತದಲಿ-ಮನಸ್ಸಿನಲ್ಲಿ, ಖಯುಖೋಡಿಇಲ್ಲದೆ-ವಿರೋಧವನ್ನೆಣಿಸದೆ, ಸಲಹಬೇಕೆಂದು-ರಕ್ಷಿಸಬೇಕೆಂದು, ಪದಕೆ-ಪಾದಕ್ಕೆ ಎರಗಿದನು-ಅಡ್ಡಬಿದ್ದನು. ||೫||

ತಾತ್ಪರ್ಯ:—ನಿಮ್ಮ ರೂಪವು ಬೇರೆಯಾಗಿದ್ದುದರಿಂದ ತಿಳಿಯಲಾರದೆ ಹೋದೆನು, ಆದರೆ ಕುದುರೆಯನ್ನು ಹೂಡಿ ನಡೆಯಿಸಿದುದರಲ್ಲಿಯೂ, ಅಡಿಗೆಯ ಚಾತುರ್ಯದಲ್ಲಿಯೂ, ಊಹಿಸಿ ತಿಳಿಯಬಹುದಾಗಿತ್ತು. ಜಡನಾದ ನಾನು ಆಗಲೂ ತಿಳಿಯದೆ ಅವಿವೇಕಿಯಾದೆನು, ನನ್ನ ಅಪರಾಧವನ್ನೆಲ್ಲಾ ಮನ್ನಿಸಿ ರಕ್ಷಿಸಿ, ಎಂದು ಪಾದಕ್ಕೆರಗಿದನು ||೫||

ಟಿಪ್ಪಣಿ?—(೧) ಮೂಢವಾದ ಮತಿಯುಳ್ಳವನು - ಮೂಢಮತಿ (ಬ. ವ್ರೀ) (೨) ವಿವೇಕವಿಲ್ಲದವನು-ಅವಿವೇಕಿ (ನರ್. ಬ. ವ್ರೀ)||೫||

ಮೂ|| ಈಪರಿಯೊಳೆನಲಾನೃಪನಸಂ| ತಾಪವನುಪರಿಹರಿಸಿನಳನೃಪ|
ತಾಪಿರಿದುಮಣಿಭೂಷಣಂಗಳನಿತ್ತುನಸುನಗುತ || ಕೋಪವೆನಗಿ
ಲ್ಲೆಂದಯೋಧ್ಯಾ| ಭೂಪನನುಮನ್ನಿಸುವಸಮಯದಿ| ತಾಪಸರ
ನೊಡಗೊಂಡುಬಂದನುನಲಿದುಮೈತ್ರೇಯ ||೬||

ಟೀಕೆ:—(೧) ಈಪರಿಯೊಳ್ -ಈರೀತಿಯಾಗಿ, ಎನಲ್- ಹೇಳಲು, ನಳನೃಪ-ನಳರಾಜನು, ಆ ನೃಪನ-ಆದೊರೆಯ, ಸಂತಾಪವನು-ಸಂಕಟವನ್ನು, ಪರಿಹರಿಸಿ-ಹೋಗಲಾಡಿಸಿ, ಪಿರಿದು-ಹೆಚ್ಚಾಗಿ, ಮಣಿಭೂಷಣಂಗಳಂ-ರತ್ನಖಚಿತವಾದ ಆ ಭರಣಗಳನ್ನು, ಇತ್ತು-ಕೊಟ್ಟು ತಾ-ತಾನು, ನಸುನಗುತ-ಮುಗುಳ್ನಗೆನಗುತ್ತಾ, ಎನಗೆ-ನನಗೆ, ಕೋಪವು-ಸಿಟ್ಟು, ಇಲ್ಲ, ಎಂದು_ಎಂಬದಾಗಿಹೇಳಿ, (೨) ಅಯೋಧ್ಯಾಭೂಪನನು-ಋತುಪರ್ಣನನ್ನು, ಮನ್ನಿಸುವ-ಮನ್ನಣೆಮಾಡುವ, ಸಮಯ

ದಿ-ಕಾಲದಲ್ಲಿ, ಮೈತ್ರೇಯ-ಮೈತ್ರೇಯಋಷಿಯು, ತಾಪಸರಂ- ಋಷಿಗಳನ್ನು, ಒಡಗೊಂಡು-ಕರೆದುಕೊಂಡುಬಂದು, ನಲಿದು-ಸಂತೋಷದಿಂದ, ಬಂದನು-ಆ ಸಭೆಗೆ ಬಂದನು. ||೬

ತಾತ್ಪರ್ಯ:—ಹೀಗೆ ಬಹಳವಾಗಿ ಅನುತಾಪವನ್ನೂ ನಾಚಿಕೆಯನ್ನೂ ಹೊಂದಿರುವ ಋತುಪರ್ಣನ ಮಾತುಗಳನ್ನು ಕೇಳಿ ನಳನು ಕರುಣದಿಂದ, ಅಯ್ಯಾ ಋತುಪರ್ಣರಾಜನೆ, ನಿನ್ನ ಮೇಲೆ ನನಗೆ ಸ್ವಲ್ಪವೂ ಕೋಪವಿಲ್ಲ, ನೀನಾಗಿ ನನಗೆ ಯಾವ ಅಪಕಾರವನ್ನು ಮಾಡಲಿಲ್ಲ. ನಾನು ಅದನ್ನು ಮನಸ್ಸಿನಲ್ಲಿ ಎಣಿಸಿಲ್ಲ, ಎಂದು ಸಮಾಧಾನವನ್ನು ಹೇಳಿ ನಸುನಕ್ಕು ಅವನಿಗೆ ದಿವ್ಯ ವಸ್ತ್ರಾಭರಣಾದಿಗಳನ್ನು ಕೊಟ್ಟು ಉಪಚಾರ ಮಾಡುತ್ತಿರಲು, ಅಷ್ಟರಲ್ಲಿ ಮೈತ್ರೇಯ ಮಹರ್ಷಿಯು ಅನೇಕವಂದಿ ತಪಸ್ವಿಗಳೊಡನೆ ಅಲ್ಲಿಗೆ ಬಂದನು. ||೬||

ಟಿಪ್ಪಣಿ:—(೧) ಇದುಪರಿ-ಈಪರಿ (ಗಮಕ) (೨) ಅಯೋಧ್ಯೆಯಭೂಪ-ಅಯೋಧ್ಯಾಭೂಪ (ಷ. ತ) ||೬||

ಮೂ|| ಬಂದಮುನಿಗವನೀಶಚರಣ| ದ್ವಂದ್ವದಲಿಚಾಚಿದನುಮುಕುಟ
ವ | ನಂದುಪಿಡಿದೆತ್ತಿದನುನಸುನಗುತಲ್ಲಿಕುಳ್ಳಿರ್ದು|| ಎಂದನೆಲೆನಳ
ನೃಪತಿನಿನಗೆಮು| ಕುಂದನೊಲವುಸದಾವಕಾಲದಿ| ನಿಂದಿರಲುಇ
ನ್ನಾವುದರಿದಿಲ್ಲೆಂದನಾಮುನಿಪ ||೭||

ಟೀಕೆ:—ಬಂದ-ಬಂದಿರುವ, ಮುನಿಗೆ-ಮೈತ್ರೇಯಮುನಿಗೆ, ಅವನೀಶ-ದೊರೆಯು, (೧) ಚರಣದ್ವಂದ್ವದಲಿ-ಪಾದದ್ವಯದಲ್ಲಿ, ಮಕುಟವಂ-ಕಿರೀಟವನ್ನು, ಚಾಚಿದನು-ಇಟ್ಟನು, ಅಂದು-ಆಗ, ನಸುನಗುತ-ಕಿರುನಗೆಯಿಂದ, ಅಲ್ಲಿ ಕುಳ್ಳಿರ್ದು-ಕುಳಿತುಕೊಂಡು, ಪಿಡಿದು-ಹಿಡಿದು, ಎತ್ತಿದನು-ಮೇಲಕ್ಕೆ ತಲೆಯನೆತ್ತಿದನು, (ಮತ್ತು) ಎಂದಂ - ಹೇಳಿದನು, (೨) ಎಲೆ ನಳನೃಪತಿ-ಎಲೈನಳರಾಜನೆ! ನಿನಗೆ, ಮುಕುಂದನ-ಕೃಷ್ಣನ, ಒಲವು-ಪ್ರೀತಿಯು, ಸದಾವಕಾಲದಿ-ಯಾವಾಗಲೂ, ನಿಂದಿರಲು-ನೆಲಸಿರಲು, ಇನ್ನು- ಇನ್ನು, ಆವುದು-ಯಾವಕಾರ್ಯವೂ, ಅರಿದು-ಅಸಾಧ್ಯವಾದುದು, ಇಲ್ಲ. (ಎಂಬದಾಗಿ) ಆಮುನಿಪ- ಋಷಿಶ್ರೇಷ್ಠನು, ಎಂದಂ-ಹೇಳಿದನು. ||೭||

ತಾತ್ಪರ್ಯ:—ನಳನು ಮೈತ್ರೇಯ ಮಹರ್ಷಿಯ ಪಾದಕ್ಕೆರಗಲು, ಅವನ ಶಿರವನ್ನು ಹಿಡಿದೆತ್ತಿ, ನಗುತ್ತಾ-ಎಲೈನಳನೇ, ಭಗವತ್ಕೃಪೆಯು

ನಿನ್ನಲ್ಲಿ ಯಾವಾಗಲೂ ಸ್ಥಿರವಾಗಿರುವುದರಿಂದ ನಿನಗಸಾಧ್ಯವಾದ ಕಾರ್ಯವೇನಿರುವುದು ? ಅದರಿಂದಲೇ ಬಂದಿದ್ದ ಮಹಾ ವಿಪತ್ತಿಯನ್ನು ಗೆದ್ದು, ಧರ್ಮವನ್ನು ಬಿಡದೆ ಪರಾಕ್ರಮದಿಂದ ಕೀರ್ತಿಯನ್ನು ಪಡೆ! ಎಂದನು. ||೭||

ಟಿಪ್ಪಣಿ:-- (೧) ಚರಣಗಳದ್ವಂದ್ವ - ಚರಣದ್ವಂದ್ವ (ಷ. ತ) (೨) ನೃ-ಮನುಷ್ಯರ,ಪತಿ-ಒಡೆಯ,(ಅವ) ಎಲೆ ಎಂಬುದು ಸಂಮುಖೀಕರಣಾರ್ಥದಲ್ಲಿ ಬಂತು. ||೭||

ಮೂ|| ಕಲಿಪುರುಷರಿಂದ ದುನುಪಹತಿ| ಲಲನೆಪುತ್ರರನಗಲಿಕಷ್ಟವ|
ಬಳಸಿದೆಯುಲಾನೊಂದುಸತ್ಯವಬಿಡದೆಸಂಚರಿಸಿ|| ಸುಲಭಳಾದಕು
ಲಾಂಗನೆಯುವ್ರತ| ಫಲದಪುಣ್ಯೋದಯದಿನಿಜಸಿರಿ| ಫಲಿಸಿತಿನ್ನೀ
ಲೋಕದಲಿನಿನಗಾರುಸರಿಯೆಂದ ||೮||

ಟೀಕೆ:--ಕಲಿಪುರುಷನಿಂದ – ಆಕಲಿಯಶಕ್ತಿಯಿಂದ, ಉಪಹತಿ-ತೊಂದರೆಯು, ಆದುದು-ಸಂಭವಿಸಿತು, (೧) ಲಲನೆಪುತ್ರರಂ-ಹೆಂಡತಿ ಮಕ್ಕಳನ್ನು, ಅಗಲಿ-ಬಿಟ್ಟು, ನೊಂದು–ವ್ಯಥೆಪಟ್ಟು. ಕಷ್ಟವ-ಶ್ರಮೆಯನ್ನು, ಬಳಸಿದೆಯಲಾ-ಅನುಭವಿಸಿದೆಯಲ್ಲವೇ, ಸತ್ಯವ-ಸತ್ಯವ್ರತವನ್ನು, ಬಿಡದೆ-ತಪ್ಪದೆ, ಸಂಚರಿಸಿ – ನಡೆದುಕೊಂಡು ಬಂದುದರಿಂದ, ಸುಲಭಳಾದ-ಯೋಗ್ಯಳಾದ, ಕುಲಾಂಗನೆಯು–ವಂಶರಕ್ಷಕಳಾದ (ದಮಯಂತಿಯು) ವ್ರತ ಫಲದ-ವ್ರತದಮಹಿಮೆಯಿಂದುಂಟಾದ, (೨) ಪುಣ್ಯೋದಯದಿ-ಸುಕೃತವಿಶೇಷದಿಂದ, ನಿಜಸಿರಿ-ನಿನ್ನ ಸಂಪತ್ತು, ಫಲಿಸಿತು-ಪುನಃಪ್ರಾಪ್ತವಾಯ್ತು, ಇನ್ನು, ಈ ಲೋಕದಲಿ-ಭೂಮಿಯಲ್ಲಿ, ನಿನಗೆ, ಆರು-ಯಾರು, ಸರಿ-ಸಮಾನರು ? ಎಂದ ||೮||

ತಾತ್ಪರ್ಯ:--ಕಲಿಯ ಮಹಿಮೆಯಿಂದ ಹೆಂಡತಿ ಮಕ್ಕಳನ್ನು ಅಗಲಿ, ಬಹಳವಾಗಿ ದೇಹ ಶ್ರಮೆಪಟ್ಟು ಆದರೂ ಸತ್ಯವ್ರತವನ್ನು ಬಿಡದೆ ರಕ್ಷಿಸಿದೆ, ಕುಲಪಾಲಕಳಾದ ನಿನ್ನ ಹೆಂಡತಿಯ ವ್ರತನಿಯಮಗಳ ಪುಣ್ಯಪ್ರಭಾವದಿಂದ ಕಷ್ಟವೆಲ್ಲವೂ ನಿವಾರಣೆಯಾಗಿ ಮತ್ತೆ ಸಾಮ್ರಾಜ್ಯಪ್ರಾಪ್ತಿಯಾಯ್ತು, ಇನ್ನು ನಿನಗೆ ಸಮಾನರು ಲೋಕದಲ್ಲಿ ಯಾರಿದ್ದಾರೆ ಆ ಚಂದ್ರಾರ್ಕವಾದ ಕೀರ್ತಿಯು ನಿನ್ನ ಕೈಸೇರಿತು. ಎಂದನು. ||೮||

ಟಿಪ್ಪಣಿ:--ಲಲನೆಯೂ ಪುತ್ರರೂ-ಲಲನೆಪುತ್ರರು (ದ್ವಂದ್ವ) ಪುತ್-ಪುತ್, ಎಂಬನರಕದಿಂದ, ತ್ರ-ರಕ್ಷಿಸತಕ್ಕವನು, (ಪುತ್ರ) (೨)

ಪುಣ್ಯದ ಉದಯು, ಪುಣ್ಯ+ ಉದಯು-ಪುಣ್ಯೋದಯು (ಗುಣ)(ಷತ.)॥

ಮು೦॥ ಹರಿಯು ನೆಲೆಗೆಡಿಸಿದನು ಪರಮೇ । ಶ್ವರನ ಭಿಕ್ಷವನೆತ್ತಿಸಿದ ಸರ ।
ಸೀರುಹಭವನನ ಶಿರವ ಪೋಗಾಡಿದನು ಪೂರ್ವದಲಿ॥ ಕರುಣಹೀನನು
ನಿನ್ನ ಸೋಕುತ। ತೆರನ ಕಾಣದೆ ಹಲವುದಿನಕಾ। ತರಿಸಿ ಛಲದಲಿ ತೊ
ಡಚಿ ಬಿಟ್ಟನು ಮನದ ಭೀತಿಯಲಿ ॥೯॥

ಟೀಕೆ:--(ಕಲಿಯು) ಪೂರ್ವದಲಿ-ಹಿಂದೆ, ಹರಿಯು-ವಿಷ್ಣುವನ್ನು, ನೆಲೆಗೆಡಿಸಿದನು-ಸ್ಥಾನಭ್ರಷ್ಟನನ್ನಾಗಿ ಮಾಡಿದನು, ಪರಮೇಶ್ವರನ-ಈಶ್ವರನನ್ನು, ಭಿಕ್ಷವನೆತ್ತಿಸಿದ - ಭಿಕ್ಷಾಟನೆ ಮಾಡಿಸಿದನು, (೧) ಸರಸೀರುಹಭವನ-ಬ್ರಹ್ಮನ, ಶಿರವ-ತಲೆಯನ್ನು ಪೋಗಾಡಿದನು-ಹೋಗಲಾಡಿಸಿದನು, (೨) ಕರುಣಹೀನನು-ಕೃಪಾರಹಿತನಾದ ಕಲಿಯು, ನಿನ್ನ-ನಿನ್ನನ್ನು, ಸೋಕುತ-ಸೇರುತ್ತಾ, ತೆರನ ಕಾಣದೆ - ನಿನ್ನ ರೀತಿಯನ್ನರಿಯದೆ, ಹಲವುದಿನ-ಕೆಲವು ದಿನಗಳು, ಛಲದೊಳು-ಛಲಹಿಡಿದು, ಕಾತರಿಸಿ-ನಿರೀಕ್ಷಿಸಿ,ತೊಡಚಿ-ಕಷ್ಟಪಡಿಸಿ,ಮನದಭೀತಿಯಲಿ-(ತನ್ನಲ್ಲಿ ತಾನೇ) ಭಯಪಟ್ಟು, ಬಿಟ್ಟನು-ಬಿಟ್ಟುಹೋದನು. ॥೯॥

ತಾತ್ಪರ್ಯ:—ಎಲೈ ನಳನೆ ಪೂರ್ವದಲ್ಲಿ ಈ ಕಲಿಯು, ವಿಷ್ಣುವಿಗೆ ಸ್ಥಳವನ್ನು ತಪ್ಪಿಸಿದನು (ಬೃಂದಾವನವನ್ನು ಬಿಟ್ಟು ದ್ವಾರಕೆಗೆ ಜರಾಸಂಧನ ಭಯದಿಂದ ಹೋಗುವಂತೆ ಮಾಡಿದನು.) ಬ್ರಹ್ಮನ ತಲೆಯನ್ನೇ ಹೋಗಲಾಡಿಸಿದನು. (ಈಶ್ವರನಿಗೆ ಕೋಪವುಂಟಾಗಿ ಬ್ರಹ್ಮನಿಗಿದ್ದ ಐದುತಲೆಗಳಲ್ಲೊಂದನ್ನು ಚಿವುಟುವಂತೆ ಮಾಡಿದನು.) ಈಶ್ವರನು ತಿರಿದು ತಿನ್ನುವಂತೆ ಮಾಡಿದನು, (ಆ ಬ್ರಹ್ಮನ ತಲೆಬುರುಡೆಯು ಈಶ್ವರನ ಕೈಯಲ್ಲಿಯೇ ನಿಂತು ಆ ಪಾತ್ರೆಯಲ್ಲಿ ಭಿಕ್ಷವೆತ್ತುವಂತೆ ಮಾಡಿದನು.) ಹೀಗೆ ತ್ರಿಮೂರ್ತಿಗಳನ್ನೇ ಕಷ್ಟಪಡಿಸಿದ ಕೃಪಾಹೀನನಾದ ಕಲಿಯು ನಿನ್ನನ್ನು ಬಿಡುವನೇ, ನಿನ್ನಲ್ಲಿ ಸೇರಿ ಧರ್ಮಭ್ರಷ್ಟನಾಗಿ ಮಾಡಬೇಕೆಂಬ ಛಲದಿಂದ ನಾನಾ ಪ್ರಯತ್ನಗಳನ್ನು ಮಾಡಿ ಬಹು ತೊಂದರೆಯನ್ನುಂಟುಮಾಡಿ ಅನೇಕದಿನಗಳವರೆಗೂ ನಿರೀಕ್ಷಿಸಿದರೂ ನೀನು ಸತ್ಯಭ್ರಷ್ಟನಾಗದೆ ಇದ್ದುದ್ದರಿಂದ ನಿನ್ನ ಮೇಲೆ ತನ್ನ ಕೈಸಾಗದೆಂದು ಹೆದರಿ ನಿನ್ನನ್ನು ಬಿಟ್ಟು ಹೋದನು. ।೯॥

ಟಿಪ್ಪಣಿ:—(೧) ಸರಸೀ-ಕೊಳದಲ್ಲಿ, ರುಹ-ಹುಟ್ಟಿದುದು (ಕಮಲ) ಅದರಲ್ಲಿ, ಭವ-ಹುಟ್ಟಿದವನು, (ಬ್ರಹ್ಮ) (೨) ಕರುಣವಿಂದಹೀ

ನರು-ಕರುಣಾವೀನನು (ತ್ರ. ತ) ॥೯॥

ಪ॥ ಎಲ್ಲನೃಪರಂತಲ್ಲಲಕ್ಷ್ಮೀ ಕ್ರಾ ವಲ್ಲಭನಪ್ರತಿಬಿಂಬನಿನ್ನಲಿ। ನಿಲ್ಲಬಲ್ಲನೆಕಲಿಪುರುಷನತಿಬೇಗತೆರಳಿದನು ॥ ಸಲ್ಲಲಿತಸಾಮ್ರಾಜ್ಯಪದವಿಂದೆಲ್ಲನಿನಗಹುದೆಂದುಧರಣೀ। ವಲ್ಲಭನಸತ್ಕರಿಸಿಕೊಂಡಾಡಿದನುಮೈತ್ರೇಯ ॥೧೦॥

ಟೀಕೆ:—ಎಲ್ಲ ನೃಪರಂತೆ-ಎಲ್ಲ ದೊರೆಗಳಂತೆ, ಅಲ್ಲ-ಅಲ್ಲವು, ಲಕ್ಷ್ಮೀವಲ್ಲಭನ-ವಿಷ್ಣುವಿನ, ಪ್ರತಿಬಿಂಬ-ಪ್ರತಿಕೃತಿಯು, ನಿನ್ನಲಿ- ನಿನ್ನಲ್ಲಿ, ಕಲಿಪುರುಷಂ-ಕಲಿಯು, ನಿಲ್ಲಬಲ್ಲನೇ - ಸೇರುವದಕ್ಕೆಶಕ್ತನೇ ! ಅತಿಬೇಗ-ಜಾಗ್ರತೆಯಾಗಿ, ತೆರಳಿದನು-ಬಿಟ್ಟುಹೋದನು, (೧) ಸಲ್ಲಲಿತ ಸಾಮ್ರಾಜ್ಯಪದಂ-ಮನೋಹರವಾದ ಚಕ್ರವರ್ತಿತ್ವವು, ಎಲ್ಲ - ಎಲ್ಲವೂ, ಇಂದು-ಈಗ, ನಿನಗಹುದು-ನಿನಗಾಗುವುದು, ಎಂದು-ಎಂಬದಾಗಿ, ಮೈತ್ರೇಯ-ಮೈತ್ರೇಯನುಋಷಿಯು, (೨) ಧರಣೀವಲ್ಲಭನ-ದೊರೆಯನ್ನು, ಸತ್ಕರಿಸಿ - ಉಪಚಾರಮಾಡಿ, ಕೊಂಡಾಡಿದನು -ಸ್ತುತಿಸಿದನು. ॥೧೦॥

ತಾತ್ಪರ್ಯ:—ಅಯ್ಯಾ ನಳನೇ ! ನೀನು ಎಲ್ಲರಂತೆ ಸಾಮಾನ್ಯ ರಾಜನಲ್ಲ, . ನಾವಿಷ್ಣುಃ ಪೃಥಿವೀಪತಿಃ , ಎಂಬಶಾಸ್ತ್ರವು ನಿನ್ನಲ್ಲಿಯೇ ಸಂಪೂರ್ಣವಾಗಿ ಅನ್ವಯಿಸುವದು. ಆ ಲಕ್ಷ್ಮೀಪತಿಯಾದ ಮಹಾವಿಷ್ಣುವಿನ ಪ್ರತಿಬಿಂಬರೂಪನು, ಅದರಿಂದಲೇ ನಿನ್ನಲ್ಲಿ ಬಹುಕಾಲವಿರುವುದಕ್ಕೆ ಶಕ್ತಿಸಾಲದೆ ಕಲಿಪುರುಷನು ಬೇಗ ಬಿಟ್ಟು ಹೋದನು, ಇನ್ನುಮುಂದೆ, ಸಕಲಸಾಮ್ರಾಜ್ಯವೂ ನಿನ್ನವಶವಾಗುವುದು, ಎಂದು ಮೈತ್ರೇಯನು ಕೊಂಡಾಡುತ್ತಿದ್ದನು. ॥೧೦॥

ಟಿಪ್ಪಣಿ:—(೧) ಸತ್ + ಲಲಿತ-ಸಲ್ಲಲಿತ (ಸಂ. ವ್ಯಾ. ಸಂ.) ತಕಾರಕ್ಕೆ ಲಕಾರಾದೇಶವು ಬಂದಿದೆ, (ಪ್ರಾ. ಕ. ಸ) ಲಲಿತವಾದ ಸಾಮ್ರಾಜ್ಯ (ವಿ. ಪೂರ್ವ. ಕ) ಸಾಮ್ರಾಜ್ಯದಪದ (ಷ. ತ) (೨) ಧರಣಿಯವಲ್ಲಭ-ಧರಣೀವಲ್ಲಭ (ಷ. ತ) ॥೧೦॥

ಪ॥ ಎಂದುಹರಸಿದನವನಿಪನೆಮುದ। ದಿಂದಮಂತ್ರಾಕ್ಷತೆಗಳಲಿಮುನಿ। ವೃಂದಸಂತೋಷಿಸಿತುನೃಪಸಿಂಹಾಸನದೊಳಿರಲು ॥ ಇಂದುವದನೆಯುರಾರತಿಯನಲ। ವಿಂದೆಯೆತ್ತಿದರಲ್ಲಿಸತಿಯರು। ಸಂದಣಿಸಿಪಾಡಿದರುಶೋಭಾನವನುಮೊನಲಿದು ॥೧೧॥

ಟೀಕೆ:— ಎಂದು-ಎಂಬದಾಗಿ, ಅವನಿಪಗೆ-ದೊರೆಗೆ, ಮುದ ದಿಂದ-ಸಂತೋಷದಿಂದ, (೧) ಮಂತ್ರಾಕ್ಷತೆಗಳಲಿ - ಮಂತ್ರಾಕ್ಷತೆಗ ಳಿಂದ, ಹರಸಿದಂ-ಆಶೀರ್ವಾದ ಮಾಡಿದನು, ಮುನಿವೃಂದ- ಋಷಿಸ ಮೂಹವು, ಸಂತೋಷಿಸಿತು-ಸಂತೋಷಪಟ್ಟಿತು, ನೃಪ-ದೊರೆಯು, ಸಿಂಹಾಸನದೊಳ್-ಸಿಂಹಾಸನದಮೇಲೆ, ಇರಲು-ಕುಳಿತಿರಲು, ಇಂದು ವದನೆಯರ್-ಸ್ತ್ರೀಯರು, ನಲವಿಂದೆ-ಉತ್ಸಾಹದಿಂದ (೨) ಆರತಿಯ ಆರತಿಯನ್ನು, ಎತ್ತಿದರ್-ಬೆಳಗಿದರು, ಅಲ್ಲಿ, ಸತಿಯರ್-ಹೆಂಗಸರು,ಸಂ ದಣಿಸಿ-ಗುಂಪಾಗಿ, (೩)ಮನವೊಲಿದು-ಪ್ರೀತಿಪೂರ್ವಕವಾಗಿ,ಶೋಭಾನ ವನು-ಮಂಗಳವನ್ನು,ಪಾಡಿದರು-ನುಡಿದರು(ಹಾಡುಗಳನ್ನು ಹೇಳಿದರು)||

ತಾತ್ಪರ್ಯ:— ಮೈತ್ರೇಯನು ಮಂತ್ರಾಕ್ಷತೆಗಳಿಂದ ಆಶೀರ್ವಾ ದ ಮಾಡಲು ಋಷಿಗಳೆಲ್ಲರೂ ಆನಂದಭರಿತರಾದರು, ನಳರಾಜೇಂದ್ರನು ದಿವ್ಯಸಿಂಹಾಸನದಲ್ಲಿ ತುಳಿತಿರಲು ಸುವಾಸಿನಿಯರು ಹಾಡುಗಳನ್ನು ಹೇ ಳಿ, ಆರತಿಗಳನ್ನೆತ್ತಿ ಹರಸಿದರು ||೧೧||

ಟಿ:— (೧) ಮಂತ್ರಯುಕ್ತವಾದ ಅಕ್ಷತೆ - ಮಂತ್ರಾಕ್ಷತೆ (ಲು, ಮ, ಕ) (೨) (ತ್ಸ) ಆರಾತ್ರಿಕ (೩) ಮನದಿಂಒಲಿದು-ಮನವೊ ಲಿದು (ಕ್ರಿ ಸ) ||೧೧||

ಮೂ|| ಊದಿದವುಕಹಳೆಗಳುಶಂಖವು | ನಾದಿಸಿತುಭೇರೀಮೃದಂಗ
ವಿ | ನೋದರವರಂಜಿಸಿತುನಾನಾವಾದ್ಯರಭಸದಲಿ || ಮೇದಿನೀಶ್ವ
ರರಾಗಮುಖ್ಯಗ | ಳೋದಿಸಿದರವನಿಪನಸತಿಯುಳಿ | ಗೈದೆತನ
ಮಿಗಿಲೆಂದುಹರಸಿತುಮುನಿನಿವಹೂನಿಕರ ||೧೨||

ಟೀಕೆ:— (೧) ಕಹಳೆಗಳು-ತುತ್ತೂರಿಗಳು, ಊದಿದುವು-ಶಬ್ದ ಮಾಡಿದವು, ಶಂಖವು, ನಾದಿಸಿತು-ಧ್ವನಿಮಾಡಿತು, ಭೇರೀಮೃದಂಗ ವಿ ವಿನೋದರವ-ನಗಾರಿ ಮದ್ದಳೆ ಮೊದಲಾದವುಗಳ ಮನೋಹರವಾದ ಶ ಬ್ದವು, ರಂಜಿಸಿತು-ಪ್ರಕಾಶಿಸಿತು, ಆಗ, ನಾನಾವಾದ್ಯ ರಭಸದಲಿ-ಬಗೆ ಬಗೆಯಾದ ವಾದ್ಯಧ್ವನಿಗಳಿಂದ, ಮೇದಿನೀಶ್ವರರ್-ದೊರೆಗಳು, ಮು ಖ್ಯಗಳಂ-ಮರ್ಯಾದೆಯನ್ನು, ಓದಿಸಿದರ್-ಓದಿಸಿಕೊಟ್ಟರು, (೨) ಮು ನಿವಹೂನಿಕರ-ಋಷಿಸ್ತ್ರೀಯರಗುಂಪು, ಅವನಿಪನ ದೊರೆಯು, ಸತಿ ಯುಳಿಗೆ-ಹೆಂಡತಿಯಾದದಮಯಂತಿಗೆ (೩) ಐದೆತನ-ಸುಮಂಗಲೀತ್ವವು ಮಿಗಿಲೆಂದು-ಹೆಚ್ಚಲೆಂದು, ಹರಸಿತು-ಆಶೀರ್ವದಿಸಿತು ||೧೨||

ತಾತ್ಪರ್ಯ:—ಭೇರಿ, ಶಂಖ, ಕಹಳೆ, ಮೃದಂಗ ಮೊದಲಾದ ವಾದ್ಯಗಳು ಭೋರಿಡುತ್ತಿರಲು, ದೊರೆಗಳೆಲ್ಲರೂ ಧನಕನಕವಸ್ತು ವಾಹನ ವಸ್ತ್ರಾಭರಣಾದಿ ಅಮೂಲ್ಯವಸ್ತುಗಳನ್ನು ಮುಯ್ಯಾಗಿ ಓದಿಸಿದರು! ತಪಸ್ವಿನಿಯರೆಲ್ಲರೂ ದಮಯಂತಿಯು ಬಹುಕಾಲ ಸುವಾಸಿನಿಯಾಗಿರಲೆಂದು ಹರಸಿ ಆಶೀರ್ವಾದಮಾಡಿದರು ।೧೨॥

ಟಿಪ್ಪಣಿ:— (೧ (ದ್ಭ) ಕಾಳೆ (೨) ಮುನಿಗಳವಧುಗಳು-ಮುನಿವಧುಗಳು (ಷ. ತ) ಮುನಿವಧುಗಳನಿಕರ-ಮುನಿವಧೂನಿಕರ (ಷ. ತ) (೩) ಐದೆ-ಸುಮಂಗಲಿ, ಐದೆಯಭಾವ-ಐದೆತನ, ಭಾವಾರ್ಥದಲ್ಲಿತನಎಂಬ ಪ್ರತ್ಯಯವುಬಂತು, ತದ್ಧಿತಾಂತ ॥೧೨॥

ಪೂ॥ ಅರಸಕೇಳುವಿದರ್ಭಪತಿಮುನಿ । ವರರನುಪಚರಿಸಿದನುಧರ
ಣೀ । ಸುರರಿಗಿತ್ತನುಗೋಹಿರಣ್ಯಫಲಾದಿದಾನವನು ॥ ಕರಸಿಕೊ
ಟ್ಟನುನೃಪತಿಸಕಲಾ । ಭರಣಗಳಕರಿತುರಗರಥವನು । ಪುರಜನ
ರಸಂತೈಸಿಕಳುಹಿದನಖಿಳಬಾಂಧವರ ॥೧೩॥

ಟೀಕೆ:— ಅರಸ-ಧರ್ಮರಾಜನೇ, ಕೇಳು, ವಿದರ್ಭಪತಿ-ಬೀಮರಾಜನು, ಮುನಿವರರಂ-ಋಷಿಶ್ರೇಷ್ಠರನ್ನು, ಉಪಚರಿಸಿದನು-ಸತ್ಕರಿಸಿದನು, ಧರಣೀಸುರರಿಗೆ-ಬ್ರಾಹ್ಮಣರಿಗೆ, ಗೋಹಿರಣ್ಯ ಫಲಾದಿದಾನವನು-ಗೋದಾನ, ಸುವರ್ಣದಾನ, ಫಲದಾನ ಮೊದಲಾದುವನ್ನೂ, ಸಕಲಾಭರಣ ಕರಿತುರಗರಥವನು-ಚತುರಂಗಸೈನ್ಯವನ್ನೂ, ರತ್ನಾಭರಣಗಳನ್ನೂ,, ಕರಸಿ-ಬರಮಾಡಿ, ಕೊಟ್ಟನು (೨) ಅಖಿಳಬಾಂಧವರ-ಬಂಧುಗಳೆಲ್ಲರನ್ನೂ, ಪುರಜನರ-ಪೌರರನ್ನೂ, ಸಂತೈಸಿ-ಉಪಚಾರಮಾಡಿ, ಕಳುಹಿದಂ-ಕಳುಹಿಸಿಕೊಟ್ಟನು ॥೧೩॥

ತಾತ್ಪರ್ಯ:—ಮುನಿಗಳಿಗೆ ಸತ್ಕಾರಮಾಡಿ, ಬ್ರಾಹ್ಮಣರನ್ನು ಕರೆಯಿಸಿ, ಅವರಿಗೆ ನಾನಾದಾನಗಳನ್ನೂ. (ಗೋದಾನ, ಭೂದಾನ, ತಿಲದಾನ, ಹಿರಣ್ಯದಾನ, ಆಜ್ಯದಾನ, ವಸ್ತ್ರದಾನ, ಧಾನ್ಯದಾನ, ಕನ್ಯಾದಾನ ಮೊದಲಾದುವು) ವಸ್ತ್ರಾಭರಣ ವಾಹನಾದಿಗಳನ್ನೂ ಕೊಟ್ಟು, ತನ್ನ ಬಂಧು ಮಿತ್ರರನ್ನೂ, ಪುರಜನರನ್ನೂ ಅವರವರ ಯೋಗ್ಯತಾನುಸಾರವಾಗಿ ಆದರಿಸಿ ಎಲ್ಲರನ್ನೂ ಕಳುಹಿಸಿದನು ॥೧೩॥

ಟಿಪ್ಪಣಿ:— (೧) ಧರಣಿಯಸುರರು (ಷ. ತ) (೨) ಅಖಿಳರಾದ ಬಾಂಧವರು-ಅಖಿಳಬಾಂಧವರು (ವಿ. ಪೂರ್ವ, ಕ) ॥೧೩॥

ಮೂ॥ ಹರಿದುದೋಲಗವಲ್ಲಿಯಾಚಕ । ವರರುಧರಣೀಸುರರುಮುಖ್ಯ
ರು । ವರಪುರೋಹಿತಮಂತ್ರಿಸಹತೆರಳಿದರುಮಂದಿರಕೆ ॥ ಮರು
ದಿವಸಋತುಪರ್ಣನಳನೃಪ । ಗೆರಗಿಕಳುಹಿಸಿಕೊಂಡಯೋಧ್ಯಾ।
ಪುರವಹೊಕ್ಕನುಚೈದ್ಯಭೂಪತಿಮರಳಿದನುಪುರಕೆ ॥೧೪॥

ಟೀಕೆ:— ಅಲ್ಲಿ, ಓಲಗವು-ಸಭೆಯು, ಹರಿದುದು-ಪೂರಯಿಸಿ ತು, ಯಾಚಕವರರು-ಪ್ರಸಿದ್ಧರಾದ ಯಾಚಕರು, ಧರಣೀಸುರರು-ಬ್ರಾ ಹ್ಮಣರು, ಮುಖ್ಯರು-ಪ್ರಮುಖರು (೧) ವರಪುರೋಹಿತ-ಶ್ರೇಷ್ಠರಾದ ಪುರೋಹಿತರು, ಮಂತ್ರಿ, ಸಹ-ಮಂತ್ರಿನೊದಲಾದವರು, ಮಂದಿರಕೆ-ಮನೆಗೆ, ತೆರಳಿದರು-ಹೋದರು, (೨) ಮರುದಿವಸ- ಮಾರನೆಯದಿವಸ ಋತುಪರ್ಣ- ಋತುಪರ್ಣನು, ನಳನೃಪಗೆ, ಎರಗಿ-ನಮಸ್ಕರಿಸಿ, ಕಳುಹಿಸಿಕೊಂಡು-ಸಾಗಕಳುಹಿಸಿಕೊಂಡು, ಅಯೋಧ್ಯಾಪುರವ-ಅಯೋಧ್ಯಾಪಟ್ಟಣವನ್ನು, ಹೊಕ್ಕನು-ಪ್ರವೇಶಿಸಿದನು, ಚೈದ್ಯ ಭೂಪತಿ-ಚೈದ್ಯರಾಜನು, ಪುರಕೆ-ಪಟ್ಟಣಕ್ಕೆ, ತೆರಳಿದನು-ಹೋದನು ॥೧೪॥

ತಾತ್ಪರ್ಯ:— ಸಭೆಯು ಪೂರಯಿಸಿತು. ಯಾಚಕರೂ, ಬ್ರಾಹ್ಮಣರೂ, ಪುರೋಹಿತರೂ, ಮುಖ್ಯರಾದ ಪೌರರೂ, ಮಂತ್ರಿಗಳೂ, ಸಾಮಂತರಾಜರೂ, ಎಲ್ಲರೂ ಅವರವರ ಸ್ಥಳಗಳಿಗೆ ತೆರಳಿದರು, ಋತುಪರ್ಣನನ್ನು ಅಯೋಧ್ಯಾಪುರಕ್ಕೆ ಸಾಗ ಕಳುಹಿಸಿದರು. ಚೈದ್ಯರಾಜನು ತನ್ನೂರಿಗೆ ಪ್ರಯಾಣಮಾಡಿದನು ॥೧೪॥

ಟಿಪ್ಪಣಿ:— ವರರಾದ ಪುರೋಹಿತರು-ವರಪುರೋಹಿತರು (ವಿ. ಪೂರ್ವ. ಕ) (೨) ಮರುವಾದ ದಿವಸ-ಮರುದಿವಸ (ವಿ. ಪೂರ್ವ. ಕ) ॥

ಮೂ॥ ಇಂದುಮುಖಿದಮಯಂತಿಯೊಡನಾ । ನಂದದಲಿನಳನೃಪತಿ
ಮಾವನ । ಮಂದಿರದೊಳೊಂದೊರುಷವಿದ್ದನುಸಕಲವಿಭವದಲಿ ॥
ಮುಂದೆನಮ್ಮಯನಿಷಧಪುರಿಗಿ । ನ್ನೆಂದುಗಮಿಸುವದೆನತಾ
ನಿಂ । ತೆಂದುಭೀಮನೃಪಾಲನೊಡನಾಲೋಚಿಸಿದನುಹದನ ॥೧೫॥

ಟೀಕೆ:— ನಳನೃಪತಿ-ನಳರಾಜನು, ಇಂದುಮುಖಿ ದಮಯಂತಿ ಯೊಡನೆ-ಚಂದ್ರಮುಖಿಯಾದ ದಮಯಂತಿಯ ಸಂಗಡ, ಮಾವನ ಮಂದಿರದೊಳ್-ಮಾವನಮನೆಯಲ್ಲಿ (೧) ಸಕಲವಿಭವದಲಿ-ಸಮಸ್ತ ವೈಭವದಿಂದ, ಒಂದೊರುಷವಿದ್ದನು-ಒಂದು ವರ್ಷಕಾಲ ವಾಸಮಾಡಿದನು, ಮುಂದೆ, ನಮ್ಮಯ-ನಮ್ಮ (೨) ನಿಷಧಪುರಿಗೆ-ನಿಷಧಪಟ್ಟಣ

ಕ್ಕೆ, ಗಮಿಸುವ-ಹೊರಡುವ, ಹದನ-ಸಮಾಚಾರವು, ತಾಂ-ತಾನು, ಇನ್ನೆಂದು-ಇನ್ನು ಯಾವಾಗ, ಇಂತೆಂದು-ಈ ಪ್ರಕಾರವಾಗಿ, ಹದನ-ಸಂಗತಿಯನ್ನು, ಬೀಮನೃಪಾಲನೊಡನೆ - ಭೀಮರಾಜನಸಂಗಡ, ಆಲೋಚಿಸಿದನು ‖೧೫‖

ತಾತ್ಪರ್ಯ:—ಅನಂತರದಲ್ಲಿ ನಳನು ದಮಯಂತಿಯೊಡನೆ ಸಕಲ ವೈಭವಗಳಿಂದ ಒಂದು ವರ್ಷದವರೆಗೆ ಮಾವನ ಮನೆಯಲ್ಲಿ ಸುಖವಾಗಿದ್ದು ವಿಶ್ರಮಿಸಿಕೊಂಡು ಒಂದುದಿನ ಭೀಮರಾಜನೊಡನೆ ,ನಿಷಧಪುರಕ್ಕೆ ನಾನು ಯಾವಾಗ ಪ್ರಯಾಣಮಾಡಲಿ, ಎಂದಾಲೋಚಿಸಿದನು ‖೧೫

ಟಿಪ್ಪಣಿ:— (೧) ಸಕಲವಾದ ವಿಭವ-ಸಕಲವಿಭವ (ವಿ. ಪೂರ್ವ. ಕ) (೨) ನಿಷಧನಪುರ (ಷ. ತ) ‖೧೫‖

ಮೂ‖ ದಂಡುನಡೆಯಲಿನಿಷಧಪುರಿಗಾ । ಭಂಡನಹಪುಷ್ಕರನಮಾತೇ
ನಂಡಲೆದುಫಲವಿಲ್ಲಸಾಕಿನ್ನೇಳಿಯಿನ್ನೆನುತ ‖ ಮಂಡಲಾಧಿಪನೆ
ನಲುಭೂಪರ । ತಂಡವೆದ್ದುದುಕೊಡುತವರು । ದ್ದಂಡಕೈದುವ
ಕೊಂಡುನಡೆದರುನಳನನನ್ನೆಯಲಿ ‖೧೬‖

ಟೀಕೆ:— ದಂಡು, ನಿಷಧಪುರಿಗೆ- ನಿಷಧಪಟ್ಟಣಕ್ಕೆ, ನಡೆಯುಲಿ-ಹೊರಡಲಿ, ಆಭಂಡನಹ-ಸೀಚನಾದ, ಪುಷ್ಕರನ, ಮಾತೇನು, ಅಂಡಲೆದು-ದೂಷಿಸಿ, ಫಲವಿಲ್ಲ-ಪ್ರಯೋಜನವಿಲ್ಲಿ, ಸಾಕ, ಇನ್ನೇಳನ್ನು ಇನ್ನುಹೊರಡಿ, ಎನುತ-ಎಂಬದಾಗಿ (೧) ಮಂಡಲಾಧಿಪಂ-ಚಕ್ರಾಧಿಪತಿಯಾದ ನಳನು, ಎನಲು-ಹೇಳಲು, ಭೂಪರ-ದೊರೆಗಳ, ತಂಡವು-ಗುಂಪು, ಎದ್ದುದು-ಸಿದ್ಧವಾಯ್ತು, ಅವರ್-ಅವರು, (೨) ಉದ್ದಂಡಕೈದುವ- ದೊಡ್ಡದೊಡ್ಡ ಆಯುಧಗಳನ್ನು, ಕೊಂಡು-ತೆಗೆದುಕೊಂಡು, ನಳನ (೩) ಸನ್ನೆಯಲಿ-ಆಜ್ಞೆಯಿಂದ, ನಡೆದರು ‖೧೬‖

ತಾತ್ಪರ್ಯ:- ಚತುರಂಗಸೈನ್ಯವು ನಿಷಧಪುರಕ್ಕೆಪುಷ್ಕರನಮೇಲೆ ನಡೆಲಿ ! ಅವನನ್ನು ಲಕ್ಷ್ಯಮಾಡುವುದೇಕೆ ? ಸಾಕು ಹೊರಡಿ ಎಂದು ನಳಚಕ್ರವರ್ತಿಯು ಹೇಳಿ ಅವರವರಿಗೆಆಜ್ಞೆಮಾಡಲು, ಎಲ್ಲರೂ ನಾನಾವಿಧಗಳಾದ ಆಯುಧಗಳನ್ನು ಹಿಡಿದು ಗುಂಪು ಗುಂಪಾಗಿ ಹೊರಟರು ‖

ಟಿಪ್ಪಣಿ:— (೧) ಮಂಡಲದ ಅಧಿಪ-ಮಂಡಲಾಧಿಪ (ಷ. ತ) (೨) ಉದ್ದಂಡವಾದಕೈದು-ಉದ್ದಂಡಕೈದು, (ವಿ. ಪೂರ್ವ. ಕ) (೩) (ತ್ಸ) ಸಂಜ್ಞಾ ‖೧೬‖

ಮೂ॥ ತುರಗಹಲ್ಲಣಿಸಿದುದುರಥವೋ | ಹರಿಸಿತೆರಳಿತುಸಂಗರಕೆಮ
ದ | ಕರಿಗಳಿಟ್ಟಣಿಸಿದುದುಕಾಲಾಳಿರದೆಸಂದಣಿಸಿ ॥ ನೆರೆದುದಗಣಿ
ತಸೈನ್ಯಸಾಗರ | ಮೊರೆವವೋಲ್ಗಂಭೀರಭೇರಿಗ | ಳುರವಣಿಸೆ
ಹೊರವಂಟನಳನೃಪನರಸಕೇಳೆಂದ ॥೧೭॥

ಟೀಕೆ:— ತುರಗ-ಕುದುರೆಯು (೧) ಹಲ್ಲಣಿಸಿದುದು-ಜೀನು ಮೊದಲಾದವುಗಳು ಕಟ್ಟಸಿದ್ಧವಾಯ್ತು, ರಥ-ರಥಗಳು, ಮೋಹರಿಸಿ-ಕೂಡಿ, ಸಂಗರಕೆ-ಯುದ್ಧಕ್ಕೆ, ತೆರಳಿದುದು-ಹೊರಟಿತು, (೨) ಮದ ಕರಿಗಳ್-ಮದಿಸಿದ ಆನೆಗಳು, ಇಟ್ಟಣಿಸಿದುದು-ಸಾಲಾಗಿನಿಂತವು, ಕಾಲಾಳು-ಕಾಲಬಲವು, ಇರದೆ-ತಪ್ಪದೆ, ಸಂದಣಿಸಿ-ಸೇರಿ (೩) ಅಗಣಿತ ಸೈನ್ಯ-ಹೆಚ್ಚಾದಸೇನೆಯು, ನೆರೆದುದು-ಸೇರಿತು, ಸಾಗರ-ಸಮುದ್ರವು, ಮೊರೆವವೋಲ್-ಮೊರೆಯುವಹಾಗೆ, ಗಂಭೀರಭೇರಿಗಳ್-ಗಂಭೀರವಾದಧ್ವನಿಯುಳ್ಳ ಭೇರಿಗಳು, ಉರವಣಿಸೆ-ಶಬ್ದಮಾಡುತ್ತಿರಲು, ನಳನೃಪಂ-ನಳರಾಜನು, ಹೊರವಂಟ-ಹೊರಟನು ॥೧೭॥

ತಾ:— ಹಸ್ತ್ಯಶ್ವ, ರಥಪದಾತಿಗಳೆಂಬ ಚತುರಂಗ ಸೈನ್ಯವು ಕ್ರಮವಾಗಿ ಯುದ್ಧಕ್ಕೆ, ಸಿದ್ಧವಾಗಲು, ಸೇನೆಯು ಸಮುದ್ರದಂತೆ ಅಪಾರವಾಗಿ ಸೇರಿತು, ನಾನಾವಿಧವಾದ ವಾದ್ಯಗಳ ರಭಸದಿಂದ ಸಮುದ್ರವು ಮೊರೆಯುವಂತೆ ಧ್ವನಿಯಾಗಿ ದಿಕ್ಕುದಿಕ್ಕಿಗೂ ಹಬ್ಬುತ್ತಿರಲು, ನಳನು ಜೈತ್ರಯಾತ್ರೆಗೆ ಹೊರಡಿಸಿದನು॥೧೭॥

ಟಿಪ್ಪಣಿ:-- (೧) ಹಲ್ಲಣಕ್ಕೆ (ತ್ಸ) ಪಲ್ಯಾಣ(೨) ಮದಯುಕ್ತವಾದ ಕರಿಗಳು-ಮದಕರಿಗಳು (ಲು. ಮ.ಕ) (೩) ಗಣಿಸುವುದಕ್ಕೆ ಆಗದುದುಅಗಣಿತ (ನಞ್. ತ) ಅಗಣಿತವಾದ ಸೈನ್ಯ-ಅಗಣಿತಸೈನ್ಯ (ವಿ. ಪೂರ್ವ. ಕ) ॥೧೭॥

ಮೂ॥ ತುರಗಚಯಟಿಂಟಣಿಸಿಹೂಡಿದ | ವರರಥಕೆಬಲವಂದುಕೈದುವ | ಧರಿಸಿಯೇರಿದನರಸಮಂಗಳವಾದ್ಯರಭಸದಲಿ॥ ತೆರಳಿತಲ್ಲಿಮ
ಹಾರಥರುಸಂ | ಗರಕೆಮಿಂಚುವಛತ್ರಗಡಣದಿ | ಧುರಕೆನಡೆದ
ರುಮುಂದೆಸಾರುವಗೌರುಗಹಳೆಯುಲಿ ॥೧೮॥

ಟೀಕೆ:—ತುರಗಚಯ-ಕುದುರೆಗಳ ಸಮೂಹವು, ಟಿಂಟಣಿಸಿ-ಸೇರಿ, ಹೂಡಿದ-ಕಟ್ಟಿದ, ವರರಥಕೆ-ಉತ್ತಮವಾದ ರಥಕ್ಕೆ, (೧) ಬಲವಂದು-ಪ್ರದಕ್ಷಿಣೆಮಾಡಿ, ಕೈದುವ-ಆಯುಧವನ್ನು, ಧರಿಸಿ-ಹಿಡಿದು,

ಅರಸ-ದೊರೆಯು, ಮಂಗಳವಾದ್ಯರಭಸದಲಿ-ಶುಭವಾದ ವಾದ್ಯಧ್ವನಿ ಯಿಂದ, ಏರಿದಂ-ಹತ್ತಿದನು, ತೆರಳಿತು- (ರಥವು) ಮುಂದಕ್ಕೆ ಹೊರಟಿ ತು. ಅಲ್ಲಿ, (೨) ಮಹಾರಥರು-ಒಳ್ಳೆ ರಥಿಕರು, ಸಂಗರಕ್ಕೆ-ಯುದ್ಧ ಕ್ಕೆ, ಮಿಂಚುವ-ಹೊಳೆವ, ಭಟರ-ಯೋಧರ, ಗಡಣದಿ-ಗುಂಪಿನಿಂದ, ಮುಂದೆ-ಮುಂಭಾಗದಲ್ಲಿ, ಸಾರುವ-ಕೂಗುತ್ತಿರುವ, ಗೌರುಗಹಳೆಯು ಲಿ-ದೊಡ್ಡ ಕಹಳೆಗಳೊಡನೆ, ಧುರಕೆ-ಯುದ್ಧಕ್ಕೆ, ನಡೆದರು-ಹೋದರು॥

ತಾತ್ಪರ್ಯ:— ರಥಕ್ಕೆ ಪ್ರದಕ್ಷಿಣೆಮಾಡಿ, ಮಂಗಳಕರವಾದ ವಾ ದ್ಯಗಳ ಧ್ವನಿಯಿಂದ ಏರಿದನು, ಮುಂಭಾಗದಲ್ಲಿ ಕಹಳಾಧ್ವನಿಯಿಂದ ಕೂಡಿ ಮಹಾ ರಥಿಕರೆಲ್ಲರೂ ಯುದ್ಧಕ್ಕೆ ಪ್ರಯಾಣಮಾಡಿದರು ॥೧೮॥

ಟಿಪ್ಪಣಿ:— (೧) ಬಲದಿಂದಬಂದು-ಬಲವಂದು (ಕ್ರಿ. ಸ) ಬ ಕಾರಕ್ಕೆ ವಕಾರಾದೇಶವು ಬಂತು, (೨) ಮಹತ್ತಾದ ರಥವುಳ್ಳವರು-ಮ ಹಾರಥರು (ಬ. ವ್ರೀ. ಸ) ॥೧೮॥

ಮೂ॥ ಇದನು ಕಾಣನುನಳನುವನವಾ । ಸದಪಯಣವಾದಲ್ಲಿಮಕ್ಕ
ಳ॥ಪದುಳದಿಂದೆರಸಿವಿದರ್ಭಕೆಕಳುಹಿಬಿಟ್ಟರಥ ॥ ಗದಗದಿಪನವ
ರತ್ನ ನಿಚಯುದೊ । ಳುದಿಸಿಮೆರೆವಸುವರ್ಣಕಲಶದಿ । ಮದನನೆಲೆ
ಯಿದುಯೆನಿಸಿಮೆರೆದುದುವರವರೂಥವದು ॥೧೯॥

ಟೀಕೆ:— ಗದಗದಿಪ-ಥಳಥಳಿಸುತ್ತಿರುವ, ನವರತ್ನ ನಿಚಯು ದೊಳ್-ನವರತ್ನ ಸಮೂಹದಿಂದ, ಉದಿಸಿ-ಹುಟ್ಟಿ, ಮೆರೆವ-ಹೊಳೆ ಯುತ್ತಿರುವ, (೧) ಸುವರ್ಣ ಕಲಶದಿ-ಚಿನ್ನದ ಕಲಶಗಳಿಂದ, ಇದು-ಈ ರಥವು, ಮದನನೆಲೆ-ಮನ್ಮಥನ ವಾಸಸ್ಥಾನವು, ಎನಿಸಿ-ಎನ್ನುವಹಾಗೆ, (೨) ವರವರೂಥವು-ಶ್ರೇಷ್ಠವಾದ ರಥವು, ಅದು-ಅದು, ಮೆರೆದುದು- ಶೋಭಿಸುತ್ತಿತ್ತು. ವನವಾಸದ-ಅರಣ್ಯವಾಸಕ್ಕಾಗಿ, ಪಯಣವಾದಲ್ಲಿ- ಪ್ರಯಾಣವಾದಾಗ, ಪದುಳದಿಂ-ಕ್ಷೇಮವಾಗಿ, ಮಕ್ಕಳನು-ತನ್ನ ಪು ತ್ರರನ್ನು, ಎರಿಸಿ-ಹತ್ತಿಸಿ, ವಿದರ್ಭಕೆ- ವಿದರ್ಭಪುರಕ್ಕೆ, ಕಳುಹಿದ- ಕಳುಹಿಸಿದ, ರಥ-ರಥವು, ಇದನು-ಈ ಸಂಗತಿಯನ್ನು, ನಳನು, ಕಾ ಣನು-ತಿಳಿಯಲಿಲ್ಲ ॥೧೯॥

ತಾತ್ಪರ್ಯ:— ಸುವರ್ಣ ಕಲಶಗಳಿಂದ ಕೂಡಿ, ನವರತ್ನ ಖಚಿತ ವಾಗಿ ಪ್ರಕಾಶಿಸುತ್ತಿದ್ದ ಆ ರಥವು ಮನ್ಮಥನ ಕ್ರೀಡಾಸ್ಥಾನವೋ ಎ ನ್ನುವಹಾಗೆ ತೋರುತ್ತಿತ್ತು. ನಳನು ಅರಣ್ಯಕ್ಕೆ ಹೋಗುವಾಗ ತನ್ನ

ಮಕ್ಕಳನ್ನು ಕುಳ್ಳಿರಿಸಿ ವಿದರ್ಭಪುರಕ್ಕೆ ಕಳುಹಿಸಿಕೊಟ್ಟಿದ್ದ ರಥವೇ ಇದು, ಈ ಸಂಗತಿಯು ನಳನಿಗೆ ಜ್ಞಾಪಕವಿರಲಿಲ್ಲ ||೧೯||

ಟಿಪ್ಪಣಿ:— (೧) ಸುವರ್ಣದ ಕಲಶ-ಸುವರ್ಣಕಲಶ (ಷ. ತ) (೨) ವರವಾದ ವರೂಥ-ವರವರೂಥ (ವಿ. ಪೂರ್ವ. ಕ) ||೧೯||

ಮೂ|| ಹೊಳೆವಸಿಂಧದಸಾಲುಝಲ್ಲರಿ| ಗಳಪತಾಕಚ್ಛತ್ರಚಮರಾ|
ವಳಿಗಳಿಂದಲೆಧಾತುಗುಂದಿತ್ತಭ್ರತಳವಮುಸುಕೆ || ಉಲಿವಮಂಗಳ
ಪಾಠಕರಕಳ| ಕಳಿಕೆಮಿಗೆಹೆಬ್ಬಲುಭಡಾಳಿಸೆ | ನೆಲಬಿರಿಯಲೈ
ತಂದುಬಿಟ್ಟುದುನಿಷಧನಗರಿಯುಲಿ ||೨೦||

ಟೀಕೆ:— ಹೊಳೆವ-ಪ್ರಕಾಶಿಸುವ, ಸಿಂಧದ-ಧ್ವಜಗಳ, ಸಾಲು ಝಲ್ಲರಿಗಳ-ಸಾಲಾಗಿರುವ ಝೂಲಗಳ, ಪತಾಕಚ್ಛತ್ರ ಚಮರಾವಳಿಗಳಿಂದಲಿ-ಕೇತುಗಳೂ, ಛತ್ರ, ಚಾಮರ ಮುಂತಾದವುಗಳಿಂದ, ಧಾತು ಗುಂದಿತ್ತು-ಭಯಂಕರವಾಯ್ತು, (೧) ಅಭ್ರತಳ-ಆಕಾಶವು, ಮುಸುಗೆ ಮುಚ್ಚಿಹೋಗಲು, ಉಲಿವ-ಕೂಗುತ್ತಿರುವ ಮಂಗಳಪಾಠಕರ-ಹೊಗಳು ಭಟ್ಟರ, ಕಳಕಳಿಕೆ-ಕೋಲಾಹಲವು, ಮಿಗೆ-ಹೆಚ್ಚಾಗಿ, ಹಬ್ಬಲು ವ್ಯಾಪಿಸಲು, ಭಡಾಳಿಸೆ-ಹೆಚ್ಚಲು, ನೆಲಬಿರಿಯಲ್-ನೆಲವು ಒಡೆದುಹೋಗುವಂತೆ, ಆಗಲು, ಐತಂದು-ಬಂದು, ನಿಷಧನಗರಿಯುಲಿ- ನಿಷಧಪುರದಲ್ಲಿ, ಬಿಟ್ಟುದು-ನಿಂತಿತು, ||೨೦||

ತಾತ್ಪರ್ಯ:— ಸಾಲುಸಾಲಾಗಿ ಆಕಾಶವನ್ನು ಮುಟ್ಟುವಂತಿರುವ ಛತ್ರ, ಧ್ವಜ, ತೋರಣ, ಪತಾಕಾದಿಗಳು ನೋಡುವುದಕ್ಕೆ ಭಯಂಕರವಾಗಿರಲು, ಆಕಾಶವನ್ನೆಲ್ಲಾ ಮುಚ್ಚಿಕೊಂಡಿತು, ವಂದಿಮಾಗಧರಜಯ ಧ್ವನಿಯುಹೆಚ್ಚಿ ನೆಲವು ಬಿರಿದುಹೋಗುವಂತಾಗಲು ಎಲ್ಲರೂ ಪ್ರಯಾಣಮಾಡಿ ನಿಷಧಪುರವನ್ನು ಸೇರಿದರು ||೨೦||

ಟಿಪ್ಪಣಿ:— (೧)ಅಭ್ರದತಳ-ಅಭ್ರತಳ(ಷ. ತ)ಅಭ್ರ-ಆಕಾಶ,ಮೇಘ (ನಾನಾ) (೨) ಮಂಗಳದಪಾಠ-ಮಂಗಳಪಾಠ (ಷ. ತ) ಮಂಗಳ ಪಾಠವನ್ನು ಪಾಠಕರು-ಮಂಗಳಪಾಠಕರು (ಉಪ. ಸ) ||೨೦||

ಮೂ|| ಧಾಳಿಯಟ್ಟರುಹರಿದುವಿಕ್ರಮನ | ಮೂಲೆಯುವರಂಜಿಸುತಮು
ಮ್ಮನೆ | ಯಾಳುಕವಿದುದುಪಿಡಿವರಗ್ಗದಸೆರೆಯಸೂರೆಗಳ || ಕೇ
ಳಿದನುಪುಷ್ಕರನುನಿಷಧನ | ಧಾಳಿಯಿಂದೆಸೆಯುತಿ ಯುಧಭರದಲಿ| ಕಾ
ಳಿಗಕೆನಳನೃಪತಿಬಂದನೆಯೆನುತಮುಳಿಸಿದ್ದ ||೨೧||

ಟೀಕೆ:— ಹರಿದು-ಹೋಗಿ, ದಾಳಿಯಿಟ್ಟರು-ಮುತ್ತಿದರು, ದಿಕ್ಕಿನ-ದಿಕ್ಕುಗಳಲ್ಲಿರುವ, ಮೂಲೆಯವರ-ಉಪದಿಕ್ಕುಗಳಲ್ಲಿರುವವರನ್ನು, ಅಂಜಿಸುತ-ಹೆದರಿಸುತ್ತಾ (೧) ಮ್ಮಲ್ಲಮ್ಮನೆಯೊಳು-ಯುದ್ಧದಲ್ಲಿ ಅಭಿಮುಖರಾದ ಭಟರು, ಕವಿದುದು-ಮುಚ್ಚಿಕೊಂಡಿತು, (೨) ಅಗ್ಗದ-ಹೆಚ್ಚಾದ, ಸೆರೆಯು-ಸೆರೆಹಿಡಿದ, ಸೂರೆಗಳ-ಕೊಳ್ಳೆಗಳನ್ನು, ಪಿಡಿದರು-ಹಿಡಿದರು, ನಿಷಧಪ-ನಳನ, ಧಾಳಿ-ಹಾವಳಿಯು ಎಂದು-ಎಂಬದಾಗಿ, ಎನೆ-ಎನ್ನಲು ಪುಷ್ಕರನು, ಕೇಳಿದನು, ಖತಿಯ-ಕ್ರೋಧದ, ಭರದಲಿ-ಹೆಚ್ಚಿಕೆಯಿಂದ, ನಳನೃಪತಿ-ನಳರಾಜನು, ಕಾಳಗಕೆ-ಯುದ್ಧಕ್ಕೆ, ಬಂದನೆ, ಎನುತ-ಎಂಬದಾಗಿ, ಮುಳಿದು-ರೇಗಿ, ಎದ್ದ-ಹೊರಟನು ॥೨೧॥

ತಾತ್ಪರ್ಯ:— ಸಮಸ್ತ ಸೈನ್ಯವೂ ಹೋಗಿ ಪುರವನ್ನು ಮುತ್ತಿಗೆಹಾಕಿ ಎಂಟುದಿಕ್ಕಿನಲ್ಲೂ, ಎಲ್ಲರನ್ನೂ, ಹೆದರಿಸುತ್ತಾ, ಯುದ್ಧಕ್ಕೆ ಎದುರಾದವರನ್ನು ಸೆರೆಹಿಡಿದು ಅಲ್ಲಲ್ಲಿ ಸುಲಿಗೆಮಾಡುತ್ತಾ ಇರಲು ಪುಷ್ಕರನು ನಳನ ಹಾವಳಿಯು ಬಹಳವಾಗಿದೆ, ಎಂಬುದನ್ನು ಕೇಳಿ ಕ್ರೋಧೋದ್ದೀಪಿತನಾಗಿ ಯುದ್ಧಕ್ಕೆ ಸಿದ್ಧನಾದನು ॥೨೧॥

ಟಿಪ್ಪಣಿ:— (೧) ಮನೆಯಮುಂದು-ಮುಮ್ಮನೆ (ಅವ್ಯಯೀಭಾವ) (೨) (ತ್ಸ) ಅರ್ಘ ॥೨೧॥

ಮೂ॥ ಆಗಲದಕೇನಿನ್ನು ರಾಜ್ಯವ । ನೀಗಿದಳಲಿನೊಳೆಮ್ಮ ಕದನಕೆ । ತಾಗಿದನುತಪ್ಪೇನುಬರವೇಳೆಮ್ಮ ಸೈನಿಕವ ॥ ಈಗಲೀತನಕಡಿದುಸೆರೆಗಳ । ಬೇಗಹಿಡಿರೆಂದನುತನಿಜಬಲ । ಸಾಗರವಕಳುಹಿದನುತನ್ನಯಸೈನ್ಯದಧಿಪತಿಯ ॥೨೨॥

ಟೀಕೆ:— ಆಗಲಿ-ಇರಲಿ, ಅದಕೇನು, ಇನ್ನು, ರಾಜ್ಯವ-ದೇಶವನ್ನು, ನೀಗಿದ-ಕಳೆದುಕೊಂಡ, ಅಳಲಿನೊಳ್-ದುಃಖದಿಂದ, ಎಮ್ಮ-ನಮ್ಮನ್ನು, ಕದನಕೆ-ಯುದ್ಧಕ್ಕೆ, ತಾಗಿದನು-ಸಂಧಿಸಿದನು, ತಪ್ಪೇನು-ದೋಷವೇನು, ನಮ್ಮಸೈನಿಕರ-ನಮ್ಮ ಕಾಲಾಳುಗಳನ್ನು, (೧) ಬರವೇಳ್-ಬರಮಾಡು, ಈಗಲಿ-ಈಗ, ಈತನ-ಇವನನ್ನು, ಕಡಿದು—ಕೊಂದು, ಬೇಗ-ಜಾಗ್ರತೆ ಯಾಗಿ, ಸೆರೆಗಳಹಿಡಿರಿ-ಸೆರೆಹಿಡಿಯಿರಿ, ಎನುತ, ತನ್ನಯ-ತನ್ನ, ಸೈನ್ಯದ-ಸೇನೆಯ,ಅಧಿಪತಿಯ- ಅಧಿಪತಿಯನ್ನು, (೨) ಬಲಸಾಗರವ-ಸಮುದ್ರದಂತಿರುವ ಸೈನ್ಯವನ್ನೂ, ಕಳುಹಿದನು-ಕಳುಹಿಸಿದನು ।೨೨॥

ತಾತ್ಪರ್ಯ:— ತನ್ನ ರಾಜ್ಯವನ್ನು ಕಳೆದು ಕೊಂಡ ದುಃಖವನ್ನು ಸಹಿಸಲಾರದೆ ನನ್ನ ಮೇಲೆ ಯುದ್ಧಕ್ಕೆ ಬಂದಿರುವನು, ಆಗಲಿ ತಪ್ಪೇನು ನಮ್ಮ ಸೇನೆಯನ್ನೆಲ್ಲಾ ಬರಮಾಡು, ಈ ನಳನನ್ನು ಕೊಂಡು ಎಲ್ಲರನ್ನೂ ಸೆರೆಹಿಡಿಸುವಂತೆ ಅಪ್ಪಣೆಯಾಗಿದೆ, ಎಂದು ತಿಳಿಸು! ಎಂದು ಸೇನಾಪತಿಗೆ ಹೇಳಿ ಅಪಾರವಾದ ಸೇನೆಯನ್ನು ಅವನ ವಶದಲ್ಲಿ ಕಳುಹಿಸಿದನು ||||೨೨||

ಟಿಪ್ಪಣಿ:— (೧) ಬರಪೇಳ್-ಬರವೇಳ್ (ಕ. ವ್ಯಾ. ಸಂ.) ಪಕಾರಕ್ಕೆ ವಕಾರಾದೇಶವು ಬಂತು, (೨) ಬಲವೇ ಸಾಗರ-ಬಲಸಾಗರ (ಅವ. ಪೂರ್ವ. ಕ) ಸಗರ ಚಕ್ರವರ್ತಿಯ ಮಕ್ಕಳಿಂದ ಆದದ್ದರಿಂದ ಸಮುದ್ರಕ್ಕೆ ಸಾಗರವೆಂಬಹೆಸರು ಬಂತು ||೨೨||

ಮೂ|| ಹರಿಗೆಖಡ್ಗ ಕಠಾರಿತೋಮರ | ಪರಶುಮುದ್ಗರಕುಂತಶಲ್ಯಕ|
ಪರಿಘಚಕ್ರತ್ರಿಶೂಲಢಕ್ಕರಭಿಂಡಿವಾಳಚಯ|ಸುರಗಿಸಬಳಮುಸುಂ
ಡಿಮೊದಲಾ | ದುರತರದಕೈದುಗಳಪಟುಭಟ | ರುರವಣಿಸಿತಾಗಿದ
ರುರಿಪುಮೋಹರವನನುಗೊಳಿಸಿ ||೨೩||

ಟೀಕೆ:— ಹರಿಗೆ-ಗುರಾಣಿ, ಖಡ್ಗ-ಕತ್ತಿ, ಕಠಾರಿ,ತೋಮರ, ಪರಶು-ಕೊಡಲಿ, ಮುದ್ಗರ-ಸುತ್ತಿಗೆ (೧) ಕುಂತ-ತಲೆಯುದೊಣ್ಣೆ, ಶಲ್ಯಕ-ಭರ್ಜಿ, ಪರಿಘ, ಚಕ್ರ-ಚಕ್ರಾಯುಧ, ತ್ರಿಶೂಲ, ಢಕ್ಕರ, ಭಿಂಡಿವಾಳಚಯ-ಲಾಳ ವಿಂಡಿಗೆ ಮುಂತಾದ್ದರ ಸಮೂಹ, (೨) ಸುರಗಿ-ಸಣ್ಣ ಕತ್ತಿ, ಸಬಳ-ಭಲ್ಲೆ, ಮುಸುಂಡಿ, ಮೊದಲಾದ, ಉರುತರದ-ಶ್ರೇಷ್ಠವಾದ, ಕೈದುಗಳ-ಆಯುಧಗಳನ್ನುಳ್ಳ, (೩)ಪಟುಭಟರ್-ಸಮರ್ಥರಾದ ಯೋಧರು, ಉರವಣಿಸಿ-ರೇಗಿ, ರಿಪುಮೋಹರವಂ-ಶತ್ರು ಸೈನ್ಯವನ್ನು, ಅನುಗೊಳಿಸಿ-ಸೇರಿ (ಪ್ರತಿಭಟಿಸಿ) ತಾಗಿದರು-ಸಂಸಂಧಿಸಿದರು ||೨೩||

ತಾತ್ಪರ್ಯ:— ಶೂರಾಗ್ರೇಸರಾದ ಯೋಧರು ಯುದ್ಧಕ್ಕೆ ಬೇಕಾದ ನಾನಾವಿಧವಾದ ಆಯುಧಗಳನ್ನು ಧರಿಸಿ, ಶತ್ರುಸೈನ್ಯಕ್ಕೆ ಇದಿರಾಗಿನಿಂತು ಸೆಣಸುವುದಕ್ಕಾರಂಭಿಸಿದರು ||೨೩||

ಟಿಪ್ಪಣಿ:— (೧) (ದ್ಭ) ಕೊಂತ, (೨) (ತ್ಸ) ಛರಿಕಾ (೩) ಪಟುಗಳಾದ ಭಟರ್-ಪಟುಭಟರ್ (ವಿ. ಪೂರ್ವ .ಕ.) ||೨೩||

ಮೂ|| ಹೊಕ್ಕರಾವವದೊಳಗೆಕಾಲಾ | ಳೊಕ್ಕಲಿಸಿಬರೆಕಂಡುಮ

ಝುರೇ। ಚುಕ್ಕೆಗಳಲಾಯೆನುತಹೊಯ್ದರುಬೆರಸಿಪಟುಭಟರ ॥ ಇ
ಕ್ಕಿದರುಸುರಗಿಯಲಿಕರಿಗಳ । ತಿಕ್ಕಿತಿವಿದರುತೇರುಗಳಮುರಿದಿ ।
ಕ್ಕಿಪರಿಘದೊಳೊರಸಿದರುಕಾಲಾಳಮುಂದಲಿಸಿ ॥೨೪॥

ಟೀಕೆ:— ಕಾಲಾಳು-ಕಾಲುಬಲವು, ಆಹವದೊಳಗೆ-ಯುದ್ಧದ ಲ್ಲಿ, ಹೊಕ್ಕರ್-ಪ್ರವೇಶಿಸಿದರು, ಒಕ್ಕಲಿಸಿ-ಒತ್ತಿಕೊಂಡು, ಬರೆ-ಬರಲು, ಮಝುರೇ-ಭಲಾ, ಚುಕ್ಕೆಗಳಲಾ-ಸಮರ್ಥರಲ್ಲವೇ ! ಎನುತ-ಎಂಬದಾಗಿ, ಬೆರಸಿ-ಸೇರಿ, ಹೊಯ್ದರ್-ಹೊಡೆದರು, ಪಟುಭಟರ-ಶಕ್ತರಾದ ಯೋಧರನ್ನು, ಸುರಗಿಯಲಿ-ಕತ್ತಿಯಿಂದ,(೧) ಇಕ್ಕಿದರು-ಹೊಡೆದರು, ಕರಿಗಳ-ಆನೆಗಳನ್ನು, ತಿಕ್ಕಿತಿವಿದರು- ಹೊಡೆದುತಿವಿದರು, ತೇರುಗಳ-ರಥಗಳನ್ನು, ಮುರಿದಿಕ್ಕಿ-ಮುರಿದುಹಾಕಿ (೨) ಕಾಲಾಳ-ಕಾಲಾಳುಗಳನ್ನು, ಮುಂದಲಿಸಿ-ಹಿಯ್ಯಾಳಿಸಿ, ಪರಿಘದೊಳ್-ಪರಿಘಾಯುಧದಿಂದ ಒರಸಿದರು ಕೊಂದರು ॥೨೪॥

ತಾತ್ಪರ್ಯ:— ಎರಡು ಕಡೆಯ ಚತುರಂಗಸೈನ್ಯವೂ ಒಂದನ್ನೊಂದು ಒತ್ತುತ್ತಾ, ಒಬ್ಬರನ್ನೊಬ್ಬರು ಶ್ಲಾಘಿಸುತ್ತಾ, ಯುದ್ಧದಲ್ಲಿ ಸಮರ್ಥರಾದ ಭಟರನ್ನು ಕತ್ತಿಯಿಂದ ಕಡಿದು ಆನೆ, ಕುದುರೆ, ತೇರು, ಕಾಲಾಳುಗಳನ್ನು ಲಕ್ಷ್ಯಮಾಡದೆ ಉಭಯ ಪಕ್ಷದವರೂ ಶತ್ರುತ್ವವನ್ನು ಸಾಧಿಸುತ್ತಾ, ಬಹಳವಾಗಿ ಯುದ್ಧಮಾಡಿದರು ॥೨೪॥

ಟಿಪ್ಪಣಿ:— (೧) ಇಕ್ಕು- ದಾನಮಾಡುವುದು, ಕೊಲುವುದು, (೨) ಕರ್ಮಾರ್ಥದಲ್ಲಿಷಷ್ಠಿ ॥೨೪॥

ಮೂ॥ ಇಟ್ಟಣಿಸಿಬಹತೇಜಿಗಳನೆರೆ । ಯೆಚ್ಚುಖಂಡಿಸಿಸುಭಟರನು
ಬೆಣ್ಣಟ್ಟಿತಿವಿದರುಮನ್ನೆಯರುಹವರಿದುನಾಯಕರ॥ಹಿಟ್ಟುಗು
ಟ್ಟಿದರರುಣಜಲಸಾ । ಲಿಟ್ಟುದರವಿಯೊಳಮುನೆರೆಜಗ । ಜಟ್ಟಿ
ಗಳುಕಾದಿದರುರಣದಲಿಸುರರುಬೆರಗಾಗೆ ॥೨೫॥

ಟೀಕೆ:— ಇಟ್ಟಣಿಸಿ-ಸಾಲಾಗಿ, ಬಹ-ಬರುವ, ತೇಜಿಗಳ-ಕುದುರೆಗಳನ್ನು, ನೆರೆ-ಬಹಳವಾಗಿ, ಎಚ್ಚು-ಹೊಡೆದು, ಖಂಡಿಸಿ-ಕತ್ತರಿಸಿ, ಸುಭಟರನು-ಶೂರರಾದ ಭಟರನ್ನು, ಬೆನ್ನಟ್ಟಿ-ಬೆನ್ನಟ್ಟಿ ಹೋಗಿ, ತಿವಿದರು-ಹೊಡೆದರು, (೧) ಮನ್ನೆಯರು-ಮುಖ್ಯನಾಯಕರು, ಹದನರಿದು-ಸಮಯವನ್ನು ಕಾದು, ನಾಯಕರ-ಸೇನಾನಾಯಕರನ್ನು, ಹಿಟ್ಟು, ಗುಟ್ಟಿದರ್-ಪುಡಿಪುಡಿಯಾಗಿ ಮಾಡಿದರು (೨) ಅರುಣಜಲ-ರಕ್ತ

ವು, ಅರವಿಯೊಳು-ವಸ್ತ್ರಗಳಲ್ಲಿ, ಸಾಲಿಟ್ಟುದು - ಸಾಲಾಗಿಸೋರಿತು, ಸುರರು-ದೇವತೆಗಳು, ಬೆರಗಾಗೆ-ಆಶ್ಚರ್ಯಪಡುತ್ತಿರಲು, ಜಗಜಟ್ಟಿಗಳು ಶೂರಾಗ್ರೇಸರು, ನೆರೆ-ಚೆನ್ನಾಗಿ, ರಣದಲಿ-ಯುದ್ಧಭೂಮಿಯಲ್ಲಿ, ಕಾದಿದರು-ಹೊಡೆದಾಡಿದರು ‖೨೫‖

ತಾತ್ಪರ್ಯ:— ಉಭಯ ಪಕ್ಷದ ಸೈನ್ಯದವರೂ, ಕುದುರೆಗಳನ್ನು ಹೊಡೆದು ಕೊಂದರು, ಸೇನಾನಾಯಕರನ್ನು ಹೊಂಚುಕಾಯುತ್ತಿದ್ದು ಹಿಂದಟ್ಟಿ ಹೋಗಿ ಹೊಡೆದರು, ರಕ್ತಪ್ರವಾಹವು ಎಲ್ಲರಮೈಮೇಲೂ ಹರಿಯಿತು, ಯುದ್ಧವನ್ನು ನೋಡಿ ದೇವತೆಗಳೆಲ್ಲರೂ ವಿಸ್ಮಿತರಾದರು ‖೨೫‖

ಟಿಪ್ಪಣಿ:— (೧) (ತ್ಸ) ಮಾನ್ಯ, (೨) ಅರುಣವಾದ ಜಲ-ಅರುಣಜಲ (ವಿ. ಪೂರ್ವ. ಕ.) ಅರುಣ-ಕೆಂಪಾದ, ಜಲ-ನೀರು (ರಕ್ತ) ಅವ ‖೨೫‖

ಮೂ‖ ಸಾರಥಿಗೆಯೆಚ್ಚರಿಸಿರಥಿಕರು । ತೋರಿದರುಕೈಗುಣವಸರ
ಳಿನ । ಸಾರದಲಿರಿಪುಭಟರತಲೆಗಳತರಿದರಲ್ಲಲ್ಲಿ ॥ ಕಾರಿದರುರಕುತ
ವನುತೇರಿನ । ವಾರುವಂಗಳುಮುಗ್ಗಿದವ್ರುರಣ । ಧೀರರೆಚ್ಚಾಡಿದ
ರುಗಾಯದೊಳೊರಳಿತುಭಯಬಲ ‖೨೬‖

ಟೀಕೆ:— ರಥಿಕರು, ಸಾರಥಿಗೆ, ಎಚ್ಚರಿಸಿ- ಎಚ್ಚರಗೊಳಿಸಿ, ಕೈ ಗುಣವ-ಕರಲಾಘವವನ್ನು, ತೋರಿದರು-ತೋರಿಸಿದರು, ಸರಳಿನ-ಬಾಣಗಳ, ಸಾರದಲಿ-ಮಳೆಯಿಂದ, (೧) ರಿಪುಭಟರ-ಶತ್ರುಗಳಯೋಧರ, ತಲೆಗಳನು-ಶಿರಸ್ಸುಗಳನ್ನು, ಅಲ್ಲಲ್ಲಿ, ತರಿದರು-ಕತ್ತರಿಸಿದರು, ರಕುತವನು-ರಕ್ತವನ್ನು, ಕಾರಿದರು-ಕಕ್ಕಿದರು, ವಾರುವಂಗಳು-ಕುದುರೆಗಳು, ಮುಗ್ಗಿದವು-ಎಡವಿಬಿದ್ದವು, (೨) ರಣಧೀರರ್ರ-ಯುದ್ಧದಲ್ಲಿ ಧೈರ್ಯಶಾಲಿಗಳು, ಎಚ್ಚಾಡಿದರು - ಹೊಡೆದಾಡಿದರು, ಉಭಯಬಲ-ಎರಡು ಕಡೆಯ ಸೈನ್ಯವೂ, ಗಾಯದಲಿ -ಗಾಯದಿಂದ, ಒರಲಿತು - ಹೊರಳಾಡಿತು ‖೨೬‖

ತಾ:— ರಥದಲ್ಲಿ ಕುಳಿತು ಯುದ್ಧಮಾಡತಕ್ಕವರು ಸಾರಥಿಗಳಿಗೆ ಜಾಗರೂಕರಾಗಿ ನೋಡಿಕೊಳ್ಳುವಂತೆ ತಿಳಿಸಿ ತಂತಮ್ಮ ಹಸ್ತಲಾಘವವನ್ನು ತೋರಿಸಿ ಶತ್ರುಭಟರನ್ನು ಸಂಹರಿಸಿದರು, ಕುದುರೆಗಳು

ಮುಗ್ಗರಿಸಿ ಬಿದ್ದವು, ರಾವುತರು ರಕ್ತವನ್ನು ಕಾರಿದರು, ಎರಡು ಕಡೆಯವರೂ ಪರಸ್ಪರವಾಗಿ ಹೊಡೆದ ಏಟುಗಳಿಂದ ಗಾಯಗಳಾಗಲು ಬಿದ್ದು ಹೊರಳಾಡುತ್ತಿದ್ದರು ‖೨೬‖

ಟಿಪ್ಪಣಿ:— (೧) ರಿಪುಗಳ ಭಟರು-ರಿಪುಭಟರು (ಷ. ತ) (೨) ರಣದಲ್ಲಿ ಧೀರರ್-ರಣಧೀರರ್ (ಸ. ತ,) ‖೨೬‖

ಮೂ‖ ಕಡಿದತಲೆಗಳಸಿಡಿದಹುಬ್ಬಿನ । ಕಡಿದತೋಳಳನೆಗ್ಗಿದೆಲುಗ
ಲ । ವುಡಿದತಲೆಗಳಮಿದುಳಖಂಡದಹರಿದಕರುಳುಗ್ಗ ‖ ಒಡೆದನೆ
ತ್ತಿಗಳಿಂದೆರಕುತದ । ಮಡುಹರಿಯೆತರರಹರಿಸಲಾರದೆ । ಪಡೆಮುರಿ
ದುಬರುತಿರಲುಕಂಡನುಖಾತಿಯುಲಿನಳನು ‖೨೭‖

ಟೀಕೆ:— ಕಡಿದ-ಕತ್ತರಿಸಿದ,ತಲೆಗಳ, ಸಿಡಿದ-ಹಾರಿದ, ಹುಬ್ಬಿನ, ಕಡಿದ, ತೋಳ್ಗಳ-ತೋಳುಗಳ, ನೆಗ್ಗಿದ-ಒಡೆದು ಜಜ್ಜಿಹೋದ, ಎಲುಗಳ-ಎಲುಬುಗಳ, ಉಡಿದ- ಮುರಿದ, ತಲೆಗಳ, ಮಿದುಳ-ಮೆದುಳಿನ, (೧) ಖಂಡದ-ಚೂರುಗಳ, ಹರಿದ - ಕಿತ್ತುಹೋದ, ಕರುಳುಗಳ, ಒಡೆದ, ನೆತ್ತಿಗಳಿಂದ-ತಲೆಯ ಮೇಲ್ಭಾಗದಿಂದ (೨) ರಕುತದ-ರಕ್ತದ, ಮಡು-ಹಳ್ಳವು, ಹರಿಯೆ- ಹರಿಯುತ್ತಿರಲು, ರಹರಿಸಲಾರದೆ-ತಡೆಯಲಾರದೆ, ಪಡೆ-ಸೈನ್ಯವು, ಮುರಿದು-ಹಿಮ್ಮೆಟ್ಟಿ, ಬರುತಿರಲು, ನಳನು ಖಂತಿಯುಲಿ-ಸಿಟ್ಟಿನಿಂದ, ಕಂಡನು ನೋಡಿದನು ‖೨೭‖

ತಾತ್ಪರ್ಯ:— ತಲೆಯೊಡೆದು ಹುಬ್ಬುಸೀಳಿ, ತೋಳುಗಳು ಕತ್ತರಿಸಿಹೋಗಿ ಮಿದುಳು ಸುರಿದು,ಕರುಳುಕಿತ್ತು, ನೆತ್ತಿ ಯೊಡೆದಸುರಿವ ರಕ್ತದಿಂದ ಹಳ್ಳಗಳು ಹರಿಯುತ್ತಿರಲು ಹೊಡೆತವನ್ನು ಕಡೆಯಲಾರದೆ ಸೇನೆಯು ಹಿಂದಿರುಗಿ ಬರುತ್ತಿರಲು, ನಳನು ನೋಡಿ ಕೋಪಿಸಿಕೊಂಡನು ‖೨೭‖

ಟಿಪ್ಪಣಿ:— (೧) (ದ್ಭ) ಕಂಡ, (೨) (ತ್ಸ) ರಕ್ತ ‖೨೭‖

ಮೂ‖ ಕರೆದು ಸಾರಥಿಗರುಹಿದನುಪು । ಷ್ಕರನಬಲಕೈಮೀರಿಬರುತಿ
ದೆ । ತಿರುಹುತೇಜಿಯನಿತ್ತಲಿವವಿರನೊರಸಿಚನ್ನಿನಲಿ । ಕರುಳತೆ
ಗೆವೆನುಯೆನುತಚಾಪಕೆ ।ತಿರುವನೇರಿಸಿಸರಳನಲಿಬೊಬ್ಬಿರಿಯೆಧ
ರೆತಲ್ಲಣಿಸಿತವನೀಪಾಲಕಕೇಳೆಂದ ‖೨೮‖

ಟೀಕೆ:— ಕರೆದು-ಕೂಗಿ, ಸಾರಥಿಗೆ, ಅರುಹಿದನು-ತಿಳಿಸಿದನು, ಪುಷ್ಕರನ,ಬಲ-ಸೈನ್ಯವು, (೧) ಕೈಮೀರಿ-(ಮಿತಿಮೀರಿ) ಅತಿಕ್ರಮಿಸಿ,

ಬರುತಿದೆ-ಅಟ್ಟಿಕೊಂಡು ಬರುತ್ತಿದೆ, ತೇಜಿಯಂ-ಕುದುರೆಯನ್ನು, ಇತ್ತಲ್-ಈ ಕಡೆಗೆ, ತಿರುಗಿಸು, ಇವರಂ-ಈ ಸೈನಿಕರನ್ನು, ಒರಸಿ-ಕೊಂದು, ಬೆನ್ನಿನಲಿ-ಬೆನ್ನಿನಲ್ಲಿ, ಕರುಳ-ಕರುಳನ್ನು, ತೆಗೆವೆನು-ಎಳೆಯುತ್ತೇನೆ, ಎನುತ-ಎಂಬದಾಗಿ, ಚಾಪಕೆ-ಬಿಲ್ಲಿಗೆ, ತಿರುವಂ-ಹಗ್ಗವನ್ನು, ಸರಳಿನಲಿ-ಬಾಣದಿಂದ, ಏರಿಸಿ-ಕಟ್ಟಿ, ಬೊಬ್ಬಿರಿಯೆ-ಆರ್ಭಟಿಸಲು, ಧರೆ-ಭೂಮಿಯು, ತಲ್ಲಣಿಸಿತು-ನಡುಗಿತು, (೨) ಅವನೀಪಾಲ ದೊರೆಯೇ, ಕೇಳು, ಎಂದ, ॥೭೮॥

ತಾ:— ಕೂಡಲೆ ನಳನು ಕೋಪೋದ್ದೀಪಿತನಾಗಿ ಸಾರಥಿಯನ್ನು ಕೂಗಿ ಪುಷ್ಕರನಸೈನ್ಯವು ಹೆಚ್ಚಿ ಮುಂದುಮುಂದಕ್ಕೆ ಬರುತ್ತಿದೆ. ಕುದುರೆಯನ್ನೀಕಡೆಗೆ ತಿರುಗಿಸು ಇವರೆಲ್ಲರನ್ನೂ ಕೊಂದು ಬೆನ್ನಿನಲ್ಲಿ ಕರುಳುಗಳನ್ನು ಹಿರಿವೆನು, ಎಂದು ಹೇಳಿಧನುಷ್ಟಂಕಾರಮಾಡಿ ಬಾಣವನ್ನು ಹೂಡಲು ಭೂಮಿಯು ಭಯದಿಂದ ನಡುಗಿ ಕಳವಳಿಸುತ್ತಿತ್ತು ॥೭೮॥

ಟಿಪ್ಪಣಿ:— (೧) ಕೈಯಂಮೀರಿ-ಕೈಮೀರಿ (ಕ್ರಿ. ಸ.) (೨) ಅವನೀ-ಭೂಮಿಯನ್ನು, ಪಾಲ-ರಕ್ಷಿಸತಕ್ಕವನು (ದೊರೆ) ಅವನಿಯ ಪಾಲ- ಅವನೀಪಾಲ (ಷ. ತ) ॥೭೮॥

ಮೂ॥ ಮುರಿದಬಲಸಂವರಿಸಿಕೊಂಡುದು । ಮೊರೆವಕಹಳಾರವದ
ಸನ್ನೆಯೊ । ಳುರುಬಿತಾಬಲದೊಳಗೆಬೆರಸಿತುನಳನಪರಿವಾರ ॥ ಅ
ರಸನಾಸಮಯದಲಿಹೂಡಿದ । ಸರಳಕನ್ನೆಗೆಸೇದಿಬಿಡೆಕ। ತ್ತರಿಸಿ
ಬಿಸುಟುದುರಿಪುನೃಪರಶಿರಗಳನುಖಂಡಿಸುತ ॥೭೯॥

ಟೀಕೆ:— ಮುರಿದ-ಹಿಂದಿರುಗಿದ, ಬಲ-ಸೈನ್ಯವು, ಸಂವರಿಸಿಕೊಂಡುದು-ಪುನಃ ಮುತ್ತಿತು, (೧) ಕಹಳಾರವದ- ಕಹಳೆಯಶಬ್ದದ, ಸನ್ನೆಯೊಳ್ -ಸಂಜ್ಞೆಯಿಂದ, ಉರುಬಿತು-ರೇಗಿತು (೨) ಆ ಬಲದೊಳಗೆ-ಆ ಸೇನೆಯಲ್ಲಿ, ನಳನ, ಪರಿವಾರ-ಸೇನೆಯು, ಬೆರಸಿತು-ಸೇರಿತು, ಅರಸಂ-ದೊರೆಯು, ಆ ಸಮಯದಲಿ-ಆ ಕಾಲದಲ್ಲಿ, ಹೂಡಿದ-ಸಂಧಾನಮಾಡಿದ, ಸರಳ-ಬಾಣವನ್ನು, ಕೆನ್ನೆಗೆ-ಕೆನ್ನೆಯವರಿಗೆ, ಸೇದಿ-ಎಳೆದು, ಬಿಡೆ-ಬಿಡಲು, ರಿಪುನೃಪರ-ಶತ್ರುರಾಜರ, ಶಿರಗಳನು-ತಲೆಗಳನ್ನು, ಖಂಡಿಸುತ-ತುಂಡುತುಂಡಾಗಿ ಕತ್ತರಿಸಿ ಬಿಸುಟುದು-ಕತ್ತರಿಸಿಹಾಕಿತು ॥೭೯॥

ತಾತ್ಪರ್ಯ:— ನಳನು ಬಂದ ರಭಸಕ್ಕೆ ಹೆದರಿ ಹಿಮ್ಮೆಟ್ಟಿದ್ದ ಶತ್ರುಸೈನ್ಯವು, ಕಹಳೆಯ ಶಬ್ದದಿಂದ ಪುನಃ ನಿಲ್ಲುವಂತೆ ಸನ್ನೆಮಾಡಲು, ಮತ್ತೆ ಯುದ್ಧದಕ್ಕೆ ಸಿದ್ಧವಾಯಿತು, ಅದರ ಸಂಗಡ ನಳನ ಸೈನ್ಯವು ನಿಂತು ಕಾದಿತು, ದೊರೆಯು ಬಾಣವನ್ನು ಹೂಡಿ ಆಕರ್ಣಾಂತವಾಗಿ ಸೆಳೆದು ಬಿಡುತ್ತಾ ಶತ್ರುರಾಜರ ಶಿರಸ್ಸುಗಳನ್ನು ತುಂಡಾಗಿ ಕತ್ತರಿಸುತ್ತಿದ್ದನು ||೨೯||

ಟಿಪ್ಪಣಿ:— (೧) ಕಹಳೆಯರವ-ಕಹಳಾರವ (ಷ. ತ) (೨) ಅದು ಬಲ-ಆಬಲ (ಗಮಕ) ಬಲ-ಶಕ್ತಿ, ಬಲರಾಮ, ಬಲಾಸುರ, ಸೈನ್ಯ (ನಾನಾ) ||೨೯||

ಮ|| ಇಳೆಸರಳಮಯವಾಯ್ತು ಕಂಡದ | ಮಳೆಗರದುದೆನೆ ಪುಷ್ಕ
ರನಬಲ | ದೊಳಗೆ ಬಿದ್ದುದನೇಕರಿಪುನೃಪಸೈನ್ಯಸಾಗರವು || ಮ
ಲೆತವರಶಿರಗಳನು ಖಂಡಿಸಿ | ತಲೆಯ ಚೆಂಡಾಡಿದನು ರಥಿಕರ | ಬಲು
ಗುದುರೆಕಾಲಾಳು ನೆಗ್ಗಿತು ನಳನಶರಹತಿಗೆ ||೩೦||

ಟೀಕೆ:— ಇಳೆ-ಭೂಮಿಯು, ಸರಳಮಯವಾಯ್ತು-ಬಾಣದಿಂದ ತುಂಬಿಹೋಯಿತು, ಕಂಡದ-ಖಂಡಗಳ, (೧) ಮಳೆಗರೆದುದೆನೆ-ಮಳೆಯನ್ನು ಸುರಿಸಿತೋ ಎನ್ನುವಹಾಗೆ, ಪುಷ್ಕರನ, ಬಲದೊಳಗೆ-ಸೈನ್ಯದಲ್ಲಿ, ಅನೇಕರಿಪುನೃಪಸೈನ್ಯಸಾಗರವು-ಅನೇಕ ಶತ್ರುರಾಜರ ಸೇನೆ ಎಂಬ ಸಮುದ್ರವು, ಬಿದ್ದುದು-ಬಿದ್ದುಹೋಯಿತು, ಮಲೆತವರ_ಗರ್ವಿಸುವವರ, ಶಿರಗಳನು-ತಲೆಗಳನ್ನು, ಖಂಡಿಸಿ-ಕತ್ತರಿಸಿ, ತಲೆಯ-ತಲೆಗಳನ್ನು, ಚೆಂಡಾಡಿದನು-ಚೆಂಡಿನಂತೆ ಹಾರಿಸಿದನು, ನಳನ (೨) ಶರಹತಿಗೆ-ಬಾಣದ ಏಟಿಗೆ, ರಥಿಕರ ರಥದಲ್ಲಿ ಕುಳಿತು ಯುದ್ಧಮಾಡುವ ಭಟರ, (೩) ಬಲುಗುದುರೆ-ಅನೇಕ ಕುದುರೆಗಳೂ, ಕಾಲಾಳು-ಕಾಲುಬಲವೂ, ನೆಗ್ಗಿತು-ನಾಶವಾಯ್ತು. ||೩೦||

ತಾತ್ಪರ್ಯ:— ನೆಲವೆಲ್ಲವೂ ಬಾಣಮಯವಾಯ್ತು, ಮಾಂಸಖಂಡವಮಳೆ ಸುರಿಯಿತೋ ಎನ್ನುವಹಾಗೆ ಪುಷ್ಕರನಸೈನ್ಯದಲ್ಲಿ ಬಹುಮಂದಿ ರಾಜರು ಬಿದ್ದು ಸಮುದ್ರರೂಪವಾಗಿ ಅವರ ಖಂಡಗಳು ತುಂಬಿ ಹಳ್ಳವು ಅಗಾಧವಾಗಿ ಮಡುಗಟ್ಟಿದವು, ಎದುರುಬಿದ್ದವರ ತಲೆಗಳನ್ನು ಪುಟಚೆಂಡಿನಂತೆ ಹಾರಿಸಿದನು. ಹೀಗೆ ನಳನ ಬಾಣಗಳ ಹೊಡೆತದಿಂದ ಸಂಪೂರ್ಣವಾಗಿ ಶತ್ರುಬಲವು ನಷ್ಟಹೊಂದಿತು. ||೩೦||

ಟಿಪ್ಪಣಿ:— (೧) ಮಳೆಯುಂಕರೆ-ಮಳೆಗರೆ (ಕ್ರಿ. ಸ) ಸಮಾಸದಲ್ಲಿ ಉತ್ತರಪದದ ಆದಿಯಲ್ಲಿರುವ ಕಕಾರಕ್ಕೆ ಗಕಾರಾದೇಶವು ಬಂತು. (೨) ಶರಪದಹತಿ-ಶರಹತಿ (ಷ. ತ) (೩) ಒಲಿತು ಕಂದಂರೆ-ಒಲಿದುಂದುರೆ (ವಿ. ಪೂ ರ್ವ. ಕ) ||೩೦||

ಮೂ|| ತೆರುಗೊಟ್ಟೊಳಹೊಗಿಸಿಸಡೆದನು । ಬರಸಿಡಿಲುಬಡಿವವಂ
ತೆರಿಪುಬಲ| ಮುರಿದುನಿಂದರುಗಾಯವಡೆದರುವೀರಪಟುಭಟರು ||
ಹುರಿಯೊಡೆದುವೈದೆಗೆಡುಸಲೆಕೈ । ಮರೆದುಕೈದುವಬಿಸುಟುಪಡೆ
ಮುಖ | ದಿರುಹಲೆಚ್ಚನುಕೊಚ್ಚಿದನುಪುಷ್ಕರಚತುರ್ಬಲವ ||೩೧||

ಟೀಕೆ:— ತೆರಪುಗೊಟ್ಟು-ನುಗ್ಗುವುದಕ್ಕವಕಾಶಗೊಟ್ಟು (೨) ಒಳಹೊಗಿಸಿ-ಒಳಕ್ಕೆ ಸಿಕ್ಕಿಸಿಕೊಂಡು, ಬರಸಿಡಿಲು-ಬರಗಾಲದ ಸಿಡಿಲ್ಗಾ ಬಡಿವಂತೆ-ಬೀಳುವಹಾಗೆ, ರಿಪುಬಲ-ಶತ್ರುಸೈನ್ಯವು, ಮುರಿದುನಿಂದರು-ಮುರಿದುಬಿದ್ದರು, ವೀರಪಟುಭಟರು-ಶೂರರಾದ ಭಟರು, (೩) ಗಾಯವಡೆದರು-ಗಾಯವನ್ನು ಹೊಂದಿದರು, ಪಡೆ-ಸೈನ್ಯವು, ಹುರಿಯೊಡೆದು-ಉತ್ಸಾಹತಪ್ಪಿ, ವೈದೆಗೆದು-ಶಕ್ತಿಗುಂದಿ, ಕೈದುವ-ಆಯುಧವನ್ನು, ಸಲೆ-ಚೆನ್ನಾಗಿ, ಕೈಮರೆದು-ಕೈಬಿಟ್ಟು, ಬಿಸುಟು-ಎಸೆದು, ಮುಖದಿರುಹಲ್-ಮುಖವನ್ನು ತಿರುಗಿಸಿಕೊಳ್ಳಲು (ವಿಮುಖರಾಗುವಂತೆ) ಎಚ್ಚನು-ಹೊಡೆದನು, ಪುಷ್ಕರನ, (೪) ಚತುರ್ಬಲವ-ಚತುರಂಗಸೈನ್ಯವನ್ನು, ಕೊಚ್ಚಿದನು-ಕತ್ತರಿಸಿದನು. ||೩೧||

ತಾತ್ಪರ್ಯ:— ಶತ್ರುಗಳು ತನ್ನ ಸೈನ್ಯದೊಳಕ್ಕೆ ಪ್ರವೇಶಮಾಡುವುದಕ್ಕವಕಾಶ ಕೊಟ್ಟು ಅವರು ನುಗ್ಗಿದೆವೆಂದು ಸಂತೋಷಪಡುತ್ತಾ ಯುದ್ಧಕ್ಕೆ ಪ್ರಯತ್ನಪಡುತ್ತಿರಲು, ಮಧ್ಯದಲ್ಲಿ ಸಿಕ್ಕಿಸಿಕೊಂಡು ಅಕಾಲದ ಸಿಡಿಲು ಬೀಳುವಷ್ಟು ವೇಗದಿಂದಲೂ ಬಲವಾಗಿಯೂ ಹೊಡೆದನು. ಬಲಶಾಲಿಗಳಾದ ಭಟರು ಅವನ ಅಮೋಘವಾದ ಬಾಣಗಳಿಂದುಂಟಾದ ಗಾಯಗಳಿಂದ ಉತ್ಸಾಹಹೀನರಾಗಿ, ವೈಗುಂದಿ ಪ್ರಜ್ಞೆ ತಪ್ಪಿ ಕೈಯಲ್ಲಿದ್ದ ಆಯುಧಗಳನ್ನು ಬಿಟ್ಟು ವಿಮುಖರಾದರು. ಪುಷ್ಕರನ ಚತುರಂಗವನ್ನೆಲ್ಲಾ ಹೀಗೆಯೇ ನಾಶಮಾಡಿದನು. ||೩೧||

ಟಿಪ್ಪಣಿ:— (೧) ತೆರಪಂಕೊಟ್ಟು-ತೆರಪುಗೊಟ್ಟು (ಕ್ರಿ. ಸ) ತೆರೆಯೆಂಬ ಧಾತುವಿಗೆ ಭಾವ ಥರ್ದಲ್ಲಿ "ಅಪು" ಎಂಬ ಕೃತ್ಪ್ರತ್ಯಯವು ಸೇರಿ ತೆರಪು, ಎಂಬ ಕೃದ್ಭಾವನಾಮವಾಗಿದೆ (೨) ಒಳಗಂಹೊಗಿಸಿ-ಒಳಹೊ

ಸಿ (ಕ್ರಿ.ಸ) (೩) ಗಾಯವಂಪಡೆದು-ಗಾಯವಡೆದು (ಕ್ರಿ.ಸ) ಪಕಾ ರಕ್ಕೆ ವಕಾರಾದೇಶವು ಬಂತು (೪) ಚತುರ್ವಿಧವಾದಬಲ-ಚತುರ್ಬಲ (ಸಂ: ದ್ವಿಗು) ||೩೧||

೩೭|| ಗಾಳಿಮುರಿದೌಕಿದರೆನವಮೇ | ಘಾಳಿನಿಲುವುದೆನಿಷಧಪತಿಶ ರ | ಜಾಲದಲಿಕಡಿವಡೆದುಬಿದ್ದರುರಾಯರಾವುತರು || ಆಳುಮುರಿ ದುದುಕಂಡುಮುಖದಲಿ | ಹೇಳಲೇನದನವರವಿಧಿಯನು | ಸೋಲ ದಲಿಮನಗುಂದಿಹಾಯ್ದರುಬಿಟ್ಟಮಂಡೆಯಲಿ ||೩೨||

ಟೀಕೆ:— ಗಾಳಿ-ಗಾಳಿಯು, ಮುರಿದು-ಮುರಿದು, ಔಕಿದರೆ-ಅ ದುಮಿದರೆ, (೧) ನವಮೇಘಾಳಿ-ಭಾರವಾದ ಮೇಘ ಸಮೂಹವು, ನಿಲ್ಲು ವುದೆ-ನಿಲ್ಲುತ್ತದೆಯೇ! ರಾಯರಾವುತರು-ಬಲಿಷ್ಠರಾದ ಕುದುರೆಯ ರಾವುತರು, (೨) ನಿಷಧಪತಿಶರಜಾಲದಲಿ-ನಳನಬಾಣಪರಂಪರೆಗಳಿಂದು (೩) ಕಡಿವಡೆದು-ಕತ್ತರಿಸಿ, ಬಿದ್ದರು, ಕಂಡು-ಇದನ್ನು ನೋಡಿ, ಮು ಖದಲಿ-ಮುಂಭಾಗದಲ್ಲಿ, ಆಳು-ಕಾಲುಬಲವು, ಮುರಿದುದು-ಹಿಂದಿರುಗಿ ತು, ಅವರ, ವಿಧಿಯನು-ದೈವವನ್ನು, ಅದಂ-ಅದನ್ನು, ಹೇಳಲೇನು ಏನಕೇಳಲಿ, ಸೋಲದಲಿ-ಅಪಜಯದಿಂದ, ಮನಗುಂದಿ-ಹೆದರಿ, ಬಿಟ್ಟ ಮಂಡೆಯಲಿ-ತಲೆಯನ್ನು ಕೆದರಿಕೊಂಡು, ಹಾಯ್ದರು-ಓಡಿದರು ||೩೨

ತಾತ್ಪರ್ಯ:— ಬಿರುಗಾಳಿ ಸುತ್ತಿ ಬಡಿದು ಮುರಿದು ನೆಗ್ಗಿದರೆ ಹೆ ಚ್ಚಾಗಿ ನೀರು ತುಂಬಿಕೊಂಡಿರುವ ಮೇಘದ ಗುಂಪು ನಿಮಿಷಮಾತ್ರ ದಲ್ಲಿ ನಾಶವಾಗುವಂತೆ, ನಳನ ಬಾಣಗಳಿಂದ ಕುದುರೆಯ ಸೈನಿಕರು ಮುರಿದು ಬಿದ್ದರು, ಇದನ್ನು ಕಂಡ ಮುಂಭಾಗದಲ್ಲಿದ್ದ ಕಾಲುಬಲವು ಹೆದರಿ ತಲೆಯನ್ನು ಬಿಚ್ಚಿ ಕೊಂಡು ಹಿಮ್ಮೆಟ್ಟಿ ಓಡಿದರು ||೩೨||

ಟಿಪ್ಪಣಿ:— (೧)ನವವಾದ ಮೇಘ-ನವಮೇಘ (ವಿ. ಪೂರ್ವ.ಕ) ನವಮೇಘದ ಆಳಿ (ಷ. ತ) (೨) ನಿಷಧದಪತಿ-ನಿಷಧಪತಿ (ಷ. ತ) ನಿಷಧಪತಿಯಶರಜಾಲ-ನಿಷಧಪತಿಶರಜಾಲ (ಷ. ತ) ||೩೨||

ಮೂ|| ಆರುಸಾವಿರತೇರುಹಯುಹದಿ | ನಾರುಸಾವಿರಕರಿಗಳಿಪ್ಪ| ತ್ತಾ ರುಸಾವಿರಸೂರಕಾಲಾಳೊಂದುಲಕ್ಷಬಲ || ಸೇರಿತಂತಕಪುರಿಗೆನ ರಪಿನ ! ಸಾರಲಿರಿಪುವೇನೆನುಡಿಸುದ | ನಾರುಬಲ್ಲರುಮಿಕ್ಕಪುನೆ ಯನರಸಕೇಳೆಂದ ||೩೩||

ಟೀಕೆ:— ಆರುಸಾವಿರ, ತೇರು-ರಥವು, ಹದಿನಾರು ಸಾವಿರ

ಹದಿನಾರು ಸಹಸ್ರ, ಹಯ-ಕುದುರೆ, ಕರಿಗಳ್-ಆನೆಗಳು, ಇಪ್ಪತ್ತಾರುಸಾವಿರ (೧) ಸೂರ-ಸಮರ್ಥರಾದ, ಕಾಲಾಳು-ಪದಾತಿಯು, ಒಂದುಲಕ್ಷಬಲ-ಒಂದುಲಕ್ಷಸೇನೆ, (೨) ಅಂತಕಪುರಿಗೆ-ಯಮಪಟ್ಟಣಕ್ಕೆ, ಸೇರಿತು-ಹೋಯಿತು, ನಳಿನ-ಬಾಣಗಳ, ಸಾರದಲಿ-ಬಲದಿಂದ, ರಿಪುಸೇನೆ-ಶತ್ರುಸೈನ್ಯವು, ಮಡಿದುದಂ-ಸತ್ತದ್ದನ್ನು, ಮಿಕ್ಕಸೇನೆಯುಂ-ಉಳಿದಸೇನೆಯನ್ನು, ಆರುಬಲ್ಲರು-ಯಾರುತಿಳಿಯುವರು, ಅರಸ-ದೊರೆಯೇ, ಕೇಳು, ಎಂದ-ಎಂಬದಾಗಿ ಹೇಳಿದನು ॥೩೩॥

ತಾತ್ಪರ್ಯ:— ನಳನ ಬಾಣಗಳಿಂದ ಆರುಸಾವಿರ ರಥ, ಹದಿನಾರುಸಾವಿರ ಕುದುರೆ, ಇಪ್ಪತ್ತಾರುಸಾವಿರ ಆನೆಗಳು ನಾಶವಾದವು, ಒಂದುಲಕ್ಷ ಕಾಲು ಬಲವು ಯಮ ಪುರವನ್ನು ಸೇರಿತು, ಇನ್ನೂ ಲೆಕ್ಕಕ್ಕೆ ಸಿಕ್ಕದೆ ನಾಶವಾದ ಬಲವು ಎಷ್ಟೋ ಗೊತ್ತಿಲ್ಲ ॥೩೩॥

ಟಿಪ್ಪಣಿ:— (೧) (ತ್ಸ) ಶೂರ (೨) ಅಂತ-ಕೊನೆಯನ್ನು, ಕ ಮಾಡುವನು, (ಅವ) ಅಂತಕ (ಉಪ. ಸ) ಅಂತಕನಪುರಿ-ಅಂತಕಪುರಿ (ಷ. ತ) ॥೩೩॥

ಮೂ॥ ಮರನಹುತ್ತವನೇರಿದರುಸಂ । ಗರದಿಕೈದುವನಿಳುಹಿಸಲೆ
ಮೈ ।ಮರೆದುತೇಜಿಯನಳಿದುರಾವುತರುಕೊರಳಸಲಹೆನುತ ॥ ಕರ
ವಮುಗಿದರುಜೋದರುರುಕೈ। ಮರೆದುಕಣನಲಿನೊಂದುಬಲುತರ।
ಹರಿಬಬಾಯುಲಿಬೆರಳನಿಟ್ಟುದುವೈರಿಪಾಯದಳ॥ ॥೩೪॥

ಟೀಕೆ:— ಮರನ -ಮರವನ್ನೂ , ಹುತ್ತನಂ - ಹುತ್ತವನ್ನೂ, ಏರಿದರು—ಹತ್ತಿದರು, ಸಂಗರದಿ- ಯುದ್ಧದಲ್ಲಿ, ಕೈದುವಂ-ಆಯುಧವನ್ನು, ಇಳುಹಿ-ಇಳಿಸಿ, ಸಲೆ-ಚೆನ್ನಾಗಿ, (೧) ಮೈಮರೆದು- ಪ್ರಜ್ಞೆತಪ್ಪಿ, ರಾವುತರು-ಕುದುರೆ ಸೈನ್ಯದವರು, ತೇಜಿಯಂ-ಕುದುರೆಯನ್ನು, ಇಳಿದು-ಬಿಟ್ಟುಬಿಟ್ಟು ಬಂದು, ಕೊರಳ-ಪ್ರಾಣವನ್ನು, ಸಲಹೆನುತ-ರಕ್ಷಿಸೆಂದು, ಕರವಮುಗಿದರು-ಕೈಮುಗಿದರು (೨) ಜೋದರ್-ಭಟರು, (ಮಾವಟಿಗರು) ಉರು-ಹೆಚ್ಚಾಗಿ, ಕೈಮರೆದು-ಕೈನಿಂತುಹೋಗಿ, ಕಣನಲಿ-ಯುದ್ಧದಲ್ಲಿ, ನೊಂದು-ಬಾಧೆಪಟ್ಟು, ಬಲುತರಹರಿಬಿ-ಬಹಳ ಕಳವಳವನ್ನು ಹೊಂದಿ, ವೈರಿಪಾಯದಳ-ಶತ್ರುಗಳ ಕಾಲುಬಲವು, ಬಾಯುಲಿ - ಬಾಯೊಳಗೆ, ಬೆರಲಂ-ಬೆರಲನ್ನು, ಇಟ್ಟುದು-ಇಟ್ಟುಕೊಂಡಿತು ॥೩೪॥

ತಾತ್ಪರ್ಯ:— ಕೆಲವರು ಮರವನ್ನು ಏರಿದರು, ಕೆಲವರು ಹುತ್ತವನ್ನು ಹತ್ತಿ ನಿಂತು ಕೊಂಡರು (ಅಂತಹವರನ್ನು ಹೊಡೆಯಕೂಡದೆಂಬುದು ಯುದ್ಧಧರ್ಮವು) ರಾವುತರು ಆಯುಧಗಳನ್ನು ಬಿಟ್ಟು ಶರಣಾಗತರಾದರು, ಮಾವುತರು ಬಾಧೆಪಟ್ಟು ನೋವನ್ನು ತಡೆಯಲಾರದೆ ಕೈಮರೆತರು, ಕಾಲುಬಲವು ಪ್ರಾಣವನ್ನುಳಿಸಿಕೊಳ್ಳುವುದಕ್ಕಾಗಿ ಬಾಯಲ್ಲಿ ಬೆರಲನ್ನು ಕಚ್ಚಿಕೊಂಡು ನಿಂತರು ||೩೪||

ಟಿಪ್ಪಣಿ:— (೧) ಮೈಯುಂಮರೆದು- ಮೈಮರೆದು (ಕ್ರಿ. ಸ) (೨) (ತ್ಸ) ಬೋಧ ||೩೪||

ಮೂ|| ಮುರಿದುಬರುತಿದೆಜೀಯಬಲನಿಲ|ಲರಿದುನಮ್ಮದುನಳನೃಪಾಲನ | ಶರಹತಿಗೆನೆರೆಮುಗ್ಗಿಕೆಡೆದುದುತಾರುಥಟ್ಟನಲಿ || ತರಹರವನಾಕಾಣೆನೀಮೋ | ಹರಕೆಗತಿಯೇನೆನಲುಪುಷ್ಕರ|ಭರದಕೋಪದೊಳಂದುಕರಸಿದನಾಗನಿಜಬಲವ || ||೩೫||

ಟೀಕೆ:— ಜೀಯ-ಸ್ವಾಮಿ, ನಮ್ಮದು-ನಮ್ಮ, ಬಲ-ಸೈನ್ಯವು, ನಳನೃಪಾಲನ-ನಳನ, (೧) ಶರಹತಿಗೆ-ಬಾಣದ ಏಟಿಗೆ, ನಿಲಲರಿದು-ನಿಲ್ಲಲಾರದು, ಮುರಿದು-ಹಿಂತಿರುಗಿ, ಬರುತಿದೆ-ಬರುತ್ತಿದೆ, ನೆರೆ-ಹೆಚ್ಚಾಗಿ, ಮುಗ್ಗಿ-ಮುಗ್ಗರಿಸಿ, ತಾರುಥಟ್ಟನಲಿ- ಚೆಲ್ಲಾಪಿಲ್ಲಿಯಾಗಿ, ಕೆಡೆದುದು-ಬಿದ್ದುಹೋಯಿತು, ತರಹರವ-ನಿರ್ವಾಹವನ್ನು, ಕಾಣೆಂ-ಕಾಣೆನು(?)-ಳಾಡಲಿಲ್ಲ (೨) ಈ ಮೋಹರಕೆ-ಈ ಸೈನ್ಯಕ್ಕೆ, ಗತಿಯೇಂ-ದಿಕ್ಕು ಯಾರು, ಎನಲು- ಎಂಬದಾಗಿ ಸೇನಾಪತಿಗಳು ಮೊರೆಯಿಡುತ್ತಿರಲು, ಭರದ- ಹೆಚ್ಚಾದ, ಕೋಪದೊಳ್-ಕ್ರೋಧದಿಂದ, ಅಂದು-ಆಗ, ನಿಜಬಲವ-ತನ್ನ ಸೈನ್ಯವನ್ನು, ಕರಸಿದನು-ಬರಮಾಡಿದನು, ||೩೫||

ತಾತ್ಪರ್ಯ:— ಪುಷ್ಕರನ ಕಡೆಯ ಸೈನಿಕರು ಬಂದು ಕೈಮುಗಿದು ಸ್ವಾಮಿ ನಳನ ಬಾಣದ ಪೆಟ್ಟಿಗೆ ತಾರುಮಾರಾಗಿ ನಮ್ಮ ಸೈನ್ಯನೆಲ್ಲವೂ ಮಡಿದು ನಿಲ್ಲಲಾರದೆ ವಿಮುಖವಾಗಿ ತಲೆಯುಳಿದರೆ ಸಾಕೆಂದು ಓಡಿಬರುತ್ತಿದೆ ಇನ್ನು ನಿರ್ವಹಿಸುವುದು ಅಸಾಧ್ಯವು, ನಮ್ಮ ಸೈನ್ಯಕ್ಕೆ ದಿಕ್ಕಿಲ್ಲನಾಗಿದೆ. ಎಂದು ತಿಳಿಸಲು ಕೋಪೋದ್ದೀಪಿತನಾಗಿ ತನ್ನ ಸೈನ್ಯದವರನ್ನು ಬರಹೇಳಿದನು ||೩೫||

ಟಿಪ್ಪಣಿ:— (೧) ಶರದಹತಿ-ಶರಹತಿ (ಷ. ತ) ಹತಕ್ಕೆ (ದ್ವಿ) ಸರ (೨) ಇದು ಮೋಹರ-ಈ ಮೋಹರ (ಗಮಕ) ||೩೫||

ಮೂ॥ ಅರಸಕೇಳರಮನೆಗೆಬಂದನು । ವುರುತರದಕೈದುಗಳತರಸಿದ। ಧುರವಿಜಯರಿಗೆಕರಸಿಕೊಟ್ಟನುಚಾಪಮಾರ್ಗಣವ ॥ ಕರಿತುರಗ ಕಾಲಾಳುನೆರೆದುದು। ಮೊರೆವವಾದ್ಯದರಭಸದಲಿಸಂ। ಗರಕೆಪಯಣವಮಾಡುತಿರ್ದನುನೃಪತಿಕೇಳೆಂದ ॥೩೬॥

ಟೀಕೆ:— ಅರಸ-ದೊರೆಯೇ, ಕೇಳ್-ಕೇಳು, ಅರಮನೆಗೆ, ಬಂದನು, ಉರುತರದ-ದೊಡ್ಡದಾದ, ಕೈದುಗಳ-ಆಯುಧವನ್ನು, ತರಿಸಿದ ತರಿಸಿದನು, (೧) ಧುರವಿಜಯರಿಗೆ-ಯುದ್ಧದಲ್ಲಿನಿಯುಮವನ್ನು ಹೊಂದ ತಕ್ಕ ಶೂರರಿಗೆ (೨) ಚಾಪಮಾರ್ಗಣವ-ಧನುರ್ಬಾಣಗಳನ್ನು, ಕರೆಸಿ-ಕರೆದು, ಕೊಟ್ಟನು, ಕರಿ-ಆನೆ, ತುರಗ-ಕುದುರೆ, ಕಾಲಾಳು-ಕಾಲು ಬಲ (ಇವು) ನೆರೆದುದು-ಗುಂಪುಸೇರಿತು, ಮೊರೆವ-ಮೊರೆಯುತ್ತಿರುವ ವಾದ್ಯರಭಸದಲಿ-ವಾದ್ಯದವೇಗದಿಂದ, ಸಂಗರಕೆ-ಯುದ್ಧಕ್ಕೆ (೩) ಪಯಣವ-ಪ್ರಯಾಣವನ್ನು, ಮಾಡುತಿರ್ದನು-ಮಾಡುತ್ತಿದ್ದನು, ನೃಪತಿ-ದೊರೆಯೇ, ಕೇಳು, ಎಂದ-ಎಂದನು ॥೩೬॥

ತಾತ್ಪರ್ಯ:— ಪುಷ್ಕರನು ಅರಮನೆಗೆ ಬಂದು, ವೀರರಾದ ಭಟರನ್ನು ಕರೆದು ಅವರಿಗೆ ದಿವ್ಯವಾದ ಧನುರ್ಬಾಣಗಳನ್ನು ಕೊಟ್ಟನು, ಚತುರಂಗ ಸೈನ್ಯವೂ ಸೇರಿತು, ಅವರೊಡನೆ ಸೇರಿಯುದ್ಧೋತ್ಸಾಹ ಯುಕ್ತನಾಗಿ ನಾನಾವಿಧ ವಾದ್ಯ ರಭಸದಿಂದ ಯುದ್ಧಕ್ಕೆ ಹೊರಟನು॥

ಟಿಪ್ಪಣಿ:— (೧) ಧುರದಲ್ಲಿ ವಿಜಯವುಳ್ಳವರು - ಧುರವಿಜಯರು (ಬ. ವ್ರೀ. ಸ) (೨) ಚಾಪವೂಮಾರ್ಗಣವೂ-ಚಾಪಮಾರ್ಗಣ (ಸ. ದ್ವಂದ್ವ) (೩) (ತ್ಸ) ಪ್ರಯಾಣ ॥೩೬॥

ಮೂ॥ ನಗುತನಿಂತಿರೆನಿಷಧಪತಿಕಾ ।ಳಗದಿಪಿಡಿಸಿದಗೌರುಗಹಳೆಯ। ವಿಗಡಪುಷ್ಕರಕೇಳೆ ಕೋಪಾಗ್ನಿಯಲಿಕಿಡಿಮಸಗೆ ॥ ಹಗೆಗೆಜಯವಾಯ್ತಿಂದಿನಲಿತಾ । ಹೋಗುವೆನಹಿತರಮುರಿವೆನೆನೆಕೈ। ಮುಗಿದುಬಿನ್ನೈಸಿದನುವರಮಂತ್ರೀಶಪುಷ್ಕರಗೆ ॥೩೭॥

ಟೀಕೆ:— ನಿಷಧಪತಿ-ನಳನು, ನಗುತ, ನಿಂತಿರೆ- ನಿಂತಿರಲು, ಕಾಳಗದಿ-ಯುದ್ಧದಲ್ಲಿ, ಗೌರುಗಹಳೆಯು-ದೊಡ್ಡ ಕಹಳೆಯನ್ನು, ಹಿಡಿಸಿದ-ಊದಿಸಿದನು, (೧) ವಿಗಡಪುಷ್ಕರ-ಪ್ರಚಂಡನಾದ ಪುಷ್ಕರನು, ಕೇಳೆ-ಕೇಳಲು, (೨) ಕೋಪಾಗ್ನಿಯಲಿ-ಕ್ರೋಧವೆಂಬ ಬೆಂಕಿಯಲ್ಲಿ, ಕಿಡಿ-ಕಿಡಿಗಳು, ಮಸಗೆ-ಹೊರಡುತ್ತಿರಲು, ಹಗೆಗೆ-ಶತ್ರುವಿಗೆ, ಇಂದಿನ

ಲಿ-ಈಗ, ಜಯವಾಯ್ತು-ಗೆಲುವಾಯ್ತು, ತಾ-ನಾನು, ಹೋಗುವೆನು-ಹೋಗುತ್ತೇನೆ, ಅಹಿತರ-ಶತ್ರುಗಳನ್ನು ಮುರಿವೆನು-ನಾಶಮಾಡುವೆನು ಎನೆ-ಎಂದುಕೇಳಲು, ವರಮಂತ್ರೀಶ-ಶ್ರೇಷ್ಠನಾದ ಮಂತ್ರಿಯು, ಪುಷ್ಕರಗೆ-ಪುಷ್ಕರನಿಗೆ, ಕೈಮುಗಿದು-ಕೈಜೋಡಿಸಿ, ಬಿನ್ನೈಸಿದನು-ವಿಜ್ಞಾಪಿಸಿದನು ॥೩೬॥

ತಾತ್ಪರ್ಯ:—ನಳನು ಹಸನ್ಮುಖಿಯಾಗಿನಿಂತು ಜಯಸೂಚಕವಾದ ಕಹಳೆಯನ್ನು ಊದಿಸಿದನು, ಪುಷ್ಕರನುಕೇಳಿ ಅವನಮುಖದಲ್ಲಿ ಕೋಪಾಗ್ನಿಯು ಪ್ರಜ್ವಲಿಸುತ್ತಿರಲು, ಶತ್ರುಗಳಿಗೆ ಜಯವಾಯ್ತು ಇನ್ನು ನಾನುಹೋಗಿ ಯುದ್ಧಮಾಡಿ ಶತ್ರುಗಳನ್ನು ನಾಶಪಡಿಸುವೆನು, ಎಂದು ಹೊರಡಲು,ಮುಖ್ಯಮಂತ್ರಿಯು ವಿವೇಕಶಾಲಿಯಾದುದರಿಂದ ಪುಷ್ಕರನಂ ಕಂಡು ಇಂತೆಂದನು. ॥೩೬॥

ಟಿಪ್ಪಣಿ:--(೧) ವಿಗಡನಾದ ಪುಷ್ಕರನು-ವಿಗಡ ಪುಷ್ಕರನು (ವಿ. ಪೂ. ಕ) ವಿಗಡಕ್ಕೆ (ತ್ಸ) ವಿಕಟ(೨) ಕೋಪವೇಅಗ್ನಿ-ಕೋಪಾಗ್ನಿ (ಅವ. ಪೂರ್ವ. ಕ) ೩೬॥

ಮ॥ ಅರಿಭಯಂಕರನೈಷಧನಸಂ । ಗರದಿಗೆಲುವವರಾರುದೇವಾ ।
ಸುರರುನಿಲಲರಿದರಸಮಿಕ್ಕಿನನರರಪಾಡೇನು ।ಮರುಳುತನಬೇಡಿ
ನ್ನುನೃಪನನು । ಕರೆಸಿಸಂಧಿಯಮಾಡಿಜೂಜಿನ । ಪರಮಪಂಥದಿ
ಗೆಲುವ್ರದುಚಿತವಿದೆಂದನಾಮಂತ್ರಿ ॥೩೮

ಟೀಕೆ:—ಅರಸ-ದೊರೆಯೇ, (೧) ಅರಿಭಯಂಕರನೈಷಧನ-ಶತ್ರುಗಳಿಗೆಕ್ರೂರನಾದ ನಳನನ್ನು, ಸಂಗರದಿ-ಯುದ್ಧದಲ್ಲಿ, ಗೆಲುವರಾರುಜ-ಯಿಸತಕ್ಕವರಾರು? ದೇವಾಸುರರು-ದೇವರಾಕ್ಷಸರು, ನಿಲಲ್-ಎದುರಿಗೆನಿಲ್ಲಲು, ಅರಿದು-ಅಸಾಧ್ಯವು, ಮಿಕ್ಕಿನ-ಉಳಿದ, ನರರ-ಮನುಷ್ಯರ, ಪಾಡೇನು-ಗತಿಯೇನು? ಇನ್ನು, ಮರುಳುತನ-ಹುಚ್ಚುತನವು, ಬೇಡ, ನೃಪನ-ದೊರೆಯನ್ನು, ಕರೆಸಿ-ಬರಮಾಡಿ, ಸಂಧಿಯಮಾಡಿ-ಸಮಾಧಾನಮಾಡಿಕೊಂಡು, ಜೂಜಿನ, (೨) ಪರಮಪಂಥದಿ-ಉತ್ಕೃಷ್ಟವಾದ ದಾರಿಯಲ್ಲಿ, ಗೆಲುವುದು-ಜಯಿಸುವುದು, ಇದು-ಈರೀತಿಯು ಉಚಿತಂ-ಯೋಗ್ಯವಾದುದು, (ಎಂಬದಾಗಿ) ಮಂತ್ರೀಶ - ಮಂತ್ರಿಶ್ರೇಷ್ಠನು, ಪುಷ್ಕರಗೆ-ಪುಷ್ಕರನನ್ನು ಕುರಿತು, ಎಂದನು-ಹೇಳಿದನು.॥೩೮॥

ತಾತ್ಪರ್ಯ:—ಅಯ್ಯಾ ಪುಷ್ಕರನೇ, ನಳನನ್ನು ದೇವತೆಗಳಾಗಲಿ

ರಾಕ್ಷಸರಾಗಲಿ ಯುದ್ಧದಲ್ಲಿ ಜಯಿಸಲಾರರು, ಮನುಷ್ಯರು ಜಯಿಸುವ್ರ ದೆಂದರೇನು ? ಇದು ಆಗತಕ್ಕದ್ದಲ್ಲ, ಆದಕಾರಣ ಅವನನ್ನು ಕರೆಯಿಸಿ ಸಂಧಿಯಿಂದ ಸಮಾಧಾನಮಾಡಿಕೊಂಡು ಯುದ್ಧವನ್ನು ನಿಲ್ಲಿಸಿ, ಪುನಃ ಜೂಜಿನಮಾರ್ಗದಿಂದಲೇ ಅವನನ್ನು ಗೆಲ್ಲಬೇಕು, ಇದೇತಕ್ಕದ್ದು, ನೀನು ಯುದ್ಧದಿಂದಲೇ ಜಯಿಸುವುದಕ್ಕೆ ಹೋದರೆ ಹತನಾಗುತ್ತೀಯೆ! ಇದನ್ನು ಬಿಡು, ಎಂದು ಹೇಳಿದನು. ||೩೪||

ಟಿಪ್ಪಣಿ:—(೧) ಅರಿಗಳಿಗೆ ಭಯಂಕರನು-ಅರಿಭಯಂಕರ (ಷ. ತ) ಅರಿಭಯಂಕರನಾದ ನೈಷಧ-ಅರಿಭಯಂಕರನೈಷಧ (ವಿ. ಪೂ. ಕ) (೨) ಪರಮವಾದವಂಥ-ಪರಮಪಂಥ (ವಿ. ಪೂ. ಕ) ||೩೪||

ಮೂ || ವೀರಸೇನನತನಯನಿಷಧನ| ಸೇರಿಹಳುಜಯಲಕ್ಷ್ಮಿ ಋತುಪರ್ಣ |
ಭಾರದಲಿಋತುಪರ್ಣಚೈದ್ಯವಿದರ್ಭಮೊದಲಾದ|| ಭೂರಿನೃಪರೋಲೈಸುತಿರೆಸರಿ | ಯಾರುಸಂಗ್ರಾಮದಲಿನಳನಲಿ | ಮಾರಿಕೈಮಾಡಿ
ದರೆತಪ್ಪದುಮರಣನಿನಗೆಂದ ||೩೯||

ಟೀಕೆ:—ವೀರಸೇನನ-ವೀರಸೇನರಾಜನ, ತನಯ-ಮಗನಾದ, ನಿಷಧನ-ನಳನನ್ನು, (೧) ಜಯಲಕ್ಷ್ಮಿ-ಜಯಲಕ್ಷ್ಮಿಯು, ಸೇರಿಹಳು-ಹೊಂದಿರುವಳು, ಋತುಪರ್ಣ ಚೈದ್ಯ ವಿದರ್ಭ ಮೊದಲಾದ-ಋತುಪರ್ಣರಾಜ, ಚೈದ್ಯರಾಜ, ವಿದರ್ಭರಾಜನೇಮುಂತಾದ, ಭೂರಿನೃಪರ್-ಮಹಾರಾಜರು, (೨) ಸೇನಾಭಾರದಲಿ-ಸೇನಾಸಮೇತರಾಗಿದ್ದರೂ, ಓಲೈಸುತಿರೆ-ನಳನನ್ನು ಸೇವಿಸುತ್ತಿರಲು, ಸಂಗ್ರಾಮದಲಿ-ಯುದ್ಧದಲ್ಲಿ, ಸರಿಯಾರು-(   ) ನಳನಿಗೆ ಸಮಾನರಾರು : ನಳನಲಿ - ನಳನಮೇಲೆ, ಮಾರಿ-ಬಿದ್ದು, (ನುಡುಕಿ) ಕೈ ಮಾಡಿದರೆ-ಯುದ್ಧಮಾಡಿದರೆ, ನಿನಗೆ, ಮರಣ-ಸಾವು, ತಪ್ಪದು-ಬಿಡದು, ಎಂದ-ಎಂದನು. ||೩೯||

ತಾತ್ಪರ್ಯ:—ಜಯಲಕ್ಷ್ಮಿಯು ನಳನವಶಳಾಗಿರುವಳು. ಋತುಪರ್ಣ, ಚೈದ್ಯ, ವಿದರ್ಭಮೊದಲಾದ ರಾಜಾಧಿರಾಜರೆಲ್ಲರೂ ತಂತಮ್ಮ ಸೇನಾಸಮೇತರಾಗಿ ಅವನ ಊಳಿಗವನ್ನು ಮಾಡುತ್ತಿರುವಲ್ಲಿ ಅವನನ್ನು ಯಾರುತಾನೆ ಯುದ್ಧದಲ್ಲಿ ಪ್ರತಿಭಟಿಸ ಬಲ್ಲರು? ನೀನು ಅತಿಕ್ರಮಿಸಿ ಅವನೊಡನೆ ಯುದ್ಧಕ್ಕೆ ನಿಂತರೆ ನಿನಗೆ ಮರಣವು ಸಿದ್ಧವು. ಎಂದನು. ||

ಟಿಪ್ಪಣಿ:—(೧)ಜಯವೇಲಕ್ಷ್ಮಿ-ಜಯಲಕ್ಷ್ಮಿ, (ಅವ. ಪೂ. ಕ) (೨) ಸೇನೆಯಭಾರ-ಸೇನಾಭಾರ (ಷ. ತ) ||೩೯||

ಮೂ॥ ಎನಲುಕೇಳ್ದಾಮಾತಿನಲಿಬಂ । ದನುನಳನಕಂಡನುಮಹೀ
ಪತಿ। ಯೆನಗೆನಿಮ್ಮಲಿಕದನವೇತಕೆಸಾಕದಂತಿರಲಿ ॥ ಜನಗಳೀಕ್ಷಿ
ಸಲೀಗಮರುಜೂ । ಜಿನಲಿನಿಪುಣರುನೀವುನಿಮ್ಮಲಿ। ಮನಕೆಹರು
ಷಿತವಾಗಲಾಡುವೆನೆಂದನವನನಗುತ ॥೪೦॥

ಟೀಕೆ:—ಎನಲು-ಎಂಬದಾಗಿ ಹೇಳಲು, ಕೇಳ್ದು-ಕೇಳಿ, (ಪುಷ್ಕರನು) ಆಮಾತಿನಲಿ-ಆ ಮಾತಿನಂತೆ, ಬಂದನು-ಒಪ್ಪಿ ನಳನಬಳಿಗೆ ಬಂದನು, ನಳನ-ನಳನನ್ನು, ಕಂಡನು, ಮಹೀಪತಿ-ದೊರೆಯೇ, ಎನಗೆ- ನನಗೆ, ನಿಮ್ಮಲಿ-ನಿಮ್ಮಸಂಗಡ, ಕದನವು-ಯುದ್ಧವು, ಏಕೆ-ಯಾತಕ್ಕೆ? ಸಾಕು-ಬಿಡು, ಅದು-ಆವಿಷಯವು, ಅಂತಿರಲಿ-ಹಾಗಿರಲಿ, ಈಗ, (೧) ಮರುಜೂಜಿನಲಿ-ಪುನರ್ದ್ಯೂತದಲ್ಲಿ, ಜನಗಳ್-ಜನರು,ಈಕ್ಷಿಸಲಿ-ನೋಡಲಿ, ನೀವು, ನಿಪುಣರು-ಸಮರ್ಥರು, ನಿಮ್ಮಲಿ-ನಿಮ್ಮಸಂಗಡ (೨) ಮನಕೆ-ಮನಸ್ಸಿಗೆ, ಹರುಷಿತವಾಗಲು-ಸಂತೋಷವಾಗಲು, ಆಡುವೆಂ-ಆಡುತ್ತೇನೆ, (ಎಂಬದಾಗಿ) ಅವಂ-ಆ ಪುಷ್ಕರನು, ನಗುತ - ನಗುತ್ತಾ, ಎಂದಂ-ಹೇಳಿದನು. ॥೪೦॥

ತಾತ್ಪರ್ಯ:—ಪುಷ್ಕರನು ಮಂತ್ರಿಯಮಾತಿಗೆ ಒಪ್ಪಿ ಕೂಡಲೆ ನಳನಬಳಿಗೆ ಬಂದು ಎಲೈ ರಾಜನೇ! ನಿನ್ನೊಡನೆ ನನಗೆ ಯುದ್ಧವೇತಕ್ಕೆ, ಬೇಡ, ನಿಲ್ಲಿಸಿಬಿಡು, ನೀನು ದ್ಯೂತದಲ್ಲಿ ಬಹುಚತುರನು ನಿನ್ನನ್ನು ಜಯಿಸುವುದು ನನಗೆ ಸಾಧ್ಯವೇ! ನಾವು ಸ್ನೇಹದಿಂದ ಇರೋಣ, ಇನ್ನು ವೈರವನ್ನು ಬಿಡು, ಜನಗಳೆಲ್ಲರೂ ನೋಡಿ ಸಂತೋಷಪಡಲಿ, ಪುನರ್ದ್ಯೂತವನ್ನಾಡೋಣ ನಿನ್ನ ಮನಸ್ಸಿಗೆ ಹರ್ಷವಾಗುವಂತೆ ಆಡುತ್ತೇನೆ, ಎಂದು ನಗುತ್ತಾ, ಸಾಮೋಪಾಯವನ್ನು ಪ್ರಯೋಗಿಸಿ ನಳನಮನಸ್ಸು ಕರಗುವಂತೆ ಹೇಳಿದನು. ॥೪೦॥

ಟಿಪ್ಪಣಿ:—(೧)ಮರುಪವಾದ ಜೂಜು-ಮರುಜೂಜು (ವಿ.ಪೂರ್ವ.ಕ) (೨) ಮನಸ್ ಎಂಬ ಸಕಾರಾಂತ ಸಂಸ್ಕೃತ ಶಬ್ದದ ಕೊನೆಯ ವ್ಯಂಜನಕ್ಕೆ ವಿಕಲ್ಪವಾಗಿ ಲೋಪಬಂದು ಕನ್ನಡಕ್ಕೆ ‹ ಮನ › ಎಂದು ಲಿಂಗವಾಗಿದೆ, ಚತುರ್ಥಿಯ ‹ ಗೆ › ಪ್ರತ್ಯಯಕ್ಕೆ ‹ ಕೆ › ಎಂಬಾದೇಶವು ಬಂತು ॥೪೦॥

ಮೂ॥ ಎಲವೊ ಕೇಳಿನ್ನಾಡೊಡಾಗಲಿ। ಕಲಹಕಂಜುವೆನೀನುಜೂಜಿ
ನ ।ಬಳಕೆಯಲಿಬಲ್ಲಿದನುನಮ್ಮನುಕರೆದಪೆತಪ್ಪೇನು ॥ ಕಲಹವಾಗ

ಲಿ ಜೂಜನಾಗಲಿ । ಗೆಲುವೆನಿನ್ನನು ಕಪಟಹೃದಯದ । ನೆಲೆಯ ಬ
ಲ್ಲೆನು ನಿನಗೆ ಮನವೊಲಿದುದನು ಮಾಡೆಂದ ॥೪೧॥

ಟೀಕೆ:— ಎಲವೊ-ಎಲೈ ಪುಷ್ಕರನೇ ! ಕೇಳು, ಇನ್ನು, ಆದೊಡೆ-ಹಾಗಾದರೆ, ಆಗಲಿ-ಆಗಬಹುದು. ನೀನು, ಕಲಹಕೆ-ಯುದ್ಧಕ್ಕೆ, ಅಂಜುವೆ-ಹೆದರುತ್ತೀಯೆ, ಜೂಜಿನ ಬಳಕೆಯಲಿ-ಜೂಜಾಡುವುದರಲ್ಲಿ, ಬಲ್ಲಿದನು- ಸಮರ್ಥನು, ನಮ್ಮನು-ನಮ್ಮನ್ನು, ಕರೆದೆ-ಪ್ರೋತ್ಸಾಹಿಸಿದೆ, ತಪ್ಪೇನು-ದೋಷವೇನು ? ಕಲಹವಾಗಲಿ-ಯುದ್ಧವಾದರೂಸರಿ, ಜೂಜನಾದರೂಸರಿ, ನಿನ್ನನು-ನಿನ್ನನ್ನು, ಗೆಲುವೆ-ಜಯಿಸುತ್ತೇನೆ, (೧) ಕಪಟಹೃದಯದ-ನಿನ್ನ ವಂಚನೆಯುಳ್ಳ ಮನಸ್ಸಿನ, ನೆಲೆಯ-ಬಗೆಯನ್ನು, ಬಲ್ಲೆನು-ತಿಳಿದೆನು, ನಿನಗೆ, (೨)ಮನವೊಲಿದನು-ದು ಮನಸ್ಸಿಗೆ ಒಪ್ಪಿದುದನ್ನು, ಮಾಡು-ನಡೆಯಿಸು, ಎಂದ-ಎಂದನು ॥೪೧॥

ತಾತ್ಪರ್ಯ:— ಆ ಮಾತನ್ನು ಕೇಳಿ ನಳನು ಅಯ್ಯೋ ನೀನು ಜೂಜಾಡುವುದರಲ್ಲಿ ಶಕ್ತನಲ್ಲದೆ ಯುದ್ಧಕ್ಕೆ ಶಕ್ತನಲ್ಲ. ಆಗಬಹುದು. ಅದರಲ್ಲಿಯೇ ನಿನ್ನ ಸಾಮರ್ಥ್ಯವಿರುವುದರಿಂದ ನನ್ನನ್ನು ಜೂಜಿಗೆ ಕರೆದೆ, ದೋಷವಿಲ್ಲ. ನೀನು ಯುದ್ಧಮಾಡಿದರೂ, ಅಥವಾ ಜೂಜಾಡಿದರೂ ನನಗೆ ಸಮ್ಮತವೇ ! ನಿನ್ನ ಕಪಟ ಹೃದಯವನ್ನು ಬಲ್ಲೆನು, ನಿನ್ನನ್ನು ಯಾವುದರಲ್ಲಿಯಾದರೂ ಜಯಿಸುವುದೇ ನಿಶ್ಚಯವು, ನಿನಗೆ ಇಷ್ಟ ಬಂದಂತೆ ಮಾಡು ನಾನು ಎಲ್ಲಕ್ಕೂ ಸಿದ್ಧನಾಗಿರುವೆನು, ಎಂದನು ॥೪೧॥

ಟಿಪ್ಪ - (೧) ಕಪಟವುಳ್ಳಹೃದಯ- ಕಪಟಹೃದಯ (ವಿ. ಪೂರ್ವ. ಕ) (೨) ಮನಂ+ಒಲಿದುದನು-ಮನವೊಲಿದನು, ಇಲ್ಲಿ ಅನುಸ್ವಾರಕ್ಕೆ ಮಕಾರವೂ ಮಕಾರಕ್ಕೆ ವಕಾರವೂ ಆದೇಶವಾಗಿದೆ ॥೪೧॥

ಮೂ॥ ಅರಸ ಕೇಳ್ ಪುಷ್ಕರನು ತ । ನ್ನರಮನೆಗೆ ಕರೆತಂದನಾ ಕಲಿ।
ಪುರುಷನಿಂದಲಿ ಮುನ್ನ ಗೆಲಿದಗ್ಗಳಿಕೆಯಲಿ ನೃಪನ ॥ ಪಿರಿದು ತಾಗೆ
ಲಬಲ್ಲೆನೆಂದಾ । ಪ್ಪರನು ಕರಸಿದನೋಲಗದ ಕೆ । ಳ್ಳುರಲು ತಂದ
ರು ಸಾರಿಗಳನಿಳಿಪಿದರು ಸಮ್ಮುಖದಿ ॥೪೨॥

ಟೀಕೆ:— ಅರಸ-ಧರ್ಮರಾಜನೇ, ಕೇಳ್-ಕೇಳು (೧) ಆ ಪುಷ್ಕರನು (೨) ಆ ಕಲಿಪುರುಷನಿಂದಲಿ-ಕಲಿಯ ಸಹಾಯದಿಂದ, ಅರಮನೆಗೆ-ರಾಜಭವನಕ್ಕೆ, ಕರೆತಂದಂ-ಕರೆದುಕೊಂಡುಬಂದನು, ನೃಪನ-ನ

ಳನನ್ನು, ಪಿರಿದು–ಅತ್ಯಂತವಾಗಿ, ತಾಂ–ತಾನು, ಗೆಲಬಲ್ಲೆಂ–ಜಯಿಸಬ ಬಲ್ಲೆನು, ಎಂದು–ಎಂಬದಾಗಿತಿಳಿದು, ಆಪ್ತರನು–ತನ್ನ ಪಕ್ಷದವರನ್ನು ಕರ ದನು–ಬರಮಾಡಿದನು, ಓಲಗದಿ–ಸಭೆಯುಲ್ಲಿ, ಕುಳ್ಳಿರಲು–ಎಲ್ಲರೂ ಕುಳಿತುಕೊಂಡಿರಲು, ಸಾರಿಗಳ್– ಪಗಡೆ ಕಾಯಿಗಳನ್ನು, ತಂದರು, ಸಂಮುಖದಿ–ಮುಂಪೆ, ನಿಲಿಸಿದರು–ಇಟ್ಟರು ॥೪೨॥

ತಾತ್ಪರ್ಯ:— ಹಿಂದೆ ಕಲಿಯ ಸಹಾಯದಿಂದ ಸುಲಭವಾಗಿ ತನಗೆ ಜಯವಾಯ್ತೆಂಬ ಹೆಚ್ಚಿಕೆಯಿಂದ (ನಂಬಿಕೆಯಿಂದ) ಈಗಲೂ ನಿಮಿಷಮಾತ್ರದಲ್ಲಿ ನಳನನ್ನು ಗೆಲ್ಲುವೆನೆಂದು ಭಾವಿಸಿ ತನಗೆ ಬೇಕಾದವರನ್ನೆಲ್ಲಾ ಕರೆಯಿಸಿ ಸಭೆಯುಲ್ಲಿ ಕುಳಿತು ಕೊಳ್ಳಲು ಪಗಡೆಯಾಟಕ್ಕೆ, ಬೇಕಾದ ಸಾಮಗ್ರಿಗಳನ್ನು ರಾಜಪುರುಷರು ಬೇಗನೆ ತಂದು ಸಿದ್ಧಪಡಿಸಿದರು ॥೪೨॥

ಟಿಪ್ಪಣಿ:— (೧) ಅವನು ಪುಷ್ಕರನು (ಗಮಕ) (೨) ಕಲಿಯೀ ಪುರುಷನು–ಕಲಿಪುರುಷನು, (ಅವ, ಪೂರ್ವ, ಕ) ಅವನು–ಕಲಿಪುರುಷನು–ಆ ಕಲಿಪುರುಷನು (ಗಮಕ) ॥೪೨॥

ಮೂ॥ ನಳನೃಪತಿನೀಗೆಲಿದೊಡೀಭೂ । ಲಲನೆಯನುತಾಬಿಡುವೆ
ಸೋತರೆ । ಬಳಿಕದಮಯಂತಿಯನುನನಗೊಪ್ಪಿಸುವುದೆಂದೆನ
ಲು ॥ ಇಳೆಯೊಳಿಹಭೂರುಹದಹೃದಯದ । ನೆಲೆಯಬಲ್ಲಗ್ಗಳಿ
ಕೆಯುಲಿತಾ । ಗೆಲುವೆನೆಂದೊಪ್ಪಿದನುಮನದಲಿಧೈರ್ಯಪರನಾಗಿ ॥೪೩॥

ಟೀಕೆ:— (೧) ನಳನೃಪತೀ–ನಳರಾಜನೇ, ನೀ–ನೀನು, ಗೆಲಿದೊಡೆ–ಗೆದ್ದರೆ, (೨) ಈ ಭೂಲಲನೆಯನು – ಈ ಭೂಮಿಯನ್ನು, ತಾ–ನಾನು, ಬಿಡುವೆ–ಬಿಟ್ಟು ಕೊಡುತ್ತೇನೆ, ಸೋತರೆ–ನನ್ನಿಂದಪರಾಜಿತನಾದರೆ, ಬಳಿಕ–ಆಮೇಲೆ, ದಮಯಂತಿಯನು– ನಿನ್ನಪತ್ನಿಯನ್ನು, ನನಗೆ, ಒಪ್ಪಿಸುವುದು–ಒಪ್ಪಿಸಬೇಕು, ಎಂದು–ಎಂಬದಾಗಿ, ಎನಲು–ಹೇಳಲು, (ನಳನು) ಇಳೆಯೊಳಿಹ–ಭೂಮಿಯುಲ್ಲಿರುವ, (೩) ಭೂರುಹದ–ವೃಕ್ಷಗಳ, ಹೃದಯದ–ತತ್ವದ, ನೆಲೆಯ–ವಿಸ್ತಾರವನ್ನು, ಬಲ್ಲ–ತಿಳಿದಿರುವ, ಅಗ್ಗಳಿಕೆಯುಲಿ–ಹೆಚ್ಚಿಕೆಯಿಂದ, ತಾ– ತಾನು, ಗೆಲುವೆನೆಂದು–ಗೆಲ್ಲುತ್ತೇನೆಂದು, ಮನದಲಿಮನಸ್ಸಿನಲ್ಲಿ–ಧೈರ್ಯಪರನಾಗಿ–ಧೈರ್ಯವುಳ್ಳವನಾಗಿ, ಒಪ್ಪಿದನು– (ಪುಷ್ಕರನುಹೇಳಿದ ಪಣಕ್ಕೆ) ಒಪ್ಪಿಕೊಂಡನು ॥

ತಾತ್ಪರ್ಯ:— ನೀಚನಾದ ಪುಷ್ಕರನು ನಳನೊಡನೆ ದ್ಯೂತ್ಯಕ್ಕೆ

ಪ್ರಾರಂಭಿಸುವಾಗ ಒಂದು ಸಮಯವನ್ನು ನಿಷ್ಕರ್ಷಿಸಿದನು ಏನೆಂದರೆ ಎಲೈ ನಳನೇ ನಾನು ಜೂಜಿನಲ್ಲಿ ಸೋತರೆ ಭೂಮಿಯನ್ನು ನಿನ್ನ ವಶ ಮಾಡುವೆನು, ನೀನು ಸೋತರೆ ದಮಯಂತಿಯನ್ನು ನನ್ನ ವಶಮಾಡ ಬೇಕು, ಎಂದುಹೇಳಲು ನಳನು ಸಮಸ್ತವನಸ್ಪತಿ ಶಾಸ್ತ್ರವನ್ನೂ ಬ ಲ್ಲವನಾದುದರಿಂದ ಆಗಲೆಂದು ಒಪ್ಪಿಕೊಂಡನು ॥೪೩॥

ಟಿಪ್ಪಣಿ:— (೧) ನಳನೆಂಬನೃಪತಿ (ಸಂ. ಪ್ರೌ್ವ. ೯) ಇಲ್ಲಿ ಸಂಬೋಧನಾವಿ ಭಕ್ತಿಪ್ರತ್ಯಯವು ಬಂದು ಲೋಪವಾಗಿ, ಪ್ರಕೃತ್ಯ್ಗ ತವಾಗಿನಿಂತಿದೆ (೨) ಭೂಮಿಯೇ ಲಲನೆ-ಭೂಲಲನೆ (ಅವ. ಪ್ರೌ್ವ.೯) ಇವಳು ಭೂಲಲನೆ-ಈ ಭೂಲಲನೆ (ಗಮಕ) (೩) ಭೂ-ಭೂಮಿಯ ಲ್ಲಿ, ರುಹ-ಹುಟ್ಟಿದುದು, (ವೃಕ್ಷ) (ಉಪ. ಸ) ॥೪೩॥

ಮೂ॥ ಹೂಡಿದರುಸಾರಿಗಳಲೆತ್ತವ । ನಾಡಿದರುಮನವೊಲಿದುಖಾಡಾ

ಖಾಡಿಯಲಿದುಗಭಾರಯಿತ್ತಿಗೆಯೆಂಬಹರುಷದಲಿ ॥ ಬೇಡಿದರೆಬೀ ಳುವದುದಾಯದ । ರೂಢಿಝಳುಪಿಸೆಹೊಳೆವದಾಳದ । ರೂಢಿಗ ಚ್ಚರಿಯಾಗೆನಳನೃಪಗೆಲಿದುಬೊಬ್ಬಿರಿದ ॥೪೪॥

ಟೀಕೆ:— ಸಾರಿಗಳ - ಕಾಯಿಗಳನ್ನು, ಹೂಡಿದರು-ಇಟ್ಟರು, ಮನವೊಲಿದು-ಮನಃಪೂರ್ವಕವಾಗಿ, ಲೆತ್ತವಂ-ಪಗಡೆಯನ್ನು, ಆಡಿದ ರು, ಖಾಡಾಖಾಡಿಯಲಿ-ಬಹುಪಂಥದಿಂದ, ದುಗ, ಭಾರ, ಇತ್ತಿಗೆ, ಎಂ ಬ-ಎರಡು, ಹನ್ನೆರಡು, ಆರು ಎಂದು ಕೋರುತ್ತಾ, ಹರುಷದಲಿ-ಸಂ ತೋಷದಿಂದ, ಬೇಡಿದರೆ-ಕುರಿತರೆ, ಬೀಳುವುದು-ಬೀಳುತ್ತಾಬಂತು ದಾಯದ-ಗರದ, ರೂಢಿ-ಕ್ರಮವು, ಝಳಪಿಸೆ-ಹೆಚ್ಚಲು, ಹೊಳೆವ- ಪ್ರಕಾಶಿಸುತ್ತಿರುವ, ದಾಳದ- (ನಳನುಹಾಕುವ) ಪಾಚಿಕೆಯ, ರೂಢಿ ಗೆ-ಅನುಭವಕ್ಕೆ, (೧) ಅಚ್ಚರಿಯಾಗೆ- (ಪುಷ್ಕರನಿಗೆ) ಆಶ್ಚರ್ಯವಾಗ ಲು (೨) ನಳನೃಪ-ನಳರಾಜನು, ಗೆಲಿದು-ಗೆದ್ದು, ಬೊಬ್ಬಿರಿದ-ಆರ್ಭ ಟಿಸಿದನು ॥೪೪॥

ತಾತ್ಪರ್ಯ:— ಆಟವನ್ನು ಹೂಡಿ ಕುಳಿತುಕೊಂಡು ಬಹಳ ಪೌ ರುಷದಿಂದಾಡುತ್ತಾ ಬಂದರು, ದುಗ, ಭಾರ, ಇತ್ತಿಗ, ಮೊದಲಾದ ಯಾವದಾಯವನ್ನಪೇಕ್ಷಿಸಿದರೂ ನಳನಿಗೆ ಬೀಳುತ್ತಾ ಬಂತು, ನಳನ ಕೈ ಚಳಕವನ್ನು ನೋಡಿ ಎಲ್ಲರೂ ವಿಸ್ಮಿತರಾದರು. ಮೊದಲಿನಂತಲ್ಲದೆ ನಳನಿಗೆ ಬೇಕಾದ ದಾಯವು ಬೀಳುತ್ತಿರುವುದನ್ನು ಕಂಡು ಪುಷ್ಕರನು

ಖಿನ್ನನಾದನು. ಆಟದಲ್ಲಿ ಕೊನೆಗೆ ನಳನೇ ಜಯಶೀಲನಾಗಿ ಬೊಬ್ಬಿರಿದನು ॥೪೪॥

ಟಿಪ್ಪಣಿ:— (೧) (ತ್ಸ) ಆಶ್ಚರ್ಯ (೨) ನಳನೆಂಬನೃಪ-ನಳನೃಪ (ಸಂ. ಪೂರ್ವ. ಕ) ॥೪೪॥

ಮೂ॥ ಖಿನ್ನನಾದನುಪುಷ್ಕರನುಹ | ರ್ಷೋನ್ನತಿಯು ಬೀಳ್ಕೊಡಲುಮಣಸಂ | ಪನ್ನೇರಿದರತ್ನಸಿಂಹಾಸನವನಳನೃಪತಿ ॥ ಪನ್ನಗಾರಿಧ್ವಜನಕೃಪಾನಿನ | ಗಿನ್ನುಸಿದ್ಧಿಸಲೆಂದುಮುನಿಜನ | ರುನ್ನತವಿಕೊಂಡಾಡಿಹರಸಿದರಲ್ಲಿಧರಣಿಪನ ॥೪೫॥

ಟೀಕೆ:— ಪುಷ್ಕರನು, ಖಿನ್ನನಾದನು-ವ್ಯಥೆಯನ್ನು ಹೊಂದಿದನು, (೧) ಹರ್ಷೋನ್ನತಿಯು-ಸಂತೋಷಾತಿಶಯವನ್ನು, ಬಿಳ್ಕೊಡಲು ಬಿಟ್ಟಿರಲು (೨) ಗುಣಸಂಪನ್ನಂ-ಸದ್ಗುಣವುಳ್ಳ, ನಳನೃಪತಿ-ನಳರಾಜನು, ರತ್ನಸಿಂಹಾಸನವ-ನವರತ್ನ ಖಚಿತವಾದ ದಿವ್ಯ ಸಿಂಹಾಸನವನ್ನು ಏರಿದನು-ಹತ್ತಿದನು, ಮುನಿಜನರ್ - ಋಷಿಗಳು, ನಿನಗೆ, ಇನ್ನು-ಮುಂದೆ, ಪನ್ನಗಾರಿಧ್ವಜನ-ವಿಷ್ಣುವಿನ, ಕೃಪೆ-ದಯೆಯು, ಸಿದ್ಧಿಸಲಿ ಉಂಟಾಗಲಿ, ಎಂದು-ಎಂಬದಾಗಿ, ಧರಣಿಪನ-ನಳನನ್ನು, ಕೊಂಡಾಡಿ-ಹೊಗಳಿ, ಅಲ್ಲಿ-ಆಸಭೆಯಲ್ಲಿ, ಹರಸಿದರು-ಆಶೀರ್ವಾದಮಾಡಿದರು ॥೪೫॥

ತಾತ್ಪರ್ಯ:— ಪುಷ್ಕರನು ಸೋತು ಖಿನ್ನನಾದನು, ನಳನು ಸಂಭ್ರಮದೊಡನೆ ಸಿಂಹಾಸನವನ್ನೇರಿದನು. ಇದನ್ನು ಕಂಡು ಪುಷ್ಕರನು ಮನೋಹರ್ಷವನ್ನುಳಿದು ದೈನ್ಯದಿಂದ ಕಳೆಗುಂದಿದನು, ಇನ್ನು ದೈವ ಕಟಾಕ್ಷಕ್ಕೆ ನೀನು ಪಾತ್ರನಾಗಿ ಚೆನ್ನಾಗಿಬಾಳು, ಎಂದು ಆಸಭೆಯಲ್ಲಿದ್ದ ಮುನಿಜನಗಳೆಲ್ಲರೂ ನಳನಿಗೆ ಆಶೀರ್ವಾದಮಾಡಿ, ಅವನ ಸತ್ಯಸಂಧತೆಯನ್ನೂ, ಪರಾಕ್ರಮವನ್ನೂ ಹೊಗಳಿದರು ॥೪೫॥

ಟಿಪ್ಪಣಿ:— (೧) ಹರ್ಷ+ಉನ್ನತಿ-ಹರ್ಷೋನ್ನತಿ (ಗುಣ) ಉತ್+ನತಿ-ಉನ್ನತಿ (ಸಂ. ಅನು. ಸಂ) ಹರ್ಷದ ಉನ್ನತಿ-ಹರ್ಷೋನ್ನತಿ (ಷ. ತ)(೨) ಗುಣದಿಂದಸಂಪನ್ನಂ-ಗುಣಸಂಪನ್ನಂ(ತೃ.ತ)"೪೫

ಮೂ॥ ದೇವದುಂದುಭಿಮೊಳಗಿದವುದಿವಿ | ಜಾವಳಿಗಳಭ್ರದಲಿಸಂಧಿಸಿ | ಹೂವಿನಮಳೆಗರೆದರಾಗನೃಪಾಲನಂಗದಲಿ ॥ ಕೋವಿದರು ಸುಜನಾವನೀಶರು | ಸೇರಿರಲುಧರೆನಲಿಯೆನೃಪನಾ | ಜೀವಲೋಚನನಂತೆಸಿಂಹಾಸನದಿರಂಜಿಸಿದ ॥೪೬॥

ಟೀಕೆ:— ದೇವದುಂದುಭಿ - ದೇವತೆಗಳ ಭೇರಿಯು, ಮೊಳಗಿದವು-ಶಬ್ದಮಾಡಿದವು, (೧) ದಿವಿಜಾವಳಿಗಳ್-ದೇವತೆಗಳಗುಂಪು, ಅಭ್ರದಲಿ-ಆಕಾಶದಲ್ಲಿ, ನೃಪಾಲನ-ದೊರೆಯ, ಅಂಗದಲಿ-ದೇಹದಮೇಲೆ ಸಂಧಿಸಿ-ಸೇರಿ, (ಬೀಳುವಂತೆ) (೨) ಹೂವಿನ ಮಳೆಗರೆದರ್-ಪುಷ್ಪವೃಷ್ಟಿಮಾಡಿದರು, ಆಗ, ಕೋವಿದರು-ವಿದ್ವಾಂಸರು, ಸುಜನಾವನೀಶರು-ಸತ್ಪುರುಷರೂ ಮತ್ತು ರಾಜರು, ಸೇರಿರಲು-ಕೂಡಿರಲು, ಧರೆ-ಭೂಮಿಯು, ನಲಿಯೆ-ಸಂತೋಷಪಡುತ್ತಿರಲು, ನೃಪ-ನಳನು, ರಾಜೀವಲೋಚನನಂತೆ-ಮಹಾ ವಿಷ್ಣುವಿನಹಾಗೆ, ಸಿಂಹಾಸನದಿ-ಸಿಂಹಾಸನದಮೇಲೆ, ರಂಜಿಸಿದ-ಹೊಳೆಯುತ್ತಿದ್ದನು ॥೪೬॥

ತಾತ್ಪರ್ಯ:— ನಳನಿಗೆ ಪುನಃ ರಾಜ್ಯಪ್ರಾಪ್ತಿಯಾದದ್ದರಿಂದುಂಟಾದ ಸಂತೋಷವನ್ನು ಸೂಚಿಸುವುದಕ್ಕಾಗಿ ದೇವತೆಗಳೆಲ್ಲರೂ ಸ್ವರ್ಗಲೋಕದಲ್ಲಿ ಭೇರಿಗಳನ್ನು ಬಾರಿಸಿದರು. ಸಿದ್ಧ, ಸಾಧ್ಯ, ಗರುಡ, ಗಂಧರ್ವ, ಕಿಂನರ, ಕಿಂಪುರುಷ, ಮೊದಲಾದ ದೇವಯೋನಿ ವಿಶೇಷಗಳೆಲ್ಲರೂ ಆಕಾಶದಲ್ಲಿ ನಿಂತು ನಳನಮೇಲೆ ಹೂಮಳೆಯನ್ನು ಸುರಿದರು, ಸಕಲಜನರೂ ಹರ್ಷಗೊಂಡರು, ನಳನು ಶ್ರೀ ಮಹಾ ವಿಷ್ಣುವಿನಂತೆ ಸಿಂಹಾಸನದಲ್ಲಿ ಪ್ರಕಾಶಿಸುತ್ತಿದ್ದನು ॥೪೬॥

ಟಿಪ್ಪಣಿ:— (೧) ದಿವಿ-ಸ್ವರ್ಗದಲಿ, ಜ-ಹುಟ್ಟಿದವರು (ದೇವತೆಗಳು) (ಅವ) (ಅಲುಕ್ಸಮಾಸ) ದಿವಿಜ+ಆವಳಿ-ದಿವಿಜಾವಳಿ (ಸ. ದೀ ಸಂ) (ಷ. ತ) (೨) ಮಳೆಯಂ ಕರೆದರ್-ಮಳೆಗರೆದರ್ (ಕ್ರಿ. ಸ) ಗಕಾರಾದೇಶ. ॥೪೬॥

ಮೂ॥ ಬಂದುಕಂಡರುಪುರಜನರುನಲ | ವಿಂದಕಾಣಿಕೆಗೊಟ್ಟುಸು
ರವರ|ಬೃಂದನಲಿಯಲುಮಂತ್ರಿಬಾಂಧವರೆಲ್ಲಕೈಮುಗಿದು ॥ ವಂದಿ
ಸುತಕುಳ್ಳಿರಲುಸತಿಯರು | ತಂದರಾರತಿಗಳನುನೃಪಗರ | ನಿಂ
ದಮುಖಿಯರುಹರುಷದಿಂದೆತ್ತಿದರುಮನವೊಲಿದು ॥೪೭॥

ಟೀಕೆ:— ಪುರಜನರು-ಪೌರರು, ನಲವಿಂದ-ಸಂತೋಷದಿಂದ ಕಾಣಿಕೆಗೊಟ್ಟು-ಕಾಣಿಕೆಗಳನ್ನೊಪ್ಪಿಸಿ, ಬಂದು, ಕಂಡರು-ನೋಡಿದರು, ಸುರವರಬೃಂದ-ದೇವತಾ ಶ್ರೇಷ್ಠರ ಸಮೂಹವು, ನಲಿಯಲು-ಸಂತೋಷಿಸಲು, ಮಂತ್ರಿಬಾಂಧವರೆಲ್ಲ - ಮಂತ್ರಿಗಳೂ ಬಂಧುಗಳೂ ಸಹ, ಕೈ ಮುಗಿದು-ಕೈಜೋಡಿಸಿ, ವಂದಿಸುತ-ನಮಸ್ಕರಿಸುತ್ತ, ಕು

ಳ್ಳಿರಲು-ಕೂತುಕೊಂಡಿರಲು, ಸತಿಯರು-ಸ್ತ್ರೀಯರು, ಆರತಿಗಳನು ಆರತಿಗಳನ್ನು, ತಂದರು, ಅರವಿಂದಮುಖಿಯರು- ಕಮಲಮುಖಿಯರು, (೨) ಮನವೊಲಿದು-ಪ್ರೀತಿಪೂರ್ವಕವಾಗಿ, ಹರ್ಷದಿಂಡ-ಸಂತೋಷ ದಿಂದ, ಎತ್ತಿದರು-ಬೆಳಗಿದರು ||೪೭||

ತಾತ್ಪರ್ಯ:— ಪಟ್ಟಣದ ನಿವಾಸಿಗಳೆಲ್ಲರೂ ರಾಜಭಕ್ತಿ ಪ್ರದ ರ್ಶನಾರ್ಥವಾಗಿಕಾಣಿಕೆಗಳನ್ನು ತಂದೊಪ್ಪಿಸಿ ದರ್ಶನವನ್ನು ತೆಗದು ಕೊಂಡರು, ದೇವತೆಗಳೆಲ್ಲರೂ ತೃಪ್ತರಾದರು, ಮಂತ್ರಿಗಳೂ, ಬಂಧು ಗಳೂ ಕೈಮುಗಿದು ನಮಸ್ಕಾರ ಮಾಡಿದರು, ಪುರಜನರೆಲ್ಲರೂಬಹು ಸ ಡಗರದಿಂದ ಇದ್ದರು, ಸ್ತ್ರೀಯರು ಹರ್ಷದಿಂದ ಆರತಿಗಳನ್ನು ತಂದು ಬೆಳಗಿದರು ||೪೭||

ಟಿಪ್ಪಣಿ:— (೧) ಕಾಣಿಕೆಯಂಕೊಟ್ಟು-ಕಾಣಿಕೆಗೊಟ್ಟು (ಕ್ರಿ. ಸ) (೨) ಮನದಿಂಒಲಿದು-ಮನವೊಲಿದು (ಕ್ರಿ. ಸ) ||೪೭||

ಮೂ|| ನಲವುಹಿಂಗಿದಪುಷ್ಕರನಮನ | ವೊಲಿದುಮನ್ನಿಸಿಕರೆದು
ನಳನೃಪ ಕಲಿಪುರುಷನಿಂದಾದುದುಪಹತಿನಿನ್ನ ತಪ್ಪೇನು || ಹ
ಲವಹಂಬಲಿಸದಿರುನಿನ್ನಲಿ | ಛಲವಿನಿತುನಮಗಿಲ್ಲಮುನ್ನವೊ | ಲಿ
ಳೆಯುಪಾಲಿಸಿನಮ್ಮನೀನೋಲಗಿಸುಹೋಗೆಂದ ||೪೮||

ಟೀಕೆ:— ನಳನೃಪ-ನಳರಾಜನು, ನಲವು-ಉತ್ಸಾಹವು, ಹಿಂ ಗಿದ-ತಪ್ಪಿದ, ಪುಷ್ಕರನ-ಪುಷ್ಕರನನ್ನು, ಕರೆದು-ಬರಹೇಳಿ, ಮನವೊಲಿ ದು-ಪ್ರೀತಿಪೂರ್ವಕವಾಗಿ, ಮನ್ನಿಸಿ-ಮರ್ಯಾದೆಮಾಡಿ, ಕಲಿಪುರುಷನಿಂ ದ-ಕಲಿಯಿಂದ, ಉಪಹತಿ-ಕೇಡು,ಆದುದು-ಆಯಿತು,ನಿನ್ನ, ತಪ್ಪು-ದೋ ಷವು, ಏನು, ಹಲವ-ನಾನಾವಿಧವಾಗಿ, ಹಂಬಲಿದಸದಿರು-ಕಳವಳಿಸ ಬೇಡ, ನಮಗೆ-ನನಗೆ, ನಿನ್ನಲಿ-ನಿನ್ನೊಡನೆ, (೧) ಛಲಂ-ಹಠವು, ಇ ನಿತು-ಸ್ವಲ್ಪವೂ, ಇಲ್ಲ, ನೀಂ-ನೀನು, ಮುನ್ನವೋಲ್-ಮೊದಲಿನಂತೆ, ಇಳೆಯ-ಭೂಮಿಯನ್ನು, ಪಾಲಿಸಿ-ಆಳುತ್ತಾ, ನಮ್ಮ-ನಮ್ಮನ್ನು, (೨) ಓಲಗಿಸು-ಸೇವೆಮಾಡಿಕೊಂಡಿರು, ಹೋಗು, ಎಂದ-ಎಂದನು ||೪೮||

ತಾತ್ಪರ್ಯ:— ನಳನು ಚಿಂತಾಕ್ರಾಂತನಾ ಮನಗುಂದಿರುವ ಪುಷ್ಕರನನ್ನು ಕರೆದು, ಪ್ರೀತಿಯಿಂದ ಮನ್ನಿಸಿ, ಅಯ್ಯಾ ಪುಷ್ಕರನೇ ನನಗೆ ಕಲಿಪುರುಷನಿಂದ ದುರವಸ್ಥೆಯು ಪ್ರಾಪ್ತವಾಯಿತು, ನಿನ್ನ ತ ಪ್ಪೇನು ? ಮನಸ್ಸಿನಲಿ ಅನ್ಯಥಾ ಚಿಂತಿಸಬೇಡ, ನಿನ್ನಮೇಲೆ ನನಗೆ

ಸ್ವಲ್ಪವೂ ಕೋಪವಿಲ್ಲ. ನೀನು ಮೊದಲಿನಂತೆಯೇ ರಾಜ್ಯವಾಳುತ್ತಾ ನನಗೆ ಅಧೀನನಾಗಿರು ಹೋಗು, ಎಂದು ಸಮಾಧಾನಗೊಳಿಸಿದನು ॥೪೮

ಟಿಪ್ಪಣಿ:— (೧) (ದ್ಭ) ಚಲ (೨) ಓಲಗ, ಎಂಬ ಕನ್ನಡ ನಾಮವಾಚಕದಮೇಲೆ ,ಇಸು, ಪ್ರತ್ಯಯವು ಸೇರಿ ,ಓಲಗಿಸು, ಎಂಬ ಹೊಸಧಾತುವಾಗಿದೆ, ॥೪೮॥

ಮೂ॥ ಎನಲುಲಜ್ಜಿತನಾಗಿಪುಷ್ಕರ । ವಿನಯದಲಿತಾನೆರಗಿನಿಮ್ಮಡಿ ।
ವನಜದೆಡೆಗಪರಾಧಿಯಾದೆನಗಾವಗತಿಯಹುದೊ ॥ ಜನಪಸಲಹು
ಕೃತಘ್ನನನುಸ । ಜ್ಜನಶಿರೋಮಣಿನೀನು ಗುಣಹೀ । ನನನು
ಕೃಪೆಯಲಿರಕ್ಷಿಸೆಂದೆರಗಿದನುಪದಯುಗಕೆ ॥೪೯॥

ಟೀಕೆ:— ಎನಲು-ಎಂಬದಾಗಿಹೇಳಲು, ಪುಷ್ಕರ-ಪುಷ್ಕರನು, ಲಜ್ಜಿತನಾಗಿ-ನಾಚಿ, ತಾಂ-ತಾನು, ವಿನಯುದಲಿ-ನಮ್ರತೆಯಿಂದ, ಎರಗಿ-ನಮಸ್ಕರಿಸಿ, ಜನಪ-ದೊರೆಯೆ, ನಿಮ್ಮಡಿವನಜದೆಡೆಗೆ-ನಿಮ್ಮ ಪಾದಕಮಲಕ್ಕೆ, ಅಪರಾಧಿಯಾದ-ತಪ್ಪುಮಾಡಿದ, ಎನಗೆ-ನನಗೆ, ಆವಗತಿ-ಎಂತಹದುರ್ದಶೆಯು, ಅಹುದೊ- ಆಗುವುದೋ, (೧) ಸಜ್ಜನಶಿರೋಮಣಿ - ಸತ್ಪುರುಷರಲ್ಲಿಶ್ರೇಷ್ಠನಾದ, ನೀನು, (೨) ಗುಣಹೀನನು-ಗುಣರಹಿತನಾದ ಕೃತಘ್ನನನು-ನೀಚನಾದ ನನ್ನನ್ನು, ರಕ್ಷಿಸು-ಕಾಪಾಡು, ಎಂದು-ಎಂದು (೩) ಪದಯುಗಕೆ-ಪಾದಗಳಿಗೆ, ಎರಗಿದನು - ಅಡ್ಡಬಿದ್ದನು ॥೪೯॥

ತಾತ್ಪರ್ಯ:— ಆ ಮಾತನ್ನು ಕೇಳಿದ ಕೂಡಲೆ ಪುಷ್ಕರನು ನಾಚಿಕೆಯಿಂದ ತಲೆಯನ್ನು ಬಗ್ಗಿಸಿ ನಳನನ್ನು ಕುರಿತು, ನಿಮ್ಮ ಪಾದಸನ್ನಿಧಿಗೆ ದ್ರೋಹವನ್ನೆಣಿಸಿದ ದುರಾತ್ಮನಾದ ನನಗೆ ಯಾವದುರ್ಗತಿ ಬರುವುದೋ ಕಾಣೆನು, ಸಜ್ಜನಶಿರೋಮಣಿಯಾದನೀನು ನನ್ನ ಅಪರಾಧವನ್ನು ಮನ್ನಿಸಿ ಕಾಪಾಡಬೇಕು, ಎಂದು ನಮಸ್ಕರಿಸಿ ಬೇಡಿಕೊಂಡನು ॥೪೯॥

ಟಿಪ್ಪಣಿ:— (೧)ಸತ್+ಜನ-ಸಜ್ಜನ (ಶ್ಚುತ್ವ) (ವಿ. ಪೂರ್ವ. ಕ) ಸಜ್ಜನರ ಶಿರೋಮಣಿ-ಸಜ್ಜನಶಿರೋಮಣಿ (ಷ. ತ) (೨) ಗುಣದಿಂ ಹೀನನು-ಗುಣಹೀನನು (ತೃ. ತ) ೪೯॥

ಮೂ॥ ತನುವನ್ನೆಗೆಡೆದವನನೆಬ್ಬಿಸಿ । ಜನಪನೆಂದನುಪೂರ್ವಫಲ
ಸಂ । ಜನಿಸಿತಿದಕಿನ್ನಾರುವಮಾತುವ್ರ್ರನೇನುಯೆನುತವನ ॥ ವಿನಯ

ವಚನಕೆಮೆಚ್ಚಿ ಕೊಟ್ಟನು । ಕನಕಮಣಿಭೂಷಣಗಳನುಕಾಂ ।
ಚನವರೂಥವನಿತ್ತುಮನ್ನಿಸಿಕಳುಹಿದನುಮನೆಗೆ ॥೫೦॥

ಟೀಕೆ:— ಜನಪಂ-ದೊರೆಯು, ತನುವ-ದೇಹವನ್ನು, ಸೈಗೆಡೆದ-ಉದ್ದವಾಗಿ ಕೆಡವಿರುವ, ಅವನಂ-ಆಪುಷ್ಕರನನ್ನು, ಎಬ್ಬಿಸಿ-ಮೇಲಕ್ಕೆಬ್ಬಿಸಿ, ಎಂದನು-ಹೇಳಿದನು, ಪೂರ್ವಫಲ-ಪ್ರಾರಬ್ಧವು, ಸಂಜನಿಸಿತು-ಈರೀತಿಯಾಗಿ ಪರಿಣಮಿಸಿತು, ಇದಕೆ-ಇದಕ್ಕೆ, ಇನ್ನು, ಆರು ಯಾರುತಾನೆ, ಮಾಡುವವೇನು-ಮಾಡತಕ್ಕದ್ದೇನು? ಎನುತ-ಎಂಬದಾಗಿಹೇಳಿ, ಅವನ-ಆಪುಷ್ಕರನ, (೧) ವಿನಯ ವಚನಕೆ-ವಿಧೇಯವಾದ ಮಾತುಗಳಿಗೆ, ಮೆಚ್ಚಿ, ಒಪ್ಪಿ (೨) ಕನಕಮಣಿಭೂಷಣಗಳನು-ರತ್ನಖಚಿತವಾದ ಸುವರ್ಣಾಭರಣಗಳನ್ನು, ಕೊಟ್ಟನು, (೩) ಕಾಂಚನವರೂಥವಂ-ಸುವರ್ಣನಿರ್ಮಿತವಾದ ತೇರನ್ನು, ಇತ್ತು-ಕೊಟ್ಟು, ಮನ್ನಿಸಿ-ಆದರಿಸಿ, ಮನೆಗೆ, ಕಳುಹಿದನು-ಕಳುಹಿಸಿದನು ॥೫೦॥

ತಾತ್ಪರ್ಯ:— ಅಡ್ಡಬಿದ್ದಿರುವ ಪುಷ್ಕರನನ್ನು ಎಬ್ಬಿಸಿ-ಅಯ್ಯಾ ನನ್ನ ಪ್ರಾಚೀನಕರ್ಮವು ಈ ರೀತಿಯಾಗಿದ್ದರೆ ಅದಕ್ಕೆ ನೀನು ಮಾಡುವದೇನು ? ಎಂದು ಸಮಾಧಾನಪಡಿಸಿ. ಅವನ ಪ್ರಾರ್ಥನಾ ವಚನಗಳಿಗೆ ಸಂತುಷ್ಟನಾಗಿ, ರತ್ನಾಭರಣಗಳನ್ನು ಬಹುಮಾನವಾಗಿ ಕೊಟ್ಟು ಸ್ವರ್ಣ ರಥದಲ್ಲಿ ಕುಳ್ಳಿರಿಸಿಕಳುಹಿದನು ॥೫೦॥

ಟಿಪ್ಪಣಿ:— (೧) ವಿನಯದವಚನ-ವಿನಯವಚನ (ಷ. ತ) (೨) ಮಣಿಯಭೂಷಣ-ಮಣಿಭೂಷಣ (ಷ. ತ) ಕನಕದ ಮಣಿಭೂಷಣ (ಷ. ತ) ॥೫೦॥

ಮೂ॥ ಕರಸಿದನುಬಾಂಧವರಮಂತ್ರೀಶ್ವರರವಿದ್ವಾಂಸರನೃಪಾಲರ।
ಕರಣಿಕರನಾಪ್ತರನುಹಿರಿಯರವೀರಪಟುಭಟರ॥ ವರಸಚಿವಸಾಮಂ
ತಮಲ್ಲರ । ತರುಣಿಯರನಟಗಾಯಕರಸುಜ । ನರನುಮನ್ನಿಸಿ
ಕೊಟ್ಟನುಡುಗೊರೆಗಳಮಹೀಪಾಲ ॥೫೧॥

ಟೀ: (೧) ಮಹೀಪಾಲ-ದೊರೆಯು, ಬಾಂಧವರ-ನಂಟರನ್ನು, ಮಂತ್ರೀಶ್ವರರ-ಮಂತ್ರಿಶ್ರೇಷ್ಠರನ್ನೂ, ವಿದ್ವಾಂಸರ- ಪಂಡಿತರನ್ನೂ, ನೃಪಾಲರ-ರಾಜರನ್ನೂ, ಕರಣಿಕರಂ-ಗುಮಾಸ್ತರನ್ನೂ, ಆಪ್ತರನು-ಇಷ್ಟಜನರನ್ನೂ, ಹಿರಿಯರ-ದೊಡ್ಡವರನ್ನೂ, ವೀರಪಟುಭಟರ-ಮಹಾ ಶೂರರಾದ ಭಟರನ್ನೂ, ವರಸಚಿವಸಾಮಂತಮಲ್ಲರ-ಸಚಿವರನ್ನೂ

ಸಾಮಂತರಾಜರನೂ, ಜಟ್ಟಿಗಳನ್ನೂ, ತರುಣಿಯರ- ಹೆಂಗಸರನ್ನೂ, ನಟಗಾಯಕರ-ನೃತ್ತ ಗೀತದವರನ್ನೂ (೨) ಸುಜನರನು-ಇತರಸಜ್ಜನರನ್ನೂ, ಕರಸಿದನು-ಬರಮಾಡಿದನು, ಮನ್ನಿಸಿ ಮರ್ಯಾದೆಮಾಡಿ, ಉಡುಗೊರೆಗಳ-ವಸ್ತ್ರಾಭರಣಗಳನ್ನು, ಕೊಟ್ಟಂ- ಕೊಟ್ಟನು ||೫೧||

ತಾತ್ಪರ್ಯ:— ನಳನು ತನಗೆ ಪುನಃ ರಾಜ್ಯಪ್ರಾಪ್ತಿಯಾದುದರಿಂದ ಸಂತೋಷಸೂಚನಾರ್ಥವಾಗಿ, ಮಂತ್ರಿಗಳು, ವಿದ್ವಾಂಸರು, ಇಷ್ಟಬಂಧುಗಳು, ಶೂರರಾದಭಟರು, ಸಾಮಂತರು, ನಟವಿಟಗಾಯಕರು ಗುಮಾಸ್ತರುಕುಲಸ್ತ್ರೀಯರು, ಉಳಿದ ಪುರದ ಮಹಾಜನರು ಇವರೆಲ್ಲರನ್ನೂ ಕರೆಯಿಸಿ ಬಹು ಮರ್ಯಾದೆಮಾಡಿ ಎಲ್ಲರಿಗೂ ಸಂತೋಷಸೂಚಕವಾಗಿ ಉಡುಗೊರೆಗಳನ್ನು ಕೊಟ್ಟನು ||೫೧||

ಟಿಪ್ಪಣಿ:— (೧) ಮಹಿಯನ್ನು ಪಾಲಿಸುವವನು- ಮಹೀಪಾಲ (ಉಪ. ಸ) (೨) ೩ಪ್ರಿ. ಕರ್ಮ. ಪ. ಜನ ಶಬ್ದಕ್ಕೆ ,ಸು, ಎಂಬುದು ಸೇರಿರುವುದರಿಂದ ಪುಲ್ಲಿಂಗವಾಗಿದೆ ||೫೧||

ಮೂ|| ಕನಕರತ್ನಪ್ರಭೆಯಸಿಂಹಾ || ಸನದೊಳೊಪ್ಪಿದನುಭಯಪಾ
ಶ್ವದಿ| ವನಿತೆಯರುಚುಮ್ಮಿದರುಸಿತಚಾಮರವನಾನೃಪಗೆ||ಜನಪ
ತಿಗಳಿಕ್ಕೆಲದೆಮಂತ್ರದ | ಜನಪುರೋಹಿತಮಲ್ಲಗಾಯಕ | ವನಿತೆ
ಯರಗಡಣದಲಿಮೆರೆದುದುದುನೃಪತಿಯಾಸ್ಥಾನ ||೫೨||

ಟೀಕೆ:— ಕನಕರತ್ನಪ್ರಭೆಯ-ಸವರ್ಣರತ್ನಕಾಂತಿಗಳಿಂದ ಮೆರೆವ, ಸಿಂಸಾಸನದೊಳ್-ಸಿಂಹಾಸನದಲ್ಲಿ, ಒಪ್ಪಿದಂ-ಪ್ರಕಾಶಿಸಿದನು, ವನಿತೆಯರು-ಹೆಂಗಸರು, (೧) ಉಭಯಪಾರ್ಶ್ವದಿ-ಎರಡುಪಕ್ಕಗಳಲ್ಲಿಯೂ, ಆನೃಪಗೆ-ನಳನಿಗೆ, ಸಿತಚಾಮರವಂ- ಬಿಳಿಯಚಾಮರವನ್ನು ಚುಮ್ಮಿದರು-ಹಾಕಿದರು, (೨) ಇಕ್ಕೆಲದೆ-ಎರಡು ಪಾರ್ಶ್ವಗಳಲ್ಲಿಯೂ, ಜನಪತಿಗಳ್-ದೊರೆಗಳು, ಮಂತ್ರದ-ಆಲೋಚನೆಯನ್ನು ಹೇಳುವ, ಜನ-ನಜವ್ರೂ, ಪುರೋಹಿತರೂ, ಮಲ್ಲ-ಜಟ್ಟಿಗಳೂ, ನಾಯಕ-ಸಂಗೀತಗಾರರೂ, ವನಿತೆಯರ-ಸ್ತ್ರೀಯರು ಮೊದಲಾದವರ, ಗಡಣದಲಿ ಗುಂಪಿನಿಂದ, ನೃಪತಿಯ-ದೊರೆಯ, ಆಸ್ಥಾನ-ಸಭೆಯು, ಮೆರೆದುದು ಶೋಭಿಸುತ್ತಿತ್ತು ||೫೨||

ತಾತ್ಪರ್ಯ:— ನಳನ ರತ್ನ ಖಚಿತವಾದ ಸಿಂಹಾಸನದಲ್ಲಿ ಕುಳಿತಿರಲು, ಎರಡುಪಾರ್ಶ್ವಗಳಲ್ಲಿಯೂ ಚಾಮರ ಗ್ರಾಹಿಣಿಯರು ನಿಂತು ಸರ

ದಿಯುಂತೆ ಚಾಮರಗಳನ್ನು ಹಾಕುತ್ತಿದ್ದರು, ಎಡಬಲಗಳಲ್ಲಿ ಸಾಲಾಗಿ ದೊರೆಗಳೂ, ಮಂತ್ರಿಗಳೂ, ಪುರೋಹಿತರೂ, ಜಟ್ಟಿಗಳೂ, ಸಂಗೀತಗಾರರೂ ನಾರೀಮಣಿಗಳೂ, ಪುರಜನವೂ ಉಳಿದ ಸಭಾಸದರೂ ಬಹಳ ಸಂಭ್ರಮದೊಡನೆ ಕುಳಿತಿರಲು ರಾಜಸಭೆಯು ಬಹು ರಮಣೀಯವಾಗಿತ್ತು ||೫೦||

ಟಿಪ್ಪಣಿ — (೧) ಉಭಯವಾದ ಪಾರ್ಶ್ವ - ಉಭಯಪಾರ್ಶ್ವ (ವಿ. ಪೂರ್ವ. ಕ) (೨) ಎರಡು ಕೆಲ-ಇಕ್ಕೆಲ (ದ್ವಿಗು) ||೫೦||

ಮೂ|| ಚಿಂತೆಬಲಿದುವಿದರ್ಭದಲಿದಮ | ಯಂತಿಕೆಳದಿಯರೊಡನೆನು
ಡಿದಳು | ಪಂಥದಲಿಪುಷ್ಕರನಗೆಲುವನೊಸೋತನೋನೃಪತಿ ||
ಕಂತುಪಿತನಕೃಪಾವಲೋಕನ | ವೆಂತಿಹುದೊತನಗೆಂಬಸಮ
ಯುದ |ಲಂತರಿಸದೈತಂದರಲ್ಲಿಗೆನಳನಮಂತ್ರಿಗಳು ||೫೩||

ಟೀಕೆ:— ದಮಯಂತಿ-ದಮಯಂತಿಯು, ವಿದರ್ಭದಲಿ-ವಿದರ್ಭಪುರದಲ್ಲಿ, ಚಿಂತೆ-ಆಲೋಚನೆಯು, ಬಲಿದು-ಹೆಚ್ಚಾಗಿ, ಕೆಳದಿಯರೊಡನೆ-ಸಖಿಯರ ಸಂಗಡ, ನುಡಿದಳು-ಹೇಳಿದಳು, ನೃಪತಿ-ನಳನು, ಪಂಥದಲಿ-ಜೂಜಿನಲ್ಲಿ, ಪುಷ್ಕರನ-ಪುಷ್ಕರನನ್ನು, ಗೆಲುವನೊ-ಜಯಿಸುವನೋ, ಸೋತನೊ-ಅಥವಾ ಸೋತುಬಿಟ್ಟನೋ (೧) ಕಂತು ಪಿತನ-ವಿಷ್ಣುವಿನ, (೨) ಕೃಪಾವಲೋಕನವು-ದಯಾದೃಷ್ಟಿಯು, ತನಗೆ-ನನ್ನಮೇಲೆ, ಎಂತಿಹುದೋ-ಹೇಗಿದೆಯೋ,ಎಂಬಸಮಯದಲಿ-ಎನ್ನುವಷ್ಟರಲ್ಲಿ, ಅಲ್ಲಿಗೆ-ಆಕೆಯಬಳಿಗೆ, ನಳನ ಮಂತ್ರಿಗಳು-ನಳರಾಜನ ಸಚಿವರು, ಅಂತರಿಸದೆ-ಸಾವಕಾಶಮಾಡದೆ, ಐತಂದರ್-ಬಂದರು ||೫೩||

ತಾತ್ಪರ್ಯ:— ದಮಯಂತಿಯು ಚಿಂತಾಕ್ರಾಂತೆಯಾಗಿ ತನ್ನ ಸಖಿಯರೊಡನೆ, “ ನಳನು ಜೂಜಿನಲ್ಲಿ ಪುಷ್ಕರನನ್ನು ಜಯಿಸುವನೋ ಅಥವಾ ತಾನೇ ಸೋಲುವನೋ ! ದೇವರ ದಯವು ನನ್ನ ಮೇಲೆ ಇದೆಯೋ ಇಲ್ಲವೋ ಕಾಣೆನು ” ಎಂದು ಹೇಳುತ್ತಿರುವಷ್ಟರಲ್ಲಿಯೇ ಅಲ್ಲಿಗೆ ನಳನ ಮಂತ್ರಿಗಳು ಬಂದರು ||೫೩||

ಟಿಪ್ಪಣಿ:— (೧) ಕಂತು-ಮನ್ಮಥನ, ಪಿತ-ತಂದೆ (ವಿಷ್ಣು) (ಷ. ತ) (೨) ಕೃಪಾ +ಅವಲೋಕನ (ಸ. ದೀ. ಸಂ) ಕೃಪೆಯಿಂದ ಅವಲೋಕನ-ಕೃಪಾವಲೋಕನ (ತೃ-ತ) ||೫೩||

ಮೂ|| ತಾಯಿಬಿನ್ನಹವಿಂದುನಿಮ್ಮರಾ | ರಾಯನಟ್ಟಿದನಿಮ್ಮಬಳಿ

ಗನಿ । ರಾಯಸದಿಪುಷ್ಕರನಗೆಲಿದನುಸಕಲರಾಜ್ಯವನು ॥ ನ್ಯಾ
ಯದಲಿಕೈಕೊಂಡುನಿಮ್ಮನು । ಪ್ರೀಯದಿಂಬರಹೇಳಿದನುಕಮ ।
ಲಾಯುತಾಂಬಕಿಬಿಜಯಮಾಡೆಂದೆರಗಿದರುಪದಕೆ ॥೫೪॥

ಟೀಕೆ:— ತಾಯಿ - ಅಮ್ಮಾ, ಬಿನ್ನಹಂ - ವಿಜ್ಞಾಪನೆಯು, ಇಂದು-ಈಗ, ನಿಮ್ಮಯ-ನಿಮ್ಮ, ರಾಯಂ-ದೊರೆಯು, ನಿಮ್ಮ ಬಳಿಗೆ-ನಿಮ್ಮಸಮೀಪಕ್ಕೆ, ಅಟ್ಟಿದ-ಕಳುಹಿಸಿದನು, ನಿರಾಯಸದಿ-ಸುಲಭವಾಗಿ, ಪುಷ್ಕರನ-ಪುಷ್ಕರನನ್ನು, ಗೆಲಿದನು-ಗೆದ್ದನು (೧) ಸಕಲರಾಜ್ಯವನು-ಎಲ್ಲರಾಜ್ಯವನ್ನೂ, ನ್ಯಾಯದಲಿ-ನ್ಯಾಯವಾಗಿ, ಕೈಕೊಂಡು-ತೆಗೆದುಕೊಂಡು, ನಿಮ್ಮನು-ನಿಮ್ಮನ್ನು, ಪ್ರೀಯದಿಂ- ಪ್ರೇಮದಿಂದ, ಬರಹೇಳಿದನು, (೨) ಕಮಲಾಯುತಾಂಬಕಿ-ಕಮಲದಂತೆ ವಿಸ್ತಾರವಾದಕಣ್ಣುಳ್ಳವಳೇ ! ಬಿಜಯಮಾಡು, ಎಂದು-ಎಂಬದಾಗಿ, ಪದಕೆ-ಪಾದಕ್ಕೆ, ಎರಗಿದರು-ನಮಸ್ಕರಿಸಿದರು ॥೫೪॥

ತಾತ್ಪರ್ಯ:— ಅಮ್ಮಾ ! ನಳನು ಸ್ವಲ್ಪವೂ ಕಷ್ಟಪಡದೆ ಸುಲಭವಾಗಿ ಪುಷ್ಕರನನ್ನು ದ್ಯೂತದಲ್ಲಿ ಗೆದ್ದು - ರಾಜ್ಯವನ್ನೆಲ್ಲಾ ನ್ಯಾಯವಾಗಿ ಸ್ವಾಧೀನಮಾಡಿಕೊಂಡು, ಈ ವಿಷಯವನ್ನು ನಿಮಗೆ ತಿಳಿಸಿ ಕರೆದು ಕೊಂಡು ಬರಬೇಕೆಂದು ಪರಮ ಪ್ರೀತಿಯಿಂದ ನಿಮ್ಮ ಬಳಿಗೆ ನಮ್ಮನ್ನು ಕಳುಹಿಸಿರುವನು, ದಯಮಾಡಬೇಕು, ಎಂದು ವಿನಯದಿಂದ ನಮಸ್ಕರಿಸಿ ಪ್ರಾರ್ಥಿಸಿದರು ॥೫೪॥

ಟಿಪ್ಪಣಿ:— (೧) ಸಕಲವಾದ ರಾಜ್ಯ-ಸಕಲರಾಜ್ಯ (ವಿ. ಪೂರ್ವ. ಕ) (೨) ಆಯತವಾದ ಅಂಬಕ-ಆಯತಾಂಬಕ (ವಿ. ಪೂರ್ವ. ಕ) ಕಮಲದಂತೆ ಆಯತಾಂಬಕವುಳ್ಳವಳಾವಳೋ ಅವಳು- ಕಮಲಾಯುತಾಂಬಕಿ (ಬ. ವ್ರೀ) ॥೫೪॥

ಮೂ॥ ಕೇಳಿಹರುಷಿತೆಯಾದಳವರಿಗೆ । ಪಾಲಿಸಿದಳಾಭರಣವಸ್ತ್ರವ ।
ಲೋಲಲೋಚನೆಬಂದುತಂದೆಗೆನಮಿಸಿವಿನಯದಲಿ ॥ ನಾಳೆಪಯ
ಣವಮಾಡಿನಿಷಧನೃ । ಪಾಲನಲ್ಲಿಗೆತನ್ನ ಕಳುಹೆನೆ ।ಬಾಲಕಿಯನು
ಡಿಗೇಳಿತೆಗೆದಪ್ಪಿದನುಭೀಮನೃಪ ॥೫೫॥

ಟೀಕೆ:— (೧) ಲೋಲಲೋಚನೆ-ಚಂಚಲನೇತ್ರಯಾದ ದಮಯಂತಿಯು, ಕೇಳಿ- ಆಮಾತನ್ನು ಕೇಳಿ, ಹರ್ಷಿತೆಯಾದಳ್-ಸಂತೋಷವನ್ನು ಹೊಂದಿದಳು. ಅವರಿಗೆ-ಬಂದವರಿಗೆ, ಆಭರಣವಸ್ತ್ರವ-ಒಡ

ವೆವಸ್ತುಗಳನ್ನು, ಪಾಲಿಸಿದಳ್. ಕೊಟ್ಟಳು, ಬಂದು, ತಂದೆಗೆ, ನಮಿಸಿ-ನಮಸ್ಕರಿಸಿ, ವಿನಯದಲಿ-ವಿಧೇಯಳಾಗಿ, ತನ್ನ - ನನ್ನನ್ನು, ನಾಳೆ, ಪಯಣವಮಾಡಿ-ಪ್ರಯಾಣಮಾಡಿ, ನಿಷಧನೃಪಾಲನಲ್ಲಿಗೆ -ನಳನ ಬಳಿಗೆ, ಕಳುಹು-ಕಳುಹಿಸಿಕೊಡು, ಎನೆ-ಎನ್ನಲು, ಭೀಮನೃಪ-ಭೀಮರಾಜನು, ಬಾಲಕಿಯ-ಮಗಳ, (೨) ನುಡಿಗೇಳಿ-ಮಾತನ್ನುಕೇಳಿ, ತೆಗೆದಪ್ಪಿದನು-ಬಾಚಿತಬ್ಬಿಕೊಂಡನು ॥೫೫॥

ತಾತ್ಪರ್ಯ:— ಆ ಮಾತನ್ನು ಕೇಳಿದಕೂಡಲೆ ದಮಯಂತಿಯು ಪರಮಾನಂದ ಭರಿತಳಾಗಿ ಶುಭವಾರ್ತೆಯನ್ನು ಹೇಳಿದ್ದಕ್ಕಾಗಿ ಅವರಿಗೆ ಪಾರಿತೋಷಿಕಗಳನ್ನು ಕೊಟ್ಟು, ತಂದೆಯಬಳಿಗೆ ಬಂದು ಈ ವರ್ತಮಾನವನ್ನು ತಿಳಿಸಿ ಅವನ ಅಡಿಗೆ ನಮಸ್ಕರಿಸಿ, ನಮ್ರಳಾಗಿ-ನಾಳೆಯ ದಿನ ನನ್ನನ್ನು ಪ್ರಯಾಣಮಾಡಿಸಿನಳನ ಸಮೀಪಕ್ಕೆ ಕಳುಹಿಸಿ ಕೊಡೆಂದು ಹೇಳಿಕೊಂಡಳು ॥೫೫॥

ಟಿಪ್ಪಣಿ:— (೧) ಲೋಲ-ಚಂಚಲವಾದ, ನೇತ್ರ-ಕಣ್ಣುಳ್ಳವಳು (ಬ. ವ್ರೀ) (೨) ನುಡಿಯಂಕೇಳಿ-ನುಡಿಗೇಳಿ (ಕ್ರಿ-ಸ) ಕಕಾರಕ್ಕೆ ಗಕಾರಾದೇಶ ಬಂತು. ॥೫೫॥

ಮೂ॥ ತೆಗಸಿದನುಭಂಡಾರದಲಿಬಗೆ।ಬಗೆಯವಸ್ತುವನುಭಟರಿಗೆಝಗ । ಝಗಿಪಹೊನ್ನಾಯುಧವನವರತ್ನಗಳತೊಡಿಗೆಗಳ ॥ ಸುಗುಣೆಯರುಮೊದಲಾದಪರಿವಾ । ರಗಳಿಗಿತ್ತನುಪಯಣದಲಿತೇರು।ಗಳಶೃಂಗರಿಸಿದರುಬಿರುದಿನಸಿಂಧಗಳನೆಗಹಿ ॥೫೬॥

ಟೀಕೆ:— ಭಂಡಾರದಲಿ-ಕೋಶದಿಂದ (ಖಜಾನೆ) ಬಗೆ ಬಗೆಯ ನಾನಾ ವಿಧವಾದ, ವಸ್ತುವನು-ಪದಾರ್ಥಗಳನ್ನು, ತೆಗಸಿದನು, ಭಟರಿಗೆ-ಸೈನಿಕರಿಗೆ, ಝಗಝಗಿಪ - ಥಳಥಳಿಸುತ್ತಿರುವ, (೧) ಹೊನ್ನಾಯುಧವ-ಚಿನ್ನದ ಆಯುಧಗಳನ್ನೂ, ನವರತ್ನಗಳ - ನವರತ್ನ ಖಚಿತವಾದ (೨) ತೊಡಿಗೆಗಳ-ಆಭರಣಗಳನ್ನೂ, ಸುಗುಣೆಯರು - ಸದ್ಗುಣೆಯರು-ಸದ್ಗುಣವೃದ್ಧದಾದಿಯರೇ ಮೊದಲಾದ, ಪರಿವಾರಗಳಿಗೆ - ಪರಿಚಾರಕರಿಗೆ, ಇತ್ತನು-ಕೊಟ್ಟನು, ಬಿರುದಿನ-ಗೌರವಾರ್ಥವಾದ, ಸಿಂಧಗಳ-ಧ್ವಜಗಳನ್ನು, ನೆಗಹಿ-ಎತ್ತಿಕಟ್ಟಿ, ಪಯಣದಲಿ-ಪ್ರಯಾಣಕ್ಕಾಗಿ, ತೇರುಗಳ-ರಥಗಳನ್ನು, ಶೃಂಗರಿಸಿದರು- ಅಲಂಕಾರಮಾಡಿದರು ॥

ತಾತ್ಪರ್ಯ: — ಭೀಮರಾಜನು ಬಂಡಾರದಿಂದ ಬಗೆ ಬಗೆಯಾದ

ವಸ್ತ್ರಾಭರಣಾದ್ಯಮೌಲ್ಯವದಾರ್ಥಗಳನ್ನು ತೆಗೆಯಿಸಿ ಸೈನಿಕರಿಗೆ ಸುವರ್ಣಾಯುಧ ಭೂಷಣಗಳನ್ನೂ, ದಾದಿಯರೇ ಮೊದಲಾದವರಿಗೆ ಬೇಕಾದಾಭರಣಗಳನ್ನೂ, ಕೊಟ್ಟು, ರಥಕ್ಕೆ ಧ್ವಜಗಳನ್ನೆತ್ತಿ ಕಟ್ಟಿ ಪ್ರಯಾಣಕ್ಕಾಗಿ ರಥವನ್ನಲಂಕರಿಸಿದನು ‖೫೬‖

ಟಿಪ್ಪಣಿ:— (೧) ಹೊನ್ನಿನ ಆಯುಧ-ಹೊನ್ನಯುಧ (ಷ. ತ) ಹೊನ್+ಆಯುಧ, ಹ್ರಸ್ವಸ್ವರಾದಿಯಾಗಿ ಏಕಸ್ವರವುಳ್ಳ ವ್ಯಂಜನಾಂತವಾದ ಶಬ್ದಕ್ಕೆ ಸ್ವರವು ಪರವಾಗಿರುವುದರಿಂದ ಆವ್ಯಂಜನಕ್ಕೆ ದ್ವಿತ್ವಾದೇಶವು ಬಂತು, ಈ ದ್ವಿತ್ವವು,ನ, ಣ, ಲ, ಯ, ಳ, ತ, ಟ; ಈ ವ್ಯಂಜನಗಳಿಗೆಲ್ಲಕ್ಕೂ ಹೀಗೆಯೇ ಬರುವುದು, (೨) ತುಡು, ಎಂಬ ಧಾತುವಿಗೆ ಭಾವಾರ್ಥದಲ್ಲಿ ‹ಇಗೆ› ಎಂಬ ಪ್ರತ್ಯಯವು ಸೇರಿ ಧಾತ್ವಾದಿಸ್ವರಕ್ಕೆ ‹ಒ› ಕಾರಾದೇಶವು ಬಂದು ತೊಡಿಗೆ, ಎಂಬ ಕೃದ್ಭಾವನಾಮವಾಗಿದೆ ‖೫೬‖

ಮೂ॥ ಬಿಗುಹನೇರಿಸಿಹಯುಗಳನುರಂ । ಚೆಗಳಚುಮ್ಮಿದರಾನೆಯು
ಲಿಸ ।ತ್ತಿಗೆಗಳನುಪಲ್ಲೈಸಿದರುಮೇಲೆಸೆವಕಲುಷದಲಿ ॥ಸೊಗಸು
ದೋರುವಭಟರನೆರೆಕೈ ।ದುಗಳಹೊಳಹಿನನೃಪರಬಳಿಯುಲಿ ।ನೆಗ
ಹಿಬೀಸುವಚೌರಿಗಳುಸಂಭ್ರಮದೊಳೆಸದಿದವು ‖೫೭‖

ಟೀಕೆ:— ಹಯಗಳನು-ಕುದುರೆಗಳನ್ನು, ಬಿಗುಹಂ-ಹಗ್ಗಗಳನ್ನು, ಏರಿಸಿ-ಕಟ್ಟಿ, ಆನೆಯುಲಿ-ಆನೆಗಳಮೇಲೆ, ರಂಚೆಗಳ- ಜೂಲುಗಳನ್ನು, ಚುಮ್ಮಿದರ್-ಹಾಕಿದರು (೧) ಸತ್ತಿಗೆಗಳನು- ಛತ್ರಗಳನ್ನು, ಪಲ್ಲೈಸಿದರು-ಅಗಲಿಸಿ ಹಿಡಿದರು, ಮೇಲೆ-ಮೇಲ್ಭಾಗದಲ್ಲಿ, ಎಸೆವ-ಪ್ರಕಾಶಿಸುವ, ಕಲುಷದಲಿ-ಕತ್ತಲೆಯಲ್ಲಿ (೨) ಸೊಗಸುದೋರುವ-ಕಾಂತಿಯನ್ನು ಬೀರುವ, ಭಟರ-ದೂತರ, ನೆರೆ-ಹೆಚ್ಚಾದ, ಕೈದುಗಳ-ಆಯುಧಗಳ, ಹೊಳಹಿನ-ಪ್ರಕಾಶದ, ನೃಪರ-ದೊರೆಗಳ, ಬಳಿಯುಲಿ-ಸಮೀಪದಲ್ಲಿ, ನೆಗಹಿ-ಎತ್ತಿ, ಬೀಸುವ-ಹಾಕುತ್ತಿರುವ (೩) ಚೌರಿಗಳು-ಚಾಮರಗಳು, ಸಂಭ್ರಮದೊಳ್ - ವಿಜೃಂಭಣೆಯಿಂದ, ಎಸೆದುದು-ಪ್ರಕಾಶಿಸಿತು ‖೫೭‖

ತಾತ್ಪರ್ಯ:— ಕುದುರೆಗಳಿಗೆ ಕಡಿವಾಣಗಳನ್ನು ಹಾಕಿದರು, ಆನೆಗಳಿಗೆ ಜೂಲನ್ನು ಹೊದಿಸಿದರು, ಛತ್ರಗಳನ್ನು (ಕೊಡೆ) ಎತ್ತಿ ಹಿಡಿದರು, ಥಳಥಳಿಸುತ್ತಿರುವ ಆಯುಧಗಳ ಬೆಳಕಿನಿಂದ ಮೇಲಿನ ಕತ್ತಲೆ

ಯುತೊಲಗುವಂತೆ ಮಾಡುತ್ತಿದ್ದ ಭಟರ ಸಮೀಪದಲ್ಲಿರುವ ರಾಜರ ಉಭಯಪಾರ್ಶ್ವಗಳಲ್ಲಿಯೂ ಸೇವಕರು ನಿಂತು ಬಿಳಿಯ ಚಾಮರ ವನ್ನು ಹಾಕುತ್ತಿದ್ದರು ॥೫೭॥

ಟಿಪ್ಪಣಿ:— (೧) (ತ್ಭ) ಛತ್ರಿಕಾ, (೨) ಸೊಗಸಂತೋರುವ-ಸೊಗಸುದೋರುವ (ಕ್ರಿ. ಸ.) (೩) (ತ್ಸ) ಚಾಮರ ॥೫೭॥

ಮಾ॥ ಮಣಿರಥಂಗಳನಡುವೆಸುಳಿವಂ । ದಣದರಾಯರಮಧ್ಯದಲಿ
ಯುರ ।ವಣಿಪಮತ್ತಗಜಂಗಳಲಿಮಾವುತರಕಳಕಳದ ॥ ಕುಣಿವ
ತೇಜಿಯರಾವುತರಸಂ ।ದಣಿಗಳಲಿಚತುರಜಬಲವಿ।ಟ್ಟಣಿಸಿನಡೆದು
ದುಸಾಲುಸತ್ತಿಗೆಗಳವಿಡಾಯಿಯಲಿ ॥೫೮॥

ಟೀಕೆ:— ಮಣಿರಥಂಗಳ-ರತ್ನ ಖಚಿತವಾದ ತೇರುಗಳ, ನಡುವೆ-ಮಧ್ಯದಲ್ಲಿ, ಸುಳಿವ-ನಡೆಯುತ್ತಿರುವ, ಅಂದಣದ - ಪಲ್ಲಕ್ಕಿಯಲ್ಲಿರುವ, ರಾಯರ-ದೊರೆಗಳಗುಂಪಿನ, ಮಧ್ಯದಲ್ಲಿ-ಮಧ್ಯಭಾಗದಲ್ಲಿ, ಉಗವಣಿಪ-ಗರ್ಜಿಸುತ್ತಿರುವ, (೧)ಮತ್ತಗಜಂಗಳಲಿ-ಮದಿಸಿದ ಆನೆಗಳಿಂದಲೂ, ಮಾವುತರ-ಆನೆಯಕಾವಲುಗಾರರ, ಕಳಕಳದ-ಕೂಗಿನ, ಕುಣಿವ- ನರ್ತಿಸುತ್ತಿರುವ, ತೇಜಿಯ-ಕುದುರೆಗಳ, ರಾವುತರ - ರಕ್ಷಕರ, ಸಂದಣಿಗಳಲಿ-ಗುಂಪಿನಿಂದಲೂ, ಸಾಲುಸತ್ತಿಗೆಗಳ- ಸಾಲಾಗಿಹಿಡಿದಿರುವ ಛತ್ರಗಳ, ವಿಡಾಯಿಯಲಿ-ಸೊಗಸಿನಿಂದಲೂ, (೨) ಚತುರಂಗಬಲವು ನಾಲ್ಕು ಬಗೆಯ ಸೈನ್ಯವು, ಇಟ್ಟಣಿಸಿ - ಸಾಲಾಗಿ, ನಡೆದುದು - ಹೊರಟಿತು ॥೫೮॥

ತಾತ್ಪರ್ಯ:— ರತ್ನಖಚಿತವಾದ ರಥಗಳಲ್ಲಿಯೂ ಪಲ್ಲಕ್ಕಿಗಳಲ್ಲಿಯೂ ಕುಳಿತು ರಾಜರು ಹೊರಡಲು, ಬೃಂಹಿತಧ್ವನಿಗಳಿಂದ ಮದಿಸಿದ ಆನೆಗಳೂ, ಹೇಷಿತಗಳಿಂದ ಕುಣಿವ ಕುದುರೆಗಳೂ ಹೊರಡಲು, ಅವುಗಳರಕ್ಷಕರು ಕೂಗಿಕೊಳ್ಳುತ್ತಿರಲು, ಸಾಲಾಗಿರುವ ಛತ್ರಗಳ ಗುಂಪಿನೊಡನೆ ಚತುರಂಗ ಸೈನ್ಯವೂ ಹೊರಟಿತು ॥೫೮॥

ಟಿಪ್ಪಣಿ:— (೧) ಮತ್ತವಾದ ಗಜಂಗಳ್-ಮತ್ತಗಜಗಳ್ (ವಿ. ಪೂರ್ವ. ಕ) (೨) ಚತುರಂಗ ನಾಲ್ಕು ಅಂಗಗಳುಳ್ಳದ್ದು (ಬ. ವ್ರೀ.) ಚತುರಂಗವಾದಬಲ-ಚತುರಂಗಬಲ (ವಿ. ಪೂರ್ವ. ಕ) ॥೫೮॥

ಮಾ॥ ನಾರಿಯರಸಂದಣಿಯುನೆರೆದುದು । ತೇರಿನಲಿಕೆಲರಂದಣದಿ
ಕೆಲ ।ರೇರಿದರುವಾಜಿಗಳಗಜಕಂಧರದಗದ್ದುಗೆಯ ॥ ಸೇರಿನಡೆದ

ರುಮುಂದೆಘನಗಂಭೀರಭೇರೀರವದವಾದ್ಯವು ।ಭೋರಿಡಲುಹೊರವಂಟಳಂಗನೆಸಕಲವಿಭವದಲಿ ॥೫೯॥

ಟೀಕೆ:— ನಾರಿಯರ-ಸ್ತ್ರೀಯರ, ಸಂದಣಿ-ಗುಂಪು, ನೆರೆದುದು-ಸೇರಿತು, ಕೆಲರ್-ಕೆಲವರು, ಅಂದಣದಿ-ಪಲ್ಲಕ್ಕಿಗಳಲ್ಲಿಯೂ, ಕೆಲರ್-ಮತ್ತೆ ಕೆಲವರು, ತೇರಿನಲಿ-ರಥಗಳಲ್ಲಿಯೂ, ಏರಿದರು-ಹತ್ತಿಕುಳಿತರು, (೧) ಗಜಕಂಧರದ-ಆನೆಯಹೆಗಲಿನ, ಗದ್ದುಗೆಯ-ಪೀಠವನ್ನು ಸೇರಿ-ಹತ್ತಿ, ನಡೆದರು-ಹೋದರು, ಮುಂದೆ-ಮುಂಭಾಗದಲ್ಲಿ, (೨) ಘನಗಂಭೀರ ಭೇರೀರವದ-ಗುಡುಗಿನಂತೆ ಗಂಭೀರವಾದ ಭೇರಿಯ ಶಬ್ದವುಳ್ಳ, ವಾದ್ಯವು-ವಾದ್ಯಗಳು, ಭೋರಿಡಲು-ಧ್ವನಿಮಾಡುತ್ತಿರಲು, ಅಂಗನೆ-ದಮಯಂತಿಯು, (೩) ಸಕಲವಿಭವದಲಿ-ಸಮಸ್ತ ವೈಭವಗಳಿಂದ ಹೊರವಂಟಳು-ಹೊರಟಳು ॥೫೯॥

ತಾತ್ಪರ್ಯ:—ರಾಜಸ್ತ್ರೀಯರೆಲ್ಲರೂ ರಥಗಳಲ್ಲಿಯೂ, ಪಾಲಕಿಗಳಲ್ಲಿಯೂ ಕುಳಿತರು, ಇನ್ನೂ ಕೆಲವರು ಆನೆಗಳ ಮೇಲೆಯೂ, ಕುದುರೆಗಳಮೇಲೆಯೂ ಹೊರಟರು, ಮುಂದೆ ಗುಡುಗಿನಂತೆ ಧ್ವನಿಮಾಡುತ್ತಿರುವ ಭೇರಿಯೇ ಮೊದಲಾದ ವಾದ್ಯಗಳು ಮೊಳಗುತ್ತಿದ್ದವು. ದಮಯಂತಿಯು ಸಕಲವೈಭವಗಳೊಡನೆ ನಿಷಧಪುರಕ್ಕೆ ಪ್ರಯಾಣಮಾಡಿದಳು ॥೫೯॥

ಟಿಪ್ಪಣಿ:-- (೧) ಕಂಧರೆಯನ್ನು, ಧರ - ಹೊತ್ತಿರುವುದು (ಕತ್ತು) ಗಜದಕಂಧರ-ಗಜಕಂಧರ (ಷ. ತ) (೨) ಭೇರಿಯರವ-ಭೇರೀರವ (ಷ. ತ) ಘನ (ಮೇಘ) ದಂತೆ--ಗಂಭೀರ ಘನಗಂಭೀರ (ಉ. ಪೂರ್ವ. ಕ) ಘನಗಂಭೀರವಾದ ಭೇರೀರವ - ಘನಗಂಭೀರ ಭೇರೀರವ (ವಿ. ಪೂರ್ವ. ಕ) (೩) ಸಕಲವಾದ ವಿಭವ - ಸಕಲವಿಭವ (ವಿ. ಪೂರ್ವ. ಕ) ॥೫೯॥

ಮೂ॥ ಬಂದಳಾದಮಯಂತಿದೇವಮು । ಕುಂದರಕ್ಷಿಸಲೆನುತತನ್ನಯ ।ನಂದನರುಸಹಿತೇರಿದಳುಮಣಿಮಯವರೂಥವನೂ ॥ ಹಿಂದೆಮುಂದಿಕ್ಕೆಲದನಾರೀ । ವೃಂದನಡೆಯಲುಮನದಪರವಾ ।ನಂದದಲಿನಡತಂದುಹೊಕ್ಕಳುನಿಷಧಪಟ್ಟಣವ ॥೬೦॥

ಟೀಕೆ:— ದೇವ-ಸ್ವಾಮಿಯಾದ, ಮುಕುಂದ-ಕೃಷ್ಣನೇ, ರಕ್ಷಿಸಲಿ-ಸಂರಕ್ಷಣೆಮಾಡಲಿ, ಎನುತ, ಆದಮಯಂತಿ, ಬಂದಳ್-ಬಂದವಳು

ತನ್ನಯ-ತನ್ನ, (೧) ನಂದನರು ಸಹಿತ-ಮಕ್ಕಳೊಡನೆ, ಮಣಿಮಯವ ರೂಥವನು-ರತ್ನ ಖಚಿತವಾದ ರಥವನ್ನು, ಏರಿದಳು-ಹತ್ತಿದಳು, ಹಿಂದೆ ಮುಂದೆ-ಹಿಂದೆಯೂ, ಮುಂದೆಯೂ, (೨) ಇಕ್ಕೆಲದೆ - ಎಲಡುಪಾರ್ಶ್ವ ದಲ್ಲಿಯೂ, (೩) ನಾರೀವೃಂದ-ಸ್ತ್ರೀಸಮೂಹವು, ನಡೆಯಲು-ನಡೆ ಯುತ್ತಿರಲು, ಮನದ-ಮನಸ್ಸಿನ, ಪರಮಾನಂದದಲಿ-ಮಹಾ ಸಂತೋ ಷದಿಂದ, ನಡೆತಂದು-ಬಂದು, ನಿಷಧಪಟ್ಟಣವ - ನಿಷಧಪುರವನ್ನು, ಹೊಕ್ಕಳು- ಸೇರಿದಳು ||೬೦||

ತಾತ್ಪರ್ಯ:— ದಮಯಂತಿಯು ದೇವ ದೇವನಾದ ಭಗವಂತನೇ ಸಂರಕ್ಷಿಸಲಿ ಎಂದು, ತನ್ನ ಮಕ್ಕಳೊಡನೆ ನವರತ್ನ ಖಚಿತವಾಗಿ ಥಳಥಳಿ ಸುತ್ತಿರುವ ರಥವನ್ನು ಹತ್ತಿದಳು, ತನ್ನ ನಾಲ್ಕುಕಡೆಯಲ್ಲಿಯೂ ನಾರಿ ಯರ ಸಮೂಹವು ಹೊರಟಿತು, ಬಹಳ ಸಂತೋಷದಿಂದ ಪ್ರಯಾಣ ಮಾಡಿ ಬಂದು ನಿಷಧಪುರವನ್ನು ಪ್ರವೇಶಿಸಿದಳು ||೬೦||

ಟಿಪ್ಪಣಿ:— (೧) ಸಂತೋಷಪಡಿಸತಕ್ಕವನು (ಅವ) ಮಗ ಇಂದ್ರನ ಉದ್ಯಾನ, (ನಾನಾ) (೨) ಎರಡು ಕೆಲ-ಇಕ್ಕೆಲ(ದ್ವಿಗು) (೩) ನಾರಿಯರ ವೃಂದ-ನಾರೀವೃಂದ (ಷ. ತ) ||೬೦||

ಮೂ|| ನೋಡುತಿರ್ದರುಪುರಜನರುನೆಲೆ | ಮಾಡದುಪ್ಪರಿಗೆಯಲಿವಿ
ಗೆಕರು | ವಾಡದೆಡೆಯಲಿಸೌಧಗಳಜಾಲಂಧ್ರಶಿಖರದಲಿ || ನೋ
ಡುವರತಾನೋಡಿನಸುನಗು | ತಾಡುವರನೃತ್ಯದಲಿಗಾನವ | ಪಾ
ಡುವರಕಂಡಲ್ಲಿನಲಿವುತಬಂದಳರಮನೆಗೆ ||೬೦||

ಟೀಕೆ:— (೧) ಪುರಜನರು-ಪಟ್ಟಣದ ಜನರು, ನೆಲೆಮಾಡದ - ಮಹಡಿಗಳಲ್ಲಿ, ಮಿಗೆ-ಹೆಚ್ಚಾಗಿ, ಕರುವಾಡದ-ಎತ್ತರವಾದ ಮೇಲ್ಮಚ್ಚಿ ನ, ಎಡೆಯಲಿ-ಪ್ರದೇಶಗಳಲ್ಲಿ, (೨) ಸೌಧಗಳ-ಉಪ್ಪರಿಗೆಗಳ, ಜಾಲಂ ಧ್ರ-ಗವಾಕ್ಷಗಳ ಶಿಖರದಲಿ - ಮೇಲ್ಭಾಗದಲ್ಲಿ, ನೋಡುತಿರ್ದರು-ನೋ ಡುತ್ತಿದ್ದರು, ನೋಡುವರ - ನೋಡುತ್ತಿರುವವರನ್ನು, ತಾ - ತಾನು, ನೋಡಿ-ಕಂಡು, ನಸುನಗುತ-ಮುಗುಳ್ನಗೆನಸುತ್ತಾ, ನೃತ್ಯದಲಿ- ನಾ ಟ್ಯದಿಂದ, ಆಡುವರ-ಆಡುತ್ತಿರುವವರನ್ನೂ ಗಾನವ-ಸಂಗೀತವನ್ನು, ಪಾ ಡುವರ-ಹಾಡುವರನ್ನೂ, ಕಂಡು-ನೋಡಿ, ಅಲ್ಲಿ ನಲಿವುತ-ಸಂತೋಷ ಪಡುತ್ತಾ, ಅರಮನೆಗೆ-ರಾಜಗೃಹಕ್ಕೆ, ನಡೆತಂದಳ್-ಬಂದಳು ||೬೧||

ತಾತ್ಪರ್ಯ:— ಪುರಜನರೆಲ್ಲರೂ ಕುತೂಹಲಚಿತ್ತರಾಗಿ ಮಹಡಿಗ

ಳಲ್ಲಿಯೂ ಗೋಪುರಗಲ್ಲಿತಯೂ. ಎತ್ತರವಾ ಗವಾಕ್ಷಗಳ ಸಂದುಗಳಲ್ಲಿ ಯೂ,ಮೇಲ್ಮುಚ್ಚು ಗಳಗಳಲ್ಲಿಯೂ ನಿಂತುನೋಡುತ್ತಿದ್ದರು, ಅವರೆಲ್ಲರ ನ್ನೂ ನೋಡಿ ಮುಗುಳ್ನಗೆ ನಗುತ್ತಾ, ತನ್ನ ದರ್ಶನದಿಂದ ಸಂತೋ ಷವನ್ನು ಹೊಂದಿದುದನ್ನೂ ನಾಟ್ಯ ಸಂಗೀತ ಮುಂತಾದ ವಿನೋದ ಗಳಿಂದ ಸೂಚಿಸುತ್ತಿರುವದನ್ನೂ ನೋಡಿ ಆನಂದ ಪಡುತ್ತಾ ದಮಯಂ ತಿಯು ಅರಮನೆಯನ್ನು ಸೇರಿದಳು ||೬೧||

ಟಿಪ್ಪಣಿ:— (೧) ಪುರದಜನ-ಪ್ರರಜನ (ಷ. ತ) (೨) ಸುಧಾ- ಸುಣ್ಣ, ಸುಣ್ಣವನ್ನು ತೊಡೆದು ಬೆಳ್ಳಗೆಮಾಡಿರುವುದರಿಂದ ಸೌಧವೆಂದು ಹೆಸರು ||೬೧||

ಮೂ|| ಬಾಗಿಲಲಿರಥವಿಳಿಯೆಸತಿಗೆಸ । ರಾಗದಿಂದಪುರಾಂಗನೆಯ
ರುದ್ಯೋಗಿಸಿದರಾರತಿಯನೆತ್ತಿದರಧಿಕವಭವದಲಿ । ಭೋಗಿಶಯ
ನನಕರುಣನಿನಗುಂ । ಟಾಗಿಸುಖಿಯಾಗೆಂದುಹರಸಿದ ।ರಾಗಮು
ನಿನಿಕುರಂಬವಕ್ಷತೆದಳಿದರಂಗನೆಗೆ ||೬೨||

ಟೀಕೆ:— ಬಾಗಿಲಲಿ-ಬಾಗಿಲಿನಲ್ಲಿ, ರಥವ-ರಥವನ್ನು, ಇಳಿಯೆ- ಇಳಿಯಲು, ಪುರಾಂಗನೆಯರ್-ಪುರಸ್ತ್ರೀಯರು, ಸತಿಗೆ- ದಮಯಂ ತಿಗೆ, ಸರಾಗದಿಂದ-ಸಂತೋಷದಿಂದ, ಉದ್ಯೋಗಿಸಿದರ್- ಉಪಚಾರ ಮಾಡಿದರು, ಅಧಿಕವಿಭವದಲಿ - ಹೆಚ್ಚಾದ ವೈಭವದಿಂದ, ಆರತಿಯಂ- ಮಂಗಳಾರತಿಯನ್ನು, ಎತ್ತಿದರ್- ಬೆಳಗಿದರು, (೧) ಭೋಗಿಶಯನ ನ-ವಿಷ್ಣುವಿನ, ಕರುಣ-ಕೃಪೆಯು, ನಿನಗೆ, ಉಂಟಾಗಿ-ಬಂದು, ಸು ಖಿಯಾಗು-ಸೌಖ್ಯವುಳ್ಳವಳಾಗು, ಎಂದು-ಎಂಬದಾಗಿ, ಹರಸಿದರು-ಆಶೀ ರ್ವಾದಮಾಡಿದರು, ಆಗ (೨) ಮುನಿನಿಕುರುಂಬ - ಋಷಿಸಮೂಹವು, ಅಂಗನೆಗೆ-ದಮಯಂತಿಗೆ, (೩) ಅಕ್ಷತೆದಳಿದರ್-ಮತ್ರಾಕ್ಷತೆ ಗಳನ್ನೆರ ಚಿದರು ||೬೨||

ತಾತ್ಪರ್ಯ:— ದಮಯಂತಿಯು ಅರಮನೆಯ ಬಾಗಿಲಿಗೆ ಬಂದು ರಥವನ್ನು ಇಳಿದ ಕೂಡಲೆ, ಪುರಸ್ತ್ರೀಯರು ನಾನಾವಿಧವಾದ ಉಪ ಚಾರಗಳಿಂದ ಆರತಿಗಳನ್ನೆತ್ತಿದರು. ನಿನಗೆ ದೈವ ಕೃಪೆ ಯುಂಟಾಗಲಿ ಸೌಖ್ಯವಾಗಿ ಬಾಳು, ಎಂದು ಮುನಿಜನಗಳು ಆಶೀರ್ವಾದಮಾಡಿ ಮಂ ತ್ರಾಕ್ಷತೆಗಳನ್ನು ಮೇಲೆರಚಿದರು ||೬೦||

ಟಿಪ್ಪಣಿ:— (೧) ಭೋಗಿ-ಸರ್ಪವೇ, ಶಯನ- ಹಾಸಿಗೆಯಾಗಿ

ಉಳ್ಳವನು (ಅವ) (ಬ. ವ್ರೀ) (೨) ಮುನಿಗಳ ನಿಕುರುಂಬ – ಮುನಿನಿಕುರುಂಬ (ಷ. ತ) ॥೬೦॥

ಮೂ॥ ಹರಕೆಗಳಕೈಕೊಳುತಸತಿಬಂ । ದರಮನೆಯಹೊಕ್ಕಳುನೃ
ಪಾಲನ। ಚರಣಕಮಲಕೆನಮಿಸಿಪಡೆದಳುಪತಿಯಚಿತ್ತವನು॥ ಅರ
ಸಕೇಳೈನಿಷಧಪತಿನಿಜ ।ತರುಣಿಸುತರೊಡಗೂಡಿಮಂಗಳ।ಕರ
ದೊಳೊಪ್ಪಿರೆಧರಣಿದೇವಾಮರರುನಲಿದಾಡೆ ॥೬೩॥

ಟೀಕೆ:— ಸತಿ–ದಮಯಂತಿಯು, ಹರಕೆಗಳ–ಆಶೀರ್ವಾದ ಗಳನ್ನು, ಕೈಕೊಳುತ – ಅಂಗೀಕರಿಸುತ್ತಾ, ಬಂದು, ಅರಮನೆಯನ್ನು, ಹೊಕ್ಕಳು – ಸೇರಿದಳು, ನೃಪಾಲನ–ನಳನ, (೧) ಚರಣ ಕಮಲಕೆ–ಪಾದಕಮಲಕ್ಕೆ, ನಮಿಸಿ–ನಮಸ್ಕರಿಸಿ, ಪತಿಯ – ಗಂಡನ. ಚಿತ್ತವ–ಪ್ರೀತಿಯನ್ನು, ಪಡೆದಳು–ಹೊಂದಿದಳು, ಅರಸ–ಧರ್ಮರಾಜನೆ ಕೇಳೈ–ಕೇಳಯ್ಯಾ! ನಿಷಧಪತಿ–ನಳನು ನಿಜ ತರುಣಿ ಸುತರೊಡಗೂಡಿ–ತನ್ನ ಹೆಂಡತಿಮಕ್ಕಳೊಡನೆ ಕೂಡಿ, ಮಂಗಳಕರದೊಳು– ಶುಭರಿಂದ ಒಪ್ಪಿರೆ–ಪ್ರಕಾಶಿಸಲು (೨) ಧರಣಿದೇವಾ ಮರರು– ಬ್ರಾಹ್ಮಣರೂ ದೇವತೆಗಳೂ, ನಡಿದಾಡೆ–ಸಂತೋಷಪಡುತ್ತಿರಲು, ॥೬೩॥

ತಾತ್ಪರ್ಯ:— ದಮಯಂತಿಯು ಎಲ್ಲರ ಆಶೀರ್ವಾದ ಗಳನ್ನೂ ಪಡೆದು ಅರಮನೆಗೆ ಬಂದು ತನ್ನ ಪತಿಯ ಪಾದಾರವಿಂದಗಳಿಗೆ ನಮಸ್ಕರಿಸಿ ಆತನಪ್ರೀತಿಗೊಳಗಾದಳು, ನಳನು ತನ್ನ ಪತ್ನೀ ಪುತ್ರರೊಡನೆ ಸೇರಿ ಮಂಗಳವನ್ನು ಪಡೆದಿರಲು, ದೇವತೆಗಳೂ, ಬ್ರಾಹ್ಮಣರೂ ನೋಡಿ ಹರ್ಷವನ್ನು ಹೊಂದುತ್ತಿದ್ದರು ॥೬೩॥

ಟಿಪ್ಪಣಿ: – (೧) ಕಮಲ ದಂತಿರುವ ಚರಣ–ಚರಣಕಮಲ (ಉಉ, ಕರ್ಮ. ಸ) (೨) ಧರಣಿ–ಭೂಮಿಗೆ, ದೇವ–ದೇವತೆ (ಬ್ರಾಹ್ಮಣ) ಮರ–ಮರಣವು, ಅ–ಇಲ್ಲದವರು (ದೇವತೆಗಳು) ಧರಣೀದೇವರೂಅಮರರೂ ಧರಣಿದೇವಾ ಮರರು (ದ್ವಂದ್ವ) ॥೬೩॥

ಮೂ॥ ಪರಮಪುಣ್ಯೋದಯನುಸದ್ಗುಣ । ಭರಿತಸತ್ಯಸುಭಾಷಿತ
ನುಸಂ। ಗರದಿಧೈರ್ಯನುನಿತ್ಯನಿರ್ಮಲನಿಗಮಕೋವಿದನು ॥ ಅರ
ಸುಕುಲಪಾಲಕನುನಳಭೂ । ವರನಸಿಂಹಾಸನದಿರಂಜಿಸಿ । ಧರೆ
ಯನಾಳಿದನವಪುರದಚಕ್ರಿ ಗನಕರುಣದಲಿ ॥೬೪॥

ಟೀಕೆ:— ಪರಮ ಪುಣ್ಯೋದಯನು–ಶ್ರೇಷ್ಠವಾದ ಸುಕೃತವುಳ್ಳ,

(೧) ಸದ್ಗುಣಭರಿತ-ಗದ್ಗುಣಭರಿತ-ಸುಗುಣವುಳ್ಳ (೨) ಸತ್ಯಸುಭಾಷಿತನು-ಸತ್ಯವ್ರತದಿಂದಲಂಕೃತನಾದ, ಸಂಗರದಿ-ಯುದ್ಧದಲ್ಲಿ, ಧೀರನು ಧೈರ್ಯಶಾಲಿಯಾದ, ನಿತ ನಿರ್ಮಲ-ಸರ್ವದಾಶುಚಿಯಾದ, ನಿಗಮ ಕೋವಿದನು-ಶಾಸ್ತ್ರಜ್ಞನಾದ, ಅರಸುಕುಲಪಾಲಕನು-ರಾಜವಂಶಕ್ಕೆ ರಕ್ಷಕನಾದ, ನಳಭೂವರನು-ನಳರಾಜನು, ವರಪುರದ-ಬೇಲೂರಿನ, ಚನ್ನಿಗರಾಯಸ್ವಾಮಿಯ, ಕರುಣದಲಿ – ಕೃಪೆಯಿಂದ, ಸಿಂಹಾಸನದಿ – ಸಿಂಹಾಸನದಮೇಲೆ, ರಂಜಿಸಿ-ಪ್ರಕಾಶಿಸುತ್ತಾ, ಧರೆಯಂ- ಭೂಮಿಯನ್ನು, ಆಳಿದ-ಪಾಲಿಸಿದನು ||೬೪||

ತಾತ್ಪರ್ಯ:— ಪುಣ್ಯಶಾಲಿಯಾಗಿಯೂ, ಸದ್ಗುಣಸಂಪನ್ನನಾಗಿಯೂ, ಸತ್ಯಸಂಧನಾಗಿಯೂ, ಶುಚಿವ್ರತನಾಗಿಯೂ, ಧೀರನಾಗಿಯೂ, ಶಾಸ್ತ್ರಜ್ಞನಾಗಿಯೂ, ಕುಲ ಭೂಷಣನಾಗಿಯೂಇರುವ ನಳನು ದೈವಕೃಪೆಯಿಂದ ಪುನಃ ರಾಜ್ಯಾಧಿಕಾರವನ್ನು ಪಡೆದು ಸಿಂಹಾಸನದಲ್ಲಿ ಕುಳಿತು ಪ್ರಭುತ್ವಮಾಡುತ್ತಿದ್ದನು ||೬೪||

ಟಿಪ್ಪಣಿ:— (೧) ಸತ್+ಗುಣ-ಸದ್ಗುಣ (ಜಶ್ತ್ವ) (ವಿ. ಪೂರ್ವ. ಕ) ಸದ್ಗುಣದಿಂದ ಭರಿತ-ಸದ್ಗುಣಭರಿತ (ತೃ. ತ) (೨) ಸತ್ಯದಿಂದ ಸುಭಾಷಿತ-ಸತ್ಯಸುಭಾಷಿತ (ತೃ. ತ) ||೬೪||

ಮೂ|| ಮುನಿಕುಲಾಂಬುಧಿಚಂದ್ರರೋಮಶ | ಮುನಿಪವಿಸ್ತರಿಸಿನ
ನುನಳಭೂ |ಪನಚರಿತ್ರೆಯ ಕೇಳಿತಲೆದೂಗಿದನುಯಮಸೂನು||
ಮನಕೆಪರಮಾನಂದವಾಯ್ತೆಲೆ | ಮುನಿಪನಿಮ್ಮಡಿಕರುಣದಲಿಯಿಂ
| ದೆನಗೆಫಲಿಸಿತುಪುಣ್ಯವೆಂದೆರಗಿದನುಚರಣದಲಿ ||೬೫||

ಟೀಕೆ:— (೧) ಮುನಿಕುಲಾಂಬುಧಿ ಚಂದ್ರರೋಮಶಮುನಿಪ - ಋಷಿವಂಶವೆಂಬ ಸಮುದ್ರಕ್ಕೆ ಚಂದ್ರಪ್ರಾಯನಾದ ರೋಮಶಮಹರ್ಷಿಯು, ನಳಭೂಪನ-ನಳರಾಜನ, ಚರಿತ್ರೆಯ - ಕಥೆಯನ್ನು, ವಿಸ್ತರಿಸಿದನು-ಹೇಳಿದನು, ಯಮಸೂನು, ಧರ್ಮರಾಜನು, ಕೇಳಿ(೨) ತಲೆದೂಗಿದನು-ಆಶ್ಚರ್ಯದಿಂದ ತಲೆಯನ್ನು ತೂಗಿದನು, ಎಲೆಮುನಿಪ - ಎಲೈ ಋಷಿಶ್ರೇಷ್ಠನೆ, ಮನಕೆ-ಮನಸ್ಸಿಗೆ, ಪರಮಾನಂದವಾಯ್ತು, ನಿಮ್ಮಡಿ ಕರುಣದಲಿ-ನಿಮ್ಮ ಚರಣಾನುಗ್ರಹದಿಂದ, ಎನಗೆ-ನನಗೆ, ಪುಣ್ಯವು-ಸುಕೃತವು, ಫಲಿಸಿತು-ಕೈಸೇರಿತು, ಎಂದು, ಚರಣದಲಿ-ಪಾದಕ್ಕೆ ಎರಗಿದನು-ನಮಸ್ಕರಿಸಿದನು ||೬೫||

ತಾತ್ಪರ್ಯ:— ಪುಣ್ಯಪ್ರದಳಾದ ಈ ನಳನ ಚರಿತ್ರೆಯನ್ನು ಮುನಿಕುಲ ತಿಲಕನಾದ ರೋಮಶನು ಧರ್ಮರಾಜನಿಗೆ ಹೇಳಿದನು, ಇದನ್ನು ಕೇಳಿ ತಲೆದೂಗುತ್ತಾ ಎಲೈ ಮಹರ್ಷಿಯೇ, ನನಗೆ ಬಹಳ ಸಂತೋಷವಾಯ್ತು, ನಿಮ್ಮನುಗ್ರಹದಿಂದ ಪುಣ್ಯವು ಫಲಿಸಿತು, ಪವಿತ್ರನಾದೆನೆಂದು ರೋಮಶನ ಪಾದಕ್ಕೆರಗಿದನು ||೬೫||

ಟಿಪ್ಪಣಿ:— (೧) ಮುನಿಗಳಕುಲ-ಮುನಿಕುಲ (ಷ. ತ) ಮುನಿಕುಲವೇಅಂಬುಧಿ-ಮುನಿಕುಲಾಂಬುಧಿ (ಅವ. ಪೂರ್ವ. ಕ) ಅಂಬು - ನೀರು, ಧಿ-ನಿಲ್ಲುವಸ್ಥಳ (ಸಮುದ್ರ) ಅಂಬುಧಿಯ ಚಂದ್ರ, (ಷ. ತ) ಚಂದ್ರನಾದ ರೋಮಶ ಮುನಿಪ (ವಿ. ಪೂರ್ವ. ಕ) (೨) ತಲೆಯಂತೂಗಿದನು-ತಲೆದೂಗಿದನು (ಕ್ರಿ. ಸ) ||೬೫||

ಮೂ|| ದೇವಮುನಿಗಳುನೀವುನಮ್ಮನು|ಪಾವನರಮಾಡಿದಿರಿನಮಗಿ|
ನ್ನಾವುದರಿದುಂಟೆಂದುಪಾರ್ಥನಹದನವೇನರಿಯೆ || ಆವಿವರವೆನಗಿ
ನ್ನುತಿಳಿಸೆನೆ |ದೇವನಗರಿಯೊಳಿಂದ್ರನಲಿಗಾಂ|ಡೀವಿಸುಸ್ಥಿರನರಸ
ಬೇಡವನಿಯಲಿನೀನೆಂದ ||೬೬||

ಟೀಕೆ:— ನೀವು, ದೇವಮುನಿಗಳು-ದೇವರ್ಷಿಗಳು, ನಮ್ಮನ ನಮ್ಮನ್ನು, ಪಾವನರ - ಪರಿಶುದ್ಧರನ್ನಾಗಿ, ಮಾಡಿದಿರಿ, ನಮಗೆ, ಇಂದು-ಈಗ, ಇನ್ನಾವುದು-ಇನ್ನು ಯಾವುದುತಾನೆ, ಅರಿದುಂಟು-ಅಸಾಧ್ಯವಾಗಿದೆ? (೧) ಪಾರ್ಥನ-ಅರ್ಜುನನ, ಹದನವು-ಸಮಾಚಾರವು, ಏನು-ಏನಾಗಿದೆಯೋ, ಅರಿಯೆ-ಕಾಣೆನು, ಆ ವಿವರವನು-ಅವನ ಸಮಾಚಾರವನ್ನು, ಎನಗೆ-ನನಗೆ, ಇನ್ನು, ತಿಳಿಸು-ಹೇಳು, ಎನೆ-ಎನ್ನಲು, ಗಾಂಡೀವಿ-ಅರ್ಜುನನು (೨) ದೇವನಗರಿಯೊಳ್ - ಅಮರಾವತಿಯಲ್ಲಿ, ಇಂದ್ರನಲಿ -ಇಂದ್ರನ ಬಳಿಯಲ್ಲಿ, ಸುಸ್ಥಿರಂ-ಕ್ಷೇಮದಿಂದಿರುವನು, ಅವನಿಯಲಿ-ಭೂಮಿಯಲ್ಲಿ, ನೀನು, ಅರಸಬೇಡ-ಹುಡುಕಬೇಡ, ಎಂದ - ಎಂಬದಾಗಿ ಹೇಳಿದನು ||೬೬||

ತಾತ್ಪರ್ಯ:— ಎಲೈ ರೋಮಶನೇ ನೀನು ದೇವರ್ಷಿಯಾದುದರಿಂದ ನಮ್ಮನ್ನು ಸತ್ಕಥಾಶ್ರವಣದಿಂದಪಾವನರನ್ನಾಗಿಮಾಡಿದೆ, ಇನ್ನಾವುದುತಾನೆ ಅಸಾಧ್ಯವು! ಇರಲಿ, ನೀನುಸರ್ವಜ್ಞನಾದುದರಿಂದಅರ್ಜುನನು ಎಲ್ಲಿದ್ದಾನೆಯೊ ? ಹೇಗಿದ್ದಾನೆಯೋ ಯಾವಾಗ ಬರುವನೋ ! ಆವೃತ್ತಾಂತವನ್ನು ತಿಳಿಸುವವನಾಗು ಎನ್ನಲು, ರೋಮಶನು ಜ್ಞಾನದೃಷ್ಟಿ

ಯಿಂದ ತಿಳಿದು ಅಯ್ಯಾ-ಚಿಂತಿಸಬೇಡ ಅರ್ಜುನನು ಇಂದ್ರನಬಳಿಯಲ್ಲಿ ಸುಖದಿಂದಿರುವನು, ಭೂಲೋಕದಲ್ಲಿ ಎಲ್ಲಿಯೂ ಶ್ರಮೆಪಟ್ಟು ಅವನನ್ನು ಹುಡುಕಬೇಡ ಎಂದನು ||೬೬||

ಟಿಪ್ಪಣಿ:— (೧) ಪೃಥೆಯಮಗ-ಪಾರ್ಥ (ಅವ) (೨) ದೇವತೆಗಳನಗರಿ-ದೇವನಗರಿ (ಷ. ತ) ||೬೬||

ಮೂ|| ಎಲೆಯುಧಿಷ್ಠಿರಕೇಳುಲೋಕದ | ಲಲನೆಯರಪರಿಯಲ್ಲನಾಲ್ವರು | ಚೆಲುವೆಯರುಗುಣಶೀಲಸಂಪನ್ನೆಯರುಚದುರೆಯರು ||
ನಳಿನಮುಖಿದಮಯಂತಿಸೀತಾ |ಲಲನೆದ್ರೌಪದಿಚಂದ್ರಮತಿಕೋ | ಮಲೆಯರಚ್ಯುತಚಚ್ಚಮೆಚ್ಚಿನರಾಜವನಿತೆಯರು ||೬೭||

ಟೀಕೆ:— (೧) ಎಲೆಯುಧಿಷ್ಠಿರ-ಎಲೈಧರ್ಮರಾಜನೇ, ಕೇಳು, ಚೆಲುವೆಯರು-ಲಾವಣ್ಯವತಿಯರಾಗಿಯೂ, ಗುಣಶೀಲಸಂಪನ್ನೆಯರು-ಸದ್ಗುಣ ಸದಾಚಾರಗಳುಳ್ಳವರಾಗಿಯೂ, ಚದುರೆಯರು - ಚಾತುರ್ಯವುಳ್ಳವರಾಗಿಯೂಇರುವ, ನಳಿನಮುಖಿದಮಯಂತಿ-ಕಮಲಮುಖಿಯಾದ ದಮಯಂತಿಯೂ, ಸೀತಾಲಲನೆ-ಸೀತಾದೇವಿಯೂ, ದ್ರೌಪದಿ-ದ್ರೌಪದಿಯೂ, ಚಂದ್ರಮತಿ ಕೋಮಲೆಯರ್ - ಚಂದ್ರಮತೀದೇವಿಯೂ, ನಾಲ್ವರು-ಈ ನಾಲ್ಕುಮಂದಿಯೂ, ಲೋಕದಲಲನೆಯರ - ಇತರಸಾಮಾನ್ಯ ಸ್ತ್ರೀಯರ, ಪರಿಯಲ್ಲ-ರೀತಿಯಲ್ಲ, ಅಚ್ಯುತನ- ವಿಷ್ಣುನಿಗೆ, ಅಚ್ಚಮೆಚ್ಚಿನ-ಬಹು ಪ್ರೀತಿಪಾತ್ರವಾದ (೨) ರಾಜವನಿತೆಯರು-ರಾಜಸ್ತ್ರೀಯರು, ||೬೭||

ತಾತ್ಪರ್ಯ:— ಎಲೈ ಧರ್ಮರಾಜನೇ ಗುಣರೂಪ ಲಾವಣ್ಯ ಸೌಶೀಲ್ಯಾದಿಗಳಿಂದ ಶೋಭಿಸುವ ದಮಯಂತಿ, ಸೀತೆ, ದ್ರೌಪದಿ, ಚಂದ್ರಮತಿ, ಈ ನಾಲ್ವರು ಮಹಾ ಸ್ತ್ರೀಯರನ್ನು ಲೋಕದ ಸಾಮಾನ್ಯವಧುಗಳಂತೆ ತಿಳಿಯಬೇಡ, ಭಗವಂತನಿಗೆ ಅತ್ಯಂತ ಪ್ರೀತಿ ಪಾತ್ರರೆಂಬದಾಗಿ ತಿಳಿ ಎಂದನು ||೬೭||

ಟಿಪ್ಪಣಿ:— (೧) ಯುಧಿ-ಯುದ್ಧದಲ್ಲಿ ಕದಲದೆ ನಿಲ್ಲುವವನು (ಧರ್ಮರಾಜ) ಅವ, (೨) ರಾಜರವನಿತೆ-ರಾಜವನಿತೆ (ಷ. ತ) ||೬೭||

ಮೂ|| ನಿನಗೆಪಟ್ಟದಮಹಿಳೆದ್ರೌಪದಿ|ವನಿತೆಯಿರೆಸಾಮ್ರಾಜ್ಯಸಂಪದ| ವಿನಿತುಸತಿಯಿಂದಾಗುವದುಕಾರ್ಯಗಳುಸಿದ್ಧಿಪ್ಪದು || ಜನಪ ಚಿಂತಿಸಬೇಡನಾಳಿನ|ದಿನದಬಹನಿನ್ನನುಜನರ್ಜುನ|ಮನದಚಿಂತೆ

ಬೀಳುಗೊಡುಸುಖಿಯಾಗುನೀನೆಂದ ||೬೪||

ಟೀಕೆ:— ನಿನಗೆ, ಪಟ್ಟದಮಹಿಳೆ-ಪಟ್ಟದರಾಣಿಯು(೧) ದ್ರೌಪದಿವನಿತೆ-ದ್ರೌಪದೀದೇವಿಯು, ಇರೆ-ಆಗಿರಲಾಗಿ, ಸಾಮ್ರಾಜ್ಯಸಂಪದಂ-ಚಕ್ರವರ್ತಿಪದವಿಯು, ಇನಿತು-ಎಲ್ಲವು, ಸತಿಯಿಂದ-ಈ ದ್ರೌಪದಿಯಿಂದ, ಆಗುವುದು- ಉಂಟಾಗುವದು, ಕಾಮ್ಯಗಳು- ಇಷ್ಟಾರ್ಥಗಳು, ಸಿದ್ಧಿಪುದು-ಕೈಗೂಡುವವು, ಜನಪ-ದೊರೆಯೇ, ಚಿಂತಿಸಬೇಡ ಆಲೋಚಿಸಬೇಡ, ನಾಳಿನದಿನದಿ-ನಾಳೆ, ನಿನ್ನ (೨) ಅನುಜಂ- ತಮ್ಮನಾದ, ಅರ್ಜುನ-ಅರ್ಜುನನು, ಬಹನು-ಬರುವನು, ಮನದ-ಮನಸ್ಸಿನ ಚಿಂತೆಯು-ಆಲೋಚನೆಯುನ್ನು, ಬೀಳುಗೊಡು-ಬಿಡು, ನೀನು, ಸುಖಿಯಾಗು-ಸೌಖ್ಯದಿಂದ ಬಾಳು, ಎಂದ-ಎಂದನು ||೬೪||

ತಾತ್ಪರ್ಯ:— ಎಲೈ ರಾಜೇಂದ್ರನೆ ಈ ದ್ರೌಪದಿ ಮಹಾದೇವಿಯುನಿನಗೆ ಪಟ್ಟದರಸಿಯಾಗಿರುವಲ್ಲಿ ನಿನಗಸಾಧ್ಯವಾಗಿರುವುದುಏನು, ಸಕಲ ಸಾಮ್ರಾಜ್ಯವೂ ಕೈ ಸೇರುವದು, ಸಮಸ್ತ ಇಷ್ಟಾರ್ಥಗಳೂ ಕೈಗೂಡುವವನ,ನಾಳೆಯದಿನ ನಿನ್ನ ತಮ್ಮನಾದ ಅರ್ಜನನೂಬಂದು ಸೇರುವನು, ಚಿಂತೆಯುಂಬಿಟ್ಟು ಸುಖದಿಂದಿರು ಎಂದನು ||೬೪||

ಟಿಪ್ಪಣಿ:—(೧)ದ್ರುಪದನಮಗಳು-ದ್ರೌಪದಿ, ದ್ರೌಪದಿಎಂಬವನಿತೆ ದಿವನಿತೆ (ಸಂ. ಪೂರ್ವ. ಕ) (೨) ಅನು-ತನ್ನತರುವಾಯ, ಜ-ಹುಟ್ಟಿದವನು (ಉಪ.ಸ) ||೬೪||

ಮೂ|| ಹರನುನಿಮಗೆಸಹಾಯದೇವಾ | ಸುರರುನಿಮಗೊಳ್ಳಿದರುಲ
ಕ್ಷ್ಮೀಶ | ವರನುನಿಮಗಿನ್ನಂತರಂಗದಪರಮಸಖನಿರಲು || ಮರು
ಗುವರೆಮನದೊಳಗೆಕೇಳಲೆ | ಧರಣಿಪತಿಸಾಕಿನ್ನುರಾಜ್ಯದ| ಸಿರಿನಿ
ಗೆಬಂದಪುದುರಿಪುಸಂಹಾರವಹುದೆಂದ ||೬೯||

ಟೀಕೆ:— ಎಲೆಧರಣಿಪತಿ-ದೊರೆಯೇ, ಕೇಳು, ನಿಮಗೆ, ಹರನು ಈಶ್ವರನು, ಸಹಾಯ-ಸಹಾಯಕನು, ದೇವಾಸುರರು- ದೇವತೆಗಳೂ ರಾಕ್ಷಸರೂ ಸಹ, ನಿಮಗೆ, ಒಳ್ಳಿದರು-ಬೇಕಾದವರು, ನಿಮಗೆ ಇನ್ನು ಮತ್ತು, (೧) ಲಕ್ಷ್ಮೀವರನು-ಕೃಷ್ಣನು, ಅಂತರಂಗದಪರಮಸಖನಿರಲು-ರಹಸ್ಯಾಲೋಚನೆಗೆ ಪರಮಸ್ನೇಹಿತನಾಗಿರುವಾಗ, ಮನದೊಳಗೆ-ಮನಸ್ಸಿನಲ್ಲಿ, ಮರುಗುವರೆ-ವ್ಯಥೆಪಡಬಹುದೆ, ಇನ್ನು, ಸಾಕು-ಬಿಡು, ರಾಜ್ಯದಸಿರಿ-ದೊರೆತನದ ಸಂಪತ್ತು, ನಿನಗೆ, ಬಂದಪುದು- ಬರುವುದು

(೨) ರಿಪುಸಂಹಾರವು-ಶತ್ರುನಾಶವು, ಅಹುದು-ಆಗುವದು, ಎಂದ-ಎಂದನು, ||೬೯||

ತಾತ್ಪರ್ಯ:—ಎಲೈ ಧರ್ಮರಾಜನೇ ಕೇಳು—ನಿಮಗೆ ಈ ವ್ಯಾಸ ಹಾಯವಿದೆ, ದೇವಾಸುರರೂ ನಿಮಗೆ ಬೇಕಾದವರು, ಶ್ರೀ ಕೃಷ್ಣನು ಪರಮಾಪ್ತನು, ಎಂತಹವಿಪತ್ತುಗಳನ್ನಾದರೂ ತೊಲಗಿಸುವಪಕ್ಕಸುಕೂಲವಾದ ಆಲೋಚನೆಯನ್ನು ಹೇಳತಕ್ಕ ಸಮರ್ಥನು, ಹೀಗಿದ್ದರೂ ನೀನು ವ್ಯಥೆಪಡಬಹುದೇ ಬಿಡು, ನಿನ್ನ ರಾಜ್ಯಾದಿ ಸಂಪತ್ತುಗಳು ಪುನಃ ಕೈ ಸೇರುವುವು, ಶತ್ರುನಿಗ್ರಹವೂ ಆಗುವುದು, ಚಿಂತಿಸಬೇಡ ಎಂದನು ||೬೯||

ಟಿಪ್ಪಣಿ:— (೧) ಲಕ್ಷ್ಮೀ ಶ್ರೀ-ಲಕ್ಷ್ಮಿಶ್ರೀಯು, ವರ-ಪತಿ, (ಷ. ತ) (೨) ರಿಪುವಿನ ಸಂಹಾರ-ರಿಪುಸಂಹಾರ (ಷ. ತ) ||೬೯||

ಮೂ|| ಎಂದುಬುದ್ಧಿಯಪೇಳಿಮುನಿಯಮ | ನಂದನಗೆಬೀಳ್ಕೊಂಡು
ತಾಪಸ|ವೃಂದಸಹಿತಲ್ಲಿಂದಹೊರವಂಟನುನಿಜಶ್ರಮಕೆ|| ಅಂದುಮ
ಳರುಧೌಮ್ಯದ್ರೌಪದಿ | ಸಂದಮುನಿಜನಸಹಿತಯಮಸುತ ||ಬಂ
ದುಹೊಕ್ಕನುಪರ್ಣಶಾಲೆಯನಧಿಕಹರುಷದಲಿ ||೭೦||

ಟೀಕೆ:— ಎಂದು- ಎಂಬದಾಗಿ, ಮುನಿ-ರೋಮಶನು, ಯಮನಂದನಗೆ-ಧರ್ಮರಾಜನಿಗೆ, ಬುದ್ಧಿಯಪೇಳಿ – ಬುದ್ಧಿವಾದವನ್ನು ಹೇಳಿ, ತಾಪಸವೃಂದ ಸಹಿತ-ಮುನಿಗಳೊಡನೆ, ಬೀಳ್ಕೊಂಡು - ಪ್ರಯಾಣಮಾಡಿ, ಅಲ್ಲಿಂದ, (೧) ನಿಜಾಶ್ರಮಕೆ-ತನ್ನಪರ್ಣಶಾಲೆಗೆ. ಹೊರವಂಟನು - ಹೊರಟನು, ಅಂದು-ಆಗ, (೨) ಯಮಳರು - ನಕುಲ ಸಹದೇವನು, ಧೌಮ್ಯ-ಧೌಮ್ಯನು, ದ್ರೌಪದಿ, ಸಂದ-ಸೇರಿದ, ಮುನಿಜನಸಹಿತ-ಋಷಿಗಳಸಂಗಡ, ಯಮಸುತ-ಧರ್ಮರಾಜನು, ಅಧಿಕಹರುಷದಲಿ-ಪರಮಾನಂದದಿಂದ, ಪರ್ಣಶಾಲೆಯಂ-ಎಲೆಯಮನೆಯನ್ನು, ಬಂದುಹೊಕ್ಕನು ಬಂದು ಸೇರಿದನು ||೭೦||

ತಾತ್ಪರ್ಯ:— ಈ ರೀತಿಯಾಗಿ ರೋಮಶನು ಧರ್ಮರಾಜನಿಗೆ ಬುಬುದ್ಧಿವಾದವನ್ನು ಹೇಳಿ ಸಮಾಧಾನಗೊಳಿಸಿ ಋಷಿಗಳೊಡನೆ ತನ್ನಾಶ್ರಮಕೆ ಹೊರಡಲು, ಧರ್ಮನಂದನನು ಸಂತೋಷ ಭರಿತನಾಗಿ, ಧೌಮ್ಯ, ದ್ರೌಪದಿ, ನಕುಲ, ಸಹದೇವರೊಡನೆ ಹೊರಟು ಮನೋವ್ಯಾಕುಲವನ್ನು ಬಿಟ್ಟು, ಸಂತೋಷದಿಂದ ತನ್ನ ಪರ್ಣಶಾಲೆಯನ್ನು ಹೊ

ಕ್ಕನು ॥೭೦॥

ಟಿಪ್ಪಣಿ:— (೧) ನಿಜ+ಆಶ್ರಮ-ನಿಜಾಶ್ರಮ (ಸ. ದೀ.ಸಂ.) ನಿಜವಾದ ಆಶ್ರಮ (ವಿ. ಪೂರ್ವ. ಕ) (೨) (ದ್ಭ) ಅಮಳ್ (ಅವಳ)॥

ಮೂ॥ ಈಕಥೆಯಲಿಸುವಸುಜನಕ ।ನೇಕಸುಖಸಾಮ್ರಾಜ್ಯಪದ
ವಿಯ । ನಾಕಮಲಲೋಚನನುವರಪುರದರಸಪಾಲಿಸುವ ॥ಲೋ
ಕಪಾವನನಳನಕಥೆಯನಿ ।ರಾಕರಿಸಿದವರಧಿಕನರಕದ।ಲೋಕವಾ
ಳುವರೆಂದುರೋಮಶನುಡಿದನರಸಂಗೆ ॥೭೧॥

ಟೀಕೆ:— ಈ ಕಥೆಯಂ-ಈ ನಳಚರಿತ್ರೆಯನ್ನು, ಆಲಿಸುವ-ಕೇಳುವ, ಸುಜನಕೆ-ಸಜ್ಜನರಿಗೆ, ಆ ಕಮಲಲೋಚನನು- ಕಮಲದಂತೆಕಣ್ಣುಳ್ಳ, ವರಪುರದರಸ – ಬೇಲೂರಿಗಧಿಪತಿಯಾದ ಕೇಶವಸ್ವಾಮಿಯು, ಅನೇಕ ಸುಖಸಾಮ್ರಾಜ್ಯ ಪದವಿಯ- ಅನೇಕಸೌಖ್ಯಗಳನ್ನೂ, ರಾಜ್ಯಾಧಿಕಾರವನ್ನೂ, ಪಾಲಿಸುವ-ಕೊಡುವನು, (೧) ಲೋಕಪಾವನನಳನ-ಲೋಕಪೂಜ್ಯನಾದ ನಳನ, ಕಥೆಯ-ಚರಿತ್ರೆಯನ್ನು, ನಿರಾಕರಿಸಿದವರ್-ತಿರಸ್ಕರಿಸಿದವರು, (೧) ಅಧಿಕ ನರಕದ-ಕ್ರೂರವಾದ ನರಕದ, ಲೋಕವ-ಲೋಕವನ್ನು, ಆಳುವರು - ಸೇರುವರು, ಎಂದು, ಅರಸಂಗೆ-ಧರ್ಮರಾಜನಿಗೆ, ರೋಮಶ-ರೋಮಶಮುನಿಯು, ನುಡಿದಂ-ಹೇಳಿದನು, ॥೭೧॥

ತಾತ್ಪರ್ಯ:— ಎಲೈ ಧರ್ಮನಂದನನೇ ಕೇಳು, ಈ ನಳಚರಿತ್ರೆಯನ್ನು ಭಕ್ತಿಯಿಂದ ಕೇಳುವವರಿಗೆ ಭಗವಂತನು ಅಷ್ಟೈಶ್ವರ್ಯವೇ ಮೊದಲಾದ ಭೋಗಗಳನ್ನು ಕೊಡುವನು. ಈ ಚರಿತ್ರೆಯನ್ನು ದೂಷಿಸುವವರು, ತಪನ, ತಾರರವ, ಕುಂಭೀಪಾಕ ಮೊದಲಾದ ಮಹಾ ನರಕದಲ್ಲಿ ಬೀಳುವರು, ಎಂದು ಹೇಳಿದನು ॥೭೧॥

ಟಿಪ್ಪಣಿ:— ಲೋಕದಪಾವನ (ಷ. ತ) (೨) ಅಧಿಕವಾದ ನರಕ ಅಧಿಕನರಕ (ವಿ. ಪೂರ್ವ. ಕ) ॥೭೧॥

ಮೂ॥ ಮೇದಿನಿಯೊಳೀಪುಣ್ಯಚರಿತೆಯ । ನಾದರಿಸಿಬಗದೋನಿಕೇ
ಳುವ । ಸಾಧುಸಜ್ಜನರಾದವರಿಗರುದಖಿಳಕೈವಲ್ಯ ॥ ವೇದಗೋ
ಚರಕೃಷ್ಣವರಪುರ। ದಾಟಕೇಶವನಮರವಂದಿತ ।ನಾದಿನಾರಾಯ
ಣನುಸಲಹುವಸಕಲಸಜ್ಜನರ ॥೭೨॥

ಟೀಕೆ:— ಮೇದಿನಿಯೊಳ್-ಭೂಲೋಕದಲ್ಲಿ, ಈ ಪುಣ್ಯ ಚ

ರಿತ್ರೆಯಂ-ಈ ಸತ್ಕಥೆಯನ್ನು, ಆದರಿಸಿ-ವಿಶ್ವಾಸದಿಂದ, ಬರೆವ-ಓದಿ-ಕೇಳುವ, ಸಾಧುಸಜ್ಜನರಾದವರಿಗೆ- ಒಳ್ಳೆಸತ್ಪುರುಷರಿಗೆ, ಅಖಿಳಕೈವಲ್ಯ-ಸಮಸ್ತವಾದ ಮೋಕ್ಷವು, ಅಹುದು- ಆಗುವುದು, ಸಕಲಸಜ್ಜನರ-ಎಲ್ಲಸತ್ಪುರುಷರನ್ನೂ, ಅಮರವಂದಿತಂ-ದೇವತೆಗಳಿಂದ ನಮಸ್ಕರಿಸಲ್ಪಟ್ಟ, ಆದಿನಾರಾಯಣಂ-ಪುರಾಣಪುರುಷನಾದ (೨) ವೇದಗೋಚರಂ-ವೇದವೇದ್ಯನಾದ, ಕೃಷ್ಣಂ-ಪಾಪಹರನಾದ, ವರಪುರದ- ಬೇಲೂರಿನ, ಆದಿಕೇಶವಂ-ಚೆನ್ನ ಕೇಶವಸ್ವಾಮಿಯು, ಸಲಹುವ - ರಕ್ಷಿಸುವನು ॥ ೭೦॥

ತಾತ್ಪರ್ಯ:— ಈ ಲೋಕದಲ್ಲಿ ಯಾರು ಈ ಪುಣ್ಯ ಚರಿತ್ರೆಯನ್ನು ಓದಿ, ಕೇಳಿ, ಅಥವಾ ಬರೆದು ಸಂತೋಷಪಡುವರೋ ಅಂತಹ ಸುಜನರಿಗೆ, ದೇವದೇವನಾಗಿಯೂ, ಪುರಾಣಪುರುಷನಾಗಿಯೂ ದೇವವಂದಿತನಾಗಿಯೂ, ಭಕ್ತರಕ್ಷಕನಾಗಿಯೂ, ಇರುವ ಭಗವಂತನಾದ ಬೇಲೂರಿನ ಚೆನ್ನ ಕೇಶವಸ್ವಾಮಿಯು ಸಕಲ ಭೋಗಗಳನ್ನೂ, ಸಾಲೋಕ್ಯ, ಸಾರೂಪ್ಯ, ಸಾಮೀಪ್ಯ, ಸಾಯುಜ್ಯ ಮೊದಲಾದ ಮೋಕ್ಷವನ್ನೂ ಕೊಟ್ಟು ಉದ್ಧಾರಮಾಡುವನು, ಎಂಬಲ್ಲಿಗೆ ಒಂಭತ್ತನೆಯಸಂಧಿ ಮುಗಿದುದು ॥೭೦॥

ಟಿಪ್ಪಣಿ:— (೧) ಮಧುಕೈಟಭರೆಂಬ ರಾಕ್ಷಸರ ಮೇದಸ್ಸಿನಿಂದ ನಿರ್ಮಾಣವಾಡಿರುವುದರಿಂದ ಭೂಮಿಗೆ ಮೇದಿನಿ ಎಂಬ ಹೆಸರು ಬಂತು (೨) ವೇದದಿಂದ ಗೋಚರ-ವೇದಗೋಚರ (ತೃ. ತ) ॥೭೦॥

ಛಂದಸ್ಸು:— ಈ ಗ್ರಂಥದಲ್ಲಿನ ಪದ್ಯಗಳು ಷಟ್ಪದಿಗಳಾಗಿವೆ. ಈ ವೃತ್ತಗಳಿಗೆ ೬ ಪಾದಗಳಿರುವುದರಿಂದ ಈ ಹೆಸರು ಬಂದಿದೆ. ಶರ, ಕುಸುಮ, ಭೋಗ,ಭಾಮಿನಿ, ಪರಿವರ್ಧಿನಿ, ವಾರ್ಧಿಕ, ಗಳೆಂದುಈ ಷಟ್ಪದಿಗಳಲ್ಲಿ ೬ ಭೇದಗಳುಂಟು. ಇವುಗಳೆಲ್ಲ ಮಾತ್ರಾಗಣಗಳಿಂದಾಗುವವು. ಅವುಗಳಿಗೆ ಬೇರೆ ಬೇರೆ ಲಕ್ಷಣಗಳಿರುವವು. ಅವುಗಳಲ್ಲಿ ಈ ಗ್ರಂಥದಲ್ಲಿರುವ ಪದ್ಯಗಳು (ಭಾಮಿನೀಷಟ್ಪದಿ, ಗಳಾಗಿವೆ. ಈ ಪದ್ಯಕ್ಕೆ ಲಕ್ಷಣವೇನೆಂದರೆ— ೧, ೨, ೪, ೫ ನೆಯಪಾದಗಳಲ್ಲಿ ಕ್ರಮವಾಗಿ (೩, ೪)-(೩, ೪) ಮಾತ್ರೆಗಳಿಂದ ಕೂಡಿದ ಎರಡೆರಡು ಗಣಗಳಿರಬೇಕು. ಅಂದರೆ ಒಂದೊಂದು ಪಾದಕ್ಕೆ ೧೪ ರಂತೆ ಮಾತ್ರೆಗಳಾಗುವವು ೩, ೬ ನೆ ಪಾದಗಳಿಗೆ (೩, ೪) ಮಾತ್ರೆಗಳುಳ್ಳ ಮೂರ

ಮೂರು ಗಣಗಳೂ ಕೊನೆಯಲ್ಲಿ ಗ ಗುರುವೂ ಇರಬೇಕು, ಅಂದರೆ ಮಾತ್ರೆಗಳ ಸಂಖ್ಯೆಯು ೨೩ ಎಂದು ತಿಳಿಯಬೇಕು.

ಕಥಾಸಾರಾಂಶ.

ಪೂರ್ವದಲ್ಲಿ ಪ್ರಖ್ಯಾತರಾದ ಚಂದ್ರವಂಶದ ದೊರೆಗಳು ಹಸ್ತಿನಾನಾವತಿಯಲ್ಲಿ ಆಳುತ್ತಿದ್ದರು. ಅವರಲ್ಲಿ ಪ್ರಸಿದ್ಧರಾದ ಕೌರವ ಪಾಂಡವರು ರಾಜ್ಯಕ್ಕಾಗಿ ಜಗಳವಾಡಿದರು, ಕೌರವರಲ್ಲಿ ಮುಖ್ಯನಾದ ದುರ್ಯೋಧನನು ಧರ್ಮರಾಜನೇ ಮೊದಲಾದ ಪಾಂಡವರನ್ನು ಜೂಜಿನಲ್ಲಿ ಗೆದ್ದನು ಮೊದಲು ಗೊತ್ತುಮಾಡಿಕೊಂಡಿದ್ದ ಪ್ರಕಾರ ತಮ್ಮ ಪತ್ನಿಯಾದ ದ್ರೌಪದಿಯೊಡನೆ ಕಾಡಿಗೆ ಹೋದರು. ಧರ್ಮರಾಜನು ರಾಜ್ಯಭ್ರಷ್ಟನಾಗಿತನಗೆ ಪ್ರಾಪ್ತವಾದದುರವಸ್ಥೆಗೆಬಹಳವಾಗಿ ದುಃಖಿಸುತ್ತಾ, ಅರಣ್ಯದಲ್ಲಿಸಂಚರಿಸುತ್ತಾ,ಅಲ್ಲಲ್ಲಿರುವ ಋಷ್ಯಾಶ್ರಮಗಳಿಗೆ ಹೋಗಿ ಅವರ ದರ್ಶನಮಾಡುತ್ತಾ ಕಾಲವನ್ನು ಕಳೆಯುತ್ತಿದ್ದನು. ಕೆಲವುಕಾಲದಮೇಲೆತನ್ನ ತಮ್ಮಂದಿರೊಡನೆ ಕಾಮ್ಯಕವನದಲ್ಲಿ.ಚಿಂತಾಕ್ರಾಂತನಾಗಿವಾಸಮಾಡುತ್ತಿರಲು, ರೋಮಶ ಮಹಾಮುನಿಯು ಅನೇಕಮಂದಿ ಋಷಿಗಳೊಡನೆ ಪುಣ್ಯಾಶ್ರಮಗಳನ್ನು ದರ್ಶನಮಾಡುತ್ತಾ ಮಾರ್ಗವಶದಿಂದ ಕಾಮ್ಯಕ ವನವನ್ನು ಪ್ರವೇಶಿಸಿ ಧರ್ಮರಾಜನ ಬಳಿಗೆ ಬಂದನು, ಧರ್ಮನಂದನನು ಅವರಿಗೆ ಎಲ್ಲರಿಗೂ ಅತಿಥಿ ಸತ್ಕಾರನನ್ನು ಮಾಡಿ ಕುಶಲ ಪ್ರಶ್ನೆಗಳಾದಮೇಲೆ ತನ್ನ ದುಃಖವನ್ನು ಅವರಿಗೆ ತಿಳಿಸಿ ತನ್ನಂತೆ ಲೋಕದಲ್ಲಿ ದುಃಖಪಟ್ಟವರುಂಟೇ ? ಎಂದು ಕೇಳಲು, ರೋಮಶ ಮಹಾಮುನಿಯು ಧರ್ಮರಾಜನ ದೈನ್ಯಕ್ಕೆ ಮರುಗಿ ಆತನಿಗೆ ಸಮಾಧಾನವನ್ನು ಹೇಳುವುದಕ್ಕಾಗಿ, ಅಯ್ಯಾ ಧರ್ಮರಾಜನೆ, ವಿಧಿಯನ್ನು ಯಾರುತಾನೆ ಮೀರುವದಕ್ಕಾದೀತು ! ನಿನಗಿಂತ ಹೆಚ್ಚಾದ ದುಃಖಕ್ಕೊಳಗಾದ ಚಕ್ರವರ್ತಿಗಳನೇಕರಿರುವರು, ನಳ, ಹರಿಶ್ಚಂದ್ರ, ಶ್ರೀರಾಮ, ಮೊದಲಾದವರು ತಮ್ಮ ಪ್ರಿಯಪತ್ನಿಯರಲ್ಲಿ ಅಸಹಾಯರಾಗಿ ಬಹುಕಾಲ ವ್ಯಥೆಪಡಲಿಲ್ಲವೆ ! ಅವರಿಗಿಂತ ಹೆಚ್ಚಾಗಿ ನಿನಗೆ ಕಷ್ಟವೇನೂ ಪ್ರಾಪ್ತವಾಗಿಲ್ಲ: ಅಸಹಾಯ ಶೂರರಾದ ನಾಲ್ಕುಮಂದಿ ತಮ್ಮಂದಿರೂ, ಸಕಲಭೋಗಕ್ಕೂ ಆಶ್ರಯಳಾದ ಪತ್ನಿಯೂ ನಿನ್ನಸಮೀಪದಲ್ಲಿಯೇ ಇರುವರು. ಶ್ರೀ ಕೃಷ್ಣನ ಪರಮಪ್ರೀತಿಗೆ ಪಾತ್ರನಾಗಿದ್ದೀಯೆ ? ನೀನು ಇಷ್ಟು ಚಿಂತೆಗೊಳಗಾಗ

ಬಹುದೇ! ಬಿಡು, ಹರ್ಷದಿಂದಿರು, ಎಂದು ಸಮಾಧಾನಮಾಡಿದನು. ಅದನ್ನು ಕೇಳಿ ಧರ್ಮರಾಜನು ಎಲೈ ಮಹರ್ಷಿಯೇ! ಹಾಗಾದರೆ ಪೂರ್ವದಲ್ಲಿ ಆ ನಳಚಕ್ರವರ್ತಿಯು ತನ್ನ ಹೆಂಡತಿಯೊಡನೆ ರಾಜ್ಯವನ್ನು ಅಗಲಿಸುದುಹೇಗೆ? ಯಾರಿಂದ? ಪುನಃ ಎಲ್ಲವನ್ನೂ ಪಡೆದದ್ದು ಹೇಗೆ? ಇದೆಲ್ಲವನ್ನೂ ವಿಸ್ತಾರವಾಗಿ ತಿಳಿಸಬೇಕೆಂದು ಬೇಡಿಕೊಂಡನು. ಅದಕ್ಕೆ ರೋಮಶನು ನಳಚರಿತೆಯ ಕಥೆಯನ್ನು ಹೇಳುವುದಕ್ಕುಪಕ್ರಮಿಸಿದನೆಂತೆಂದರೆ— ಅಪರಿಮಿತ ಗೋಪುರವೆಂಬ ಪಟ್ಟಣವು ಲೋಕಕ್ಕೆ ಅತ್ಯಾಶ್ಚರ್ಯವನ್ನುಂಟುಮಾಡುವಂತೆ ಪ್ರಕಾಶಿಸುತ್ತಿತ್ತು. ಆಪುರವನ್ನು ವೀರಸೇನನೆಂಬ ದೊರೆಯು ಪಾಲಿಸುತ್ತಿದ್ದನು. ಅವನ ಮಗನಾದ ನಳನು ವೀರಸೇನನ ತರುವಾಯ ಸಪ್ತದ್ವೀಪಗಳಿಗೆ ಅಧಿಪತಿಯಾಗಿಯೂ ಚಂದ್ರ ಕುಲಕ್ಕೆ ತಿಲಕಪ್ರಾಯನಾಯೂಗಿಸತ್ಯ ಪರಾಕ್ರಮಿಯಾಗಿಯೂ ಆಳುತ್ತಿದ್ದನು, ಉತ್ತರಭಾಗದ ದೇಶದಲ್ಲಿ ಅಮರಾವತಿಯಂತೆ ಕಂಗೊಳಿಸುತ್ತಿದ್ದ ವಿದರ್ಭ ನಗರವೆಂಬ ಪಟ್ಟಣ ವಿದ್ದಿತು. ಭೀಮರಾಜನೆಂಬ ಮಹಾವೀರನು ಅದನ್ನು ಆಳುತ್ತಿದ್ದನು! ಅವನಿಗೆ ಸಂತಾನವಿಲ್ಲದುದರಿಂದ ಚಿಂತಾಕ್ರಾಂತನಾಗಿರಲು, ಒಂದಾನೊಂದು ಕಾಲದಲ್ಲ ದಮನನೆಂಬ ಮುನೀಶ್ವರನು ಅಲ್ಲಿಗೆ ಬಂದನು, ಆಋಷಿಗೆ ಸತ್ಕಾರಮಾಡಿ ಭೀಮರಾಜನು ತನ್ನ ಮನೋವ್ಯಥೆಯನ್ನು ತಿಳಿಸಲು ಯೋಗದೃಷ್ಟಿಯಿಂದ ನೋಡಿ ಯಜ್ಞಮಾಡಿದರೆ ನಿನಗೆ ಸಂತಾನವಾಗುವುದೆಂದು ತಿಳಿಸಿ ಹೊರಟುಹೋದನು ರಾಜನು ಅದೇ ಪ್ರಕಾರವಾಗಿ ಯಜ್ಞವನ್ನು ಸಾಂಗವಾಗಿ ನೆರವೇರಿಸಲು ಆಯಾಗದ ಮಹಿಮೆಯಿಂದ ರಾಜಪತ್ನಿಯು ಗರ್ಭವತಿಯಾದಳು. ದೊರೆಗೆ ದಿವ್ಯವಾದಕನ್ಯಾರತ್ನವು ಜನಿಸಿತು. ಆ ಮಗುವಿಗೆ ದಮಯಂತಿ, ಎಂದು ನಾಮಕರಣ ಮಾಡಿದನು. ಆ ಕನ್ಯೆಯು ದಿನೇದಿನೇ ಅಭಿವೃದ್ಧಿಯನ್ನು ಪಡೆದುದು. ರೂಪಯೌವನ ವತಿಯಾದ ಮಗಳನ್ನು ನೋಡಿ ತಕ್ಕ ವರನನ್ನು ಹುಡುಕಲಾರಂಭಿಸಿದನು. ಇಷ್ಟರಲ್ಲಿ ಭೀಮರಾಜನೋಲಗದಲ್ಲಿ ನಳನ ಶೌರ್ಯೌದಾರ್ಯ ಗಾಂಭೀರ್ಯ ರೂಪ ಯೌವನಾದಿಗಳನ್ನು ವರ್ಣಿಸಿ ಹೇಳುತ್ತಿರುವುದನ್ನು ಕೇಳಿ ದಮಯಂತಿಗೆ ಆತನಲ್ಲಿ ವ್ಯಾಮೋಹವುಂಟಾಗಿ ಅವನಲ್ಲಿಯೇ ತನ್ನ ಮನಸ್ಸುನಟ್ಟು ವಿಯೋಗದುಃಖಕ್ಕೆ ಗುರಿಯಾಗಲು, ಮನ್ಮಥನು ತನ್ನ ಬಾಣಗಳಿಂದ ಹೊಡೆಯುತ್ತಿದ್ದನು, ಕಾಮಾಗ್ನಿ ಸಂತ

ಪ್ತೆಳಾದ ರಾಜಪುತ್ರಿಯನ್ನು ಸಖಿಯರು ಅನೇಕ ಶೈತ್ಯೋಪಚಾರಗಳಿಂದ ಶಾಂತಿಗೊಳಿಸುತ್ತಿದ್ದರೂ ದಿನದಿನಕ್ಕೆ ಆಕೆಗೆ ಕಾಮಬಾಧೆಯು ಹೆಚ್ಚುತ್ತಿತ್ತು. ಇತ್ತಲಾ ನಳನು ಸಭೆಯಲ್ಲಿ ಕುಳಿತಿರುವಾಗ ಕೆಲವರು ಯಾಚಕ ಬ್ರಾಹ್ಮಣರು ಬಂದು ಅಲ್ಲಿ ಸೇರಿದರು. ನಳನು ಲೋಕದಲ್ಲಿ ವಿಚಿತ್ರವೇನುಂಟೆಂದು ಪ್ರಶ್ನೆಮಾಡಿದನು, ಅಯ್ಯಾ ಭೀಮರಾಜನಿಗೆ ಲೋಕೋತ್ತರ ಸೌಂದರ್ಯವತಿಯಾದ ಕನ್ಯಾಮಣಿಯೊರ್ವಳು ಪುಟ್ಟಿರುವಳು, ದೊರೆಯು ಪುಣ್ಯೋದಯವನ್ನು ನೋಡಿದವರೆಲ್ಲರೂ ಕೊಂಡಾಡುತ್ತಿರುವರು. ಇದಲ್ಲದೆ ಮತ್ತೇನೂ ವಿಶೇಷವಿಲ್ಲವೆಂದು ನುಡಿದು ಹೋದರು. ಆ ವಾರ್ತೆಯನ್ನು ಕೇಳಿದಂದಿನಿಂದ ನಳನ ಚಿತ್ತವೃತ್ತಿಯು ಆಕೆಯಲ್ಲಿ ನೆಲೆಗೊಂಡಿತು, ಕಾಮವಿಕಾರಕ್ಕೊಳಗಾಗಿ ವಿರಹಾಕ್ರಾಂತನಾದನು. ಆಗ ಬೇಟೆಯಾಡುವುದಕ್ಕೆ ಕಾಡಿಗೆ ಹೋಗಬೇಕಾದ ಸಂದರ್ಭ ವೊದಗಿತು. ವಿರಹ ತಪ್ತವಾದ ಮನಸ್ಸನ್ನು ವಿನೋದಪಡಿಸುವುದಕ್ಕಿದೇ ಉಪಾಯವೆಂದರಿತು, ಸೇನಾ ಸಮೇತನಾಗಿ ಬಂದು ಅರಣ್ಯದಲ್ಲಿ ಅನೇಕ ಮೃಗಪಕ್ಷಿಗಳನ್ನು ಬೇಟೆಯಾಡಿ ಬಳಲಿ ಬೇಸತ್ತು ದಾಹವನ್ನು ಹೊಂದಿ ಜಲಾಶಯವನ್ನು ಹುಡುಕಿಕೊಂಡು ಬರಲು ಅಲ್ಲಿ ದಿವ್ಯವಾದ ಕಮಲ ಸರೋವರವನ್ನು ನೋಡಿ ಅದರಲ್ಲಿಳಿದು ನೀರಡಿಕೆಯನ್ನು ಹೋಗಲಾಡಿಸಿ ಹೊರಟು ಬರುತ್ತಿರಲು, ಅಲ್ಲಿ ಒಂದು ಮರದ ನೆಳಲಲ್ಲಿ ಮಲಗಿ ನಿದ್ರಿಸುತ್ತಿದ್ದ ರಾಜಹಂಸವನ್ನು ನೋಡಿ ಅದನ್ನು ಹಿಡಿದುಕೊಳ್ಳಲು ಅದು ಎಚ್ಚತ್ತು, ತನ್ನನ್ನು ಕೊಲ್ಲುವನೆಂಬ ಭಯದಿಂದ ಈತನನ್ನು ನಾನಾವಿಧವಾಗಿ ಪ್ರಾಣರಕ್ಷಣೆಮಾಡುವಂತೆ ಬೇಡಿಕೊಳ್ಳಲು, ನಳನು ನಸುನಕ್ಕು ಅದನ್ನು ಬಿಟ್ಟು ಬಿಟ್ಟನು. ಅದು ಕೃತಜ್ಞತೆಯಿಂದ ಅಯ್ಯಾ! ನೀನು ಪ್ರಾಣದಾನ ಮಾಡಿದ್ದೀಯಾದುದರಿಂದ ಇದಕ್ಕೆ ಪ್ರತ್ಯುಪಕಾರವನ್ನು ಮಾಡಬೇಕಾದುದು ನನ್ನ ಕರ್ತವ್ಯವು. ಅದಕಾಗಿ ವಿದರ್ಭರಾಜಪುತ್ರಿಯಾದ ದಮಯಂತಿಯೆಂಬ ಸುಂದರಿಯನ್ನು ನಿನಗೆಪತ್ನಿಯಾಗುವಂತೆ ಮಾಡುವೆನೆಂದುಹೇಳಿವಿದರ್ಭಪುರಕ್ಕೆ ಬಂದು ಅಲ್ಲಿ ಸಖಿಯರಿಂದ ಶೀತೋಪಚಾರಮಾಡಿಸಿಕೊಳ್ಳುತ್ತಾ ರತ್ನಮಂಚದಲ್ಲಿ ಪವಡಿಸಿರುವ ವಿರಹಿಣಿಯಾದ ದಮಯಂತಿಯನ್ನು ಕಂಡಿತು.

ಆಕೆಯುಇದರ ಸೌಂದರ್ಯವನ್ನು ನೋಡಿ ವಿನೋದಾರ್ಥವಾಗಿ ಹಿಡಿದಿಟ್ಟುಕೊಳ್ಳಬೇಕೆಂದು ಎಷ್ಟು ಪ್ರಯತ್ನಪಟ್ಟರೂ ಸಿಕ್ಕದೆ ಕೊನೆಗೆ ಎಲೆ ಸುಂದರಿ ನಾನು ನಳನ ವಾಹನವಾದ ಹಂಸವು. ನೀನು ಎಷ್ಟು ಯತ್ನಿಸಿದರೂ ಕೈಗೆ ಸಿಕ್ಕಲಾರೆನು. ನಾನು ಇಲ್ಲಿಗೆ ಬಂದುದಕ್ಕೆ ಕಾರಣವುಂಟು. ನಳನ ರೂಪಕ್ಕೂ ನಿನ್ನ ರೂಪಕ್ಕೂ ಅನುರೂಪ್ಯವುಚೆನ್ನಾಗಿರುವುದು. ನಿಮ್ಮಿರ್ವರ ದಾಂಪತ್ಯವಲ್ಲದೆ ಲೋಕದಲ್ಲಿ ಮತ್ತೊಂದು ರಮ್ಯವಾದದ್ದಿಲ್ಲವು, ಎಂದಿತು. ಅದನ್ನು ಕೇಳಿ ದಮಯಂತಿಯು ಆತನನ್ನು ತನಗೆ ಪತಿಯನ್ನಾಗಿ ಮಾಡೆಂದು ಬೇಡಿಕೊಳ್ಳಲು ಅದೇಪ್ರಕಾರಕ್ಕೆ ಒಪ್ಪಿ ಬಂದು, ನಳನಿಗೆ ಈ ಸಮಾಚಾರವನ್ನು ತಿಳಿಸಿ ನೀವಿಬ್ಬರೂ ಸೇರಿ ಸುಖದಿಂದ ಬಾಳಿರಿ. ನಾನು ಹೊರಡುವೆನು. ಎಂದು ಹೇಳಿ ಆ ಹಂಸವು ಹೊರಟುಹೋಗಲು ನಳನು ತನ್ನ ರಮನೆಗೆ ಬಂದನು. ನಳ ದಮಯಂತಿಯರಿಗೆ ಅನ್ಯೋನ್ಯವಾಗಿ ವಿರಹವ್ಯಥೆಯು ಹೆಚ್ಚುತ್ತಾಬಂತು, ಎಂದಿಗೆ ತಮ್ಮಿಬ್ಬರಿಗೆ ಸಮಾಗಮ ಸುಖವುಂಟಾದೀತೋ ಎಂದು ನಿರೀಕ್ಷಿಸುತ್ತಿದ್ದರು, ಭೀಮರಾಜನು ತನ್ನ ಮಗಳು ಯೌವನವತಿಯಾದುದನನ್ನು ಕಂಡು ಆಕೆಗೆ ತಕ್ಕ ವರನನ್ನು ವಿವಾಹ ಮಾಡಬೇಕೆಂದು ದಿವ್ಯವಾದ ಸ್ವಯಂವರ ಮಂಟಪವನ್ನು ಕಟ್ಟಿಸಿ ನಾನಾದೇಶಗಳ ದೊರೆಗಳಿಗೂ ಕಾಗದಗಳನ್ನು ಬರೆಯಿಸಿದನು. ಸ್ವಯಂವರಕ್ಕಾಗಿ ಸಮಸ್ತ ದೇಶದ ದೊರೆಮಕ್ಕಳೂ ಬಂದು ಸೇರುತ್ತಿದ್ದರು. ಆಕಾಲದಲ್ಲಿ ನಾರದರು ಇಂದ್ರನ ಸಭೆಗೆ ಬರಲು ತ್ರಿಲೋಕ ಸಂಚಾರಿಗಳಾದಕಾರಣ ವಿಶೇಷವೇನೆಂದು ಇಂದ್ರನು ಕೇಳಿದನು, ನಾರದನು ಭೀಮರಾಜನ ಮಗಳ ಸ್ವಯಂವರವನ್ನೂ, ಆಕೆಯ, ರೂಪ ಯೌವನಾದಿಗಳನೂ ವರ್ಣಿಸಲು ಇಂದ್ರನು ಮೋಹಪರವಶನಾಗಿ ಆಕೆಯನ್ನು ವರಿಸಬೇಕೆಂದು ಆಲೋಚಿಸಿ, ನಾರದನನ್ನು ಕಳುಹಿಸಿಕೊಟ್ಟು ಹೊರಟು ಯಮ, ವರುಣ, ವಾಯು. ಈ ದಿಕ್ಪಾಲಕರೊಡಗೊಂಡು ನಳನ ಬಳಿಗೆ ಬಂದನುನಳನು ನಾಲ್ಕು ಮಂದಿಗೂ ನಮಸ್ಕರಿಸಿ ಕೈಮುಗಿದು ನಿಂತಿರಲು ಇಂದ್ರನು ನಳನನ್ನು ಕುರಿತು, ಅಯ್ಯಾ! ನಿಮ್ಮ ತಂದೆಯಾದ ವೀರಸೇನನುನನಗೆ ಪರಮ ಮಿತ್ರನು. ಈಗ ನಿನ್ನಿಂದ ಒಂದು ಮಹಾಕಾರ್ಯವಾಗಬೇಕಾಗಿರುವದರಿಂದ ನಾವೆಲ್ಲರೂ ನಿನ್ನ ಬಳಿಗೆ ಬಂದೆವೆಂದು ಹೇಳಿದ

ನು. ಅದಕ್ಕೆ ನಳನು ನನಗಿನ್ನು ನಿಮ್ಮ ಆಜ್ಞೆಯಂತೆ ನಡೆಯಲು ಸಿದ್ಧನಾಗಿರುವೆನೆನಲು, ನೀನು ಹೇಗಾದರೂ ಮಾಡಿ ದಮಯಂತಿ ಯನ್ನೊಪ್ಪಿಸಿ ನನ್ನನ್ನು ವರಿಸುವಂತೆ ಮಾಡೆಂದು ಹೇಳಿದ ಇಂದ್ರನ ಮಾತನ್ನು ಕೇಳಿ ವಂಚನೆಯಿಲ್ಲದೆ ನಾನು ಪ್ರಯತ್ನಿಸುವೆನು, ಕಾರ್ಯಪ ರಿಣಾಮವು ಹೇಗಾದೀತೋ ತಿಳಿಯದೆಂದು ಹೇಳಿ ಹೊರಟನು. ಇಂ ದ್ರನು ಕೆಲವರು ಅಪ್ಸರಸ್ತ್ರೀಯರನ್ನು ದಮಯಂತಿಯ ಬಳಿಗೆ ಕಳುಹಿಸಲು ಅವರು ಎಷ್ಟುವಿಧದಲ್ಲಿ ಒಡಂಬಡಿಸಿದರೂ ಕೇಳದೆ ನಳನಲ್ಲ ದೆ ನನಗೆ ಬೇರೆ ಪತಿಯು ಮೂರುಲೋಕದಲ್ಲಿ ಯಾರೂ ಇಲ್ಲವು. ಎಂ ದು ದೃಢವಾಗಿ ಹೇಳಿಕಳುಹಿಸಿದಳು. ಅನಂತರದಲ್ಲಿ ನಳನು ವೇಷಾಂ ತರದಿಂದ ಬಂದು ಇಂದ್ರನನ್ನು ವರಿಸುವ ವಿಷಯದಲ್ಲಿ ಎಷ್ಟು ಬೋ ಧಿಸಿದರೂ ಕೇಳದೆ ಹೊಗಲು ತಾನೇ ನಳನೆಂಬುದನ್ನು ಆಕೆಗೆ ತಿಳಿಸಿ ಬಂದು ಇಂದ್ರನಿಗೆ ಈ ವೃತ್ತಾಂತವನ್ನು ತಿಳಿಸಿದನು. ತರುವಾಯ ಸ್ವಯಂವರ ಮಂಟಪದಲ್ಲಿ ಸೇರಿರುವ ರಾಜಪುತ್ರರ ಗುಂಪಿನಲ್ಲಿ ನಳನು ಕುಳಿತಿರಲು ಇಂದ್ರಾದಿನಾಲ್ಕುಮಂದಿ ದಿಕ್ಪಾಲಕರೂ ದಮಯಂತಿಯನ್ನು ವಂಚಿಸಬೇಕೆಂದು ನಳನ ವೇಷದಿಂದ ಬಂದು ಕುಳಿತರು. ದಮ ಯಂತಿಯು ಪುಷ್ಪಮಾಲಿಕೆಯನ್ನು ಹಿಡಿದು ನೆರೆದಿರುವ ರಾಜಪುತ್ರರೆಲ್ಲ ರನ್ನೂ ನೋಡಿಅಲ್ಲಿ ನಳನಂತಿರುವ ಐದುಮಂದಿಯನ್ನು ಕಂಡುಇದೇನೋ ಮೋಸವೆಂದು ಖಿನ್ನಳಾಗಿ ಯಾರನ್ನೂ ವರಿಸದೆ ಹಿಂದಿರುಗಿದಳು. ಆಗ ಭೀಮರಾಜನು ಭಗ್ನಮನೋರಥನಾಗಿ ಸರಸ್ವತಿಯನ್ನಾರಾಧಿಸಲು ಆಕೆ ಯು ಇಂದ್ರನನ್ನು ಭಜಿಸೆಂದು ತಿಳಿಸಲು,ಅದೇಪ್ರಕಾರವಾಗಿಇಂದ್ರನನ್ನು ಧ್ಯಾನಿಸಲಾಗಿ ನಾಲ್ಕುಮಂದಿಯೂ ಪ್ರತ್ಯಕ್ಷರಾಗಿ ದಮಯಂತಿಯ ದೃಢ ಸಂಕಲ್ಪಕ್ಕೆ ಮೆಚ್ಚಿ ನಳನಿಗೆ ಸ್ವಯಂವರ ಮಾಡಿಸಿ ವಧೂವರರಿಗೆ ಆಶೀ ರ್ವಾದಮಾಡಿ ಬೇಕಾದವರಗಳಂಕೊಟ್ಟು ಸಂತೋಷದಿಂದ ದೇವಲೋ ಕಕ್ಕೆ ತೆರಳಿದರು. ಅನಂತರದಲ್ಲಿ ಕಲ್ಯಾಣ ಮಹೋತ್ಸವವು ನೆರವೇ ರಿತು. ನಳ ದಮಯಂತಿಯರು ನಿಷಧಪುರವನ್ನು ಸೇರಿ ಬಹುಕಾಲ ಸುಖದಿಂದಿದ್ದರು. ನಳನಿಗೆ ಒಬ್ಬ ಮಗನೂ, ಒಬ್ಬ ಮಗಳೂ ಹುಟ್ಟಿ ದರು. ಇತ್ತಲಾ ಇಂದ್ರಾದಿಗಳು ಬರುವದಾರಿಯಲ್ಲಿಪರಾಗಿಕಲಿಪುರುಷನು ಬಂದು, ಅಯ್ಯಾ! ನಿಮಗೆ ದಮಯಂತಿಯನ್ನು ವಿವಾಹ ಮಾಡಿಕೊಳ್ಳಲು ಶಕ್ತಿ ಇಲ್ಲದೆ ಹೋಯಿತು. ಈಗ ನಾನು ನಿಮಗೆ ಆಕೆಯನ್ನು ತಂದು

ಲಗ್ನ ಮಾಡುವೆನು, ನನ್ನ ಶಕ್ತಿಯನ್ನು ನೋಡಿರೆಂದು ಹೀಯಾಳಿಸಿ ನುಡಿದನು, ಅದಕ್ಕೆ ಅವರು ನಮಗಿಷ್ಟವಿಲ್ಲೆಂದು ಹೇಳಿದರೂ ಕೇಳದೆ ಕೋಪದಿಂದ ಬಂದು ನಳನನ್ನಾಕ್ರಮಿಸುವುದಕ್ಕೆ ಸಮಯವನ್ನು ನಿರೀಕ್ಷಿಸುತ್ತಾ, ಒಂದಾನೊಂದು ದಿನದಲ್ಲಿ ನಳನು ಅಲ್ಪಾಚಮನ ಮಾಡಿ ಶುದ್ಧಾಚಮನಮಾಡದೆ ನೀರು ಕುಡಿದುದನ್ನು ಕಂಡು ಇದೇ ತನಗೆ ಸಮಯವೆಂದುತಿಳಿದು ಪುಷ್ಕರನೆಂಬ ರಾಜಪುತ್ರನಬಳಿಗೆ ಬಂದು ,, ನಳನ ರಾಜ್ಯಕ್ಕೆ ನಿನ್ನನ್ನು ಅಧಿಪತಿಯಾಗಿ ಮಾಡುತ್ತೇನೆ. ಜೂಜಾಡುವುದಕ್ಕೆ ಆತನನ್ನು ಕರೆ ,, ಎಂದುಹೇಳಿ ಅದರಂತೆ ಜೂಜಿನಲ್ಲಿ ನಳನು ಸೋಲುವಂತೆ ಮಾಡಲು, ಮೊದಲು ಗೊತ್ತು ಮಾಡಿದ್ದ ಪ್ರಕಾರ ರಾಜ್ಯವೆಲ್ಲವನ್ನೂ ಪುಷ್ಕರನವಶಮಾಡಿ ನಳನು ವನಪ್ರವೇಶ ಮಾಡಬೇಕಾಯಿತು. ಆಗ ಪತ್ನೀಪುತ್ರರನ್ನು ಬಿಟ್ಟು ತಾನೊಬ್ಬನೇ ಕಾಡಿಗೆ ಹೋಗುವುದಕ್ಕೆ ಯತ್ನಿಸಲು ದಮಯಂತಿಯು ಸಾಗಗೊಡದೆ ತಾನೂ ಪತಿಯೊಡನೆ ಹೊರಡುವುದಕ್ಕೆ ಸಿದ್ಧಳಾದಳು. ಮಕ್ಕಳನ್ನು ಮಾತ್ರ ತೌರುಮನೆಗೆ ಕಳುಹಿಸಿಕೊಟ್ಟಳು. ನಳದಮಯಂತಿಯರು ದುಃಖಾಕ್ರಾಂತರಾಗಿ ಕಾಡುದಾರಿಯನ್ನು ಹಿಡಿದು ಬರುತ್ತಾ ಸೊಗಸಾದ ಹಂಸಪಕ್ಷಿಗಳನ್ನು ಕಂಡು ಹಿಡಿದುಕೊಳ್ಳಬೇಕೆಂದು ಹೊದ್ದಬಟ್ಟೆಯನ್ನೆಸೆಯಲು ಅವು ಅದನ್ನು ತೆಗೆದುಕೊಂಡು ಹಾರಿಹೋದವು ಆಗ ಆಶ್ಚರ್ಯಪಟ್ಟು ಏಕವಸ್ತ್ರಧರನಾಗಿ ನಡೆಯುತ್ತಾ ಸಾಯಂಕಾಲದ ವರೆಗೆ ಪ್ರಯಾಣಮಾಡಲು ಮುಂದಕ್ಕೆ ಹೊರಡುವುದಕ್ಕೆ ಯತ್ನವಿಲ್ಲದೆ ಆ ಕಾಡಿನಲ್ಲಿ ಒಂದು ಮರದ ಕೆಳಗೆ ಆ ರಾತ್ರಿಯನ್ನು ಕಳೆಯಬೇಕಾಯಿತು. ದಮಯಂತಿಯು ನಳನವಸ್ತ್ರವನ್ನುಹಾಸಿಮಾರ್ಗಾಯಾಸದಿಂದ ಗಾಢನಿದ್ರೆಯುಪ್ರಾಪ್ತವಾಯಿತು ಆಗನಳನು ಮುಂದೆ ಈಕೆಯೊಡನೆ ಕಾಡಿನಲ್ಲಿವಾಸಿಸುವುದು ಬಹುಕಷ್ಟವಾದ್ದರಿಂದ ಈಕೆಗೆ ತಿಳಿಸದೆ ಇಲ್ಲಿಬಿಟ್ಟು ಹೋಗುವೆನು. ಬಿಳಿಗಾದಮೇಲೆ ಅನಾಥಳಾಗುವುದರಿಂದ ತನ್ನ ತಂದೆಯ ಮನೆಗೆ ಹೋಗಿ ಸೇರಿ ಸುಖವಾಗಿರಲಿ ಎಂದಾಲೋಚಿಸಿ ಮೆಲ್ಲನೆ ಎದ್ದು ಹೊರಟುಹೋಗುತ್ತಾ ಬಹು ದೂರಕ್ಕೆ ಹೋದಮೇಲೆ ಆಕೆಯ ವಿರಹವ್ಯಥೆಯಿಂದ ಗೊಳಾಡುತ್ತಾ ಅರಣ್ಯದಲ್ಲಿ ಸಂಚರಿಸುತ್ತಿದ್ದನು. ಇತ್ತಲಾ ದಮಯಂತಿಯು ಸೂರ್ಯೋದಯವಾದಮೇಲೆ ಎಚ್ಚತ್ತು ಪತಿಯನ್ನು ಕಾಣದೆ ಕಾತುರಳಾಗಿ ಕಾಡಿನಲ್ಲಿ ತೊಳಲುತ್ತಾ ಅನೇಕ ಕಷ್ಟಗಳನ್ನು

ಹೊಂಪಿ ಕೊನೆಗೆ ಆ ಮಾರ್ಗವಾಗಿ ಬರುತ್ತಿದ್ದ ವ್ಯಾಪಾರಿಗಳ ಸಂಘವನ್ನು ಕಂಡು ತನ್ನ ವೃತ್ತಾಂತವನ್ನು ಅವರಿಗೆ ತಿಳಿಸಿ ಅವರೊಡನೆ ಚೈದ್ಯ ಪುರವನ್ನು ಸೇರಿದಳು. ಚೈದ್ಯರಾಜನ ಹೆಂಡತಿಯು ಈ ಕೆಯತಾಯಿಯ ತಂಗಿಯಾದರೂ, ದಮಯಂತಿಯು ಈಗಿನ ದುರವಸ್ಥೆಯಲ್ಲಿ ಗುರುತನ್ನು ತಿಳಿಯಲಾರದೆ ಹೋದಳು, ಆದರೂ ತಾನೊಬ್ಬ ದೊರೆಯ ಹೆಂಡತಿಯೆಂದೂ, ಅತನು ರಾಜ್ಯವನ್ನು ಸೋತು ತನ್ನೊಡನೆ ಕಾಡಿಗೆ ಬಂದು ಅಗಲಿದನೆಂತಲೂ ಹೇಳಲು ಚೈದ್ಯ ರಾಜಪತ್ನಿಯು ತನ್ನ ಮಗಳಾದ ಸುನೀತೆಯೆಂಬುವಳ ಮನೆಯಲ್ಲಿ ರಾಜೋಪಚಾರದಿಂದ ಪೋಷಿಸುತ್ತಿದ್ದಳು. ಭೀಮರಾಜನು ಈ ವೃತ್ತಾಂತವನ್ನು ಬ್ರಾಹ್ಮಣರ ಮೂಲಕವಾಗಿ ತಿಳಿದು ತನ್ನ ಪುರಕ್ಕೆ ದಮಯಂತಿಯನ್ನು ಬರಮಾಡಿಕೊಂಡನು. ಅಲ್ಲಿ ಸತಿಯು ವಿರಹದಿಂದ ಕೃಶಳಾಗಿದುಃಖದಿಂದಕಾಲವನ್ನು ಕಳೆಯುತ್ತಿದ್ದಳು. ನಳನು ಕಾಡಿನಲ್ಲಿ ಅಲೆಯುತ್ತಾ ಕರ್ಕೋಟಕನೆಂಬ ಸರ್ಪದ ವಿಷದಿಂದ ವಿಕಾರರೂಪವುಳ್ಳವನಾಗಿ, ಆ ಸರ್ಪದ ಶಾಪವು ನಳನಹಸ್ತಸ್ಪರ್ಶದಿಂದ ವಿಮೋಚನವಾದುದರಿಂದಅದುತನ್ನ ಪೂರ್ವದ ಗಂಧರ್ವ ದೇಹವನ್ನು ಹೊಂದಿ ನಳನಿಗೆ ಮುಂದೆ ಶುಭವಾಗುವರೀತಿಯನ್ನೆಲ್ಲಾ ತಿಳಿಸಿ ಹೋದುದ. ನಳನು ಅದೇಪ್ರಕಾರವಾಗಿ ಋತುಪರ್ಣನ ಬಳಿಗೆ ಬಂದುಸಾರಥಿಯಾಗಿದ್ದು ಅವನಿಂದ ವನಸ್ಪತಿಶಾಸ್ತ್ರವನ್ನುಕಲ್ತು ಅಶ್ವಶಾಸ್ತ್ರವನ್ನುಹೇಳಿಕೊಟ್ಟು ಬಾಹುಕನೆಂಬ ಹೆಸರಿನಿಂದ ಅಲ್ಲಿ ವಾಸಿಸುತ್ತಿದ್ದನು. ದದಮಯಂತಿಯುತನ್ನ ಪತಿಯನ್ನು ಹುಡುಕಿಸಬೇಕೆಂದು ತಂದೆಯನ್ನು ಬೇಡಿಕೊಳ್ಳಲುಭೀಮರಾಜನು ಬ್ರಾಹ್ಮಣರಿಂಹುಡುಕಿಸಬೇಕೆಂದುಪ್ರಯತ್ನಿಸಿದನು,ಆಗದಮಯಂತಿಯುಆತನನ್ನು ಕಂಡುಹಿಡಿಯುವುದುಅಸಾಧ್ಯವೆಂದುತಿಳಿದುಉಪಾಯುವನ್ನು ಹೇಳಿಕಳುಹಿಸಿದಳುಅದೇಪಕಾರವಾಗಿ ಅವರು ಹುಡುಕಿ ಎಲ್ಲಿಯೂ ಕಾಣದೆ ಅಯೋಧ್ಯಾಪುರದಲ್ಲಿರುವಂತೆ ತಿಳಿದು ಬಂದರು. ಅವನನ್ನು ಕರೆಯಿಸುವುದು ಅಸಾಧ್ಯವಾದುದರಿಂದ ಭೀಮರಾಜನು ಪುನಃ ದಮಯಂತಿಗೆ ಸ್ವಯಂವರ ಮಾಡಿಸುವಂತೆ ವರ್ತಮಾನವನ್ನು ಕಳುಹಿಸಲು ಅದಕ್ಕಾಗಿ ಋತುಪರ್ಣನು ಬಾಹುಕರೂಪನಾದ ಈ ನಳನೊಡನೆ ವಿದರ್ಭಪುರಕ್ಕೆ ಬರಲು, ಸಭೆಯಲ್ಲಿ ನಳನೇ ಈ ಬಾಹುಕನೆಂಬುವನನ್ನು ಗೊತ್ತುಮಾಡಿದರು. ದಮಯಂತಿಯು ತಮ್ಮ ತಾಯಿಯ ಸಂಗಡ ಹೇಳಿ ಈ ಬಾಹುಕನನ್ನು ಸೇವಕರ ಮೂ

ಲಕರೂಾಗಿ ಅರಮನೆಗೆ ಬರಮಾಡಿಕೊಂಡಳು. ತಮಗುಂಟಾಗಿದ್ದ ದುರ ವಸ್ಥೆಯನ್ನು ಕುರಿತು ಎಲ್ಲರೂ ಬಹಳವಾಗಿ ಶೋಕಿಸಿದರು. ಅದಕ್ಕೆ ನಳನೂ ದುಃಖಪಟ್ಟವನಾಗಿ ತನ್ನ ಪತ್ನಿಯನ್ನು ಕುರಿತು—ಎಲೌ ಮಾ ನಿನಿಯೇ ನೀನು ಮಹಾ ರಾಜಪುತ್ರಿಯಾಗಿ, ಹುಟ್ಟಿದಂದಿನಿಂದಲೂ ಕ ಷ್ಟವೆಂಬುದನ್ನೇ ಅರಿಯದೆ, ರಾಜಭೋಗದಲ್ಲಿದ್ದವಳಲ್ಲದೆ ದೇವತೆಗಳನ್ನು ಕೂಡ ಮೋಹಿಸದೆ ತಿರಸ್ಕರಿಸಿ ನನ್ನ ಮೇಲಣ ಪ್ರೀತಿಯಿಂದ ನನ್ನನ್ನು ವರಿಸಿ ಸರ್ವದಾ ನನ್ನನ್ನು ಬಿಟ್ಟಿರಲಾರದೆ ಹೊಂದಿದ್ದೆ. ಪ್ರೇಮಪಾತ್ರ ರಾದ ಮಕ್ಕಳನ್ನೂ ತೊರೆದು ನನ್ನನ್ನೇ ನಂಬಿ ನನ್ನೊಡನೆ ಕಾಡಿ ಗೆ ಬಂದು ನಾನಾ ಕಷ್ಟಗಳನ್ನು ಅನುಭವಿಸಿದ್ದೀಯೆ. ಇಂತಹ ನಿನ್ನ ನ್ನು ದುರಾತ್ಮನಾದ ನಾನು ಅಡವಿಯಲ್ಲಿ ಮೋಸಮಾಡಿ ನಿಷ್ಕರುಣಿಯಾ ಗಿ ನಿನ್ನನ್ನಗಲಿದೆನು. ನನ್ನಂತಹ ಪಾಪಿಯು ಲೋಕದಲ್ಲಿ ಮತ್ತಾರಿರುವ ರು, ಇಂತಹ ಮೋಸಗಾರನನ್ನು ಪುನಃ ನೀನು ಬಯಸಬಹುದೇ ? ಬಿ ಡು. ಬೇರೊಬ್ಬ ಯೋಗ್ಯನಾದ ರಾಜಪುತ್ರನನ್ನು ವರಿಸಿ ಸುಖವಾಗಿ ಬಾ ಳು. ಎಂದು ಹೇಳುತ್ತಿರಲು ದಮಯಂತಿಯು ನೀವು ಅನ್ಯಥಾ ಭಾವ ನೆಮಾಡುವುದಾದರೆ ಪ್ರಾಣತ್ಯಾಗವನ್ನು ಮಾಡಿಕೊಳ್ಳುತ್ತೇನೆ ಎಂದು ನು ಡಿದಳು. ಆಗ ತನ್ನ ಪತ್ನಿಯ ಪಾತಿವ್ರತ್ಯಕ್ಕೆ ಮೆಚ್ಚಿದನು. ಅನಂತರದಲ್ಲಿ ಆ ಕಾಶದಲ್ಲಿ ಪುಷ್ಪವೃಷ್ಟಿಯಾಯಿತು. ದೇವತೆಗಳೆಲ್ಲರೂ ನಳನ ಸತ್ಯವ್ರ ತಕ್ಕೆ ಮೆಚ್ಚಿದರು. ನಳನು ನಿಷಧಪುರಕ್ಕೆ ದಂಡೆತ್ತಿ ಹೋಗಲು ಪು ಷ್ಕರನು ಪುನರ್ದ್ಯೂತಕ್ಕೆ ಕರೆದನು. ದ್ಯೂತದಲ್ಲಿ ಅವನನ್ನು ಸಂಪೂ ರ್ಣವಾಗಿ ಸೋಲಿಸಿದುದಲ್ಲದೆ ಯುದ್ಧದಲ್ಲಿಯೂ ಗೆದ್ದನು. ರಾಜ್ಯವೆಲ್ಲ ಇವನ ವಶಕ್ಕೆ ಬಂತು. ಕಲಿಯು ನಳನ ಸತ್ಯಪರಾಕ್ರಮವನ್ನು ಕೊಂಡಾ ಡಿ ಹರಸಿ ಹೊರಟುಹೋದನು. ನಳನು ಪತ್ನೀಪುತ್ರ ಸಮೇತನಾಗಿ ಬಹುಕಾಲ ಸುಖದಿಂದ ರಾಜ್ಯಭಾರಮಾಡುತ್ತಿದ್ದನು. ಎಲೈ ಧರ್ಮರಾ ಜನೇ ಕೇಳು ಎಂದು ರೋಮಶ ಮಹಾಮುನಿಯು ಹೇಳಿ ಸಮಾಧಾನ ಗೊಳಿಸಿದನೆಂಬಲ್ಲಿಗೆ ನಳ ಚರಿತ್ರೆಯ ಕಥಾಸಾರಾಂಶವು

ಮುಗಿದುದು.